# ಚಿಕ್ಕನಾಯಕನಹಳ್ಳಿ ತಾಲ್ಲೂಕು ಗ್ರಾಮ ಚರಿತ್ರೆ ಕೋಶ


ಪ್ರಧಾನ ಸಂಪಾದಕರು :

**ಡಾ. ಅಂಬಳಿಕೆ ಹಿರಿಯಣ್ಣ**

ಕಾರ್ಯನಿರ್ವಾಹಕ ಸಂಪಾದಕರು :

**ಕಾ.ತ. ಚಿಕ್ಕಣ್ಣ**

ಸಂಯೋಜಕ ಸಂಪಾದಕರು :

**ಡಾ. ಚಕ್ಕೆರೆ ಶಿವಶಂಕರ್**

ಬೆಂಗಳೂರು

ಜಿಲ್ಲಾ ಸಂಪಾದಕರು :

**ಡಾ. ಚಿಕ್ಕಣ್ಣ ಯಣ್ಣೆಕಟ್ಟೆ**

ಪ್ರಾಧ್ಯಾಪಕರು, ಸಿರಾ



**ಕರ್ನಾಟಕ ಜಾನಪದ ವಿಶ್ವವಿದ್ಯಾಲಯ**

ಗೊಟಗೋಡಿ, ರಾ.ಹೆ–೪, ಶಿಗ್ಗಾವಿ ತಾ. ಹಾವೇರಿ ಜಿ–೫೮೧ ೧೯೭

# CHICKANAYAKANAHALLI TALUK WITH GRAMA PANCHAYATH




**NRDMS, ZP, TUMKUR**

## LEGEND

- TALUK BOUNDARY
- VILLAGE BOUNDARY
- CHICKANAYAKANAHALLI TP

# ಪರಿವಿಡಿ


1. ಚಿಕ್ಕನಾಯಕನಹಳ್ಳಿ ತಾಲ್ಲೂಕು..........................
2. ಅಲಗಪ್ಪನಪಾಳ್ಯ
3. ಅಗ್ರಹಾರ......................................................
4. ಅರಳೀಕೆರೆ
5. ಆಲದಕಟ್ಟೆ
6. ಆಲದಕಟ್ಟೆ ಲಂಬಾಣಿ ತಾಂಡ
7. ಆಲದಕಟ್ಟೆ ಗೊಲ್ಲರಹಟ್ಟಿ
8. ಅಂಕನಬಾವಿಹಟ್ಟಿ
9. ಅಜ್ಜಯ್ಯನಗುಡ್ಲು
10. ಆಲದದೇವರಹಟ್ಟಿ
11. ಅಗಸರಹಳ್ಳಿ
12. ಅಜ್ಜಿಗುಡ್ಡೆ
13. ಅಂಬಾರಪುರ
14. ಅವಳಗೆರೆ
15. ಅವಳಗೆರೆ ಬೋವಿ ಕಾಲೋನಿ
16. ಅಣೇಪಾಳ್ಯ
17. ಅಬೂಜಿಹಳ್ಳಿ
18. ಅಣೇಕಟ್ಟೆ
19. ಅರಳೀಕೆರೆ ಹಳ್ಳದಮನೆ
20. ಅರಳೀಕೆರೆ
21. ಅರಳೀಕೆರೆ ಎ.ಕೆ. ಕಾಲೋನಿ
22. ಅಂಕಸಂದ್ರ
23. ಅಂಕಸಂದ್ರದ ಗೊಲ್ಲರಹಟ್ಟಿ
24. ಅಂಕಸಂದ್ರ ಎ.ಕೆ. ಕಾಲೋನಿ
25. ಅಂಕಸಂದ್ರ ಕಾವಲು
26. ಅರಳಿಮರದಪಾಳ್ಯ
27. ಅಜ್ಜೇನಹಳ್ಳಿ
28. ಅಜ್ಜನಕೆರೆಪಾಳ್ಯ
29. ಆತ್ರಿಹಾಳ್
30. ಆಶ್ರಿಹಾಳ್ ದೊಡ್ಡಹಟ್ಟಿ
31. ಆತ್ರಿಹಾಳ್ ಎ.ಕೆ. ಕಾಲೋನಿ
32. ಅಣೆಪಾಳ್ಯ
33. ಅಕ್ಕನಹಳ್ಳಿ
34. ಅಜ್ಜಿಗುಡ್ಡೆ ಎ.ಕೆ. ಕಾಲೋನಿ
35. ಉಪ್ಪಾರಹಳ್ಳಿ
36. ಉದಯದಿಬ್ಬ
37. ಉಪ್ಪಾರಹಟ್ಟಿ
38. ಉಪ್ಪಾರಹಳ್ಳಿ
39. ಉಪ್ಪಾರಹಳ್ಳಿ ಲಂಬಾಣಿ ತಾಂಡ್ಯ
40. ಉಪ್ಪಾರಹಳ್ಳಿ ಗೊಲ್ಲರಹಟ್ಟಿ
41. ಉಪಲ್ಲೀಕನಹಳ್ಳಿ
42. ಎಮ್ಮೆಕರಕೆಹಟ್ಟಿ
43. ಎಳೆಗೊಲ್ಲರಹಟ್ಟಿ
44. ಓಟಿಕೆರೆ
45. ಓಟಿಕೆರೆ ತಿಮ್ಮಲಾಪುರ ತಾಂಡ್ಯ
46. ಕರಿಮರಸರದ ಹಟ್ಟಿ
47. ಕೆಂಕೆರೆ
48. ಕೆಂಕೆರೆ ಎ.ಕೆ. ಕಾಲೋನಿ
49. ಕೆಂಕೆರೆ ಗೊಲ್ಲರಹಟ್ಟಿ
50. ಕೋಡಗಲ್
51. ಕುಪ್ಪೂರು ಚಿಕ್ಕನಪಾಳ್ಯ
52. ಕರಡಿಸಾಬರಪಾಳ್ಯ
53. ಕೆರೆಸೂರಗೊಂಡನಹಳ್ಳಿ
54. ಕೋಡಿಪಾಳ್ಯ
55. ಕೋಡಿಹಳ್ಳಿ
56. ಕೋರಗೆರೆ
57. ಕೋರಗೆರೆ ಎ.ಕೆ. ಕಾಲೋನಿ
58. ಕಲ್ಲನಹಳ್ಳಿ
59. ಕೋಡಿಹಳ್ಳಿ
60. ಕೆಂಪನಹಳ್ಳಿ
61. ಕೆಂಪನಹಳ್ಳಿ ಆಂಜನೇಯ ದೇವಸ್ಥಾನ
62. ಕೋಲುದೇವರ ಹಟ್ಟಿ
63. ಕಲ್ಲೇನಹಳ್ಳಿ
64. ಕಲ್ಲೇನಹಳ್ಳಿ ಎ.ಕೆ. ಕಾಲೋನಿ
65. ಕಾರೇಹಳ್ಳಿ
66. ಕೊಪ್ಪರಿಗೆಹಾಳ್
67. ಕುರಿಹಳ್ಳಿ ಕಾವಲ್
68. ಕೇಶವಾಪುರ
69. ಕಾಮಶೆಟ್ಟಿಪಾಳ್ಯ
70. ಕುಪ್ಪೂರು
71. ಕುಪ್ಪೂರು ಎ.ಕೆ. ಕಾಲೋನಿ
72. ಕುರಿಹಟ್ಟಿ
73. ಕಲ್ಲುಬಾವಿಪಾಳ್ಯ
74. ಕಂದಿಕೆರೆ
75. ಕಂದಿಕೆರೆ ಎ.ಕೆ. ಕಾಲೋನಿ
76. ಕಸವೇಹಟ್ಟಿ
77. ಕಾಮನಹಳ್ಳಿ
78. ಕೊಪ್ಪರಿಗೆಹಾಳ್
79. ಕಾಟೇನಹಳ್ಳಿ
80. ಕೊರಚರಹಟ್ಟಿ
81. ಕುಪ್ಪೂರು ಲಂಬಾಣಿ ತಾಂಡ
82. ಕಾರೇಹಳ್ಳಿ ಗೊಲ್ಲರಹಟ್ಟಿ

83. ಕಾಟಂದೇವರಹಟ್ಟಿ
84. ಕಾನ್ಕೆರೆ
85. ಕಾನ್ಕೆರೆ ಗೊಲ್ಲರಹಟ್ಟಿ
86. ಕಾನ್ಕೆರೆ ಎ.ಕೆ. ಕಾಲೋನಿ
87. ಕಮಲಾಪುರ ಗೊಲ್ಲರಹಟ್ಟಿ
88. ಕಾಮಲಾಪುರ ತೋಟದಮನೆ
89. ಕನಕಪುರ
90. ಕೊಟ್ಟಿಗಲ್
91. ಕಾತ್ರಿಕೆಹಾಳ್
92. ಕೋಡಿಹಳ್ಳಿ
93. ಕೋಡಿಪಾಳ್ಯ
94. ಕರೇಬಾಲಯ್ಯನಹಟ್ಟಿ
95. ಕೃಷ್ಣರಾಜಸಾಗರ ಕೆರೆ
96. ಕ್ಯಾತೆದೇವರಹಟ್ಟಿ
97. ಕೈಮರ
98. ಕುರುಬರಹಳ್ಳಿ
99. ಕೆಂಪರಾಯನ ಹಟ್ಟಿ
100. ಕೊಡಲಾಗರ
101. ಕಾರೇಹಳ್ಳಿ
102. ಕಂಟಲಗೆರೆ
103. ಕಂಟಲಗೆರೆ ಎ.ಕೆ. ಕಾಲೋನಿ
104. ಕಮಲಾಪುರ ಹೊಸೂರು
105. ಕಮಲಾಪುರ
106. ಕೆಂಗಲಾಪುರ
107. ಕೆಂಗಲಾಪುರ ಭದ್ಯನಾಯಕನ ತಾಂಡ್ಯ
108. ಕ್ಯಾತನಾಯಕನಹಳ್ಳಿ
109. ಕರಿನಿಂಗಯ್ಯನ ಪಾಳ್ಯ
110. ಕಾಡೇನಹಳ್ಳಿ
111. ಖಾಸಿಂಸಾಬ್ ಪಾಳ್ಯ
112. ಗಂಟೇನಹಳ್ಳಿ
113. ಗೆಂಡೆಬಾಲನಹಟ್ಟಿ
114. ಗೌರಸಾಗರ
115. ಗಂಗನಾಯಕನಹಳ್ಳಿ
116. ಗೋಪಗೊಂಡನಹಳ್ಳಿ
117. ಗೋಡೆಕೆರೆ ಗೇಟ್
118. ಗೋಪಾಲನಹಳ್ಳಿ
119. ಗೋಡೆಕೆರೆ
120. ಗೋಡೆಕೆರೆ ಎ.ಕೆ. ಕಾಲೋನಿ
121. ಗೋಡೆಕೆರೆ ಗೊಲ್ಲರಹಟ್ಟಿ
122. ಗಾಗವಾಡಿ
123. ಗೋಪಾಲಪುರ
124. ಗೊಂದಿ
125. ಗೂಬೆಹಳ್ಳಿ
126. ಗೊಟಿಗೇನಹಳ್ಳಿ ಗೊಲ್ಲರಹಟ್ಟಿ
127. ಗೆಂಡೇಬಾಲನಹಳ್ಳಿ
128. ಗೌಡನಹಳ್ಳಿ
129. ಗೌಡನಹಳ್ಳಿ ಕೋಡಿಪಾಳ್ಯ
130. ಗ್ಯಾರೇಹಳ್ಳಿ ಪಾಳ್ಯ
131. ಗೋರಿನಾಯ್ಕನತಾಂಡ
132. ಗಾಂಧಿನಗರ
133. ಗೊಲ್ಲರಹಳ್ಳಿ ಕ್ಯಾಂಪ್
134. ಗುಂಗುರಬಾಗಿ
135. ಗ್ಯಾರೇಹಳ್ಳಿ
136. ಗ್ಯಾರೆಹಳ್ಳಿ ಎ.ಕೆ. ಕಾಲೋನಿ
137. ಗ್ಯಾರೆಹಳ್ಳಿಪಾಳ್ಯ
138. ಗ್ಯಾರಂಟಿಪಾಳ್ಯ
139. ಗಂಗಾಬೋವಿ ಕಾಲೋನಿ
140. ಗೇಮಾನಾಯ್ಕನ ಪಾಳ್ಯ
141. ಗಂಟಿಗನ ಪಾಳ್ಯ
142. ಗಾಣದಾಳು
143. ಗುರುವಾಪುರ
144. ಗೌಡಗೆರೆ
145. ಚನ್ನಕಾಟಯ್ಯನಗುಡ್ಲು
146. ಚೌಳಕಟ್ಟೆ
147. ಚನ್ನಪ್ಪನಪಾಳ್ಯ
148. ಚಿಕ್ಕಬಿದರೆ
149. ಚಿತ್ರದೇವರಹಟ್ಟಿ
150. ಚೌಳಕಟ್ಟೆ ವಡ್ಡರಹಟ್ಟಿ
151. ಚಿಕ್ಕಬೆಳವಾಡಿ
152. ಚುಂಗನಹಳ್ಳಿ
153. ಚುಂಗನಹಳ್ಳಿ ಕೋಡಿಪಾಳ್ಯ
154. ಚಿಕ್ಕರಾಂಪುರ
155. ಚಿಕ್ಕರಾಂಪುರ ಗೊಲ್ಲರಹಟ್ಟಿ
156. ಚಿಕ್ಕೇನಹಳ್ಳಿ
157. ಚನ್ನೇನಹಳ್ಳಿ ಬಾಗಾಯ್ತು
158. ಚನ್ನೇನಹಳ್ಳಿ
159. ಚೋರಗೊಂಡನಹಳ್ಳಿ
160. ಚಟ್ಟಸಂದ್ರ
161. ಚಿಕ್ಕ ಎಣ್ಣೆಗೆರೆ
162. ಚಿಕ್ಕ ಎಣ್ಣೆಗೆರೆ ಲಂಬಾಣಿ ತಾಂಡ
163. ಜೋಡಿಕಲ್ಲೇನಹಳ್ಳಿ
164. ಜೋಡಿಕಲ್ಲೇನಹಳ್ಳಿ ಎ.ಕೆ. ಕಾಲೋನಿ
165. ಜಡೆಯಪ್ಪನಪಾಳ್ಯ
166. ಜಯಚಾಮರಾಜಪುರ
167. ಜಾಣೆಹಾರ್
168. ಡಿಂಕನಹಳ್ಳಿ

169. ತೀರ್ಥಪುರ
170. ತೀರ್ಥಪುರ ಎ.ಕೆ. ಕಾಲೋನಿ
171. ತೀರ್ಥಪುರ ಜನತಾ ಹೌಸ್ ಕಾಲೋನಿ
172. ತಿಗಳನಹಳ್ಳಿ
173. ತಾಡಾನಾಯ್ಕನ ತಾಂಡ್ಯ
174. ತೊನ್ನಲಾಪುರ
175. ತರೇದಹಳ್ಳಿ
176. ತಿಮ್ಲಾಪುರ
177. ತಿಮ್ಮಪ್ಪನಹಟ್ಟಿ
178. ತಮ್ಮಡಿಹಳ್ಳಿ ಗೊಲ್ಲರಹಟ್ಟಿ
179. ತಮ್ಮಡಿಹಳ್ಳಿ ಎ.ಕೆ. ಕಾಲೋನಿ
180. ತಿಮ್ಮನಹಳ್ಳಿ
181. ತೊರೆಮನೆ
182. ತೊರೆಸೂರಗೊಂಡನಹಳ್ಳಿ
183. ತರಬೇನಹಳ್ಳಿ
184. ತರಬೇನಹಳ್ಳಿ ಬೋವಿಕಾಲೋನಿ
185. ತಮ್ಮಡಿಹಳ್ಳಿ
186. ತಗಚೇಘಟ್ಟ
187. ತಿಮ್ಮಲಾಪುರ
188. ತಾರಿಕಟ್ಟೆ
189. ತಾರಿಕಟ್ಟೆ ಲಂಬಾಣಿತಾಂಡ್ಯ
190. ತಿರುಮಲದೇವರಹಟ್ಟಿ
191. ತೋಟೆಗೌಡನಪಾಳ್ಯ
192. ತಿಗಳನಹಳ್ಳಿಪಾಳ್ಯ
193. ತಿತ್ತಿಗೊರವನಪಾಳ್ಯ
194. ದಸೂಡಿ
195. ದಸೂಡಿ–ಹೊಸೂರು ಬೋವಿ ಕಾಲೋನಿ
196. ದಬ್ಬಗುಂಟೆ
197. ದಾಸಪ್ಪನಹಟ್ಟಿ
198. ದುರ್ಗದಸೀಮೆ ಪಾಳ್ಯ
199. ದೊಡ್ಡಬಿದರೆ
200. ದೊಡ್ಡಬಿದರೆ ಎ.ಕೆ. ಕಾಲೋನಿ
201. ದೊಡ್ಡಬಿದರೆ ಹಳೆ ತಾಂಡ್ಯ
202. ದೊಡ್ಡಬಿದರೆ ಹೊಸತಾಂಡ್ಯ
203. ದಾಸಯ್ಯನಹಟ್ಟಿ
204. ದಾಸಗೆರೆ
205. ದಿಬ್ಬದಹಳ್ಳಿ
206. ದಿಬ್ಬದಹಳ್ಳಿ ಎ.ಡಿ. ಕಾಲೋನಿ
207. ದುಗಡಿಹಳ್ಳಿ
208. ದುಗಡಿಹಳ್ಳಿ ಗೊಲ್ಲರಹಟ್ಟಿ
209. ದುರ್ಗಮ್ಮನ ಬೆಟ್ಟ
210. ದೇವರಹಳ್ಳಿ
211. ದವಣದ ಹೊಸಳ್ಳಿ
212. ದಮ್ಮಡಿಹಟ್ಟಿ
213. ದಾಸಪ್ಪನಕಟ್ಟೆ
214. ದೊಡ್ಡನಹಳ್ಳಿ
215. ದೊಡ್ಡ ಹುಲ್ಲೇನಹಳ್ಳಿ
216. ದೊಡ್ಡ ಎಣ್ಣೇಗೆರೆ
217. ದೊಡ್ಡ ಎಣ್ಣೇಗೆರೆ ಏ.ಕೆ. ಕಾಲೋನಿ
218. ದೊಡ್ಡ ಎಣ್ಣೇಗೆರೆ ಗೇಟ್
219. ದೊಡ್ಡರಾಂಪುರ
220. ದೊಡ್ಡರಾಂಪುರ ಗೊಲ್ಲರಹಟ್ಟಿ
221. ದಿಬ್ಬದಹಳ್ಳಿ
222. ದಿಬ್ಬದಹಳ್ಳಿ ಏ.ಕೆ. ಕಾಲೋನಿ
223. ದಾಸೇಹಳ್ಳಿ
224. ನಡುವನಹಳ್ಳಿ
225. ನಡುವನಹಳ್ಳಿ ಏಕೆ ಕಾಲೋನಿ
226. ನರುವಗಲ್
227. ನರುವಗಲ್ ಗೊಲ್ಲರಹಟ್ಟಿ
228. ನರುವಗಲ್ ಕಟ್ಟೆಕೋಡಿ
229. ನಂದಿಹಳ್ಳಿ
230. ನಂದಿಹಳ್ಳಿ ಏ.ಕೆ.ಕಾಲೋನಿ
231. ನಂದಿಹಳ್ಳಿ ಗೊಲ್ಲರಹಟ್ಟಿ
232. ನಾಗೇನಹಳ್ಳಿ
233. ನಿರುಗಲ್ ಬಸವಾಪಟ್ಟಣ ತಾಂಡ್ಯ
234. ನಾರಸೀಹಳ್ಳಿ
235. ನುಲೇನೂರು
236. ನೂಲೇನೂರು ಎ.ಕೆ. ಕಾಲೋನಿ
237. ಪೋಚಕಟ್ಟೆ ಎ.ಕೆ.ಕಾಲೋನಿ
238. ಪಿನ್ನೇನಹಳ್ಳಿ
239. ಪೆಮ್ಮಲದೇವರಹಳ್ಳಿ
240. ಪಾಪನಕೊಣ
241. ಪಾಪನಕೊಣ
242. ಪುರುಸೇನಹಳ್ಳಿ
243. ಪಂಕಜನಹಳ್ಳಿ (ಜೆ.ಸಿ.ಪುರ)
244. ಪುರದ ಕಟ್ಟೆ
245. ಪುರದ ಮಠ
246. ಪುರ
247. ಪೋಚಕಟ್ಟೆ ತಾಂಡ್ಯ
248. ಪೋಚಕಟ್ಟೆ
249. ಬಗ್ಗನಹಳ್ಳಿ
250. ಬಸವನಗುಡಿ
251. ಬೆನಕನಕಟ್ಟೆ ಗೊಲ್ಲರಹಟ್ಟಿ
252. ಬಲ್ಲಪ್ಪನಹಟ್ಟಿ
253. ಬಂದ್ರೇಹಳ್ಳಿ
254. ಬಂದ್ರೇಹಳ್ಳಿ ತಾಂಡ್ಯ

255. ಭದ್ಯನಾಯ್ಕನ ತಾಂಡ
256. ಬಳ್ಳೆಕಟ್ಟೆ
257. ಬಳ್ಳೆಕಟ್ಟೆ ತಾಂಡ್ಯ
258. ಬರದಲೇ ಪಾಳ್ಯ
259. ಬರಸಿಡ್ಲೇಹಳ್ಳಿ
260. ಬರಸಿಡ್ಲೇಹಳ್ಳಿ ಏ.ಕೆ. ಕಾಲೋನಿ
261. ಬನಶಂಕರಿ ನಗರ
262. ಬನ್ನಿಕೆರೆ
263. ಬಿಳಿಗೆಹಳ್ಳಿ
264. ಬೆಳ್ಳಾರ
265. ಬೆಳ್ಳಾರ ಎ.ಕೆ. ಕಾಲೋನಿ
266. ಬೆಳ್ಳಾರ ಸೇತುವೆ
267. ಬೆಳ್ಳಾರ ಜನತಾ ಕಾಲೋನಿ
268. ಬೆಂಚೆಹಟ್ಟಿ
269. ಬಿಳಿಕಲ್ಲು ಗೊಲ್ಲರಹಟ್ಟಿ
270. ಭಟ್ಟರಹಳ್ಳಿ
271. ಬಟ್ಟರಹಳ್ಳಿ ಎ.ಕೆ. ಕಾಲೋನಿ
272. ಬೈರಾಪುರ ಗೊಲ್ಲರಹಟ್ಟಿ
273. ಬೈರಾಪುರ
274. ಬೈರಾಪುರ ಎ.ಕೆ. ಕಾಲೋನಿ
275. ಬೈರಾಪುರ ತಾಂಡ್ಯ
276. ಬೋರನ ಕಣಿವೆ
277. ಬೇವಿನಹಳ್ಳಿ
278. ಬೇವಿನಹಳ್ಳಿ ಗೊಲ್ಲರ ಹಟ್ಟಿ
279. ಬಾಣದೇವರ ಹಟ್ಟಿ
280. ಬರಗೂರು
281. ಬರಗೂರು ಎ.ಕೆ. ಕಾಲೋನಿ
282. ಬರಕನಹಾಳ್
283. ಬರಕನಹಾಳ್ ತಾಂಡ್ಯ
284. ಬರಕನಹಾಳ್ ಎ.ಕೆ. ಕಾಲೋನಿ
285. ಬಡಕೆಗುಡ್ಲು
286. ಬಡಕೆಗುಡ್ಲು ವಡ್ಡರಹಟ್ಟಿ
287. ಬಗ್ಗನಹಳ್ಳಿ
288. ಬಗ್ಗನಹಳ್ಳಿ ರಂಗನಾಥಪುರ
289. ಬಸವಾಪಟ್ಟಣ
290. ಬೆಳಗುಲಿ
291. ಬೆನಕನಕಟ್ಟೆ
292. ಬೆನಕನಕಟ್ಟೆ ಗೊಲ್ಲರಹಟ್ಟಿ
293. ಬೆಳ್ಳಾರದ ಗೊಲ್ಲರಹಟ್ಟಿ
294. ಬಂಡೆಹಟ್ಟಿ
295. ಬೋರನಕಣಿವೆ ಜಯಚಂದ್ರ ಬಡಾವಣೆ
296. ಬಂಗಾರಗೆರೆ
297. ಬಂಗಾರಗೆರೆ ಲಂಬಾಣಿ ತಾಂಡ
298. ಬಂಡೆಹಟ್ಟಿ
299. ಬಲ್ಲೇನಹಳ್ಳಿ
300. ಬ್ಯಾಟೆರಂಗನಹಳ್ಳಿ
301. ಬಲ್ಲೇನಹಳ್ಳಿ ಎ.ಕೆ. ಕಾಲೋನಿ
302. ಬಲ್ಲೇನಹಳ್ಳಿ
303. ಬಾಚಿಹಳ್ಳಿ
304. ಬಾಚಿಹಳ್ಳಿ ಎ.ಕೆ. ಕಾಲೋನಿ
305. ಬಾಚಿಹಳ್ಳಿ ಎ.ಡಿ. ಕಾಲೋನಿ
306. ಬಾಲದೇವರಹಟ್ಟಿ
307. ಬಾಳೇಕೊಣ
308. ಭೈರಗಾನಹಳ್ಳಿ
309. ಬೈರಗಾನಹಳ್ಳಿ ಎ.ಕೆ. ಕಾಲೋನಿ
310. ಭೈರಲಿಂಗನಹಳ್ಳಿ
311. ಭೂಮನಕಟ್ಟೆ
312. ಭರಣಾಪುರ
313. ಬೋರೇಗೌಡನಪಾಳ್ಯ (ಬಿ.ಪಾಳ್ಯ)
314. ಭೂತಪ್ಪನಪಾಳ್ಯ
315. ಭೀಮಸಂದ್ರ
316. ಭೈಲಪ್ಪನ ಮಠ
317. ಬ್ಯಾಲದ ಕೆರೆ
318. ಬಿದರಕಟ್ಟೆ
319. ಬಳ್ಳೇನಹಳ್ಳಿ
320. ಬುಳ್ಳೇನಹಳ್ಳಿ ಗೊಲ್ಲರಹಟ್ಟಿ
321. ಭಾವನಹಳ್ಳಿ
322. ಭದ್ರಯ್ಯನಪಾಳ್ಯ
323. ಬಸವಣ್ಣನ ಗುಡಿ
324. ಬೊಮ್ಮೇನಹಳ್ಳಿ
325. ಮಂಚೀಕಟ್ಟೆ
326. ಮಾಕುವಳ್ಳಿ
327. ಮೈಸೂರಪ್ಪನಪಾಳ್ಯ
328. ಮಲ್ಲಿಗೆರೆ
329. ಮಲ್ಲಿಗೆರೆ ಎ.ಕೆ. ಕಾಲೋನಿ
330. ಮಲ್ಲಿಗೆರೆ ಗೊಲ್ಲರಹಟ್ಟಿ
331. ಮುದ್ದೇನಹಳ್ಳಿ
332. ಮುನಿಶ್ಯಾಮಯ್ಯನತಾಂಡ್ಯ
333. ಮರಳುಹಳ್ಳದ ಕಾವಲ್
334. ಮಾಳಿಗೆಹಳ್ಳಿ
335. ಮೇಲನಹಳ್ಳಿ
336. ಮಾರಸಂದ್ರ
337. ಮಾರಸಂದ್ರಪಾಳ್ಯ
338. ಮಸಾಲ್ತಿಗುಡ್ಲು
339. ಮಾಸ್ತಯ್ಯನಪಾಳ್ಯ
340. ಮಲಗೊಂಡನಹಳ್ಳಿ

341. ಮಲಗೊಂಡನಹಳ್ಳಿ ಎ.ಕೆ. ಕಾಲೋನಿ
342. ಮತ್ತಿಘಟ್ಟ
343. ಮತಿಘಟ್ಟ ಎ.ಡಿ. ಕಾಲೋನಿ
344. ಮತಿಘಟ್ಟ ಗೊಲ್ಲರಹಟ್ಟಿ
345. ಮಾದಾಪುರ
346. ಮಾದಾಪುರ ತಾಂಡ
347. ಮಲ್ಲೇನಹಳ್ಳಿ
348. ಮರೆನಡು
349. ಮರೆನಡುಪಾಳ್ಯ
350. ಮರಾಠಿಪಾಳ್ಯ
351. ಮದನಮಡು
352. ಮಾಕುವಳ್ಳಿ ಪಾಳ್ಯ
353. ಮಾಕುವಳ್ಳಿ ಗೊಲ್ಲರಹಟ್ಟಿ
354. ಮಂಚಸಂದ್ರ
355. ಮಂಚಸಂದ್ರ ಗೊಲ್ಲರಹಟ್ಟಿ
356. ಮಾದೇನಹಳ್ಳಿ
357. ಮಾಳಮ್ಮನಹಟ್ಟಿ
358. ಮಾರನವಮಿ ಮಂಟಪ
359. ಮುನಿಯಮ್ಮನಪಾಳ್ಯ
360. ಮೂಡ್ಲಪ್ಪನಪಾಳ್ಯ
361. ಮೋಟಿಹಳ್ಳಿ
362. ಮೋಟಿಹಳ್ಳಿ ವಡ್ಡರಹಟ್ಟಿ
363. ಮಾರುಹೊಳೆ
364. ಮೇಲನಹಳ್ಳಿ
365. ಮಲ್ಲೇನಹಳ್ಳಿ
366. ಮುತ್ತುಗದಹಳ್ಳಿ
367. ಮಾದಿಹಳ್ಳಿ
368. ಮೈಲುಕಟ್ಟೆ
369. ಮೈಲುಕಟ್ಟೆ ಗೊಲ್ಲರಹಟ್ಟಿ
370. ಮೈಲುಕಟ್ಟೆ ಬೋವಿ ಕಾಲೋನಿ
371. ಯಲಿಯಪ್ಪನಪಾಳ್ಯ
372. ಯಳನಡು
373. ಯಗಚೀಹಳ್ಳಿ
374. ಯಗಚೀಹಳ್ಳಿ ಮಲ್ಲೇಶ್ವರ ಬಡಾವಣೆ
375. ಯಾಕೂಬ್‌ಸಾಬ್ ಪಾಳ್ಯ
376. ಯರೇಕಟ್ಟೆ
377. ಯರೇಕಟ್ಟೆ ಎ.ಕೆ. ಕಾಲೋನಿ
378. ಯಳ್ಳೇನಹಳ್ಳಿ
379. ಯರೇಕಟ್ಟೆ
380. ಯರೇಹಳ್ಳಿ
381. ಯರೇಹಳ್ಳಿ
382. ಯೋಗಮಾಧವನಗರ
383. ರಾಮನಹಳ್ಳಿ
384. ರಾಮನಹಳ್ಳಿ ಎ.ಕೆ. ಕಾಲೋನಿ
385. ರಾಮಲಿಂಗನಪಾಳ್ಯ
386. ರಂಗಜ್ಜನಪಾಳ್ಯ
387. ರಂಗಾಪುರ
388. ರಾಮನಗರ
389. ರಾಮನಗರ
390. ರಂಗೇನಹಳ್ಳಿ
391. ರಂಗೇನಹಳ್ಳಿ ಎ.ಕೆ. ಕಾಲೋನಿ
392. ರಂಗೇನಹಳ್ಳಿ ಗದ್ದಿಗೇಹಳ್ಳಿ
393. ರಾಜಯ್ಯನಪಾಳ್ಯ
394. ರಾಮಪ್ಪನಹಟ್ಟಿ
395. ರಾಮಘಟ್ಟ
396. ರಾಮಘಟ್ಟೆಪಾಳ್ಯ (ತಕ್ಕಲುಪಾಳ್ಯ)
397. ರಾಮಪ್ಪನಪಾಳ್ಯ
398. ರಾಯಪ್ಪನಪಾಳ್ಯ
399. ಲಕ್ಕಗೊಂಡನಹಳ್ಳಿ
400. ಲಕ್ಷ್ಮೀಪುರ
401. ಲಕ್ಕೇನಹಳ್ಳಿ
402. ಲಕ್ಕೇನಹಳ್ಳಿ
403. ಲಿಂಗಪ್ಪನಪಾಳ್ಯ
404. ಲಿಂಗದಹಳ್ಳಿ
405. ವಡೇರಹಳ್ಳಿ
406. ವಳಗೇರಹಳ್ಳಿ
407. ವಡಕಲುಪಾಳ್ಯ
408. ವೆಂಕಟನರಸಯ್ಯನ ಗುಡ್ಲು
409. ವೆಂಕಟಾಬೋವಿ ಕಟ್ಟೆ
410. ಶೆಟ್ಟಿಕೆರೆ
411. ಶೆಟ್ಟಿಕೆರೆ ಎ.ಕೆ. ಕಾಲೋನಿ
412. ಶೆಟ್ಟಿಕೆರೆ ಹೊಸಪಾಳ್ಯ
413. ಶೆಟ್ಟಿಕೆರೆ ತೋಟದ ಮನೆ
414. ಶೆಟ್ಟಿಕೆರೆ ಜನತಾ ಹೌಸಿಂಗ್ ಕಾಲೋನಿ
415. ಶ್ರಯದ ಹೊಸಹಳ್ಳಿ
416. ಶ್ಯಾವಿಗೆಹಳ್ಳಿ
417. ಶೆಟ್ಟಿಗೆರೆ ಪಾಳ್ಯ
418. ಶಿಡ್ಲೆಕಟ್ಟೆ
419. ಸಬ್ಬೇನಹಳ್ಳಿ
420. ಸೊಬಗ ಬೋವಿಹಟ್ಟಿ
421. ಸೋರಲಮಾವು
422. ಸೋರಲಮಾವು ಗೊಲ್ಲರಹಟ್ಟಿ
423. ಸೋರಲಮಾವು ಬಂಜಾರಹಟ್ಟಿ
424. ಸೋರಲಮಾವು ತಳವಾರಪಾಳ್ಯ
425. ಸೋರಲಮಾವು ವಡ್ಡರಹಟ್ಟಿ
426. ಸೋರಲಮಾವು ಕೊರಮರಹಟ್ಟಿ

427. ಸಂಗೇನಹಳ್ಳಿ
428. ಸಿಡ್ಲೇಕಟ್ಟೆ
429. ಸಿಡ್ಲೆಕಟ್ಟೆ ಎ.ಕೆ. ಕಾಲೋನಿ
430. ಸಿದ್ದಾಪುರ
431. ಸುವಾಲಿಹಟ್ಟಿ
432. ಸೋಮಲಾಪುರ
433. ಸಾದರಹಳ್ಳಿ
434. ಸಾದರಹಳ್ಳಿ ಗೊಲ್ಲರಹಟ್ಟಿ
435. ಸಿದ್ಧರಾಮನಗರ
436. ಸೋಮಜ್ಜನಪಾಳ್ಯ
437. ಸೀಗೇಬಾಗಿ
438. ಸೀಗೆಬಾಗಿ ಎ.ಕೆ. ಕಾಲೋನಿ
439. ಸೀಗೆಬಾಗಿ ತೊರೆಮನೆ
440. ಸೈಯದ್ ಸಾಬ್ ಪಾಳ್ಯ
441. ಸೋಮನಹಳ್ಳಿ
442. ಸೋಮನಹಳ್ಳಿ ಗೊಲ್ಲರಹಟ್ಟಿ
443. ಸಂಗೇನಹಳ್ಳಿ
444. ಸಿಂಗಾಪುರ
445. ಸಿದ್ದನಕಟ್ಟೆ
446. ಸಿದ್ದನಕಟ್ಟೆ ಎ.ಕೆ. ಕಾಲೋನಿ
447. ಸೋಮನಹಳ್ಳಿ
448. ಸೋಮನಹಳ್ಳಿ ಪಾಳ್ಯ
449. ಸೋಮನಹಳ್ಳಿ ಎ.ಕೆ. ಕಾಲೋನಿ
450. ಸೊಂಡೇನಹಳ್ಳಿ
451. ಸೊಂಡೇನಹಳ್ಳಿ ಗೊಲ್ಲರಹಟ್ಟಿ
452. ಸಾಸಲು
453. ಸಾಸಲು ನವಗ್ರಾಮ
454. ಸಾಸಲು ಗೊಲ್ಲರಹಟ್ಟಿ
455. ಸಾಲ್ಕಟ್ಟೆ
456. ಸಾಲ್ಕಟ್ಟೆ ಪಾಳ್ಯ
457. ಸಾಲ್ಕಟ್ಟೆ ಲಂಬಾಣಿ ತಾಂಡ್ಯ
458. ಸಾಲ್ಕಟ್ಟೆ ಎ.ಕೆ. ಕಾಲೋನಿ
459. ಸಾವಶೆಟ್ಟಿಹಳ್ಳಿ
460. ಸಿಂಗದಹಳ್ಳಿ
461. ಸಿಂಗದಹಳ್ಳಿ ಎ.ಕೆ. ಕಾಲೋನಿ
462. ಸುಬೇದಾರ್‌ಪಾಳ್ಯ
463. ಹಂದಿಗನಡು
464. ಹುಮ್ಲಾನಾಯ್ಕನ ತಾಂಡ್ಯ
465. ಹನುಮಂತನಹಳ್ಳಿ
466. ಹರೇನಹಳ್ಳಿ
467. ಹರೇಹಳ್ಳಿ ಗೇಟ್
468. ಹರೇನಹಳ್ಳಿ ಗೊಲ್ಲರಹಟ್ಟಿ
469. ಹಾರೋಗೊಂಡನಹಳ್ಳಿ
470. ಹೊನ್ನಶೆಟ್ಟಿಹಳ್ಳಿ
471. ಹೊನ್ನಶೆಟ್ಟಿಹಳ್ಳಿ ವಡ್ಡರಹಟ್ಟಿ
472. ಹುಲ್ಲೇನಹಳ್ಳಿ
473. ಹೊಸಕೆರೆ
474. ಹೊಸ ಗೊಲ್ಲರಹಟ್ಟಿ
475. ಹಳೇ ಗೊಲ್ಲರಹಟ್ಟಿ
476. ಹೊಸಕೆರೆ
477. ಹಲ್ಕುರಿಲಿಂಗಯ್ಯನಪಾಳ್ಯ
478. ಹಳೇಹಟ್ಟಿ
479. ಹೆಸರಹಳ್ಳಿ
480. ಹುಳಿಯಾರು
481. ಹುಳಿಯಾರು ಹೈಸ್ಕೂಲ್ ಬಡಾವಣೆ
482. ಹುಳಿಯಾರು ವಸಂತನಗರ
483. ಹುಳಿಯಾರು ಇಂದಿರಾನಗರ
484. ಹುಳಿಯಾರು ಉರ್ದು ಸ್ಕೂಲ್ ಬಡಾವಣೆ
485. ಹುಳಿಯಾರು ಅಮಾನಿಕೆರೆ
486. ಹನುಮಂತಪುರ
487. ಹೊನ್ನಯ್ಯನಪಾಳ್ಯ
488. ಹೊಯ್ಸಳಕಟ್ಟೆ
489. ಹೊಯ್ಸಳಕಟ್ಟೆ ಗೇಟ್
490. ಹೊಸಹಳ್ಳಿ
491. ಹೊಸಹಳ್ಳಿ ಪಾಳ್ಯ
492. ಹುಳಿಯಾರು ತಮ್ಮಡಿಹಳ್ಳಿ
493. ಹೊಂಬಳಘಟ್ಟ
494. ಹೊನ್ನೆಬಾಗಿ
495. ಹೊನ್ನೇಬಾಗಿ ಎ.ಕೆ. ಕಾಲೋನಿ
496. ಹಂದನಕೆರೆ
497. ಹಂದನಕೆರೆ ಜನತಾ ಹೌಸಿಂಗ್ ಕಾಲೋನಿ
498. ಹಂದನಕೆರೆ ರಾಜಾಜಿನಗರ ಬಡಾವಣೆ
499. ಹಳ್ಳಿ ತಿಮ್ಮಲಾಪುರ
500. ಹುಚ್ಚನಹಳ್ಳಿ
501. ಹಾಲುಗೊಣ
502. ಹಂಚನಹಳ್ಳಿ
503. ಹೊನ್ನಯ್ಯನಪಾಳ್ಯ
504. ಹೊನ್ನಯ್ಯನ ಪಾಳ್ಯ
505. ಹಾಲು ಮಲ್ಲೇದೇವರ ಕಾವಲು
506. ದಶಾವತಾರ ಬಡಾವಣೆ, ವಾರ್ಡ್ ನಂ.1
507. ಜೋಗಿಹಳ್ಳಿ ವಾರ್ಡ್ ನಂ.2
508. ಟಿ.ಎನ್.ಎಸ್. ಬಡಾವಣೆ, ವಾರ್ಡ್ ನಂ.3
509. ದಬ್ಬೇಘಟ್ಟ, ವಾರ್ಡ್ ನಂ.4
510. ಕೆಇಬಿ ಬಡಾವಣೆ, ವಾರ್ಡ್ ನಂ.5
511. ಕೇದಿಗೆಹಳ್ಳಿ, ವಾರ್ಡ್ ನಂ.6
512. ಕುರುಬರಹಳ್ಳಿ, ವಾರ್ಡ್ ನಂ.7

513. ಮಹಾಲಕ್ಷ್ಮಿ ಬಡಾವಣೆ, ವಾರ್ಡ್ ನಂ.8
514. ಬೋವಿ ಕಾಲೋನಿ, ವಾರ್ಡ್ ನಂ.9
515. ಬ್ರಾಹ್ಮಣರ ಬೀದಿ, ವಾರ್ಡ್ ನಂ.10
516. ಹೊಸಬಾಗಿಲು, ವಾರ್ಡ್ ನಂ.11
517. ಎಂ.ಪಿ.ಜಿ.ಎಂ.ಎಸ್. ಶಾಲಾ ಬಡಾವಣೆ, ವಾರ್ಡ್ ನಂ.12
518. ಹಳ್ಳಿಕಾರರ ಬಡಾವಣೆ, ವಾರ್ಡ್ ನಂ.13
519. ಅರಳೇಪೇಟೆ, ವಾರ್ಡ್ ನಂ.14
520. ಧರ್ಮಾವರದ ಬೀದಿ, ವಾರ್ಡ್ ನಂ.15
521. ಮುಸ್ಲಿಂ ಬಡಾವಣೆ, ವಾರ್ಡ್ ನಂ.16
522. ಲಿಂಗನಾಯಕನಹಟ್ಟಿ, ವಾರ್ಡ್ ನಂ.17
523. ಸಿದ್ದೇಶ್ವರ ಮಠ ಬಡಾವಣೆ, ವಾರ್ಡ್ ನಂ.18
524. ಮಣೆದೀರನಹಟ್ಟಿ, ವಾರ್ಡ್ ನಂ.19
525. ಕನಕನಗರ, ವಾರ್ಡ್ ನಂ.20
526. ಹೂವಾಡಿಗರ ಬೀದಿ, ವಾರ್ಡ್ ನಂ.21
527. ಮಲಿಯಪ್ಪ ಬೀದಿ ಬಡಾವಣೆ, ವಾರ್ಡ್ ನಂ.22
528. ಅಂಬೇಡ್ಕರ್ ನಗರ, ವಾರ್ಡ್ ನಂ.23

# ಚಿಕ್ಕನಾಯಕನಹಳ್ಳಿ ತಾಲ್ಲೂಕು

ಚಿಕ್ಕನಾಯಕನಹಳ್ಳಿ ತುಮಕೂರು ಜಿಲ್ಲೆಯ ತಾಲ್ಲೂಕು ಕೇಂದ್ರ. ಜಿಲ್ಲಾ ಕೇಂದ್ರ ತುಮಕೂರಿನಿಂದ ಪಶ್ಚಿಮಕ್ಕೆ ೬೯ಕಿ.ಮೀ. ದೂರದಲ್ಲಿದೆ. ಬೀದರ್–ಶ್ರೀರಂಗಪಟ್ಟಣ ರಾಷ್ಟ್ರೀಯ ಹೆದ್ದಾರಿ ಈ ತಾಲ್ಲೂಕಿನ ಒಳಭಾಗದಿಂದ ಹಾದುಹೋಗುತ್ತದೆ. ಸಮುದ್ರ ಮಟ್ಟಕ್ಕಿಂತ ೨೫೯೬ ಅಡಿ ಎತ್ತರವಿದ್ದು ಈ ತಾಲ್ಲೂಕಿನ ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೧೩ ಚ.ಕಿ.ಮೀ. ಆಗಿದೆ. ಶೆಟ್ಟಿಕೆರೆ, ಹಂದನಕೆರೆ, ಹುಳಿಯಾರು, ಕಂದಿಕೆರೆ ಹಾಗೂ ಚಿಕ್ಕನಾಯಕನಹಳ್ಳಿ ಕಸಬಾ ಈ ಐದು ಹೋಬಳಿ ಕೇಂದ್ರಗಳನ್ನು ಹೊಂದಿದೆ. ಚಿಕ್ಕನಾಯಕನಹಳ್ಳಿ ಈ ಹೆಸರು ಹಾಗಲವಾಡಿ ಪಾಳೆಯಗಾರ ಮನೆತನದ ಸಾಲಿನಾಯಕನ ಸೋದರ ಚಿಕ್ಕನಾಯಕನ ಮೂಲದಿಂದ ಬಂದಿದೆ. ಈ ಗ್ರಾಮ ರಚನೆಗೆ ಚಿಕ್ಕನಾಯಕ ಕಾರಣವಾದ ಹಿನ್ನೆಲೆಯಲ್ಲಿ ಈತನ ಹೆಸರನ್ನು ಚಿಕ್ಕನಾಯಕನಹಳ್ಳಿ ಎಂದು ಕರೆಯಲಾಗಿದೆ.

ಉತ್ತರಕ್ಕೆ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹಿರಿಯೂರು, ಪೂರ್ವಕ್ಕೆ ಸಿರಾ, ಗುಬ್ಬಿ ತಾಲ್ಲೂಕು, ದಕ್ಷಿಣಕ್ಕೆ ತಿಪಟೂರು, ಪಶ್ಚಿಮಕ್ಕೆ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕು ಭೂ ವ್ಯಾಪ್ತಿಯನ್ನು ಸಮೀಪಿಸಿದೆ. ೨೦೧೧ ರ ಜನಗಣತಿ ಪ್ರಕಾರ ೨೧೨೧೩೦ ಜನಸಂಖ್ಯೆ ಹೊಂದಿದೆ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ರಾಗಿ, ಹೆಸರು, ಆರಕ, ನವಣೆ, ಜೋಳ, ಕೊರಲೆ, ಸಾವೆ, ಹರಳು, ಹುರುಳಿ, ಭತ್ತ, ಅವರೆ ಪ್ರಮುಖ ಆಹಾರ ಬೆಳೆಗಳು. ತೆಂಗು ತುಮಕೂರು ಜಿಲ್ಲೆಯಲ್ಲಿ ಎರಡನೇ ಅತಿಹೆಚ್ಚು ಬೆಳೆಯುವ ಭೂಪ್ರದೇಶವಾಗಿದೆ. ಅಡಿಕೆ, ದಾಳಿಂಬೆ ವ್ಯಾಪಾರಿ ಬೆಳೆಯಾಗಿ ಬೆಳೆಯುತ್ತಾರೆ. ತಾಲ್ಲೂಕಿನ ಪೂರ್ವಕ್ಕೆ ಕರಡಿಗುಡ್ಡ, ಮದಲಿಂಗನಗುಡ್ಡ ಹೀಗೆ ಗುಡ್ಡ ಸಾಲು ಮುಂದುವರಿದ್ದು ಇದು ಉತ್ಕೃಷ್ಟ ಮ್ಯಾಂಗನೀಸ್ ಅದಿರನ್ನು ಹೊಂದಿದ್ದು ಕೊಂಡ್ಲಿಕ್ರಾಸ್, ಚಿತ್ರದುರ್ಗ ಜೋಗಿಮಟ್ಟಿಯತನಕ ಮುಂದುವರಿದಿದೆ. ಜಾಣೆಹಾರ್, ಬೆಳ್ಳಾರ ಕಟ್ಟೆ ಚಿನ್ನದ ನಿಕ್ಷೇಪಗಳಿವೆ. ೧೮೯೨ ರಲ್ಲಿ ನಿರ್ಮಾಣವಾದ ಬೋರನಕಣಿವೆ ಈ ತಾಲ್ಲೂಕಿನ ಏಕೈಕ ಜಲಾಶಯ.

ಚಾರಿತ್ರಿಕವಾಗಿ ಗಂಗರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು, ಪಾಳೆಯಗಾರರು ಹೀಗೆ ಬಹುಮಾನ್ಯ ಅರಸು ಪರಂಪರೆಯಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಆರು ಫೌಜುಗಳಲ್ಲಿ ಒಂದಾದ ಮಧುಗಿರಿಯ ವ್ಯಾಪ್ತಿಗೆ ಚಿಕ್ಕನಾಯಕನಹಳ್ಳಿ ಸೇರಿತ್ತು. ೧೮೩೪ ರಲ್ಲಿ ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಗೆ ಸೇರಿದ್ದು ನಂತರ ೧೮೬೨ ರಲ್ಲಿ ತುಮಕೂರು ಜಿಲ್ಲೆ ರಚನೆಯಾದಾಗ ತುಮಕೂರು ಜಿಲ್ಲೆಗೆ ಸೇರಿ ತಾಲ್ಲೂಕಿನ ಸ್ಥಾನಮಾನ ಪಡೆಯಿತು. ೧೯೩೮ ರಲ್ಲಿ ತಿಪಟೂರು ಕಂದಾಯ ಉಪವಿಭಾಗಕ್ಕೆ ಸೇರಿತು.

ಜನಾಂಗಿಕವಾಗಿ ವೀರಶೈವ, ಕುರುಬರು, ಕುಂಚಿಟಿಗರು, ಮರಸ ಒಕ್ಕಲಿಗ, ಹಳ್ಳಿಕಾರ, ಮುಸ್ಲಿಂ, ಸಾದರು, ಗೊಲ್ಲರು, ನಾಯಕ, ವೈಶ್ಯ, ಬ್ರಾಹ್ಮಣ, ಆದಿಕರ್ನಾಟಕ, ಆದಿದ್ರಾವಿಡ, ಅರಸು ಕುಲ, ದೇವಾಂಗ, ಈಡಿಗ, ಬೆಸ್ತ, ಉಪ್ಪಾರ, ಗಾಣಿಗ, ಲಂಬಾಣಿ, ಬಲಜಿಗ, ಮರಾಠಿ, ಕುಂಬಾರ, ದೊಂಬಿದಾಸರು, ಕೊರಚರು, ಕೊರಮರು, ದಕ್ಕಲರು, ಪಿಂಜಾರಿಗಳು, ಜೈನರು, ಹೂವಾಡಿಗರ ಜನಾಂಗಗಳು ಈ ತಾಲ್ಲೂಕಿನಲ್ಲಿ ನೆಲೆಸಿದ್ದಾರೆ. ಕುರಿ, ಮೇಕೆ, ಹಸು, ಎಮ್ಮೆ, ಕೋಳಿ, ನಾಯಿ ಸಾಕುಪ್ರಾಣಿಯಾಗಿವೆ. ರಾಗಿಮುದ್ದೆ, ಅನ್ನ, ಕೊಟ್ಟೆ ಪ್ರಧಾನ ಆಹಾರವಾಗಿಯೂ ಮಾಂಸಾಹಾರ, ಹೋಳಿಗೆ, ಪಾಯಸ, ಶ್ಯಾವಿಗೆ, ಕಿಚಡಿ ಸಾಂದರ್ಭಿಕ ವಿಶೇಷ ಭೋಜನವಾಗಿ ಬಳಸುತ್ತಾರೆ.

ಸಾಂಪ್ರದಾಯಿಕ ಎತ್ತಿನ ಗಾಡಿಗಳಿವೆ. ಆಧುನಿಕ ವಾಹನಗಳಾಗಿ ಕಾರು, ಬಸ್ಸು, ಲಾರಿ, ಟೆಂಪೋ ಹಾಗೂ ದ್ವಿಚಕ್ರ ವಾಹನಗಳ ಬಳಕೆ ಇದೆ. ಸಂಪ್ರದಾಯ ಹಾಗೂ ಆಧುನಿಕ ಬೇಸಾಯ ಪದ್ಧತಿಯನ್ನು ಇಲ್ಲಿನ ರೈತರು ಅನುಸರಿಸುತ್ತಾರೆ. ಬಿಸಿಲು ಭೂಪ್ರದೇಶದಿಂದ ಕೂಡಿದ್ದು ಕಳೆದು ಐದು ವರ್ಷಗಳಲ್ಲಿ ೨೬೬೭ ಮಿ.ಮೀ ಮಳೆಯಾಗಿದೆ.

ಶೈಕ್ಷಣಿಕವಾಗಿ ಗೋಡೆಕೆರೆ, ಪಂಕಜನಹಳ್ಳಿ, ಬಡೇರಹಳ್ಳಿ, ಶೆಟ್ಟಿಕೆರೆ ಗುರುಕುಲ ಶಿಕ್ಷಣ ಪದ್ಧತಿ ಅನುಸರಿಸುತ್ತಾ ಬಂದಿತ್ತು. ಸಾರ್ವತ್ರಿಕ ಶಿಕ್ಷಣ ನೀತಿಯ ಅನುಸಾರ ಸಾರ್ವಜನಿಕ ಶಾಲಾ–ಕಾಲೇಜು ಆರಂಭವಾದವು. ಚಿಕ್ಕನಾಯಕನಹಳ್ಳಿ ಟೌನಿನ ಕುರುಬರ ಶ್ರೇಣಿ ಶಾಲೆ ಶತಮಾನ ಕಂಡ ಹಿರಿಯ ಶಿಕ್ಷಣ ಸಂಸ್ಥೆ. ೧೯೪೨ ರಲ್ಲಿ ಆರಂಭವಾದ ದೇಶೀ ವಿದ್ಯಾಪೀಠ ಪ್ರಾಥಮಿಕ, ಪ್ರೌಢ, ಪದವಿಪೂರ್ವ ಕಾಲೇಜಿನ ತನಕ ಶಿಕ್ಷಣ ನೀಡುತ್ತಿದೆ. ತಾಲ್ಲೂಕಿನಲ್ಲಿ ಎರಡು ಸರ್ಕಾರಿ ಪದವಿ ಕಾಲೇಜು, ೫ ಸರ್ಕಾರಿ ಪದವಿ ಪೂರ್ವ ಕಾಲೇಜು, ಖಾಸಗಿ ಕಾಲೇಜುಗಳಿವೆ. ರೋಟರಿ ವಿದ್ಯಾಸಂಸ್ಥೆ, ನವೋದಯ, ಅಂಬೇಡ್ಕರ್, ನಿರ್ವಾಣೇಶ್ವರ, ಜ್ಞಾನಪೀಠ, ದಿವ್ಯಪ್ರಭ, ನವೋದಯ ಪದವಿ ಕಾಲೇಜು ಹೀಗೆ ಖಾಸಗಿ ಶಿಕ್ಷಣ ಸಂಸ್ಥೆಗಳೂ ಗಣನೀಯ ಕೊಡುಗೆ ನೀಡಿವೆ.

ಧಾರ್ಮಿಕವಾಗಿ ಚಿಕ್ಕನಾಯಕನಹಳ್ಳಿ ಸಮನ್ವಯತೆಗಳಿಂದ ಅನನ್ಯತೆ ಪಡೆದಿದೆ. ಇಲ್ಲಿನ ತಾತಯ್ಯನ

ಮಸೀದಿ ಹಿಂದೂ–ಮುಸ್ಲಿಂ ಸಮನ್ವಯ ಕೇಂದ್ರವಾಗಿದೆ. ವಾರ್ಷಿಕವಾಗಿ ನಡೆಯುವ ಉರುಸ್ ಕಾರ್ಯಕ್ರಮ ಊರ ಹಬ್ಬವಾಗಿ ಕವಾಲಿ, ಸಂಗೀತಗೋಷ್ಠಿ, ಪ್ರತಿಭಾ ಪುರಸ್ಕಾರಗಳಿಂದ ಗಮನ ಸೆಳೆದಿದೆ. ಹಳೆಯೂರು ಆಂಜನೇಯನ ಏಕಾದಶಿ ತೇರು, ಬೆಳ್ಳಿ ಪಲ್ಲಕ್ಕಿ, ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಿಂದ ಪ್ರಸಿದ್ಧ. ಜನಗಳ ಜಾತ್ರೆಯಾಗಿ ಮೂರು ದಿನಗಳ ಕಾಲ ವಿಜೃಂಭಿಸುತ್ತದೆ. ಪ್ರಸನ್ನ ರಾಮೇಶ್ವರನ ದನಗಳ ಜಾತ್ರೆ ಏಪ್ರಿಲ್–ಮೇ ತಿಂಗಳಲ್ಲಿ ೧೫ ದಿನಗಳ ಕಾಲ ನಡೆಯುತ್ತದೆ. ದಬ್ಬೇಘಟ್ಟದ ಮಹಾಲಿಂಗೇಶ್ವರ ದೇವಾಲಯ, ಯಳನಾಡು ಸಿದ್ಧರಾಮೇಶ್ವರ, ಯರೇಕಟ್ಟೆ ರಾಂಪುರದಮ್ಮನ ಜಾತ್ರೆ, ಕುಪ್ಪೂರು ಮರುಳಸಿದ್ಧನ ಜಾತ್ರೆ, ಶೆಟ್ಟಿಕೆರೆ ಕೆಂಪಮ್ಮ, ಪಂಕಜನಹಳ್ಳಿ ಮಲ್ಲಿಕಾರ್ಜುನ, ಗೋಡೆಕೆರೆ ಸಿದ್ಧರಾಮೇಶ್ವರ, ಸಾಸಲು ಬನಶಂಕರಿ ದೇವಾಲಯ, ಮುದ್ದೇನಹಳ್ಳಿ ಬಾಗಿಲು ಬಸವೇಸ್ವರ, ಹುಳಿಯಾರು ಮಾಸ್ತಿ ಕೆಂಚಮ್ಮ, ಹಂದನಕೆರೆ ದುರ್ಗಮ್ಮ, ಮಲ್ಲಿಗೆರೆ ಮಲ್ಲಿಗೆಮ್ಮ, ಮತಿಘಟ್ಟದ ಭೀಮಸತಿ ದೇವಾಲಯ ತಾಲ್ಲೂಕಿನ ಧಾರ್ಮಿಕ ಅನನ್ಯತೆಗೆ ಸಾಕ್ಷಿಯಾಗಿವೆ. ಕಂದಿಕೆರೆ ಅವಧೂತ ಶಾಂತವೀರಸ್ವಾಮಿ ಗದ್ದಿಗೆ, ಬೆಳಗುಲಿ ಜೈನಮೂರ್ತಿ, ಶೆಟ್ಟಿಕೆರೆ ಯೋಗಮಾಧವ ದೇವಾಲಯ, ವಾಸ್ತುಶಿಲ್ಪಕ್ಕೆ ಮಾದರಿಯಾಗಿವೆ. ಚಿಕ್ಕನಾಯಕನಹಳ್ಳಿಯ ಬ್ಯಾಲದಕೆರೆಯಮ್ಮ ಪ್ರಮುಖ ಗ್ರಾಮದೇವತೆಯಾಗಿ ಬಲಿ, ಸಿಡಿ, ಗಾವು, ಸೆರಗು ಹರಕೆ ಸಂಪ್ರದಾಯಗಳಿವೆ. ನಿರ್ವಾಣೇಶ್ವರ, ರೇಣುಕಾ ಎಲ್ಲಮ್ಮ, ದುರ್ಗಮ್ಮ, ಬನಶಂಕರಿ, ವಾಸವಿ, ಕಣ್ಣಪ್ಪ, ಮೈಲಾರ ಲಿಂಗೇಶ್ವರ ದೇವಾಲಯಗಳಿವೆ. ರೇವಣಸಿದ್ದೇಶ್ವರ ಮಠ, ಕರಿಸಿದ್ಧೇಶ್ವರ ಮಠ, ಗುರು ಸಿದ್ಧರಾಮೇಶ್ವರ ಮಠಗಳು ಧಾರ್ಮಿಕ–ಸಾಂಸ್ಕೃತಿಕ ನೆಲೆಗಳಾಗಿವೆ. ಮದನಮಡು, ತೀರ್ಥರಾಮೇಶ್ವರ, ವಜ್ರ, ಯಳನಾಡು, ಗೋಡೆಕೆರೆ, ಕುಪ್ಪೂರು, ತಾತಯ್ಯನಗೋರಿ ಪ್ರಮುಖ ಪ್ರವಾಸಿ ನೆಲೆಯಾಗಿದೆ.

ಹಂದನಕೆರೆಯ ೧೨ ಬಾಗಿಲ ಸೋಪಾನದ ಬಾವಿ, ತೀರ್ಥರಾಮೇಶ್ವರ ವಜ್ರ, ದ್ರಾವಿಡ ಶೈಲಿಯ ಯಳನಾಡು ಸಿದ್ಧರಾಮೇಶ್ವರನ ದೇವಾಲಯ, ಬೆಳಗುಲಿಯ ಗೊಮ್ಮಟಗಿರಿ ಐತಿಹಾಸಿಕ ಸ್ಮಾರಕಗಳಾಗಿವೆ.

ಸಾಹಿತ್ಯಕವಾಗಿ ಚಿಕ್ಕನಾಯಕನಹಳ್ಳಿ ತನ್ನದೇ ಆದ ಹಿರಿಮೆ–ಗರಿಮೆ ಹೊಂದಿದೆ. ೧೩೦೦ ಶತಮಾನದ ಸುಮಾರಿನಲ್ಲಿ ಸಿದ್ಧರಾಮನಾಯಕ ಎಂಬುವವರು ಮಹಾನುಭವ ಪ್ರಕಾಶಿಕೆಯನ್ನು ರಚಿಸಿದ ಈ ತಾಲ್ಲೂಕಿನ ಹಿರಿಯ ಕವಿ. ಸಾಸಲು ಶಾಂತಲಿಂಗದೇಶಿ ಭೈರವೇಶ್ವರ ಪುರಾಣ ಕಥಾಸೂತ್ರ ರಚಿಸಿದ್ದಾರೆ. ವಾಸುದೇವಾರ್ಯ, ತಿಮ್ಮಪ್ಪದಾಸರು ಹಳೆಯ ಕವಿಗಳ ಸಾಲಿನಲ್ಲಿ ಬರುತ್ತಾರೆ. ಆಧುನಿಕ ಸಾಹಿತ್ಯ ಸಂದರ್ಭದಲ್ಲೂ ಚಿಕ್ಕನಾಯಕನಹಳ್ಳಿ ಪರಿಸರದ ಸಾಹಿತ್ಯ ಸಮೃದ್ಧವಾಗಿದೆ. ಆಚಾರ್ಯ ತೀರ್ಥಪುರದ ತೀ.ನಂ. ಶ್ರೀಕಂಠಯ್ಯ ಅವರ ಕಾವ್ಯ ಮೀಮಾಂಸೆ ಸಾಹಿತ್ಯ ಲೋಕದ ನಿತ್ಯ ಕೈಗನ್ನಡಿಯಾಗಿದೆ. ಸಂಶೋಧಕ ಡಿ.ಎಲ್. ನರಸಿಂಹಾಚಾರ್ ಚಿಕ್ಕನಾಯಕನಹಳ್ಳಿಯಲ್ಲಿ ನೆಲೆನಿಂತು ಹಲವಾರು ಕೃತಿ ಪ್ರಕಟಿಸಿದವರು. ಜಿ.ವಿ. ನಾರಾಯಣಮೂರ್ತಿ, ಹಿರಿಯ ಕವಿ ಸಾಸಲು ಶಿವರುದ್ರಯ್ಯ, ಮರುಳಯ್ಯ, ತೀರ್ಥಪುರದ ತೀ.ನಂ. ಶಂಕರನಾರಾಯಣ ಜನಪದ ಕ್ಷೇತ್ರದ ಅಂತರರಾಷ್ಟ್ರೀಯ ವಿದ್ವಾಂಸ ಎಂಬ ಹಿರಿಮೆಗೂ ಪ್ರೇರಕರಾಗಿದ್ದಾರೆ. ಭಾಷಾ ವಿಜ್ಞಾನಿ, ನಾಟಕಕಾರ ಲಿಂಗದೇವರು ಹಳೇಮನೆ ಹಾಲುಗೊಣದವರು. ಹಿರಿಯ ಕವಿ ಸಿಂಗಾಪುರ ಎಸ್.ಜಿ. ಸಿದ್ದರಾಮಯ್ಯ, ಎಂ.ವಿ. ನಾಗರಾಜ ರಾವ್, ಸಿ.ಕೆ. ಪರಶುರಾಮಯ್ಯ, ಹಂದನಕೆರೆ ಸೂಫಿ ಕವಿ ಡಾ.ಅಬ್ದುಲ್ ಹಮೀದ್, ಡಾ॥ ನಟರಾಜ್ ಹುಳಿಯಾರು, ಡಾ.ತಿಮ್ಮನಹಳ್ಳಿ ವೇಣುಗೋಪಾಲ, ಸಿ.ಎನ್.ಲಕ್ಷ್ಮಣಯ್ಯ, ಬಸವಮೂರ್ತಿ, ಆರ್.ಬಸವರಾಜ್, ಸಿ.ಎಚ್.ಮರಿದೇವರು, ಜಿ.ಎಸ್.ಪರಮಶಿವಮೂರ್ತಿ, ಉಜ್ಜಜ್ಜಿ ರಾಮಣ್ಣ, ಕವಿ ಎಸ್.ಗಂಗಾಧರಯ್ಯ, ಡಾ.ಎಸ್.ಶಿವಣ್ಣ, ಡಾ.ರಾಜಣ್ಣ, ಹಂದನಕೆರೆ ಪುಟ್ಟಯ್ಯ, ಪ್ರೊ॥ ಮಾಚಿ ಕೈಲಾಸನಾಥ್, ಡಾ.ಕಮಲಾಕರ, ಡಾ.ಶಿವಲಿಂಗ ಮೂರ್ತಿ, ಡಾ.ಎ.ಬಿ.ಬಾಳಪ್ಪ, ಕೆ.ಪಿ. ಶಿವಲಿಂಗಯ್ಯ, ಡಾ.ಗುರುಮೂರ್ತಿ, ಕಂಟಲಗೆರೆ ಸಣ್ಣಹೊನ್ನಯ್ಯ, ಕಂಟಲಗೆರೆ ಗುರುಮೂರ್ತಿ, ಸೋಮಶೇಖರ್ ಈ ಬಗೆಯ ಹತ್ತಾರು ಪ್ರತಿಭೆಗಳು ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹತ್ವದ ಛಾಪು ಮೂಡಿಸಿದ್ದಾರೆ. ಚಿಕ್ಕನಾಯಕನಹಳ್ಳಿ ಪರಿಸರದ ಕಲಾಕ್ಷೇತ್ರವೂ ದೊಡ್ಡದು. ೧೯೩೬ ರಲ್ಲಿ ಚಂದ್ರಮೌಳೇಶ್ವರ ನಾಟಕ ಸಭಾ ಸ್ಥಾಪಿಸಿದ, ನಾಟಕ ಶಿರೋಮಣಿ ಎಂದೇ ಖ್ಯಾತರಾಗಿದ್ದ ಸಿ.ಬಿ. ಮಲ್ಲಪ್ಪ, ಹೇಮರೆಡಿ ಮಲ್ಲಮ್ಮ ಚಲನಚಿತ್ರದ ನಾಟಕ ನಟರಾಗಿಯೂ ಪ್ರಸಿದ್ಧರು. ಸಿ.ಬಿ. ಈಶ್ವರಪ್ಪ. ಸಿ.ಎನ್.ತಮ್ಮಯ್ಯ, ನವಿಲೆ ಕೃಷ್ಣಪ್ಪ. ಸಿ.ಎಸ್.ಕರಿಸಿದ್ದಯ್ಯ ಮರೆಯಬಾರದ ರಂಗಕಲಾವಿದರು. ಬಯಲಾಟದ ಭೀಮಣ್ಣನ ಅಪೂರ್ವ ಕರಿಭಂಟ ಯಕ್ಷಗಾನ ಭಾಗವಂತ, ಶೆಟ್ಟಿಕತೆರೆ ಮರುಳಸಿದ್ದಪ್ಪನವರ ಭಾಗವಂತಿಕೆ ವಿಶೇಷ. ಹಂದನಕೆರೆ ಕರಿಯಣ್ಣಶೆಟ್ಟಿ ಮೋಡಿ, ಕುಂಭ ಕಲೆಯ ಬಹುವರ್ಣದ ಕಲಾವಿದರಾಗಿ ರಾಜ್ಯಸರ್ಕಾರದ ಗೌರವಕ್ಕೂ ಪಾತ್ರರಾಗಿರುವರು.

ಶ್ರೀ ಗುರು ರೇವಣಸಿದ್ದೇಶ್ವರ ನಾಟಕ ಸಭಾ, ಚಂದ್ರಮೌಳೇಶ್ವರಿ ನಾಟಕ ಸಂಘ, ಶ್ರೀ ಕೆಂಪಮ್ಮದೇವಿ ಬಯಲಾಟ ಸಂಘ ಸತತ ೫೦ ವರ್ಷಗಳಿಂದಲೂ ಟಗರ ಪವಾಡ, ದೇವಿ ಮಹಾತ್ಮೆ, ರಾಜಾ ವಿಕ್ರಮ

ನಾಟಕಗಳನ್ನು ತಪ್ಪದೇ ಅಭಿನಯಿಸುತ್ತಾ ಬರುತ್ತಿದ್ದಾರೆ. ಸೀಮೆಎಣ್ಣೆ ಕೃಷ್ಣಯ್ಯ ನೇತೃತ್ವದ ಕನ್ನಡ ಸಂಘ ಇದೀಗ ಸುವರ್ಣ ಮಹೋತ್ಸವ ಆಚರಿಸಿ, ಒಂದು ವಾರಗಳ ಕಾಲ ಪೌರಾಣಿಕ ನಾಟಕಗಳ ಸ್ಪರ್ಧೆಯನ್ನು ಏರ್ಪಡಿಸಿರುವುದು ವಿಶೇಷ. ಸಿ.ಎಲ್.ರವಿಕುಮಾರ್ ನೇತೃತ್ವದ ಸಂಗೊಳ್ಳಿ ರಾಯಣ್ಣ ಸಾಂಸ್ಕೃತಿಕ ಸಂಘ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ನೀಡುತ್ತಾ ಬರುತ್ತಿದೆ. ಅಂಬೇಡ್ಕರ್ ಯುವಕ ಸಂಘ, ದಿವ್ಯಜ್ಯೋತಿ ಯುವ ಸಂಘ, ತೆಲುಗು ರಾಮಕಲಾ ಸಭಾ, ಆದಿತ್ಯ ನವಗ್ರಹ ಬ್ರಾಹ್ಮಣ ಸೇವಾ ಸಭಾ ಸತತವಾಗಿ ಸಾಂಸ್ಕೃತಿಕ, ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ರೂಪಿಸುತ್ತಿವೆ. ಶ್ರೀರಾಮ ಸಪ್ತಾಹ, ರಾಮನವಮಿಯ ಸಂಭ್ರಮವಾದರೆ ಶಿವ ಸಪ್ತಾಹ ಶಿವರಾತ್ರಿಯ ವಿಶೇಷ ಸಂಭ್ರಮವಾಗಿ ಒಂದು ವಾರದ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ.

ಚಲನಚಿತ್ರ, ರಂಗಭೂಮಿ, ಕಿರುತೆರೆಯಲ್ಲಿ ಗಣನೀಯವಾಗಿ ಗುರುತಿಸಿಕೊಂಡಿರುವ ಬ್ಯಾಲದಕೆರೆ ಲಿಂಗದೇವರು, ಸಿ.ಬಿ. ಮಲ್ಲಪ್ಪ, ದೊಂಬರಕೃಷ್ಣ ಮತ್ತಿತರ ಚಲನಚಿತ್ರದ ಕಲಾವಿದ ಸೀಮೆಎಣ್ಣೆ ಕೃಷ್ಣಯ್ಯ, ಸಂಗೊಳ್ಳಿ ರಾಯಣ್ಣ ಚಲನಚಿತ್ರದ ಕಲಾವಿದ ಸಿ.ಎಲ್. ರವಿಕುಮಾರ್ ಸಾಂಸ್ಕೃತಿಕವಾಗಿ ಮರೆಯಬಾರದ ವ್ಯಕ್ತಿತ್ವಗಳು, ಸಾಂಸ್ಕೃತಿಕ ಸಂಘಟಕರು.

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಹಿರಿಯರಾದ ಎಂ.ಎಸ್. ಹನುಮಂತರಾವ್, ಎಸ್.ಮುರುಡಯ್ಯ, ಪಿ,ಎಸ್.ಮಲಿಯಪ್ಪ, ಸಿ.ಎಚ್.ಲಿಂಗದೇವರು, ಸಿ.ಎಸ್.ನಾಗಣ್ಣ, ಕಳಸಯ್ಯ, ಚಿಕ್ಕಣ್ಣ, ವೆಂಕಟರಾಮಯ್ಯ, ಲಿಂಗಯ್ಯ, ತಿಮ್ಮಯ್ಯ, ಜಿ.ವಿ. ನಾರಾಯಣಮೂರ್ತಿ, ಹುಚ್ಚಣ್ಣ, ಕುಪ್ಪೂರು ಗೋಪಾಲರಾವ್, ಸಿ.ಟಿ. ಈಶ್ವರನ್, ಸಿ.ಎನ್.ಕೃಷ್ಣರಾವ್, ತಿಮ್ಮನಹಳ್ಳಿ ಶೇಷಣ್ಣ ಇವರುಗಳ ದೇಶಸೇವೆ ಸ್ಮರಣೀಯ.

ರಾಜಕಾರಣ, ಸಮಾಜಸೇವೆಯಲ್ಲಿ ತಮ್ಮನ್ನು ಅರ್ಥಪೂರ್ಣವಾಗಿ ಒಪ್ಪಿಸಿಕೊಂಡ ಸಿ.ಆರ್.ಬಸಪ್ಪ, ಲಿಂಗದೇವರು, ಟಿ.ಬಿ.ಜಯಚಂದ್ರ, ಎನ್.ಬಸವಯ್ಯ, ಬೆಳ್ಳಾರ ಗಂಗಣ್ಣ, ಎಸ್.ಜಿ. ರಾಮಲಿಂಗಪ್ಪ, ಜಿ.ಸಿ.ಮಾಧುಸ್ವಾಮಿ, ಬಿ.ಲಕ್ಕಪ್ಪ, ಕೆಂಕೆರೆ ಕಿರಣಕುಮಾರ್, ಸಿ.ಬಿ.ಸುರೇಶ್ ಬಾಬು, ಸಿ.ಎನ್.ಭಾಸ್ಕರಪ್ಪ ಮರೆಯಬಾರದ ವ್ಯಕ್ತಿತ್ವದವರು. ರಾಜಕಾರಣ, ಸಮಾಜಸೇವೆಯ ಮೂಲಕ ಚಿಕ್ಕನಾಯಕನಹಳ್ಳಿಯ ಅಭಿವೃದ್ಧಿಗೆ ಶ್ರಮಿಸಿದ ಹಿರಿಯರು. ಎನ್.ಬಸವಯ್ಯ ಮೂರು ಅವಧಿಗೆ ಶಾಸಕರಾಗಿ, ಮೊದಲ ಅವಧಿಗೆ ಮಂತ್ರಿಗಳಾಗಿ ತುಮಕೂರು ಜಿಲ್ಲೆಗೆ ಹಲವಾರು ರಚನಾತ್ಮಕ ಕಾರ್ಯಕ್ರಮ ರೂಪಿಸಿದ ಹಿರಿಯರು. ತಿಮ್ಮನಹಳ್ಳಿಯ ಟಿ.ಬಿ. ಜಯಚಂದ್ರ ತಮ್ಮ ಸುದೀರ್ಘ ೩೮ ವರ್ಷಗಳ ರಾಜಕಾರಣದಲ್ಲಿ ೮ ಬಾರಿ ಶಾಸಕರಾಗಿ, ವಿರೋಧ ಪಕ್ಷದ ನಾಯಕರಾಗಿ, ಮೂರು ಅವಧಿಗೆ ಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರಾಗಿ ಜಿಲ್ಲೆಗೆ ವರದಾನವಾಗುವ ರೀತಿಯಲ್ಲಿ ಕೆಲಸ ಮಾಡಿರುವ ಹಿರಿಯ ರಾಜಕಾರಣಿ. ಹೆಚ್.ನಿಂಗಯ್ಯ ಕರ್ನಾಟಕ ಜಿಲ್ಲಾ ಪಂಚಾಯ್ತಿ ಅಸ್ತಿತ್ವಕ್ಕೆ ಬಂದ ಮೊದಲ ಅವಧಿಯಲ್ಲಿಯೇ ತುಮಕೂರು ಜಿಲ್ಲಾ ಪಂಚಾಯ್ತಿ ಅಧ್ಯಕ್ಷರಾಗಿ ಜಿಲ್ಲೆಯ ಜಿಲ್ಲಾ ಪಂಚಾಯ್ತಿ ಅಸ್ತಿತ್ವಕ್ಕೆ ಕಾರಣವಾದ ಹಿರಿಯರು. ಇವರು ಇದೇ ತಾಲ್ಲೂಕಿನ ತಿಮ್ಮನಹಳ್ಳಿಯವರು ಎಂಬುದು ವಿಶೇಷ. ಇದರ ಜೊತೆಗೆ ರಾಜ್ಯಮಟ್ಟದ ನೂರಾರು ಪ್ರತಿಭಾವಂತ ಅಧಿಕಾರಿಗಳನ್ನು ಈ ತಾಲ್ಲೂಕು ರೂಪಿಸಿದೆ.

ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡು ಅಲ್ಲಿಯೂ ಗಣನೀಯ ಕೊಡುಗೆ ನೀಡಿದ ಹಲವರು ಉಲ್ಲೇಖನಾರ್ಹರು. ಕುಪ್ಪೂರು ಗೋಪಾಲರಾವ್, ಕೋದಂಡರಾಮಯ್ಯ, ಹೊಸಕೆರೆ ಮಲ್ಲಿಕಾರ್ಜುನಯ್ಯ, ಸಾ.ಚಿ.ರಾಜಕುಮಾರ್, ಸಿ.ಎನ್.ಭಾಸ್ಕರಪ್ಪ, ಸಿ.ಎನ್.ಏಕೇಶ್ವರ, ಚಿ.ಗಿ.ಸತ್ಯನಾರಾಯಣ, ಬಿ.ಸಿ.ಪುರುಷೋತ್ತಮ, ಜನಪದ ಪತ್ರಿಕೆಯ ಸಂಪಾದಕರಾಗಿದ್ದ ಹಿರಿಯ ವಿದ್ವಾಂಸ, ಅಧಿಕಾರಿ ಸಿ.ಕೆ. ಪರಶುರಾಮಯ್ಯ, ಹರ್ಷ, ಗುರುಮೂರ್ತಿ ಕೊಂಟಕೆಮನೆ, ಸಿ.ಎಸ್.ಸದಾನಂದ ಮೇರುನಾಥ, ಭಾಸ್ಕರ್, ರವಿಕುಮಾರ್, ಸಿ.ಬಿ. ಪುರುಷೋತ್ತಮ ಇವರ ಕೊಡುಗೆ ಸಾಂಸ್ಕೃತಿಕವಾಗಿ ದೊಡ್ಡದು. ಶೃಂಗಾರ ಪ್ರಕಾಶನದ ಮೂಲಕ ನೂರು ಪುಸ್ತಕ ಪ್ರಕಟಿಸಿರುವ ಎಂ.ವಿ. ನಾಗರಾಜರಾವ್ ಅವರ ಸಾಧನೆ, ಪ್ರಕಟಣೆ, ಪ್ರಸಾರದ ದೃಷ್ಟಿಯಿಂದ ಮಹತ್ವವಾದುದು. ತೀ.ನಂ.ಶ್ರೀ ಕಲಾಭವನ, ಅಂಬೇಡ್ಕರ್ ಭವನ, ಕನಕ ಭವನ, ದೇವಾಂಗ ಸಭಾಭವನ, ತೆಲುಗರ ದಿವ್ಯಜ್ಯೋತಿ ಭವನ ಇವು ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರಮುಖ ಭೂಮಿಕೆ ಒದಗಿಸಿವೆ. ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕಿನಲ್ಲಿ ಹಲವು ಸಾಹಿತ್ಯ ಸಮ್ಮೇಳನ ಸಂಘಟಿಸಿದೆ. ಹುಳಿಯಾರಿನ ಸಾಹಿತ್ಯ ಪರಿಷತ್ತು ಸಂಘಟನೆ, ಪ್ರತಿ ವಾರದ ಮನೆಮನೆ ಕಾರ್ಯಕ್ರಮ ಒಂದು ಸಾವಿರವನ್ನೂ ಮೀರಿ ಮುಂದುವರಿದು ದಶಮಾನೋತ್ಸವ ಆಚರಿಸಿಕೊಂಡಿದೆ. ನಿವೃತ್ತ ಪ್ರಾಂಶುಪಾಲ ಬಸವಮೂರ್ತಿ ಅವರ ಸಂಘಟನೆ ಅನನ್ಯವಾದುದು. ಗಾಣದಾಳು ಕರಪಾಲ ಬಸವರಾಜು, ಹಂದನಕೆರೆ ಜಾನಪದ ಲಕ್ಷ್ಮಮ್ಮ, ಮೋಡಿ ಕರಿಯಣ್ಣ, ಅಲಕೂರು ಲಿಂಗಜ್ಜನಪಾಳ್ಯದ ನಿಂಗಮ್ಮಜ್ಜಿ, ನೂಲೇನೂರು ಕದರಮ್ಮ ಅಪೂರ್ವ ಜಾನಪದ

ಕಲಾವಿದರು. ರಾಜ್ಯ ಜಾನಪದ ಅಕಾಡೆಮಿ ಗೌರವಗಳಿಗೆ ಪಾತ್ರರಾದ ಹಿರಿಯರು. ಇವರ ಹಾಡುಗಳನ್ನು ಡಾ.ಚಿಕ್ಕಮ್ಣ ಯೆಣ್ಣೆಕಟ್ಟೆ ಸಂಗ್ರಹಿಸಿ 'ಬಂಡಿ ಬಂದಾವೆ ಬಾಳೆವನದಾಗೆ' ಪುಸ್ತಕದಲ್ಲಿ ಪ್ರಕಟಿಸಿರುವುದು ದಾಖಲು ಸಾಹಿತ್ಯಕ್ಕೆ ಮಾದರಿ. ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಒಂದು ಘಟಕ ಇಲ್ಲಿದ್ದು ಪ್ರಗತಿ ಬಂಧು, ಕೃಷಿ ಅಭಿವೃದ್ಧಿ, ಜೀವನ ಮಧುರ, ಮಹಿಳಾ ಜ್ಞಾನವಿಕಾಸ, ಶ್ರೀ ಧರ್ಮಸ್ಥಳ ಸ್ವಸಹಾಯ ಸಂಘಗಳು ದಿನಾಂಕ ೨೦.೧೧.೨೦೧೧ ರಿಂದ ಆರಂಭಗೊಂಡ ಕಾಲೋನಿ ಅಭಿವೃದ್ಧಿ, ಶೌಚಾಲಯ, ಹೈನುಗಾರಿಕೆ, ಗೋಬರ್ ಗ್ಯಾಸ್, ಕೃಷಿ ಉಪಕರಣ ಈ ಮೊದಲಾದ ಸೌಲಭ್ಯ ಪಡೆದ ೨೮೭೭ ಫಲಾನುಭವಿಗಳಿದ್ದಾರೆ. ೨೦೨೩ಳ ಸದಸ್ಯರಿದ್ದಾರೆ. ಒಳ್ಳೆಯ ಸಾಮಾಜಿಕ ಸೇವೆ ಒದಗಿಸುತ್ತಿದೆ.

## ಅಲಗಪ್ಪನಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೩೫ ಕಿಮೀ ಅಂತರದಲ್ಲಿದೆ. ಅಲಗಪ್ಪ ಶಿವಮೂಲದಿಂದ ಬಂದ ಹೆಸರಾಗಿದ್ದು ಈ ಗ್ರಾಮ ಅಲಗಪ್ಪ ಎಂಬ ಶಿವನ ದೇವಾಲಯದಿಂದಾಗಿ ಗ್ರಾಮಕ್ಕೆ ಅಲಗಪ್ಪನಪಾಳ್ಯ ಎಂಬ ಹೆಸರು ಬಂದಿದೆ. ಇದೊಂದು ಮಜರೆ ಗ್ರಾಮ. ಬರದಲೇಪಾಳ್ಯದ ಮಜರೆ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ೯೫೦.೦೨ ಹೆಕ್ಟೇರ್ ಬರದಲೇಪಾಳ್ಯ ಗ್ರಾಮದೊಂದಿಗೆ ಹಂಚಿಕೆಯಾಗಿದೆ. ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ಒಟ್ಟು ೨೭ ಮನೆಗಳಿದ್ದು ೧೪೭ ಜನಸಂಖ್ಯೆಯನ್ನು ಹೊಂದಿದೆ. ವೀರಶೈವರು, ಉಪ್ಪಾರರು, ಅಗಸರು ಇಲ್ಲಿ ನೆಲೆಸಿದ್ದಾರೆ. ಕನ್ನಡ ಮನೆಮಾತಾಗಿದೆ. ಕುಡಿಯಲು ಬರದಲೇಪಾಳ್ಯದ ಹಾಗೂ ಕೆಂಕೆರೆ ಗ್ರಾಮಪಂಚಾಯ್ತಿಯಿಂದ ನೀರು ಪೂರೈಸಲಾಗುತ್ತಿದೆ. ಒಂದು ಕೊಳವೆ ಬಾವಿಯಿದ್ದು ಒಂದು ಸಿಸ್ಟನ್ ಇದೆ. ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೭ ಡಿಗ್ರಿ ಸರಾಸರಿ ಇದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ದ್ವಿಚಕ್ರ ವಾಹನ, ಟ್ರ್ಯಾಕ್ಟರ್ ಬಳಕೆಯಿದೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ೧೦ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ಶಿಕ್ಷಣ, ಪಡಿತರ ವಿಷಯಗಳಿಗೆ ಶೆಟ್ಟಿಕೆರೆ ಗ್ರಾಮಕ್ಕೆ ಹೋಗುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಶಿಕ್ಷಕರು, ಕಂದಾಯ ಹಾಗೂ ಸಾರಿಗೆ ಇಲಾಖೆಯ ನೌಕರರಿದ್ದಾರೆ. ಅಂಚೆ ಸಂಪರ್ಕ ಕೆಂಕೆರೆ ಗ್ರಾಮದಿಂದ ದೊರೆಯುತ್ತದೆ. ಹುಳಿಯಾರು–ಹಿರಿಯೂರು ರಸ್ತೆ ಸಂಪರ್ಕವಿದ್ದು ಬಸ್ ಓಡಾಡುತ್ತವೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ.

ಬಸವೇಶ್ವರ ದೇವಾಲಯವಿದೆ. ಶಿವರಾತ್ರಿ ಉತ್ಸವ, ಭಜನೆಗಳು ನಡೆಯುತ್ತವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಹುಳಿಯಾರು ಕೆಂಚಮ್ಮ ದೇವಾಲಯದ ಜಾತ್ರೆಯಲ್ಲಿ ಗ್ರಾಮದವರು ಭಾಗವಹಿಸುತ್ತಾರೆ.

## ಅಗ್ರಹಾರ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೧ ಕಿಮೀ ಅಂತರದಲ್ಲಿರುವ ಬಯಲುನಾಡಿನ ಕಂದಾಯ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ೫೪೯.೧೯ ಹೆಕ್ಟೇರ್. ೪೮೩ ಹೆಕ್ಟೇರ್ ಕೃಷಿ ಭೂಮಿಹೊಂದಿದೆ. ಗಂಗಾವಾಡಿ ಈ ಗ್ರಾಮಕ್ಕೆ ಸೇರ್ಪಡೆಯಾಗಿರುವ ಮತ್ತೊಂದು ಗ್ರಾಮವಾಗಿದೆ. ಇಲ್ಲಿಯ ಮರಳು ಮಿಶ್ರಿತ ಬಿಳಿ ಮಣ್ಣು ವ್ಯವಸಾಯಕ್ಕೆ ಯೋಗ್ಯವಾಗಿದೆ. ದಾನಮೂಲವಾಗಿ ಬ್ರಾಹ್ಮಣರಿಗೆ ದತ್ತಿ ನೀಡಿದ ಗ್ರಾಮ ಇದಾಗಿದ್ದು ಆ ಕಾರಣದಿಂದ ಅಗ್ರಹಾರವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ೨ ತೆರೆದ ಬಾವಿಗಳಿದ್ದು ಆಧುನಿಕ ಕೊಳರೆ ಬಾವಿಗಳೇ ಕೃಷಿ ಚಟುವಟಿಕೆಯ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ನಾಯಕ ದೊಡ್ಡ ಸಮುದಾಯವಾಗಿದೆ. ಕುಂಬಾರ ಸಣ್ಣ ಸಮುದಾಯವಾಗಿದೆ. ಕನ್ನಡ ಪ್ರಮುಖ ಭಾಷೆಯಾಗಿದೆ. ಒಟ್ಟು ೧೨೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೪೮೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ, ಶೀಟಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೬೨ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಐದು ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿರುತ್ತದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕು ಮತ್ತು ಟೆಂಪೋಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ಬರಕನಹಾಳ್ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶಿಕ್ಷಣ, ಸಾರಿಗೆ, ಕಂದಾಯ, ಅರಣ್ಯ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ. ಶ್ರೀ ರೇಣುಕಾ ಯಲ್ಲಮ್ಮ, ರಾಜರಾಜೇಶ್ವರಿ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೩ ಸಾಕ್ಷರತೆ ಪ್ರಮಾಣವಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೩ ಫಲಾನುಭವಿಗಳಿದ್ದಾರೆ.

ರಾಮದೇವರು, ಶ್ರೀ ಕರಿಯಮ್ಮ ದೇವಿ ಮತ್ತು ಭೈರಪ್ಪ ದೇವಾಲಯಗಳಿವೆ. ವರ್ಷಕ್ಕೊಮ್ಮೆ ಭೈರೇಶ್ವರ ರಥೋತ್ಸವ ನಡೆಯುತ್ತದೆ. ಸಿಡಿ, ಓಕುಳಿ ಮತ್ತು ಹರಕೆ ನಡೆಯುತ್ತದೆ. ಕರಿಯಮ್ಮ ದೇವಿಗೆ ಆರತಿ, ಬಾನ, ಬಲಿ ಸಂಪ್ರದಾಯವಿದ್ದು ಊರ ಹಬ್ಬದ ಮಾದರಿಯಲ್ಲಿ ಆಚರಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ದೇವರಾಜು ಮತ್ತು ಬಸವರಾಜು ಸ್ಥಳೀಯ ಭಜನೆ ಕಲಾವಿದರು.

## ಅರಳೀಕೆರೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ದೊಡ್ಡ ಎಣ್ಣೆಗೆರೆ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೩೬ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೪೪೦.೮೬ ಹೆಕ್ಟೇರ್. ಭೂಮಿಯು ಕೆಂಪು ಮಿಶ್ರಿತ ಕಪ್ಪು ಮಣ್ಣಿನಿಂದ ಕೂಡಿದೆ. ಒಂದು ಬೆಟ್ಟ ಹಾಗೂ ೧ ಅರಳೀಕೆರೆ ಗುಡ್ಡವನ್ನು ಹೊಂದಿದೆ. ಅರಳಿ ಸಸ್ಯ ಹಾಗೂ ಕೆರೆ ನೀರು ಮೂಲ ಎರಡೂ ಕೂಡಿಕೊಂಡು ಅರಳೀಕೆರೆಯಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್,

ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಬೋವಿ ಜನಾಂಗ, ಆದಿದ್ರಾವಿಡ, ಆದಿಕರ್ನಾಟಕ ನಾಯಕ ಜನಾಂಗಗಳಿವೆ. ಲಿಂಗಾಯಿತರು ದೊಡ್ಡ ಸಮುದಾಯವಾಗಿದೆ. ಕನ್ನಡ ತೆಲುಗು ಭಾಷೆಗಳನ್ನು ಆಡುತ್ತಾರೆ. ಒಟ್ಟು ೧೫೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೫೭೨ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೧೦ ಕಾಂಕ್ರೀಟ್, ೩೦ ಕಲ್ಲಿನ, ೫ ಮಣ್ಣಿನ, ೫ ಗುಡಿಸಲು ಹಾಗೂ ೧೦೦ ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ೨೦ ಜನತಾ, ೩೦ ಆಶ್ರಯ, ೧೦ ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ೮ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೧೦ ವಸತಿ ರಹಿತ ಕುಟುಂಬಗಳು ಹಾಗೂ ೨ ನಿವೇಶನ ರಹಿತ ಕುಟುಂಬಗಳಿವೆ. ೧೨೦ ಶೌಚಾಲಯ ರಹಿತ ಮನೆಗಳಿವೆ. ಕೃಷಿಕರು, ಕೃಷಿ ಕೂಲಿಗಾರರು, ಶಾಲಾ ಶಿಕ್ಷಕರು, ಅಭಿಯಂತರರು, ಬಸ್ ಕಂಡಕ್ಟರ್‌ಗಳು ಇದ್ದಾರೆ. ೨ ಹಿಟ್ಟಿನ ಗಿರಣಿಗಳು, ೩ ದಿನಸಿ ಅಂಗಡಿಗಳಿವೆ.

ಕೃಷಿ ಪ್ರಧಾನವಾದ ೩೮೨ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿರುವ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದೊಡ್ಡ ಎಣ್ಣೆಗೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬ ಗ್ರಾಮಪಂಚಾಯ್ತಿ ಸದಸ್ಯ ಹಾಗೂ ಒಬ್ಬರು ಗ್ರಾಮ ಪಂಚಾಯ್ತಿ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಕಾಂಕ್ರೀಟ್ ಚರಂಡಿಗಳಿವೆ. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘಗಳು, ಆದಿಶಕ್ತಿ, ಕರಿಯಮ್ಮ, ಚೌಡಮ್ಮ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೮ ಸಾಕ್ಷರತಾ ಪ್ರಮಾಣವಿದೆ. ಒಂದು ಕಚ್ಚಾ ರಸ್ತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ.

ಗಣಪತಿ, ಆಂಜನೇಯ, ದೊಡ್ಡಮ್ಮ, ಕರಿಯಮ್ಮ, ಭೂತಪ್ಪ, ಅರಳಿಯಮ್ಮ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಲೋಕಣ್ಣ ಎಂಬುವರು ಗಾಯಕರಾಗಿದ್ದಾರೆ. ಜಾನಪದ ಕಲಾ ತಂಡಗಳಿವೆ. ವಿನಾಯಕ ಗೆಳೆಯ ಸಂಘ, ರೈತ ಸಂಘಗಳಿವೆ.

## ಆಲದಕಟ್ಟೆ

ಆಲದಕಟ್ಟೆ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮುದ್ದೇನಹಳ್ಳಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ದೊಡ್ಡ ಆಲದಮರದ ಸುತ್ತಮುತ್ತ ನೆಲೆನಿಂತ ಜನವಸತಿಯೇ ಆಲದಕಟ್ಟೆ ಎಂಬ ಹೆಸರಿಗೆ ಕಾರಣವಾಗಿದೆ. ಮೊದಲು ಇಡ್ಲಿ ಹೋಟೆಲಿನಿಂದ ಮನೆ ಬೆಳೆದು ಇಂದು ಗ್ರಾಮವಾಗಿದೆ. ಗ್ರಾಮವು ಇಡ್ಲಿ ಮಾರಾಟಕ್ಕೆ ಪ್ರಸಿದ್ಧವಾಗಿತ್ತು. ಬೀದರ್-ಶ್ರೀರಂಗಪಟ್ಟಣ ಹೆದ್ದಾರಿ ಪಕ್ಕದಲ್ಲಿ ಬರುವುದರಿಂದ ದಾರಿಹೋಕರು, ವಾಹನ ಸಂಚಾರಿಗಳಲ್ಲಿ ಇಲ್ಲಿನ ಇಡ್ಲಿ ಸವಿದು ಹೋಗುತ್ತಿದ್ದರು. ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೪೫೬.೧೧ ಹೆಕ್ಟೇರ್. ಲಂಬಾಣಿ ತಾಂಡ್ಯವೂ ಸೇರಿದೆ. ಬಯಲುನಾಡು ಪ್ರದೇಶಕ್ಕೆ ಸೇರಿದ್ದು ಬಿಳಿಕಲ್ಲು ಬಿಳಿ ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಕಾಡುಹಂದಿ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಕಟ್ಟೆಯಿದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಲಂಬಾಣಿ (ಬಂಜಾರರು) ದೊಡ್ಡ ಸಮುದಾಯ. ವೀರಶೈವರು, ಕುರುಬರು, ಉಪ್ಪಾರರು, ಮಡಿವಾಳರು ಇತರ ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಲಂಬಾಣಿ ತಾಂಡ್ಯವೂ ಸೇರಿ ಒಟ್ಟು ೧೭೮ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೭೫೨ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೪ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರು ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೨೬ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೧೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಬಾಳೆ, ಅಡಿಕೆ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕು, ಆಟೋ, ಟೆಂಪೋಗಳಿವೆ. ರಸ್ತೆ ಹಾಗೂ ಚರಂಡಿ ವ್ಯವಸ್ಥೆಯಿದೆ. ಆರೋಗ್ಯ ಡೈರಿ ಎಂಬ ಖಾಸಗಿ ಡೈರಿ ಹಾಗೂ ನಂದಿನಿ ಡೈರಿಯಿದೆ. ಬ್ಯಾಂಕ್ ಮ್ಯಾನೇಜರ್, ಕೆಎಸ್‌ಆರ್‌ಟಿಸಿ ಡ್ರೈವರ್, ಕಂಡಕ್ಟರ್‌ಗಳು, ಶಿಕ್ಷಕರು, ಕೆಇಬಿಯಲ್ಲಿ, ಡಾಕ್ಟರುಗಳು, ಇಂಜಿನಿಯರ್‌ಗಳಾಗಿ ಕೆಲಸ ನಿರ್ವಹಿಸುವವರಿದ್ದಾರೆ. ೨ ಇಟ್ಟಿಗೆ ಫ್ಯಾಕ್ಟರಿಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮಾಳಿಗೆಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಹಾಗೂ ಇಬ್ಬರು ಗ್ರಾಮಪಂಚಾಯ್ತಿ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಮರಿಯಮ್ಮದೇವಿ, ವಾಸವಿ, ಭುವನೇಶ್ವರಿ ಮುಂತಾದ ೬ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಮಾಳಿಗೆಹಳ್ಳಿಯಿಂದ ಅಂಚೆ ಸಂಪರ್ಕವಿದೆ. ಲಂಬಾಣಿ ಸಹಕಾರ ಸಂಘ ಇದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೭೦% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೨೬ ಫಲಾನುಭವಿಗಳಿದ್ದಾರೆ.

ಸೇವಾಲಾಲ್, ಮರಿಯಮ್ಮ, ಈಶ್ವರ, ದುರ್ಗಮ್ಮ, ಹುಲಿಯಮ್ಮ ದೇವಾಲಯಗಳಿವೆ. ಏಪ್ರಿಲ್ ತಿಂಗಳಿನಲ್ಲಿ ಸೇವಾಲಾಲ್ ಮರಿಯಮ್ಮ ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ಪರೇವು ಮಾಡಲಾಗುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗ್ರಾಮದ ಲಕ್ಷ್ಮಮ್ಮ, ಕಾಳಮ್ಮ, ರುಕ್ಕಮ್ಮ, ಮಂಗಳಮ್ಮ, ದೇವಲಮ್ಮ ಎಂಬುವರು ಜನಪದ ಗೀತೆ ಮತ್ತು ಸೋಬಾನೆ ಹಾಡುಗಳನ್ನು ಹಾಡುತ್ತಾರೆ.

## ಆಲದಕಟ್ಟೆ ಲಂಬಾಣಿ ತಾಂಡ

ಆಲದಕಟ್ಟೆ ಲಂಬಾಣಿ ತಾಂಡ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೫ ಕಿಮೀ ಅಂತರದಲ್ಲಿದೆ. ಆಲದಕಟ್ಟೆ ಗ್ರಾಮದ ಉಪಗ್ರಾಮವಾಗಿರುವುದರಿಂದ ಆಲದಕಟ್ಟೆ ಲಂಬಾಣಿ ತಾಂಡ ಎನ್ನುತ್ತಾರೆ. ಈ ಪರಿಸರದಲ್ಲಿ ನರಿ,

ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಲಂಬಾಣಿ ಜನಾಂಗದವರು ಮಾತ್ರ ವಾಸಿಸುತ್ತಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ, ಲಂಬಾಣಿ ಮಾತನಾಡುತ್ತಾರೆ. ಒಟ್ಟು ೨೩ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೭೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ೧೬ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಹುಣಸೆಹಣ್ಣು, ಅಡಿಕೆ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮುದ್ದೇನಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಶಿಕ್ಷಣ, ಅಂಗನವಾಡಿ ಹಾಗೂ ಪಡಿತರಕ್ಕೆ ಮುದ್ದೇನಹಳ್ಳಿಗೆ ಹೋಗುತ್ತಾರೆ. ಸಾಕ್ಷರತೆ ೫೮% ರಷ್ಟಿದೆ. ಪಾತ್ರೆ, ಬಟ್ಟೆ ವ್ಯಾಪಾರದ ಜೊತೆಗೆ ಗರಿಕಡ್ಡಿ ವ್ಯಾಪಾರವನ್ನೂ ಮಾಡುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೯ ಫಲಾನುಭವಿಗಳಿದ್ದಾರೆ. ಮಾಳಿಗೆಹಳ್ಳಿಯಿಂದ ಅಂಚೆ ಸಂಪರ್ಕವಿದೆ.

ಸೇವಾಲಾಲ್, ಹುಲಿಯಮ್ಮ ದೇವಾಲಯಗಳಿದ್ದು ದಸರಾ ಹಾಗೂ ದೀಪಾವಳಿಯಲ್ಲಿ ಸೇವಾಲಾಲ್ ಉತ್ಸವ ಏರ್ಪಡುತ್ತದೆ. ಇವರು ಭೀಮಸತಿ ಹಬ್ಬ, ದೀಪಾವಳಿ, ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಆಲದಕಟ್ಟೆ ಗೊಲ್ಲರಹಟ್ಟಿ

ಆಲದಕಟ್ಟೆ ಗೊಲ್ಲರಹಟ್ಟಿಯು ಆಲದಕಟ್ಟೆ ಕಂದಾಯ ಗ್ರಾಮಕ್ಕೆ ಸೇರಿದ ಮಜರೆ ಗ್ರಾಮ. ಇದು ೧೮೩ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿರುವ ಬಯಲು ಪ್ರದೇಶ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ

ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಆಲದಕಟ್ಟೆಯ ಕೆರೆ ಕುರಿ ದನಗಳ ಕುಡಿಯುವ ನೀರಿಗೆ ಬಳಕೆಯಾಗುತ್ತದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕಾಡುಗೊಲ್ಲ ಜನಾಂಗದವರು ವಾಸಿಸುತ್ತಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೨೬ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೯೭೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ೭ ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ೬ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕುರಿ ಪೋಷಣೆ ಮುಖ್ಯ ವೃತ್ತಿಯಾಗಿದ್ದು ಕುರಿಗಳೊಂದಿಗೆ ಪರಸ್ಥಳಕ್ಕೆ ವಲಸೆ ಹೋಗುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೨ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಮಾಳಿಗೆಹಳ್ಳಿ ಅಂಚೆ ಸಂಪರ್ಕ ಒದಗಿಸಿದೆ. ಶಿಕ್ಷಣ, ಪಡಿತರಕ್ಕೆ ಮಾಳಿಗೆಹಳ್ಳಿಗೆ ಹೋಗುತ್ತಾರೆ. ಸಾಕ್ಷರತೆ ೪೩% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಮುತ್ತುಗದ ಎಲೆ ಸಂಗ್ರಹ, ಗರಿಕಡ್ಡಿ ಸಂಗ್ರಹ ಮಹಿಳೆಯರ ಪೂರಕವಾದ ಕಾಯಕವಾಗಿದೆ. ಕುರಿ ವ್ಯಾಪಾರವಿದೆ.

ಚಿತ್ರದೇವರ, ನರಸಿಂಹಸ್ವಾಮಿಯ ಪೌಳಿಗಳಿವೆ. ದೀಪಾವಳಿಯಂದು ಚಿತ್ರದೇವರ ಉತ್ಸವ, ಹಿರಿಯರ ಹಬ್ಬ ಆಚರಿಸುತ್ತಾರೆ. ದೀಪಾವಳಿಯನ್ನು ಹಿರಿಯರ ಹಬ್ಬ ಎಂದು ಆಚರಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಅಂಕನಬಾವಿಹಟ್ಟಿ

ಅಂಕನಬಾವಿಹಟ್ಟಿ ಅಕ್ಕನಬಾವಿ ಎಂಬ ಮೂಲದಿಂದ ಬಂದಿದ್ದು ಇದೊಂದು ಕಾಡುಗೊಲ್ಲರ ಬುಡಕಟ್ಟು ಗ್ರಾಮ. ಮರಳು ಹಳ್ಳದ ಕಾವಲ್ ಎಂಬ ಗ್ರಾಮದ ಪೂರ್ವಕ್ಕೆ ಹೊಂದಿಕೊಂಡಂತಿರುವ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ಮುಖ್ಯ ಗ್ರಾಮದ ೪೪೮.೨೫ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಕುರುಚಲು ಕಾಡು, ಹಳ್ಳ ಗುಂಡಿಗಳಿಂದ ಕೂಡಿದ ಭೂಭಾಗ. ಕಲ್ಲುಮಿಶ್ರಿತ ಬಿಳಿ ಮಣ್ಣಿನ ಭಾಗ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ,

ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕಾಡುಗೊಲ್ಲ ಜನಾಂಗದವರು ಮಾತ್ರ ವಾಸಿಸುತ್ತಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೨೮ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೨೬ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೧೨ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ೬ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಹುಣಸೆಹಣ್ಣು, ಮುತ್ತುಗದೆಲೆ, ಹಂಚಿಕಡ್ಡಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕುರಿಗಳೊಂದಿಗೆ ಹುಲ್ಲು ನೀರಿಗಾಗಿ ಪರಸ್ಥಳಕ್ಕೆ ವಲಸೆ ಹೋಗುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮುದ್ದೇನಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಶಿಕ್ಷಣ, ಪಡಿತರ ವಿಷಯಗಳಿಗೆ ಮುದ್ದೇನಹಳ್ಳಿಗೆ ಹೋಗುತ್ತಾರೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಜುಂಜಪ್ಪ, ಚಿತ್ರದೇವರ ಪೌಳಿಗಳಿವೆ. ದೀಪಾವಳಿಯ ಮೂರು ದಿನ ದೀಪ ಏರಿಸುವ ಹಾಗೂ ದೀಪ ಇಳಿಸುವ ಹಬ್ಬ ಆಚರಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಅಜ್ಜಯ್ಯನಗುಡ್ಲು

ಅಜ್ಜಯ್ಯನಗುಡ್ಲು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ೭ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೩೧೪ ಹೆಕ್ಟೇರ್. ಬಯಲು ಪ್ರದೇಶ. ಕೆಂಪು ಮಿಶ್ರಿತ ಬಿಳಿ ಮಣ್ಣನ್ನು ಹೊಂದಿದೆ. ವಯಸ್ಸಾದ ವ್ಯಕ್ತಿಯೊಬ್ಬರು ಮೊದಲಿಗೆ ಇಲ್ಲಿ ಗುಡಿಸಲು ಹಾಕಿಕೊಂಡು ನೆಲೆಸಿದರು. ನಂತರ ಜನವಸತಿ ಗ್ರಾಮವಾಗಿ ಬೆಳೆಯಲಾರಂಭಿಸಿತು. ಮುಂದೆ ಇದನ್ನು ಅಜ್ಜಯ್ಯನಗುಡ್ಲು ಎಂದೇ ಕರೆಯಲಾರಂಭಿಸಿದರು. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ೪ ಮಿನಿ ಟ್ಯಾಂಕ್, ೨ ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕುರುಬರು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ನಾಯಕ, ಮಡಿವಾಳ, ವೀರಶೈವ, ಅಕ್ಕಸಾಲಿಗರು ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೯೧ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೮೩೮ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ

ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೮೪ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೧೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಸಾಂಪ್ರದಾಯಿಕ ಬಡಗಿ, ಮಡಿವಾಳ ಕಸುಬಿನವರಿದ್ದಾರೆ. ಕುರಿ, ಕಂಬಳಿ ನೇಯ್ಗೆ ವ್ಯಾಪಾರವಿದೆ. ಶಿಕ್ಷಣ, ಸಾರಿಗೆ ಇಲಾಖೆಯಲ್ಲಿ ೯ ಜನ ಸರ್ಕಾರಿ ನೌಕರರಿದ್ದಾರೆ. ಟ್ರ್ಯಾಕ್ಟರ್ ಹಾಗೂ ಟೆಂಪೋ ಡ್ರೈವರ್‌ಗಳಿದ್ದಾರೆ. ಖಾಸಗಿ ವಕೀಲರಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮಾಳಿಗೆಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೬ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಮಾಳಿಗೆಹಳ್ಳಿಯಿಂದ ಅಂಚೆ ಸಂಪರ್ಕವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೫೯% ರಷ್ಟಿದೆ. ಪಡಿತರ ನ್ಯಾಯಬೆಲೆ ಅಂಗಡಿ, ೩ ಟೀ ಅಂಗಡಿ, ೨ ಕಿರಾಣಿ ಗೂಡಂಗಡಿಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಒಂದು ಕರುಗಲ್ಲು ಇದೆ.

ಬೀರೇದೇವರ ಗುಡಿ, ಆಂಜನೇಯ ಹಾಗೂ ಕರಿಯಮ್ಮನ ಗುಡಿಗಳಿವೆ. ಕರಿಯಮ್ಮನ ಊರಹಬ್ಬ ಆಚರಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗಂಗಮ್ಮ, ಶಿವಗಂಗಮ್ಮ ಇವರು ಜನಪದ ಹಾಡುಗಾರರಾಗಿ ಪ್ರಸಿದ್ಧವಾಗಿದ್ದಾರೆ.

## ಆಲದದೇವರಹಟ್ಟಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮುದ್ದೇನಹಳ್ಳಿ ಗ್ರಾಮಪಂಚಾಯ್ತಿಯಲ್ಲಿ ಬರುವ ಶ್ಯಾವಿಗೆಹಳ್ಳಿಯ ಮಜರೆ ಗ್ರಾಮ. ಆಲದ ದೇವರಹಟ್ಟಿ ಹಾಗೂ ಗೊಲ್ಲರಹಟ್ಟಿ ಎರಡೂ ಗೊಲ್ಲರ ಹಟ್ಟಿಗಳೇ. ಇವು ಕೇವಲ ಕೂಗಳತೆಯ ದೂರದಲ್ಲಿವೆ. ಆಲದ ರಾಮೇಶ್ವರನ ಸನ್ನಿಧಿ (ದೇವಾಲಯ) ಇರುವುದರಿಂದ ಹಾಗೂ ಸಂಪೂರ್ಣವಾಗಿ ಗೊಲ್ಲರೇ ವಾಸಿಸುತ್ತಿರುವುದರಿಂದ ಈ ಹೆಸರು ಬಂದಿದೆ. ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪ ಕಿಮೀ ಅಂತರದಲ್ಲಿದೆ. ಸಾವಶೆಟ್ಟಿಹಳ್ಳಿಯ ಭೌಗೋಳಿಕ ವಿಸ್ತೀರ್ಣ ೪೪೬.೩೩ ಚ.ಕಿ.ಮೀ ವಿಸ್ತೀರ್ಣದಲ್ಲಿ ಈ ಹಟ್ಟಿಗಳೂ ಸೇರಿವೆ. ಬಯಲು ನಾಡಿಗೆ ಸೇರಿದ ಈ ಪರಿಸರದಲ್ಲಿ ಬಿಳಿ ಮಣ್ಣು ಬಿಳಿ ಕಲ್ಲು ಕಂಡುಬರುತ್ತದೆ. ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಎರಡೂ ಹಟ್ಟಿಗಳು ಸೇರಿ ಒಟ್ಟಾರೆ ೧೦ ಮನೆಗಳಿವೆ. ೨೦೧೧ ರ ಜನಗಣತಿಯ ಪ್ರಕಾರ ೩೦ ಜನಸಂಖ್ಯೆ ಹೊಂದಿದೆ. ಎಲ್ಲರೂ ಗೊಲ್ಲ ಜನಾಂಗ. ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ,

ಹೆಂಚಿನ ಮನೆಗಳಿವೆ. ಮಂಗಳೂರು ಹೆಂಚು ಹಾಗೂ ಶೀಟ್‌ಗಳನ್ನು ಮೇಲ್ಚಾವಣಿಗೆ ಹಾಕಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೪ ಫಲಾನುಭವಿಗಳ ೬ ಮನೆಗಳನ್ನು ಕಾಣಬಹುದು.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಮಣ್ಣು ರಸ್ತೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮಾಳಿಗೆಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಮಾಳಿಗೆಹಳ್ಳಿಯಿಂದ ಅಂಚೆ ಸಂಪರ್ಕವಿದೆ. ಶೇ.೪೦ ರಷ್ಟು ಸಾಕ್ಷರತೆ ಪ್ರಮಾಣ ಹೊಂದಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೬ ಫಲಾನುಭವಿಗಳಿದ್ದಾರೆ.

ಆಲದ ಮರದ ದೇವರು ಈ ಹಟ್ಟಿಯ ದೈವವಾಗಿದೆ. ದೇವಸ್ಥಾನವಿದೆ. ದೀಪಾವಳಿಯಲ್ಲಿ ದೇವರ ಉತ್ಸವ, ಗಂಗಾಸ್ನಾನ ಆಚರಣೆ ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಅಗಸರಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೯ ಕಿಮೀ ಅಂತರದಲ್ಲಿದೆ. ಕಂದಾಯ ಗ್ರಾಮ. ಭೌಗೋಳಿಕ ವಿಸ್ತೀರ್ಣ ೬೨೩ ಹೆಕ್ಟೇರ್. ಕಪ್ಪು ಮಿಶ್ರಿತ ಮರಳು ಮಣ್ಣಿನ ಭೂ ಪ್ರದೇಶವಾಗಿದೆ. ಅಗಸ ಅಥವಾ ಮಡಿವಾಳ ಜನಾಂಗಿಕ ಮೂಲದಿಂದ ಅಗಸರಹಳ್ಳಿ ಎಂದು ಹೆಸರು ಬಂದಿದೆ. ಈ ಪರಿಸರದಲ್ಲಿ ಕುರುಚಲು ಗಿಡ, ಮರ, ತೋಟಗಾರಿಕೆ ಇದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಜೆ.ಸಿ. ಪುರ ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೬ ನಲ್ಲಿ ಸಂಪರ್ಕಗಳಿವೆ. ಒಂದು ಕೆರೆಯಿದೆ. ಮಳೆಗಾಲದಲ್ಲಿ ಮಾತ್ರ ತುಂಬುತ್ತದೆ. ೨ ತೆರೆದ ಬಾವಿಗಳಿದ್ದು ಒಣಗಿಹೋಗಿದೆ.

ಕುರುಬ ಸಮುದಾಯ ದೊಡ್ಡ ಜನಾಂಗವಾಗಿದ್ದು ಲಿಂಗಾಯಿತರು ಸಮ ಪ್ರಮಾಣದಲ್ಲಿದ್ದಾರೆ. ಆದಿಕರ್ನಾಟಕ ಕಿರು ಸಮುದಾಯವಾಗಿದೆ. ಒಟ್ಟು ೧೪೯ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿ ಪ್ರಕಾರ ೫೭೮ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೪೯ ಮನೆಗಳನ್ನು ಕಾಣಬಹುದು. ೬೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕೊಬ್ಬರಿ ವ್ಯಾಪಾರಿ ಸರಕಾಗಿದೆ. ಕಂಬಳಿ ವ್ಯಾಪಾರವಿದೆ. ಮಂಜುನಾಥ್, ಅಸಿಸ್ಟೆಂಟ್ ಕಮೀಷನರ್, ತಹಸೀಲ್ದಾರ್ ರಾಜಶೇಖರ್ ಸೇರಿದಂತೆ ೧೫ ಸನ ಸರ್ಕಾರಿ ನೌಕರರಿದ್ದಾರೆ. ಶಿಕ್ಷಣ, ಕಂದಾಯ, ಸಾರಿಗೆ ಇಲಾಖೆಯ ನೌಕರರಾಗಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಜೆ.ಸಿ. ಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಜೆ.ಸಿ. ಪುರ, ಕೆ.ಬಿ. ಕ್ರಾಸ್, ಚಿಕ್ಕನಾಯಕನಹಳ್ಳಿ ಮಾರ್ಗವಾಗಿ ಬಸ್ ಸಂಚಾರವಿದೆ. ಸ್ಥಿರ ಹಾಗೂ ಚರ ದೂರವಾಣಿಗಳಿವೆ. ೪ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೮೪ ರಷ್ಟು ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೩೪ ಫಲಾನುಭವಿಗಳಿದ್ದಾರೆ. ೨ ಟೀ ಅಂಗಡಿ, ೨ ಶೆಟ್ಟಿ ಅಂಗಡಿಗಳಿವೆ.

ಗ್ರಾಮದಲ್ಲಿ ಬೀರೇಶ್ವರ, ಕರಿಯಮ್ಮ, ಈಶ್ವರ ದೇವಾಲಯಗಳಿವೆ. ಕರಿಯಮ್ಮ ಊರಹಬ್ಬ ಆಚರಿಸುತ್ತಾರೆ. ಆರತಿ, ಬಾನ, ಬರಿ ಹರಕೆ ಸಂಪ್ರದಾಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಅಜ್ಜಿಗುಡ್ಡೆ

ಅಜ್ಜಿಗುಡ್ಡೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೧೩ ಕಿಮೀ ಅಂತರದಲ್ಲಿರುವ ಕಂದಾಯ ಗ್ರಾಮವಾಗಿದೆ. ಮದಲಿಂಗನ ಜೊತೆಗೆ ಬಂದ ಮಡದಿ, ನಾದಿನಿ ಆತನ ಸಾವಿಗೆ ಹೆದರಿ ಅವರೂ ಸಾವನ್ನಪ್ಪುತ್ತಾರೆ. ಇವರೆಲ್ಲರ ಸಾವನ್ನು ಕಂಡ ಆತನ ತಾಯಿಯೂ ಸತ್ತ ಸ್ಥಳ ಅಜ್ಜಿಗುಡ್ಡೆ ಎಂಬ ಗ್ರಾಮ ರಚನೆಗೆ ಪ್ರೇರಕವಾಗಿದೆ ಎಂಬುದು ಸ್ಥಳೀಯ ಐತಿಹ್ಯ. ಸುತ್ತು ಕಣಿವೆಯ ಕುರುಚಲು ಗಿಡ, ಪೊದೆಗಳ ಪ್ರದೇಶ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ,ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ತೆಂಗಿನ ಚಿಪ್ಪು, ಮಟ್ಟೆ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಲಾರಿ, ಟೆಂಪೋ, ಕಾರು ಹಾಗೂ ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ. ಶಿಕ್ಷಣ, ಕಂದಾಯ, ಸಾರಿಗೆ ಇಲಾಖೆಯಲ್ಲಿ ಕೆಲಸ ಮಾಡುವ ೯ ಜನ ಸರ್ಕಾರಿ ನೌಕರರಿದ್ದಾರೆ. ವಕೀಲರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಮಲ್ಲಿಗೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಹಂದನಕೆರೆ ಅಂಚೆ ಸೌಕರ್ಯವನ್ನು ಹೊಂದಿದೆ. ೨ ಟೀ ಅಂಗಡಿ, ಗೂಡಂಗಡಿಗಳಿವೆ. ನಿರಂತರ ವಿದ್ಯುತ್ ಸೌಲಭ್ಯದ ಪ್ರಯೋಜನ ಪಡೆಯುತ್ತಿದ್ದಾರೆ. ಹಂದನಕೆರೆ–ಮತಿಘಟ್ಟ ಮಾರ್ಗವಾಗಿ ರಸ್ತೆ ಸಂಪರ್ಕ, ಬಸ್ ಸೌಲಭ್ಯವಿದೆ. ೪ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಮಾಧ್ಯಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೮% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೩೯ ಫಲಾನುಭವಿಗಳಿದ್ದಾರೆ. ದೇವಸ್ಥಾನದ ಬಳಿ ೨ ವೀರಗಲ್ಲು, ನಾಗರಕಟ್ಟೆ, ಅರಳಿಕಟ್ಟೆಗಳಿವೆ. ಮಹಾಲಿಂಗೇಶ್ವರ ದೇವಾಲಯವಿದ್ದು ಶಿವರಾತ್ರಿ ಹಾಗೂ ದಸರಾ ಹಬ್ಬಗಳಂದು ವಿಶಷೇ ಮಹಾಭಿಷೇಕ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕಾನ್ಕೆರೆ ಗೊಲ್ಲರಹಟ್ಟಿ

ಕಾನ್ಕೆರೆ ಗೊಲ್ಲರಹಟ್ಟಿಯು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೨೬ ಕಿಮೀ ಅಂತರದಲ್ಲಿದೆ. ಇದೊಂದು ಕಾಡುಗೊಲ್ಲರ ಬುಡಕಟ್ಟು ಗ್ರಾಮ. ಇದು ಕಾನ್ಕೆರೆ ಕಂದಾಯ ಗ್ರಾಮಕ್ಕೆ ಸೇರಿದ್ದು ಕಾನ್ಕೆರೆಯ ದಿಬ್ಬದ ಮೇಲೆ ಪ್ರತ್ಯೇಕ ಜನವಸತಿ ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಭೌಗೋಳಿಕ ವಿಸ್ತೀರ್ಣ ೧೪೩.೧೬ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು

ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕಾನ್ಕೆರೆ ತುಂಬಿದರೆ ನೀರಿಗೆ ಅನುಕೂಲವಿದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಕಾಡುಗೊಲ್ಲರ ಒಟ್ಟು ೩೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೪೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಮಣ್ಣಿನ, ಹೆಂಚಿನ, ಗುಡಿಸಲು ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೩೭ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ. ಇದು ರೈತಾಪಿ ಹಾಗೂ ಕುರಿಗಾರರ ಗ್ರಾಮವಾಗಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಕುರಿ-ಮೇಕೆ, ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ನಾಯಿ ಹಾಗೂ ಕತ್ತೆಗಳನ್ನು ಸಾಕಿದ್ದಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಶಿಕ್ಷಣ, ಪಡಿತರಗಳನ್ನು ಕಾನ್ಕೆರೆಯಿಂದ, ಅಂಚೆ ಸೌಲಭ್ಯವನ್ನು ಹಂದನಕೆರೆಯಿಂದ ಪಡೆಯುತ್ತಾರೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಮಲ್ಲಿಗೆರೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಹಂದನಕೆರೆ ಅಂಚನೆ ಹೌಲಭ್ಯವನ್ನು ಕಲ್ಪಿಸಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸಾಕ್ಷರತೆ ೫೯% ರಷ್ಟಿದೆ. ಕಾನ್ಕೆರೆ-ಹಂದನಕೆರೆ, ಮಲ್ಲಿಗೆರೆ ಮಾರ್ಗವಾಗಿ ಬಸ್ ಸಂಚಾರವಿದೆ. ಕುರಿಗಳ ಹುಲ್ಲು ನೀರಿಗಾಗಿ ಪರಸ್ಥಳಕ್ಕೆ ಹೋಗುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೩ ಫಲಾನುಭವಿಗಳಿದ್ದಾರೆ.

ಚಿತ್ರದೇವರ ಪೌಳಿಯಿದ್ದು ದೀಪಾವಳಿ ಮಾಸದಲ್ಲಿ ಹಾಲು ಮೀಸಲು, ದೀಪ ಏರಿಸುವ ಉತ್ಸವ ಏರ್ಪಡುತ್ತದೆ. ಹಂದನಕೆರೆ ದುಗಜಮ್ಮನ ಜಾತ್ರೆಯಲ್ಲಿ ಎದುರೆತ್ತಿ, ಆರತಿ, ಬಲಿ ಏರ್ಪಡುತ್ತದೆ ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕಾನ್ಕೆರೆ ಎ.ಕೆ. ಕಾಲೋನಿ

ಕಾನ್ಕೆರೆ ಎ.ಕೆ. ಕಾಲೋನಿ ಕಾನ್ಕೆರೆಯ ಹೊರಭಾಗದಲ್ಲಿರುವ ಒಂದು ಜನವಸತಿ ಪ್ರದೇಶ. ಕಾನ್ಕೆರೆಗೆ ಹೊಂದಿಕೊಂಡಂತಿದ್ದರೂ ಮಾದಿಗರಹಟ್ಟಿ ಎಂದೇ ಕರೆಯುತ್ತಾರೆ. ಇದರಲ್ಲಿ ಆದಿಕರ್ನಾಟಕ ಜನಾಂಗದ ಒಟ್ಟು ೧೭ ಮನೆಗಳಿದ್ದು ಇವು ಮಾಳಿಗೆಯ, ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಇವು ಸರ್ಕಾರದ ಜನತಾ, ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ ರಚನೆಯಾಗಿವೆ. ೭ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಕುಡಿಯಲು ಕಾನ್ಕೆರೆಯಿಂದ ಪ್ರತ್ಯೇಕವಾಗಿ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಒಂದು ಕಿರು ಟ್ಯಾಂಕ್ ಇದೆ. ಒಂದು ಹಳೆಯ ಬಾವಿಯಿದ್ದು ಪ್ರಸ್ತುತ ಬತ್ತಿಹೋಗಿದೆ. ಗ್ರಾಮದ ಸಮೀಪದಲ್ಲಿಯೇ ಮಾಧ್ಯಮಿಕ ಶಾಲೆಯಿದ್ದು ಮಕ್ಕಳು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯಗಳನ್ನು ಬಳಸುತ್ತಿದ್ದಾರೆ. ಶೇ.೫೯ ರಷ್ಟು ಸಾಕ್ಷರರಿದ್ದಾರೆ. ಸಾರಿಗೆ, ಶಿಕ್ಷಣ, ಅರಣ್ಯ ಇಲಾಖೆಯ ನೌಕರರಿದ್ದಾರೆ. ಪಡಿತರವನ್ನು ಕಾನ್ಕೆರೆಯಿಂದಲೇ ಪಡೆದುಕೊಳ್ಳುತ್ತಾರೆ.

ಕೃಷಿ ಇವರ ಮುಖ್ಯ ಕಸುಬು. ರಾಗಿ, ಭತ್ತ, ಜೋಳ, ಹುರುಳಿ, ಹೆಸರು ಬೆಳೆಯುತ್ತಾರೆ. ತೆಂಗಿನ ತೋಟಗಾರಿಕೆಯೂ ಇದ್ದು ಕೊಬ್ಬರಿ, ತೆಂಗಿನ ಚಿಪ್ಪು ವ್ಯಾಪಾರಿ ಸರಕಾಗಿದೆ. ೨ ಸ್ತ್ರೀಶಕ್ತಿ ಸಂಘಗಳಿವೆ. ಕರಿಯಮ್ಮನ ಪೌಳಿಯಿದ್ದು ಆರತಿ, ಬಾನ, ಬ್ಯಾಟೆಯ ಹರಕೆ ಸಂಪ್ರದಾಯವಾಗಿದೆ. ಹಂದನಕೆರೆ ಚೌಡಮ್ಮನಿಗೆ ಎದುರೆತ್ತಿ, ಆರತಿ, ಬಲಿ ಮಾಡುವ ಸಂಪ್ರದಾಯವಿದೆ. ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ-ರೊಟ್ಟಿ ಅಮುಖ್ಯ ಆಹಾರ. ಬಾಡೂಟ, ಪಾಯಸ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯ ವೇತನಗಳ ಫಲಾನುಭವಿಗಳಿದ್ದಾರೆ. ಹಂದನಕೆರೆ ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯ್ತಿಗೆ ಸೇರಿದ್ದು ಚಿಕ್ಕನಾಯಕನಹಳ್ಳಿ ವಿಧಾನಸಭೆ ಹಾಗೂ ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಬಡಗಿ ಕಸುಬು ಪಾರಂಪರಿಕ ಕಸುಬಾಗಿದೆ. ಗೌರಿ-ಗಣೇಶ, ದಸರಾ, ಯುಗಾದಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಕಮಲಾಪುರ ಗೊಲ್ಲರಹಟ್ಟಿ

ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೭ ಕಿಮೀ ದೂರದಲ್ಲಿದ್ದು ಮಲ್ಲಿಗೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ಕಾಡುಗೊಲ್ಲರ ಹಟ್ಟಿಯಾದುದರಿಂದಾಗಿ ಗೊಲ್ಲರಹಟ್ಟಿ ಎಂದು ಕರೆಯುತ್ತಾರೆ.

ಬಯಲು ಭೂಪ್ರದೇಶ. ರೈತಾಪಿ ಬದುಕು ಹಾಗೂ ಕುರಿ ಸಾಕಾಣಿಕೆ ಇದೆ. ಕುರಿ ಮೇವಿಗಾಗಿ ಆಗಾಗ ವಲಸೆ ಹೋಗುತ್ತಾರೆ. ಕುಡಿಯಲು ಗ್ರಾಮಪಂಚಾಯ್ತಿಯಿಂದ ಕೊಳವೆ ಬಾವಿಯ ಮೂಲಕ ನೀರು ಪೂರೈಸುತ್ತಾರೆ. ಒಂದು ಕಿರು ಟ್ಯಾಂಕ್ ಇದೆ. ರಾಗಿ, ಜೋಳ, ಹೆಸರು ಬೆಳೆಯುತ್ತಾರೆ. ಹಲವರಿಗೆ ತೆಂಗಿನ ಭೂಮಿ ಇದ್ದು ಕೊಬ್ಬರಿ ವಾಣಿಜ್ಯ ಸರಕಾಗಿದೆ. ಕುರಿ ವ್ಯಾಪಾರವೂ ಇದೆ. ಶಿಕ್ಷಕ, ಸಾರಿಗೆ ಇಲಾಖೆಯ ಇಬ್ಬರು ಸರ್ಕಾರಿ ನೌಕರರಿದ್ದಾರೆ. ೧೩೮ ಎಕರೆ ಕೃಷಿ ಭೂಮಿಯನ್ನು ಈ ಗ್ರಾಮದವರು ಬಳಸುತ್ತಾರೆ. ೩೧ ಮನೆಗಳಿದ್ದು ೧೪೨ ಜನಸಂಖ್ಯೆ ಇದೆ. ಮನೆಗಳು ಹೆಂಚಿನ, ಶೀಟಿನ, ಮಾಳಿಗೆ ಸ್ವರೂಪದಲ್ಲಿದ್ದು ಇವು ಜನತಾ, ಆಶ್ರಯ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ. ಶಿಕ್ಷಣ, ಪಡಿತರ, ಸಾರಿಗೆಗೆ ಕಮಲಾಪುರವನ್ನು ಆಶ್ರಯಿಸಿದ್ದಾರೆ. ಮಲ್ಲಿಗೆರೆಯಿಂದ ಅಂಚೆ ಸಂಪರ್ಕವಿದೆ. ೨ ಸ್ತ್ರೀಶಕ್ತಿ ಸಂಘಗಳು, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘವಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಇಲ್ಲಿ ೫೯೮.೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೯ ಡಿಗ್ರಿ ಹಾಗೂ ಬಿಸಿಲು ೩೦ ಡಿಗ್ರಿ ಸರಾಸರಿ ಇದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಗ್ರಾಮದಲ್ಲಿ ತಿಮ್ಮಪ್ಪ, ಚಿತ್ರದೇವರ ಪೌಳಿಗಳಿವೆ. ದೀಪಾವಳಿ ಇವರಿಗೆ ದೊಡ್ಡ ಹಬ್ಬ. ಆರು ದಿನಗಳ ಕಾಲ ಜಾತ್ರೆ ಸ್ವರೂಪದಲ್ಲಿ ಉತ್ಸವ ನಡೆಯುತ್ತದೆ. ದೀಪ ಏರಿಸುವ, ಇಳಿಸುವ, ಹಾಲು ಮೀಸಲು, ಹಾಲು ಗುಡ್ಡೆ ಸಂಪ್ರದಾಯವಿದೆ. ಮಲ್ಲಿಗೆರೆ ಕರಿಯಮ್ಮ ದೇವರ ಊರಹಬ್ಬ ಮಾಡುತ್ತಾರೆ. ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಗ್ರಾಮದ ಸಾಕ್ಷರತೆ ೫೭% ರಷ್ಟಿದೆ. ಹಂದನಕೆರೆ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಹಾಗೂ ಮಲ್ಲಿಗೆರೆ ಗ್ರಾಮಪಂಚಾಯ್ತಿಗೆ ಸೇರಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕಾಮಲಾಪುರ ತೋಟದಮನೆ

ಕಾಮಲಾಪುರ ತೋಟದಮನೆ ಕಾಮಲಾಪುರಕ್ಕೆ ಸೇರಿದ ಮಜರೆ ಗ್ರಾಮವಾಗಿದೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೨೮ ಕಿಮೀ ಅಂತರದಲ್ಲಿದೆ. ಕಾಮಲಾಪುರದ ಕೆಲವರು ಪ್ರತ್ಯೇಕವಾಗಿ ತೋಟಗಳಲ್ಲಿ ಹೊಸದಾಗಿ ಜನವಸತಿ ನಿರ್ಮಿಸಿಕೊಂಡ ಕಾರಣ ತೋಟದಮನೆ ಎಂತಲೂ, ಅದು ಕಾಮಲಾಪುರಕ್ಕೆ ಸೇರಿರುವುದರಿಂದ ಕಾಮಲಾಪುರದ ತೋಟದಮನೆ ಎಂದು ಕರೆಯುತ್ತಾರೆ. ಬಯಲು ಪ್ರದೇಶ. ಕಪ್ಪು ಮರಳಿನ ಭೂ ಪ್ರದೇಶವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಮಲ್ಲಿಗೆರೆ ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು

ಯೋಜನೆಯಡಿಯಲ್ಲಿ ನೀರಿನ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಸರ್ಪ ಒಕ್ಕಲಿಗ, ಲಿಂಗಾಯಿತ, ನಾಯಕ ಜನಾಂಗಗಳಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೨೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೯೭ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೬ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಮಲ್ಲಿಗೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಪಡಿತರ, ಶಿಕ್ಷಣ, ಸಾರಿಗೆ, ಅಂಚೆ ಸೌಲಭ್ಯಗಳನ್ನು ಕಾಮಲಾಪುರದಿಂದ ಪಡೆಯುತ್ತಾರೆ. ಸಾಕ್ಷರತೆ ೫೭% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಹಂದನಕೆರೆ–ಮತಿಘಟ್ಟಕ್ಕೆ ರಸ್ತೆ ಸಂಪರ್ಕವಿದ್ದು ಬಸ್ ಸೌಕರ್ಯವಿದೆ.

ಹಂದನಕೆರೆ ದುರ್ಗಮ್ಮ ದೇವರಿಗೆ ಎದುರೆತ್ತಿ, ಆರತಿ ಅರ್ಪಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕನಕಪುರ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೫ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೩೦ ಹೆಕ್ಟೇರ್. ಕುರುಬ ಸಮುದಾಯದವರೇ ಪ್ರಧಾನವಾಗಿರುವುದರಿಂದ ಕನಕದಾಸರ ಹೆಸರನ್ನೇ ಇಡಲಾಗಿದೆ ಎಂಬುದು ಪ್ರತೀತಿ. ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೪೦೦–೫೦೦ ಅಡಿ ಆಳದ ೩ ಕೊಳವೆ ಬಾವಿಗಳಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ೧ ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಕುರುಬ ಸಮುದಾಯ ಪ್ರಧಾನವಾಗಿದ್ದು ವಲಯ, ಮಾದಿಗ, ನಾಯಕ ಸಮುದಾಯಗಳು ಕಿರುಸಮುದಾಯಗಳಾಗಿವೆ. ಒಟ್ಟು ೨೩ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೧೩ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಮಣ್ಣಿನ, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೭ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಡಾಂಬರು ರಸ್ತೆಯಿದೆ. ಕಟ್ಟಡ ಕೆಲಸಗಾರರು ಮತ್ತು ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು

ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್‌ಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಸಾಂಪ್ರದಾಯಿಕ ಹೈನುಗಾರಿಕೆಯಿದ್ದು ೨ ಕಿಮೀ ದೂರದ ಸಾಸಲು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಹಾಲನ್ನು ಸರಬರಾಜು ಮಾಡುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಜೆ.ಸಿ. ಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಒಂದು ಸ್ತ್ರೀಶಕ್ತಿ ಸಂಘ ಹಾಗೂ ಒಂದು ಸ್ವಸಹಾಯ ಸಂಘವಿದೆ. ಶಾಲೆಗೆ ಮಕ್ಕಳು ಸಾಸಲು ಗ್ರಾಮಕ್ಕೆ ಹೋಗುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೬ ಫಲಾನುಭವಿಗಳಿದ್ದಾರೆ. ಯಲ್ಲಮ್ಮ ಮತ್ತು ಅಂಬರದಮ್ಮ ದೇವಸ್ಥಾನವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕೊಟ್ಟಿಗಲ್

ಕೊಟ್ಟಿಗಲ್ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೨೬ ಕಿಮೀ ಅಂತರದಲ್ಲಿರುವ ಕಂದಾಯ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ೧೧೧೪ ಹೆಕ್ಟೇರ್. ಸಾಮಾಜಿಕ ಅರಣ್ಯ, ಕಣಿವೆ, ಕುರುಚಲು ಕಾಡಿನ ಭೂಭಾಗವಾಗಿದೆ. ಅಜ್ಜಿಗುಡ್ಡೆ, ಮದನಮಡು, ಕಾತ್ರಿಕೆಹಾಳಿನ ಸಮೀಪದಲ್ಲಿದ್ದು ಹೆಚ್ಚು ಕಾಡಿಗೆ ಹೊಂದಿಕೊಂಡಂತಿದೆ. ಹೊಟ್ಟಿದ ಕಲ್ಲಿನಂತಿರುವ ಗ್ರಾಮ ಎಂಬ ಅರ್ಥದಲ್ಲಿ ಹೊಟ್ಟಿಗಲ್ ಈಗ ಕೊಟ್ಟಿಗಲ್ ಎಂದಾಗಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಕಲ್ಲು ನೆಲ. ಡಿಸೆಂಬರ್–ಜನವರಿಯಲ್ಲಿ ಹೆಚ್ಚು ಚಳಿ, ಮಾರ್ಚ್–ಮೇ ವರೆಗೆ ಬಿಸಿಲು ಅಧಿಕವಾಗಿರುತ್ತದೆ. ಕಾತ್ರಿಕೆಹಾಳ್ ವಜ್ರದ ಕೆರೆ ತುಂಬಿದರೆ ಇಲ್ಲಿ ನೀರಿನ ಸೌಕರ್ಯವಿರುತ್ತದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಆದಿಕರ್ನಾಟಕ ಜನಾಂಗದವರು ದೊಡ್ಡ ಸಮುದಾಯವಾಗಿದ್ದು ನಾಯಕರು, ಅಗಸರು, ಕಮ್ಮಾರರು ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೪೧ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೬೩೨ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೩೨ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ನವಣೆ, ಹಾರಕ ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಹುಣಸೆಹಣ್ಣು, ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ

ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಸ್ಕೂಟರ್, ಕಾರು, ದ್ವಿಚಕ್ರ ವಾಹನಗಳ ಬಳಕೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾರಿಗೆ, ಶಿಕ್ಷಣ, ಕಂದಾಯ ಇಲಾಖೆಯಲ್ಲಿ ೬ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಟ್ರ್ಯಾಕ್ಟರ್, ಲಾರಿ ಡ್ರೈವರ್‌ಗಳಿದ್ದಾರೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತೀರ್ಥಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ತೀರ್ಥಪುರದಿಂದ ಅಂಚೆ ಸಂಪರ್ಕ ಕಲ್ಪಿಸಲಾಗಿದೆ. ಆಸ್ಪತ್ರೆಗೆ ತೀರ್ಥಪುರ, ಕಾತ್ರಿಕೆಹಾಳ್‌ಗೆ ಹೋಗುತ್ತಾರೆ. ಆರೋಗ್ಯ ಕಾರ್ಯಕರ್ತೆ ನೆಗಡಿ, ಜ್ವರಗಳಿಗೆ ಸ್ಥಳೀಯವಾಗಿ ಚಿಕಿತ್ಸೆ ನೀಡುತ್ತಾರೆ. ಹಾಗಲವಾಡಿ–ಚೇಳೂರು ಮಾರ್ಗವಾಗಿ ಬಸ್ ಸಂಪರ್ಕವಿದೆ. ೩ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೭% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೬೩ ಫಲಾನುಭವಿಗಳಿದ್ದಾರೆ. ೨ ಗೂಡಂಗಡಿಗಳಿದ್ದು ೧ ಟೀ ಹೋಟೆಲ್ ಇದೆ.

ಮಾರಮ್ಮ, ಆಂಜನೇಯ ದೇವಾಲಯಗಳಿದ್ದು ಯರಕಟ್ಟೆ ರಾಂಪುರದಮ್ಮನ ಜಾತ್ರೆಯಲ್ಲಿ ಈ ಗ್ರಾಮದವರು ಆರತಿ, ಬಲಿ ಅರ್ಪಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕಾತ್ರಿಕೆಹಾಳ್

ಕಾತ್ರಿಕೆಹಾಳ್ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೧೫ ಕಿಮೀ ಅಂತರದಲ್ಲಿರುವ ಕಂದಾಯ ಗ್ರಾಮವಾಗಿದೆ. ಒಂದು ಕಾಲದ ದಟ್ಟ ಕಾಡಿನ ಭಾಗ ಇಂದು ಬಯಲು ಪ್ರದೇಶ. ಚಿಕ್ಕನಾಯಕನಹಳ್ಳಿ ಏಳು ಕಣಿವೆ ಇಳಿದರೆ ಅಥವಾ ಸುತ್ತು ಕಣಿವೆ ದಾಟಿದರೆ ಕಾತ್ರಿಕೆಹಾಳ್ ಗ್ರಾಮವಿದೆ. ಹಾಗಲವಾಡಿ ಕಾಡಿನಿಂದ ಕೊಂಡ್ಲಿಕ್ರಾಸಿನ ತನಕ ಗುಡ್ಡಸಾಲಿನ ಎಡಬದಿಗಿದೆ. ಹೊಸೂರು ಎಂಬ ಹೊಸ ಬಡಾವಣೆ ಈ ಗ್ರಾಮಕ್ಕೆ ಸೇರ್ಪಡೆಯಾಗಿದೆ. ಭೌಗೋಳಿಕ ವಿಸ್ತೀರ್ಣ ೧೮೮೭೦.೨೨ ಹೆಕ್ಟೇರ್. ಪೂರ್ವಕ್ಕೆ ಓಬಳ ಬೆಟ್ಟ, ಬಲಬದಿಗೆ ಸಾಮಾಜಿಕ ಅರಣ್ಯ ಪ್ರದೇಶವಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಮದನಮಡು ಕೆರೆ ನೀರಿಗೆ ಆಶ್ರಯವಾಗಿದೆ. ಮಳೆಗಾಲದಲ್ಲಿ ಮಾತ್ರ ತುಂಬುತ್ತದೆ. ಮೈಲಾರದ ಹಳ್ಳ, ವಜ್ರದಹಳ್ಳ, ತಿಮ್ಮನಕಟ್ಟೆ ಸ್ವಲ್ಪ ಪ್ರಮಾಣದಲ್ಲಿ ನೀರು ಒದಗಿಸುತ್ತದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ನಾಯಕ ಸಮುದಾಯ ದೊಡ್ಡ ಜನಾಂಗ. ಈಡಿಗ, ಲಿಂಗಾಯಿತ, ಆದಿಕರ್ನಾಟಕ, ಕುಂಬಾರ, ಮುಸ್ಲಿಂ, ಕ್ಷೌರಿಕ, ಬಲಜಿಗ, ಮಡಿವಾಳ ಕಿರು ಸಮುದಾಯಗಳಾಗಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೪೦೩ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೮೪೭ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೩೦ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ

ಯೋಜನೆಗಳ ಫಲಾನುಭವಿಗಳಿದ್ದಾರೆ. ೪೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಸಣ್ಣ ಕಲ್ಲುಗಳಿಂದ ಕೂಡಿದ ಬಿಳಿ ಮಿಶ್ರಿತ ಮಣ್ಣು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಶೇಂಗಾ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಹುಣಸೆ ಹಣ್ಣು, ಅಡಿಕೆ, ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಲಾರಿ, ಕಾರು, ದ್ವಿಚಕ್ರ ವಾಹನಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ನಂದಿನಿ ಹಾಲಿನ ಕೇಂದ್ರವಿದ್ದು ೧೦೦ ಲೀ. ಹಾಲು ದಿನವಹಿ ಸಂಗ್ರಹವಾಗುತ್ತದೆ. ಸರ್ಕಾರಿ ಇಂಜಿನಿಯರಿಂಗ್ ಇಲಾಖೆಯಲ್ಲಿ ರಾಮಕೃಷ್ಣ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ೧೦ ಜನ ಶಿಕ್ಷಕರಿದ್ದಾರೆ. ಒಬ್ಬರು ಸರ್ಕಾರಿ ಮುದ್ರಣಾಲಯದಲ್ಲಿ ಸಹಾಯಕ ನಿರ್ದೇಶಕರಾಗಿದ್ದಾರೆ. ಖಾಸಗಿ ಇಂಜಿನಿಯರ್, ವಕೀಲರಿದ್ದಾರೆ. ೨ ಇಟ್ಟಿಗೆ ಫ್ಯಾಕ್ಟರಿಗಳಿವೆ. ಬಡಗಿ, ಕುಂಬಾರಿಕೆ, ಕ್ಷೌರಿಕ, ಮಡಿವಾಳ ಸಾಂಪ್ರದಾಯಿಕ ಕಸುಬುಗಾರರಿದ್ದಾರೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತೀರ್ಥಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ೫ ಜನ ಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ತೀರ್ಥಪುರದಿಂದ ಅಂಚೆ ಸಂಪರ್ಕ ಕಲ್ಪಿಸಿದೆ. ಚಿಕ್ಕನಾಯಕನಹಳ್ಳಿ-ಹಾಗಲವಾಡಿ-ಚೇಳೂರು ಮಾರ್ಗವಾಗಿ ರಸ್ತೆ, ಖಾಸಗಿ ಬಸ್ ಸಂಚಾರವಿದೆ. ಕೆಂಪಮ್ಮ, ಮಾರಮ್ಮ, ಮಂಜುನಾಥ ಸ್ವಸಹಾಯ ಸಂಘಗಳಿವೆ.

ಎರಡು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸರ್ಕಾರಿ ಪದವಿಪೂರ್ವ ಕಾಲೇಜು ಇದೆ. ಸಾಕ್ಷರತೆ ೭೨% ರಷ್ಟಿದೆ. ಗಜೇಂದ್ರ ಎಂಬುವರು ಮಕ್ಕಳ ಕಾಯಿಲೆಗೆ ನಾಟಿ ಚಿಕಿತ್ಸೆ ನೀಡುತ್ತಾರೆ. ಸಮುದಾಯ ಸೌಲಭ್ಯಗಳಾದ ೪೦ ವಿಧವಾ ವೇತನ, ೩ ವಿಕಲಚೇತನ ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೧೫ ಕಿರಾಣಿ ಅಂಗಡಿಗಳಿವೆ. ಪ್ರಾಚೀನ ಕೋಟೆಯೊಂದರ ಅವಶೇಷ ಕಂಡುಬರುತ್ತದೆ.

ಕೆಂಪಮ್ಮ, ದೊಡ್ಡಮಾರಮ್ಮ, ತಿಮ್ಮಪ್ಪ, ಆಂಜನೇಯ, ಶನಿದೇವರ ದೇವಾಲಯವಿದೆ. ಶಾಂತವೀರಸ್ವಾಮಿಗಳ ಮಂದಿರ ಇತ್ತೀಚೆಗೆ ನಿರ್ಮಾಣವಾಗಿದೆ. ಕೆಂಪಮ್ಮ ದೇವಿಯ ಜಾತ್ರೆ, ಅಗ್ನಿಕೊಂಡ, ಆರತಿ, ಬಾಯಿಬೀಗ ಮುಂತಾದ ಆಚರಣೆಗಳೊಂದಿಗೆ ಒಂದು ವಾರದ ಕಾಲ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕೋಲಾಟದ ರಂಗಪ್ಪ, ಹಾರ್ಮೋನಿಯಂ ಕಲಾವಿದ ನರಸಿಂಹಯ್ಯ ಸ್ಥಳೀಯ ಕಲಾವಿದರು. ಒಂದು ಬಯಲು ರಂಗಮಂದಿರವಿದೆ. ಮದಕರಿ ನಾಯಕ, ವಿನಾಯಕ ಯುವಕರ ಸಂಘಗಳಿವೆ.

## ಕೋಡಿಹಳ್ಳಿ

ಕೋಡಿಹಳ್ಳಿಯು ಒಂದು ಬೇಚರಕ್ ಗ್ರಾಮವಾಗಿದ್ದು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೪ ಕಿಮೀ ದೂರದಲ್ಲಿದ್ದ ಗ್ರಾಮ ಇಂದು ಹೊನ್ನೇಬಾಗಿ ಗ್ರಾಮಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ಹೊಸಹಳ್ಳಕ್ಕೆ ಸಮೀಪದಲ್ಲಿದ್ದು ಇಂದು ಕಾರಣಾಂತರಗಳಿಂದ ಮನೆಗಳು ಇರುವುದಿಲ್ಲ. ಸರ್ಕಾರಿ ಲೆಕ್ಕದಲ್ಲಿ ಮಾತ್ರ ಗ್ರಾಮದ ಹೆಸರಿದೆ. ಇದೊಂದು ಬಯಲು ಭೂಪ್ರದೇಶ. ಸಮೀಪದಲ್ಲಿ ರಕ್ಷಣಾ ಗೋಮಾಳವಿದ್ದು ಕುರಿ, ದನಗಳ ಮೇವಿಗೆ ಅನುಕೂಲವಾಗಿದೆ. ಕುರುಚಲು ಗಿಡಗಳು ಬೆಳೆದಿವೆ. ಚಿಕ್ಕನಾಯಕನಹಳ್ಳಿ ಕಸಬಾ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭೆ, ತುಮಕೂರು ಲೋಕಸಭೆ, ಹೊನ್ನೇಬಾಗಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದೆ.

## ಕೋಡಿಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಮತ್ತಿಘಟ್ಟ ಗ್ರಾಮಪಂಚಾಯ್ತಿಯ ಮಜರೆ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೯ ಕಿಮೀ ಅಂತರದಲ್ಲಿದೆ. ಮತಿಘಟ್ಟದ ಕೆರೆಯ ಕೋಡಿಯ ಭಾಗದಲ್ಲಿ ಜನವಸತಿ ನಿರ್ಮಾಣವಾದುದರಿಂದ ಕೋಡಿಪಾಳ್ಯ ಎಂದು ಕರೆದಿದ್ದಾರೆ. ಬಯಲು ಭೂಪ್ರದೇಶ. ಭೌಗೋಳಿಕ

ವಿಸ್ತೀರ್ಣ ೧೮೦೭೮ ಹೆಕ್ಟೇರ್. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಒಂದು ಕೆರೆ, ಹಳ್ಳ, ೨ ತೆರೆದ ಬಾವಿಗಳಿದ್ದು ಬತ್ತಿಹೋಗಿ ೩೦ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ನಾಯಕರು ಅಧಿಕ ಸಂಖ್ಯೆಯಲ್ಲಿದ್ದು ಕುರುಬರು, ವೀರಶೈವರು ವಾಸವಾಗಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೪೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೩೦೦ ಜನಸಂಖ್ಯೆ ಹೊಂದಿದೆ. ೨೦ ಮನೆಗಳಲ್ಲಿ ಶೌಚಾಲಯವಿರುತ್ತದೆ. ೧ ವಸತಿ ರಹಿತ, ೧ ನಿವೇಶನ ರಹಿತ ಕುಟುಂಬವಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೧೦ ಕಾಂಕ್ರೀಟ್, ೧೦ ಕಲ್ಲಿನ, ೨೦ ಹೆಂಚಿನ ಮನೆಗಳಿವೆ. ಮೇಲ್ಹಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ೬ ಜನತಾ, ೪ ಆಶ್ರಯ ಹಾಗೂ ೫ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೨೦ ವಿದ್ಯುತ್ ಕಂಬಗಳಿದ್ದು ದೀಪಗಳನ್ನು ಅಳವಡಿಸಿದ್ದಾರೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಿಶ್ರ ಕರಿ ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ದಾಳಿಂಬೆ, ತರಕಾರಿ ಇತ್ಯಾದಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ದಾಳಿಂಬೆ, ರೇಷ್ಮೆ, ಅಡಿಕೆ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಆಧುನಿಕ ಡೈರಿಯಿದೆ. ಸರ್ಕಾರಿ ನೌಕರಿಯಲ್ಲಿ ಒಬ್ಬರು ಶಿಕ್ಷಕರು, ೪ ಜನ ಕಂಡಕ್ಟರ್, ಒಬ್ಬರು ಜಿಲ್ಲಾ ವರಿಷ್ಠಾಧಿಕಾರಿಗಳು ಇದ್ದಾರೆ. ಹಿಟ್ಟಿನ ಗಿರಣಿಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮತ್ತಿಘಟ್ಟ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ರಾಜ್ಯ ಮತ್ತು ಜಿಲ್ಲಾ ಮುಖ್ಯ ರಸ್ತೆಯನ್ನು ಹೊಂದಿದೆ. ತಿಪಟೂರು–ಚಿ.ನಾ. ಹಳ್ಳಿ – ಹಿರಿಯೂರು ಕಡೆಗೆ ಸಂಪರ್ಕ ಕಲ್ಪಿಸುತ್ತದೆ. ಸ್ತ್ರೀಶಕ್ತಿ ಸಂಘಗಳು, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೮% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ೬ ವಿಧವಾ ವೇತನ, ೪ ವಿಕಲಚೇತನ, ೧೦ ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಲಕ್ಕಮ್ಮ, ಪೆದ್ದಾಳಮ್ಮ, ದುರ್ಗಮ್ಮ, ಆಂಜನೇಯ ದೇವಾಲಯಗಳಿವೆ. ಮತ್ತಿಘಟ್ಟದಲ್ಲಿ ನಡೆಯುವ ಪಾರ್ವತಮ್ಮ ದೇವಿಯ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರಂಗಣ್ಣ ಎಂಬುವರು ರಂಗಗೀತೆಗಳನ್ನು ಹಾಡುತ್ತಾರೆ.

## ಕರೇಬಾಲಯ್ಯನಹಟ್ಟಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೫ ಕಿಮೀ ಅಂತರದಲ್ಲಿದೆ. ಮರೆನಡು ಮಜರೆ ಗ್ರಾಮ ದಾಸಪ್ಪನಹಟ್ಟಿ ಈ ಗ್ರಾಮಕ್ಕೆ ಸೇರ್ಪಡೆಯಾಗಿದೆ. ಬಯಲು ನಾಡಾಗಿದೆ. ಬಾಲದೇವರ ಹೆಸರಿನ ಕರೆಬಾಲಯ್ಯ ಎಂಬುವವರಿಂದ ಗ್ರಾಮ ರಚನೆಯಾಗಿರುವುದರಿಂದ ಈ ಹೆಸರು ಬಂದಿದೆ. ಭೌಗೋಳಿಕ ವಿಸ್ತೀರ್ಣ ೨೬೦.೮೬ ಹೆಕ್ಟೇರ್. ಕಪ್ಪು-ಕೆಂಪು ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ೨ ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಗೊಲ್ಲ ಸಮುದಾಯ ಪ್ರಧಾನವಾಗಿದ್ದು ಕನ್ನಡ ಭಾಷೆ ಮಾತನಾಡುತ್ತಾರೆ. ಒಟ್ಟು ೪೯ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೨೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಹೆಂಚಿನ, ಗುಡಿಸಲು ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೬ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಹುಣಸೆ, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್‌ಗಳು, ಟೆಂಪೋಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕೃಷಿ, ಕೂಲಿ ಕಾರ್ಮಿಕರಿದ್ದಾರೆ. ಸಾಂಪ್ರದಾಯಿಕ ಹೈನುಗಾರಿಕೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದಸೂಡಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಆಟೋರಿಕ್ಷಾ, ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ೨ ಸ್ತ್ರೀಶಕ್ತಿ ಸಂಘಗಳು ಹಾಗೂ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೩ ರಷ್ಟು ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಭೈರಪ್ಪ ಮತ್ತು ಭೂತಪ್ಪನ ಗುಡಿಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕೃಷ್ಣರಾಜಸಾಗರ ಕೆರೆ

ಕೃಷ್ಣರಾಜಸಾಗರ ಕೆರೆ ಜೆ.ಸಿ. ಪುರ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಒಂದು ಬೇಚರಕ್ ಗ್ರಾಮ. ಈಗ ಕೆರೆ ಇರುವುದಿಲ್ಲ. ಇಲ್ಲೆಲ್ಲಾ ನಾಗೇನಹಳ್ಳಿ, ಹಾಲುಗೊಣ, ಬೋಡೇಗೌಡನಪಾಳ್ಯದ ಜಮೀನುಗಳಿವೆ. ಇತ್ತೀಚೆಗೆ ತೋಟದಲ್ಲಿ ೩ ಮನೆಗಳು ರಚನೆಯಾಗಿವೆ. ಪೂರ್ವದಲ್ಲಿ ಒಂದು ಕೆರೆಯಿದ್ದು ಅದು ಒತ್ತುವರಿಯಾಗಿ ಕೃಷಿ ಭೂಮಿಯಾಗಿದೆ ಎಂಬುದು ಇಲ್ಲಿನ ಜನಮತವಾಗಿದೆ. ಕೆರೆ ಪೇತಲಾಗಿದ್ದು ನೀರು ಬರುವುದಕ್ಕೆ ಆಸ್ಪದ ಇರಲಿಲ್ಲ ಎಂಬುದು ಇನ್ನೊಂದು ಅನಿಸಿಕೆ. ಇದು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಗೋಡೆಕೆರೆ ಗೇಟಿನಿಂದ ಬಲಭಾಗದಲ್ಲಿ ಈ ಗ್ರಾಮದ ಕುರುಹುಗಳಿವೆ. ಈಗ ಒಂದು ಸಾಮಾಜಿಕ ಅರಣ್ಯ ಪ್ರದೇಶವಾಗಿದೆ. ಶೆಟ್ಟಿಕೆರೆ ಹೋಬಳಿ, ಜೆ.ಸಿ. ಪುರ

ಗ್ರಾಮಪಂಚಾಯ್ತಿ, ಹಾಲುಗೋಣದ ಮಜರೆ ಗ್ರಾಮ ವ್ಯಾಪ್ತಿಗೆ ಬರುತ್ತದೆ. ಇಲ್ಲಿನ ಕೆರೆಯ ಪಕ್ಕದಲ್ಲಿ ಈಶ್ವರನ ದೇವಾಲಯವಿದ್ದು ಶಿವರಾತ್ರಿಯಂದು ವಿಶೇಷ ಭಜನೆ ಹಾಗೂ ಶ್ರಾವಣದ ಕೊನೆಯ ಪರೇವು ಮಾಡುವುದು ವಾಡಿಕೆಯಲ್ಲಿದೆ.

## ಕ್ಯಾತೆದೇವರಹಟ್ಟಿ

ಕ್ಯಾತೆದೇವರಹಟ್ಟಿಯು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೧ ಕಿಮೀ ಅಂತರದಲ್ಲಿದೆ. ಹಿರಿಯೂರಿನ ಗಡಿ ಪ್ರದೇಶವಾಗಿದೆ. ಕ್ಯಾತೆದೇವರ ಮೂಲದಿಂದಾಗಿ ಕ್ಯಾತೆದೇವರಹಟ್ಟಿ ಎಂದು ಹೆಸರು ಬಂದಿದೆ. ಕಾಡುಗೊಲ್ಲರ ಬುಡಕಟ್ಟು ಗ್ರಾಮ. ಗಾಣದಾಳು ಗ್ರಾಮಕ್ಕೆ ಸೇರಿದ್ದು ೧೬೩ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ತೋಟಸಾಲು, ಬೋರನಕಣಿವೆ ಮುಖಜಭೂಮಿ, ತಿಮ್ಮನಗುಡ್ಡೆ, ಬೋರೇಗುಡ್ಡ, ಬೆಳ್ಳಾರದ ಹಣೆಯಿಂದ ನೀರು ಈ ಗ್ರಾಮದ ಸರಹದ್ದಿನಲ್ಲಿ ಹರಿಯುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗಾಣದಾಳು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಕಾಡುಗೊಲ್ಲರ ಒಟ್ಟು ೩೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೦೪೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಹೆಂಚಿನ ಬಾದೆಹುಲ್ಲಿನ ಗುಡಿಸಲು ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಹುಣಸೆಹಣ್ಣು, ಕುರಿ ವ್ಯಾಪಾರವಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಗಾಣದಾಳು ಹಾಗೂ ಅಗ್ರಹಾರಕ್ಕೆ ಶಿಕ್ಷಣಕ್ಕೆ ಹೋಗುತ್ತಾರೆ. ಪಡಿತರ, ಅಂಚೆ ಗಾಣದಾಳುವಿನಿಂದ ಪಡೆಯುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ದಸೂಡಿಗೆ ನರೇಗಾ ರಸ್ತೆ ಸಂಪರ್ಕವಿದೆ.

ಚಿತ್ರದೇವರು, ಕ್ಯಾತೆದೇವರು, ಪಾತೇದೇವರ ಪೌಳಿಗಳು ಗುಂಪು ಗುಡಿಗಳಿದ್ದು ದೀಪಾವಳಿಯ ಏಳು ದಿನಗಳ ಕಾಲ ಹಾಲು ಮೀಸಲು, ಜನ್ನಿಗೆ ಹಾಲು ಹಾಗೂ ದೇವರ ಹೊಳೆ ತೆಗೆಯುವುದು ಈ ಮೊದಲಾದ ಆಚರಣೆಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕೈಮರ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಮತ್ತಿಘಟ್ಟ ಗ್ರಾಮಪಂಚಾಯ್ತಿಯ ಮಜರೆ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೮ ಕಿಮೀ ಅಂತರದಲ್ಲಿದೆ. ಮತ್ತಿಘಟ್ಟದಲ್ಲಿದ್ದ ಮಂಗವು ಈ ಗ್ರಾಮದಲ್ಲಿದ್ದ ಅರಳೀಮರಕ್ಕೆ ಸ್ವತಃ ನೇಣು ಬಿಗಿದುಕೊಂಡು ಮರಣ ಹೊಂದಿ, ದೈವಸ್ವರೂಪಿಯಾಗಿ ಬಂದು ಗ್ರಾಮಸ್ಥರ ಕನಸಿನಲ್ಲಿ ಗ್ರಾಮಕ್ಕೆ ಕೈಮರ ಎಂದು ನಾಮಕರಣ ಮಾಡಲು ಹೇಳಿದ್ದರಿಂದ ಈ ಹೆಸರು

ಬಂದಿದೆ ಎಂದು ಹೇಳುತ್ತಾರೆ. ಮತಿಘಟ್ಟ ಗ್ರಾಮದ ತಿರುವಿನಲ್ಲಿದ್ದು ಅಲ್ಲಿ ಮನೆಗಳು ರಚನೆಯಾಗಿರುವ ಕಾರಣ ತೋರುಗಂಭ ಹಾಕಿದ್ದಾರೆ. ಆ ಕಾರಣದಿಂದ ಕೈಮರವಾಗಿದೆ.

ಭೌಗೋಳಿಕ ವಿಸ್ತೀರ್ಣ ೨೧೧.೮೬ ಹೆಕ್ಟೇರ್. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೧ ಕುಂಟೆಯಿದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ೨೦ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಬೋವಿ ಸಮುದಾಯ ದೊಡ್ಡದಾಗಿದ್ದು ನಾಯಕ, ಮುಸ್ಲಿಂ ಜನಾಂಗದವರಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ತೆಲುಗು, ಉರ್ದು ಮಾತನಾಡುವವರಿದ್ದಾರೆ. ಒಟ್ಟು ೩೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೨೦ ಜನಸಂಖ್ಯೆ ಹೊಂದಿದೆ. ೫ ಮನೆಗಳಲ್ಲಿ ಶೌಚಾಲಯವಿರುತ್ತದೆ. ೧ ವಸತಿ ರಹಿತ ಹಾಗೂ ೨ ನಿವೇಶನ ರಹಿತ ಕುಟುಂಬಗಳಿವೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೩ ಕಾಂಕ್ರೀಟ್, ೮ ಕಲ್ಲಿನ, ೨ ಗುಡಿಸಲು, ೧೫ ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೨೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಿಶ್ರಿತ ಕಪ್ಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಡೈರಿ ವ್ಯವಸ್ಥೆಯಿದೆ. ಇಬ್ಬರು ಶಿಕ್ಷಕರು, ಒಬ್ಬರು ಉಪನ್ಯಾಸಕರು, ಒಬ್ಬರು ಚಾಲಕರಿದ್ದು ಸಾಂಪ್ರದಾಯಿಕ ಬಡಗಿಗಳಿದ್ದಾರೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮತ್ತಿಘಟ್ಟ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಮತ್ತಿಘಟ್ಟ ಹಾಗೂ ಹಂದನಕೆರೆಯಲ್ಲಿ ಹೊಂದಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೨ ಕಚ್ಚಾ ರಸ್ತೆಗಳಿವೆ. ತಿಪಟೂರು–ಹುಳಿಯಾರು–ಚಿ.ನಾ. ಹಳ್ಳಿಗೆ ಸಂಪರ್ಕ ಕಲ್ಪಿಸುತ್ತದೆ. ಸ್ತ್ರೀಶಕ್ತಿ ಸಂಘಗಳು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೩% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೨ ಚಿಲ್ಲರೆ ಅಂಗಡಿಗಳಿವೆ.

ಗಣಪತಿ, ಭೂತಪ್ಪ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕುರುಬರಹಳ್ಳಿ

ಕುರುಬರಹಳ್ಳಿ ಗ್ರಾಮವು ಕುಪ್ಪೂರು ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಒಂದು ಕಂದಾಯ

ಗ್ರಾಮವಾಗಿದೆ. ಕುರುಬರೇ ಹೆಚ್ಚು ವಾಸಿಸುತ್ತಿರುವುದರಿಂದ ಈ ಗ್ರಾಮಕ್ಕೆ ಈ ಹೆಸರು ಬಂದಿದೆ. ಈ ಗ್ರಾಮದ ವಿಶೇಷ ಎಂದರೆ ಈಗ ಜನವಸತಿ ಇರುವ ಸ್ಥಳ ಕುರುಬರಹಳ್ಳಿ ಅಲ್ಲ. ಇಲ್ಲಿಗೆ ಸ್ವಲ್ಪ ದೂರದಲ್ಲಿ ಕರುಬರಹಳ್ಳಿ ಎಂಬ ಗ್ರಾಮ ಇತ್ತು. ಅಲ್ಲಿಯ ಜನ ತುಂಬಾ ವರ್ಷಗಳ ಹಿಂದೆ ಬೇರೆ ಬೇರೆ ಊರುಗಳಿಗೆ ವಲಸೆ ಹೋದರು ಕೆಲ ಕುಟುಂಬಗಳು ಮಾತ್ರ ಈಗ ಇರುವ ರಸ್ತೆ ಬದಿ ವಾಸ್ತವ್ಯ ಹೂಡಿದರು. ಆ ಮೂಲ ಹಳ್ಳಿಯ ಹೆಸರೇ ಈಗ ವಾಸವಿರುವ ಜನವಸತಿ ಸ್ಥಳಕ್ಕೆ ಉಳಿದುಗೊಂಡಿತು. ಮೂಲ ಕುರುಬರಹಳ್ಳಿಯ ಕುರುಹಾಗಿ ಆಂಜನೇಯ ಸ್ವಾಮಿ ದೇವಸ್ಥಾನವಿದೆ. ಈ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೯ ಕಿ.ಮೀ. ದೂರದಲ್ಲಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೫೩೮.೧೧ ಚ.ಕಿ.ಮೀ. ಗಳು.

ಬಯಲುನಾಡಿಗೆ ಸೇರುವ ಈ ಹಳ್ಳಿಯ ಸುತ್ತ ಬಿಳಿಕಲ್ಲು, ಬಿಳಿಮಣ್ಣು ಕಂಡುಬರುತ್ತದೆ. ಈ ಸುತ್ತ ಕಾಡುಹಂದಿ, ನರಿ, ಜಿಂಕೆ ಮೊಲಗಳು ಕಾಣಸಿಗುತ್ತವೆ. ಹಸು, ಎಮ್ಮೆ, ಎತ್ತು, ಹಂದಿ, ಕುರಿ, ಮೇಕೆಗಳನ್ನು ಸಾಕುತ್ತಾರೆ. ನವಿಲು, ಗಿಳಿ, ಸೋಬಾನದಹಕ್ಕಿ, ಕಾಗೆ, ಗುಬ್ಬಚ್ಚಿ, ಗೂಬೆ, ಇತ್ಯಾದಿ ಪಕ್ಷಿಗಳು ಕಂಡುಬರುತ್ತವೆ. ಕೆಲ ಕುಟುಂಬದವರು ಸ್ವಂತ ಉಪಯೋಗಕ್ಕಾಗಿ ಕೋಳಿಗಳನ್ನು ಸಾಕುತ್ತಾರೆ. ಇಲ್ಲಿ ೫೩೧.೩ ಮಿ.ಮೀ. ನ ಆಸುಪಾಸು ಮಳೆ ಬೀಳುತ್ತದೆ. ೯ ಡಿ.ಸೆಂ. ಚಳಿಯೂ, ೨೮–೩೬ ಡಿ.ಸೆಂ. ಬಿಸಿಲೂ ಇಲ್ಲಿ ಕಂಡುಬರುತ್ತದೆ. ಈ ಗ್ರಾಮದ ಪಕ್ಕ ಸುವರ್ಣಮುಖಿ ಹಳ್ಳ ಹರಿಯುತ್ತದೆ. ಶೆಟ್ಟಿಕೆರೆ ಕೆರೆಯಿಂದ ಅಂಕಸಂದ್ರದ ಅಣೆಯನ್ನು ತಲುಪುತ್ತದೆ.

ಸಾಮಾಜಿಕ ರಚನೆ ಗಮನಿಸಿದಾಗ ಕುರುಬ ಜನಾಂಗ ಪ್ರಧಾನ ಸಮುದಾಯವಾಗಿದ್ದು, ಆದಿ ದ್ರಾವಿಡ ನಾಯಕ ಕುಂಬಾರ, ಜೋಗಿಜನಾಂಗದವರು ಸಣ್ಣ ಸಮುದಾಯದವರಾಗಿದ್ದಾರೆ. ಒಟ್ಟು ೨೩೩ ಜನಸಂಖ್ಯೆಯನ್ನು ಈ ಗ್ರಾಮ ಹೊಂದಿದೆ. ೩೦ ಮನೆಗಳಿರುವ ಈ ಗ್ರಾಮದಲ್ಲಿ ಒಂದು ಕಾಂಕ್ರೀಟ್ ಮನೆ ಇದ್ದು, ಉಳಿದವುಗಳನ್ನು ಕಲ್ಲು ಹಾಗೂ ಮಣ್ಣಿನಿಂದ ಕಟ್ಟಲಾಗಿದೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು, ಹಾಗೂ ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಲಾಗಿದೆ. ಆಶ್ರಯ, ಅಂಬೇಡ್ಕರ್, ಜನತಾ ಇತ್ಯಾದಿ ಸರ್ಕಾರಿ ಅನುದಾನದ ಮನೆಗಳು ಇವೆ. ೧೫ ಕುಟುಂಬಗಳು ಶೌಚಾಲಯ ಹೊಂದಿವೆ. ಈ ಗ್ರಾಮಕ್ಕೆ ಜಿಲ್ಲಾ ಮುಖ್ಯ ರಸ್ತೆ ಇದೆ.

ಇಲ್ಲಿಯ ಜನರ ಮುಖ್ಯ ಆಹಾರ ರಾಗಿಮುದ್ದೆ, ಅಮುಖ್ಯ ಆಹಾರವಾಗಿ ಇಡ್ಲಿ, ದೋಸೆ, ಚಿತ್ರಾನ್ನ, ಉಪ್ಪಿಟ್ಟು ಬಳಸುತ್ತಾರೆ. ವಿಶೇಷ ಊಟವಾಗಿ ಪಾಯಸ, ಒಬ್ಬಟ್ಟು ಮಾಂಸಹಾರ ಇತ್ಯಾದಿ ಬಳಸುತ್ತಾರೆ. ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳ ಜೊತೆಗೆ ಟ್ರಾಕ್ಟರ್ ಲಾರಿ ಬೈಕ್‌ಗಳು ಇವೆ.

ಬಹುತೇಕ ಇಲ್ಲಿಯ ಜನ ಕೃಷಿಕರು, ಇವರು ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಆಹಾರ ಬೆಳೆಯೂ ಇದೆ ಆಗಿದೆ. ಅವರೆ, ಹುರಳಿ, ಹೆಸರುಕಾಳು, ಎಳ್ಳು, ಹುಚ್ಚೆಳ್ಳು, ಇತ್ಯಾದಿಗಳನ್ನು ಉಪಬೆಳೆಗಳಾಗಿಬೆಳೆಯುತ್ತಾರೆ. ತೆಂಗು, ಅಡಿಕೆ, ಹೂವು, ಇಲ್ಲಿನ ವಾಣಿಜ್ಯ ಬೆಳೆಗಳು, ಗ್ರಾಮಸ್ಥರು ಸೀಮೆಹಸುಗಳನ್ನು ಸಾಕಿದ್ದಾರೆ. ಸಮೀಪದ ಡೈರಿಗೆ ಹಾಲು ಮಾರುತ್ತಾರೆ. ಕೊಬ್ಬರಿ, ಅಡಿಕೆ, ಹೂ, ಹಾಗೂ ತೆಂಗಿನ ಕಾಯಿ ಮಾರುತ್ತಾರೆ.

ಈ ಗ್ರಾಮದವರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಒಬ್ಬರು ದ್ವಿತೀಯ ದರ್ಜೆ ಸಹಾಯಕರಾಗಿದ್ದಾರೆ. ಕೆ.ಎಸ್.ಆರ್.ಟಿ.ಸಿ. ಯ ಉದ್ಯೋಗಿ, ಕಂದಾಯ ಇಲಾಖೆ ಉದ್ಯೋಗಿ, ಬೆಸ್ಕಾಂ ನ ನಿವೃತ್ತ ಇಂಜಿನಿಯರ್ ಇತ್ಯಾದಿಗಳು ಇದ್ದಾರೆ. ಗ್ರಾಮದಲ್ಲಿ ಕುಂಬಾರಿಕೆ ಮಾಡುವ ಕುಂಬಾರರು ಇದ್ದಾರೆ. ಇವರು ಮಣ್ಣಿನ ಮಡಿಕೆ, ಗಣೇಶ ಇತ್ಯಾದಿಗಳನ್ನು ಮಾಡುತ್ತಾರೆ. ಬಡಗಿತನ ಮಾಡುವವರು, ಗಾರೆ ಕೆಲಸದವರು ಗ್ರಾಮದಲ್ಲಿದ್ದಾರೆ.

ಆಡಳಿತಾತ್ಮಕವಾಗಿ ಈ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೂ, ಶೆಟ್ಟಿಕೆರೆ ಜಿಲ್ಲಾ ಪಂಚಾಯಿತ್ತಿಕ್ಷೇತ್ರಕ್ಕೂ ಕುಪ್ಪೂರು ತಾಲ್ಲೂಕು ಪಂಚಾಯಿತ್ತಿ ಕ್ಷೇತ್ರಕ್ಕೂ ತುಮಕೂರು ಲೋಕಸಭಾ ಕ್ಷೇತ್ರಕ್ಕೂ ಸೇರುತ್ತದೆ. ಗ್ರಾಮದ ಒಬ್ಬರು ಗ್ರಾಮಪಂಚಾಯಿತ್ತಿ ಸದಸ್ಯರಾಗಿದ್ದಾರೆ. ಗ್ರಾಮಕ್ಕೆ ಉತ್ತಮ ರಸ್ತೆಮಾರ್ಗವಿದೆ. ಇಲ್ಲಿಯ ಬಹುತೇಕರು ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಈ ಗ್ರಾಮದಲ್ಲಿ ಸರಸ್ವತಿ ಮುಂತಾದ ಅನೇಕ ಸ್ತ್ರೀಶಕ್ತಿ ಸಂಘಗಳಿವೆ. ಅನೇಕ ಸ್ವಸಹಾಯ ಸಂಘಗಳು ಇವೆ.

ಗ್ರಾಮದ ಶೇ. ೭೦ ರಷ್ಟು ಜನ ಸಾಕ್ಷರರಾಗಿದ್ದು, ಇಲ್ಲಿ ಅಂಗನವಾಡಿಕೇಂದ್ರ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದೆ. ಶಾಲೆಯಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಇದೆ. ಬಿಸಿಯೂಟ ಹಾಗೂ ಕ್ಷೀರಭಾಗ್ಯ ಯೋಜನೆಗಳೂ ಜಾರಿಯಲ್ಲಿವೆ. ಗ್ರಾಮದಲ್ಲಿ ವೃದ್ಧಾಪ್ಯ, ವಿಧವಾವೇತನ, ಸಂಧ್ಯಾಸುರಕ್ಷಾವೇತನ ಪಡೆಯುವ ಫಲಾನುಭವಿಗಳಿದ್ದಾರೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ ದೇವಸ್ಥಾನ ಬೀರಲಿಂಗೇಶ್ವರ ದೊಡ್ಡಮ್ಮದೇವಿ ದೇವಸ್ಥಾನಗಳಿವೆ. ಯುಗಾದಿ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕೆಂಪರಾಯನ ಹಟ್ಟಿ

ಕೆಂಪರಾಯನಹಟ್ಟಿ ಒಂದು ಮಜರೆ ಗ್ರಾಮವಾಗಿದ್ದು, ತಾಲ್ಲೂಕು ಕೇಂದ್ರದಿಂದ ಈಶಾನ್ಯ ದಿಕ್ಕಿನ ೧೨ ಕಿ.ಮೀ. ದೂರದಲ್ಲಿ ಇದೆ. ಈ ಗ್ರಾಮ ಒಟ್ಟು ಭೌಗೋಳಿಕ ವಿಸ್ತೀರ್ಣ ೨೪೪೪.೩೦ ಚ.ಕಿ.ಮೀ. ವ್ಯಾಪ್ತಿಯಲ್ಲೇ ಸೇರಿದೆ.

ಬಯಲು ಪ್ರದೇಶಕ್ಕೆ ಸೇರಿದ್ದು ಇಲ್ಲಿ ಕಪ್ಪು ಕಲ್ಲು ಕೆಂಪು ಮಣ್ಣು ಕಂಚುಬರುತ್ತದೆ. ಇದು ವ್ಯಕ್ತಿ ಗ್ರಾಮ ಸೂಚಕ ಗ್ರಾಮವಾಗಿದ್ದು, ಕೆಂಪರಾಮಯ್ಯನಿಂದ ಕೆಂಪರಾಯನಹಳ್ಳಿ ಆಗಿದೆ. ಸುತ್ತ ನರಿ, ಚಿರಂಚಿತಜ, ಕಾಡುಹಂದಿ, ತೋಳ, ಮೊಲ ಇತ್ಯಾದಿ ಕಾಡುಪ್ರಾಣಿಗಳು ಕಂಡುಬರುತ್ತವೆ. ಈ ಗ್ರಾಮ ಜನರು ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ಇತ್ಯಾದಿಗಳನ್ನು ಸಾಕುತ್ತಾರೆ. ಈ ಸುತ್ತ ನವಿಲು, ಕಾಗೆ, ಗಿಳಿ, ಮರಕುಟಿಗ, ಸಾಂಬಾರುಕಾಗೆ ಇತ್ಯಾದಿ ಪಕ್ಷಿಗಳು ಕಂಡುಬರುತ್ತವೆ. ಕೆಲವು ಸಮುದಾಯದವರು ಸ್ವಂತ ಉಪಯೋಗಕ್ಕಾಗಿ ಕೋಳಿಗಳನ್ನು ಸಾಕುತ್ತಾರೆ.

ಇಲ್ಲಿ ೫೦೩ ಕಿ.ಮೀ. ನಷ್ಟು ಮಳೆ ಬಿದ್ದ ದಾಖಲೆಯಿದೆ. ಚಳಿಯ ೯ ಡಿ.ಸೆಂ. ನಷ್ಟಿದ್ದು ಬಿಸಿಲು ೨೮.೩೬ ಡಿ.ಸೆಂ. ನಷ್ಟಿರುತ್ತದೆ. ಈ ಗ್ರಾಮದಲ್ಲಿ ಜಾಣೇಹಾರ್ ಕೆರೆ ಹಳ್ಳಿ ಇದೆ. ತೆರೆದ ಬಾವಿ ಇದೆ.

ಸಾಮೂಹಿಕ ರಚನೆಯನ್ನು ಗಮನಿಸಿದಾಗ ಗೊಲ್ಲರು ದೊಡ್ಡ ಸಮುದಾಯದವರಾಗಿದ್ದಾರೆ. ಈ ಗ್ರಾಮದ ಒಟ್ಟು ಜನಸಂಖ್ಯೆ ೩೫೨ ಆಗಿದೆ. ಈ ಗ್ರಾಮದ ಎಲ್ಲರೂ ಕನ್ನಡ ಭಾಷೆಯನ್ನು ಬಳಸುತ್ತಾರೆ.

ಒಟ್ಟು ೯೬ ಮನೆಗಳಿದ್ದು, ಮೇಲ್ಛಾವಣಿಗೆ ಕೆಲವರು ಕುಂಬಾರ ಕಪ್ಪು ಹೆಂಚು ಮತ್ತು ಕೆಲವರು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದಾರೆ. ಈ ಗ್ರಾಮದ ೧೪ ಮನೆಗಳಲ್ಲಿ ಶೌಚಾಲಯ ವ್ಯವಸ್ಥೆಯನ್ನು ಹೊಂದಿದ್ದಾರೆ.

ಜನರ ಬಹುಮುಖ್ಯ ಆಹಾರ ರಾಗಿಮುದ್ದೆ ಆಗಿದೆ. ಉಪ್ಪಿಟ್ಟು ಇಡ್ಲಿ, ಚಿತ್ರಾನ್ನ, ದೋಸೆ ಇತ್ಯಾದಿಗಳು ಅಮುಖ್ಯ ಆಹಾರವಾಗಿದೆ. ಇಲ್ಲಿಯ ಜನ ಪಾಯಸ, ಒಬ್ಬಟ್ಟು ಹಾಗೂ ಕೆಲವರು ಮಾಂಸಹಾರವನ್ನು ವಿಶೇಷ ಆಹಾರವಾಗಿ ಬಳಸುತ್ತಾರೆ. ಸಾಂಪ್ರದಾಯಿಕ ಎತ್ತಿನಗಾಡಿಗಳ ಜೊತೆಗೆ ಆಧುನಿಕ ಟ್ರಾಕ್ಟರ್, ಬೈಕ್‌ಗಳೂ ಇವೆ. ಗ್ರಾಮಕ್ಕೆ ಚರಂಡಿ ವ್ಯವಸ್ಥೆ ರಸ್ತೆ ವ್ಯವಸ್ಥೆ ಇದೆ.

ಬಹುತೇಕ ಜನ ಕೃಷಿಯನ್ನು ಅವಲಂಬಿಸಿದ್ದು, ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ರಾಗಿಯೇ ಇವರ ಆಹಾರ ಬೆಳೆಯಾಗಿದೆ. ಇವರು ಉಪಬೆಳೆಯಾಗಿ ಹುರುಳಿ, ತೊಗರಿ, ಅವರೆ, ಅಲಸಂಡೆ, ಉದ್ದು, ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಇಲ್ಲಿಯ ಜನರ ವಾಣಿಜ್ಯ ಬೆಳೆ ತೆಂಗು ಆಗಿದೆ. ಇಲ್ಲಿಯ ಮುಖ್ಯ ವ್ಯಾಪಾರಿ ಸರಕು ತೆಂಗಿನಕಾಯಿ ಹಾಗೂ ಕೊಬ್ಬರಿ ಆಗಿದೆ.

ಇಬ್ಬರು ಶಿಕ್ಷಕರು ಆಗಿದ್ದಾರೆ. ಕೆಲವರು ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಮಾಡುತ್ತಿದ್ದಾರೆ.

ಕಂದಿಕೆರೆ ಹೋಬಳಿ ಈ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೂ ಕಂದಿಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೂ ತೀರ್ಥಪುರ ತಾಲ್ಲೂಕು ಪಂಚಾಯಿತಿ ಕ್ಷೇತ್ರಕ್ಕೂ ರಾಮನಹಳ್ಳಿ ಗ್ರಾಮ ಪಂಚಾಯಿತಿ ಕ್ಷೇತ್ರಕ್ಕೂ ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೂ ಸೇರಿರುತ್ತದೆ. ಗ್ರಾಮದ ಬಹುತೇಕ ಜನ ಸಂಪರ್ಕಕ್ಕಾಗಿ ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ.

ಕೆಂಪರಾಯನಹಟ್ಟಿ ಶೇ. ೭೦ ರಷ್ಟು ಸಾಕ್ಷರರಿದ್ದು, ಒಂದು ಅಂಗನವಾಡಿ ಕೇಂದ್ರ ಇದೆ. ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದೆ. ವೃದ್ಧಾಪ್ಯ ವೇತನ, ವಿಕಲಚೇತನ ವೇತನ, ವಿಧವಾವೇತನ, ಪಡೆಯುವ ೧೪ ಫಲಾನುಭವಿಗಳಿದ್ದಾರೆ. ಇಲ್ಲಿ ಚಿಕ್ಕ ಅಂಗಡಿಗಳಿವೆ.

ಗ್ರಾಮದವರು ಮಹಾನವಮಿ ಯುಗಾದಿ, ದೀಪಾವಳಿ, ಗೌರಿ–ಗಣೇಶ, ಬಸವ ಜಯಂತಿ ಇತ್ಯಾದಿ ಹಬ್ಬಗಳನ್ನು ಮಾಡುತ್ತಾರೆ.

## ಕೊಡಲಾಗರ

ದುಗಡಿಹಳ್ಳಿ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಕೊಡಲಾಗರ ಗ್ರಾಮವು ಒಂದು ಜನವಸತಿ ಹಾಗೂ ಕಂದಾಯ ಗ್ರಾಮ ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೂ ೬ ಕಿ.ಮೀ. ದೂರದಲ್ಲಿ ಈ ಗ್ರಾಮವಿದೆ. ಕೊಡಲಿ + ಆಗರ ಎಂಬ ಪದಗಳಿಂದ ಕೊಡಲಾಗರ ಎಂಬ ನಾಮ ನಿವೃತ್ತಿ ಆಗಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೮೭.೧೬ ಹೆಕ್ಟೇರ್ ಆಗಿದೆ. ಬಯಲುನಾಡಿನಲ್ಲಿ ಬರುವ ಈ ಗ್ರಾಮವು ಕಪ್ಪು ಬಿಳಿ ಮಣ್ಣು ಕಪ್ಪು ಬಿಳಿ ಕಲ್ಲನ್ನು ಹೊಂದಿದೆ. ಸಮೀಪದಲ್ಲಿ 'ಕರೆಕಲ್ಲುಮಲ್ಲಿ' ಇದೆ. ಒಂದು ಗುಂಡುತೋಪು ಇದೆ.

ಕಾಡುಹಂದಿ, ನರಿ, ಮೊಲ, ತೋಳ ಇತ್ಯಾದಿ ಪ್ರಾಣಿಗಳು ಕಂಡುಬರುತ್ತವೆ. ನವಿಲು, ಗಿಳಿ, ಕಾಗೆ, ಬೆಳವನಹಕ್ಕಿ, ಸೋಬಾನದಹಕ್ಕಿ, ಎಣ್ಣೆಗೊರವ, ಸಂಬಾರಕಾಗೆ, ಗುಬ್ಬಚ್ಚಿ, ಇತ್ಯಾದಿ ಪಕ್ಷಿಗಳಿವೆ. ಹಸು,ಎತ್ತು, ಎಮ್ಮೆ, ಕುರಿ, ಮೇಕೆ, ನಾಯಿಗಳನ್ನು ಸಾಕುತ್ತಾರೆ. ಕೆಲವರು ತೋಳಗಳನ್ನು ಸ್ವಂತಕ್ಕಾಗಿ ಸಾಕುತ್ತಾರೆ. ಹವಾಮಾನ ಗಮನಿಸಿದಾಗ ೧೫.೨೦ ಡಿ.ಸೆಂ. ಚಳಿಯೂ, ೨೬-೩೬ ಡಿ.ಸೆಂ.ಬಿಸಿಲೂ ಕಂಡುಬರುತ್ತವೆ. ೫೩೧.೨ ಮಿ.ಮೀ. ನ ಆಸುಪಾಸು ಮಳೆಬಿದ್ದ ದಾಖಲೆ ಇದೆ. ಗ್ರಾಮಕ್ಕೆ 'ದೊಡ್ಡಜ್ಜಿ ಕೆರೆ' ಎಂಬ ಕೆರೆ ಇದೆ. 'ಊರಮುಂದಲಕಟ್ಟೆ' ಎನ್ನುವ ಒಂದುಕಟ್ಟೆ ಇದೆ. ಈ ಸುತ್ತಾ ಚಿಕ್ಕಟ್ಟೆಹಳ್ಳಿ ಕೋಡಿಹಳ್ಳಿ, ಚೌಳಹಳ್ಳಿ ಎಂಬ ಹಳ್ಳಗಳು ಹರಿಯುತ್ತದೆ. ಗ್ರಾಮದಲ್ಲಿ ಒಂದು ಸಾದಾವಿ (ತೆರೆದಬಾವಿ) ಇದೆ. ೪ ಕೈಪಂಪುಗಳು ೫೦ ಕ್ಕೂ ಹೆಚ್ಚು ಕೊಳವೆ ಬಾವಿಗಳು ಇವೆ. ಕುಡಿಯುವ ನೀರಿಗಾಗಿ ೬ ಸಿಸ್ಟನ್‌ಗಳನ್ನು ಇಟ್ಟಿದ್ದು, ಅವುಗಳಿಗೆ ೨೪ ನಲ್ಲಿಗಳನ್ನು ಜೋಡಿಸಲಾಗಿದೆ.

ಸಾಮೂಹಿಕ ರಚನೆಯನ್ನು ನೋಡಿದಾಗ ವೀರಶೈವ ಸಮುದಾಯದವರು ಪ್ರಧಾನವಾಗಿದ್ದು, ಶ್ರೀವೈಷ್ಣವ, ನಾಯಕರು, ಮಡಿವಾಳರು, ಸಣ್ಣ ಸಮುದಾಯದವರಾಗಿದ್ದಾರೆ. ಎಲ್ಲರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ಊರಲ್ಲಿ ಅಗಸರ ಮಾಡಿ ಓಣಿ, ಕೆರೆ ಹಾದಿ ಓಣಿ ಎಂಬುವುಗಳಿವೆ.

೨೦೧೧ ರ ಜನಗಣತಿ ಪ್ರಕಾರ ಜನಸಂಖ್ಯೆ ೪೧೮ ಆಗಿದೆ. ಇಲ್ಲಿ ಒಟ್ಟು ೮೨ ಮನೆಗಳಿದ್ದು, ಕಲ್ಲು ಹಾಗೂ ಮಣ್ಣನ್ನು ಬಳಸಿ ಮನೆ ಕಟ್ಟಿದ್ದಾರೆ. ಮೇಲ್ಛಾವಣೆಗೆ ಕೆಲವರು ಕಪ್ಪು ಹೆಂಚು ಕೆಲವರು ಕೆಂಪು ಹೆಂಚನ್ನು ಹೊದಿಸಿದ್ದಾರೆ.

ಇಲ್ಲಿನ ಜನರ ಮುಖ್ಯ ಆಹಾರ ರಾಗಿ ಮುದ್ದೆ ಹಾಗೂ ಅನ್ನ, ಉಪ್ಪಿಟ್ಟು, ಚಿತ್ರಾನ್ನ, ಇಡ್ಲಿ, ದೋಸೆ, ರೊಟ್ಟಿ, ಅಮುಖ್ಯ ಆಹಾರಗಳು ವಿಶೇಷ ಊಟವೆಂದರೆ ಪಾಯಸ, ಒಬ್ಬಟ್ಟು, ಕೆಲವರು ಮಾಂಸಹಾರ, ಸಾಂಪ್ರದಾಯಿಕ ಎತ್ತಿನಗಾಡಿ, ಬೈಸಿಕಲ್‌ಗಳನ್ನು ಹೊಂದಿರುವುದರ ಜೊತೆಗೆ ಆಧುನಿಕ ಟ್ರಾಕ್ಟರ್ ಬೈಕುಗಳು, ಕಾರುಗಳು, ಟ್ರಾಕ್ಸ್‌ಗಳನ್ನು ಹೊಂದಿದ್ದಾರೆ. ಚರಂಡಿ ಹಾಗೂ ರಸ್ತೆ ಇದೆ.

ಬಹುತೇಕ ಜನರ ವೃತ್ತಿ ಕೃಷಿ ಆಗಿದೆ. ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಆಹಾರ ಬೆಳೆಯೂ ರಾಗಿಯೇ ಆಗಿದೆ. ಉಪಬೆಳೆಗಳಾಗಿ ಹುರಳಿ, ಹೆಸರು, ಉದ್ದು, ತೊಗರಿ, ಅಲಸಂಡೆ, ತರಣಿಕಾಳು ಇತ್ಯಾದಿ ಬೆಳೆಯುತ್ತಾರೆ. ತೆಂಗು ಹಾಗೂ ಅಡಿಕೆಗಳು ಇಲ್ಲಿನ ವಾಣಿಜ್ಯ ಬೆಳೆಗಳು ಒಂದು ಖಾಸಗಿ ಡೈರಿ ಇದ್ದು, ದಿನಕ್ಕೆ ೩೬೦ ಲೀಟರ್ ಹಾಲನ್ನು ಶೇಖರಿಸುತ್ತದೆ. ಕೆರೆ ತುಂಬಿದ ಸಂದರ್ಭದಲ್ಲಿ ಮೀನು ಕೃಷಿ ಮಾಡಲಾಗುತ್ತದೆ. ತೆಂಗಿನಕಾಯಿ ಹಾಗೂ ಕೊಬ್ಬರಿ ಇಲ್ಲಿನ ಮುಖ್ಯ ವ್ಯಾಪಾರಿ ಸರಕು, ಗ್ರಾಮದವರು ಉಪನ್ಯಾಸಕರಾಗಿ, ಶಿಕ್ಷಕರಾಗಿ, ವಕೀಲರಾಗಿ ಪೋಲಿಸರಾಗಿ, ಸರ್ವೆ ಇಲಾಖೆಯ ಸಹಾಯಕವಾಗಿ ಹೀಗೆ ವಿವಿಧ ಸರ್ಕಾರಿ ಹುದ್ದೆಗಳಲ್ಲಿ ೧೫ ಕ್ಕೂ ಹೆಚ್ಚು ಜನ ಕೆಲಸ ನಿರ್ವಹಿಸುತ್ತಿದ್ದಾರೆ. ಒಂದಷ್ಟು ಜನ ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ದುಡಿಮೆ ಮಾಡುತ್ತಿದ್ದಾರೆ. ಗ್ರಾಮದಲ್ಲಿ ಬಡಗಿ ಕೆಲಸ ಮಾಡುವವರು ಇದ್ದಾರೆ.

ಶೆಟ್ಟಿಕೆರೆ ಹೋಬಳಿ ಈ ಗ್ರಾಮವು ತುಮಕೂರು ಲೋಕಸಭಾ ಕ್ಷೇತ್ರದಲ್ಲೂ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲೂ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರದಲ್ಲೂ, ಹೊನ್ನೆಬಾಗಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರದಲ್ಲೂ, ದುಗಡಿಹಳ್ಳಿ ಗ್ರಾಮಪಂಚಾಯ್ತಿಯಲ್ಲೂ ಇದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಾಗಿದ್ದಾರೆ. ಒಬ್ಬರು ಗ್ರಾಮ ಪಂಚಾಯ್ತಿಯಲ್ಲಿ ನೌಕರರು ಇದ್ದಾರೆ. ಸಂಚಾರಿ ದೂರವಾಣಿಗಳನ್ನು ಸಂಪರ್ಕವಾಗಿ ಬಳಸುತ್ತಾರೆ.

ಶ್ರೀಮಹಾಲಕ್ಷ್ಮೀ ಆದಿಶಕ್ತಿ, ಅನ್ನಪೂರ್ಣೇಶ್ವರಿ, ಸರಸ್ವತಿ ಎಂಬ ನಾಲ್ಕು ಸ್ತ್ರೀಶಕ್ತಿ ಸಂಘಗಳು ಇತರ ನಾಲ್ಕು ಸ್ವಸಹಾಯ ಸಂಘಗಳು ಇವೆ. ಅಂಗನವಾಡಿ ಕೇಂದ್ರ, ಹಾಗೂ ಸರ್ಕಾರ ಕಿರಿಯ ಪ್ರಾಥಮಿಕ ಪಾಠಶಾಲೆಯೂ ಇದೆ. ಶೇ. ೭೨ ರಷ್ಟು ಸಾಕ್ಷರರು ಇದ್ದಾರೆ.

ಬಸವರಾಜು ಎಂಬ ೬೦ ವರ್ಷ ವಯಸ್ಸಿನ ವೀರಶೈವ ಸಮುದಾಯದ ವ್ಯಕ್ತಿ ದನಗಳ ವಿವಿಧ ಕಾಯಿಲೆಗಳಿಗೆ (ಸೆಲೆ, ಚಪ್ಪೆರೋಗ, ಜರಸಲು, ಮಳೆ ಕಾಯಿಲೆ) ನಾಟಿ ಪದ್ಧತಿ ಮೂಲಕ ಔಷಧಿ ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನವೇತನ, ವಿಧವಾವೇತನ ಪಡೆಯುವ ೧೪ ಫಲಾನುಭವಿಗಳಿದ್ದಾರೆ.

ಸಿದ್ದರಾಮಯ್ಯ ಎಂಬುವರ ಗದ್ದೆ ಜಮೀನಿನಲ್ಲಿ ಐತಿಹಾಸಿಕ ಮಾಸ್ತಿಕಲ್ಲು ಇದೆ. ರಂಗನಾಥಸ್ವಾಮಿ ದೇವಾಲಯದಲ್ಲಿ ಶಿಲಾಶಾಸನ ಇದೆ. ಇಲ್ಲಿ ರಂಗನಾಥಸ್ವಾಮಿ ದೇವಾಲಯ, ಕಂಬದ ನರಸಿಂಹಸ್ವಾಮಿ ದೇವಾಲಯ ಬಸವೇಶ್ವರ ದೇವಾಲಯ, ರಂಗಸ್ವಾಮಿ ದೇವಾಲಯಗಳಿವೆ. ರಾಮನವಮಿ ಸಂದರ್ಭದಲ್ಲಿ ಜಾತ್ರೆ ಮಾಡುತ್ತಾರೆ.

ಜಾತ್ರೆಯಲ್ಲಿ ತೇರು, ನೂರಾಒಂದೆಡೆ ಸೇವೆ, ಗಂಗಸ್ನಾನ, ಅನ್ನಸಂತರ್ಪಣೆ ಇರುತ್ತದೆ. ಯುಗಾದಿ,ಮಹಾನವಮಿ, ದೀಪಾವಳಿ, ಗೌರಿ, ಮಾರಿಹಬ್ಬ ಇತ್ಯಾದಿ ಹಬ್ಬಗಳನ್ನಾಚರಿಸುತ್ತಾರೆ. ದ್ರಾಕ್ಷಿಯಮ್ಮ, ಪಾರ್ವತಮ್ಮ, ಶಿವಗಂಗಮ್ಮ, ಸುವರ್ಣ ಲಲಿತ, ಭಾಗ್ಯಮ್ಮ ಎಂಬುವವರು ಸೋಬಾನೆ ಹಾಗೂ ಜನಪದ ಹಾಡುಗಳನ್ನು ಹಾಡುತ್ತಾರೆ. ಇಲ್ಲಿ ಜೋಡಿಬಸವೇಶ್ವರ ಹಾಗೂ ವಾಲ್ಮೀಕಿ ಯುವಕರ ಸಂಘಗಳಿವೆ.

## ಕಾರೇಹಳ್ಳಿ

ಕಾರೇಹಳ್ಳಿ ಕಂದಾಯ ಗ್ರಾಮ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೫ ಕಿ.ಮೀ. ದೂರದಲ್ಲಿ ಇದೆ. ಈ ಗ್ರಾಮದ ಪರಿಸರದಲ್ಲಿ ಕಾರೇಗಿಡಗಳು ಹೆಚ್ಚಾಗಿದ್ದವು ಆದ್ದರಿಂದ ಈ ಗ್ರಾಮಕ್ಕೆ ಕಾರೇಹಳ್ಳಿ ಎಂಬ ಹೆಸರು ಬಂದಿದೆ. ಈ ಒಟ್ಟು ಭೌಗೋಳಿಕ ವಿಸ್ತೀರ್ಣವು ಕಾರೇಹಳ್ಳಿ ಒಟ್ಟು ಭೌಗೋಳಿಕ ವಿಸ್ತೀರ್ಣವಾದ ೪೧೬.೨೯ ಹೆಕ್ಟೇರ್ ವ್ಯಾಪ್ತಿಯಲ್ಲೇ ಸೇರಿದೆ. ಗೊಲ್ಲರ ಹಟ್ಟಿ, ಕಾಟೇನಹಳ್ಳಿ ಸೇರಿವೆ. ಬಯಲು ನಾಡಾಗಿದ್ದು ಬಿಳಿಕಲ್ಲು, ಬಿಳಿ ಮಣ್ಣನ್ನು ಹೊಂದಿವೆ. ಸುತ್ತಮುತ್ತ ಕಾಡುಹಂದಿ ಕಂಕನರಿ, ತೋಳ, ಮೊಲ ಇತ್ಯಾದಿ ಕಾಡು ಪ್ರಾಣಿಗಳು ಕಂಡುಬರುತ್ತವೆ. ಈ ಗ್ರಾಮದ ಜನತಾ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಇತ್ಯಾದಿ ಪ್ರಾಣಿಗಳನ್ನು ಸಾಕುತ್ತಾರೆ. ಈ ಸುತ್ತ ನವಿಲು ಕಾಗೆ, ಗುಬ್ಬಚ್ಚಿ, ಸಂಬಾರಕಾಗೆ ಬೆಳವನಹಕ್ಕಿ, ಸೋಬಾನದ ಹಕ್ಕಿ, ಗೂಬೆ ಇತ್ಯಾದಿ ಪಕ್ಷಿಗಳು ಕಂಡು ಬರುತ್ತವೆ. ಕೆಲವು ಸಮುದಾಯದವರು ಸ್ವಂತ ಉಪಯೋಗಕ್ಕಾಗಿ ಕೋಳಿಯನ್ನು ಸಾಕುತ್ತಾರೆ.

೫೦೮.೦೮ ಮಿ.ಮೀ. ಮಳೆ ಬಿದ್ದ ದಾಖಲೆ ಇದೆ. ಚಳಿಯು ೯ ಡಿ.ಸೆಂ. ನಷ್ಟಿದ್ದು ಬಿಸಿಲು ೨೬-೩೬ ಡಿ.ಸೆಂ. ನಷ್ಟಿದೆ. ಕಾರೇಹಳ್ಳಿ ಕೆರೆ ಇದೆ. ಕಿರು ನೀರು ಸರಬರಾಜು ಯೋಜನೆ ಇದೆ.

ವೀರಶೈವ ದೊಡ್ಡ ಸಮುದಾಯದವರಾಗಿದ್ದು, ಹಾಲುಮತ, ಆದಿಕರ್ನಾಟಕ ಸಣ್ಣ ಸಮುದಾಯದವರಾಗಿದ್ದಾರೆ. ಜನರು ಕನ್ನಡವನ್ನು ಮಾತನಾಡುತ್ತಾರೆ. ಏರಿ ಹಿಂದಲ ಓಣಿ ಇದೆ. ೪೧೪ ಜನಸಂಖ್ಯೆ ಇದೆ. ೯೨ ಮನೆಗಳಿವೆ. ಅದರಲ್ಲಿ ಕಲ್ಲಿನ ಮತ್ತು ಮಣ್ಣಿನಿಂದ ಕಟ್ಟಿದ ಮನೆಗಳಿವೆ. ಆಮನೆಗಳ ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ೧೦ ಮನೆಗಳಲ್ಲಿ ಶೌಚಾಲಯಗಳನ್ನು ಹೊಂದಿದ್ದಾರೆ.

ಜನರ ಮುಖ್ಯ ಆಹಾರ ರಾಗಿಮುದ್ದೆ ಅನ್ನ ಆಗಿದೆ. ಉಪ್ಪಿಟ್ಟು, ಚಿತ್ರಾನ್ನ, ದೋಸೆ, ಇಡ್ಲಿ ಇತ್ಯಾದಿಗಳು ಅಮುಖ್ಯ ಆಹಾರವಾಗಿದೆ. ಪಾಯಸ, ಒಬ್ಬಟ್ಟು ಹಾಗೂ ಕೆಲವರು ಮಾಂಸಹಾರವನ್ನು ವಿಶೇಷವಾಗಿ ಸೇವಿಸುತ್ತಾರೆ. ಜನರ ಸಾಂಪ್ರದಾಯಿಕ ವಾಹನ ಎತ್ತಿನಗಾಡಿ ಹಾಗೂ ಆಧುನಿಕವಾಗಿ ಟ್ರಾಕ್ಟರ್, ಬೈಕು, ಕಾರುಗಳನ್ನು ಬಳಸುತ್ತಾರೆ. ರಸ್ತೆ ಹಾಗೂ ಚರಂಡಿ ವ್ಯವಸ್ಥೆಯನ್ನು ಹೊಂದಿದ್ದಾರೆ.

ಮುಖ್ಯ ಬೆಳೆ ರಾಗಿ ಆಗಿದೆ. ಆಹಾರ ಬೆಳೆಯು ಆಗಿದೆ. ಹುರುಳಿ, ಹೆಸರುಕಾಳು, ಉದ್ದು, ಎಳ್ಳು, ಅವರೆ, ತೊಗರಿ, ಅಲಸಂಡೆ, ತರಣಿ ಇತ್ಯಾದಿಗಳು ಉಪ ಬೆಳೆಯಾಗಿದೆ. ತೆಂಗನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ. ಈ ಗ್ರಾಮದಲ್ಲಿ ಆರೋಗ್ಯ ಎಂಬ ಖಾಸಗಿ ಡೈರಿ ಇದೆ. ಈ ಗ್ರಾಮದ ಜನರ ಮುಖ್ಯ ವ್ಯಾಪಾರಿ ಸರಕುಗಳು ತೆಂಗಿನಕಾಯಿ ಹಾಗೂ ಕೊಬ್ಬರಿ ಆಗಿದೆ.

ಶಿಕ್ಷಕರು ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕೆಲವರು ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಗ್ರಾಮದಲ್ಲಿ ಒಟ್ಟು ೧ ಸರ್ಕಾರಿ ನೌಕರಿದ್ದು, ೧೫ ಮಂದಿ ಖಾಸಗಿ ನೌಕರರಿದ್ದಾರೆ. ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೂ, ಶೆಟ್ಟಿಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೂ, ಮಾಳಿಗೆಹಳ್ಳಿ ತಾಲ್ಲೂಕು ಪಂಚಾಯಿತಿ ಕ್ಷೇತ್ರಕ್ಕೂ, ದುಗಡಿಹಳ್ಳಿ ಗ್ರಾಮಪಂಚಾಯಿತಿ ಕ್ಷೇತ್ರಕ್ಕೂ, ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ರಸ್ತೆ ಮಾರ್ಗ ಇದೆ. ಈ ಗ್ರಾಮದ ಜನರು ಸಂಚಾರಿ ದೂರವಾಣಿಗಳನ್ನು ಸಂಪರ್ಕಕ್ಕಾಗಿ ಬಳಸುತ್ತಾರೆ. ಜನರು ಶ್ರೀಲಕ್ಷ್ಮೀ ಶ್ರೀದೇವಿ, ಶ್ರೀಮಾತಾ ಎಂಬ ಶ್ರೀಶಕ್ತಿ ಸಂಘಗಳಿವೆ.

ಕಾರೇಹಳ್ಳಿ ಶೇ. ೭೫ ರಷ್ಟು ಸಾಕ್ಷರರಿದ್ದಾರೆ. ಈ ಗ್ರಾಮದಲ್ಲಿ ಅಂಗನವಾಡ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠ ಶಾಲೆ ಇದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಉಚಿತ ಪುಸ್ತಕ ಸಮವಸ್ತ್ರ ಸೌಲಭ್ಯಗಳಿವೆ.

ವೃದ್ಧಾಪ್ಯ ವೇತನ, ವಿಕಲಚೇತನ ವೇತನ, ವಿಧವಾ ವೇತನ ಪಡೆಯುವ ೧೪ ಫಲಾನುಭವಿಗಳಿದ್ದಾರೆ. ಈ ಗ್ರಾಮದಲ್ಲಿ ಶ್ರೀ ಲಕ್ಷ್ಮೀರಂಗನಾಥ ಸ್ವಾಮಿ ದೇವಾಲಯ ಇದೆ. ಈ ಗ್ರಾಮದಲ್ಲಿ ಯುಗಾದಿ, ಮಹಾನವಮಿ, ಶಿವರಾತ್ರಿ, ಗೌರಿ-ಗಣೇಶ ಹಬ್ಬಗಳನ್ನು ಆಚರಿಸುತ್ತಾರೆ. ಹಾಗೂ ಧರ್ಮಸ್ಥಳ ಸ್ವಸಹಾಯ ಸಂಘಗಳಿವೆ.

## ಕಂಟಲಗೆರೆ

ಕಂಟಲಗೆರೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ಹನ್ನೊಂದು ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೬.೯ ಹೆಕ್ಟೇರ್.

ಕಂಟಲಗೆರೆ ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಜೆ.ಸಿ. ಪುರ ಗ್ರಾಮ ಪಂಚಾಯಿತಿಗೆ ಸೇರಿದೆ. ಗ್ರಾಮದಲ್ಲಿ ಒಬ್ಬರು ಗ್ರಾಮಪಂಚಾಯಿತಿ ಸದಸ್ಯರಿದ್ದಾರೆ. ತಾಲ್ಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಲ್ಲಿ ತಹಶೀಲ್ದಾರ್ ಕಛೇರಿ ಇದೆ. ಚಿಕ್ಕನಾಯಕನಹಳ್ಳಿ ಗ್ರಾಮಾಂತರ ಪೋಲಿಸ್ ಠಾಣೆ ಸರಹದ್ದಿಗೆ ಸೇರಿದೆ.

ರಸ್ತೆ ಸಂಚಾರಕ್ಕೆ ಯಾವುದೇ ಬಸ್ಸುಗಳ ಸೌಲಭ್ಯವಿರುವುದಿಲ್ಲ. ಸ್ಥಿರ ದೂರವಾಣಿ ಸಂಪರ್ಕ ವ್ಯವಸ್ಥೆಯೂ ಇರುವುದಿಲ್ಲ. ಪ್ರತಿ ಮನೆಯಲ್ಲಿಯೂ ಸಂಚಾರಿ ದೂರವಾಣಿಗಳಿವೆ.

ಕೆಂಪು ಮಣ್ಣನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ರಾಗಿ ಮುಖ್ಯಬೆಳೆಯಾಗಿದ್ದು, ತೊಗರಿ, ಹೆಸರು, ಉರುಳಿ, ಉದ್ದು, ಅವರೆ ಉಪಬೆಳೆಗಳಾಗಿವೆ. ತೆಂಗು ಮತ್ತು ಅಡಿಕೆ ತೋಟಗಾರಿಕಾ ಮತ್ತು ವಾಣಿಜ್ಯ ಬೆಳೆಗಳಾಗಿವೆ.

೫೦೦–೬೦೦ ಅಡಿ ಆಳದ ೩೦ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಿಗೆ ನೀರೊದಗಿಸುತ್ತಿವೆ. ಪಶ್ಚಿಮ ಭಾಗದಲ್ಲಿ ಕೆರೆ ಇದ್ದು, ಕೆರೆಯ ಬದಿಯಲ್ಲಿ ಹಳೆಯದಾದ ಕಲ್ಲಿನಿಂದ ಕಟ್ಟಿದ ತೆರೆದ ಬಾವಿ ಇದೆ. ಆದರೆ ಕೆರೆ ಮತ್ತು ಬಾವಿಯಲ್ಲಿ ನೀರಿಲ್ಲದೆ ಸಂಪೂರ್ಣವಾಗಿ ಬತ್ತಿಹೋಗಿವೆ.

ಆದಿಕರ್ನಾಟಕ ಸಮುದಾಯದವರು ಪ್ರಧಾನವಾಗಿದ್ದು, ಕುರುಬರು, ಸರ್ಪಒಕ್ಕಲಿಗರು, ಈಡಿಗರು, ದೊಂಬರು, ಲಿಂಗಾಯಿತರು ಮತ್ತು ಆದಿ ದ್ರಾವಿಡ ಸಮುದಾಯಗಳು ಕಿರು ಸಮುದಾಯಗಳಾಗಿವೆ. ಒಟ್ಟು ೪೩ ಮನೆಗಳನ್ನು ಹೊಂದಿರುವ ಇತ್ತೀಚಿನ ಜನಗಣತಿಯ ಪ್ರಕಾರ ೧೬೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ.

ಕಾಂಕ್ರೀಟ್ ಮನೆಗಳು ಮಣ್ಣಿನ ಮನೆಗಳು, ಸೀಮೆಹೆಂಚಿನ ಮನೆಗಳು, ಮತ್ತು ಗುಡಿಸಲುಗಳಿವೆ. ಪ್ರಮುಖ ಆಹಾರ ಪದ್ಧತಿ ರಾಗಿಮುದ್ದೆ ಮತ್ತು ಅನ್ನ. ಜನತಾ, ಆಶ್ರಯ ವಸತಿ ಯೋಜನೆಯ ೧೦ ಕುಟುಂಬಗಳಿವೆ.

ಸಾಂಪ್ರದಾಯಿಕ ಹೈನುಗಾರಿಕೆ ಅಲ್ಪಪ್ರಮಾಣದಲ್ಲಿದ್ದು, ಆಧುನಿಕ ಡೈರಿ ವ್ಯವಸ್ಥೆ ಇದೆ. ಹಾಲು ಉತ್ಪಾದಕರ ಸಹಕಾರ ಸಂಘವು ಪ್ರತಿದಿನ ೨೦೦ ಲೀಟರ್ ಹಾಲು ಸಂಗ್ರಹಿಸುತ್ತಿದ್ದು ಆರ್ಥಿಕ ಚೇತರಿಕೆಗೆ ಕಾರಣವಾಗಿದೆ. ಮೀನುಗಾರಿಕೆ ಕಂಡುಬರುವುದಿಲ್ಲ. ಪೋಲಿಸ್ ಇಲಾಖೆ, ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ೩ ಮಂದಿ ಸರ್ಕಾರಿ ನೌಕರರು, ೧೦ ಮಂದಿ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಗುಡಿ ಕೈಗಾರಿಕೆ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಗಳು ಕಂಡುಬರುವುದಿಲ್ಲ.

ಒಂದು ಅಂಗನವಾಡಿ ಕೇಂದ್ರವಿದ್ದು ಇಬ್ಬರು ಕಾರ್ಯಕರ್ತೆಯರಿದ್ದಾರೆ. ಒಟ್ಟು ೦೮ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ೧ ನೇ ತರಗತಿಯಿಂದ ೫ ನೇ ತರಗತಿಯವರೆಗೆ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಸೌಲಭ್ಯಗಳಿವೆ.

ವಾರ್ಷಿಕ ಸರಾಸರಿ ೫೦೦ ಮಿ.ಮೀ. ಮಳೆಯಾಗುತ್ತಿದ್ದು ಹವಾಮಾನ ವೈಫರೀತ್ಯದಿಂದಾಗಿ ಕಳೆದ ಹತ್ತು ವರ್ಷಗಳಿಂದ ಜಲಕ್ಷಾಮ ಮತ್ತು ಬರಗಾಲಕ್ಕೆ ತುತ್ತಾಗಿದೆ.

ಆಂಜನೇಯ, ಮುದಿಲಿಂಗ, ಲಕ್ಷ್ಮೀದೇವರು, ಯಲ್ಲಮ್ಮ ದೇವರು ಎಂಬ ನಾಲ್ಕು ದೇವಾಲಯಗಳಿವೆ. ೦೩ ಸಣ್ಣ ಚಿಲ್ಲರೆ ಅಂಗಡಿಗಳು ಇವೆ. ಸಾಂಪ್ರದಾಯಿಕ ಉದ್ಯೋಗಿಗಳಾದ ಮರಗೆಲಸ ಮಾಡುವವರು ೭ ಜನರಿದ್ದಾರೆ. ಗ್ರಾಮದ ಸಾಕ್ಷರತೆ ೬೧.೪ ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಪ್ಯವೇತನ, ವಿಧವಾ ವೇತನ, ಅಂಗವಿಕಲ ವೇತನಗಳನ್ನು ಪಡೆಯುವ ೧೦ ಫಲಾನುಭವಿಗಳಿದ್ದಾರೆ. ೩ ಸ್ತ್ರೀ ಶಕ್ತಿ ಸಂಗಗಳಿದ್ದು ಗ್ರಾಮದ ಜನರು ಕಿರು ಹಣಕಾಸು ಸಂಸ್ಥೆಗಳಿಂದ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲಸೌಲಭ್ಯ ಪಡೆಯುತ್ತಿದ್ದಾರೆ. ಉಡಸಮ್ಮನ ಜಾತ್ರೆ, ಆರತಿ, ಬಾನ, ಮಡೆ, ಹರಕೆ ಸಂಪ್ರದಾಯಗಳೊಂದಿಗೆ ವಿಜೃಂಭಣೆಯಿಂದ ನಡೆಯುತ್ತದೆ.

## ಕಂಟಲಗೆರೆ ಎ.ಕೆ. ಕಾಲೋನಿ

ಕಂಟಲಗೆರೆ ಎ.ಕೆ. ಕಾಲೋನಿಯು, ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹನ್ನೊಂದು ಕಿ.ಮೀ. ದೂರದಲ್ಲಿದೆ. ಇದು ಮುಖ್ಯ ಗ್ರಾಮ ಕಂಟಲಗೆರೆಗೆ ಹೊಂದಿಕೊಂಡೇ ಇದೆ. ಆದಿ ಕರ್ನಾಟಕ ಜನಾಂಗದವರು ಪ್ರತ್ಯೇಕವಾಗಿ ಜನವಸತಿ ನಿರ್ಮಿಸಿಕೊಂಡಿದ್ದರಿಂದಾಗಿ ಮಾದಿಗರ ಹಟ್ಟಿ ಎಂದು

ಕರೆಯುತ್ತಾರೆ. ಎ.ಕೆ. ಕಾಲೋನಿಯಲ್ಲಿ ೫೭ ಮನೆಗಳಿದ್ದು, ೧೯೬ ಜನಸಂಖ್ಯೆ ಹೊಂದಿವೆ.

ಇಲ್ಲಿನ ಮನೆಗಳು ಹೆಂಚಿನ, ಸೀಟಿನ, ಮಾಳಿಗೆಯ ಸ್ವರೂಪದಲ್ಲಿವೆ. ಈ ಮನೆಗಳು ಸರ್ಕಾರ ವಸತಿ ಯೋಜನೆಗಳಾದ ಜನತಾ, ಆಶ್ರಯ ಅಂಬೇಡ್ಕರ್ ವಸತಿ ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ಉಚಿತ ಭಾಗ್ಯಲಕ್ಷ್ಮೀ ವಿದ್ಯುತ್ ಸಂಪರ್ಕ ಹೊಂದಿದ್ದಾರೆ. ೧೨ ಮನೆಗಳಲ್ಲಿ ಶೌಚಾಲಯದ ಸೌಲಭ್ಯ ಪಡೆದಿವೆ. ಬಯಲು ಶೌಚಾಲಯದ ಬಳಕೆ ಇದೆ. ರಾಗಿಮುದ್ದೆ ಅನ್ನ ಮುಖ್ಯ ಆಹಾರವಾಗಿದ್ದು, ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಪಶುಪಾಲನೆ, ಹಸು, ಎಮ್ಮೆ ಸಾಗಾಣಿಕೆ ಇದೆ. ರಾಗಿ, ಜೋಳ, ಬೆಳೆಯುತ್ತಾರೆ. ಕಂಟಗೆರೆ ಹಾಲು ಸಂಗ್ರಹಣಕ್ಕೆ ಹಾಲು ಹಾಕುತ್ತಾರೆ. ೨ ಸ್ತ್ರೀಶಕ್ತಿ ಸಂಘಗಳಿವೆ. ಕಾಲೇಜು ಉಪನ್ಯಾಸಕ ಸೇರಿದಂತೆ ೪ ಜನ ಸರ್ಕಾರಿ ನೌಕರರಿದ್ದಾರೆ. ಹೆಂಗಸರು ಗರಿಕಡ್ಡಿ ಎರೆಯುವುದು, ಹೊಂಗೆಬೀಜ ಸಂಗ್ರಹ ಕಾರ್ಯ ಮಾಡುತ್ತಾರೆ.

ಶಿಕ್ಷಣಕ್ಕೆ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಎಲ್ಲರೂ ವಿದ್ಯಾಭ್ಯಾಸ ಮಾಡುತ್ತಾರೆ. ಒಂದು ಕಿರಾಣಿ ಅಂಗಡಿ ಇದೆ. ಕುಡಿಯಲು ಮುಖ್ಯ ಗ್ರಾಮದಿಂದ ಕೊಳವೆ ಬಾವಿಯಿಂದ ನೀರು ಪೂರೈಸುತ್ತಾರೆ. ಉಡುಸಮ್ಮಾ ದೇವಾಲಯವಿದ್ದು, ದೊಡ್ಡ ಹಬ್ಬ ಮಾಡುತ್ತಾರೆ. ಆರತಿ ಭಾನ, ಹರಕೆ ಸಂಪ್ರದಾಯವಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವಿಧವಾ ವೇತನದ ೧೦ ಫಲಾನುಭವಿಗಳಿದ್ದಾರೆ. ಲೇಖಕ ಸಣ್ಣ ಹೊನ್ನಯ್ಯ ಜನಪದ ಕಲಾವಿದ ಉಪನ್ಯಾಸಕರೂ ಆಗಿದ್ದಾರೆ. ಗುರುಮೂರ್ತಿ ಕೋಣನ ತಲೆ ಎಂಬ ಸಂಕಲನ ಹೊರ ತಂದಿದ್ದಾರೆ.

ಗ್ರಾಮದಲ್ಲಿ ವೀರಾಂಜನೇಯ ಮುಂಗಾರು ಹುಡುಗರ ಜನಪದ ಮತ್ತು ಯಕ್ಷಗಾನ ಸಂಘವಿದ್ದು, ಕರಪಾಲ ಯಕ್ಷಗಾನ ಜನಪದ ಕಲೋತ್ಸವವನ್ನು ಪ್ರತಿವರ್ಷವೂ ನಡೆಸುತ್ತಾ ಬರುತ್ತಿರುವುದು ಈ ಸಂಘದ ವಿಶೇಷವಾಗಿದೆ. ಚಲುವಯ್ಯ ಮೃದಂಗ ಕಲಾವಿದರಿದ್ದಾರೆ.

## ಕಮಲಾಪುರ ಹೊಸೂರು

ಹೊಸೂರು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಹಂದಕನಕೆರೆ ಹೋಬಳಿಯ ಮಲ್ಲಿಗೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದ ಕಂದಾಯ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೮.೮ ಕಿ.ಮೀ. ಅಂತರದಲ್ಲಿದೆ. ಕಾಮಲಾಪುರದಲ್ಲಿದ್ದ ಬಹುಸಂಖ್ಯಾ ಸರ್ಪ ಒಕ್ಕಲಿಗ ಸಮುದಾಯದ ಕೆಲವು ಜನರು ಕಾಮಲಾಪುರವನ್ನು ಬಿಟ್ಟು ಈ ಗ್ರಾಮದಲ್ಲಿ ನೆಲೆಸಿಅಲ್ಲಿಯೇ ಮನೆ, ಆಸ್ತಿ ಭೂಮಿಯನ್ನು ಹೊಂದಿ ಈ ಗ್ರಾಮದಲ್ಲಿಯೇ ನೆಲೆಸಿದರಂತೆ ಆಗಾಗಿ ಈ ಗ್ರಾಮಕ್ಕೆ ಹೊಸೂರು ಎಂದು ಹೊಸದಾಗಿ ಬಂದು ನೆಲೆಸಿದರು. ಹೊಸದಾಗಿ ರಚನೆಯಾದ ಗ್ರಾಮ ಹೊಸೂರು ಆಗಿದೆ.

ಹೊಸೂರು ಗ್ರಾಮದ ಭೌಗೋಳಿಕ ವಿಸ್ತೀರ್ಣ ೩೬೦.೮೬ ಹೆಕ್ಟೇರ್ ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿ ಕೃಷಿಗೆ ಯೋಗ್ಯವಾಗಿದೆ. ಇಲ್ಲಿನ ರೈತರು ಮುಖ್ಯ ಬೆಳೆಯಾಗಿ ರಾಗಿ, ಹೆಸರು, ಅವರೆ ಧಾನ್ಯಗಳನ್ನು ಹಾಗೂ ಉಪಬೆಳೆಯಾಗಿ ತೆಂಗನ್ನು ಬೆಳೆಯುತ್ತಾರೆ. ಮುಖ್ಯ ಆಹಾರ ರಾಗಿಮುದ್ದೆ ಅನ್ನ ರೊಟ್ಟಿ, ಹಬ್ಬಗಳಲ್ಲಿ ಬಾಡೂಟ, ಸಿಹಿ ತಿಂಡಿಗಳನ್ನು ಸವಿಯುತ್ತಾರೆ. ಉಪಕಸುಬಾಗಿ "ಕುರಿಗಾರಿಕೆ"ಯನ್ನು ಮಾಡುತ್ತಾರೆ.

ಬಯಲು ಸೀಮೆಯಲ್ಲಿದ್ದು ಹಿರೇದೇವರ ತೋಪು ಇದೆ. ವಾರ್ಷಿಕ ಹವಾಮಾನ ಸರಾಸರಿ ಮಳೆ ೫೬೪–೫೬೬ ಡಿ.ಸೆಂ. ಚಳಿ– ೦೯–೧೨ ಡಿ.ಸೆಂ. ಬಿಸಿಲು ೨೮೦ಡಿ.ಸೆಂ. –೩೦ ಡಿ.ಸೆಂ. ನಷ್ಟಿದೆ.

ರಾಮದೇವರಹಳ್ಳ ಹೋಸೂರು ಕೆರೆ ಇದೆ. ರೈತರು ಹಸು, ಎಮ್ಮೆ, ಆಡು, ಕುರಿಗಳನ್ನು ಸಾಕುತ್ತಾರೆ. ವ್ಯವಸಾಯಕ್ಕೆ ಸಾಂಪ್ರದಾಯಿಕ ಉಪಕರಣಗಳಾದ ಕುಂಟೆ ನೇಗಿಲು ಸಾಲು ಉರಗಳನ್ನು ಹಾಗೂ ಎತ್ತಿನಗಾಡಿಯನ್ನು ಬಳಸುತ್ತಾರೆ. ಈ ಪರಿಸರದಲ್ಲಿ ಗಿಳಿ, ನವಿಲು, ಹದ್ದು, ಕೋಗಿಲೆ, ಕಾಗೆ, ಕಾಡು ಪಕ್ಷಿಗಳು ನರಿ, ಮೊಲ, ಜಿಂಕೆ, ಹಂದಿ ಕಾಡು ಪ್ರಾಣಿಗಳಾದ ಸರ್ಪ ಒಕ್ಕಲಿಗ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದು, ನಂತರದ ಸ್ಥಾನದಲ್ಲಿ ನಾಯಕ, ಲಿಂಗಾಯತ್ ಆದಿಕರ್ನಾಟಕ ಭೋವಿ, ಜನಾಂಗದವರು ವಾಸವಾಗಿದ್ದಾರೆ. ಕನ್ನಡ ಮತ್ತು ತೆಲುಗು ಭಾಷೆಗಳನ್ನು ಮಾತನಾಡುತ್ತಾರೆ. ಈ ಗ್ರಾಮದಲ್ಲಿ ೧೭೦ ಮನೆಗಳಿದ್ದು, ಕಾಂಕ್ರೀಟ್ ಮನೆಗಳು ೦೫ ಕಲ್ಲಿನ ಮನೆಗಳು ೫೫ ಗುಡಿಸಲು ೦೫ ಹೆಂಚಿನ ಮನೆಗಳು ೧೦೦ ಮನೆಗಳಿವೆ. ೨೦ ಮನೆಗಳು ಮಾತ್ರ ಶೌಚಾಲಯ ವ್ಯವಸ್ಥೆಯನ್ನು ಹೊಂದಿ, ಇನ್ನುಳಿದ ೫೦ ಮನೆಗಳು ಶೌಚಾಲಯ ರಹಿತವಾಗಿವೆ. ೮೦ ಆಶ್ರಯ ಮನೆಗಳು, ೩೦ ಜನತಾ ಮನೆಗಳು ೦೬ ಅಂಬೇಡ್ಕರ್ ವಸತಿ ನಿಲಯಗಳು, ೪ ಇಂದಿರಾ ಆವಾಸ್ ಮನೆಗಳಿವೆ. ೮೦ ಕುಟುಂಬಗಳು ಭಾಗ್ಯ ಜ್ಯೋತಿ ವಿದ್ಯುತ್ ವ್ಯವಸ್ಥೆ ಹೊಂದಿದೆ.

ವಿದ್ಯುಚ್ಛಕ್ತಿ ಒದಗಿಸುವ ಸುಮಾರು ೫೦ ಕಂಬಗಳಿದ್ದು, ೪೫ ಕಂಬಗಳಿಗೆ ದೀಪಗಳನ್ನು ಅಳವಡಿಸಿದ್ದಾರೆ. ೦೬ ಮಿನಿವಾಟರ್ ಟ್ಯಾಂಕ್‌ಗಳು ೦೨ ಓವರ್ ಟ್ಯಾಂಕ್‌ಗಳಿದ್ದು ೭೦ ನಲ್ಲಿಗಳಿವೆ. ಈ ಗ್ರಾಮಕ್ಕೆ ನೀರೊದಗಿಸುತ್ತವೆ.

ಹೈನುಗಾರಿಕೆಯಲ್ಲಿ ಸಾಂಪ್ರದಾಯಿಕತೆಯಿಲ್ಲ ಆದರೆ ಆಧುನಿಕ ಡೈರಿ ವ್ಯವಸ್ಥೆಯಿದೆ. ಸರ್ಕಾರಿ ನೌಕರರಲ್ಲಿ ಇಬ್ಬರು ಶಿಕ್ಷಕರಿದ್ದಾರೆ. ಸಾಂಪ್ರದಾಯಿಕ ಉದ್ಯೋಗದಲ್ಲಿ ಬಡಗಿತನವಿದೆ. ಆಧುನಿಕ ಉದ್ಯೋಗದಲ್ಲಿ ೨ ಹಿಟ್ಟಿನ ಗಿರಣಿಗಳಿವೆ.

೨೦೧೧ ರ ಜನಗಣತಿಯ ಪ್ರಕಾರ ಈ ಗ್ರಾಮದ ಒಟ್ಟು ಜನಸಂಖ್ಯೆ ೩೦೫ ಈಗ್ರಾಮದ ಒಟ್ಟು ಸಾಕ್ಷರರ ಪ್ರಮಾಣ ೬೨% ಇದೆ. ಒಂದು ಅಂಗನವಾಡಿ ಕೇಂದ್ರವಿದ್ದು, ಒಂದು ಸ.ಹಿ.ಪ್ರಾ.ಶಾಲೆ ಇದೆ. ಈ ಶಾಲೆಯಲ್ಲಿ ಶೌಚಾಲಯ ವ್ಯವಸ್ಥೆ ಇದ್ದು ಕ್ಷೀರಭಾಗ್ಯ, ಅಕ್ಷರ ದಾಸೋಹವಿರುತ್ತದೆ. ಆಟದ ಮೈದಾನವಿದೆ.

ಹಂದನಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರಕ್ಕೂ ಹಂದನಕೆರೆ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಕ್ಷೇತ್ರಕ್ಕೂ ಹಾಗೂ ಮಲ್ಲಿಗೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರು ಮತ್ತು ಒಬ್ಬರು ಗ್ರಾಮ ಪಂಚಾಯತ್ ನೌಕರರಿದ್ದಾರೆ. ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದೆ.

ಕಚ್ಚಾರಸ್ತೆಗಳಿಂದ ಮತ್ತುಘಟ್ಟ–ಹಂದನಕೆರೆ ಚಿ.ನಾ.ಹಳ್ಳಿ ತಿಪಟೂರು ಸಂಪರ್ಕ ಸಾಧಿಸಬಹುದು. ರಾಜ್ಯ ಮತ್ತು ಕೇಂದ್ರ ಸರಕಾರದ ಬ್ಯಾಂಕ್‌ಗಳಿರುವುದಿಲ್ಲ. ಖಾಸಗಿ ಹಣಕಾಸಿನ ವ್ಯವಸ್ಥೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು,ಸ್ತ್ರೀ ಶಕ್ತಿ ಸಂಘಗಳಿವೆ. ಕುಟುಂಬ ಕಲ್ಯಾಣ ವ್ಯವಸ್ಥೆ ಜಾರಿಯಲ್ಲಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ ವೇತನ ಪಡೆಯುವ ೦೫ ಜನರು ವಿಧವಾ ವೇತನ ಪಡೆಯುವ ೧೮ ಜನರು ಇದ್ದು, ಮದುವೆಯಂತಹ ಕಲ್ಯಾಣ ಕಾರ್ಯಕ್ರಮಗಳ ನಡೆಯುತ್ತವೆ. ಹೋಟೆಲ್, ಛತ್ರಗಳು, ವಸತಿಗಳು, ವಿದ್ಯಾರ್ಥಿ ನಿಲಯಗಳಿರುವುದಿಲ್ಲ, ೦೨ ಚಿಲ್ಲರೆ ಅಂಗಡಿಗಳಿವೆ.

ಧಾರ್ಮಿಕವಾಗಿ ಭೈರೇಶ್ವರ ದೇವಾಲಯ ಲಕ್ಕಮ್ಮ, ಭೂತಪ್ಪ ದೇವಾಲಯಗಳನ್ನು ಕಾಣಬಹುದು. ಇಲ್ಲಿ ಯಾವುದೇ ಜಾತ್ರೆಗಳು ಜರುಗುವುದಿಲ್ಲ. ಮಲ್ಲಿಗೆರೆಯಲ್ಲಿ ನಡೆಯುವ ಕರಿಯಮ್ಮ ದೇವಿಯ ಜಾತ್ರೆಗೆ ಹಾಗೂ ಕಾಮಲಾಪುರದಲ್ಲಿ ಜರುಗುವ ಜಾತ್ರೆಗಳಲ್ಲಿ ಭಾಗವಹಿಸುತ್ತಾರೆ. ಸಂಕ್ರಾಂತಿ, ಯುಗಾದಿ, ದೀಪಾವಳಿ, ಶಿವರಾತ್ರಿ ಕರಿಯಮ್ಮನ ಭಾನ, ಪಿತೃಪಕ್ಷ ಹಬ್ಬಗಳನ್ನು ಮಾಡುತ್ತಾರೆ. ಇಲ್ಲಿ ಬಾಡೂಟವೇ ವಿಶೇಷವಾದ ಊಟದ ವ್ಯವಸ್ಥೆಯಾಗಿದೆ. ಮಲ್ಲಿಗೆ ಕರಿಯಮ್ಮದೇವಿ ಜಾತ್ರೆ ೧ ವಾರಗಳ ಕಾಲ ತೇರು ಗಾವು ಸಿಗಿಯುವುದು ಸೇರಿದಂತೆ ಹಲವು ಹರಕೆ, ಸಂಪ್ರದಾಯಗಳಿವೆ.

## ಕಮಲಾಪುರ

ಕಾಮಲಾಪುರ ಗ್ರಾಮವು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆಯ ಹೋಬಳಿಯಲ್ಲಿದ್ದು, ಮಲ್ಲಿಗೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದ ಕಂದಾಯ ಗ್ರಾಮ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೮ ಕಿ.ಮೀ. ಅಂತರದಲ್ಲಿದೆ ಕೆರೆಯಲ್ಲಿ ಯಾವಾಗಲೂ ತಾವರೆಯ ಹೂಗಳು ಹೆಚ್ಚಾಗಿ ಬೆಳೆಯುತ್ತಿದ್ದ ಕಾರಣದಿಂದ ಕಾಮಲಾಪುರವಾಗಿದೆ.

೭೦೮.೮೬ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದ್ದು, ಕೆಂಪು ಮಣ್ಣಿನಿಂದ ಕೂಡಿದೆ. ಕೃಷಿಗೆ ಯೋಗ್ಯವಾಗಿದ್ದು, ಇಲ್ಲಿನ ರೈತರು ಮುಖ್ಯ ಬೆಳೆಯಾಗಿ ರಾಗಿ ಅವರೆ, ಹೆಸರು, ಅಲಸಂಡಿ, ಬೆಳೆಗಳನ್ನು ಉಪಬೆಳೆಗಳಾಗಿ ತೆಂಗು, ಅಡಿಕೆಯನ್ನು ವಾಣಿಜ್ಯ ಬೆಳೆಗಳಾಗಿ ರೇಷ್ಮೆ ತರಕಾರಿ ಬೆಳೆಗಳನ್ನು ಬೆಳೆಯುತ್ತಾರೆ. ಕೃಷಿಗೆ ಸಾಂಪ್ರದಾಯಿಕ ವಾಹನಗಳು ಹಾಗೂ ಆಧುನಿಕ ವಾಹನಗಳನ್ನು ಬಳಸುತ್ತಾರೆ. ಸಾಕು ಪ್ರಾಣಿಗಳಾದ ಎತ್ತು, ಹಸು, ಆಡು, ಕುರಿ, ಎಮ್ಮೆಗಳನ್ನು ಸಾಕು ಪಕ್ಷಿಗಳಾದ ಕೋಳಿ ಪಾರಿವಾಳಗಳನ್ನು ಸಾಕುತ್ತಾರೆ. ಇವರ ಮುಖ್ಯ ಆಹಾರ ರಾಗಿಮುದ್ದೆ, ಅನ್ನ ಸಾಂಬಾರ್ ರೊಟ್ಟಿ, ಜೊತೆಗೆ ವಿಶೇಷ ಸಂದರ್ಭ/ಸಮಾರಂಭಗಳಲ್ಲಿ ಬಾಡೂಟ, ಪಾಯಸ, ಹೋಳಿಗೆ ಸಾಮಾನ್ಯವಾಗಿದೆ. ಕೃಷಿಯೊಂದಿಗೆ ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಾರೆ.

ಬಯಲು ಸೀಮೆಯಲ್ಲಿದ್ದರೂ ಸುತ್ತಲೂ ೧ ಬೆಟ್ಟ, ೧ ಗುಡ್ಡಗಳಿಂದ ಸುತ್ತುವರಿದಿದೆ. ಇಲ್ಲಿ ರಕ್ಷಿತಾರಣ್ಯವಿದೆ. ಸರಾಸರಿ ಹವಾಮಾನ ಪ್ರಮಾಣ ಮಳೆ ೫೬೨–೫೬೮ ಮಿ.ಮೀ. ಚಳಿ ೦೯–೧೨ ಡಿ.ಸೆಂ. ಬಿಸಿಲು–೨೮–೩೧ ಡಿ.ಸೆಂ. ನಷ್ಟಿದೆ. "ಸೀಗಿಹಳ್ಳಿ" ಹಾಗೂ 'ಸಪ್ತಕನ್ಯೆಯರ ಕೆರೆ' ಯನ್ನು ಬಿಟ್ಟು ಬೇರೆ ಯಾವುದೇ ಹಳ್ಳ ಹೊಳೆ ಕೆರೆ ಕುಂಟೆ ಜಲಪಾತಗಳನ್ನಾಗಲೀ ನೋಡಲಾಗುವುದಿಲ್ಲ. ದೇವ ಲೋಕದಿಂದ ಸಪ್ತಕನ್ಯೆಯರು ಈ ಗ್ರಾಮದ ಕೆರೆಯಲ್ಲಿ ಪ್ರತಿ ಹುಣ್ಣಿಮೆಯಂದು ಜಲಕ್ರೀಡೆಯಾಡಲು ಬರುತ್ತಿದ್ದರಿಂದ "ಸಪ್ತಕನ್ಯೆಯರ ಕೆರೆ" ಎಂದು ನಾಮಕರಣವಾಗಿದೆ. ಎಂಬ ನಂಬಿಕೆ ಇದೆ.

ಸರ್ಪ ಒಕ್ಕಲಿಗ ಸಮುದಾಯದವರು ದೊಡ್ಡ ಜನಸಂಖ್ಯೆಯಲ್ಲಿದ್ದು, ದೊಡ್ಡ ಸಮುದಾಯವಾಗಿದೆ. ನಂತರದಲ್ಲಿ ಭೂವಿ ನಾಯಕ, ಮುಸ್ಲಿಂ ಆದಿಕರ್ನಾಟಕ ಲಿಂಗಾಯತ್ ಜನಾಂಗಗಳಿವೆ. ಕನ್ನಡ ಮತ್ತು ಉರ್ದ ಭಾಷೆಯನ್ನು ಮಾತನಾಡುತ್ತಾರೆ. ಈ ಗ್ರಾಮದಲ್ಲಿ ೨೫೦ ಮನೆಗಳಿದ್ದು, ಇವುಗಳಲ್ಲಿ ೨೦೦ ಹೆಂಚಿನ ಮನೆಗಳು ೦೫ ಮಣ್ಣಿನ ಮನೆಗಳು, ೪೦ ಕಲ್ಲಿನ ಮನೆಗಳು, ೦೫ ಕಾಂಕ್ರೀಟ್ ಮನೆಗಳಿವೆ. ೫೦ ಮನೆಗಳು ಮಾತ್ರ ಶೌಚಾಲಯವನ್ನು ಹೊಂದಿವೆ. ಇನ್ನುಳಿದ ೨೦೦ ಮನೆಗಳು ಶೌಚಾಲಯ ರಹಿತವಾಗಿವೆ. ಇಲ್ಲಿನ ಮನೆಗಳಲ್ಲಿ ಆಶ್ರಯ ಮನೆಗಳು ೮೦ ಜನತಾ ಮನೆಗಳು ೪೦, ಇಂದಿರಾ ಅವಾಸ್ ೧೦ ಮನೆಗಳಿವೆ. ೧೦೦ ಕುಟುಂಬಗಳು ಭಾಗ್ಯಜ್ಯೋತಿ ವಿದ್ಯುತ್‌ನ್ನು ಹೊಂದಿರುತ್ತವೆ. ಗ್ರಾಮಕ್ಕೆ ನೀರೋದಗಿಸಲು ಮಿನಿವಾಟರ್ ಟ್ಯಾಂಕ್ ಓವರ್ ಟ್ಯಾಂಕ್‌ಗಳಿವೆ. ೧೦೦ ವಿದ್ಯುತ್ ಕಂಬಗಳಲ್ಲಿ ಸುಮಾರು ೯೦ ಕಂಬಗಳಿಗೆ ವಿದ್ಯುತ್ ದೀಪಗಳನ್ನು ಅಳವಡಿಸಿದ್ದಾರೆ. ಹೈನುಗಾರಿಕೆಯಲ್ಲಿ ಆಧುನಿಕ ಡೈರಿ ಇದೆ.

೨೦೧೧ ರ ಜನಗಣತಿಯ ಪ್ರಕಾರ ೯೪ ಮಂದಿ ಜನಸಂಖ್ಯೆಯನ್ನು ಈ ಗ್ರಾಮವು ಹೊಂದಿದ್ದು, ಗಂಡಸರು ೪೯೦, ಹೆಂಗಸರು–೪೪೦ ಪ.ಜಾತಿಯ ಗಂ–೦೦, ಹೆ–೦೦, ಓಬಿಸಿ–ಗಂ–೪೮೦, ಹೆ–೪೩೧, ಮಕ್ಕಳು– ಗಂ–೩೪, ಹೆಂ–೩೦ ಜನರಿದ್ದು, ಈ ಗ್ರಾಮದ ಒಟ್ಟು ಸಾಕ್ಷರರ ಪ್ರಮಾಣ ೬೪% ರಷ್ಟಿದೆ.

ಒಂದು ಅಂಗನವಾಡಿ ಕೇಂದ್ರವಿದ್ದು, ೫೦ ಮಕ್ಕಳು ೦೫ ಶಿಕ್ಷಕರು ಮತ್ತು ಒಂದು ಸರ್ಕಾರಿ ಪ್ರೌಢಶಾಲೆಯಲ್ಲಿ ೧೦೪ ವಿದ್ಯಾರ್ಥಿಗಳಿದ್ದು ೦೫ ಜನ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಶಾಲೆಗಳಲ್ಲಿ ಕ್ಷೀರಭಾಗ್ಯ ಬಿಸಿಯೂಟ ಯೋಜನೆಯಿದೆ. ಆಟದ ಮೈದಾನವು ಇದೆ. ಸುವ್ಯವಸ್ಥೆಯಾದ ಶೌಚಾಲಯದ ವ್ಯವಸ್ಥೆಯನ್ನು ಹೊಂದಿ ಉತ್ತಮವಾಗಿ ಈ ಶಾಲೆಗಳು ಕಾರ್ಯನಿರ್ವಹಿಸುತ್ತವೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೂ ತುಮಕೂರು ಜಿಲ್ಲಾ ಲೋಕಸಭಾ ಕ್ಷೇತ್ರಕ್ಕೂ ಸೇರಿದೆ. ಹಂದನಕೆರೆ ಜಿಲ್ಲಾ ಪಂಚಾಯ್ತಿ ಮತ್ತಿಘಟ್ಟ ತಾಲ್ಲೂಕು ಪಂಚಾಯತ್‌ಗೂ ಮಲ್ಲಿಗೆರೆ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸೇರಿದೆ. ಇಬ್ಬರು ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಇಬ್ಬರು ಗ್ರಾಮ ಪಂಚಾಯತ್ ನೌಕರರನ್ನು ಕಾರ್ಯ ನಿರ್ವಹಿಸುತ್ತಿದ್ದಾರೆ.

ಮತ್ತಿಘಟ್ಟ ಹಂದಕನಕೆರೆ ತಿಪಟೂರು ಚಿ.ನಾ.ಹಳ್ಳಿ ಕ್ಷೇತ್ರಕ್ಕೆ ಹೋಗಲು ಒಂದು ಕಚ್ಛಾರಸ್ತೆಯಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಗಡಿ ಪ್ರದೇಶ ಸಂಪರ್ಕ ರಕ್ಷಣೆ ನ್ಯಾಯಾಂಗ ವ್ಯವಸ್ಥೆಗಳು ಹಣಕಾಸಿಗೆ ಸಂಬಂಧಿಸಿದ ಖಾಸಗಿ ಹಣಕಾಸಿನ ವ್ಯವಸ್ಥೆಯಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘ, ಸ್ತ್ರೀಶಕ್ತಿ ಸಂಘಗಳಿವೆ. ಕುಟುಂಬ ಕಲ್ಯಾಣ ವ್ಯವಸ್ಥೆ ಜಾರಿಯಲ್ಲಿದೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ ವೇತನ ಪಡೆಯುವ ೪ ಜನರು, ೨೦ ಜನ ವಿಧವಾವೇತನವನ್ನು ಪಡೆಯುತ್ತಿದ್ದಾರೆ. ಹೋಟೆಲ್ ೧ ಅಂಗಡಿ ೬ ಇವೆ. ಕರಿಯಮ್ಮ ದೇವಿ ಜಾತ್ರೆಯನ್ನು ಮಾರ್ಚ್ ತಿಂಗಳಲ್ಲಿ ಮಾಡುತ್ತಾರೆ. ಸಿಡಿ ಓಕುಳಿ ಬಾಯಿಬೀಗ ಆಚರಣೆಯಲ್ಲಿವೆ. ದೀಪಾವಳಿ, ಯುಗಾದಿ, ಶಿವರಾತ್ರಿ, ರಂಜಾನ್, ಈದ್–ಮಿಲಾದ್ ಹಬ್ಬಗಳನ್ನು ಆಚರಿಸುತ್ತಾರೆ.

ಸರ್ಪ ಒಕ್ಕಲಿಗ ಜನಾಂಗದ ಸುಮಾರು ೪೦ ವಯಸ್ಸಿನ ರಂಗಯ್ಯನವರು ಜಾನಪದ ಸಂಗೀತದಲ್ಲಿ ಗುರುತಿಸಿಕೊಂಡಿದ್ದು, ಲಾವಣಿ, ತತ್ವಪದ ಹಾಡುತ್ತಾರೆ.

## ಕೆಂಗಲಾಪುರ

ಕೆಂಗಲಾಪುರ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಹಂದನಕೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರುವ ಕಂದಾಯ ಗ್ರಾಮ ಅಧೀನ ಗ್ರಾಮಗಳಾಗಿ ಭದ್ಯನಾಯ್ಕನವನ್ನು ತನ್ನ ವ್ಯಾಪ್ತಿಗೆ ಸೇರಿಸಿಕೊಂಡಿದೆ. 'ಕೆಂಗಯ್ಯ' ಎಂಬ ವೀರಶೈವ ವ್ಯಕ್ತಿಯು ಈ ಗ್ರಾಮಕ್ಕೆ ಬಂದು ನೆಲಸಿ ಊರನ್ನು ಕಟ್ಟಿಸಿದನೆಂದು, ಅವನ ಜ್ಞಾಪನಾರ್ಥವಾಗಿ ಕೆಂಗಯ್ಯನಕೆರೆ ಆಯಿತ್ತೆಂದು, ಕಾಲಕ್ರಮೇಣ ಅದು'ಕೆಂಗಲಾಪುರ' ವಾಗಿರಬೇಕೆಂದು ಕೆಂಗಲಾಪುರದ ಜನರ ಅಭಿಪ್ರಾಯವಾಗಿದೆ. ತಾಲ್ಲೂಕ್ ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೮ ಕಿ.ಮೀ. ದೂರದಲ್ಲಿದೆ.

ಕೆಂಗಲಾಪುರದ ಭೌಗೋಳಿಕ ವಿಸ್ತೀರ್ಣ ೫೨೦.೧೮ ಹೆಕ್ಟೇರ್ ಇದ್ದು, ಕೆಂಪು ಮಿಶ್ರಿತ ಕಪ್ಪು ಮಣ್ಣನ್ನು ಹೊಂದಿ ವ್ಯವಸಾಯಕ್ಕೆ ಯೋಗ್ಯವಾಗಿದೆ. ಇಲ್ಲಿನ ರೈತರ ಮುಖ್ಯ ಬೆಳೆಯಾಗಿ ರಾಗಿ, ಹೆಸರು, ಅವರೆ, ಧಾನ್ಯಗಳನ್ನು ಹಾಗೂ ಉಪಬೆಳೆಯಾಗಿ ತೆಂಗು, ಬಾಳೆ, ತರಕಾರಿಗಳನ್ನು ಬೆಳೆಯುತ್ತಾರೆ. ಕೃಷಿಗೆ ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಗಳನ್ನು ಬಳಸುತ್ತಾರೆ. ಇವರ ಮುಖ್ಯ ಆಹಾರ ರಾಗಿಮುದ್ದೆ, ಅನ್ನ, ರೊಟ್ಟಿ ವಿಶೇಷವಾಗಿ ಹಬ್ಬದ ಸಂದರ್ಭಗಳಲ್ಲಿ ಪಾಯಸ, ಒಬ್ಬಟ್ಟು ಇತರೆ ಸಿಹಿ ಪದಾರ್ಥಗಳನ್ನು ಸವಿಯುತ್ತಾರೆ.

ಬಯಲುನಾಡಾಗಿದ್ದು ೦೩ ಗುಡ್ಡಗಳನ್ನು ಹಾಗೂ ೧ ಬೆಟ್ಟವನ್ನು ಹೊಂದಿದೆ. ರಕ್ಷಿತಾರಣ್ಯ ಇದೆ. ಆಗಾಗಿ ಇಲ್ಲಿ ಕಾಡು ಪ್ರಾಣಿಗಳಾದ ಕರಡಿ, ಚಿರಿಚಿತಜ, ಆನೆ, ಕಾಣಬಹುದಾಗಿದೆ. ಹಸು ಎಮ್ಮೆ, ನಾಯಿ, ಬೆಕ್ಕುಗಳನ್ನು ಜನರು ಸಾಕುತ್ತಾರೆ. ಹವಾಮಾನ ಸರಾಸರಿ ವಾರ್ಷಿಕ ಪ್ರಮಾಣ ಮಳೆ ೫೬೫-೫೬೮ ಮಿ.ಮೀ. ಚಳಿ ೮-೧೩ ಡಿ.ಸೆಂ. ಬಿಸಿಲು ೨೬-೩೧ ಡಿ.ಸೆಂ. ಇದೆ. ಈ ಗ್ರಾಮದಲ್ಲಿ ಕೆಂಗಯ್ಯನ ಕೆರೆ ಇದೆ.

ಲಿಂಗಾಯಿತ ಸಮುದಾಯದವರು ದೊಡ್ಡ ಸಮುದಾಯದಲ್ಲಿ (೪೧೨) ಬೇರೆ ಯಾವುದೇ ಸಮುದಾಯದವರು ವಾಸವಿರುವುದಿಲ್ಲ. ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಈ ಗ್ರಾಮದಲ್ಲಿ ೧೮೦ ಮನೆಗಳಿದ್ದು, ಅದರಲ್ಲಿ ಹೆಂಚಿನ ಮನೆಗಳು ೮೦ ಕಲ್ಲಿನ ಮನೆ, ೬೦ ಕಾಂಕ್ರೀಟ್ ಮನೆ, ೧೦ ಇದ್ದು, ಗುಡಿಸಲು ಮನೆಗಳು ಕಂಡುಬರುವುದಿಲ್ಲ. ೮೦ ಮನೆಗಳಲ್ಲಿ ಶೌಚಾಲಯ ವ್ಯವಸ್ಥೆ ಇದ್ದು, ೧೦೦ ಮನೆಗಳಿಲ್ಲಿ ಶೌಚಾಲಯ ರಹಿತವಾಗಿವೆ. ಜನತಾಮನೆಗಳು ಇಂದಿರಾ ಆವಾಸ್ ಮನೆಗಳನ್ನು ಮತ್ತು ೬೦ ಮನೆಗಳು ಭಾಗ್ಯಜ್ಯೋತಿ ವಿದ್ಯುತ್ ಸೇವೆಯನ್ನು ಪಡೆದಿವೆ. ಎಲ್ಲಾ ಕುಟುಂಬಗಳು ನಿವೇಶನ ರಹಿತ ಹಾಗೂ ವಸತಿ ರಹಿತ ಕುಟುಂಬಗಳಾಗಿವೆ. ಕಿರು ನೀರು ಸರಬರಾಜು ವ್ಯವಸ್ಥೆ ಇದ್ದು ೧೦ ಮಿನಿವಾಟರ್ ಟ್ಯಾಂಕ್‌ಗಳಿವೆ. ಈ ಗ್ರಾಮದಲ್ಲಿ ೪೦ ವಿದ್ಯುಚ್ಛಕ್ತಿ ಕಂಬಗಳಿದ್ದು, ೩೬ ಕಂಬಗಳಲ್ಲಿ ದೀಪವನ್ನು ಅಳವಡಿಸಿದ್ದಾರೆ.

ಹೈನುಗಾರಿಕೆಯಲ್ಲಿ ಆಧುನಿಕ ಡೈರಿಯನ್ನು ಹೊಂದಿದೆ. ೬ ಜನ ಸರ್ಕಾರಿ ನೌಕರರು ವಾಸವಿದ್ದಾರೆ. ಹಿಟ್ಟಿನ ಗಿರಣಿಗಳಿವೆ. ೨೦೧೧ ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೪೪೨ ರಷ್ಟಿದೆ. ಗಂಡಸರು ೨೧೦ ಹೆಂಗಸರು-೨೦೨ ಮಕ್ಕಳು-ಗಂ-೧೦ ಮಂದಿ ಜನರು ವಾಸಿಸುತ್ತಿದ್ದಾರೆ. ಈ ಗ್ರಾಮದ ಒಟ್ಟು ಸಾಕ್ಷರರ (ಪ್ರಮಾನ ೭೪%) ಇದೆ.

ಒಂದು ಅಂಗನವಾಡಿ ಕೇಂದ್ರವಿದ್ದು ೨೨ ಮಕ್ಕಳು ಹಾಗೂ ೨ ಸಿಬ್ಬಂದಿ ವರ್ಗದವರೂ ಮತ್ತು ಒಂದು ಶಾಲೆ ಕನ್ನಡ ಭಾಷಾ ಮಾಧ್ಯಮದಲ್ಲಿದ್ದು, ಶಾಲೆಯಲ್ಲಿ ಕ್ಷೀರಭಾಗ್ಯ, ಅಕ್ಷರ ದಾಸೋಹವು ಇರುತ್ತದೆ. ಸುವ್ಯವಸ್ಥಿತವಾದ ಶಾಲಾ ಕಟ್ಟಡವಿದ್ದು, ಶೌಚಾಲಯ ವ್ಯವಸ್ಥೆಯು ಉತ್ತಮವಾಗಿದೆ. ಹಾಗೂ ಆಟದ ಮೈಧಾನವೂ ವಿಶಾಲವಾಗಿದ್ದು, ಸುತ್ತಲು ಮರಗಿಡಗಳಿಂದಾವೃತವಾಗಿ ಸುಂದರವಾಗಿ ಕಾಣಿಸುತ್ತದೆ.

ಹಂದನಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನ ಸಭಾಕ್ಷೇತ್ರಕ್ಕೂ, ಹಂದನಕೆರೆ ಜಿಲ್ಲಾ ಪಂಚಾಯಿತ್, ಹಂದನಕೆರೆ ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೂ ಹಾಗೂ ಹಂದನಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿ, ಈ ಗ್ರಾಮದಿಂದ ಒಬ್ಬರು ಗ್ರಾಮ ಪಂಚಾಯಿತ್ ಸದಸ್ಯರು ಇದ್ದಾರೆ. ಈ ಗ್ರಾಮವು ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದೆ.

ವ್ಯವಸ್ಥಿತವಾದ ರಸ್ತೆ ಮಾರ್ಗವು ಹುಳಿಯಾರು-ಹಂದನಕೆರೆ ಚಿ.ನಾ.ಹಳ್ಳಿ ತಿಪಟೂರು-ಅರಸೀಕೆರೆಗೆ ಸಂಪರ್ಕಕಲ್ಪಿಸುತ್ತದೆ. ಸಂಪರ್ಕ, ರಕ್ಷಣೆ, ನ್ಯಾಯಾಂಗ ವ್ಯವಸ್ಥೆಗಳು, ಹಣಕಾಸಿಗೆ ಸಂಬಂಧಿಸಿದ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದ ಬ್ಯಾಂಕ್‌ಗಳು ಇರುವುದಿಲ್ಲ. ಆದರೆ ಖಾಸಗೀ ಹಣಕಾಸಿನ ವ್ಯವಸ್ಥೆಯಲ್ಲಿ ಭುವನೇಶ್ವರಿ ಶ್ರೀಮಾತಾ, ಕರಿಯಮ್ಮ ಸ್ತ್ರಿಶಕ್ತಿ ಸಂಘಗಳಿವೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ ವೇತನವನ್ನು ಪಡೆಯುವ ೧೦ ಜನರು ವಿಧವಾ ವೇತನವನ್ನು ಪಡೆಯುವ ೨೦ ಜನರು, ಮಾಸಾಶನ (ಕಲೆ) ಪಡೆಯುವ ೧ ಜನರಿದ್ದು, ಮದುವೆಯಂತಹ ಕಲ್ಯಾಣ ಕಾರ್ಯಕ್ರಮಗಳು ಕಾಲ-ಕಾಲಕ್ಕೆ ಜರುಗುತ್ತಿರುತ್ತಿವೆ. ಬಸವೇಶ್ವರ ಶ್ರೀರಾಮ ದೇವಾಲಯ ಇದೆ.

ಪ್ರತಿವರ್ಷ ಗಣೇಶನ ಹಬ್ಬವನ್ನು ಆಚರಿಸುತ್ತಾರೆ. ಯುಗಾದಿ, ದೀಪಾವಳಿ, ಪಿತೃಪಕ್ಷ, ಸಂಕ್ರಾಂತಿ, ಗಣೇಶ, ಗೌರಿಹಬ್ಬವನ್ನು ಆಚರಿಸುತ್ತಾರೆ. ಸಿಹಿ ಅಡುಗೆಗಳನ್ನು ಹೊಸ ಬಟ್ಟೆಗಳನ್ನು ಹಬ್ಬದ ಸಂದರ್ಭದಲ್ಲಿ ಧರಿಸಿ ಸಂತೋಷ ಪಡುತ್ತಾರೆ. ಶಂಕರಪ್ಪ ಎಂಬ ೪೦ ವಯಸ್ಸಿನ ಲಿಂಗಾಯತ್ ಜನಾಂಗದ ವ್ಯಕ್ತಿ ಜನಪದ ತತ್ವಪದ ಗಾಯನದಲ್ಲಿ ವಿಶಿಷ್ಟ ಪ್ರತಿಮೆಯಾಗಿ ಹೊರ ಹೊಮ್ಮಿದ್ದಾರೆ.

## ಕೆಂಗಲಾಪುರ ಭದ್ಯನಾಯಕನ ತಾಂಡ್ಯ

ಭದ್ಯನಾಯಕನ ತಾಂಡ ಎಂಬುದು, ಭದ್ರನಾಯಕನ ತಾಂಡ ಎಂಬ ಮೂಲ ರೂಪವಾಗಿದೆ. ಭದ್ರ ಎಂಬ ವ್ಯಕ್ತಿ ಮೂಲದಿಂದಾಗಿ ಈತನು ಲಂಬಾಣಿ ಜನಾಂಗಕ್ಕೆ ಸೇರಿದವನು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೯ ಕಿ.ಮೀ. ದೂರದಲ್ಲಿದೆ. ಕೆಂಗಲಾಪುರದ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ಮುಖ್ಯ ಗ್ರಾಮ ಕೆಂಗಲಾಪುರದ ೫೨೦-೧೩ ಹೆಕ್ಟೇರ್ ಹಂಚಿಕೆಯಾಗಿದೆ. ಲಂಬಾಣಿ ಸಮುದಾಯದ ೪೭ ಮನೆಗಳು ಇಲ್ಲಿದ್ದು, ೨೩೪ ಜನಸಂಖ್ಯೆ ಹೊಂದಿದೆ. ಹೆಂಚಿನ, ಸೀಟಿನ,

ಸ್ವರೂಪದಲ್ಲಿವೆ. ಇವು ವಸತಿ ಯೋಜನೆಗಳಾದ ಜನತಾ, ಆಶ್ರಯ, ಇಂದಿರಾ ಆವಾಜ್ ವಸತಿ ಯೋಜನೆಯ ೨೩ ಫಲಾನುಭವಿಗಳಿದ್ದಾರೆ. ೧೬ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ಕೃಷಿ ಮುಖ್ಯ ಕಸುಬು ರಾಗಿ, ಹೆಸರು, ತೊಗರಿ, ಬೆಳೆಯುತ್ತಾರೆ. ತೆಂಗಿನ ತೋಟಗಾರಿಕೆ ಇದೆ. ಕೊಬ್ಬರಿ, ಹೊಂಗೆಬೀಜ, ಗರಿಕಡ್ಡಿ, ಮಟ್ಟೆ, ಚಿಪ್ಪು, ವ್ಯಾಪಾರಿ ಸರಕುಗಳು ಹಸು, ಕುರಿ, ಮೇಕೆ ಸಾಕುಪ್ರಾಣಿಗಳು ಲಾರಿ, ಟ್ರಾಕ್ಟರ್ ಹಾಗೂ ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ. ಹಂದನಕೆರೆ ಹೋಬಳಿ ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾನ ಸಭಾಕ್ಷೇತ್ರ ತುಮಕೂರು ಲೋಕಸಭಾಕ್ಷೇತ್ರ, ಹಂದನಕೆರೆ ತಾಲ್ಲೂಕು ಪಂಚಾಯಿತ್ ಹಾಗೂ ಹಂದನಕೆರೆ ಗ್ರಾಮ ಪಂಚಾಯಿತ್ ಕ್ಷೇತ್ರಕ್ಕೆ ಸೇರಿದೆ.

ಹುಳಿಯಾರು–ತಿಪಟೂರು–ಹಂದನಕೆರೆ ಮಾರ್ಗವಾಗಿ ರಸ್ತೆ ಮಾರ್ಗ ಬಸ್ ಸಂಚಾರವಿದೆ. ಗ್ರಾಮದಲ್ಲಿ ಕೃಷಿಕಾರ್ಮಿಕರಿದ್ದಾರೆ. ವೃದ್ಧಾಪ್ಯ ವೇತನ, ವಿಧವಾ ವಪಿತನಗಳ ಫಲಾನುಭವಿಗಳಿದ್ದಾರೆ. ಇವು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿದೆ. ರಾಗಿಮುದ್ದೆ ಮುಖ್ಯ ಆಹಾರ, ರೊಟ್ಟಿ, ದೋಸೆ, ಬಳಸುತ್ತಾರೆ. ಬಾಡೂಟ ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನಗಳಾಗಿವೆ. ಭೀಮನ ಹಬ್ಬ, ಸೇವಾಲಾಲ್, ಉತ್ಸವ ಈ ಗ್ರಾಮದ ವಿಶೇಷ ದೀಪಾವಳಿ, ದಸರಾ, ಯುಗಾದಿ, ಗೌರಿಗಣೇಶ ಹಬ್ಬದ ಆಚರಣೆ ಪಡಿತರ ಹಂದನಕೆರೆಯಿಂದ ಪಡೆಯುತ್ತಿದ್ದಾರೆ. ಸಾಕ್ಷರತೆ ೬೧% ರಷ್ಟಿದೆ.

## ಕ್ಯಾತನಾಯಕನಹಳ್ಳಿ

ಕ್ಯಾತನಾಯಕನ ಹಳಿ ಮುದೇನಹಳ್ಳಿ ಗ್ರಾಮದ ಮಜರೆ ಗ್ರಾಮ. ಹಿಂದೆ ಕ್ಯಾತನಾಯಕ ಎಂಬ ಪಾಳೆಗಾರ ಇಲ್ಲಿ ನೆಲೆಸಿದ್ದ, ಆ ನಂತರದ ಇಲ್ಲಿನ ಜಾನವಸತಿಯೇ ಕ್ಯಾತನಾಯಕನ ಹಳ್ಳಿ ಆಯಿತು ಎನ್ನುತ್ತಾರೆ ಗ್ರಾಮಸ್ಥರು. ಇದು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೫ ಕಿ.ಮೀ. ದೂರದಲ್ಲಿದೆ.

ಭೌಗೋಳಿಕ ವಿಸ್ತೀರ್ಣವು, ಮುದ್ದೇನಹಳ್ಳಿ ಗ್ರಾಮದ ಭೌಗೋಳಿಕ ವಿಸ್ತೀರ್ಣವಾದ ೨೦೧/೨ ಹೆಕ್ಟೇರ್‌ನಲ್ಲಿ ಸೇರ್ಪಡೆಯಾಗಿದೆ. ಬಯಲುನಾಡಿಗೆ ಸೇರುವ ಬಿಳಿ ಹಾಗೂ ಕಪ್ಪು ಮಣ್ಣಿನಿಂದ ಕೂಡಿದ್ದು, ಕೆಲ ಕಡೆ ಅಲ್ಪ ಕೆಂಪು ಮಣ್ಣು ಕಂಡುಬರುತ್ತದೆ. ಬಿಳಿ ಹಾಗೂ ಕಪ್ಪು ಕಲ್ಲುಗಳು ಕಾಣಸಿಗುತ್ತವೆ.

ಸುತ್ತಲಿನಲ್ಲಿ ಕಾಡುಹಂದಿ, ತೋಳ, ನರಿ, ಮುಂತಾದ ಕಾಡುಪ್ರಾಣಿಗಳು, ನವಿಲು, ಗಿಳಿ, ಕಾಗೆ, ಸಂಬಾರಕಾಗೆ, ಬೆಳವನಹಕ್ಕಿ, ಪೊಡರೆಹಕ್ಕಿ, ಗುಬ್ಬಚ್ಚಿ, ಮುಂತಾದ ಪಕ್ಷಿಗಳು ಸಾಕುಪಕ್ಷಿಯಾದ ಕೋಳಿಯೂ ಕಂಡುಬರುತ್ತವೆ. ಇಲ್ಲಿ ೫೯೮.೩ ಮಿ.ಮೀ. ಮಳೆ ಆದ ದಾಖಲೆ ಇದ್ದು, ಈಗ ಬರಗಾಲಕ್ಕೆ ತುತ್ತಾಗಿದೆ. ೯ ಡಿ.ಸೆಂ. ಚಳಿಯೂ, ೨೫–೨೮ ಡಿ.ಸೆಂ. ಬಿಸಿಲೂ ಇರುತ್ತದೆ. ಊರಿನಲ್ಲಿ ಒಂದು ಕಲ್ಯಾಣಿ ಇದ್ದು, ಈಗ ಅದರಲ್ಲಿ ನೀರು ಇರುವುದಿಲ್ಲ. ಕುಡಿಯುವ ನೀರಿಗಾಗಿ ಮೂರು ಕೈಪಂಪ್‌ಗಳನ್ನು ಅಳವಡಿಸಲಾಗಿದೆ. ಸದ್ಯ ನೀರು ಬತ್ತಿ ಹೋಗಿವೆ. ತೆಂಗಿನ ತೋಟಕ್ಕೆ ನೀರು ಹಾಯಿಸಲು ಅಂತರ್ಜಲವನ್ನು ಅವಲಂಬಿಸಿದ್ದು, ಹದಿನೆಂಟಕ್ಕೂ ಹೆಚ್ಚು ಕೊಳವೆ ಬಾವಿಗಳನ್ನು ಹಾಕಿಸಿಕೊಂಡಿದ್ದಾರೆ.

೨೦೧೧ ರ ಜನಗಣತಿ ಪ್ರಕಾರ ೯೫೦ ಜನಸಂಖ್ಯೆ ಇದ್ದು, ಇದರಲ್ಲಿ ನಾಯಕ ಜನಾಂಗವೇ ದೊಡ್ಡ ಸಮುದಾಯವಾಗಿದೆ. ಉಳಿದಂತೆ ಸರ್ಪವಕ್ಕಲಿಗರ, ಉಪ್ಪಾರರು, ಬೋವಿಗಳು, ಲಿಂಗಾಯಿತರು, ಶೆಟ್ಟಿಬಣಜಿಗರು ಸಣ್ಣಸಮುದಾಯಗಳಾಗಿವೆ. ಗ್ರಾಮದಲ್ಲಿ ಒಟ್ಟು ೧೪೦ ಮನೆಗಳಿದ್ದು, ಇದರಲ್ಲಿ ೧ ಕಾಂಕ್ರೀಟ್, ೬ ಗುಡಿಸಲುಗಳು ಉಳಿದವುಗಳು ಕಲ್ಲು ಹಾಗೂ ಮಣ್ಣಿನಿಂದ ಕಟ್ಟಲ್ಪಟ್ಟವುಗಳಾಗಿವೆ. ಮೇಲ್ಛಾವಣೆಗೆ ಕುಂಬಾರರ ಕಪ್ಪು ಹೆಂಚು ಹಾಗೂ ಮಂಗಳೂರಿನ ಕೆಂಪು ಹೆಂಚು ಎರಡನ್ನು ಬಳಸಿದ್ದಾರೆ. ಜನತಾ, ಆಶ್ರಯದ ಇಲ್ಲಿನ ೧೪ ಮನೆಗಳಿವೆ. ಜನರ ಮುಖ್ಯ ಆಹಾರ ರಾಗಿಮುದ್ದೆ, ಅಮುಖ್ಯ ಆಹಾರವಾಗಿ ಅನ್ನ, ಉಪ್ಪಿಟ್ಟು, ಇಡ್ಲಿ, ದೋಸೆ, ಬಳಸುತ್ತಾರೆ. ವಿಶೇಷ ಆಹಾರವಾಗಿ ಪಾಯಸ, ತಂಬಿಟ್ಟು, ಒಬ್ಬಟ್ಟು ಮಾಂಸಾಹಾರ ಸೇವಿಸುತ್ತಾರೆ. ಇವರು ಸಾಂಪ್ರದಾಯಿಕ ಎತ್ತಿನಗಾಡಿಗಳ ಜೊತೆಗೆ ಆಧುನಿಕ ಟ್ರಾಕ್ಟರ್, ಬೈಕ್‌ಗಳು, ಲಗೇಜ್ ಆಟೋಗಳನ್ನು ಹೊಂದಿದ್ದಾರೆ.

ಇಲ್ಲಿನ ಜನರ ಮುಖ್ಯ ಕಸುಬು ಕೃಷಿ, ಇವರು ರಾಗಿಯನ್ನು ಪ್ರಧಾನವಾಗಿಯೂ, ಅವರೆ, ಜೋಳ, ಹೆಸರು, ಅಲಸಂಡೆ, ಎಳ್ಳು ಇತ್ಯಾದಿಗಳನ್ನು ಉಪಬೆಳೆಯಾಗಿಯೂ ಬೆಳೆಯುತ್ತಾರೆ. ತೆಂಗು, ಅಡಿಕೆಗಳು ಇಲ್ಲಿನ ವಾಣಿಜ್ಯ ಬೆಳೆಗಳು, ಪೋಲೀಸ್ ಇಲಾಖೆಯಲ್ಲಿ ಶಿಕ್ಷಣ ಇಲಾಖೆಯಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಕೆಲವರು ಬೆಂಗಳೂರಿನ ಗಾರ್ಮೆಂಟ್ಸ್ ಇತ್ಯಾದಿ ಖಾಸಗಿ ಕಂಪನಿಗಳಲ್ಲಿ ದುಡಿಮೆ ಮಾಡುತ್ತಿದ್ದಾರೆ. ಇಟ್ಟಿಗೆ ಫ್ಯಾಕ್ಟರಿ ಇದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೂ, ಕಂದಿಕೆರೆ ಜಿಲ್ಲಪಂಚಾಯಿತಿ ಕ್ಷೇತ್ರಕ್ಕೂ, ಮುದ್ದೇನಹಳ್ಳಿ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕ್ಷೇತ್ರದ ವ್ಯಾಪ್ತಿಗೂ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ

ಸದಸ್ಯರಿದ್ದಾರೆ. ಒಬ್ಬರು ಗ್ರಾಮಪಂಚಾಯ್ತಿ ನೌಕರರಿದ್ದಾರೆ. ಇದು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ.

ಮುದ್ದೇನಹಳ್ಳಿ ಅಂಚೆಗೆ ಸೇರಿದೆ. ಎಲ್ಲರೂ ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಕರಿಯಮ್ಮದೇವಿ, ಭಾರತಮಾತಾ ಬನಶಂಕರಿ, ಇತ್ಯಾದಿ ಸ್ತ್ರೀಶಕ್ತಿ ಸಂಘಗಳು, ಹಾಗೂ ವಾಲ್ಮೀಕಿ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘಗಳೂ ಇವೆ. ಶೇ. ೭೫ ಸಾಕ್ಷರತೆ ಹೊಂದಿರುವ ಗ್ರಾಮದಲ್ಲಿ ಅಂಗನವಾಡಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದೆ. ಇವುಗಳಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಇದೆ. ಶಾಲೆಯಲ್ಲಿ ಕ್ಷೀರಭಾಗ್ಯ ಯೋಜನೆ, ಬಿಸಿಯೂಟ ಯೋಜನೆ ಜಾರಿಯಲ್ಲಿದೆ.

ವೃದ್ಧಾಪ್ಯ ವೇತನ, ವಿಕಲಚೇತನ ವೇತನ, ವಿಧವಾವೇತನ ಇತ್ಯಾದಿ ಫಲಾನುಭವಿಗಳು ಇದ್ದಾರೆ. ಊರಲ್ಲಿ ಲಿಂಗಮುದ್ರೆ ಕಲ್ಲುಗಳಿವೆ. ಬಸವಣ್ಣದೇವರ ದೇವಸ್ಥಾನ (ಹಳೆ ದೇವಸ್ಥಾನ) ಕಾಟಲಿಂಗದೇವರ ದೇವಸ್ಥಾನ (ಓಬಳದೇವರು) ಆಂಜನೇಯ ಸ್ವಾಮಿ ದೇವಾಲಯ, ಮಾರಮ್ಮದೇವರ ದೇವಸ್ಥಾನ, ಭೂತಪ್ಪನ ಗುಡಿ ದೇವಾಲಯಗಳಿವೆ.

ವಿಶೇಷವಾಗಿ ಯುಗಾದಿ, ಮಹಾನವಮಿ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ. ಬಸವೇಶ್ವರ ಭಜನಾತಂಡ ಇದೆ. ಈಶ್ವರಯ್ಯ, ಮಹಲಿಂಗಯ್ಯ, ಬೈಲಪ್ಪ ಮುಂತಾದವರು ಭಜನೆ ಮಾಡುತ್ತಾರೆ. ಊರಲ್ಲಿ 'ಕುರುಕ್ಷೇತ್ರ' 'ಸತ್ಯವ್ರತ', 'ಮಾರ್ಕಂಡೇಯ' ನಾಟಕಗಳನ್ನು ಆಡುತ್ತಿರುತ್ತಾರೆ.

## ಕರಿನಿಂಗಯ್ಯನ ಪಾಳ್ಯ

ಕರಿನಿಂಗಯ್ಯನ ಪಾಳ್ಯ ಮೇಲನಹಳ್ಳಿ ಮಜರೆ ಗ್ರಾಮ ತುಂಬಾ ವರ್ಷಗಳ ಹಿಂದೆ ಕರಿನಿಂಗಜ್ಜ ಎಂಬುವವರು ವಾಸಿಸಲು ತೊಡಗಿದ ಈ ಸ್ಥಳ ಮುಂದೆ ಕರಿನಿಂಗಯ್ಯನ ಪಾಳ್ಯ ಎಂಬ ಗ್ರಾಮವಾಗಲು ಕಾರಣವಾಗಿದೆ. ಈ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ವಾಯುವ್ಯ ದಿಕ್ಕಿಗೆ ಒಂದೂವರೆ ಕಿ.ಮೀ. ದೂರದಲ್ಲಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣವು ಮೇಲನಹಳ್ಳಿ ಗ್ರಾಮದ ೭೯೦.೦೮ ರ ವಿಸ್ತೀರ್ಣದಲ್ಲೇ ಸೇರಿರುತ್ತದೆ.

ಬಯಲುನಾಡಿಗೆ ಸೇರಿದ ಗ್ರಾಮವಾಗಿದ್ದು, ಬಿಳಿಕಲ್ಲು ಹಾಗೂ ಬಿಳಿ ಮಣ್ಣು ಕಂಡುಬರುತ್ತದೆ. ಇಲ್ಲಿ ಕಂಕನರಿ, ಮೊಲ ಇತ್ಯಾದಿ ಪ್ರಾಣಿಗಳು ನವಿಲು, ಗಿಳಿ, ಕಾಗೆ ಇತ್ಯಾದಿ ಪಕ್ಷಿಗಳು ಕಂಡುಬರುತ್ತವೆ. ಹಸು, ಎಮ್ಮೆಗಳನ್ನು ಸಾಕುತ್ತಾರೆ. ತೋಳಗಳನ್ನು ಮನೆಗಳಲ್ಲಿ ಮಾಂಸಾಹಾರಕ್ಕಾಗಿ ಸಾಕುತ್ತಾರೆ.

ಇಲ್ಲಿ ೫೪೮.೩ ಮಿ.ಮೀ. ಮಳೆ ಬೀಳುತ್ತದೆ. ಚಳಿ ೧೬-೨೦ ಡಿ.ಸೆಂ. ಗಳಷ್ಟಿದ್ದರೆ, ಬಿಸಿಲು ೨೫-೨೮ ಡಿ.ಸೆಂ. ರಷ್ಟಿರುತ್ತದೆ. ಈ ಗ್ರಾಮದ ಪಕ್ಕದಲ್ಲಿ ಸ್ಮಶಾನದ ಹಳ್ಳ ಹರಿಯುತ್ತದೆ. ನೀರು ನವಿಲೆ ಕೆರೆಗೆ ಹೋಗುತ್ತದೆ. ಒಟ್ಟು ಐವತ್ತೊಂದು ಮಂದಿ ಜನಸಂಖ್ಯೆ ಹೊಂದಿರುವ ಎಲ್ಲರೂ ಕುರುಬ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಇವರನ್ನು ಇಲ್ಲಿ ಹಾಲುಮತಸ್ಥರು ಎನ್ನುತ್ತಾರೆ. ಎಲ್ಲರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ಹತ್ತು ಮನೆಗಳಿರುವ ಮನೆಗಳನ್ನು ಕಲ್ಲು ಹಾಗೂ ಮಣ್ಣನ್ನು ಬಳಸಿ ಕಟ್ಟಿದ್ದಾರೆ. ಮನೆಗಳಿಗೆ ಕೆಲವರು ಕುಂಬಾರರ ಕಪ್ಪು ಹೆಂಚು ಹಾಗೂ ಕೆಲವರು ಮಂಗಳೂರಿನ ಕೆಂಪು ಹೆಂಚನ್ನು ಬಳಸಿದ್ದಾರೆ. ಇವರ ಮುಖ್ಯ ಆಹಾರ ರಾಗಿಮುದ್ದೆ, ಚಿತ್ರಾನ್ನ, ಉಪ್ಪಿಟ್ಟು, ಇತ್ಯಾದಿಗಳು ಅಮುಖ್ಯ ಆಹಾರವಾಗಿವೆ. ಪಾಯಸ, ಒಬ್ಬಟ್ಟು, ಮಾಂಸಾಹಾರ ವಿಶೇಷ ಊಟಗಳಾಗಿವೆ.

ಮುಖ್ಯ ಬೆಳೆಯಾಗಿ ರಾಗಿಯನ್ನು ಬೆಳೆಯುತ್ತಾರೆ. ಆಹಾರ ಬೆಳೆಯೂ ರಾಗಿಯೇ ಆಗಿದೆ. ಉಪ ಬೆಳೆಗಳಾಗಿ ಹುರಳಿ, ಹೆಸರುಕಾಳು, ಅಲಸಂಡಿ, ಎಳ್ಳು ಇತ್ಯಾದಿ ಬೆಳೆಯುತ್ತಾರೆ. ತೆಂಗು ಇಲ್ಲಿನ ವಾಣಿಜ್ಯ ಬೆಳೆ ಕೊಬ್ಬರಿ ಇಲ್ಲಿನ ವ್ಯಾಪಾರಿ ಸರಕು.

ಶೆಟ್ಟಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲೂ, ಶೆಟ್ಟಿಕೆರೆ ಜಿಲ್ಲಾಪಂಚಾಯಿತಿ ಕ್ಷೇತ್ರದಲ್ಲೂ, ಹೊನ್ನೆಬಾಗಿ ತಾಲ್ಲೂಕು ಹಾಗೂ ಗ್ರಾಮಪಂಚಾಯಿತಿ ಕ್ಷೇತ್ರದ ವ್ಯಾಪ್ತಿಯಲ್ಲೂ ಬರುತ್ತದೆ. ಇದು ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರುತ್ತದೆ. ಗ್ರಾಮದಲ್ಲಿ ಚೌಡೇಶ್ವರಿ ಸ್ತ್ರೀಶಕ್ತಿ ಸಂಘವಿದೆ. ಗ್ರಾಮದಲ್ಲಿ ಶೇ. ೪೦ ರಷ್ಟು ಜನ ಸಾಕ್ಷರರಿದ್ದಾರೆ. ಇಲ್ಲಿನ ಇಬ್ಬರಿಗೆ ವೃದ್ಧಾಪ್ಯ ವೇತನ, ಒಬ್ಬರಿಗೆ ವಿಧವಾ ವೇತನ ಬರುತ್ತಿದೆ. ಹಬ್ಬಗಳಾದ ಗೌರಿ-ಗಣೇಶನ ಹಬ್ಬ, ದೀಪಾವಳಿ, ಸಂಕ್ರಾಂತಿ, ಶಿವರಾತ್ರಿ, ಯುಗಾದಿ ಇನ್ನು ಮುಂತಾದವುಗಳನ್ನು ಆಚರಿಸುತ್ತಾರೆ.

## ಕಾಡೇನಹಳ್ಳಿ

ಚಿಕ್ಕನಾಯಕನಹಳ್ಳಿ ಕಸಬಾ ಹೋಬಳಿಯಲ್ಲಿರುವ ಕಾಡೇನಹಳ್ಳಿಯು ಒಂದು ಕಂದಾಯ ಗ್ರಾಮ. ತಾಲ್ಲೂಕು ಸ್ಥಳದಿಂದ ದಕ್ಷಿಣಕ್ಕೆ ೩ ಕಿ.ಮೀ. ದೂರದಲ್ಲಿದೆ. ತುಂಬಾ ವರ್ಷಗಳ ಹಿಂದೆ ಇಲ್ಲಿ ಕಾಡು ಇತ್ತು. ಇದರ ಪಕ್ಕದಲ್ಲೇ ಜನವಸತಿ ಆರಂಭವಾಯಿತು. ಆದ್ದರಿಂದ ಕಾಡೇನಹಳ್ಳಿ ಎಂಬ ಹೆಸರಾಗಿದೆ. ಒಟ್ಟು

ಭೌಗೋಳಿಕ ವಿಸ್ತೀರ್ಣ ೨೭೪.೩೫ ಎಕರೆ, ಬಸವನಗುಡಿ ಎಂಬ ಗ್ರಾಮವು ಇದರ ಮಜರೆ ಗ್ರಾಮ. ಬಯಲುನಾಡಿಗೆ ಸೇರಿರುವ ಸುತ್ತಾ ಬಿಳಿಕಲ್ಲು, ಬಿಳಿ ಮಣ್ಣು, ಕಂಡುಬರುತ್ತದೆ. ಇಲ್ಲಿ ಕಾಡುಹಂದಿ, ಕಂಕನರಿ, ಮೊಲ ಇತ್ಯಾದಿ ಪ್ರಾಣಿಗಳು, ನವಿಲು, ಕಾಗೆ, ಗುಬ್ಬಚ್ಚಿ, ಸಂಬಾರಕಾಗೆ, ಮರಕುಟಿಗ, ಬೆಳವನ ಹಕ್ಕಿ ಇತ್ಯಾದಿ ಪಕ್ಷಿಗಳು ಕಂಡುಬರುತ್ತವೆ. ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಇತ್ಯಾದಿ ಪ್ರಾಣಿಗಳನ್ನು ಸಾಕುತ್ತಾರೆ. ಕೋಳಿಗಳನ್ನು ಸಾಕಿದ್ದಾರೆ.

ಇಲ್ಲಿ ೫೯೮.೩ ಮಿ.ಮೀ. ಮಳೆ ಬಿದ್ದ ದಾಖಲೆ ಇದೆ. ೧೫ ರಿಂದ ೨೦ ಡಿ.ಸೆಂ. ಚಳಿಯೂ ೨೬-೩೬ ಡಿ.ಸೆಂ. ಬಿಸಿಲೂ ಕಂಡುಬರುತ್ತದೆ. ಗ್ರಾಮಕ್ಕೆ ಕೆರೆ ಇದೆ. ಇದನ್ನು ಕಾಡೇನಹಳ್ಳಿ ಕೆರೆ ಎಂದು ಕರೆಯಲಾಗುತ್ತದೆ. ಮುದುಕನಕಟ್ಟೆ ಹಳ್ಳ ಎಂಬ ಹಳ್ಳ ಹರಿಯುತ್ತದೆ. ಊರಿನಲ್ಲಿ ಒಂದು ತೆರೆದ ಬಾವಿ (ಸೇದಾಬಾವಿ) ಇದೆ. ಈಗ ನೀರು ಇರುವುದಿಲ್ಲ. ಒಂದು ಕೈಪಂಪು, ೨೦ ಕೊಳವೆ ಬಾವಿಗಳಿವೆ. ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ೭ ಸಿಸ್ಟನ್‌ಗಳನ್ನು ಅಳವಡಿಸಲಾಗಿದೆ. ೨೮ ನಲ್ಲಿಗಳಿವೆ.

೨೦೧೧ ಜನಗಣತಿ ಪ್ರಕಾರ ೪೩೭ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ದೇವಾಂಗ ಜನಾಂಗದವರು ದೊಡ್ಡ ಸಮುದಾಯವಾಗಿದ್ದು, ಉಳಿದಂತೆ ಶೆಟ್ಟಿಬಣಜಿಗ, ನಾಯಕರು, ಮುಸ್ಲಿಂ, ಆದಿಕರ್ನಾಟಕ ಕುರುಬರು, ಲಿಂಗಾಯಿತರು, ಬ್ರಾಹ್ಮಣರು, ಆಚಾರ್ಯರು, ಕುಂಬಾರರು, ಆದಿ ದ್ರಾವಿಡರು, ಸಣ್ಣ ಸಮುದಾಯದವರಾಗಿದ್ದಾರೆ.

ಎಲ್ಲರೂ ಕನ್ನಡ ಭಾಷೆ ಮಾತನಾಡುತ್ತಾರೆ. ಮುಸ್ಲಿಂರು ಉರ್ದು ಭಾಷೆ ಮಾತನಾಡುತ್ತಾರೆ. ಒಟ್ಟು ೭೫ ಮನೆಗಳಿರುವ ಈ ಗ್ರಾಮದಲ್ಲಿ ೪ ಕಾಂಕ್ರೀಟ್ ಮನೆಗಳು, ೧ ಗುಡಿಸಲು ಉಳಿದವುಗಳು ಕಲ್ಲು ಹಾಗೂ ಮಣ್ಣಿನಿಂದ ಕಟ್ಟಿದವುಗಳಾಗಿವೆ. ಮೇಲ್ಛಾವಣಿಗೆ ಕಪ್ಪು ಹಾಗೂ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಇಲ್ಲಿಯ ಜನರ ಮುಖ್ಯ ಆಹಾರ ರಾಗಿಮುದ್ದೆ, ಅನ್ನ, ಉಪ್ಪಿಟ್ಟು, ಚಿತ್ರಾನ್ನ, ದೋಸೆ, ಇಡ್ಲಿ, ಇತ್ಯಾದಿಗಳು ಅಮುಖ್ಯ ಆಹಾರಗಳು ಪಾಯಸ, ಒಬ್ಬಟ್ಟು, ಮಾಂಸಹಾರ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನಗಾಡಿ, ಬೈಸಿಕಲ್ಲುಗಳ ಜೊತೆಗೆ ಟ್ರಾಕ್ಟರ್‌ಗಳು, ಬೈಕುಗಳು ಇವೆ. ಗ್ರಾಮದಲ್ಲಿ ರಸ್ತೆ ಹಾಗೂ ಚರಂಡಿ ವ್ಯವಸ್ಥೆ ಇದೆ. ಆಶ್ರಯ ಅಂಬೇಡ್ಕರ್ ಆವಾಸ್ ಜನತಾ ವಸತಿ ಯೋಜನೆಯ ೨೯ ಫಲಾನುಭವಿಗಳಿದ್ದಾರೆ.

ಕೃಷಿ ಮುಖ್ಯ ಕಸುಬು ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಆಹಾರ ಬೆಳೆಯೂ ಇದೇ ಆಗಿದೆ. ಉಪಬೆಳೆಗಳಾಗಿ ಉರುಳಿ, ಹೆಸರು, ಉದ್ದು, ಜೋಳ, ಅಲಸಂಡೆ, ಎಳ್ಳು ಇತ್ಯಾದಿ ಬೆಳೆಯುತ್ತಾರೆ. ತೆಂಗು ಮತ್ತು ಅಡಿಕೆ ಇಲ್ಲಿನ ವಾಣಿಜ್ಯ ಬೆಳೆ ತೆಂಗಿನಕಾಯಿ, ಹಾಗೂ ಕೊಬ್ಬರಿ ಇಲ್ಲಿನ ವ್ಯಾಪಾರಿಸರಕು, ಈ ಊರಿನಲ್ಲಿ ಹುಟ್ಟಿದವರು ಕೆ.ಎಸ್.ಆರ್.ಟಿ.ಸಿ. ಯಲ್ಲಿ ಪೋಲಿಸ್ ಇಲಾಖೆಯಲ್ಲಿ, ಶಿಕ್ಷಣ ಇಲಾಖೆಯಲ್ಲಿ ಸರ್ವೆ ಇಲಾಖೆಯಲ್ಲಿ ಉದ್ಯೋಗ ಪಡೆದಿದ್ದಾರೆ. ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಪಡೆದಿದ್ದಾರೆ. ಇಲ್ಲಿ ಮೂರು ಹಿಟ್ಟಿಗೆ ಪ್ಯಾಕ್ಟರಿಗಳು, ಒಂದು ಕಲ್ಲಿನಪುಡಿ ಪ್ಯಾಕ್ಟರಿ ಇದೆ.

ಕಸಬಾ ಹೋಬಳಿ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೂ, ಸೇರುತ್ತದೆ. ಇದೇ ಊರಿನವರು ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಒಬ್ಬರು ಗ್ರಾಮಪಂಚಾಯ್ತಿ ನೌಕರರು ಇದ್ದಾರೆ. ಇದು ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದೆ.

ಊರಿಗೆ ರಸ್ತೆ ಮಾರ್ಗವಿದೆ. ಸಂಪರ್ಕವಾಗಿ ಎಲ್ಲರೂ ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಇಲ್ಲಿ ಜ್ಞಾನೇಶ್ವರಿ, ಬನಶಂಕರಿ ಎಂಬ ಸ್ತ್ರೀಶಕ್ತಿ ಸಂಘಗಳಿವೆ. ಸ್ವಸಹಾಯ ಸಂಘಗಳು ಅಸ್ತಿತ್ವದಲ್ಲಿವೆ. ಧರ್ಮಸ್ಥಳ ಸಂಘ ಕೂಡ ಇದೆ.

ಗ್ರಾಮದಲ್ಲಿ ಶೇ. ೮೦ ರಷ್ಟು ಸಾಕ್ಷರರಿದ್ದು, ಇಲ್ಲಿ ಒಂದು ಅಂಗನವಾಡಿ, ಸರ್ಕಾರಿ ಕಿರಿಯ ಪಾಥಮಿಕ ಪಾಠಶಾಲೆ ಇದೆ. ಗ್ರಾಮದ ಜಯಮ್ಮ ಎಂಬ ೬೫ ವರ್ಷ ವಯಸ್ಸಿನ ವೀರಶೈವ ಸಮುದಾಯದ ಮಹಿಳೆ ಕಮಾಲೆ, ಇಸುಬು ಇತ್ಯಾದಿ ಕಾಯಿಲೆಗಳಿಗೆ ನಾಟಿ ಪದ್ಧತಿ ಮೂಲಕ ಔಷಧಿ ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನಾ ೧೬ ಫಲಾನುಭವಿಗಳು ಇದ್ದಾರೆ ಇಲ್ಲಿ ೩ ಚಿಕ್ಕ ಅಂಗಡಿಗಳಿವೆ.

ಗ್ರಾಮದಲ್ಲಿ ಶನಿಮಹಾದೇವರ ದೇವಸ್ಥಾನ, ಬಸವಣ್ಣನದೇವಸ್ಥಾನ, ಲಕ್ಷ್ಮೀದೇವಾಲಯ ಒಂದು ಭಜನಾ ಮಂದಿರವೂ ಇದೆ. ಪ್ರತಿ ಮೇ ತಿಂಗಳಲ್ಲಿ ಶನಿಮಹಾದೇವರ ಜಾತ್ರೆ ಮಾಡುತ್ತಾರೆ. ಜಾತ್ರೆಯಲ್ಲಿ ಉತ್ಸವ, ಆರತಿ, ದಾಸೋಹ ಇರುತ್ತದೆ. ಇವರು ಯುಗಾದಿ, ಮಹಾನವಮಿ, ಗೌರಿ-ಗಣೇಶ, ಶಿವರಾತ್ರಿ,

ಸಂಕ್ರಾಂತಿ, ಮಾರಿಹಬ್ಬ, ಬಸವನಹಬ್ಬ ಇತ್ಯಾದಿ ಹಬ್ಬಗಳನ್ನು ಆಚರಿಸುತ್ತಾರೆ.

ಗ್ರಾಮದ ಕೆ.ಬಿ. ಗಂಗಾಧರಯ್ಯ ಎಂಬ ೬೦ ವರ್ಷದ ದೇವಾಂಗ ಸಮುದಾಯದ ವ್ಯಕ್ತಿ, ಪರಮ್ಮ(೪೫) ಗಂಗಾಧರಪ್ಪ ಬಸವರಾಜು, ೩೫, ಲಿಂಗಾಯಿತರು, ಇವರುಗಳು ಭಜನಾ ತಂಡ ಕಟ್ಟಿಕೊಂಡು ಭಜನೆ ಮಾಡುತ್ತಾರೆ.

ಗ್ರಾಮದಲ್ಲಿ ದೇವರ ದಾಸಿಮಯ್ಯ ಯುವಕರ ಸಂಘ, ಕೆಂಪಾಂಬ ಕ್ರಿಕೆಟರ್ಸ್ ಸಂಘ, ರೈತಸಂಘಗಳು ಅಸ್ತಿತ್ವದಲ್ಲಿವೆ.

## ಖಾಸಿಂಸಾಬ್ ಪಾಳ್ಯ

ಖಾಸಿಂಸಾಬ್ ಪಾಳ್ಯ ಗ್ರಾಮವು ಚಿ.ನಾ.ಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೬ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ಖಾಸಿಂ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ಈ ಹೆಸರು ಬಂದಿದೆ.

ಮಾರುಹೊಳೆ ಮಜರೆ ಗ್ರಾಮದ ಖಾಸಿಂಸಾಬ್‌ಪಾಳ್ಯ ಬಯಲುನಾಡಾಗಿದೆ. ಎರೆ, ಕೆಂಪು ಮಿಶ್ರಿತ ಮಣ್ಣಿನ ಲಕ್ಷಣವಿದ್ದು, ವ್ಯವಸಾಯಕ್ಕೆ ಯೋಗ್ಯವಾಗಿದೆ. ಕಾಡು ಪ್ರಾಣಿಗಳಾದ ಕರಡಿ, ನರಿ, ಹಂದಿ, ಮೊಲ ಹಾಗೂ ಕಾಡು ಪಕ್ಷಿಗಳಾದ ನವಿಲು, ಗಿಳಿ, ಗೌಜಗ, ಕೋಗಿಲೆ ಮತ್ತಿತರ ಪಕ್ಷಿಗಳನ್ನು ಕಾಣಬಹುದಾಗಿದೆ.

ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ ಹಾಗೂ ಸಾಕು ಪಕ್ಷಿಯಾದ ಕೋಳಿ ಸಾಕಾಣೆಯಿದೆ.

ವಾರ್ಷಿಕ ಸರಾಸರಿ ೪೦೦ ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆಯಲ್ಲಿ ೩೪.೩೫ ಡಿ.ಸೆಂ. ಬಿಸಿಲಿನ ತಾಪವಿದ್ದು, ಚಳಿಗಾಲದಲ್ಲಿ ೧೦ಡಿ.ಸೆಂ.–೧೨ ಡಿ.ಸೆಂ. ಚಳಿಯ ಹವಾಮಾನವಿರುತ್ತದೆ. ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಮಿನಿಟ್ಯಾಂಕ್ ಮತ್ತು ಕೊಳಾಯಿಯ ಮೂಲಕ ಸಾರ್ವಜನಿಕವಾಗಿ ನೀರನ್ನು ಒದಗಿಸಲಾಗುತ್ತಿದೆ.

ಮುಸ್ಲಿಂ ಸಮುದಾಯ ವಾಸವಾಗಿರುವ ಉರ್ದು ಪ್ರಮುಖ ಭಾಷೆಯಾಗಿದ್ದು, ಕನ್ನಡ ಭಾಷಿಕರೂ ಇದ್ದಾರೆ. ಒಟ್ಟು ೯೬ ಮನೆಗಳಿದ್ದು, ೨೦೧೧ ರ ಜನಗಣತಿಯ ಪ್ರಕಾರ ೪೬೫ ಜನಸಂಖ್ಯಾ ಪ್ರಮಾಣವನ್ನು ಹೊಂದಿವೆ. ವಿವಿಧ ಪ್ರಕಾರದ ಮನೆಗಳಿದ್ದು, ಅವುಗಳಲ್ಲಿ, ಕಾಂಕ್ರೀಟ್, ಕಲ್ಲಿನ–ಮಣ್ಣಿನ ಹೆಂಚಿನ ಮತ್ತು ಸೀಟಿನಮನೆಗಳನ್ನು ಕಾಣಬಹುದು. ಜನತಾ, ಆಶ್ರಯ ವಸತಿ ಯೋಜನೆಯ ೧೪ ಮನೆಗಳಿವೆ.

ರಾಗಿಮುದ್ದೆ ಅನ್ನ ಪ್ರಮುಖ ಆಹಾರವಾಗಿದ್ದು, ಅಮುಖ್ಯವಾಗಿ ಚಪಾತಿ, ದೋಸೆ ಉಪ್ಪಿಟ್ಟು ಹಾಗೂ ಹಬ್ಬ–ವಿಶೇಷಗಳಲ್ಲಿ ಪಾಯಸ, ಸಿಹಿ, ಮತ್ತು ಬಾಡೂಟ ತಯಾರಿಸುತ್ತಾರೆ.ಕೃಷಿ ಬೀಡಿ ಸುತ್ತುವುದು ಇಲ್ಲಿಯ ಜನರ ಮುಖ್ಯ ಕಸುಬಾಗಿದೆ.

ಖಾಸಿಂಸಾಬ್ ಪಾಳ್ಯ ಚಿ.ನಾ.ಹಳ್ಳಿ ವಿಧಾನಸಭಾ ಕ್ಷೇತ್ರದ ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಹೊಯ್ಸಳ ಕಟ್ಟೆ, ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣಧಾಳು ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಹಾಗೂ ಗ್ರಾಮ ಪಂಚಾಯ್ತಿಯ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರು ಈ ಗ್ರಾಮದಿಂದ ಆಯ್ಕೆಯಾಗಿರುತ್ತಾರೆ.

ಒಂದು ಅಂಗನವಾಡಿ ಕೇಂದ್ರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ಉರ್ದು ಇಲ್ಲಿನ ಭಾಷಾ ಮಾಧ್ಯಮವಾಗಿದೆ. ಒಟ್ಟು ೯೬ ಮಕ್ಕಳು ಶಿಕ್ಷಣ ಪಡೆಯುತ್ತಿದ್ದು, ಇವರಿಗೆ ಶಾಲೆಯಲ್ಲಿ ಬಿಸಿಯೂಟ ಕ್ಷೀರಭಾಗ್ಯ, ಹಾಗೂ ಶೌಚಾಲಯದ ಸೌಲಭ್ಯ ಕಲ್ಪಿಸಿಕೊಡಲಾಗಿದೆ. ಶೇ. ೭೪% ಸಾಕ್ಷರತೆ ಇದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ಮತ್ತು ವಿಧವಾ ವೇತನದ ೧೨ ಫಲಾನುಭವಿಗಳಿದ್ದಾರೆ.

ಇಲ್ಲಿ ಧಾರ್ಮಿಕ ಪ್ರತೀಕವಾಗಿ ಮಸೀದಿ ಇದ್ದು, ರಂಜಾನ್, ಬಕ್ರೀದ್, ಈದ್ ಹಾಗೂ ಮೊಹರಂ ಹಬ್ಬಗಳನ್ನು ಸಡಗರ–ಸಂಭ್ರಮದಿಂದ ಆಚರಿಸುತ್ತಾರೆ.

## ಗಂಟೇನಹಳ್ಳಿ

ಗಂಟೇನಹಳ್ಳಿ ಒಂದು ಕಂದಾಯ ಗ್ರಾಮ. ತಾಲ್ಲೂಕು ಸ್ಥಳದಿಂದ ಪೂರ್ವಕ್ಕೆ ೨೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೫೮೯.೩೨ ಚ.ಕಿ.ಮೀ. ಗಳು, ಈ ಗ್ರಾಮವು ಬಯಲು ನಾಡಾಗಿದ್ದು, ಕಪ್ಪು ಕಲ್ಲು ಹಾಗೂ ಕೆಂಪು ಮತ್ತು ಕಪ್ಪು ಮಣ್ಣನ್ನು ಹೊಂದಿದ್ದಾರೆ. ಚೂಚಕಲ್ಲು ಗುಡ್ಡ ಇದೆ. ಸಾಮಾಜಿಕ ಅರಣ್ಯ ಇದೆ.

ಸುತ್ತ ಕಾಡು ಹಂದಿ, ಕರಡಿ, ಚಿರಚಿತಿಜ ಇತ್ಯಾದಿ ಕಾಡು ಪ್ರಾಣಿಗಳು ಕಂಡುಬರುತ್ತವೆ. ಹಸು, ಎಮ್ಮೆ, ಎತ್ತು, ಮೇಕೆ ಇತ್ಯಾದಿ ಪ್ರಾಣಿಗಳನ್ನು ಸಾಕಿದ್ದಾರೆ. ಈ ಸುತ್ತಾ ನವಿಲು, ಗಿಳಿ, ಗುಬ್ಬಚ್ಚಿ, ಕಾಗೆ ಇತ್ಯಾದಿ ಪಕ್ಷಿಗಳು

ಇವೆ. ಕೆಲವು ಸಮುದಾಯದವರು ಅವರ ಉಪಯೋಗಕ್ಕಾಗಿ ಕೋಳಿಯನ್ನು ಸಾಕುತ್ತಾರೆ.

೩೭೫.೬ ಮಿ.ಮೀ.ನಷ್ಟು ಮಳೆ ಬಿದ್ದ ದಾಖಲೆ ಇದೆ. ಚಳಿಯು ೧೮-೨೦ ಡಿ.ಸೆಂ. ನಷ್ಟಿದ್ದು, ಮಳೆಯು ೯ ಡಿ.ಸೆಂ. ನಷ್ಟಿದೆ. ಗಂಟೇನಹಳ್ಳಿ ಹಳ್ಳ ಇದೆ. ಈ ಗ್ರಾಮದಲ್ಲಿ ಕೊಳವೆ ಬಾವಿಗಳಿವೆ. ಗಂಟೇನಹಳ್ಳಿ ಕೆರೆ ಇದೆ. ಈ ಗ್ರಾಮದಲ್ಲಿ ಕಿರು ನೀರು ಸರಬರಾಜು ಯೋಜನೆ ಇದೆ.

ಸಾಮಾಜಿಕ ರಚನೆಯನ್ನು ಗಮನಿಸಿದಾಗ ಶೆಟ್ಟಿಬಣಜಿಗರು ದೊಡ್ಡ ಸಮುದಾಯದವರಾಗಿದ್ದು, ಕುಂಚಿಟಿಗ ಒಕ್ಕಲಿಗ, ನಾಯಕ, ಮಡಿವಾಳ, ಮುಸ್ಲಿಂ, ವಡ್ಡರು ಸಣ್ಣ ಸಮುದಾಯದವರಾಗಿದ್ದಾರೆ. ಜನರು ಕೆಲವರು ಕನ್ನಡ ಹಾಗೂ ಕೆಲವರು ಉರ್ದುವನ್ನು ಮಾತನಾಡುತ್ತಾರೆ. ೯೨ ಮನೆಗಳಿದ್ದು, ಆ ಮನೆಗಳನ್ನು ಕಲ್ಲು ಹಾಗೂ ಮಣ್ಣಿನಿಂದ ಕಟ್ಟಲಾಗಿದೆ. ಆ ಮನೆಗಳ ಮೇಲ್ಛಾವಣಿಗೆ ಕುಂಬಾರ ಕಪ್ಪು ಹೆಂಚು ಹಾಗೂ ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ.

ಜನರ ಮುಖ್ಯ ಆಹಾರ ರಾಗಿ ಮುದ್ದೆ ಆಗಿದೆ. ಅನ್ನವು ಅಮುಖ್ಯ ಆಹಾರವಾಗಿದೆ. ಒಬ್ಬಟ್ಟು, ಪಾಯಸ, ತಂಬಿಟ್ಟು ಹಾಗೂ ಕೆಲವರು ಮಾಂಸಹಾರ ಇವುಗಳು ವಿಶೇಷ ಆಹಾರವಾಗಿದೆ. ಜನರ ಸಾಂಪ್ರದಾಯಿಕ ವಾಹನ ಎತ್ತಿನಗಾಡಿ ಹಾಗೂ ಆಧುನಿಕ ವಾಹನ ಬೈಕ್‌ಗಳು ಆಗಿವೆ.

ಜನರ ಬಹುತೇಕ ಜನರ ವೃತ್ತಿ ಕೃಷಿಯೇ ಆಗಿದೆ. ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಆಹಾರ ಬೆಳೆಯೂ ರಾಗಿಯೇ ಆಗಿದೆ. ಹುರುಳಿ, ಹೆಸರು, ಅವರೆ, ತೊಗರಿ ಇತ್ಯಾದಿಗಳನ್ನು ಉಪಬೆಳೆಯಾಗಿ ಬೆಳೆಯುತ್ತಾರೆ. ತೆಂಗು ಮತ್ತು ಅಡಿಕೆಯನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ.

ಕಂದಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೂ, ಕಂದಿಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೂ, ತಿಮ್ಮನಹಳ್ಳಿ ತಾಲ್ಲೂಕು ಪಂಚಾಯಿತಿ ಕ್ಷೇತ್ರಕ್ಕೂ ರಾಮನಹಳ್ಳಿ ಗ್ರಾಮ ಪಂಚಾಯಿತಿ ಕ್ಷೇತ್ರಕ್ಕೂ ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರುತ್ತದೆ.

ರಸ್ತೆ ಮಾರ್ಗ ಇದೆ. ಸಂಪರ್ಕಕ್ಕಾಗಿ ತಿಮ್ಮನ ಹಳ್ಳಿಯಿಂದ ಅಂಚೆಯನ್ನು ಬಳಸುತ್ತಾರೆ. ಶ್ರೀ ಭುವನೇಶ್ವರಿ, ಶ್ರೀ ರಾಜರಾಜೇಶ್ವರಿ, ಶ್ರೀಲಕ್ಷ್ಮೀ, ಕನ್ನಿಕ ಪರಮೇಶ್ವರಿ, ಸ್ತ್ರೀ ಶಕ್ತಿ ಸಂಘಗಳಿವೆ. ಈ ಗ್ರಾಮದಲ್ಲಿ ಸ್ವಸಹಾಯ ಸಂಘ ಇದೆ.

ಶೇ. ೭೦% ಸಾಕ್ಷರತೆ ಹೊಂದಿರುವ ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದೆ. ವೃದ್ಧಪ್ಯ ವೇತನ, ವಿಕಲಚೇತನ ವೇತನ, ವಿಧವಾ ವೇತನ ಪಡೆಯುವ ಫಲಾನುಭವಿಗಳಿದ್ದಾರೆ. ಅಂಗಡಿಗಳು ಇವೆ. ಭೂತರಾಯ ಸ್ವಾಮಿ ದೇವಾಲಯ ಇದೆ. ಏಪ್ರಿಲ್‌ನಲ್ಲಿ ಭೂತರಾಯ ಸ್ವಾಮಿ ಜಾತ್ರೆ ಬಾನ ಮಾಡುತ್ತಾರೆ.

## ಗೆಂಡೆಬಾಲನಹಟ್ಟಿ

ಗೆಂಡೆಬಾಲನಹಟ್ಟಿ ಮಲ್ಲೇನಹಳ್ಳಿಯ ಮಜರೆ ಗ್ರಾಮ. ಕಂದಿಕೆರೆ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತದೆ. ಗೆಂಡೆಬಾಲಜ ಎಂಬುವವರು ರಾಮಪ್ಪನಹಟ್ಟಿ ಎಂಬ ಗ್ರಾಮದಿಂದ ವಲಸೆ ಬಂದು ಈ ಸ್ಥಳದಲ್ಲಿ ಮೊದಲು ನೆಲೆಸಿದರು, ನಂತರದ ಇಲ್ಲಿನ ಜನವಸತಿಗೆ ಗೆಂಡೆ ಬಾಲನಹಟ್ಟಿ ಎಂದು ಕರೆಯಲಾಯಿತು. ಈ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೫ ಕಿ.ಮೀ. ದೂರದಲ್ಲಿದೆ. ಇದರ ಭೌಗೋಳಿಕ ವಿಸ್ತೀರ್ಣವು ಮಲ್ಲೇನಹಳ್ಳಿಯ ೨೮೩.೨೫ ಹೆಕ್ಟೇರ್ ವಿಸ್ತೀರ್ಣದಲ್ಲಿ ಸೇರಿದೆ.

ಕಪ್ಪು ಹಾಗೂ ಬಿಳಿಕಲ್ಲು, ಬಿಳಿ ಮಣ್ಣು ಕಾಣಬರುತ್ತದೆ. ಈ ಸುತ್ತ ನರಿ, ತೋಳ, ಕಾಡುಹಂದಿ, ಕರಡಿ ಮುಂತಾದ ಪ್ರಾಣಿಗಳು ಕಂಡುಬರುತ್ತದೆ. ಹಸು, ಎಮ್ಮೆ, ಎತ್ತು, ಕುರಿ, ಮೇಕೆಗಳನ್ನು ಸಾಕುತ್ತಾರೆ. ಕಾಗೆ, ಸಂಬಾರಕಾಗೆ, ಬೆಳವನಹಕ್ಕಿ, ಗೌಜುಗ, ಇತ್ಯಾದಿ ಪಕ್ಷಿಗಳು ಇವೆ. ಕೋಳಿಗಳನ್ನು ಸಾಕುತ್ತಾರೆ. ಇಲ್ಲಿ ೫೯೮.೩ ರ ಆಸುಪಾಸು ಮಳೆ ಬೀಳುತ್ತದೆ. ಚಳಿ ೯ ಡಿ.ಸೆಂ. ಬಿಸಿಲು ೨೮.೩೬ ಡಿ.ಸೆಂ. ಇರುತ್ತದೆ. ಗ್ರಾಮದ ಪಕ್ಕ ಒಂದು ಚಿಕ್ಕ ನೀರಿನ ಕಟ್ಟೆ ಇದೆ.

ಒಟ್ಟು ೧೮೬ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ಎಲ್ಲರೂ ಗೊಲ್ಲರು ಅದಕ್ಕಾಗಿ ಇದನ್ನು ಗೊಲ್ಲರಹಟ್ಟಿ ಎಂತಲೂ ಕರೆಯಲಾಗುತ್ತದೆ. ಇವರು ಕನ್ನಡ ಭಾಷೆ ಮಾತನಾಡುತ್ತಾರೆ. ಒಟ್ಟು ೨೫ ಮನೆಗಳನ್ನು ಹೊಂದಿರುವ ಮಣ್ಣು ಹಾಗೂ ಕಲ್ಲನ್ನು ಬಳಸಿ ಮನೆ ಕಟ್ಟಿದ್ದಾರೆ. ಮೇಲ್ಛಾವಣೆಗೆ ಕುಂಬಾರರ ಹಾಗೂ ಮಂಗಳೂರಿನ ಹೆಂಚನ್ನು ಹೊದಿಸಿದ್ದಾರೆ.

ಇಲ್ಲಿನ ಜನರ ಮುಖ್ಯ ಆಹಾರ ರಾಗಿಮುದ್ದೆ, ಅಮುಖ್ಯವಾಗಿ ರೊಟ್ಟಿ, ಅನ್ನ, ಇಡ್ಲಿ, ದೋಸೆ ಬಳಸುತ್ತಾರೆ. ವಿಶೇಷ ಊಟವಾಗಿ ಪಾಯಸ, ಒಬ್ಬಟ್ಟು, ಮಾಂಸಾಹಾರ ಸೇವಿಸುತ್ತಾರೆ. ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳ ಜೊತೆಗೆ ಟ್ರಾಕ್ಟರ್‌ಗಳು, ಬೈಕ್‌ಗಳು ಇವೆ. ಗ್ರಾಮಕ್ಕೆ ಚರಂಡಿ ವ್ಯವಸ್ಥೆ ಇದೆ.

ಎಲ್ಲರೂ ಕೃಷಿಕರೆ ಆಗಿದ್ದಾರೆ. ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಆಹಾರ ಬೆಳೆಯೂ ಇದೇ ಆಗಿದೆ. ಹೆಸರುಕಾಳು, ತೊಗರಿ, ಎಳ್ಳು, ತೊಗರಿಕಾಳು, ಅಲಸಂಡೆ ಇತ್ಯಾದಿಗಳು ಉಪಬೆಳೆಗಳಾಗಿವೆ. ತೆಂಗು ಇಲ್ಲಿನ ವಾಣಿಜ್ಯ ಬೆಳೆಯಾಗಿದೆ.

ಕಂದಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸೇರುತ್ತದೆ. ಇದಕ್ಕೆ ಕಂದಿಕೆರೆಯ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಇದು ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತದೆ. ಆನ ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ.

ಶೇ. ೬೦ ರಷ್ಟು ಸಾಕ್ಷರತೆ ಹೊಂದಿರುವ ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದೆ. ಇಲ್ಲಿ ೨೬ ಮಕ್ಕಳು ಶಿಶುಶಿಕ್ಷಣ ಪಡೆಯುತ್ತಿದ್ದಾರೆ. ಗ್ರಾಮದಲ್ಲಿ ವೃದ್ಧಪ್ಯ ವಿಧವಾ ವೇತನ ಫಲಾನುಭವಿಗಳಿದ್ದಾರೆ. ಮಾಳಮ್ಮ ಶಾರದಮ್ಮ, ನಿಂಗಮ್ಮ ಎಂಬುವವರು ಸೋಬಾನೆ ಹಾಡು ಹಾಡುತ್ತಾರೆ. ಬೇಸಿಗೆಯಲ್ಲಿ ಕುರುಕ್ಷೇತ್ರ ಗಯಚರಿತ್ರೆ ಅಥವಾ ಕೃಷ್ಣಾಜನಪರ ಯುದ್ಧ ನಾಟಕಗಳನ್ನು ಅಭಿನಯಿಸುತ್ತಾರೆ.

## ಗೌರಸಾಗರ

ಕಂದಿಕೆರೆ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಗೌರಸಾಗರ ಕಂದಾಯ ಗ್ರಾಮ. ಇದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿ ಉತ್ತರ ದಿಕ್ಕಿನಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೫೨.೧೨ ಹೆಕ್ಟೇರ್ ಬಯಲು ಬಯಲುನಾಡಿನಲ್ಲಿ ಬರುವ ಈ ಗ್ರಾಮದ ಸುತ್ತಾ ಬಿಳಿ ಕಲ್ಲು, ಬಿಳಿ ಮಣ್ಣು ಕಾಣಸಿಗುತ್ತದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ, ಹಂದಿ, ಕಾಡು ಪ್ರಾಣಿಗಳು, ಗಿಳಿ, ಕಾಗೆ, ಬೆಳವನಹಕ್ಕಿ, ಗುಬ್ಬಚ್ಚಿ ಮುಂತಾದ ಪಕ್ಷಿಗಳು, ಹಸು, ಎತ್ತು, ಎಮ್ಮೆ, ಇತ್ಯಾದಿ ಸಾಕುಪ್ರಾಣಿಗಳು ಕಂಡುಬರುತ್ತವೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ದಾಖಲೆ ಪ್ರಕಾರ ಇಲ್ಲಿ ೫೯೮.೩ ಮಿಮೀ ಮಳೆ ಬೀಳುತ್ತದೆ. ೧೨ ಡಿ.ಸೆಂ. ಚಳಿ ಇರುತ್ತದೆ. ೨೮-೩೬ ಡಿ.ಸೆಂ. ಬಿಸಿಲು ಇರುತ್ತದೆ. ಈ ಗ್ರಾಮಕ್ಕೆ ಸೇರಿದ ಅಮ್ಮಯ್ಯನ ಹೊಂಡ ಇದೆ. ಊರಿಗೆ ಸೇರಿದ ಒಂದು ಕೆರೆ ಇದೆ. ಅದನ್ನು ಗೌರಸಾಗರದ ಕೆರೆ ಎನ್ನಲಾಗುತ್ತದೆ. ಇದು ಗೊರವಯ್ಯ ಮೂಲದಿಂದ ಕೆರೆಸೇರಿ ಗೊರವಸಾಗರ ಗೌರಸಾಗರವಾಗಿದೆ.

ಕುರುಬ ಸಮುದಾಯ ದೊಡ್ಡ ಸಮುದಾಯವಾಗಿದ್ದು, ಇಲ್ಲಿ ಶ್ರೀವೈಷ್ಣವ, ಮರಾಠ, ಆದಿಕರ್ನಾಟಕ, ಮುಸ್ಲಿಂ ಸಮುದಾಯದವರು ಸಣ್ಣ ಸಮುದಾಯದವರಾಗಿದ್ದಾರೆ. ಇಲ್ಲಿ ಕನ್ನಡ ಹಾಗೂ ಉರ್ದು ಮಾತನಾಡುತ್ತಾರೆ. ೨೦೧೧ ರ ಜನಸಂಖ್ಯೆಯ ಪ್ರಕಾರ ಒಟ್ಟು ೬೬೪ ಜನಸಂಖ್ಯೆಯನ್ನು ಹೊಂದಿದೆ. ೧೪೮ ಕುಟುಂಬಗಳು ವಾಸಿಸುತ್ತಿವೆ. ಇಲ್ಲಿ ಕಾಂಕ್ರೀಟ್ ಮನೆಗಳು, ಕುಂಬಾರರ ಹಾಗೂ ಮಂಗಳೂರಿನ ಹೆಂಚಗಳನ್ನು ಮೇಲ್ಛಾವಣೆಗೆ ಬಳಸಲಾಗಿದೆ.

ಮುಖ್ಯ ಆಹಾರ ರಾಗಿ ಮುದ್ದೆ ಹಾಗೂ ಅನ್ನ, ಜೊತೆಗೆ ಉಪ್ಪಿಟ್ಟು, ಚಿತ್ರಾನ್ನ ಇಡ್ಲಿ, ದೋಸೆಗಳನ್ನು ಅಮುಖ್ಯ ಆಹಾರಗಳಾಗಿ ಬಳಸಲಾಗುತ್ತದೆ.

ವಿಶೇಷ ಆಹಾರವಾಗಿ ಪಾಯಸ, ಒಬ್ಬಟ್ಟು ಮಾಡುತ್ತಾರೆ. ಸಾಂಪ್ರದಾಯಿಕ ಎತ್ತಿನ ಗಾಡಿಗಳ ಜೊತೆಗೆ ಒಂದು ಕಾರು, ಎರಡು ಟ್ರಾಕ್ಟರ್ ಬೈಕ್‌ಗಳು ಇವೆ. ಗ್ರಾಮದಲ್ಲಿ ಒಳಚರಂಡಿ ವ್ಯವಸ್ಥೆ ಇದೆ.

ಮುಖ್ಯ ಕಸುಬು ಕೃಷಿ, ಮುಖ್ಯಬೆಳೆಯಾಗಿ ರಾಗಿಯನ್ನು, ಉಪಬೆಳೆಗಳಾಗಿ ಅಲಸಂಡೆ, ಉರುಳಿ, ಹುಚ್ಚೆಳ್ಳು, ಅವರೆ, ಉದ್ದು ಇತ್ಯಾದಿ ದಾನ್ಯಗಳನ್ನು ಬೆಳೆಯುತ್ತಾರೆ. ತೆಂಗು ಇಲ್ಲಿನ ವಾಣಿಜ್ಯ ಬೆಳೆ, ಕೊಬ್ಬರಿ ವ್ಯಾಪಾರಿ ಸರಕಾಗಿದೆ. ಮುತ್ತುಗದ ಎಲೆಗಳನ್ನು ಜೋಡಿಸಿ ಊಟದ ಎಲೆಗಳನ್ನಾಗಿಸಿ ಮಾರುತ್ತಾರೆ.

ಗ್ರಾಮದ ಶಿಕ್ಷಣ ಆಹಾರ ನಾಗರೀಕ ಪೂರೈಕೆ ಸಾರಿಗೆ ಸೇರಿದಂತೆ ೧೦ ಜನ ಸರ್ಕಾರಿ ನೌಕರಿದ್ದಾರೆ. ವಕೀಲರು ಹಾಗೂ ಖಾಸಗಿ ಉದ್ದಿಮೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ಇಟ್ಟಿಗೆ ಕಾರ್ಖಾನೆಯಿದೆ. ಉಪನಿರ್ದೇಶಕ ಶಿವಣ್ಣ, ಕಾಲೇಜು ಶಿಕ್ಷಣ ಇಲಾಖೆಯ ಪಿ. ಗಂಗಾಧರಯ್ಯ ಈ ಗ್ರಾಮದ ವಿಶೇಷ ನೌಕರರು.

ಕಂದಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೂ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೂ, ತುಮಕೂರು ಲೋಕಸಭಾ ಕ್ಷೇತ್ರಕ್ಕೂ ಸೇರುತ್ತದೆ. ಹುಳಿಯಾರು-ಚಿಕ್ಕನಾಯಕನಹಳ್ಳಿಗೆ ಗ್ರಾಮಸಡಕ್ ರಸ್ತೆ ಇದೆ. ಗ್ರಾಮದವರು ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಕಂದೀಕೆರೆ ಗ್ರಾಮ ಪಂಚಾಯಿತಿಗೆ ಸೇರಿದೆ.

ಕರಿಯಮ್ಮ, ಬನಶಂಕರಿ, ಶ್ರೀರಾಮ ಮೈಲಾರಲಿಂಗೇಶ್ವರ ಸ್ತ್ರೀಶಕ್ತಿ ಸಂಘಗಳಿವೆ. ಶೇ. ೭೦ ಸಾಕ್ಷರರಿರುವ ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದೆ. ವೃದ್ಧಾಪ್ಯ, ವಿಧವಾ ವಿಕಲಚೇತನ ವೇತನ ಪಡೆಯುವ ಫಲಾನುಭವಿಗಳಿದ್ದಾರೆ. ಗ್ರಾಮದವರು ನಾಗರಕಲ್ಲುಗಳ ಪೂಜೆ ಮಾಡುತ್ತಾರೆ. ಕರಿಯಮ್ಮದೇವಿ ದೇವಸ್ಥಾನ, ಕೋಟೆಕಲ್ಲು ರಂಗನಾಥಸ್ವಾಮಿ ದೇವಸ್ಥಾನಗಳಿವೆ.

ಏಪ್ರಿಲ್ ತಿಂಗಳನಲ್ಲಿ ಜಾತ್ರೆ ಮಾಡುತ್ತಾರೆ. ಕೆಂಡ, ಸಿಡಿ, ಬಾನ ಇರುತ್ತದೆ. ಬಾಬಯ್ಯನ ಜಲ್ದಿಯನ್ನು ಮುಸ್ಲಿಮರು ಆಚರಿಸುತ್ತಾರೆ. ಗ್ರಾಮದ ಲಕ್ಷ್ಮಮ್ಮ, ಸಾಕಮ್ಮ, ಕಮಲಜ್ಜಿ, ಎಂಬುವರು ಸೋಬಾನೆ ಹಾಗೂ ಜಾನಪದ ಹಾಡುಗಳನ್ನು ಹಾಡುತ್ತಾರೆ.

## ಗಂಗನಾಯಕನಹಳ್ಳಿ

ಇದು ನಾಯಕ ಜನಾಂಗದವರ ಬುಡಕಟ್ಟು ಗ್ರಾಮ. ಚಿಕ್ಕನಾಯಕನಹಳ್ಳಿಗೆ ೧೨ ಕಿ.ಮೀ. ದೂರದಲ್ಲಿದೆ. ಸಾದರ ಹಳ್ಳಿಯ ಮಜರೆ ಗ್ರಾಮ ಇದು ೧೪೩ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಬಯಲು ಭೂಪ್ರದೇಶ ಕಪ್ಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದೆ. ಗ್ರಾಮದ ವಾರ್ಷಿಕ ಮಳೆ ಪ್ರಮಾಣ೫೪೭ ಮಿ.ಮೀ. ಆಗಿದೆ. ಬಿಸಿಲು ೩೭ ಡಿ.ಸೆಂ. ಚಳಿ ೧೨ ಡಿ.ಸೆಂ. ಆಗಿದೆ. ಕುಡಿಯಲು ಗ್ರಾಮ ಪಂಚಾಯಿತಿ ವತಿಯಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಒಂದು ಕೊಳವೆ ಬಾವಿ ಇದೆ. ಒಂದು ಸಿಸ್ಟಮ್ ಇದೆ. ನಾಯಕ ಜನಾಂಗ ಮಾತ್ರ ಇಲ್ಲಿದ್ದು ೧೦ ಮನೆಗಳಿವೆ. ೫೩ ಜನಸಂಖ್ಯೆ ಇದೆ. ಹೆಂಚಿನ, ಸೀಟಿನ ಸ್ವರೂಪದಲ್ಲಿವೆ. ಇವುಗಳು ಜನತಾ, ಆಶ್ರಯ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಹೊಂದಿದ್ದಾರೆ. ರಾಗಿ ಮುದ್ದೆ ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನವಾಗಿದೆ. ರಾಗಿ, ಹೆಸರು, ಅವರೆ, ಹುರುಳಿ, ಬೆಳೆಯುತ್ತಾರೆ. ತೆಂಗಿನ ತೋಟವಿದೆ.

ಹಸು, ಕುರಿ, ಮೇಕೆ,, ಸಾಕಿದ್ದಾರೆ. ಕಂದಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭೆ, ಕಂದಿಕೆರೆ ಜಿಲ್ಲಾ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕೇಂದ್ರವಾಗಿದ್ದು, ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಕಂದಿಕೆರೆಯಿಂದ ಅಂಚೆ ಸಂಪರ್ಕವಿದೆ. ಆಸ್ಪತ್ರೆ, ಶಿಕ್ಷಣ, ಸಾರಿಗೆ, ಪಡಿತರ ಸೌಲಭ್ಯವನ್ನು ಕಂದಿಕೆರೆ ಸಾದರಹಳ್ಳಿಯಿಂದ ಪಡೆದುಕೊಳ್ಳುತ್ತಾರೆ. ಕಂದಿಕೆರೆಯ ಮೂಲಕ ಚಿಕ್ಕನಾಯಕನಹಳ್ಳಿಗೆ ಬಸ್ ಸಂಪರ್ಕವಿದೆ. ಸಂಧ್ಯಾಸುರಕ್ಷೆ, ವಿಧವಾ ವೇತನವನ್ನು ಫಲಾನುಭವಿಗಳಿದ್ದಾರೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ, ಹಬ್ಬಗಳನ್ನು ಆಚರಿಸುತ್ತಾರೆ.

## ಗೋಪಗೊಂಡನಹಳ್ಳಿ

ಗೋಪಗೊಂಡನಹಳ್ಳಿ ಒಂದು ಮಜುರೆ ಗ್ರಾಮವಾಗಿದ್ದು, ಗೋಪಾಲಯ್ಯ ಎಂಬುವರು ಇಲ್ಲಿನ ಮೂಲ ನಿವಾಸಿ ಆದ್ದರಿಂದ ಮೊದಲಿಗೆ ಗುಡಿಸಲು ಇದ್ದುದರಿಂದ ಈ ಹೆಸರು ಬಂದಿದೆ.

ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೯ ಕಿ.ಮೀ ದೂರದಲ್ಲಿ ಇದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೮೫೬.೨೬ ಹೆಕ್ಟೇರ್ ವ್ಯಾಪ್ತಿಯನ್ನು ಹೊಂದಿದೆ. ಗೋಪಗೊಂಡನಹಳ್ಳಿ ಕಂದಿಕೆರೆ ಪಂಚಾಯ್ತಿಗೆ ಸೇರಿದೆ. ಬಯಲುನಾಡು ಪ್ರದೇಶಕ್ಕೆ ಸೇರಿದ್ದು ಬಿಳಿಯ ಕಲ್ಲು, ಬಿಳಿಯ ಮಣ್ಣು ಕಂಡು ಬರುತ್ತದೆ. ತೋಳ, ಕಂಕನರಿ, ಮೊಲ ಇತ್ಯಾದಿ ಕಾಡು ಪ್ರಾಣಿಗಳು ಕಂಡು ಬರುತ್ತವೆ. ಹಸು ಎಮ್ಮೆ ಎತ್ತು ಕುರಿ, ಮೇಕೆ ಮತ್ತು ಇತ್ಯಾದಿಗಳನ್ನು ಸಾಕುತ್ತಾರೆ. ಈ ಸುತ್ತಾ ಕಾಗೆ ನವಿಲೂ ಪಾರಿವಾಳ, ಸಂಬಾರಕಾಗೆ ಬೆಳವನಹಕ್ಕಿ ಇತ್ಯಾದಿ ಪಕ್ಷಿಗಳು ಕಂಡು ಬರುತ್ತವೆ. ಕೆಲವು ಸಮುದಾಯದವರು ಸ್ವಂತ ಉಪಯೋಗಕ್ಕಾಗಿ ಕೋಳಿಗಳನ್ನು ಸಾಕುತ್ತಾರೆ.

ಇಲ್ಲಿ ೫೦೩.೮ ಮಿಮೀ ವಾಡಿಕೆ ಮಳೆ ಬಿದ್ದ ದಾಖಲೆ ಇದೆ. ಚಳಿಯೂ ೧೯–೨೦ ಡಿ.ಸೆಂ. ನಷ್ಟಿದ್ದು ಬಿಸಿಲು ೨೮.೩೬ ಡಿ.ಸೆಂ. ನಷ್ಟಿರುತ್ತದೆ. ತೆರೆದ ಬಾವಿ(ಸೇದಾಬಾವಿ) ಇದ್ದು ಸದ್ಯ ನೀರಿಲ್ಲ ಕುರುಬರು ದೊಡ್ಡ ಸಮುದಾಯವಾಗಿದ್ದು ಇವರು ಕನ್ನಡ ಭಾಷೆಯನ್ನು ಬಳಸುತ್ತಾರೆ. ಇಲ್ಲಿ ಒಂದು ಗೋಪಗೊಂಡನಹಳ್ಳಿ ಓಣಿ ಇದೆ. ಈ ಗ್ರಾಮದಲ್ಲಿ ಮನೆಗಳನ್ನು ಕಲ್ಲು ಹಾಗೂ ಮಣ್ಣು ಬಳಸಿ ಕಟ್ಟಿದ್ದಾರೆ.

ಮೇಲ್ಹಾವಣೆಗೆ ಕೆಲವರು ಕುಂಬಾರರ ಕಪ್ಪು ಹೆಂಚು ಮತ್ತು ಕೆಲವರು ಮಂಗಳೂರು ಕೆಂಪು ಹೆಂಚನ್ನು ಬಳಸಿದ್ದಾರೆ. ಈ ಗ್ರಾಮದಲ್ಲಿ ಕೆಲವರು ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆಯನ್ನು ಹೊಂದಿದ್ದಾರೆ. ಬಹುಮುಖ್ಯ ಆಹಾರ ರಾಗಿಮುದ್ದೆ ಅನ್ನ ಆಗಿದೆ. ಉಪ್ಪಿಟ್ಟು, ಚಿತ್ರಾನ್ನ ಇಡ್ಲಿ ದೋಸೆ ಇತ್ಯಾದಿ ಅಮುಖ್ಯ ಆಹಾರವಾಗಿದೆ. ಇಲ್ಲಿನ ಜನ ಪಾಯಸ, ಒಬ್ಬಟ್ಟು ಹಾಗೂ ಕೆಲವರು ಮಾಂಸಹಾರವನ್ನು ವಿಶೇಷ ಆಹಾರವಾಗಿ ಬಳಸುತ್ತಾರೆ. ಸಾಂಪ್ರದಾಯಿಕ ಎತ್ತಿನಗಾಡಿಗಳ ಜೊತೆಗೆ ಆಧುನಿಕ ಬೈಕುಗಳೂ ಇವೆ. ನರೇಗ ರಸ್ತೆ ಚರಂಡಿ ವ್ಯವಸ್ಥೆ ಇವೆ.

ಬಹುತೇಕ ಜನ ಕೃಷಿಯನ್ನು ಅವಲಂಬಿಸಿದ್ದು ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ರಾಗಿಯೂ ಸಹ ಇವರ ಆಹಾರ ಬೆಳೆಯೂ ಆಗಿದೆ. ಇವರು ಉಪಬೆಳೆಗಳಾಗಿ ಹುರುಳಿ, ತೊಗರಿ, ಹೆಸರುಕಾಳು, ಅವರೆ ಉದ್ದಿನಕಾಳು ಅಲಸಂಡೆ ಇತ್ಯಾದಿ ಬೆಳೆಯನ್ನು ಬೆಳೆಯುತ್ತಾರೆ.

ಇಲ್ಲಿನ ಜನರ ವಾಣಿಜ್ಯ ಬೆಳೆ ತೆಂಗು ಆಗಿದೆ. ಇಲ್ಲಿನ ಮುಖ್ಯ ವ್ಯಾಪಾರ ಸರಕು ಎಂದರೆ ತೆಂಗಿನ ಕಾಯಿ, ಕೊಬ್ಬರಿ, ಅಗಿದೆ. ಈ ಗ್ರಾಮದ ೨

ಶಿಕ್ಷಕರಿದ್ದಾರೆ. ಕೆಲವರು ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಪಡೆದಿದ್ದಾರೆ.

ಕಂದಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೂ, ಕಂದಿಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೂ, ತಾಲ್ಲೂಕು ಪಂಚಾಯಿತ್ ಕ್ಷೇತ್ರಕ್ಕೂ, ತುಮಕೂಉು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರುತ್ತದೆ. ಗ್ರಾಮದ ಬಹುತೇಕ ಜನ ಸಂಪರ್ಕಕ್ಕಾಗಿ ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಗ್ರಾಮದಲ್ಲಿ ಬೀರಲಿಂಗೇಶ್ವರ ಮಾರುತಿ, ಕೆಂಪಾಂಭ ಸ್ವಸಹಾಯ ಸಂಘಗಳಿವೆ.

ಗೋಪಗೊಂಡನಹಳ್ಳಿಯಲ್ಲಿ ಶೇ ೭೦ ರಷ್ಟು ಸಾಕ್ಷರರಿದ್ದು, ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವಿಧವಾ ವೇತನಗಳ ೧೪ ಫಲಾನುಭವಿಗಳಿದ್ದಾರೆ. ಶಿಕ್ಷಣ, ಪಡಿತರ ವಿಷಯಗಳಿಗೆ ಕಂದಿಕೆರೆಗೆ ಹೋಗುತ್ತಾರೆ. ಕಂದಿಕೆರೆ ರೇಣುಕಾ ಮಲ್ಲಮ್ಮನ ಜಾತ್ರೆಯಲ್ಲಿ ಈ ಗ್ರಾಮದ  ಪಾತ್ರ ವಿಶೇಷವಾಗಿರುತ್ತದೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಗೋಡೆಕೆರೆ ಗೇಟ್

ಗೋಡೆಕೆರೆ ಗೇಟ್ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೬ ಕಿ.ಮೀ. ದಕ್ಷಿಣ ದಿಕ್ಕಿನಲ್ಲಿದೆ. ಮಜರೆ ಗ್ರಾಮ ಭೈರಗಾನಹಳ್ಳಿ ವ್ಯಾಪ್ತಿಗೆ ಒಳಪಡುತ್ತದೆ ಹಾಗೂ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಶೇಟ್ಟಿಕೆರೆ ಜಿಲ್ಲಾಪಂಚಾಯಿತಿ ಕ್ಷೇತ್ರ, ಜೆ.ಸಿ.ಪುರ ತಾಲ್ಲೂಕು ಪಂಚಾಯಿತಿ ಕ್ಷೇತ್ರ ಹಾಗೂ ಗೋಡೆಕೆರೆ ಗ್ರಾಮ ಪಂಚಾಯ್ತಿಗೆ ಸೇರಿದೆ.

ಒಟ್ಟು ೫೫ ಮನೆಗಳಿಂದ ಕೂಡಿದ್ದು ಎಲ್ಲಾ ಮನೆಗಳೂ ಸರ್ಕಾರದಿಂದ ನೀಡಿದ ಗ್ರಾಂಟ್ ಮನೆಗಳಾಗಿವೆ. ೩ ಮಿನಿಟ್ಯಾಂಕ್‌ಗಳಿದ್ದು ಕುಡಿಯುವ ನೀರಿನ ಸೌಲಭ್ಯವಿದೆ. ಈ ಮಿನಿಟ್ಯಾಂಕ್‌ಗಳಿಗೆ ಭೈರಗಾನಹಳ್ಳಿ ಗ್ರಾಮದಿಂದ ನೀರಿನ ಸರಬರಾಜು ಮಾಡಲಾಗಿದೆ.

ಆದಿಕರ್ನಾಟಕ ಸಮುದಾಯವೇ ಪ್ರಧಾನವಾಗಿದ್ದು ಆದಿದ್ರಾವಿಡ ಲಿಂಗಾಯಿತ, ದರ್ಜಿಗರು, ಮಡಿವಾಳ ಹಾಗೂ ಆಚಾರ್ ಸಮುದಾಯಗಳು ಕಿರು ಸಮುದಾಯಗಳಾಗಿವೆ. ಭಾಷೆ ಕನ್ನಡವಾಗಿದೆ.

೨೦೧೧ ಜನಗಣತಿಯ ಪ್ರಕಾರ ೫೫ ಮನಗಳಿಂದ ಕೂಡಿದ್ದು ೨೭೫ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗಂಡು ಹೆಣ್ಣಿನ ಲಿಂಗಾನುಪಾತ ೧೫೦.೧೨೫ ರಷ್ಟಿದೆ.

ಆಧುನಿಕ ವಾಹನವಾದ ದ್ವಿಚಕ್ರವಾಹನವನ್ನು ಹೊರತು ಪಡಿಸಿ ಇತರೆ ಯಾವುದೇ ಸಾಂಪ್ರದಾಯಿಕ ಹಾಗೂ ಆಧುನಿಕ ವಾಹನಗಳು ಕಂಡುಬರುವುದಿಲ್ಲ.ಚಿಕ್ಕನಾಯಕನಹಳ್ಳಿಯಿಂದ ಕಿಬ್ಬನಹಳ್ಳಿ ಕ್ರಾಸ್‌ಗೆ ಹೋಗುವ ಮಾರ್ಗ ಮಧ್ಯದಲ್ಲಿ ಕಂಡುಬರುವುದರಿಂದ ಸರ್ಕಾರಿ ಹಾಗೂ ಖಾಸಗಿ ಬಸ್ಸುಗಳ ಸೌಲಭ್ಯವಿದೆ.

ಅಂಗನವಾಡಿ ಸೌಲಭ್ಯವಿರುವುದಿಲ್ಲ. ಇಲ್ಲಿಯ ಮಕ್ಕಳು ಭೈರಗಾನಹಳ್ಳಿ ಅಂಗನವಾಡಿಗೆ ಹೋಗುತ್ತಾರೆ. ಗ್ರಾಮದಲ್ಲಿ ಸಮುದಾಯ ಸೌಲಭ್ಯಗಳಾದ ವೃದ್ಧಪ್ಯವೇತನ, ವಿಕಲಚೇತನ ವೇತನ, ಮತ್ತು ವಿಧವಾವೇತನದ ೧೩ ಫಲಾನುಭವಿಗಳಿದ್ದಾರೆ. ೦೫ ಹೋಟೆಲ್‌ಗಳು, ೧೦ ಸಣ್ಣ ಅಂಗಡಿಗಳು ಕಂಡುಬರುತ್ತವೆ.

೨ ಸ್ತ್ರೀಶಕ್ತಿ ಸಂಘಗಳು, ೦೪ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಘಗಳಿದ್ದು ಕಿರಿ ಹಣಕಾಸು ಸಂಸ್ಥೆಗಳಿಂದ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯುತ್ತಾರೆ.

ಸಮಾಜ ಕಲ್ಯಾಣ ಇಲಾಖೆಯಿಂದ ಸ್ಥಾಪಿತವಾದ ಪರಿಶಿಷ್ಟ ವರ್ಗಗಳ ಆಶ್ರಮಶಾಲೆಯಿದ್ದು ೩೬ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಹಾಗೂ ಮೂರು ಜನ ಶಿಕ್ಷಕರು ಮತ್ತು ಒಬ್ಬರು ಸಿಬ್ಬಂದಿ ವರ್ಗದವರಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯಿಂದ ಸ್ಥಾಪಿತವಾದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ೨೫೦ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದು,  ೦೮ ಶಿಕ್ಷಕರು ಹಾಗೂ ೧೪ ಜನ ಸಿಬ್ಬಂದಿ ವರ್ಗದವರಿದ್ದಾರೆ. ೪ ಜನ ಸರ್ಕಾರಿ ನೌಕರರಿದ್ದಾರೆ. ಸಾಕ್ಷರತೆ ೬೭% ರಷ್ಟಿದೆ.

ಗ್ರಾಮದ ಜನರು ಬಡತನ ರೇಖೆಗಿಂತ ಕೆಳಗಿನವರಾಗಿದ್ದು ಇವರ ಮುಖ್ಯ ವೃತ್ತಿ ಕೂಲಿಯಾಗಿದೆ. ಅಂಚೆ, ಪಂಚಾಯಿತಿ, ಶಿಕ್ಷಣ ಇಲಾಖೆ ಒಳಗೊಂಡಂತೆ ೫ ಜನ ಸರ್ಕಾರಿ ನೌಕರರಿದ್ದಾರೆ. ಗೋಡೆಕೆರೆ ಸಿದ್ಧರಾಮೇಶ್ವರ ದೇವರಿಗೆ ನಡೆದುಕೊಳ್ಳುತ್ತಾರೆ. ಜಾತ್ರೆಯಲ್ಲಿ ಪಾಲುಗೊಳ್ಳುತ್ತಾರೆ.

## ಗೋಪಾಲನಹಳ್ಳಿ

ಗೋಪಾನಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲದೆ. ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ಗೋಪಾಲಕೃಷ್ಣ ಎಂಬ ದೇವಾಲಯವಿದ್ದು ಆ ದೇವರ ಹೆಸರನ್ನೇ

ಗ್ರಾಮಕ್ಕೆ ಇಡಲಾಗಿದೆ. ಎಂಬುದು ಜನರ ಅಭಿಪ್ರಾಯ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೩೧೨ ಹೆಕ್ಟೇರ್ ಆಗಿದ್ದು, ಕಂದಾಯ ಗ್ರಾಮವಾಗಿದೆ.

ಫಲವತ್ತಾದ ಕಪ್ಪು ಮತ್ತು ಮರಳು ಮಿಶ್ರಿತ ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ರಾಗಿ ಮುಖ್ಯ ಬೆಳೆಯಾಗಿದ್ದು ತೊಗರಿ, ಹೆಸರು, ಅವರೆ, ಹುರುಳಿ, ಉದ್ದು, ಸಾಸಿವೆ ಉಪಬೆಳೆಗಳಾಗಿವೆ. ತೆಂಗು ಅಡಿಕೆ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಾಗಿವೆ.

ಗೋಪಾಲನಹಳ್ಳಿ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತ ಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ತಾಲ್ಲೂಕು ಪಂಚಾಯಿತಿ ಕ್ಷೇತ್ರ, ಜಿಲ್ಲಾ ಪಂಚಾಯಿತಿಕ್ಷೇತ್ರ ಶೆಟ್ಟಿಕೆರೆಯಾಗಿದೆ. ಶೆಟ್ಟಿಕೆರೆ ಗ್ರಾಮಪಂಚಾಯಿತಿಗೆ ಒಳಪಟ್ಟಿದ್ದು ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ.

ಗ್ರಾಮವು ಚಿಕ್ಕನಾಯಕನಹಳ್ಳಿಯಿಂದ ತಿಪಟೂರಿಗೆ ಹೋಗುವ ಜಿಲ್ಲಾಪಂಚಾಯ್ತಿ ರಸ್ತೆ ಇದೆ. ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಸಂಚಾರಿ ದೂರವಾಣಿಗಳಿವೆ.

ಒಂದು ಅಂಗನವಾಡಿ ಸೌಲಭ್ಯವಿದ್ದು ಒಟ್ಟು ೯ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಹಾಗೂ ಇಬ್ಬರು ಕಾರ್ಯಕರ್ತೆಯರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಒಂದರಿಂದ ಐದನೇಯ ತರಗತಿಯವರೆಗೆ ಒಟ್ಟು ೧೬ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಹಾಗೂ ಇಬ್ಬರು ಶಿಕ್ಷಕರಿದ್ದಾರೆ.

ಕಾಲಭೈರವ, ಮಾಸ್ತಮ್ಮ, ಗೋಪಾಲಕೃಷ್ಣ ಹಾಗೂ ಈಶ್ವರ ದೇವಾಲಯಗಳಿವೆ. ಮಹಾಸತಿ ಕಲ್ಲನ್ನು ಮಾಸ್ತಮ್ಮನೆಂದು ಪೂಜೆ ಮಾಡುತ್ತಿದ್ದಾರೆ. ೩೦೦ ರಿಂದ ೪೦೦ ಅಡಿ ಆಳದ ೬೦ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಿಗೆ ನೀರೋದಗಿಸುತ್ತಿವೆ. ೭ ತೆರೆದ ಬಾವಿಗಳಿದ್ದು ೨ ಸೇದುವ ಬಾವಗಿಳಿವೆ. ಒಟ್ಟು ೮ ಮಿನಿಟ್ಯಾಂಕುಗಳು, ೫ ಹ್ಯಾಂಡ್ ಪಂಪ್‌ಗಳಿದ್ದು ಕುಡಿಯುವ ನೀರಿನ ಸೌಲಭ್ಯವಿದೆ.

ಸಾಂಪ್ರದಾಯಿಕ ಹೈನುಗಾರಿಕೆ ಅಲ್ಪ ಪ್ರಮಾಣದಲ್ಲಿದ್ದು, ಆಧುನಿಕ ಡೈರಿ ವ್ಯವಸ್ಥೆ ಇದೆ. ಹಾಲು ಉತ್ಪಾದಕರ ಸಹಕಾರ ಸಂಘವು ಪ್ರತಿದಿನ ೩೦೦ ಲೀಟರ್ ಹಾಲು ಸಂಗ್ರಹಿಸುತ್ತಿದ್ದು ಗ್ರಾಮದ ಆರ್ಥಿಕ ಚೇತರಿಕೆಗೆ ಕಾರಣವಾಗಿದೆ.

ನಾಟಿ ಹಸು, ನಾಟಿ ಎತ್ತು, ಎಮ್ಮೆ, ಜೆರ್ಸಿ ಮತ್ತು ಹೆಚ್. ಎಫ್. ಸೀಮೆಹಸುಗಳು ಮುಖ್ಯ ಸಾಕುಪ್ರಾಣಿಗಳಾಗಿವೆ. ಒಟ್ಟು ೧೨೦ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ ಜನಗಣತಿಯ ಪ್ರಕಾರ ೪೮೩ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ೨೪೮ ಪುರುಷರು, ೨೩೫ ಮಹಿಳೆಯರನ್ನೊಳಗೊಂಡಿದ್ದು, ಒಟ್ಟು ಸಾಕ್ಷರತೆಯ ಪ್ರಮಾಣ ೮೭.೭% ರಷ್ಟಿದೆ. ಕಾಂಕ್ರೀಟ್ ಮನೆಗಳು, ಮಣ್ಣಿನ ಮನೆಗಳು, ಸೀಮೆಹೆಂಚಿನ ಮನೆಗಳು, ಸೀಟಿನ ಮನೆಗಳಿವೆ. ಪ್ರಮುಖ ಆಹಾರ ಪದ್ಧತಿ ರಾಗಿಮುದ್ದೆ ಮತ್ತು ಅನ್ನ.

ಶೆಟ್ಟಿಕೆರೆ ಗ್ರಾಮಪಂಚಾಯಿತಿ ಆಡಳಿತಕ್ಕೊಳಪಟ್ಟಿರುವ ಗ್ರಂಥಾಲಯವಿದ್ದು ೨೭೦ ಪುಸ್ತಕಗಳ ಸಂಗ್ರಹವಿದೆ. ಗ್ರಾಮದಲ್ಲಿ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ಮತ್ತು ವಿಧವಾ ವೇತನದ ಫಲಾನುಭವಿಗಳಿದ್ದಾರೆ.

ಆಧುನಿಕ ವಾಹನಗಳಾದ ಕಾರು, ಟ್ರಾಕ್ಟರ್ ಟಿಲ್ಲರ್ ಮತ್ತು ದ್ವಿಚಕ್ರವಾಹನಗಳೊಂದಿಗೆ ಸಾಂಪ್ರದಾಯಿಕ ಎತ್ತಿನಗಾಡಿಗಳು ಸಹ ಉಳಿದುಕೊಂಡು ಬಂದಿವೆ. ಶಿಕ್ಷಣ ಇಲಾಖೆ, ಸಾರಿಗೆ, ಪಶುವೈದ್ಯ ಇಲಾಖೆ ಹೀಗೆ ಒಟ್ಟು ೬ ಮಂದಿ ಸರ್ಕಾರಿ ನೌಕರರು ೧೦ ಮಂದಿ ಖಾಸಗಿ ಬಡತನದ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಗುಡಿ ಕೈಗಾರಿಕೆ ಮತ್ತು ದೊಡ್ಡಪ್ರಮಾಣದ ಕೈಗಾರಿಕೆಗಳು ಕಂಡುಬರುವುದಿಲ್ಲ.

ವಾರ್ಷಿಕ ಸರಾಸರಿ ೪೬೪ ಮೀ.ಮೀ. ಮಳೆ ಬೀಳುತ್ತದೆ. ಹವಾಮಾನ ವೈಪರೀತ್ಯದಿಂದಾಗಿ ಬಿಸಿಲು ಮತ್ತು ಮಳೆ ಚಳಿ ಕಳೆದ ಏಳು ವರ್ಷಗಳಿಂದ ಜಲಕ್ಷಾಮ ಎದುರಿಸುತ್ತಿದ್ದು ಬರಗಾಲಕ್ಕೆ ತುತ್ತಾಗಿದೆ.

ಎರಡು ಸ್ತ್ರೀಶಕ್ತಿ ಸಂಘಗಳು ೩ ಸ್ವಸಹಾಯ ಸಂಘಗಳು ೩ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘಗಳಿದ್ದು ಕಿರು ಹಣಕಾಸು ಸಂಸ್ಥೆಗಳಿಂದ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯುತ್ತವೆ. ಲಿಂಗಾಯಿತ ಸಮುದಾಯವನ್ನು ಮಾತ್ರ ಕಾಣಬಹುದು ಪ್ರಮುಖ ಭಾಷೆ ಕನ್ನಡವಾಗಿದೆ.

## ಗೋಡೆಕೆರೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆ ಹೋಬಳಿಗೆ ಸೇರಿದ ಗ್ರಾಮಪಂಚಾಯ್ತಿ ಕೇಂದ್ರ. ೧೨ನೇ ಶತಮಾನಕ್ಕೂ ಹಿಂದೆ ಕಾರೆಹಳ್ಳಿ ಎಂದು ಕರೆಯುತ್ತಿದ್ದ ಈ ಊರಿಗೆ ಶಿವಶರಣರಾದ ಸಿದ್ದರಾಮರು ಬಂದಾಗ ಗ್ರಾಮದಲ್ಲಿ ಗೋಡೆ ಕಟ್ಟುವ ಕಾಯಕದಲ್ಲಿ ತೊಡಗಿದ್ದ ವ್ಯಕ್ತಿಯೊಬ್ಬನನ್ನು ಸಿದ್ಧರಾಮರು ಭಿಕ್ಷೆ ಕೇಳುತ್ತಾರೆ. ಆತ

ನನ್ನಲ್ಲಿ ಏನೂ ಇಲ್ಲ ಎಂದು ಹೇಳಲಾಗಿ ನೀನು ಕಟ್ಟುತ್ತಿರುವ ಗೋಡೆಯನ್ನೇ ಕೊಡು ಎನ್ನುತ್ತಾರೆ. ಆ ಗೋಡೆಯನ್ನು ಕುದುರೆಯನ್ನಾಗಿಸಿಕೊಂಡು ಪವಾಡ ಮೆರೆದು ಮುಂದೆ ಸಾಗುತ್ತಾರೆ. ಅಂದಿನಿಂದ ಈ ಗ್ರಾಮಕ್ಕೆ ಗೋಡೆಕೆರೆ ಎಂಬ ಹೆಸರು ಬಂದಿದೆ.

ಇದು ತಾಲ್ಲೂಕು ಕೇಂದ್ರದಿಂದ ೮ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೦೬೦.೧೧ ಎಕರೆಗಳು. ಈ ಗ್ರಾಮಕ್ಕೆ ಎ.ಡಿ. ಕಾಲೋನಿ ಹಾಗೂ ಗೊಲ್ಲರಹಟ್ಟಿಗಳು ಸೇರಿವೆ. ಕಪ್ಪು-ಬಿಳಿ-ಕೆಂಪು ಕಲ್ಲುಗಳು, ಕೆಂಪು ಮರಳು ಕಂಡುಬರುತ್ತದೆ. ಪೂರ್ವಕ್ಕೆ ಮುರುಡಪ್ಪನಗುಡ್ಡ, ಹಳ್ಳಿಗುಡ್ಡ, ಕೆರೆಮಲ್ಲಿ, ಕರೆಕಲ್ಲು ಗುಡ್ಡ ಎಂಬ ಗುಡ್ಡಗಳಿವೆ. ಇಲ್ಲಿ ಕಪ್ಪು ಬಂಡೆಹಾಸೂ ಸಹ ಇದೆ. ಸಾಮಾಜಿಕ ಅರಣ್ಯವಿದೆ. ೫೭ ಎಕರೆಯಷ್ಟು ಸಿದ್ಧರಾಮೇಶ್ವರರ ತೋಪು ಇದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಸಮೀಪ ನಡುವನಹಳ್ಳಿ ಕೆರೆಯಿದೆ. ಹೊಸಕೆರೆ ಹಳ್ಳ, ಬಂಡೆಹಳ್ಳ, ಮುರುಡಪ್ಪನಹಳ್ಳಗಳಿವೆ. ೫೦ ತೆರೆದ ಬಾವಿಗಳಿವೆ. ೧೨೦೦ ಕ್ಕೂ ಹೆಚ್ಚು ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯಿತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ೮೦೦ ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ವೀರಶೈವರು ದೊಡ್ಡ ಸಮುದಾಯವಾಗಿದ್ದು ಮಡಿವಾಳರು, ಕುರುಬರು, ಉಪ್ಪಾರರು, ನಾಯಕರು, ತಮಿಳಿಯನ್, ಆಚಾರ್ರು, ಗಾಣಿಗರು, ಬ್ರಾಹ್ಮಣರು, ಭಜಂತ್ರಿಗಳು, ಕಮ್ಮಾರರು ಸಣ್ಣ ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ತಮಿಳು ನಾಡಿನಿಂದ ವಲಸೆ ಬಂದವರು ಮಾತ್ರ ತಮಿಳು ಭಾಷೆ ಬಳಸುತ್ತಾರೆ. ಟೀಪುಡಿ ಓಣಿ, ಹೊಸಬಾವಿ ಓಣಿ ಎಂಬ ಓಣಿಗಳಿವೆ. ಒಟ್ಟು ೨೯೮ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೦೮೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೬೦ ಕಾಂಕ್ರೀಟ್, ಕಲ್ಲಿನ, ೭೦ ಮಣ್ಣಿನ, ಹೆಂಚಿನ, ಮಾಳಿಗೆ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ತಗಡಿನ ಇಲ್ಲವೇ ಸಿಮೆಂಟಿನ ಶೀಟ್‌ಗಳನ್ನು ಹಾಕಲಾಗಿದೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೨೮ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೧೨೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಬಾಳೆ, ಮಾವು, ಹಲಸು, ಸಪೋಟ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಮಾವು, ಅಡಿಕೆ, ಸಪೋಟ, ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕಾರುಗಳು, ಲಾರಿ, ವ್ಯಾನ್, ಆಟೋ, ಬೈಕ್‌ಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕೆಎಂಎಫ್ ನಂದಿನಿ ಡೈರಿಯಿದೆ. ದಿನನಿತ್ಯ ೧೨೦೦ ಲೀ. ಹಾಲಿನ ವಹಿವಾಟು ನಡೆಯುತ್ತದೆ. ತಳ್ಳುವ ಗಾಡಿಗಳ ಮೂಲಕ ಸಣ್ಣಪುಟ್ಟ ವ್ಯಾಪಾರ ಮಾಡುತ್ತಾರೆ. ಶಿಕ್ಷಕರು, ವಕೀಲರು, ಇಂಜಿನಿಯರ್, ಕೆಎಸ್‌ಆರ್ಟಿಸಿ ಉದ್ಯೋಗಿಗಳು, ಕಂದಾಯ ಇಲಾಖೆ ಉದ್ಯೋಗಿಗಳಿದ್ದಾರೆ. ೧೫೦ ಕ್ಕೂ ಹೆಚ್ಚು ಜನ ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವವರಿದ್ದಾರೆ. ನಾಲ್ಕು ಇಟ್ಟಿಗೆ ಫ್ಯಾಕ್ಟರಿಗಳಿವೆ. ೬ ಹಪ್ಪಳ ಮಾಡುವ ಗೃಹಕೈಗಾರಿಕೆಗಳಿವೆ. ಸಾಂಪ್ರದಾಯಿಕ ಬಡಗಿಗಳು, ಕಮ್ಮಾರರು, ಚಿತ್ರಕಾರರು ಇದ್ದಾರೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರ, ಜೆ.ಸಿ. ಪುರ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರುತ್ತದೆ. ೪ ಜನ ಗ್ರಾಮಪಂಚಾಯಿತಿ ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು

ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಕಲ್ಪತರು ಗ್ರಾಮೀಣ ಬ್ಯಾಂಕಿನ ಉಪಶಾಖೆ ಇದೆ. ರೈತ ಸಹಕಾರಿ ಸೇವಾ ಸಂಘ ಇದೆ. ಸಿದ್ಧರಾಮೇಶ್ವರ, ಗಂಗಾಮಾತಾ, ದೋಣೆಗಂಗಾ, ಕೆಂಪಾಂಬಿಕಾ, ಲಕ್ಷ್ಮೀದೇವಿ, ಶ್ರೀನಿಧಿ, ಶ್ರೀದೇವಿ ಸ್ತ್ರೀಶಕ್ತಿ ಸಂಘಗಳಿವೆ. ಸಾರ್ವಜನಿಕ ಗ್ರಂಥಾಲಯವಿದೆ. ಗ್ರಂಥಾಲಯದಲ್ಲಿ ೨೨೦೦ ಪುಸ್ತಕಗಳಿವೆ. ಆಟದ ಮೈದಾನವಿದೆ. ಸರ್ಕಾರಿ ಪ್ರಾಥಮಿಕ ಆರೋಗ್ಯ ಘಟಕವಿದೆ. ನಾಲ್ಕು ಚಿಕ್ಕ ಹೋಟೆಲ್‌ಗಳು, ೧೦ ಚಿಕ್ಕ ಅಂಗಡಿಗಳಿವೆ. ಮಕ್ಕಳ ವಿದ್ಯಾರ್ಥಿ ನಿಲಯವಿದೆ. ಮಹಾನವಮಿ ಮಂಟಪದ ಹತ್ತಿರ ಮಾಸ್ತಿಕಲ್ಲು ಇದೆ.

ಎರಡು ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಪಾಠಶಾಲೆ, ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಪದವಿಪೂರ್ವ ಕಾಲೇಜುಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೮೦% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೩೧ ಫಲಾನುಭವಿಗಳಿದ್ದಾರೆ.

ಶ್ರೀ ಸಿದ್ಧರಾಮೇಶ್ವರ, ಮುದಿ ಮಲ್ಲಿಕಾರ್ಜುನಸ್ವಾಮಿ, ಗಂಗಾಮಾತಾ, ಬಾಲಕೃಷ್ಣ, ಗದ್ದಿಗೆ ರಾಮೇಶ್ವರ, ತುರುಬಿನಮ್ಮ, ತುಳಸಿಯಮ್ಮ, ಕಾಲಭೈರವೇಶ್ವರ ದೇವಾಲಯಗಳಿವೆ. ಗೋಡೆಕೆರೆ ಮಠವಿದೆ. ಚರ ಪಟ್ಟಾಧ್ಯಕ್ಷರು ಮತ್ತು ಸ್ಥಿರ ಪಟ್ಟಾಧ್ಯಕ್ಷರು ಎಂಬ ಇಬ್ಬರು ಸ್ವಾಮೀಜಿಗಳಿದ್ದಾರೆ. ಪ್ರತಿ ಕಾರ್ತಿಕ ಮಾಸದ ಕೊನೆಯ ದಿನದಂದು ವಿಶೇಷವಾಗಿ ಲಕ್ಷದೀಪೋತ್ಸವ ನಡೆಸಲಾಗುತ್ತದೆ. ೧೨ ವರ್ಷಗಳಿಗೊಮ್ಮೆ ಜಾತ್ರೆ ಮಾಡಲಾಗುತ್ತದೆ. ಜಾತ್ರೆಯಲ್ಲಿ ತೇರು, ಬಸವನ ಉತ್ಸವ, ಮಹಾ ರಥೋತ್ಸವಗಳು ಜರುಗುತ್ತವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರೇಣುಕಯ್ಯ, ರಾಮಯ್ಯ, ಬಸವಲಿಂಗಮೂರ್ತಿ, ಅಮಾಸೆ ರಾಮಯ್ಯ, ಜಗದಮ್ಮ, ಗಿರಿಜಮ್ಮ, ಸುಧಮ್ಮ ಇತ್ಯಾದಿ ವೀರಶೈವ ಸಮುದಾಯದ ಮಹಿಳೆಯರು ಸೋಬಾನೆ, ಭಜನೆ ಹಾಡು, ಭಕ್ತಿಗೀತೆಗಳನ್ನು ಹಾಡುತ್ತಾರೆ. ಕಬಡ್ಡಿ ವಾಲಿಬಾಲ್ ಆಡುವ ತಂಡಗಳಿವೆ. ಲಾಲ್ ಬಹದ್ದೂರ್‌ಶಾಸ್ತ್ರಿ ಕ್ರೀಡಾಸಂಘ, ರೈತರ ಸಂಘ, ಹಾಲು ಉತ್ಪಾದಕರ ಸಂಘಗಳಿವೆ.

## ಗೋಡೆಕೆರೆ ಎ.ಕೆ. ಕಾಲೋನಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೮ ಕಿಮೀ ಅಂತರದಲ್ಲಿ ಚಿಕ್ಕನಾಯಕನಹಳ್ಳಿ – ಕೆ.ಬಿ. ಕ್ರಾಸ್ ಮುಖ್ಯ ರಸ್ತೆಯ ಎಡಭಾಗದಲ್ಲಿದೆ. ಇದನ್ನು ಹೊಲೆಯರಹಟ್ಟಿ ಎಂತಲೂ ಕರೆಯುತ್ತಾರೆ. ಗೋಡೆಕೆರೆಯ ಹೊರವಲಯದಲ್ಲಿ ಗ್ರಾಮವಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಆದಿದ್ರಾವಿಡ ಜನಾಂಗದವರಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೪೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೯೧ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ.

ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾರಿಗೆ, ಶಿಕ್ಷಣ, ಅರಣ್ಯ, ಕಂದಾಯ ಇಲಾಖೆಯಲ್ಲಿ ೬ ಜನ ಸರ್ಕಾರಿ ನೌಕರರಿದ್ದಾರೆ. ಟ್ರ್ಯಾಕ್ಟರ್ ಡ್ರೈವರ್‌ಗಳಿದ್ದಾರೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಜೆ.ಸಿ ಪುರತಾಲ್ಲೂಕು ಪಂಚಾಯ್ತಿ ಹಾಗೂ ಗೋಡೆಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶಿಕ್ಷಣ, ಪಡಿತರ ಹಾಗೂ ಅಂಚೆ ಸೌಲಭ್ಯ ಗೋಡೆಕೆರೆಯಿಂದ ಪಡೆದುಕೊಳ್ಳುತ್ತಾರೆ. ಸಾಕ್ಷರತೆ ೫೮% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ತುಳಸಮ್ಮ, ಕಾಲಭೈರವೇಶ್ವರ ದೇವರ ಗದ್ದಿಗೆಗಳಿದ್ದು ಶಿವರಾತ್ರಿ ಹಾಗೂ ದಸರಾ ಸಂದರ್ಭದಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಪ್ರಸಿದ್ಧ ಗೋಡೆಕೆರೆ ಸಿದ್ಧರಾಮೇಶ್ವರ ಜಾತ್ರೆಯಲ್ಲಿ ಈ ಗ್ರಾಮದ ಪಾತ್ರ ವಿಶೇಷವಾಗಿರುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗೋಡೆಕೆರೆ ಗೊಲ್ಲರಹಟ್ಟಿ

ಗೋಡೆಕೆರೆ ಗೊಲ್ಲರಹಟ್ಟಿಯು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೯ ಕಿಮೀ ಅಂತರದಲ್ಲಿದೆ. ಇದು ಗೋಡೆಕೆರೆಯ ಮಜರೆ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ಮುಖ್ಯ ಗ್ರಾಮದೊಂದಿಗೆ ಹಂಚಿಕೆಯಾಗಿದ್ದು ಗೋಡೆಕೆರೆ ಗೊಲ್ಲರಹಟ್ಟಿ ಎಂದು ಪ್ರತ್ಯೇಕವಾಗಿದೆ. ಇದೊಂದು ಬುಡಕಟ್ಟು ಗ್ರಾಮ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕಾಡುಗೊಲ್ಲರು ಮಾತ್ರ ಇದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೩೭ ಮನೆಗಳನ್ನು ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿ, ಮೇಕೆ ಸಾಕಣೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗೋಡೆಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬಬರು ಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ

ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೨% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಗೋಡೆಕೆರೆಯಿಂದ ಅಂಚೆ ಮತ್ತು ಪಡಿತರ ವ್ಯವಸ್ಥೆಯಿದೆ. ಗೋಡೆಕೆರೆ ಗೇಟ್‌ನಿಂದ ಸಾರಿಗೆ ಸಂಪರ್ಕವಿದೆ. ಕುರಿಗಳೊಂದಿಗೆ ಹುಲ್ಲು-ನೀರಿಗಾಗಿ ಪರಸ್ಥಳಕ್ಕೆ ಹೋಗುತ್ತಾರೆ. ಮೂಡ್ಲಯ್ಯ ಕುರಿ ರೋಗಗಳಿಗೆ ಚಿಕಿತ್ಸೆ ನೀಡುತ್ತಾರೆ.

ಚಿತ್ರದೇವರು, ರಾಮದೇವರ ಉತ್ಸವ ವಿಶೇಷವಾಗಿರುತ್ತದೆ. ಹಾಲುಮೀಸಲು, ಹಿರಿಯರ ಹಬ್ಬ ಎಂದೆಲ್ಲಾ ಕರೆದು ಹಿರಿಯರ ಗುಡ್ಡೆ ಪೂಜೆ ನಡೆಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗಾಗವಾಡಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೨ ಕಿಮೀ ಅಂತರದಲ್ಲಿದೆ. ಇದು ಅಗ್ರಹಾರ ಕಂದಾಯ ಗ್ರಾಮಕ್ಕೆ ಉಪಗ್ರಾಮ. ಭೌಗೋಳಿಕ ವಿಸ್ತೀರ್ಣ ೧೪೩ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಗಾಗ ಎಂದರೆ ದಡ್ಡ, ಅವಿದ್ಯಾವಂತನ್ನು ಉದಾಸೀನದಿಂದ ಗಾಗ ಎಂದೂ ದಡ್ಡನದಿಣ್ಣೆ ಎಂಬ ಅರ್ಥದಲ್ಲಿ ಕರೆಯಲಾಗಿದೆ. ಬೋರನಕಣಿವೆಯ ಮುಖಜ ಭೂಮಿಯಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಸಾಮಾಜಿಕ ರಚನೆಯಲ್ಲಿ ನಾಯಕ, ಆದಿಕರ್ನಾಟಕ, ಉಪ್ಪಾರ, ಬೆಸ್ತ ಜನಾಂಗದವರಿದ್ದಾರೆ. ಇವರ ಮಾತೃಭಾಷೆ ಕನ್ನಡವಾಗಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೨೨ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಬಯಲು ಶೌಚಾಲಯವಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಬೋರನಕಣಿವೆ ಬಯಲಲ್ಲಿ ಭತ್ತ ಬೆಳೆಯುತ್ತಾರೆ. ದ್ವಿಚಕ್ರ ವಾಹನ ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಗಾಣದಾಳು ಗ್ರಾಮದಿಂದ ಅಂಚೆ ಸೌಲಭ್ಯ ಕಲ್ಪಿಸಿದೆ. ಶಿಕ್ಷಣ, ಪಡಿತರ ಸೌಲಭ್ಯಗಳನ್ನು ಗಾಣದಾಳು ಹಾಗೂ ಅಗ್ರಹಾರ ಗ್ರಾಮಗಳಿಂದ ಪಡೆದುಕೊಳ್ಳುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೨ ಸ್ತ್ರೀಶಕ್ತಿ ಸಂಘಗಳಿವೆ. ಮುತ್ತುಗದ ಎಲೆ, ಗರಿಕಡ್ಡಿ ಹೆರೆಯುವುದು ಮಹಿಳೆಯರ ಕಸುಬಾಗಿದೆ.

ದಸೂಡಿ ಆಂಜನೇಯ ದೇವರ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಕರಿಯಮ್ಮ ದೇವರ ಊರಹಬ್ಬ

ಮಾಡುತ್ತಾರೆ. ಆರತಿ, ಬಲಿ, ಹರಕೆ ಸಂಪ್ರದಾಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗೋಪಾಲಪುರ

ಗೋಪಾಲಪುರ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೩ ಕಿಮೀ ಅಂತರದಲ್ಲಿರುವ ಕಂದಾಯ ಗ್ರಾಮ. ಭೌಗೋಳಿಕ ವಿಸ್ತೀರ್ಣ ೪೧೬ ಹೆಕ್ಟೇರ್. ಬಯಲು ಭೂಪ್ರದೇಶ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕುರುಬ ಜನಾಂಗ ಪ್ರಧಾನವಾಗಿದ್ದು ಆದಿಕರ್ನಾಟಕ, ವಿಶ್ವಕರ್ಮ, ಸರ್ಪ ಒಕ್ಕಲಿಗರು, ಅಗಸರು ಕಿರು ಸಮುದಾಯ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೨೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೪೯೪ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೪೧ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೨೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹಾರಕ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಚೌಳಕಟ್ಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸೋರಲಮಾವುವಿನಿಂದ ಪಡಿತರ, ಅಂಚೆ ಸಂಪರ್ಕ ಪಡೆದಿದೆ. ಗ್ರಾಮ ಸಡಕ್ ಯೋಜನೆಯ ಟಾರ್ ರಸ್ತೆಯಿದೆ. ೩ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೭೬% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೧೭ ಫಲಾನುಭವಿಗಳಿದ್ದಾರೆ. ೧೪ ಜನ ಸರ್ಕಾರಿ ನೌಕರರಿದ್ದಾರೆ.

ಲಕ್ಷ್ಮಿ, ಕರಿಯಮ್ಮ, ಆಂಜನೇಯ ದೇವಾಲಯಗಳಿವೆ. ಕರಿಯಮ್ಮನ ಊರಹಬ್ಬ, ಜಾತ್ರೆ ಮಾಡುತ್ತಾರೆ. ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗೊಂದಿ

ಗೊಂದಿ ತಿಮ್ಮನಹಳ್ಳಿಯ ಮಜರೆ ಗ್ರಾಮ. ಗ್ರಾಮಕ್ಕೆ ಹೊಂದಿಕೊಂಡಂತೆ ಪ್ರತ್ಯೇಕ ಬಡಾವಣೆಯಾಗಿದೆ. ನಾಯಕ, ಬಲಜಿಗ, ಮಡಿವಾಳ ಜನಾಂಗಕ್ಕೆ ಸೇರಿದ ೨೨ ಮನೆಗಳಿದ್ದು ೧೦೩ ಜನಸಂಖ್ಯೆ ಹೊಂದಿದೆ. ಈ ಮನೆಗಳು ಹೆಂಚಿನ, ಶೀಟಿನ, ಮಾಳಿಗೆಯ ಸ್ವರೂಪದಲ್ಲಿದ್ದು ಸರ್ಕಾರದ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೧೦ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ಕೃಷಿ ಇಲ್ಲಿನ ಪ್ರಧಾನ ಕಾಯಕವಾಗಿದ್ದು ರಾಗಿ, ಜೋಳ, ಹಾರಕ, ನವಣೆ, ಹುರುಳಿ, ತೊಗರಿ ಬೆಳೆಯುತ್ತಾರೆ. ತೆಂಗು, ಅಡಿಕೆ ತೋಟಗಾರಿಕೆ ಬೆಳೆಗಳು. ಕೊಬ್ಬರಿ, ಅಡಿಕೆ, ಹುಣಸೆಹಣ್ಣು ವ್ಯಾಪಾರಿ ಸರಕಾಗಿದೆ. ಕುಡಿಯಲು ತಿಮ್ಮನಹಳ್ಳಿ ಗ್ರಾಮಪಂಚಾಯ್ತಿಯಿಂದ ನೀರು ಪೂರೈಸಲಾಗುತ್ತದೆ. ಕೊಳಾಯಿ ಹಾಗೂ ನಲ್ಲಿ ಸಂಪರ್ಕವಿದೆ. ಶಿಕ್ಷಣ, ಪಡಿತರ ಸೌಲಭ್ಯವನ್ನು ಮುಖ್ಯ ಗ್ರಾಮದಿಂದ ಪಡೆದುಕೊಳ್ಳುತ್ತಾರೆ. ಶಿಕ್ಷಣ, ಸಾರಿಗೆ ಇಲಾಖೆಯಲ್ಲಿ ೩ ಜನ ಸರ್ಕಾರಿ ನೌಕರರಿದ್ದಾರೆ. ಸಾಕ್ಷರತೆ ೭೨.೯ ರಷ್ಟಿದೆ. ಬ್ಯಾಂಕ್, ಸಾರಿಗೆ ತಿಮ್ಮನಹಳ್ಳಿ ಗ್ರಾಮದಿಂದಲೇ ಸೌಲಭ್ಯ ಒದಗಿಸಲಾಗಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಭೂತಪ್ಪನ ಗುಡಿಯಿದೆ. ಆಂಜನೇಯ, ಕಾಲಭೈರವ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ಕೆಂಚಮ್ಮನ ಜಾತ್ರೆಯನ್ನು ವಿಶೇಷವಾಗಿ ಆಚರಿಸುತ್ತಾರೆ. ಬಾನ, ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಶ್ರೀರಾಮನವಮಿ ಉತ್ಸವವೂ ಇರುತ್ತದೆ. ಉಳಿದಂತೆ ಶಿವರಾತ್ರಿ, ದಸರಾ, ಯುಗಾದಿ, ಗೌರಿ–ಗಣೇಶನ ಹಬ್ಬ ಆಚರಿಸುತ್ತಾರೆ. ಶಾರದಾ ಕಾಲೇಜಿಗೆ ಇಲ್ಲಿನ ಮಕ್ಕಳು ಹಾಜರಾತಿ ಪಡೆಯುತ್ತಿದ್ದಾರೆ. ಹಾಲಿನ ಹಸುಗಳಿವೆ. ಹಾಲನ್ನು ಗ್ರಾಮದ ಡೈರಿಗೆ ಹಾಕಲಾಗುತ್ತದೆ. ಗ್ರಾಮದ ಸಾಕ್ಷರತೆ ಶೇ.೮೨ ರಷ್ಟಿದೆ. ತಿಮ್ಮನಹಳ್ಳಿ, ಕಂದಿಕೆರೆ, ಚಿಕ್ಕನಾಯಕನಹಳ್ಳಿಗೆ ರಸ್ತೆ, ಬಸ್ ಸಂಚಾರವಿದೆ.

## ಗೂಬೆಹಳ್ಳಿ

ಗೂಬೆಹಳ್ಳಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೧೪ ಕಿಮೀ ಅಂತರದಲ್ಲಿದೆ. ಇದು ಬೆಳಗುಲಿ ಕಂದಾಯಗ್ರಾಮಕ್ಕೆ ಸೇರಿದ ಮಜರೆ ಗ್ರಾಮವಾಗಿದೆ. ಕಾಡಿನ ಪ್ರದೇಶ. ದಟ್ಟ ತೋಪುಗಳಿದ್ದು ಅದರಲ್ಲಿ ಗೂಬೆಗಳು ಹೆಚ್ಚಾಗಿ ವಾಸಿಸುತ್ತಿದ್ದವು. ಕಾಲಾನಂತರ ಈ ಪ್ರದೇಶದಲ್ಲಿ ಜನವಸತಿ ರಚನೆಯಾದಾಗ ಜನಪದರು ಗೂಬೆಯಹಳ್ಳಿ ಎಂದೇ ಕರೆದರು. ಭೌಗೋಳಿಕ ವಿಸ್ತೀರ್ಣ ೩೩೦೭ ಹೆಕ್ಟೇರ್. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಬೆಳಗುಲಿ ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಕುರುಬರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ನಾಯಕ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೫೧ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೧೬ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೨೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೨೭ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಅಡಿಕೆ, ಕಂಬಳಿ, ಕುರಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು

ಬಳಸುತ್ತಾರೆ. ಲಾರಿ, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಸಾಂಪ್ರದಾಯಿಕ ಕಂಬಳಿ ವ್ಯಾಪಾರ, ಕಂಬಳಿ ನೇಯ್ಗೆ ಪರಂಪರೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಬರಗೂರು ತಾಲ್ಲೂಕು ಪಂಚಾಯ್ತಿ ಹಾಗೂ ಬೆಳಗುಲಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಬೆಳಗುಲಿ ಮೂಲಕ ರಸ್ತೆ, ಖಾಸಗಿ ಬಸ್ ಸಂಚಾರವಿದೆ. ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ, ಪ್ರೌಢಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೭೯.೬% ರಷ್ಟಿದೆ. ಶಿಕ್ಷಣ, ಸಾರಿಗೆ, ಅರಣ್ಯ, ಕಂದಾಯ, ನಗರಸಭೆ ಇಲಾಖೆಗೆ ಸೇರಿದ ೧೭ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಟ್ರ್ಯಾಕ್ಟರ್ ಡ್ರೈವರ್‌ಗಳಿದ್ದಾರೆ. ಲಾರಿ ಚಾಲಕರಿದ್ದಾರೆ. ಆಸ್ಪತ್ರೆಗೆ ಚಿಕ್ಕನಾಯಕನಹಳ್ಳಿಗೆ ಹೋಗುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ.

ಕರಿಯಮ್ಮ ದೇವರ ಪೌಳಿಯಿದೆ. ಊರಹಬ್ಬ ಆಚರಿಸಿ ಆರತಿ, ಬಾನ, ಹರಕೆ ಸಂಪ್ರದಾಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗೊಟಿಗೇನಹಳ್ಳಿ ಗೊಲ್ಲರಹಟ್ಟಿ

ಗೊಟಿಗೇನಹಳ್ಳಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೪ ಕಿಮೀ ಅಂತರದಲ್ಲಿರುವ ಸಾದರಹಳ್ಳಿಗೆ ಸೇರಿದ ಮಜರೆ ಗ್ರಾಮವಾಗಿದೆ. ಬಯಲುನಾಡಿನ ಪ್ರದೇಶ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೫೩೭ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಪೂರ್ವಕ್ಕೆ ಗುಡ್ಡಗಾಡು ಇದೆ.

ಕಾಡುಗೊಲ್ಲರು ಮಾತ್ರ ವಾಸಿಸುತ್ತಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೪೭ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೬೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಮಣ್ಣಿನ, ಹೆಂಚಿನ, ಗುಡಿಸಲು ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೨೨ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಜೋಳ, ಹಾರಕ, ಸಜ್ಜೆ ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಹುಣಸೆಹಣ್ಣು ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕುರಿಗಳೊಂದಿಗೆ ಹುಲ್ಲು–ನೀರಿಗೆ

ಪರಸ್ಥಳಕ್ಕೆ ಹೋಗುವ ಕಾಯಕ ಮಾಡುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೫೩% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಕಂದಿಕೆರೆ ಮಾರ್ಗವಾಗಿ ಚಿಕ್ಕನಾಯಕನಹಳ್ಳಿ ಕಡೆಗೆ ಬಸ್, ನರೇಗ ರಸ್ತೆ ಸಂಪರ್ಕವಿದೆ.

ತಿಮ್ಮಪ್ಪ, ಕರಿಯಮ್ಮ ಗ್ರಾಮದ ದೇವರುಗಳು. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗೆಂಡೇಬಾಲನಹಳ್ಳಿ

ಗೆಂಡೇಬಾಲನಹಳ್ಳಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೧೪ ಕಿಮೀ ಅಂತರದಲ್ಲಿದೆ. ಇದು ಮಲ್ಲೇನಹಳ್ಳಿಯ ಮಜರೆ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ಮುಖ್ಯ ಗ್ರಾಮ ಮಲ್ಲೇನಹಳ್ಳಿಯ ೨೮೩.೫ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಗೆಂಡೆ ಬಾಲಯ್ಯ ಎಂಬ ವ್ಯಕ್ತಿ ಮೂಲದಿಂದಾಗಿ ಗ್ರಾಮಕ್ಕೆ ಗೆಂಡೆಬಾಲನಹಳ್ಳಿ ಎಂದು ಹೆಸರು ಬಂದಿದೆ. ಬಯಲು ಪ್ರದೇಶವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಸಾಮಾಜಿಕ ರಚನೆಯಲ್ಲಿ ಒಕ್ಕಲಿಗರು, ಮಡಿವಾಳರು, ಗೊಲ್ಲರು, ಕ್ಷೌರಿಕರು, ನಾಯಕರು ಇದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೩೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೩೮ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು

ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಕಂದಿಕೆರೆಯಿಂದ ಅಂಚೆ ಸಂಪರ್ಕವಿದೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಕರಿಯಮ್ಮ, ಬೇವಿನಹಳ್ಳಮ್ಮ ಸ್ತ್ರೀಶಕ್ತಿ ಸಹಕಾರ ಸಂಘಗಳಿವೆ. ಸಾರಿಗೆ, ಶಿಕ್ಷಣ, ಕೆಇಬಿ ಇಲಾಖೆಗಳ ಒಟ್ಟು ೪ ಜನ ಸರ್ಕಾರಿ ನೌಕರರಿದ್ದಾರೆ. ಕಂದಿಕೆರೆ-ಚಿಕ್ಕನಾಯಕನಹಳ್ಳಿ ಮಾರ್ಗವಾಗಿ ರಸ್ತೆ ಸಂಪರ್ಕ, ಬಸ್ ವ್ಯವಸ್ಥೆ ಇದೆ.

ಕರಿಯಮ್ಮ ದೇವರ ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಊರಹಬ್ಬವಾಗಿರುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗೌಡನಹಳ್ಳಿ

ಗೌಡನಹಳ್ಳಿಯು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ದುಗುಡಿಹಳ್ಳಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತುಂಬಾ ವರ್ಷಗಳ ಹಿಂದೆ ಗೌಡ ಎಂಬ ವ್ಯಕ್ತಿಯಿಂದ ಪ್ರಾರಂಭವಾದ ಜನವಸತಿ ಇದಾಗಿದೆ. ಆದ್ದರಿಂದ ಗೌಡನಹಳ್ಳಿ ಎಂಬ ಹೆಸರು ನಿಂತಿದೆ. ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿಗೆ ೧೦ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೬೫೨.೧೧ ಚ.ಕಿ.ಮೀ. ಈ ಗ್ರಾಮಕ್ಕೆ ಕೋಡಿಪಾಳ್ಯ, ದಾಸಯ್ಯನಗುಡ್ಲು ಹೊಂದಿಕೊಂಡು ಸೇರ್ಪಡೆಯಾಗಿವೆ. ಬಯಲುನಾಡು. ಬಿಳಿಕಲ್ಲು, ಬಿಳಿ-ಕೆಂಪು ಮಣ್ಣು ಕಂಡುಬರುತ್ತದೆ. ಈ ಮುಂಚೆ ಗುಂಡುತೋಪು ಇತ್ತು. ಈಗ ಅದು ಒತ್ತುವರಿಯಾಗಿದೆ. ಮರಗಳೂ ಸಹ ಇಲ್ಲ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗೌಡನಹಳ್ಳಿ ಕೆರೆಯಿದೆ. ೧ ತೆರೆದ ಬಾವಿಯಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕುರುಹಿನ ಶೆಟ್ಟರು (ಸಣ್ಣಲಾಳಿ) ಪ್ರಧಾನ ಸಮುದಾಯವಾಗಿದ್ದು ಉಳಿದಂತೆ ನಾಯಕರು, ಹಾಲುಮತಸ್ಥರು (ಕುರುಬ), ಬೆಸ್ತರು, ತಿಗಳರು, ವೈಷ್ಣವರು, ಲಿಂಗಾಯಿತರು, ಆದಿಕರ್ನಾಟಕ ಸಮುದಾಯದವರು ಸಣ್ಣ ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೨೧ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೫೫೩ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೬೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಹುಚ್ಚೆಳ್ಳು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಅಡಿಕೆ, ಹೂ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಲಗೇಜ್ ಆಟೋಗಳು, ಬೈಕ್‌ಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕಚ್ಚಾ ರಸ್ತೆಯಿದೆ. ಕೆರೆ ತುಂಬಿದಾಗ ಮಾತ್ರ ಮೀನು ಕೃಷಿ ಮಾಡಲಾಗುತ್ತದೆ. ಒಬ್ಬರು ಬೆಸ್ಕಾಂನಲ್ಲಿ ಲೈನ್‌ಮನ್ ಆಗಿದ್ದಾರೆ. ಬೆಂಗಳೂರಿನ ಫ್ಯಾಕ್ಟರಿಗಳಲ್ಲಿ ಒಂದಷ್ಟು ಜನ ದುಡಿಮೆ ಮಾಡುತ್ತಿದ್ದಾರೆ. ಬಡಗಿ ಕೆಲಸ ಮಾಡುವವರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ

ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಗ್ರಾಮಕ್ಕೆ ರಸ್ತೆಮಾರ್ಗವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೭೫% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೨ ಚಿಕ್ಕ ಅಂಗಡಿಗಳಿವೆ. ಸ್ಮಶಾನ ಭೂಮಿಯಿತ್ತು ಈಗ ಅದನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ.

ಲಕ್ಷ್ಮೀರಂಗನಾಥಸ್ವಾಮಿ ದೇವಾಲಯವಿದೆ. ಇದನ್ನು ಹುತ್ತದ ರಂಗನಾಥಸ್ವಾಮಿ ಎಂತಲೂ ಕರೆಯಲಾಗುತ್ತದೆ. ಕರಿಯಮ್ಮದೇವಿ, ಶನಿಮಹಾದೇವರ ದೇವಸ್ಥಾನಗಳಿವೆ. ಏಪ್ರಿಲ್‌ನಲ್ಲಿ ಯುಗಾದಿ ಹಬ್ಬ ಆದ ೧೫ನೇ ದಿವಸಕ್ಕೆ ೩ ದಿನಗಳ ಕಾಲ ಜಾತ್ರೆ ನಡೆಯುತ್ತದೆ. ಲಕ್ಷ್ಮಿದೇವಿಗೂ ರಂಗನಾಥನಿಗೂ ಮದುವೆ ಕಾರ್ಯವನ್ನು ಗೊರವಯ್ಯಗಳ ಹೊಗಳಿಕೆಯೊಂದಿಗೆ ಮಾಡಲಾಗುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗಂಗಣ್ಣ ಮತ್ತು ಗಿರಿಯಪ್ಪ ಎಂಬುವರು ಕೋಲಾಟ ಆಡುತ್ತಾರೆ ಹಾಗೂ ಕಲಿಸಿಕೊಡುತ್ತಾರೆ.

## ಗೌಡನಹಳ್ಳಿ ಕೋಡಿಪಾಳ್ಯ

ಗೌಡನಹಳ್ಳಿಗೆ ಸೇರಿದ ಮಜರೆ ಗ್ರಾಮ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೧ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ಕಂದಾಯ ಗ್ರಾಮ ಗೌಡನಹಳ್ಳಿಗೆ ಸೇರುವ ೭೫೨.೬ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಬಯಲು ಪ್ರದೇಶ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಗೌಡನಹಳ್ಳಿಗೆ ಸೇರಿದ ಒಂದು ಕೆರೆಯಿದ್ದು ಮಳೆಗಾಲದಲ್ಲಿ ಮಾತ್ರ ತುಂಬುತ್ತದೆ.

ಬೆಸ್ತ ಜನಾಂಗ ಪ್ರಧಾನವಾಗಿದ್ದು ತಿಗಳರು, ಮಡಿವಾಳರು ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೩೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೪೭ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೧೧ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಹಾರಕ, ನವಣೆ ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಸೊಪ್ಪು, ತರಕಾರಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಅಡಿಕೆ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಟೆಂಪೋ, ದ್ವಿಚಕ್ರ ವಾಹನಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮಾಳಿಗೆಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ದುಗುಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು.

ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಸುತ್ತಾರೆ. ಶಿಕ್ಷಣ, ಪಡಿತರ, ಸಾರಿಗೆ ವ್ಯವಸ್ಥೆ ಗೌಡನಹಳ್ಳಿಯಿಂದ ಪಡೆಯುತ್ತಾರೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೧೬ ಫಲಾನುಭವಿಗಳಿದ್ದಾರೆ. ಕರಿಯಮ್ಮನ ಊರಹಬ್ಬ ಆಚರಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗ್ಯಾರೇಹಳ್ಳಿ ಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೩ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೨೩.೨.೪೦ ಹೆಕ್ಟೇರ್ ಇದ್ದು ಗ್ಯಾರೇಹಳ್ಳಿ ಮಜರೆಯೊಂದಿಗೆ ಹಂಚಿಕೆಯಾಗಿದೆ. ೨೦೬ ಹೆಕ್ಟೇರ್ ಕೃಷಿ ಭೂಮಿಯಾಗಿದೆ. ಕಂದಾಯ ಗ್ರಾಮ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ೫೦೦–೬೦೦ ಅಡಿ ಆಳದ ೯ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಲಿಂಗಾಯಿತ ಸಮುದಾಯ ಪ್ರಧಾನ ಸಮುದಾಯವಾಗಿದ್ದು ಪರಿಶಿಷ್ಟ ಜಾತಿ ಸಮುದಾಯದವರು ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೩೧ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೩೧೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೦ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಕಟ್ಟಡ ಕೆಲಸಗಾರರು ಮತ್ತು ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ೨ ಕಿ.ಮೀ ದೂರದಲ್ಲಿರುವ ಗ್ಯಾರೇಹಳ್ಳಿಯ ನಂದಿನಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಹಾಲು ಸರಬರಾಜು ಮಾಡುತ್ತಾರೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ದ್ವಿಚಕ್ರ ವಾಹನಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಜೆ.ಸಿ. ಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ.

ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು.

ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ನೀಡಲಾಗುತ್ತಿದೆ. ಮಕ್ಕಳು ಗ್ಯಾರೇಹಳ್ಳಿ ಶಾಲೆಗೆ ಹೋಗುತ್ತಾರೆ. ಸಾಕ್ಷರತೆ ೬೧% ರಷ್ಟಿದೆ. ೩ ಸ್ತ್ರೀಶಕ್ತಿ ಸಂಘಗಳು, ಒಂದು ಜಲಾನಯನ ಸಂಘವಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೯ ಫಲಾನುಭವಿಗಳಿದ್ದಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗೋರಿನಾಯ್ಕನತಾಂಡ

ಗೌರಿನಾಯಕ ಎಂಬ ಹೆಸರಿನ ಲಂಬಾಣಿ ಮೂಲದ ವ್ಯಕ್ತಿ ಗಾಣದಾಳು ಗ್ರಾಮಪಂಚಾಯ್ತಿ ವ್ಯಾಪ್ತಿಯ ಸೋಮನಹಳ್ಳಿ ಸಮೀಪ ಮೊದಲಿಗೆ ಜನವಸತಿ ನಿರ್ಮಿಸಿಕೊಂಡ ಕಾರಣ ಗೋರಿನಾಯ್ಕನ ತಾಂಡ್ಯ ಎಂಬ ಹೆಸರಿನಲ್ಲಿ ಗ್ರಾಮ ನಿರ್ಮಾಣವಾಗಿದೆ. ಭೌಗೋಳಿಕ ವಿಸ್ತೀರ್ಣ ಸೋಮನಹಳ್ಳಿಯ ೨೧೫೭ ೨೬೦.೮೬ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದ್ದು ೩೧೪ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ೩೧೪ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಲಂಬಾಣಿ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಅಗಸ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೩೭ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೫೩ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಗೂಡಂಗಡಿ, ತಲೆ ಮೇಲೆ ಬುಟ್ಟಿಯಲ್ಲಿ ಪಾತ್ರೆ ಸಾಮಾನು ಹೊತ್ತು ವ್ಯಾಪಾರ ಮಾಡುವವರಿದ್ದಾರೆ. ತೆಂಗು, ಗರಿಕಡ್ಡಿ, ಮಟ್ಟೆ ವ್ಯಾಪಾರವಿದೆ. ಮುತ್ತುಗದ ಎಲೆ ಸಂಗ್ರಹದ ವ್ಯಾಪಾರವಿದೆ. ಶಿಕ್ಷಣ, ಪಡಿತರ ವಿಷಯಗಳಿಗೆ ಸೋಮನಹಳ್ಳಿ, ಗಾಣದಾಳು ಗ್ರಾಮಗಳಿಗೆ ಹೋಗುತ್ತಾರೆ. ಒಂದು ಸ್ತ್ರೀಶಕ್ತಿ ಸಂಘವಿದೆ. ಗಾಣದಾಳುವಿನಿಂದ ಅಂಚೆ ಸಂಪರ್ಕ ಕಲ್ಪಿಸಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗಾಣದಾಳ್ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸಾಕ್ಷರತೆ ೫೮% ರಷ್ಟಿದೆ. ಸಮುದಾಯ

ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಗಾಣದಾಳುವಿಗೆ ನರೇಗ ರಸ್ತೆ ಸಂಪರ್ಕವಿದೆ.

ಸೇವಾಲಾಲ್ ದೇವರ ಪೌಳಿಯಿದೆ. ದೀಪಾವಳಿ ತಿಂಗಳಲ್ಲಿ ಸೇವಾಲಾಲ್ ದೇವರ ಉತ್ಸವ ಇರುತ್ತದೆ. ದೀಪಾವಳಿ ಈ ಗ್ರಾಮದ ವಿಶೇಷ ಹಬ್ಬವಾಗಿದೆ. ಹೋಮ, ಆರತಿ, ಸಾಂಪ್ರದಾಯಿಕ ಉಡುಗೆಯೊಂದಿಗೆ ನೃತ್ಯ ಪ್ರದರ್ಶನ ಇರುತ್ತದೆ. ಕರಿಯ ಉಡುಸಲಮ್ಮ ದೇವರ ಆರತಿ, ಊರಹಬ್ಬವೂ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗಾಂಧಿನಗರ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಮತ್ತಿಘಟ್ಟ ಗ್ರಾಮಪಂಚಾಯ್ತಿಯ ಪುಟ್ಟ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೮ ಕಿಮೀ ಅಂತರದಲ್ಲಿದೆ. ಮೊದಲಿಗೆ ಮಾದಿಗರ ಕೇರಿ ಎಂದಿದ್ದದ್ದು ನಂತರ ಮಹಾತ್ಮ ಗಾಂಧಿಯವರ ಪ್ರಭಾವದಿಂದ ಗಾಂಧಿನಗರ ಎಂದಾಗಿದೆ. ಭೌಗೋಳಿಕ ವಿಸ್ತೀರ್ಣ ೧೩೦.೮೬ ಹೆಕ್ಟೇರ್. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ. ಒಂದು ಬೆಟ್ಟವಿದ್ದು ರಕ್ಷಿತಾರಣ್ಯವಿದೆ. ಕಾಡುಪ್ರಾಣಿಗಳಾದ ಕರಡಿ, ತೋಳ, ನರಿ, ಕಾಡುಹಂದಿಗಳು ಆಗಾಗ ಈ ಗ್ರಾಮಕ್ಕೆ ಧಾಳಿ ಮಾಡುತ್ತವೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಒಂದು ಕೆರೆ, ೧ ಕುಂಟೆಗಳಿವೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ೨೫ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಆದಿಕರ್ನಾಟಕ ಜನಾಂಗದವರು ಪ್ರಧಾನವಾಗಿದ್ದು ನಾಯಕ ಸಮುದಾಯದವರಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೯೮ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೪೮ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ೬ ಜನತಾ, ೨ ಆಶ್ರಯ, ೨೦ ಅಂಬೇಡ್ಕರ್ ವಸತಿ ಹಾಗೂ ೧ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೭ ವಸತಿ ರಹಿತ ಕುಟುಂಬಗಳಿವೆ. ೪ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ. ೪ ಮಂದಿ ಸರ್ಕಾರಿ ನೌಕರರಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಿಶ್ರಿತ ಕಪ್ಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮತ್ತಿಘಟ್ಟ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಹಾಗೂ ಒಬ್ಬರು ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಜಿಲ್ಲಾ ಹಾಗೂ ರಾಜ್ಯ ಮುಖ್ಯರಸ್ತೆಗಳಿದ್ದು ತಿಪಟೂರು–ಹಿರಿಯೂರು–ಹುಳಿಯಾರು–ಚಿ.ನಾ. ಹಳ್ಳಿಗೆ

ಸಂಚರಿಸಲು ವ್ಯವಸ್ಥೆಯಿದೆ. ಕರಿಯಮ್ಮದೇವಿ, ದುರ್ಗಮ್ಮದೇವಿ ಸ್ತ್ರೀಶಕ್ತಿ ಸಂಘಗಳು ಹಾಗೂ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಹಕಾರ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೫೮% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೨ ಅಂಗಡಿಗಳಿವೆ.

ಗಣಪತಿ ಹಾಗೂ ಪ್ಲೇಗಮ್ಮನ ದೇವಾಲಯಗಳಿವೆ. ಪ್ಲೇಗಮ್ಮನ ಬಾನವನ್ನು ಬಾಡೂಟದೊಂದಿಗೆ ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ತಿಮ್ಮಣ್ಣ ಮತ್ತು ರಂಗಯ್ಯ ರಂಗಭೂಮಿ ಕಲಾವಿದರಾಗಿದ್ದಾರೆ.

## ಗೊಲ್ಲರಹಳ್ಳಿ ಕ್ಯಾಂಪ್

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಸಬಾ ಹೋಬಳಿ ಹೊನ್ನೇಬಾಗಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೭ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೨೬೦.೮೬೨೭೫.೦೪ ಚದುರ ಕಿ.ಮೀ. ಮೂಲ ಜನವಸತಿಯಿದ್ದ ಜಾಗ ಈಗ ಖಾಲಿಯಾಗಿದೆ. ಒಂದು ಆಂಜನೇಯಸ್ವಾಮಿ ದೇವಾಲಯ ಮಾತ್ರ ಇದೆ. ಪಾಳು ಬಿದ್ದಿದ್ದ ದೇವಾಲಯವನ್ನು ಈಗ ಜೀರ್ಣೋದ್ಧಾರ ಮಾಡಲಾಗಿದೆ. ಮೂಲ ನಿವಾಸಿಗಳು ಹಲವಾರು ಊರುಗಳಿಗೆ ವಲಸೆ ಹೋಗಿದ್ದಾರೆ. ಈಗ ಸ್ವಲ್ಪ ದೂರದಲ್ಲೇ ಕ್ಯಾಂಪ್ ಎಂಬ ಹೊಸಗ್ರಾಮ ಇದೆ. ಸಮೀಪದಲ್ಲಿ ಗಣಿಗಾರಿಕೆ ನಡೆಯುತ್ತಿದ್ದು ಅಲ್ಲಿ ಕೆಲಸ ಮಾಡುವವರು ಈ ಕ್ಯಾಂಪ್‌ನಲ್ಲಿ ವಾಸಿಸುತ್ತಾರೆ. ಗೊಲ್ಲರಹಳ್ಳಿಯು ಬೇಚಾರಕ್ ಗ್ರಾಮವಾಗಿದೆ.

ಬಯಲುನಾಡಾಗಿದೆ. ಕಪ್ಪು-ಬಿಳಿ ಕಲ್ಲುಗಳು, ಬಿಳಿ-ಕೆಂಪು ಮಣ್ಣು ಕಂಡುಬರುತ್ತದೆ. ಪೂರ್ವಕ್ಕೆ ಅಬ್ಬಿಗೆ ಗುಡ್ಡ ಇದೆ. ಇದನ್ನು ಸಾಲುಗುಡ್ಡ ಎಂತಲೂ ಕರೆಯುತ್ತಾರೆ. ಅನೇಕ ಗುಡ್ಡಗಳ ಸಾಲು ಇದಾಗಿದೆ. ಇಲ್ಲಿ ಮ್ಯಾಂಗನೀಸ್ ಹಾಗೂ ಕಬ್ಬಿಣದ ಅದಿರು ಇದೆ. ಗಣಿಗಾರಿಕೆ ಕೂಡ ನಡೆಯುತ್ತಿದೆ. ಇಲ್ಲಿ ಸಾಮಾಜಿಕ ಅರಣ್ಯ ಇದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ದೇವರ ಹಳ್ಳ, ವಜ್ರದ ಕಟ್ಟೆ, ದುರ್ಗದ ಕೆರೆ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಗೌಡರು ಅಥವಾ ಗೌಂಡರ್ ದೊಡ್ಡ ಸಮುದಾಯವಾಗಿದೆ. ಇವರು ತಮಿಳು ಮೂಲದ ಜನಾಂಗವಾಗಿದ್ದಾರೆ. ನಾಯಕರು, ಆದಿಕರ್ನಾಟಕ, ಕುರುಬರು, ವೀರಶೈವರು ಸಣ್ಣ ಸಮುದಾಯವಾಗಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ತಮಿಳು ಮಾತನಾಡುವವರಿದ್ದಾರೆ. ಗುಡ್ಡದ ಓಣಿ ಎಂಬ ಓಣಿಯಿದೆ. ಒಟ್ಟು ೭೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೭೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೨ ಕಾಂಕ್ರೀಟ್, ೬೮ ಕಲ್ಲಿನ-ಮಣ್ಣಿನ, ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಮತ್ತು ಕೆಲವರು ಶೀಟ್‌ಗಳನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ವಸತಿ ರಹಿತ ಹಾಗೂ ನಿವೇಶನ ರಹಿತರೂ ಅಲ್ಪಪ್ರಮಾಣದಲ್ಲಿದ್ದಾರೆ. ೩೫ ಕುಟುಂಬಗಳು ಶೌಚಾಲಯ ಹೊಂದಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಹುಚ್ಚೆಳ್ಳು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ

ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಅಡಿಕೆ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಮಣ್ಣಿನ ರಸ್ತೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಮಣ್ಣಿನ ರಸ್ತೆಯಿದೆ. ಹೊನ್ನೇಬಾಗಿ ಅಂಚೆಗೆ ಸೇರುತ್ತದೆ. ಮಾರಿಕಾಂಬಾ, ನೀಲಮ್ಮ, ವಿನಾಯಕ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೭೮% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೬ ಫಲಾನುಭವಿಗಳಿದ್ದಾರೆ. ಚಿಕ್ಕ ಹೋಟೆಲ್ ಹಾಗೂ ಕಿರಾಣಿ ಅಂಗಡಿಗಳಿವೆ.

ಮಾರಿಯಮ್ಮ ದೇವಾಲಯವಿದೆ. ಏಪ್ರಿಲ್‌ನಲ್ಲಿ ಜಾತ್ರೆ ನಡೆಯುತ್ತದೆ. ಕರಗ ಉತ್ಸವ ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕಾಂತಮ್ಮ, ಉಮಾ ಎಂಬುವರು ತಮಿಳು ಜನಪದ ಗೀತೆಗಳನ್ನು ಹಾಡುತ್ತಾರೆ. ಗ್ರಾಮದಲ್ಲಿ ರೈತಸಂಘ, ಮಂಜುನಾಥಸ್ವಾಮಿ ಸಂಘ, ಗಣಿ ಕಾರ್ಮಿಕರ ಸಂಘಗಳಿವೆ.

## ಗುಂಗುರಬಾಗಿ

ಗುಂಗುರಬಾಗಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿಗೆ ಸೇರಿದ ಹಂದನಕೆರೆ ಮಜರೆ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೭ ಕಿಮೀ ಅಂತರದಲ್ಲಿದೆ. ಹಂದನಕೆರೆಯಲ್ಲಿ ವಾಸವಾಗಿದ್ದ ಆದಿಕರ್ನಾಟಕ ಜನಾಂಗದವರು ವಲಸೆ ಹೋಗಿ ಇಲ್ಲಿ ನೆಲೆಸಿದ್ದಾರೆ. ಆಗಾಗ ಗುಂಗುರಗಳು ಹೇರಳವಾಗಿ ಬರುತ್ತಿದ್ದವೆಂದು, ಕಾಲ ಕ್ರಮೇಣ ಆ ಗುಂಗುರಗಳಿಗೆ ಬಾಗಿ ಅಂದರೆ ಯಾವುದೇ ರೀತಿಯ ತೊಂದರೆಗಳನ್ನು ಆ ಕೀಟಗಳಿಗೆ ನೀಡದೆ ಸ್ವೀಕರಿಸಿದರೆಂದು ಅದರಿಂದಾಗಿ ಗುಂಗುರಬಾಗಿ ಎಂದು ಹೆಸರಾಗಿ ಬದಲಾಯಿತೆಂದು ಹೇಳುತ್ತಾರೆ.

ಭೌಗೋಳಿಕ ವಿಸ್ತೀರ್ಣ ೨೮೫ ಹೆಕ್ಟೇರ್. ಪಕ್ಕದಲ್ಲಿ ಸಿದ್ದರಬೆಟ್ಟವಿದೆ. ಬಯಲುಸೀಮೆಯ ನಾಡಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೫೬೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೨೫–೩೧ ಡಿಗ್ರಿ ಸರಾಸರಿ ಇದೆ. ಗುಂಗುರಬಾಗಿ ಕೆರೆಯಿದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಆದಿಕರ್ನಾಟಕರು ಮುಖ್ಯವಾಗಿದ್ದು ಕುರುಬ ಜನಾಂಗದವರೂ ಇದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೫೬ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೫೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೨೦ ಕಲ್ಲಿನ, ೬ ಮಣ್ಣಿನ, ೩೦ ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೧೨ ಕುಟುಂಬಗಳು ನಿವೇಶನರಹಿತವಾಗಿವೆ. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಇಬ್ಬರು ಸರ್ಕಾರಿ ನೌಕರರಿದ್ದಾರೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯಿತ್ತಿ ಕ್ಷೇತ್ರ, ತಾಲ್ಲೂಕು ಪಂಚಾಯಿತ್ತಿ ಹಾಗೂ ಗ್ರಾಮಪಂಚಾಯಿತ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯಿತ್ತಿ ಸದಸ್ಯರು ಮತ್ತು ಒಬ್ಬರು ಗ್ರಾಮಪಂಚಾಯಿತ್ತಿ ನೌಕರರು ಇದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಹಂದನಕೆರೆ–ಚಿ.ನಾ. ಹಳ್ಳಿ – ಶ್ರೀರಾಂಪುರಕ್ಕೆ ಸಂಪರ್ಕವನ್ನು ಹೊಂದಿರುವ ಮಾರ್ಗವಿದೆ. ಒಂದು ನರೇಗಾ ರಸ್ತೆಯಿದೆ. ಶ್ರೀ ಸೀತಾಮಾತಾ, ರಂಗಸ್ವಾಮಿ ಸ್ತ್ರೀಶಕ್ತಿ ಸಂಘಗಳಿವೆ. ೨ ಚಿಲ್ಲರೆ ಅಂಗಡಿಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೫೦% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ.

ಶ್ರೀರಾಮ ದೇವಾಲಯವಿದೆ. ಹಂದನಕೆರೆಯ ಶ್ರೀ ದುರ್ಗಮ್ಮದೇವಿ ಜಾತ್ರೆಯಲ್ಲಿ ಭಾಗವಹಿಸಿ ಸಿಡಿ, ಓಕುಳಿ ಆಡುತ್ತಾರೆ. ಹಂದನಕೆರೆಯಲ್ಲಿ ನಡೆಯುವ ಎಲ್ಲಾ ಧಾರ್ಮಿಕ, ಸಾಮಾಜಿಕ, ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕೆಂಚಪ್ಪ ಎಂಬುವರು ರಂಗಭೂಮಿಯ ಗೀತೆಗಳನ್ನು ಹಾಡುತ್ತಾರೆ. ದಲಿತ ಸಂಘರ್ಷ ಸಮಿತಿಯ ಅನೇಕ ಸದಸ್ಯರಿದ್ದು ಆಗಾಗ ದಲಿತ ಚಳುವಳಿಗಳಲ್ಲಿ ಭಾಗವಹಿಸುತ್ತಾರೆ.

## ಗ್ಯಾರೇಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೪ ಕಿಮೀ ಅಂತರದಲ್ಲಿರುವ ಕಂದಾಯ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ೨೩೨.೪೦ ಹೆಕ್ಟೇರ್. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೪೦೦–೫೦೦ ಅಡಿ ಆಳದ ೧೦ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯಿತ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಲಿಂಗಾಯಿತ ಸಮುದಾಯದವರು ಮಾತ್ರ ಇದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೪೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೦೬ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಆಧುನಿಕ ಡೈರಿಯಿದೆ. ೧೨ ಜನತಾ, ಆಶ್ರಯ ವಸತಿ ಯೋಜನೆಯ ಬಳಕೆದಾರರಿದ್ದಾರೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮತ್ತು ಕಪ್ಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ

ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕಾರು, ಬೈಕ್‌ಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಜೆ.ಸಿ. ಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೨ ಸ್ತ್ರೀಶಕ್ತಿ ಸಂಘಗಳು, ಒಂದು ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಬಸವೇಶ್ವರ, ತಿಮ್ಮಪ್ಪ, ಸುಂಕಿಮಾರಮ್ಮ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗ್ಯಾರೆಹಳ್ಳಿ ಎ.ಕೆ. ಕಾಲೋನಿ

ಗ್ಯಾರೆಹಳ್ಳಿ ಎ.ಕೆ. ಕಾಲೋನಿ ಗ್ಯಾರೆಹಳ್ಳಿ ಕಂದಾಯ ಗ್ರಾಮಕ್ಕೆ ಸೇರಿದ ಒಂದು ಉಪಗ್ರಾಮ. ಆದಿಕರ್ನಾಟಕ ಜನಾಂಗಕ್ಕೆ ಸೇರಿದ ೨೩ ಮನೆಗಳಿದ್ದು ಗ್ರಾಮದಿಂದ ಪ್ರತ್ಯೇಕ ಬಡಾವಣೆ ನಿರ್ಮಿಸಿಕೊಂಡ ಕಾರಣದಿಂದ ಗ್ಯಾರೆಹಳ್ಳಿ ಮಾದಿಗರಹಟ್ಟಿ ಎಂತಲೂ ಕರೆಯುತ್ತಾರೆ. ಒಟ್ಟು ೨೩ ಮನೆಗಳಿದ್ದು ೧೦೩ ಜನಸಂಖ್ಯೆ ಹೊಂದಿದೆ. ಇಲ್ಲಿನ ಮನೆಗಳು ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಇವು ಸರ್ಕಾರದ ವಸತಿ ಯೋಜನೆಯಾದ ಜನತಾ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ರಚನೆಯಾಗಿವೆ. ಶೌಚಾಲಯ ಮುಕ್ತವಾಗಿದ್ದು ಬಯಲು ಶೌಚಾಲಯ ಬಳಸುತ್ತಾರೆ. ರಾಗಿಮುದ್ದೆ ಮುಖ್ಯ ಆಹಾರ. ವಿಶೇಷವಾಗಿ ಬಾಡೂಟ, ಪಾಯಸ ಬಳಸುತ್ತಾರೆ. ಪಶುಪಾಲನೆ, ಹಸು, ಕುರಿ, ಮೇಕೆ ಸಾಕುತ್ತಾರೆ. ಪಡಿತರ, ಶಿಕ್ಷಣ, ವಿಚಾರಗಳಿಗೆ ಜೆ.ಸಿ. ಪುರಕ್ಕೆ ಹೋಗುತ್ತಾರೆ. ಜೆ.ಸಿ. ಪುರಕ್ಕೆ ಜಿಲ್ಲಾ ಪಂಚಾಯ್ತಿ ರಸ್ತೆ ಸಂಪರ್ಕ ಕಲ್ಪಿಸಿದೆ. ರಾಗಿ, ಹೆಸರು, ಅವರೆ, ಹುರುಳಿ ಮುಖ್ಯ ಬೆಳೆಗಳು. ತೆಂಗನ್ನು ತೋಟಗಾರಿಕೆ ಬೆಳೆಯಾಗಿ ಬೆಳೆಯುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯ ವೇತನದ ಫಲಾನುಭವಿಗಳಿದ್ದಾರೆ. ಜೆ.ಸಿ. ಪುರ ಗ್ರಾಮಪಂಚಾಯ್ತಿಗೆ ಸೇರಿದ್ದು ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿಗೆ ಸೇರಿದೆ. ಸುಂಕಿನ ಮಾರಮ್ಮ ದೇವರಿಗೆ, ಅಟ್ನದಮ್ಮನಿಗೆ ಆರತಿ, ಬಾನ ಅರ್ಪಿಸುವುದು ವಾಡಿಕೆ. ಬಾನ, ಬಲಿಯನ್ನು ನೀಡಲಾಗುವುದು. ಶಿಕ್ಷಣ, ಕೆಇಬಿ, ಅರಣ್ಯ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಟ್ರ್ಯಾಕ್ಟರ್ ಡ್ರೈವರ್ ಇತರೆ ಕಾರ್ಮಿಕರಿದ್ದಾರೆ. ಕೃಷಿ ಕಾರ್ಮಿಕರು ಅಧಿಕವಾಗಿದ್ದಾರೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಗೌರಿ–ಗಣೇಶ ಹಬ್ಬಗಳನ್ನು ಆಚರಿಸುತ್ತಾರೆ.

## ಗ್ಯಾರೆಹಳ್ಳಿಪಾಳ್ಯ

ಗ್ಯಾರೆಹಳ್ಳಿ ಪಾಳ್ಯವು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೮ ಕಿಮೀ ಅಂತರದಲ್ಲಿ ಜೆ.ಸಿ. ಪುರ–ಗ್ಯಾರೆಹಳ್ಳಿಯ ಮಧ್ಯದಲ್ಲಿದೆ. ಗ್ಯಾರೆಹಳ್ಳಿಗೆ ಸೇರಿದ ಮಜರೆ ಗ್ರಾಮವಾದುದರಿಂದ ಗ್ಯಾರೆಹಳ್ಳಿ ಪಾಳ್ಯ ಎನ್ನುತ್ತಾರೆ. ಇದು ೧೩೩ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಬಯಲು ಪ್ರದೇಶ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ವೀರಶೈವರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕರು ಕಿರು ಸಮುದಾಯವಾಗಿದೆ. ಪ್ರಮುಖ

ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೨೩ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೦೭ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಚಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೫ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಶಿಕ್ಷಣ, ಪಡಿತರ ವಿಷಯಗಳಿಗೆ ಜೆ.ಸಿ. ಪುರಕ್ಕೆ ಹೋಗಬೇಕಿದೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ದ್ವಿಚಕ್ರ ವಾಹನಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಜೆ.ಸಿ. ಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸಾಕ್ಷರತೆ ೭೪% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಜೆ.ಸಿ. ಪುರ, ಚಿಕ್ಕನಾಯಕನಹಳ್ಳಿ, ಕೆ.ಬಿ. ಕ್ರಾಸ್ ಮಾರ್ಗವಾಗಿ ರಸ್ತೆ, ಬಸ್ ಸಂಚಾರವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗ್ಯಾರಂಟಿಪಾಳ್ಯ

ಗ್ಯಾರಂಟಿಪಾಳ್ಯ ಗಾಣದಾಳು ಗ್ರಾಮಕ್ಕೆ ಸೇರಿದ ಒಂದು ಮಜರೆ ಗ್ರಾಮವಾಗಿದೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ३೭ ಕಿಮೀ ಅಂತರದಲ್ಲಿದೆ. ಇದರ ಭೌಗೋಳಿಕ ವಿಸ್ತೀರ್ಣ ಮುಖ್ಯ ಗ್ರಾಮದೊಂದಿಗೆ ಹಂಚಿಕೆಯಾಗಿದ್ದು ೨೧೪ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಬಯಲು ಪ್ರದೇಶ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ಯಾರಂಟಿ ಎಂಬುದು ಗೋರಂಟಿ ಗಿಡಗಳ ಮೂಲದಿಂದ ಬಂದುದಾಗಿದ್ದು ಇಂದು ಗ್ಯಾರಂಟಿಪಾಳ್ಯ ಎಂದಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ३೪–३೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ३ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ. ಸಾಂಪ್ರದಾಯಿಕ ಬಡಗಿ ಕಸುಬಿನವರಿದ್ದಾರೆ.

ನಾಯಕರು, ಕುಂಚಿಟಿಗರು, ಅಗಸ, ಈಡಿಗ ಜನಾಂಗವಿದ್ದು ಒಟ್ಟು ೪೭ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೯३ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೭೨ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೧೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಹುಣಸೆ, ಹೊಂಗೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಆಟೋ, ದ್ವಿಚಕ್ರ ವಾಹನಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು

ಮಾಡುತ್ತಿದ್ದಾರೆ. ಸಾರಿಗೆ, ಡ್ರೈವರ್, ಅರಣ್ಯ ಇಲಾಖೆಯಲ್ಲಿ ೪ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಉದ್ಯೋಗಿಗಳಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಗಾಣದಾಳುವಿನಿಂದ ಅಂಚೆ ಸಂಪರ್ಕವಿದೆ. ಶಿಕ್ಷಣ, ಪಡಿತರ ಇವು ಮುಖ್ಯಗ್ರಾಮ ಗಾಣದಾಳುವಿನಿಂದ ಪಡೆಯಲಾಗುತ್ತದೆ. ಶೇ.೬೯ ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಬೋರನಕಣಿವೆ ಮಾರ್ಗವಾಗಿ ಸಿರಾ-ಹುಳಿಯಾರು ಕಡೆಗೆ ರಾಜ್ಯ ಮುಖ್ಯ ರಸ್ತೆ ಸಂಚಾರ, ಬಸ್ ಸೌಕರ್ಯವಿದೆ.

ಕರಿಯಮ್ಮನ ಊರಹಬ್ಬ ಆಚರಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗಂಗಾಬೋವಿ ಕಾಲೋನಿ

ಗಂಗಾಬೋವಿ ಕಾಲೋನಿ ಗಾಣದಾಳು ಗ್ರಾಮಪಂಚಾಯ್ತಿಗೆ ಸೇರಿದ ಸೋಮನಹಳ್ಳಿಯ ಮಜರೆ ಗ್ರಾಮವಾಗಿದೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೬ ಕಿಮೀ ಅಂತರದಲ್ಲಿದೆ. ಬೋವಿ ಜನಾಂಗದ ಗಂಗಾಬೋವಿ ಎಂಬುವವನು ಮೊದಲು ಜನವಸತಿ ನಿರ್ಮಿಸಿಕೊಂಡು ಇಲ್ಲಿ ವಾಸಿಸಿದ್ದ ಕಾರಣದಿಂದ ಗಂಗಾಬೋವಿ ಕಾಲೋನಿ ಎಂದು ಕರೆಯುತ್ತಾರೆ. ಬಯಲು ಪ್ರದೇಶ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಬೋವಿ ಜನಾಂಗದವರು ದೊಡ್ಡ ಸಮುದಾಯ. ಆದಿಕರ್ನಾಟಕ ಜನಾಂಗದವರಿದ್ದಾರೆ. ಒಟ್ಟು ೩೨ ಮನೆಗಳನ್ನು ಹೊಂದಿದೆ. ಕನ್ನಡ ಮಾತೃಬಾಷೆಯಾಗಿದ್ದು ತೆಲುಗು ಮಾತನಾಡುತ್ತಾರೆ. ೨೦೧೧ ರ ಜನಗಣತಿಯ ಪ್ರಕಾರ ೭೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಶೇಂಗಾ, ಹಾರಕ, ನವಣೆ ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬಂಡೆ ಕೆಲಸ, ಜಲ್ಲಿ ಕೆಲಸದ ಕಾರ್ಮಿಕರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶಿಕ್ಷಣ, ಅಂಚೆ, ಪಡಿತರ ವಿಷಯಗಳಿಗೆ ಗಾಣದಾಳು ಗ್ರಾಮಪಂಚಾಯ್ತಿಗೆ ಹೋಗುತ್ತಾರೆ. ಸಾಕ್ಷರತೆ ಶೇ.೫೭ ರಷ್ಟಿದೆ. ಬೋರನಕಣಿವೆಯ ಮೂಲಕ ನರೇಗ ರಸ್ತೆ ಸಂಚಾರವಿದೆ. ಸಮುದಾಯ ಸೌಲಭ್ಯಗಳಾದ

ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಕರಿಯಮ್ಮ, ಉಡಸಲಮ್ಮನ ಊರಹಬ್ಬ ಆಚರಿಸುತ್ತಾರೆ. ಆರತಿ, ಬಲಿ, ಬಾಡೂಟ ಇರುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗೇಮಾನಾಯ್ಕನ ಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರು ಹೋಬಳಿ ಗಾಣದಾಳು ಕಂದಾಯ ಗ್ರಾಮದ ಉಪಗ್ರಾಮ. ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೭ ಕಿಮೀ ಅಂತರದಲ್ಲಿದೆ. ಕಪ್ಪು ಮಿಶ್ರಿತ ಮರಳು ಮಣ್ಣಿನ ಭೂಪ್ರದೇಶವಿದೆ. ೧೧೮ ಎಕರೆ ಕೃಷಿ ಭೂಮಿಯನ್ನು ಹೊಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಒಟ್ಟು ೩೧ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೨೭ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೬ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೧೩ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಹುಣಸೆಹಣ್ಣು ವ್ಯಾಪಾರಿ ಸರಕಾಗಿದೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಸಾಂಪ್ರದಾಯಿಕ ಬಡಗಿ ಇದ್ದಾರೆ. ಪಾತ್ರೆ ವ್ಯಾಪಾರ, ಎತ್ತಿನ ವ್ಯಾಪಾರದ ಗಿರಾಕಿಗಳಿದ್ದಾರೆ. ಹೆಂಗಸರು ಮುತ್ತುಗದ ಎಲೆ ಸಂಗ್ರಹ ಮಾಡುತ್ತಾರೆ. ೨ ಸ್ತ್ರೀಶಕ್ತಿ ಸಂಘಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಹಿರಿಯೂರು, ದಸೂಡಿ, ಹುಳಿಯಾರು ಮಾರ್ಗವಾಗಿ ರಸ್ತೆ ಸಂಪರ್ಕವಿದೆ. ಶಿಕ್ಷಣ, ಪಡಿತರ ವಿಷಯಗಳಿಗೆ ಗಾಣದಾಳು ಗ್ರಾಮಕ್ಕೆ ಹೋಗುತ್ತಾರೆ. ಸಾಕ್ಷರತೆ ೭೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೩ ಫಲಾನುಭವಿಗಳಿದ್ದಾರೆ.

ಸೇವಾಲಾಲ್ ದೇವಾಲಯವಿದ್ದು ದೀಪಾವಳಿಯ ಸಂದರ್ಭದಲ್ಲಿ ವಿಶೇಷ ಜಾತ್ರೆ ಮಾಡುತ್ತಾರೆ. ಪೂಜಾಕಾರ್ಯ, ಸಾಮಾಜಿಕ ನೃತ್ಯ, ಕಾರ್ಯಕ್ರಮ ಜರುಗುತ್ತವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಗಂಟಿಗನ ಪಾಳ್ಯ

ಗಂಟಿಗನ ಪಾಳ್ಯ ಒಂದು ಮಜರೆ ಗ್ರಾಮ ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ೬ ಕಿ.ಮೀ. ದೂರದಲ್ಲಿದೆ. ಶೆಟ್ಟಿಕೆರೆಯಿಂದ ವಲಸೆ ಬಂದ ಗಂಟಿಗಪ್ಪ ಈ ಮೂಲ ನಿವಾಸಿ ಹಾಗಾಗಿ ಈ ಹೆಸರು ಬಂದಿದೆ. ಈ ಗ್ರಾಮವು ಚುಂಗನಹಳ್ಳಿಯ ಮಜರೆ ಗ್ರಾಮವಾಗಿದೆ. ಚುಂಗನ ಹಳ್ಳಿಯ ಒಟ್ಟು ಭೌಗೋಳಿಕ ವಿಸ್ತೀರ್ಣ ೫೨೦.೧೬ ಚ.ಕಿ.ಮೀ. ದಲ್ಲಿ ಸೇರಿದೆ.

ಬಯಲು ನಾಡಾಗಿದ್ದು ಬಿಳಿ ಕಲ್ಲು ಹಾಗೂ ಬಿಳಿ ಮಣ್ಣನ್ನು ಹೊಂದಿದೆ. ಸುತ್ತಮುತ್ತ ನರಿ, ತೋಳ, ಮೊಲ, ಇತ್ಯಾದಿ ಕಾಡು ಪ್ರಾಣಿಗಳು ಕಂಡುಬರುತ್ತವೆ. ಕುರಿ, ಮೇಕೆ, ಹಸು, ಎತ್ತು, ಎಮ್ಮೆ ಇತ್ಯಾದಿ ಪ್ರಾಣಿಗಳನ್ನು ಸಾಕುತ್ತಾರೆ. ಈ ಸುತ್ತ ಕಾಗೆ ಗಿಳಿ ಒಳವನಹಕ್ಕಿ ಗೀಜನ ಇತ್ಯಾದಿ ಪಕ್ಷಿಗಳು ಇವೆ. ಕೆಲ

ಸಮುದಾಯದವರು ಅವರ ಜೀವನೋಪಾಯಕ್ಕಾಗಿ ಕೋಳಿಯನ್ನು ಸಾಕುತ್ತಾರೆ.

೫೩೧.೨ ಮಿ.ಮೀ. ಮಳೆ ಬಿದ್ದ ದಾಖಲೆ ಇದೆ. ಚಳಿಯು ೧೯.೨೦ ಡಿ.ಸೆಂ. ನಷ್ಟಿದ್ದು, ಬಿಸಿಲು ೨೬.೩೦ ಡಿ.ಸೆಂ. ನಷ್ಟಿದೆ. ಹಿರೇಹಳ್ಳಿ ಇದೆ. ತೆರೆದ ಬಾವಿ ಹಾಗೂ ಕೊಳವೆ ಬಾವಿಗಳಿವೆ.

ಸಾಮಾಜಿಕ ರಚನೆಯನ್ನು ಗಮನಿಸಿದ್ದಾಗ ಕುರುಬರು ದೊಡ್ಡ ಸಮುದಾಯದವರಾಗಿದ್ದು, ಕ್ಷಾರಿಕರು ತಿಗಳರು ಸಣ್ಣ ಸಮುದಾಯದವರಾಗಿದ್ದಾರೆ. ಈ ಜನರು ಕನ್ನಡವನ್ನು ಮಾತನಾಡುತ್ತಾರೆ. ಈ ಗ್ರಾಮದಲ್ಲಿ ೪೦ ಮನೆಗಳಿದ್ದು, ಅವುಗಳನ್ನು ಕಲ್ಲು ಹಾಗೂ ಮಣ್ಣಿನಿಂದ ಕಟ್ಟಿದ್ದಾರೆ. ಆ ಮನೆಗಳ ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಹಾಗೂ ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಜನರ ಮುಖ್ಯ ಆಹಾರ ಬೆಳೆಯು ರಾಗಿಮುದ್ದೆ ಆಗಿದೆ. ಉಪ್ಪಿಟ್ಟು, ಚಿತ್ರಾನ್ನ, ದೋಸೆ ಇಡ್ಲಿ ಇತ್ಯಾದಿಗಳು ಅಮುಖ್ಯ ಆಹಾರವಾಗಿದೆ. ಪಾಯಸ ಒಬ್ಬಟ್ಟು ಹಾಗೂ ಕೆಲವರು ಮಾಂಸದಾಹಾರವು ವಿಶೇಷ ಆಹಾರವಾಗಿದೆ. ಜನರು ಸಾಂಪ್ರದಾಯಿಕ ವಾಹನವಾಗಿ ಎತ್ತಿನಗಾಡಿ ಹಾಗೂ ಆಧುನಿಕ ವಾಹನವಾಗಿ ಬೈಕಗಳನ್ನು ಬಳಸುತ್ತಾರೆ.

ಬಹುತೇಕ ಜನರ ವೃತ್ತಿ ಕೃಷಿಯೇ ಆಗಿದೆ. ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಆಹಾರ ಬೆಳೆಯೂ ರಾಗಿಯೇ ಆಗಿದೆ. ಹುರುಳಿ, ಹೆಸರು, ಉದ್ದು, ತೊಗರಿ ಇತ್ಯಾದಿಗಳು ಉಪಬೆಳೆಯಾಗಿದೆ. ತೆಂಗನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ. ಜನರ ಮುಖ್ಯ ವ್ಯಾಪಾರಿ ಸರಕು ತೆಂಗಿನಕಾಯಿ ಹಾಗೂ ಕೊಬ್ಬರಿ ಆಗಿದೆ.

ಶಿಕ್ಷಕರು, ಉಪನ್ಯಾಸಕರು ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ೪ ಜನ ಸರ್ಕಾರಿ ನೌಕರರಿದ್ದಾರೆ.

ಶೆಟ್ಟಿಕೆರೆ ಹೊಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೂ, ಶೆಟ್ಟಿಕೆರೆ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರಕ್ಕೂ ದುಗುಡಿಹಳ್ಳಿ ಗ್ರಾಮ ಪಂಚಾಯಿತಿ ಕ್ಷೇತ್ರಕ್ಕೂ ತುಮಕೂರು ಲೊಕಸಭಾ ಕ್ಷೇತ್ರವಾಗಿದೆ. ಭುವನೇಶ್ವರಿ ಸ್ತ್ರೀಶಕ್ತಿ ಸಂಘವಿದೆ.

ಶೇ. ೬೨ ರಷ್ಟು ಸಾಕ್ಷರತೆ ಹೊಂದಿರುವ ಅಂಗನವಾಡಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದೆ. ವೃದ್ಧಾಪ್ಯ ವೇತನ, ವಿಕಲಚೇತನ ವೇತನ ವಿಧವಾ ವೇತನ ಪಡೆಯುವ ೧೩ ಫಲಾನುಭವಿಗಳಿದ್ದಾರೆ.

ಶ್ರೀ ಮೈಲಾರಲಿಂಗೇಶ್ವರ ಕರಿಯಮ್ಮ ದೇವಿ ಅರಿವಿನ ಲಕ್ಷ್ಮೀದೇವಿ ದೇವಾಲಯ ಇದೆ. ಏಕಾದಶಿ ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ಕನಕ ಯುವಕ ಸಂಘ ಇದೆ. ಶೆಟ್ಟಿಕೆರೆ ತಿಪಟೂರು, ಚಿಕ್ಕನಾಯಕನಹಳ್ಳಿಗೆ ಸಂಪರ್ಕ ರಸ್ತೆ ಇದೆ.

## ಗಾಣದಾಳು

ಗಾಣದಾಳು ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೫ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೫೪೪.೪ ಹೆಕ್ಟೇರ್ ಇದೆ. ಕಂದಾಯ ಗ್ರಾಮ ಗ್ಯಾರಂಟಿಪಾಳ್ಯ ಗೇಮಾನಾಯ್ಕನ ತಾಂಡ್ಯ ಭದ್ರಯ್ಯನಪಾಳ್ಯ ಪಂಚನಹಳ್ಳಿ ಬಡಾವಣೆ ಇದಕ್ಕೆ ಸೇರಿದ ಮಜರೆ ಗ್ರಾಮಗಳಾಗಿವೆ.

ಬಯಲು ನಾಡಾಗಿದ್ದು, ಎರೆ, ಕಪ್ಪು ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಇಲ್ಲಿ ರಂಗನಾಥಸ್ವಾಮಿ ಬೆಟ್ಟವು ಪ್ರೇಕ್ಷಣೀಯ ಸ್ಥಳವಾಗಿದೆ. ಹಾಗೂ ಅರಣ್ಯವೂ ಈ ಗ್ರಾಮದಲ್ಲಿದ್ದು, ಕಾಡುಪ್ರಾಣಿಗಳಿಗೆ ಆಶ್ರಯವಾಗಿದೆ. ಗಾಣದ ಕೆಲಸಕ್ಕೆ ಒಳ್ಳೆಯ ಆಳುಗಳು ಈ ಭಾಗದಲ್ಲಿ ಇದ್ದ ಕಾರಣ, ಆ ಮನೆಗಳನ್ನು ಗಾಣದಾಳಿನವರ ಮನೆ ಎಂದು ನಂತರ ಗಾಣದಾಳು ಎಂದಾಗಿದೆ.

ಕಾಡು ಪ್ರಾಣಿಗಳಾದ ಕರಡಿ, ನರಿ, ತೋಳ, ಕಾಡುಹಂದಿ, ಮುಂಗುಸಿಗಳನ್ನು ಕಾಣಬಹುದು, ಕಾಡುಪಕ್ಷಿಗಳಾದ ನವಿಲು, ಕೋಗಿಲೆ, ಗಿಳಿ, ಗೊರವೆ, ಗೀಜಗಳು ಈ ಗ್ರಾಮದ ಅಭಯಾರಣ್ಯದಲ್ಲಿ ವಾಸವಾಗಿವೆ. ೧೨೧೩ ಹೆಕ್ಟೇರ್ ಕೃಷಿ ಭೂಮಿಯನ್ನು ಸಾಕು ಪ್ರಾಣಿಗಳಾದ ಕರಡಿ, ಹಸು, ಎಮ್ಮೆ, ಕುರಿ, ನಾಯಿ ಹಾಗೂ ಕೋಳಿಯನ್ನು ಈ ಗ್ರಾಮದಲ್ಲಿ ಸಾಕುತ್ತಾರೆ. ಹಸುಗಳಲ್ಲಿ ಮಿಶ್ರತಳಿಗಳನ್ನು ಇಲ್ಲಿ ಸಾಕುತ್ತಾರೆ. ವಾರ್ಷಿಕ ಸರಾಸರಿ ೪೦೦ ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆ ಕಾಲದಲ್ಲಿ ಸುಮಾರು ೩೩ ಡಿ.ಸೆಂ.–೩೫ ಡಿ.ಸೆಂ. ಬಿಸಿಲಿನ ತಾಪವಿರುತ್ತದೆ. ಹಾಗೂ ಚಳಿಗಾಲದಲ್ಲಿ ೧೦–೧೨ ಡಿ.ಸೆಂ. ಚಳಿಯಿರುವ ಹವಾಮಾನವಿರುತ್ತದೆ. ಕಳೆದ ೧೦ ವರ್ಷಗಳಿಂದ ಜಲಕ್ಷಾಮ ಎದುರಿಸುತ್ತಿದ್ದು, ಬರಗಾಲದ ಹೊಸ್ತಿಲಲ್ಲಿದೆ.

ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯ್ತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್ ಮಿನಿ ಟ್ಯಾಂಕ್

ಮತ್ತು ಕೊಳಾಯಿ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತಿದೆ. ೫ ಕೈಪಂಪುಗಳ ವ್ಯವಸ್ಥೆಯಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಹೊರತೆಗಳಾಗಿವೆ.

ಲಿಂಗಾಯಿತ ಸಮುದಾಯವೇ ಪ್ರಧಾನವಾಗಿದ್ದು, ಕಮ್ಮಾರ ಪಂಗಡವು ಸಣ್ಣ ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡವನ್ನು ಬಳಸುತ್ತಾರೆ.

ಗಾಣದಾಳು ಒಟ್ಟು ೨೯೮ ಮನೆಗಳಿದ್ದು, ೨೦೧೧ ರ ಜನಗಣತಿಯ ಪ್ರಕಾರ ೧೨೮೮ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ.

ಮನೆಯ ಪ್ರಕಾರಗಳಿದ್ದು, ಅವುಗಳಲ್ಲಿ ಕಾಂಕ್ರೀಟ್ ಮನೆಗಳು ಕಲ್ಲಿನ ಮನೆಗಳು ಹಾಗೂ ಹೆಂಚಿನ ಮನೆಗಳಿವೆ. ಹಾಗೆಯೇ ಗುಡಿಸಿಲಿನಲ್ಲಿ ನೆಲೆಸಿರುವ ೬ ಕುಟುಂಬಗಳು ಕಾಣಸಿಗುತ್ತವೆ.

ಗ್ರಾಮದಲ್ಲಿರುವ ಮುಖ್ಯ ರಸ್ತೆಯನ್ನು ಡಾಂಬರಿನಿಂದ ನಿರ್ಮಿಸಲಾಗಿದೆ. ಒಳಚರಂಡಿ ವ್ಯವಸ್ಥೆಯೂ ಪ್ರಗತಿಯಲ್ಲಿದೆ. ಹಾಗೂ ಗ್ರಾಮದ ೧೫೯ ಮನೆಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಿಕೊಂಡಿದ್ದಾರೆ. ಪ್ರಮುಖವಾಗಿ ರಾಗಿಮುದ್ದೆ, ಅನ್ನ, ರೊಟ್ಟಿ, ಉಪ್ಪಿಟ್ಟು, ದೋಸೆ ಹಾಗೂ ಸಾಂಪ್ರದಾಯಿಕ ಹಬ್ಬಗಳಲ್ಲಿ ಹೋಳಿಗೆ, ಪಾಯಸ, ಹಾಗೂ ಬಾಡೂಟಗಳನ್ನು ತಯಾರಿಸುತ್ತಾರೆ.

ಕೃಷಿ ಇಲ್ಲಿನ ಪ್ರಮುಖ ಕಸುಬಾಗಿದ್ದರೂ, ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆ ವಾಸವಾಗಿದ್ದರೆ, ರಾಗಿ ಪ್ರಮುಖ ಬೆಳೆಯಗಿದ್ದು, ಉಪಬೆಳೆಗಳಾದ ಜೋಳ ದ್ವಿದಳ ಧಾನ್ಯಗಳು ಹಾಗೂ ತೋಟಗಾರಿಕೆ ಬೆಳೆಗಳಾದ ಅಡಿಕೆ, ತೆಂಗು, ಹಾಗೂ ಪುಷ್ಪ ಕೃಷಿಯನ್ನು ಮಾಡುತ್ತಾರೆ. ಕೆಲಭಾಗದಲ್ಲಿ ಸೊಪ್ಪು ಮತ್ತು ತರಕಾರಿ ಬೆಳೆಯುತ್ತಾರೆ.

ಸಾಂಪ್ರದಾಯಿಕ ಹೈನುಗಾರಿಕೆಯಾದ ಕುರಿ-ಹಸು ಸಾಕಾಣಿಯನ್ನು ಇಲ್ಲಿ ಕಾಣಬಹುದು. ಗಾಣದಾಳು ಗ್ರಾಮದಲ್ಲಿ ಆಧುನಿಕ ಡೈರಿಯಿದ್ದು, ಪಶುಪಾಲನೆ ಹೈನುಗಾರಿಕೆಗೆ ನೆರವಾಗಿದೆ. ಇದರಿಂದ ಗ್ರಾಮದ ಆರ್ಥಿಕ ಸ್ಥಿತಿಯಲ್ಲಿ ಚೇತರಿಕೆ ಕಾಣುತ್ತಿದೆ.

ತೆಂಗು, ಅಡಿಕೆ, ಮಾವು ಹಾಗೂ ಹುಣಸೆ ಇಲ್ಲಿನ ಜನರ ವ್ಯಾಪಾರವಾಗಿದೆ. ಸಣ್ಣ ಕೈಗಾರಿಕೆಯಾದ ಇಟ್ಟಿಗೆ ಕಾರ್ಖಾನೆ ಇದೆ. ಕೃಷಿ ಇಲ್ಲಿನ ಮುಖ್ಯ ಉದ್ಯೋಗವಾಗಿದೆ. ಹಾಗೂ ಇಲ್ಲಿ ಕಮ್ಮಾರರು ನೆಲೆಸಿದ್ದು, ಕಮ್ಮಾರ ಕೆಲಸವು ಈ ಜನರ ಮತ್ತೊಂದು ಉದ್ಯೋಗವಾಗಿದೆ. ಗ್ರಾಮದಲ್ಲಿ ಆಧುನಿಕತೆಯ ತಂತ್ರಜ್ಞಾನವಾಗಿ ಪೋಟೋ ಸ್ಟೂಡಿಯೋ ಹಾಗೂ ಹಿಟ್ಟಿನ ಗಿರಣಿಯ ಮಿಲ್ಲು ಕಾಣಬಹುದು.

ಹುಳಿಯಾರು ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೂ, ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಹೊಯ್ಸಳ ಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದ್ದು, ಗಾಣದಾಳು ತಾಲ್ಲೂಕು ಪಂಚಾಯ್ತಿ ಕ್ಷೇತ್ರವಾಗಿದೆ. ಈ ಗ್ರಾಮವು ಗಾಣದಾಳು ಗ್ರಾಮಪಂಚಾಯ್ತಿಗೆ ಒಳಪಟ್ಟಿದ್ದು, ಮೂವರು ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ.

ಜಿಲ್ಲಾ ರಸ್ತೆಯನ್ನು ಹೊಂದಿದ್ದು ಖಾಸಗಿ ಬಸ್ಸುಗಳು ಆಟೋರಿಕ್ಷಾ ಮತ್ತು ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಬಹುಪಾಲು ಮನೆಗಳಲ್ಲಿ ದೂರವಾಣಿ ಸಂಪರ್ಕವನ್ನು ಕಾಣಬಹುದಾಗಿದೆ. ಈ ಗ್ರಾಮದಲ್ಲಿ ಬಿಎಸ್ಎನ್ಎಲ್ ಆಫೀಸ್ ಕಾಣಬಹುದು.

ಗಾಣದಾಳಿನಲ್ಲಿ ೧೫ ಸ್ತ್ರೀಶಕ್ತಿ ಸಂಘಗಳು ಗಾಣದಾಳು ಯುವಕರ ಸಂಘ ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿದ್ದು, ಗ್ರಾಮಸ್ಥರು ಉಳಿತಾಯ ಸಾಲ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ.

ಈ ಗ್ರಾಮದಲ್ಲಿ ಅಂಗನವಾಡಿ ಕೇಂದ್ರವಿದ್ದು, ಹಿರಿಯ/ಕಿರಿಯ ಪ್ರಾಥಮಿಕ ಶಾಲೆಗಳೂ ಇದೆ. ಕನ್ನಡ ಇಲ್ಲಿನ ಭಾಷಾ ಮಾಧ್ಯಮವಾಗಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಹಾಗೂ ಶೌಚಾಲಯದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಗ್ರಾಮದಲ್ಲಿ ಗ್ರಂಥಾಲಯದ ವ್ಯವಸ್ಥೆಯೂ ಇದೆ. ಶೇ. ೮೪% ಸಾಕ್ಷರತೆ ಇದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾವೇತನ ೩೭ ಫಲಾನುಭವಿಗಳಿದ್ದಾರೆ.

ಧಾರ್ಮಿಕತೆಯ ಪ್ರತೀಕವಾಗಿ ರಂಗನಾಥಸ್ವಾಮಿ ಈಶ್ವರ, ಹನುಮಂತರಾಯ ಹಾಗೂ ಬಸವೇಶ್ವರ ದೇವಸ್ಥಾನಗಳಿವೆ. ಹಾಗೂ ಮಸೀದಿಯನ್ನು ಕಾಣಬಹುದು ಹಬ್ಬಗಳಾದ ಯುಗಾದಿ, ದೀಪಾವಳಿ, ಶಿವರಾತ್ರಿ, ಹಾಗೂ ಮಹಾನವಮಿಗಳನ್ನು ತುಂಬಾ ಸಡಗರದಿಂದ ಆಚರಿಸುತ್ತಾರೆ.

ರಂಗಭೂಮಿ ಕಲಾವಿದರಾದ ಮಲ್ಲಚಾರಿ ಆಚಾರ್, ಹಾರ್ಮೋನಿಯಂ ಕಲಾವಿದರಿದ್ದಾರೆ. ಗಾಣದಾಳ ಬಸವರಾಜು, ಕರಪಾಲ ಕಲೆಯ ಪ್ರಸಿದ್ಧ ಕಲಾವಿದರು, ಚಲನಚಿತ್ರಗಳಲ್ಲೂ ಇವರ ಕಲೆ ಪ್ರಸಾರವಾಗಿದೆ. ಕರ್ನಾಟಕ ಜಾನಪದ ಅಕಾಡೆಮಿ

ಪ್ರಶಸ್ತಿ ಪುರಸ್ಕೃತ ಕಲಾವಿದರು. ಕರಪಾಲ ಕಲ್ಲೇಶ್ವರ ಕಲಾ ತಂಡವಿದೆ.

## ಗುರುವಾಪುರ

ಗುರುವಾಪುರ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೧ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೨೧೨೦.೨೬ ಹೆಕ್ಟೇರ್ ಆಗಿದ್ದು ಕಂದಾಯ ಗ್ರಾಮ ಬಯಲುನಾಡಾಗಿದೆ. ಹಿಂದೆ ಕೂಲಿ ಮಠವಾಗಿದ್ದ ಕಾಲದಲ್ಲಿ ಮಠದ ಗುರುಗಳು ಇಲ್ಲಿಂದ ಕೆಲವು ಹಳ್ಳಿಗಳ ಕೆಂಪು ಮಿಶ್ರಿತ ಮರಳು ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಮಕ್ಕಳಿಗೆ ಶಿಕ್ಷಣ ಕಲಿಸುತ್ತಿದ್ದ ಕಾರಣ ಗುರುವಾಪುರ ಎಂದಾಗಿದೆ. ಗ್ರಾಮದ ಪಶ್ಚಿಮಕ್ಕೆ ರಾಶಿಗುಡ್ಡವಿದೆ. ರಕ್ಷಿತಾರಣ್ಯವಿದ್ದು, ಕಾಡು ಪ್ರಾಣಿಗಳಾದ ಕರಡಿ, ತೋಳ ಹಂದಿ ಮತ್ತು ಮೊಲಗಳು ಕಂಡು ಬರುತ್ತವೆ.

ಕಾಡು ಪಕ್ಷಿಗಳಾದ ನವಿಲು, ಕೋಗಿಲೆ, ಗಿಳಿ ಮತ್ತು ಹದ್ದುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ವಿಷಪೂರಿತ ಹಾವುಗಳೂ ಇವೆ. ೧೯೧೮ ಹೆಕ್ಟೇರ್ ಕೃಷಿ ಭೂಮಿಯಾಗಿದೆ. ಸಾಕು ಪಕ್ಷಿಗಳಾದ ನಾಟಿಕೋಳಿ ಮತ್ತು ಗಿರಿರಾಜಗಳನ್ನು ಸಾಕುತ್ತಾರೆ. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ ಮತ್ತು ನಾಯಿಯನ್ನು ಗ್ರಾಮಸ್ಥರು ಸಾಕುತ್ತಾರೆ. ಹಸುಗಳಲ್ಲಿ ಹಳ್ಳಿಕಾರ್ ಮತ್ತು ಮಿಶ್ರತಳಿಗಳಾದ ಹೆಚ್.ಎಫ್. ಮತ್ತು ಜೆರ್ಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ.

ವಾರ್ಷಿಕ ಸರಾಸರಿ ೪೨೦ ಮಿ.ಮೀ. ಮಳೆಯಾಗುತ್ತಿದ್ದು, ಬೇಸಿಗೆ ಕಾಲದಲ್ಲಿ ೩೨.೩೪ ಡಿ.ಸೆಂ. ನಷ್ಟು ತಾಪವಿದ್ದು, ಚಳಿಗಾಲದಲ್ಲಿ ೧೦.೧೦ ಡಿ.ಸೆಂ. ನಷ್ಟು ಹವಾಮಾನವಿರುತ್ತದೆ.

ದೊಡ್ಡಹಳ್ಳ ಮತ್ತು ಚನ್ನಹಳ್ಳ ಇದ್ದು ಮಳೆಗಾಲದಲ್ಲಿ ವಿಶೇಷವಾಗಿ ಮಳೆ ಬಂದರೆ ಮಾತ್ರ ತುಂಬಿ ಹರಿಯುತ್ತದೆ. ಹಾಗೆಯೇ ಕೆರೆ ಇದ್ದು ಬೆರಲೆಣಿಯಷ್ಟು ತೆರೆದ ಬಾವಿಗಳಿದ್ದು ಕೆಲವು ಬತ್ತಿಹೋಗಿ, ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗೆ ಅಲ್ಪ ನೀರಿನ ಮೂಲಗಳಾಗಿವೆ. ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯ್ತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಮಿನಿಟ್ಯಾಂಕ್ ಮತ್ತು ಕೋಳಾಯಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತಿದೆ.

ಸರ್ಪ ಒಕ್ಕಲಿಗ ಸಮುದಾಯವೇ ಪ್ರಧಾನವಾಗಿದ್ದು, ನಾಯಕ ಜನಾಂಗದ ಕಿರು ಸಮುದಾಯವಿದೆ. ಪ್ರಮುಖವಾಗಿ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ೧೫೩ ಮನೆಗಳಿದ್ದು, ಗ್ರಾಮದಲ್ಲಿ ೨೦೧೧ ರ ಜನಗಣತಿಯ ಪ್ರಕಾರ ೬೪೭ ಜನಸಂಖ್ಯಾ ಪ್ರಮಾಣವಿದೆ. ವಿವಿಧ ಪ್ರಕಾರದ ಮನೆಗಳಿದ್ದು, ಗುಡಿಸಲು ಕಲ್ಲು–ಮಣ್ಣು, ಹೆಂಚು ಮತ್ತು ಕಾಂಕ್ರೀಟ್ ಮನೆಗಳಿವೆ. ಒಟ್ಟು ೩೫ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ.

ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಜನತಾ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿದ್ದಾರೆ. ಪ್ರಮುಖ ಆಹಾರ ಪದ್ಧತಿಯಾಗಿ ರಾಗಿಮುದ್ದೆ, ಅನ್ನ, ರೊಟ್ಟಿ, ಚಪಾತಿ, ಹೋಳಿಗೆ, ಬಾಡೂಟ ಮತ್ತು ಪಾಯಸ ವಿಶೇಷವಾಗಿವೆ.

ಖಾಸಗಿ ಬಸ್ಸು, ಆಟೋರಿಕ್ಷಾ ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಬಹುಪಾಲು ಮನೆಗಳಲ್ಲಿ ಸಂಚಾರಿ ದೂರವಾಣಿ ಹಾಗೂ ಡಿ.ಟಿ.ಹೆಚ್. ಸಂಪರ್ಕವನ್ನು ಕಾಣಬಹುದಾಗಿದೆ.

ಬೇಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಗ್ರಾಮದಲ್ಲಿ ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿ, ಜೋಳ, ದ್ವಿದಳಧಾನ್ಯಗಳು ತೆಂಗು ಮತ್ತು ಅಡಿಕೆ ಪ್ರಮುಖವಾಗಿ ಬೆಳೆಯುತ್ತಾರೆ. ಸಾಂಪ್ರದಾಯಿಕ ಹೈನುಗಾರಿಕೆ ಪ್ರಸ್ತುತದಲ್ಲಿದ್ದು, ಆಧುನಿಕ ಡೈರಿಯ ವ್ಯವಸ್ಥೆ ಇದೆ.

ಹುಳಿಯಾರು ಹೋಬಳಿ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುತ್ತದೆ. ಹೊಯ್ಸಳ ಕಟ್ಟೆ ಜಿಲ್ಲಾ ಪಂಚಾಯಿತಿ ಕ್ಷೇತ್ರ ಗಾಣಧಾಳು ತಾಲ್ಲೂಕು ಪಂಚಾಯಿತಿ ಕ್ಷೇತ್ರ ಮತ್ತು ಗ್ರಾಮ ಪಂಚಾಯಿತಿ ಕಛೇರಿಯನ್ನು ಹೊಂದಿದ್ದು, ಇಬ್ಬರು ಗ್ರಾಮ ಪಂಚಾಯಿತಿ ಸದಸ್ಯರನ್ನು ಒಳಗೊಂಡಿದೆ.

೬ ಸ್ತ್ರೀಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿದ್ದು ಸಣ್ಣ ಉಳಿತಾಯ ಮತ್ತು ಸಾಲ ಸೌಲಭ್ಯ ಪಡೆಯುತ್ತಿದ್ದಾರೆ.

ಅಂಗನವಾಡಿ ಕೇಂದ್ರ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ಬಿಸಿಯೂಟ, ಕ್ಷೀರಭಾಗ್ಯ ಮತ್ತು ಶೌಚಾಲಯದ ಸೌಲಭ್ಯವಿದೆ. ಹಾಗೂ ಎಸ್.ಎಂ.ಎಂ.ಎಚ್.ಎಸ್. ಗುರುವಾಪುರ ಎಂಬ ಅನುಧಾನಿತ ಪ್ರಾಥಮಿಕ ಶಾಲೆ ಇದೆ. ಶೇ. ೭೦% ಸಾಕ್ಷರತೆ ಇದೆ.

ಕರಿಯಮ್ಮ ದೇವಿ ದೇವಸ್ಥಾನ, ಇದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ಮಹಾನವಮಿ ಹಬ್ಬಗಳನ್ನು

ಆಚರಿಸುತ್ತಾರೆ. ಗ್ರಾಮದಲ್ಲಿ ಜಿಲ್ಲಾ ಮುಖ್ಯ ರಸ್ತೆ, ಹಾಗೂ ಒಂದು ಕಚ್ಚಾ ರಸ್ತೆಗಳಿವೆ. ಗ್ರಾಮದಲ್ಲಿ ನ್ಯಾಯ ಬೆಲೆ ಅಂಗಡಿಯ ಸೌಲಭ್ಯವಿದೆ.

## ಗೌಡಗೆರೆ

ಈ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೨ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೧೭೭.೦೪ ಹೆಕ್ಟೇರ್ ಇದೆ. ಇದೊಂದು ಕಂದಾಯ ಗ್ರಾಮ ಬಯಲು ನಾಡಾಗಿದೆ. ಕುಪ್ಪೂರು ಚಿಕ್ಕನಪಾಳ್ಯ, ಕರಡಿಸಾಬರಪಾಳ್ಯ ಈ ಗ್ರಾಮಕ್ಕೆ ಸೇರ್ಪಡೆಯಾಗಿದೆ. ೧೧೧೩ ಹೆಕ್ಟೇರ್ ಕೃಷಿ ಭೂಮಿಯಾಗಿದೆ.

ಮರಳು ಮಿಶ್ರಿತ ಕೆಂಪು ಬಿಳಿ ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ.

ಕಾಡು ಪ್ರಾಣಿಗಳಾದ ಕರಡಿ, ತೋಳ, ಹಂದಿ ಹಾಗೂ ಕಾಡು ಪಕ್ಷಿಗಳಾದ ನವಿಲು ಕೋಗಿಲೆ, ಕಾಗೆ, ಹದ್ದುಗಳನ್ನು ಕಾಣಬಹುದು, ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕುತ್ತಾರೆ. ಹಸುಗಳಲ್ಲಿ ಮಿಶ್ರತಳಿಗಳಾದ ಜೆರ್ಸಿ ಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿದೆ. ಎಮ್ಮೆಗಳ ಸಾಕಾಣಿ ಜೊತೆಗೆ ಕುರಿ–ಮೇಕೆಗಳ ಸಾಕಾಣಿಯು ರೂಢಿಯಲ್ಲಿದೆ. ಹಾಗೂ ಸಾಕು ಪಕ್ಷಿಯಾದ ಕೋಳಿಯನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆಬರುತ್ತದೆ. ಬೇಸಿಗೆ ಕಾಲದಲ್ಲಿ ಸುಮಾರು ೩೪ ಡಿ.ಸೆಂ.–೩೬ ಡಿ.ಸೆಂ. ಬಿಸಿಲಿನ ತಾಪವಿರುತ್ತದೆ. ಹಾಗೂ ಚಳಿಗಾಲದಲ್ಲಿ ೧೦ ಡಿ.ಸೆಂ.–೧೩ ಡಿ.ಸೆಂ. ಚಳಿಯಿರುವ ಹವಾಮಾನವಿರುತ್ತದೆ.

ಗೌಡಿಗರಹಳ್ಳ ಮಳೆಗಾಲದಲ್ಲಿ ಹೆಚ್ಚು ಮಳೆ ಬಂದರೆ ಮಾತ್ರ ತುಂಬಿ ಹರಿಯುತ್ತದೆ. ೩ ತೆರೆದ ಬಾವಿಗಳಿದ್ದು, ಕೆಲವು ಬಾವಿಗಳು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯ್ತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಮತ್ತು ಕೊಳಾಯಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೧೬ ಕೈಪಂಪುಗಳ ವ್ಯವಸ್ಥೆಯಿದ್ದು, ವಿದ್ಯುತ್ ಅಭಾವದ ಸಂದರ್ಭಗಳು ಗ್ರಾಮಸ್ಥರ ಕುಡಿಯುವ ನೀರಿನ ಹೊರತೆಗಳಾಗಿವೆ.

ಕುರುಬ ಸಮುದಾಯವೇ ಪ್ರದಾನವಾಗಿದ್ದು, ಮುಸ್ಲಿಂ, ಪರಿಶಿಷ್ಟ ಪಂಗಡ ಕಿರು ಸಮುದಾಯವಾಗಿದೆ. ಪ್ರಮುಖವಾಗಿ ಕನ್ನಡ ಮಾತನಾಡುತ್ತಾರೆ. ಹಾಗೂ ಉರ್ದು ಭಾಷೆಯು ಬಳಕೆಯಲ್ಲಿವೆ.

ಒಟ್ಟು ೬೨೦ ಮನೆಗಳನ್ನು ಹೊಂದಿರುವ ೨೦೧೧ ರ ಜನಗಣತಿಯ ಪ್ರಕಾರ ೩೧೪೦ ಜನಸಂಖ್ಯಾ ಪ್ರಮಾಣವನ್ನು ಹೊಂದಿಸಿ. ವಿವಿಧ ಮನೆಗಳ ಪ್ರಕಾರವಿದ್ದು, ಕಾಂಕ್ರೀಟ್, ಕಲ್ಲಿನ ಮನೆಗಳು, ಮಣ್ಣಿನ ಮನೆಗಳು, ಹೆಂಚಿನ ಮನೆಗಳು ಕಂಡುಬರುತ್ತವೆ. ಹಾಗೆಯೇ ಗುಡಿಸಿಲಿನಲ್ಲಿರುವ ಕೆಲವು ಕುಟುಂಬಗಳನ್ನು ಕಾಣಬಹುದು.

೩೨೦ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ. ಜನತಾ ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಅವಾಜ್ ಯೋಜನೆಯ ೨೧೦ ಮನೆಗಳನ್ನು ಪ್ರಮುಖವಾಗಿ ರಾಗಿಮುದ್ದೆ, ಅನ್ನ, ಚಪಾತಿ, ದೋಸೆ ಹಾಗೂ ವಿಶೇಷವಾಗಿ ಪಾಯಸ ಹೋಳಿಗೆ ಹಾಗೂ ಬಾಡೂಟ ತಯಾರಿಸುತ್ತಾರೆ.

ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಗಳ ಜೊತೆಗೆ ಆಧುನಿಕ ವಾಹನಗಳಾದ ಟೆಂಪೋ, ಟ್ರಾಕ್ಟರ್, ಬೈಕ್ ಕಾಣಬಹುದಾಗಿದೆ.

ಕೃಷಿ ಇಲ್ಲಿನ ಪ್ರಮುಖ ಕಸುಬಾಗಿದ್ದರೂ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಮುಖ್ಯ ಬೆಳೆಯಾಗಿ ಶೇಂಗಾ, ಆಹಾರ ಬೆಳೆಯಾಗಿ ರಾಗಿ, ಭತ್ತ ಮತ್ತು ಉಪ ಬೆಳೆಗಳಾದ ಜೋಳ ದ್ವಿದಳ ಧಾನ್ಯಗಳು ಹಾಗೆಯೇ ತೋಟಗಾರಿಕೆ ಬೆಳೆಗಳಾದ ತೆಂಗು–ಅಡಿಕೆಯನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಹೈನುಗಾರಿಕೆ ಹಾಗೂ ಆಧುನಿಕ ಡೈರಿ ವ್ಯವಸ್ಥೆಯಿಂದ ಗ್ರಾಮದ ಆರ್ಥಿಕ ಸ್ಥಿತಿಯಲ್ಲಿ ಚೇತರಿಕೆ ಕಾಣುತ್ತಿದೆ. ಕೆಲ ಪ್ರಮುಖ ಶಿಕ್ಷಕರಾಗಿ ವೈದ್ಯರಾಗಿ, ಇಂಜಿನಿಯರ್‌ಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ವ್ಯವಸಾಯ ವ್ಯಾಪಾರ ಇಲ್ಲಿನ ಪ್ರಮುಖ ಉದ್ಯೋಗವಾಗಿದ್ದು, ಆಧುನಿಕವಾಗಿ ವಾಹನ ರಿಪೇರಿ, ಇಂಜಿನಿಯರಿಂಗ್ ವರ್ಕ್ಸ್ ಮಾಡಲಾಗುತ್ತದೆ.

ಹುಳಿಯಾರು ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಹೋಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಕೆಂಕೆರೆ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಹಾಗೂ ಕೆಂಕೆರೆ ಗ್ರಾಮಪಂಚಾಯ್ತಿಗೆ ಒಳಪಟ್ಟಿದೆ. ನಾಲ್ವರು ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ.

ಬಹುಪಾಲು ಮನೆಯಲ್ಲಿ ಅಂಚೆ, ಸಂಚಾರಿದೂರವಾಣಿ ಮತ್ತು ಡಿ.ಟಿ.ಹೆಚ್. ಸಂಪರ್ಕವನ್ನು ಕಾಣಬಹುದು.

ಸ್ತ್ರೀಶಕ್ತಿ ಸಂಘಗಳು, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ದುರ್ಗಾಂಭ ಮಹಿಳಾ ಸ್ವಸಹಾಯ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಗ್ರಾಮಸ್ಥರು ಉಳಿತಾಯ ಸಾಲ–ಸೌಲಭ್ಯಗಳನ್ನು ಪಡೆದಿದ್ದಾರೆ.

ಅಂಗನವಾಡಿ ಕೇಂದ್ರ ಕಿರಿಯ ಪ್ರಾಥಮಿಕ ಶಾಲೆ, ಉರ್ದು ಹಿರಿಯ ಪ್ರಾಥಮಿಕ ಶಾಲೆಗಳಿದ್ದು, ಮಕ್ಕಳಿಗೆ ಸರ್ಕಾರದ ವತಿಯಿಂದ ಕ್ಷೀರಭಾಗ್ಯ, ಬಿಸಿಯೂಟ ಹಾಗೂ ಶೌಚಾಲಯದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಆಂಜನೇಯಸ್ವಾಮಿ ದುರ್ಗಾಂಭದೇವಿ, ಕರಿಯಮ್ಮ ಇಲ್ಲಿನ ಪ್ರಮುಖ ದೇವಾಲಯಗಳು ಹಾಗೂ ಮಸೀದಿಯನ್ನು ಸಹ ಕಾಣಬಹುದು ಯುಗಾದಿ, ಮಹಾನವಮಿ, ದೀಪಾವಳಿ, ಶಿವರಾತ್ರಿ, ಹಬ್ಬಗಳನ್ನು ಆಚರಿಸುತ್ತಾರೆ.

ಶ್ರೀ ದುಗಾಂಭ ಜಾತ್ರೆ ಇಲ್ಲಿಯ ವಿಶೇಷ ಆಕರ್ಷಣೆ ಹಾಗೂ ಸಿಡಿ ಚಾಲ್ತಿಯಲ್ಲಿದೆ. ರಾಜ್ಯ ಹೆದ್ದಾರಿ ಹೊಂದಿದು, ಖಾಸಗಿ ಬಸ್ಸುಗಳು, ಸರ್ಕಾರಿ ಬಸ್ಸುಗಳು, ಆಟೋರಿಕ್ಷಾ ಮತ್ತು ಸ್ವಂತ ವಾಹನಗಳು ಪ್ರಮುಖ ಸುವ್ಯವಸ್ಥೆಗಳಾಗಿವೆ.

## ಚನ್ನಕಾಟಯ್ಯನಗುಡ್ಲು

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೫ ಕಿಮೀ ಅಂತರದಲ್ಲಿದೆ. ಚನ್ನಕಾಟಯ್ಯ ಎಂಬ ಗೊಲ್ಲ ಸಮುದಾಯಕ್ಕೆ ಸೇರಿದ ಹಿರಿಯ ಈ ಪ್ರದೇಶದಲ್ಲಿ ವಾಸಿಸಲಾರಂಭಿಸಿ ಅವರ ಮಕ್ಕಳು, ಮರಿಮಕ್ಕಳು ವಂಶಪಾರಂಪರಿಕವಾಗಿ ನೆಲೆಸಿದ್ದರಿಂದ ಚೆನ್ನಕಾಟಯ್ಯನ ಗುಡ್ಲು ಎಂಬ ಹೆಸರು ಬಂದಿದೆ. ಕೆಂಕೆರೆ ಮಜರೆ ಬಯಲು ನಾಡಾಗಿದೆಯ ಕರಿಕಲ್ಲು ಮಿಶ್ರಿತ ಕೆಂಪು ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಪಶ್ಚಿಮಕ್ಕೆ ಗವಿಗುಡ್ಡವನ್ನು ಕಾಣಬಹುದು. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಬಸವನಗುಡ್ಡದಹಳ್ಳ ಮಳೆಗಾಲದಲ್ಲಿ ಹೆಚ್ಚು ಮಳೆ ಬಂದರೆ ಮಾತ್ರ ತುಂಬಿ ಹರಿಯುತ್ತದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಗೊಲ್ಲ ಸಮುದಾಯವೇ ಪ್ರಧಾನವಾಗಿದ್ದು ಲಿಂಗಾಯಿತರು ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೫೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೩೦೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ, ಗುಡಿಸಲು ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೬ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯವನ್ನು ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್ ಮತ್ತು ಟೆಂಪೋಗಳಿವೆ. ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಕೆಂಕೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶಾರದಾ ಸ್ತ್ರೀಶಕ್ತಿ ಸಂಘವಿದೆ.

ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಲಾಗುತ್ತದೆ. ಸಾಕ್ಷರತೆ ೭೩% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಪುರದ ಮಠದ ಶ್ರೀ ಚನ್ನಬಸವೇಶ್ವರ ಜಾತ್ರೆ ಇಲ್ಲಿಯ ವಿಶೇಷ ಆಕರ್ಷಣೆ. ಜಾತ್ರೆಯಲ್ಲಿ ಸಿಡಿ ಮತ್ತು ಓಕುಳಿ ಆಚರಣೆಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಚೌಳಕಟ್ಟೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೨೪ ಕಿಮೀ ಅಂತರದಲ್ಲಿದೆ. ಈ ಪ್ರದೇಶ ಜೌಗು ಭೂಮಿಯಾಗಿದ್ದು ಹೇರಳ ಪ್ರಮಾಣದಲ್ಲಿ ಚೌಳು ಉತ್ಪತ್ತಿಯಾಗುತ್ತಿತ್ತು, ಆದ್ದರಿಂದ ಚೌಳುಕಟ್ಟೆ ಎಂದು ಕರೆಯಲಾಯಿತು. ಇದೇ ಮುಂದೆ ಚೌಳಕಟ್ಟೆಯಾಗಿರಬೇಕೆಂದು ಗ್ರಾಮಸ್ಥರು ಅಭಿಪ್ರಾಯಪಡುತ್ತಾರೆ. ಭೌಗೋಳಿಕ ವಿಸ್ತೀರ್ಣ ೪೬೦.೮೬ ಹೆಕ್ಟೇರ್. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ರಾಮಲಿಂಗನಹಳ್ಳವಿದೆ. ೩ ತೆರೆದ ಬಾವಿಗಳಿದ್ದು ಬತ್ತಿಹೋಗಿ ೫೦ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಅಂತರಘಟ್ಟಮ್ಮ ದೇವಾಲಯದಲ್ಲಿ ಚೌಳಕಟ್ಟೆ ಕೆರೆಯಿದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಉಪ್ಪಾರ ಸಮುದಾಯ ದೊಡ್ಡ ಸಂಖ್ಯೆಯಲ್ಲಿದ್ದು ಗಾಣಿಗರು, ನಾಯಕರು, ಮಡಿವಾಳರು, ಕಮ್ಮಾರರು, ದೇವಾಂಗದವರು, ಆದಿಕರ್ನಾಟಕರು, ಲಿಂಗಾಯಿತರು, ಮುಸ್ಲಿಮರು ವಾಸವಾಗಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೭೫ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೫೬೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ೨೦ ಜನತಾ, ೩೦ ಆಶ್ರಯ, ೩ ಅಂಬೇಡ್ಕರ್ ಹಾಗೂ ೧೦ ಇಂದಿರಾ ಆವಾಸ್ ಯೋಜನೆಯ ೬೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೨ ವಸತಿರಹಿತ ಹಾಗೂ ೪ ನಿವೇಶನ ರಹಿತ ಕುಟುಂಬಗಳಿವೆ. ೩೦ ಮನೆಗಳಲ್ಲಿ ಮಾತ್ರ ಶೌಚಾಲಯ ವ್ಯವಸ್ಥೆಯಿರುತ್ತದೆ.

ಕೃಷಿ ಪ್ರಧಾನವಾದ ಕೆಂಪು ಮಿಶ್ರಿತ ಬಿಳಿ ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಬಾಳೆ, ತರಕಾರಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಆಧುನಿಕ ಡೈರಿಯಿದೆ. ೮ ಜನ ಸರ್ಕಾರಿ ನೌಕರರಿದ್ದಾರೆ. ಸಾಂಪ್ರದಾಯಿಕ ಉದ್ಯೋಗಗಳಾದ ಕುಂಬಾರಿಕೆ, ಬಡಗಿತನ, ಬೀಡಿ ಕಟ್ಟುವುದು ಇದೆ. ೩ ಹಿಟ್ಟಿನ ಗಿರಣಿಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಚೌಳಕಟ್ಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಹಾಗೂ ಇಬ್ಬರು ಗ್ರಾಮಪಂಚಾಯ್ತಿ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಜಿಲ್ಲಾ ಪ್ರಧಾನ ರಸ್ತೆ, ಒಂದು ಕಚ್ಚಾರಸ್ತೆಯಿದೆ. ಹಂದನಕೆರೆ, ಹುಳಿಯಾರು ಕಡೆಗೆ, ಹೊನ್ನಶೆಟ್ಟಿಹಳ್ಳಿ–ಸಿದ್ದರಬೆಟ್ಟ–ಸೋರಲಮಾವುಗೆ ಸಂಪರ್ಕ ಕಲ್ಪಿಸುತ್ತವೆ. ೨೦ ಸ್ತ್ರೀಶಕ್ತಿ ಸಂಘಗಳು, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೦% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಆಂಜನೇಯಸ್ವಾಮಿ, ಅಂತರಘಟ್ಟಮ್ಮ ದೇವಾಲಯವಿದೆ. ಪ್ರತಿವರ್ಷ ಜಾತ್ರೆಗಳಲ್ಲಿ ಉತ್ಸವ, ಓಕುಳಿ, ಹರಕೆಗಳಿರುತ್ತವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಹನುಮಂತಯ್ಯ ಎಂಬುವರು ಯಕ್ಷಗಾನ ಭಾಗವತರಾಗಿದ್ದಾರೆ.

## ಚನ್ನಪ್ಪನಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಮತ್ತಿಘಟ್ಟ ಗ್ರಾಮಪಂಚಾಯ್ತಿಯ ಮಜರೆ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೪ ಕಿಮೀ ಅಂತರದಲ್ಲಿದೆ. ಹಿಂದೆ ಚನ್ನಪ್ಪ ಎಂಬ ವ್ಯಕ್ತಿ ಗ್ರಾಮದ ಅಧಿಪತಿಯಾಗಿ ಆಳ್ವಿಕೆ ಮಾಡುತ್ತಿದ್ದರಿಂದ ಆತನ ಹೆಸರಿನಲ್ಲೇ ಗ್ರಾಮದ ಹೆಸರಾಗಿದೆ. ಭೌಗೋಳಿಕ ವಿಸ್ತೀರ್ಣ ೧೬೨.೮೬ ಹೆಕ್ಟೇರ್. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಒಂದು ಕುಂಟೆಯಿದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ೨೦ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ೪ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಲಿಂಗಾಯಿತರು ಮಾತ್ರ ವಾಸವಾಗಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೭೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೮೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೬ ಕಾಂಕ್ರೀಟ್, ಕಲ್ಲಿನ, ೪ ಮಣ್ಣಿನ, ೫೦ ಹೆಂಚಿನ ಮನೆಗಳಿವೆ. ಮೇಲ್ಚಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ೧೦ ಜನತಾ, ೧೨ ಆಶ್ರಯ ಹಾಗೂ ೧೦ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೧೫ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆಯಿರುತ್ತದೆ. ಒಂದು ವಸತಿರಹಿತ ಕುಟುಂಬವಿದೆ. ೨೦ ವಿದ್ಯುತ್ ಕಂಬಗಳಿದ್ದು ೧೮ ಕಂಬಗಳಿಗೆ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ತರಕಾರಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಅಡಿಕೆ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ೪ ಮಂದಿ ಸರ್ಕಾರಿ ನೌಕರರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ

ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮತ್ತಿಘಟ್ಟ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಒಂದು ಕಚ್ಚಾ ರಸ್ತೆಯಿದೆ. ಸ್ತ್ರೀಶಕ್ತಿ ಸಂಘಗಳು ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೪% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ૩ ಚಿಲ್ಲರೆ ಅಂಗಡಿಗಳಿವೆ.

ಮುನಿಯಪ್ಪನ ಗದ್ದುಗೆಯಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ನಟರಾಜು ಎಂಬ ರಂಗಗೀತೆ ಗಾಯಕರಿದ್ದಾರೆ.

## ಚಿಕ್ಕಬಿದರೆ

ಚಿಕ್ಕಬಿದರೆ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೧೭ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೧೫೬.೪೧ ಹೆಕ್ಟೇರ್. ಇದೊಂದು ಬಯಲುನಾಡಿನ ಕಂದಾಯ ಗ್ರಾಮವಾಗಿದೆ. ೯೯೬.೪೧ ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ. ಕೆಂಪು ಮಿಶ್ರಿತ ಮರಳು ಭೂಮಿಯು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಹಿರೇಹಳ್ಳ, ಗೌರಸಾಗರದ ಹಳ್ಳಗಳಿದ್ದು ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತವೆ. ಕೆರೆ, ಕಟ್ಟೆ, ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ૩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಉಪ್ಪಾರ ಲಿಂಗಾಯಿತ ಸಮುದಾಯವೇ ಪ್ರಧಾನವಾಗಿದ್ದು ಗಾಣಿಗ, ಶೆಟ್ಟಿ, ಮುಸ್ಲಿಂ ಕಿರು ಸಮುದಾಯಗಳಾಗಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೬೪ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೬೬೩ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಚಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೫೦ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ಜೋಳ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ನಾರು ಉತ್ಪಾದನೆ, ಕುಂಬಾರಿಕೆ ಇಲ್ಲಿನ ಸಾಂಪ್ರದಾಯಿಕ ಕೆಲಸಗಳು. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ಡೈರಿ ವ್ಯವಸ್ಥೆಯಿದೆ. ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಸವರಾಜು, ನಾರಾಯಣಸ್ವಾಮಿ, ನಾಗರಾಜು ಇದ್ದಾರೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಿಮ್ಲಾಪುರ ತಾಲ್ಲೂಕು ಪಂಚಾಯ್ತಿ ಹಾಗೂ ದೊಡ್ಡಬಿದರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಮೂವರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಜಿಲ್ಲಾ ಪಂಚಾಯ್ತಿ ರಸ್ತೆಗಳಿದ್ದು ಖಾಸಗಿ ಬಸ್ಸುಗಳು, ಆಟೋರಿಕ್ಷಾ ಮತ್ತು ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಯಾಗಿದೆ. ಕರಿಯಮ್ಮ, ಈಶ್ವರ, ಆಂಜನೇಯ ಮುಂತಾದ ೮ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ರಾಮೇಶ್ವರ, ಕರಿಯಮ್ಮ, ಈಶ್ವರ, ಆಂಜನೇಯ, ರಂಗನಾಥ ದೇವಾಲಯಗಳಿವೆ. ಕರಿಯಮ್ಮ ದೇವಿಯ ಜಾತ್ರೆ ವಿಶೇಷ ಆಕರ್ಷಣೆಯಾಗಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಶಿವಣ್ಣ – ಕೋಲಾಟ, ಬ್ಯಾಟರಾಯಪ್ಪ – ಸೋಮನ ಕುಣಿತ, ನರಸಿಂಹ ಮೂರ್ತಿ – ಸೋಮನಕುಣಿತದ ಜಾನಪದ ಕಲಾವಿದರಿದ್ದಾರೆ.

## ಚಿತ್ರದೇವರಹಟ್ಟಿ

ಚಿತ್ರದೇವರಹಟ್ಟಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೯ ಕಿಮೀ ಅಂತರದಲ್ಲಿದೆ. ದೇವರ ಹೆಸರಲ್ಲಿ ಕಾಡುಗೊಲ್ಲರ ಗ್ರಾಮ ರಚನೆಯಾಗಿದೆ. ಅದಕ್ಕೆ ದೇವರ ಹೆಸರಿಂದಾಗಿ ಚಿತ್ರದೇವರ ಹಟ್ಟಿ ಎಂದು ಕರೆಯುತ್ತಾರೆ. ದಸೂಡಿ ಮಜರೆ ಗ್ರಾಮ. ಬಯಲು ನಾಡಾಗಿದೆ. ಕೆಂಪು–ಬಿಳಿ ಮಿಶ್ರ ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೨ ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಗೊಲ್ಲ ಸಮುದಾಯವೇ ಪ್ರಧಾನವಾಗಿದ್ದು ಲಂಬಾಣಿ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಲಂಬಾಣಿ ಮಾತನಾಡುವವರಿದ್ದಾರೆ. ಒಟ್ಟು ೪೫ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೫೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಚಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೧೬ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೩ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ. ನರೇಗ ಯೋಜನೆಯಲ್ಲಿ ರಸ್ತೆ, ಚರಂಡಿ ಸೌಲಭ್ಯ ಪಡೆದಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಾಗಿಮುದ್ದೆ,

ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದಸೂಡಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಆಟೋರಿಕ್ಷಾ ಮತ್ತು ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ೧ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೮% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಚೌಳಕಟ್ಟೆ ವಡ್ಡರಹಟ್ಟಿ

ಚೌಳಕಟ್ಟೆ ವಡ್ಡರಹಟ್ಟಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೪ ಕಿಮೀ ಅಂತರದಲ್ಲಿದೆ. ಇದು ಚೌಳಕಟ್ಟೆಯ ಮಜರೆ ಗ್ರಾಮ. ಭೌಗೋಳಿಕ ವಿಸ್ತೀರ್ಣ ಚೌಳಕಟ್ಟೆಯ ೪೬೦.೮೬ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಬಯಲು ಪ್ರದೇಶ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೫೬೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಬೋವಿ ಜನಾಂಗದವರು ವಾಸಿಸುತ್ತಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೩೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೫೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೧೧ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೧೨ ವಿದ್ಯುತ್ ಕಂಬಗಳಿವೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಚೌಳಕಟ್ಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಚೌಳಕಟ್ಟೆಯಿಂದ ಅಂಚೆ

ಸಂಪರ್ಕ ಹೊಂದಿದೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಹಂದನಕೆರೆ ದುರ್ಗಮ್ಮನಿಗೆ ಎದುರೆತ್ತಿ, ಆರತಿ, ಹರಕೆ, ಬಾನ ಅರ್ಪಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಚಿಕ್ಕಬೆಳವಾಡಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಿಕೆರೆ ಹೋಬಳಿ ತಿಮ್ಮನಹಳ್ಳಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕಿನಲ್ಲಿ ೨ ಬೆಳವಾಡಿಗಳಿದ್ದು ದೊಡ್ಡ ಬೆಳವಾಡಿ ಹಾಗೂ ಚಿಕ್ಕ ಬೆಳವಾಡಿ ಎರಡು ಪ್ರದೇಶಗಳಿಂದ ಚಿಕ್ಕಬೆಳವಾಡಿ ಎಂಬ ಹೆಸರು ಬಂದಿದೆ. ತಾಲ್ಲೂಕು ಕೇಂದ್ರದಿಂದ ಈಶಾನ್ಯ ದಿಕ್ಕಿಗೆ ೨೫ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೦೧೧.೩೭ ಹೆಕ್ಟೇರ್. ಬಯಲುನಾಡು ಪ್ರದೇಶಕ್ಕೆ ಸೇರಿರುವ ಇದು ಕಪ್ಪುಕಲ್ಲು, ಕೆಂಪು-ಕಪ್ಪು ಮಣ್ಣಿನಿಂದ ಕೂಡಿದೆ. ಬಸವನಗುಡ್ಡ, ತ್ಯಾಗದ ಕೊಳದ ಗುಡ್ಡ, ಹುಣಸೆ ಕೊಳದ ಗುಡ್ಡ ಎಂಬ ಗುಡ್ಡಗಳಿವೆ. ಇಲ್ಲಿ ಸಾಮಾಜಿಕ ಅರಣ್ಯ ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಹಂದಿ, ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಹುಲಿಕಟ್ಟೆ ಹಳ್ಳ, ಕ್ಯಾತಯ್ಯನಕಟ್ಟೆ ಮಳೆಗಾಲದಲ್ಲಿ ಹರಿಯುತ್ತವೆ. ಬಂಡೆಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕುಂಚಿಟಿಗ ಒಕ್ಕಲಿಗರು ದೊಡ್ಡ ಸಮುದಾಯವಾಗಿದೆ. ನಾಯಕರು, ಈಡಿಗರು ಇದ್ದಾರೆ. ಕೆರೆಕೋಡಿ ಓಣಿ ಎಂಬ ಒಂದು ಓಣಿಯಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೩೩ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೦೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೩ ಕಾಂಕ್ರೀಟ್, ೩೦ ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಅಡಿಕೆ, ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕಾರು, ಬೈಕ್‌ಗಳಿವೆ. ರಸ್ತೆ ಹಾಗೂ ಚರಂಡಿ ವ್ಯವಸ್ಥೆಯಿದೆ. ಇಬ್ಬರು ಶಿಕ್ಷಕರು, ಬೆಂಗಳೂರಿನ ವಿವಿಧ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ೬ ಜನರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಿಮ್ಮನಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ದ್ಯಾಮಲಾಂಬ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಮಲೆಯಪ್ಪ, ರಾಮಣ್ಣ, ಶೇಖರಣ್ಣ ಎಂಬುವರು ಮನುಷ್ಯರು ಮತ್ತು ದನಗಳಿಗೆ ನಾಟಿ ಔಷಧ ನೀಡುತ್ತಾರೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ

ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಕಾಲಭೈರವೇಶ್ವರ ದೇವಾಲಯವಿದೆ. ರಾಮ ಮಂದಿರವಿದೆ. ಏಪ್ರಿಲ್–ಮೇ ತಿಂಗಳಲ್ಲಿ ಸಿದ್ದಭಕ್ತಿ ನಡೆಯುತ್ತದೆ. ಕಾಲಭೈರವ ದೇವರ ಉತ್ಸವ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಚುಂಗನಹಳ್ಳಿ

ಚುಂಗನಹಳ್ಳಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಸಬಾ ಹೋಬಳಿ ದುಗಡಿಹಳ್ಳಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿಗೆ ೬ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೫೨೦.೧ ಹೆಕ್ಟೇರ್. ತಿತ್ತಿಗೊರವನಪಾಳ್ಯ, ಗಂಟಿಗನಪಾಳ್ಯ, ಕೋಡಿಪಾಳ್ಯಗಳು ಈ ಗ್ರಾಮದ ಮಜರೆ ಗ್ರಾಮಗಳಾಗಿವೆ. ಬಯಲು ನಾಡು, ಸುತ್ತ ಬಿಳಿಕಲ್ಲು–ಬಿಳಿ ಮಣ್ಣು ಕಂಡುಬರುತ್ತದೆ. ಬಸವೇಶ್ವರ ತೋಪು ಇದೆ.ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೫೩೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಸಿಂಗಯ್ಯನ ಕೆರೆ, ಚಿಕ್ಕ ಕಟ್ಟೆ, ದೊಡ್ಡ ಕಟ್ಟೆಗಳಿವೆ. ಚೌಳಹಳ್ಳವು ಮಲಗೊಂಡನಹಳ್ಳಿ ಬಯಲಿನಿಂದ ಶೆಟ್ಟಿಕೆರೆಗೆ ಹರಿಯುತ್ತದೆ. ೩ ತೆರೆದ ಬಾವಿಗಳಿದ್ದು ಬತ್ತಿಹೋಗಿ ೪೫ ಕ್ಕೂ ಹೆಚ್ಚು ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಲಿಂಗಾಯಿತರು ಪ್ರಧಾನವಾಗಿದ್ದು ಆದಿಕರ್ನಾಟಕ ಸಮುದಾಯದವರಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೬೮ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೫೨ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೩ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಹಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೧೨ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಅಡಿಕೆ, ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್‌ಗಳು, ಲಗೇಜ್ ಆಟೋಗಳಿವೆ. ರಸ್ತೆ ಹಾಗೂ ಚರಂಡಿ ವ್ಯವಸ್ಥೆಯಿದೆ. ಆರೋಗ್ಯ ಮತ್ತು ಮೋಕ್ಷ ಎಂಬ ಖಾಸಗಿ ಡೈರಿಗಳಿವೆ. ಶಿಕ್ಷಕರು, ಉಪನ್ಯಾಸಕರು, ಇಂಜಿನಿಯರ್‌ಗಳು ಸೇರಿದಂತೆ ೧೭ ಜನ ಸರ್ಕಾರಿ ಉದ್ಯೋಗದಲ್ಲಿದ್ದಾರೆ. ೨೦ ಕ್ಕೂ ಹೆಚ್ಚು ಮಂದಿ ಬೆಂಗಳೂರಿನ ವಿವಿಧ ಖಾಸಗಿ ಉದ್ದಿಮೆಗಳಲ್ಲಿ ಉದ್ಯೋಗ ಪಡೆದಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಸಬಾ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ದುಗಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಮಾರಮ್ಮದೇವಿ, ಪರಮೇಶ್ವರಿ ಮುಂತಾದ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ರಸ್ತೆ ಸಂಪರ್ಕವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೯೫% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ. ಶಂಕರಲಿಂಗಪ್ಪ ಎಂಬುವರು ಹಾವು ಕಡಿತಕ್ಕೆ, ದನಗಳ ವಿವಿಧ ಕಾಯಿಲೆಗಳಿಗೆ ನಾಟಿ ಔಷಧಿ ನೀಡುತ್ತಾರೆ.

ಬಸವೇಶ್ವರ, ಬೊಮ್ಮಲಿಂಗೇಶ್ವರ ದೇವಾಲಯಗಳಿವೆ. ವರ್ಷಕ್ಕೊಮ್ಮೆ ಮಾರಮ್ಮನ ಜಾತ್ರೆ ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಪರಮೇಶ್ ಎಂಬುವರು ಜನಪದ ಗೀತೆಗಳನ್ನು, ಭಜನೆ ಹಾಡುಗಳನ್ನು ಹಾಡುತ್ತಾರೆ.

## ಚುಂಗನಹಳ್ಳಿ ಕೋಡಿಪಾಳ್ಯ

ಚುಂಗನಹಳ್ಳಿ ಕೋಡಿಪಾಳ್ಯವು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ನೈಋತ್ಯ ದಿಕ್ಕಿಗೆ ೬ ಕಿಮೀ ಅಂತರದಲ್ಲಿದೆ. ಇದು ಚುಂಗನಹಳ್ಳಿಯ ಕೆರೆಯ ಬದಿಗೆ ಇರುವುದರಿಂದ ಕೋಡಿಪಾಳ್ಯ ಎಂದು ಕರೆಯುತ್ತಾರೆ. ಭೌಗೋಳಿಕ ವಿಸ್ತೀರ್ಣ ಮುಖ್ಯ ಗ್ರಾಮ ಚುಂಗನಹಳ್ಳಿಯ ೫೨೦.೧೬ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಚಿಕ್ಕನಾಯಕನಹಳ್ಳಿ–ಶೆಟ್ಟಿಕೆರೆ ರಸ್ತೆಯಲ್ಲಿದೆ ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಸಿಂಗಯ್ಯನ ಕೆರೆಯನ್ನು ಹೊಂದಿದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕುರುಬರು, ಮಡಿವಾಳರು, ನಾಯಕರು, ಆದಿಕರ್ನಾಟಕ ಜನಾಂಗದವರು ವಾಸಿಸುತ್ತಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೩೭ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೮೨ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಮಟ್ಟೆ, ಚಿಪ್ಪು, ಗರಿಕಡ್ಡಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಬಯಲು ಶೌಚಾಲಯ ಬಳಸುತ್ತಾರೆ.

ಒಂದು ಅಂಗನವಾಡಿ ಕೇಂದ್ರವಿದ್ದು ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲಾಗುತ್ತದೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಮಾರಮ್ಮ ದೇವರ ಪೌಳಿಗಳಿವೆ. ವಾರ್ಷಿಕವಾಗಿ ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಚಿಕ್ಕರಾಂಪುರ

ಚಿಕ್ಕರಾಂಪುರ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೨೩ ಕಿಮೀ ಅಂತರದಲ್ಲಿದೆ. ತೀರ್ಥಪುರ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ೨ ರಾಂಪುರಗಳಿದ್ದು ಚಿಕ್ಕರಾಂಪುರ, ದೊಡ್ಡ ರಾಂಪುರ ಎಂದು ಕರೆಯುತ್ತಾರೆ. ಯರೇಕಟ್ಟೆ ರಾಂಪುರ ಎಂದೂ ಕರೆಯುವುದು ವಾಡಿಕೆಯಾಗಿದೆ. ಭೌಗೋಳಿಕ ವಿಸ್ತೀರ್ಣ ೧೯೧೪ ಹೆಕ್ಟೇರ್. ಇದಕ್ಕೆ ಚಿಕ್ಕರಾಂಪುರ ಗೊಲ್ಲರಹಟ್ಟಿ ಮಜರೆ ಗ್ರಾಮವಾಗಿ ಸೇರಿಕೊಂಡಿದೆ. ಹಾಗಲವಾಡಿ, ಸೀಡ್ಯ ಹಾಗೂ ಮದಲಿಂಗನ ಗುಡ್ಡದ ನಡುವೆ ಗ್ರಾಮ ಇರುವುದರಿಂದ ಕಾಡು ಮಿಶ್ರಿತ ಭೂಭಾಗವಾಗಿದೆ. ಸಮೀಪದಲ್ಲಿ ವಜ್ರ ಎಂಬ ರಾಮೇಶ್ವರನ ಪ್ರಸಿದ್ಧವಾದ ದೇವಾಲಯವಿದೆ. ಕಲ್ಲು ಬಿಳಿ ಮಿಶ್ರಿತ ಮರಳು ಮಣ್ಣಿನ ಭೂಪ್ರದೇಶ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ತೀರ್ಥಪುರ ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಅಜ್ಜಿಗುಡ್ಡ, ವಜ್ರದಿಂದ ಬೇಸಿಗೆ ಕಾಲದಲ್ಲಿ ಮಾತ್ರ ನೀರು ಇದ್ದು ಪ್ರಾಣಿಗಳಿಗೆ ತೋಟಕ್ಕೆ ಅನುಕೂಲವಾಗಿದೆ.

ಆದಿಕರ್ನಾಟಕರು ದೊಡ್ಡ ಸಮುದಾಯವಾಗಿದೆ. ಈಡಿಗ, ಲಿಂಗಾಯಿತ, ಬಲಜಿಗ, ಬ್ರಾಹ್ಮಣ, ಕುಂಬಾರ, ನಾಯಕ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೪೧ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೬೧೪ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೬೭ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಅಡಕೆ, ಹುಣಸೆ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ದ್ವಿಚಕ್ರ ವಾಹನಗಳ ಬಳಕೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಶಿಕ್ಷಣ, ಸಾರಿಗೆ, ಅರಣ್ಯ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಡ್ರೈವರ್, ಕೂಲಿ ಕಾರ್ಮಿಕರಿದ್ದಾರೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತೀರ್ಥಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ರಾಂಪುರದಮ್ಮ, ಕೆಂಪಮ್ಮ, ಮಾರಮ್ಮ ಹೆಸರಿನ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ತೀರ್ಥಪುರದಿಂದ ಅಂಚೆ ಸಂಪರ್ಕವಿದೆ. ಚಿಕ್ಕನಾಯಕನಹಳ್ಳಿ–ಹಾಗಲವಾಡಿ ಮಾರ್ಗವಾಗಿ ರಸ್ತೆ, ಬಸ್ ಸಂಪರ್ಕವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ,

ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೬.೪% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೨ ಗೂಡಂಗಡಿ, ಒಂದು ಟೀ ಅಂಗಡಿ ಇದೆ. ಬಡಗಿ, ಮಡಿವಾಳ ಸಾಂಪ್ರದಾಯಿಕ ಕಸುಬಿದೆ.

ದೊಡ್ಡಮಾರಮ್ಮ, ಎಕೆರಟ್ಟೆ ಮಾರಮ್ಮನ ಪೌಳಿಗಳಿದ್ದು ಸೆಪ್ಟೆಂಬರ್ ತಿಂಗಳಲ್ಲಿ ಬೃಹತ್ ಜಾತ್ರೆಯನ್ನು ಎರೆಕಟ್ಟೆ ರಾಂಪುರದಲ್ಲಿ ನಡೆದಾಗ ಭಾಗವಹಿಸುತ್ತಾರೆ. ಆರತಿ, ಕೋಣನ ಬಲಿ ಇರುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಒಂದು ಅಂಬೇಡ್ಕರ್ ಯುವಕ ಸಂಘವಿದೆ.

## ಚಿಕ್ಕರಾಂಪುರ ಗೊಲ್ಲರಹಟ್ಟಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೨೪ ಕಿಮೀ ಅಂತರದಲ್ಲಿದೆ. ಇದು ರಾಂಪುರಕ್ಕೆ ಸೇರಿದ ಮಜರೆ ಗ್ರಾಮ. ರಾಂಪುರದಹಟ್ಟಿ ಎಂದೂ ಕರೆಯುವುದು ವಾಡಿಕೆಯಾಗಿದೆ. ಅಜ್ಜಿಗುಡ್ಡೆ, ವಜ್ರ, ಹಾಗಲವಾಡಿ ಕಾಡು ಹಾಗೂ ಮದಲಿಂಗನ ಗುಡ್ಡದ ಕಣಿವೆಯ ಸಮತಟ್ಟಾದ ಇಳಿಜಾರಿನಲ್ಲಿ ಈ ಗ್ರಾಮವಿದೆ. ಕಲ್ಲು ಮಿಶ್ರಿತ ಬಿಳಿ ಮಣ್ಣು. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕಾಡುಗೊಲ್ಲ ಸಮುದಾಯದವರು ಮಾತ್ರವಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೩೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೬೭ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೧೦ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕುರಿಗಳೊಂದಿಗೆ ಹುಲ್ಲು–ನೀರಿಗಾಗಿ ವಲಸೆ ಹೋಗುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಹಾಗಲವಾಡಿ, ಚೇಳೂರು, ಚಿಕ್ಕನಾಯಕನಹಳ್ಳಿ ಮಾರ್ಗವಾಗಿ ಬಸ್ ಸಂಚಾರವಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತೀರ್ಥಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಪಡಿತರ ಶಿಕ್ಷಣಗಳಿಗೆ ರಾಂಪುರ ಹಾಗೂ ತೀರ್ಥಪುರ ಗ್ರಾಮಕ್ಕೆ ಹೋಗುತ್ತಾರೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಚಿತ್ರದೇವರು, ರಾಮದೇವರು, ಕಾಟಂದೇವರ ಪೌಳಿಗಳಿದ್ದು ದೀಪಾವಳಿ ಸಂದರ್ಭದಲ್ಲಿ ದೀಪ ಏರಿಸುವ, ಹಾಲುಮೀಸಲು, ಹಿರಿಯರ ಹಬ್ಬ ಹೀಗೆ ವಾರಗಳ ಕಾಲ ಹಬ್ಬ ಆಚರಿಸುತ್ತಾರೆ. ಯರೇಕಟ್ಟೆ ರಾಂಪುರದಮ್ಮನ ಜಾತ್ರೆಯಲ್ಲಿ ಮರಿಯನ್ನು ಬಲಿಗಾಗಿ ಕೊಡುತ್ತಾರೆ. ಜಾತ್ರೆಯ ಏರ್ಪಾಡಿನಲ್ಲಿ ಕುಲಾಚಾರಗಳಲ್ಲಿ ಈ ಹಟ್ಟಿಯವರೂ ಭಾಗವಹಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಚಿಕ್ಕೇನಹಳ್ಳಿ

ಚಿಕ್ಕೇನಹಳ್ಳಿಯು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಸಬಾ ಹೋಬಳಿಯಲ್ಲಿ ಬರುವ ಒಂದು ಬೇಚರಕ್ ಗ್ರಾಮ. ಹಿಂದೆ ಇದ್ದ ಇಲ್ಲಿಯ ಜನ ಯಾವುದೋ ಕಾರಣದಿಂದ ಊರನ್ನು ತ್ಯಜಿಸಿದ್ದಾರೆ. ಊರು ಇದ್ದ ಬಗ್ಗೆ ಕೆಲ ಕುರುಹುಗಳು ದೊರೆಯುತ್ತವೆ. ಇತ್ತೀಚೆಗೆ ಮೂರು ಕುಟುಂಬಗಳು ಹೊಸದಾಗಿ ನೆಲೆಸಿವೆ. ಹಾಗಾಗಿ ಬೇಚರಕ್ ಗ್ರಾಮವಾದ ಚಿಕ್ಕೇನಹಳ್ಳಿ ಈಗ ಜನವಸತಿ ಗ್ರಾಮವಾಗಿ ಮಾರ್ಪಟ್ಟಿದೆ. ತಾಲ್ಲೂಕು ಕೇಂದ್ರದಿಂದ ನೈಋತ್ಯ ದಿಕ್ಕಿಗೆ ೩ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೨೧೬.೧೨ ಚ.ಕಿ.ಮೀ. ಇದೊಂದು ಬಯಲುನಾಡಿಗೆ ಸೇರಿರುವ ಗ್ರಾಮವಾಗಿದ್ದು ಬಿಳಿ ಕಲ್ಲು, ಬಿಳಿ ಮಣ್ಣು ಇಲ್ಲಿ ಕಂಡುಬರುತ್ತದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ನವಿಲೆಕೆರೆಗೆ ಹೋಗುವ ಹಳ್ಳ ಇದೆ. ಚಿಕ್ಕೇನಹಳ್ಳಿ ಕಟ್ಟೆ ಎನ್ನುವ ಒಂದು ಕಟ್ಟೆ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಗ್ರಾಮದಲ್ಲಿ ಕುರುಬರು ಮತ್ತು ವೀರಶೈವ ಸಮುದಾಯಕ್ಕೆ ಸೇರಿದ ಕುಟುಂಬಗಳಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೩ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೩ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಹಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಒಬ್ಬರು ಅಗ್ನಿಶಾಮಕ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಸಬಾ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಬಸವೇಶ್ವರ ದೇವಸ್ಥಾನವಿದೆ. ಶ್ರೀ ಸದ್ಗುರು ಮಹಲಿಂಗಪ್ಪ ತಾತನವರ ಮಠ ಇದೆ. ಶಿವರಾತ್ರಿ ಹಾಗೂ ಶ್ರಾವಣದಲ್ಲಿ ಜಾತ್ರೆ ಮಾಡುತ್ತಾರೆ. ಇವರು

ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಚನ್ನೇನಹಳ್ಳಿ ಬಾಗಾಯ್ತು

ಚನ್ನೇನಹಳ್ಳಿ ಬಾಗಾಯ್ತು ಗ್ರಾಮ ಚನ್ನೇನಹಳ್ಳಿಯ ಹೊಸ ರೂಪ ಪಡೆದುಕೊಂಡಿದೆ. ಇದೊಂದು ಹೊಸಹಳ್ಳಿಯ ಮಜರೆ ಗ್ರಾಮ. ಭೌಗೋಳಿಕ ವಿಸ್ತೀರ್ಣ ೨೫೧ ಹೆಕ್ಟೇರ್. ಕೆಂಪು ಮಿಶ್ರಿತ ಮರಳಿನ ಪ್ರದೇಶ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕುರುಬರು, ಆದಿಕರ್ನಾಟಕ, ಅಗಸರು ಇದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೩೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೮೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೦ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಶಿಕ್ಷಣ, ಸಾರಿಗೆ ಇಲಾಖೆಯಲ್ಲಿ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಟ್ರ್ಯಾಕ್ಟರ್, ಲಾರಿ ಡ್ರೈವರ್ ಗಳಿದ್ದಾರೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರವಿದೆ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುತ್ತಾರೆ. ಸಾಕ್ಷರತೆ ೫೪% ರಷ್ಟಿದೆ. ಶಿಕ್ಷಣ, ಪಡಿತರ ಅಂಚೆಗೆ ಸೀಗೆಬಾಗಿಯಿಂದ ಸಂಪರ್ಕ ಹೊಂದಲಾಗಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಸಣ್ಣಪುಟ್ಟ ಕಾಯಿಲೆಗಳಿಗೆ ಚಿಕ್ಕನಾಯಕನಹಳ್ಳಿ ಹಾಗೂ ಸ್ಥಳೀಯ ಆರೋಗ್ಯ ಕಾರ್ಯಕರ್ತೆಯರಿಂದ ಚಿಕಿತ್ಸೆ ಪಡೆಯುತ್ತಾರೆ. ಸೀಗೆಬಾಗಿ ಹಾಗೂ ಚಿಕ್ಕನಾಯಕನಹಳ್ಳಿ ಕಡೆಗೆ ಖಾಸಗಿ ಬಸ್ ಸಂಪರ್ಕವಿದೆ.

ಮಾರಮ್ಮನ ಪೌಳಿಯಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಚನ್ನೇನಹಳ್ಳಿ

ಚನ್ನೇನಹಳ್ಳಿಯು ಒಂದು ಬೇಚರಕ್ ಗ್ರಾಮ. ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೫ ಕಿಮೀ ದೂರದ ಒಂದು ನಶಿಸಿ ಹೋಗಿರುವ ಗ್ರಾಮ. ಹೊನ್ನೇಬಾಗಿ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು ಚಿಕ್ಕನಹಳ್ಳಿ ಕಸಬಾ ಹೋಬಳಿಗೆ ಸೇರಿದೆ.

ಬಯಲು ಪ್ರದೇಶ. ಕೆಂಪು ಮಿಶ್ರಿತ ಮರಳಿನ ಭೂಮಿ. ಇದು ಹೊಲಮಾಳವಾಗಿದ್ದು ಸರ್ಕಾರಿ ದಾಖಲೆಯಲ್ಲಿ ಮಾತ್ರ ಚನ್ನೇನಹಳ್ಳಿ ಇದೆ. ಉಳಿದಂತೆ ಗ್ರಾಮದ ಸ್ವರೂಪ ಇರುವುದಿಲ್ಲ.

## ಚೋರಗೊಂಡನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ದೊಡ್ಡ ಎಣ್ಣೆಗೆರೆ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೩೮ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೬೭೦.೯೮ ಹೆಕ್ಟೇರ್. ಬಯಲು ನಾಡಾಗಿದ್ದು ಬಿಳಿಕಲ್ಲು, ಕೆಂಪು ಮಣ್ಣನ್ನು ಹೊಂದಿದೆ. ೧ ಬೆಟ್ಟ, ೧ ಗುಡ್ಡವನ್ನು ಹೊಂದಿದೆ. ಹಿಂದೆ ಈ ಗ್ರಾಮದವರು ಕಳ್ಳರ ದಾಳಿಗೆ ತುತ್ತಾಗಿ ಸಂಪತ್ತನ್ನು ಕಳೆದುಕೊಂಡಿದ್ದರಂತೆ. ನಂತರ ಚೋರನಾಯ್ಕನ ಆಳ್ವಿಕೆಯಲ್ಲಿ ಪುನಃ ಸಂಪದ್ಭರಿತವಾದ್ದರಿಂದ ಆತನ ಹೆಸರನ್ನೇ ಗ್ರಾಮಕ್ಕೆ ಇಡಲಾಗಿದೆ ಎಂದು ಹೇಳುತ್ತಾರೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೧ ಹಳ್ಳ ತೆರೆದ ಬಾವಿಗಳಿದ್ದು ಬತ್ತಿಹೋಗಿ ೫೦ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ೧ ಚೋರಗನಹಳ್ಳಿ ಕೆರೆ, ೧ ಕುಂಟೆ, ೪ ಮಿನಿ ಟ್ಯಾಂಕ್‌ಗಳಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಕುರುಬರು, ಅಕ್ಕಸಾಲಿಗರು, ಕೋಮಟಿಗ, ನಾಯಕ ಜನಾಂಗದವರಿದ್ದು ಲಿಂಗಾಯಿತ ಸಮುದಾಯ ದೊಡ್ಡ ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ. ಒಟ್ಟು ೧೧೮ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೩೬೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೮ ಕಾಂಕ್ರೀಟ್, ೧೦ ಕಲ್ಲಿನ, ಮಣ್ಣಿನ, ೧೦೦ ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ೨೦ ಜನತಾ, ೨೦ ಆಶ್ರಯ ಹಾಗೂ ೨೦ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೬ ಕುಟುಂಬಗಳು ವಸತಿ ರಹಿತ ಹಾಗೂ ೨ ಕುಟುಂಬಗಳು ನಿವೇಶನ ರಹಿತವಾಗಿವೆ. ೯೮ ಮನೆಗಳು ಶೌಚಾಲಯ ರಹಿತವಾಗಿವೆ. ಕೃಷಿಕರು, ಕೃಷಿ ಕೂಲಿಕಾರರು, ಬಡಗಿಗಳು ಇದ್ದಾರೆ. ೨ ಹಿಟ್ಟಿನ ಗಿರಣಿಗಳಿವೆ. ೩ ಜನ ಶಿಕ್ಷಕರು, ಒಬ್ಬರು ಬಸ್ ಕಂಡಕ್ಟರ್ ಇದ್ದಾರೆ. ಆಧುನಿಕ ಡೈರಿ ವ್ಯವಸ್ಥೆ ಹೊಂದಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದೊಡ್ಡ ಎಣ್ಣೆಗೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಹಾಲು ಉತ್ಪಾದಕರ ಸಹಕಾರ ಸಂಘ, ಚೌಡಮ್ಮ, ಕರಿಯಮ್ಮ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಉತ್ತಮ ರಸ್ತೆ ಮಾರ್ಗವಿದ್ದು ಸರ್ಕಾರಿ, ಖಾಸಗಿ ವಾಹನಗಳು ಸಂಚರಿಸುತ್ತವೆ. ಕಾಂಕ್ರೀಟ್ ಚರಂಡಿಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೮% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೩ ದಿನಸಿ ಅಂಗಡಿಗಳಿವೆ. ೧ ಮಾಸ್ತಿಕಲ್ಲು ಹಾಗೂ ಪ್ರಾಚೀನ ಬಾವಿಯಿದೆ.

ಕಾಲಭೈರವೇಶ್ವರ, ಅಂತರಘಟ್ಟಮ್ಮ, ಮಾಸ್ತಮ್ಮ, ಭೂತಪ್ಪ, ದುರ್ಗಮ್ಮ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗವಿರಂಗನಾಥಸ್ವಾಮಿ ಯುವಕರ ಸಂಘವಿದ್ದು ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆ ನಡೆಸುತ್ತಿದೆ.

## ಚಟ್ಟಸಂದ್ರ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಮತ್ತಿಘಟ್ಟ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ೧೪ ಕಿಮೀ ಅಂತರದಲ್ಲಿದೆ. ಗ್ರಾಮದ ಸುತ್ತಲೂ ೭ ಕೆರೆಗಳಿದ್ದು ಯಾವಾಗಲೂ ಹಸಿರಿನಿಂದ ಕೂಡಿದ್ದ ಪ್ರದೇಶವಾಗಿತ್ತು. ನಂತರ ಈ ಕೆರೆಗಳು ಬತ್ತಿ ಹೋದವಂತೆ. ಹಾಗಾಗಿ ಈ ಗ್ರಾಮಕ್ಕೆ ಚಟ್ಟಸಂದ್ರ ಎಂದು ಹೆಸರಾಯಿತು. ಚಿಕ್ಕನಾಯಕನಹಳ್ಳಿ ಪಾಳೇಗಾರಿಕೆಯ ಸಂಸ್ಕೃತಿಗೆ ಒಳಪಟ್ಟಿದ್ದು ಇದಕ್ಕೆ ಪುರಾವೆ ಎಂಬಂತೆ ಕೋಟೆಯ ಭಗ್ನಾವಶೇಷಗಳನ್ನು ಕಾಣಬಹುದು. ಭೌಗೋಳಿಕ ವಿಸ್ತೀರ್ಣ ೩೦೦.೮೬ ಹೆಕ್ಟೇರ್. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೧ ಹಳ್ಳ, ೧ ಕೆರೆ, ೧ ಕುಂಟೆ, ೪ ತೆರೆದ ಬಾವಿಗಳಿದ್ದು ಬತ್ತಿಹೋಗಿ ೫೦ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಲಿಂಗಾಯಿತ ಸಮುದಾಯದವರೇ ಅಧಿಕ ಸಂಖ್ಯೆಯಲ್ಲಿದ್ದು ಆಚಾರಿಗಳು, ವೈಷ್ಣವರು ವಾಸವಾಗಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೮೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೩೦೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೨ ಕಾಂಕ್ರೀಟ್, ೨೦ ಕಲ್ಲಿನ, ೩ ಮಣ್ಣಿನ, ೫೦ ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ೧೦ ಜನತಾ, ೨೦ ಆಶ್ರಯ, ೪ ಅಂಬೇಡ್ಕರ್ ವಸತಿ ನಿಲಯ ಹಾಗೂ ೨ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೨೩ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೨೦ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ. ೧ ಕುಟುಂಬ ವಸತಿ ರಹಿತವಾಗಿದೆ. ಆಧುನಿಕ ಡೈರಿ ವ್ಯವಸ್ಥೆಯಿದೆ. ೬ ಜನ ಸರ್ಕಾರಿ ನೌಕರರಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ದಾಳಿಂಬೆ, ತರಕಾರಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮತಿಘಟ್ಟ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರು, ಒಬ್ಬರು ಗ್ರಾಮ ಪಂಚಾಯ್ತಿ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು

ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಒಂದು ಕಚ್ಚಾ ರಸ್ತೆ, ಜಿಲ್ಲಾ ಮುಖ್ಯ ರಸ್ತೆಯಿದ್ದು ಜೆ.ನಾ ಹಳ್ಳಿ, ತಿಪಟೂರಿಗೆ ಸಂಪರ್ಕ ಕಲ್ಪಿಸುತ್ತದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೮% ರಷ್ಟಿದೆ. ಈ ಗ್ರಾಮದ ಮಕ್ಕಳು ರಂಗಕಲೆಗಳಲ್ಲಿ ಜಿಲ್ಲೆಗೆ ಚಿರಪರಿಚಿತರಾಗಿದ್ದಾರೆ. ಅನೇಕ ಸಾಮಾಜಿಕ, ಪೌರಾಣಿಕ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೨ ಅಂಗಡಿಗಳಿವೆ.

ರಂಗನಾಥಸ್ವಾಮಿ, ಆಂಜನೇಯಸ್ವಾಮಿ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ವೀರಭದ್ರಯ್ಯ ಎಂಬುವರು ರಂಗಕಲಾವಿದರಾಗಿದ್ದಾರೆ.

## ಚಿಕ್ಕ ಎಣ್ಣೆಗೆರೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ದೊಡ್ಡ ಎಣ್ಣೆಗೆರೆ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೩೩ ಕಿಮೀ ಅಂತರದಲ್ಲಿದೆ. ಶಾಸನ ಹಾಗೂ ಊರಿನ ಸುತ್ತಲೂ ಭಗ್ನವಾಗಿರುವ ಕೋಟೆಯ ಅವಶೇಷಗಳು ಕಾಣಿಸುತ್ತವೆ. ಒಂದು ಲಂಬಾಣಿ ತಾಂಡ ಇದರ ಉಪಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ೬೫೦ ಹೆಕ್ಟೇರ್. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು  ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ. ಒಂದು ಬೆಟ್ಟ, ಒಂದು ಗುಡ್ಡ ಹಾಗೂ ರಕ್ಷಿತಾರಣ್ಯವಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೧ ಕೆರೆ, ೨ ಕುಂಟೆಗಳು, ೧ ಚೌಲಿಹಳ್ಳ, ೨ ತೆರೆದ ಬಾವಿಗಳಿದ್ದು ಬತ್ತಿಹೋಗಿ ೩೦೦ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ  ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಕುರುಬ ಜನಾಂಗದವರೇ ಅಧಿಕ ಸಂಖ್ಯೆಯಲ್ಲಿದ್ದು ನಂತರದಲ್ಲಿ ಲಿಂಗಾಯಿತರು, ಆದಿಕರ್ನಾಟಕರು, ನಾಯಕರು, ಗಾಣಿಗರು, ಮಡಿವಾಳರು, ಮುಸ್ಲಿಮರು, ಕೊರಮರು, ಬೆಸ್ತರು, ಶೆಟ್ಟರು ವಾಸವಾಗಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಉರ್ದು, ತೆಲುಗು, ಬೋವಿ ಭಾಷೆಗಳನ್ನು ಮಾತನಾಡುವವರಿದ್ದಾರೆ. ಒಟ್ಟು ೩೦೬ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೦೪೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೩ ಕಾಂಕ್ರೀಟ್, ೧೦೦ ಕಲ್ಲಿನ, ೩ ಮಣ್ಣಿನ, ೨೦೦ ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ೨೦ ಜನತಾ, ೧೦ ಆಶ್ರಯ, ೨೦ ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ೬೦ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೪೦ ಮನೆಗಳಲ್ಲಿ ಶೌಚಾಲಯ ಸೌಲಭ್ಯವಿದೆ. ೨೦ ವಸತಿ ರಹಿತ ಕುಟುಂಬಗಳು, ೧೦ ನಿವೇಶನ ರಹಿತ ಕುಟುಂಬಗಳಿವೆ. ೮೦ ವಿದ್ಯುತ್ ಕಂಬಗಳಿದ್ದು ೬೦ ಕಂಬಗಳಿಗೆ ವಿದ್ಯುತ್ ದೀಪಗಳನ್ನು ಅಳವಡಿಸಿದ್ದಾರೆ. ನ್ಯಾಯಬೆಲೆ ಅಂಗಡಿ ಹಾಗೂ ಗ್ರಾಹಕರ ವೇದಿಕೆಗೆ ದೊಡ್ಡ ಎಣ್ಣೆಗೆರೆಗೆ ಹೋಗಬೇಕಿದೆ. ಆಧುನಿಕ ಡೈರಿಯಿದೆ. ೧೦ ಜನ ಸರ್ಕಾರಿ ನೌಕರರು, ಬಡಗಿಗಳು, ಕಮ್ಮಾರರು ಇದ್ದಾರೆ. ಹಿಟ್ಟಿನ ಗಿರಣಿ, ಇಟ್ಟಿಗೆ ಕಾರ್ಖಾನೆಗಳಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು.

ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದೊಡ್ಡ ಎಣ್ಣೆಗೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ೩ ಜನ ಗ್ರಾಮ ಪಂಚಾಯ್ತಿ ಸದಸ್ಯರು, ಇಬ್ಬರು ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಜಿಲ್ಲಾ ಮುಖ್ಯ ರಸ್ತೆಯಿದ್ದು ಹುಳಿಯಾರು, ಮಾಚನಹಳ್ಳಿ, ಹೊಸದುರ್ಗ, ತಿಪಟೂರು ಕಡೆಗೂ ಒಂದು ಕಚ್ಚಾರಸ್ತೆಯು ಸಿದ್ದರಬೆಟ್ಟ, ಹುಳಿಯಾರು, ಅರಳೀಕೆರೆಗೆ ಸಂಪರ್ಕ ಕಲ್ಪಿಸುತ್ತದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೬% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೧ ಹೋಟೆಲ್, ೪ ಅಂಗಡಿಗಳಿವೆ. ಒಂದು ಶಿಲಾ ಶಾಸನವಿದೆ. ಹೆಬ್ಬಾಗಿಲು ಇದೆ.

ಹನುಮಂತರಾಯ, ಕರಿಯಮ್ಮ, ಚೌಡಮ್ಮ, ಹೊರಗಲಮ್ಮ, ಬೀರಲಿಂಗೇಶ್ವರ ದೇವಾಲಯವಿದೆ. ಹನುಮಂತರಾಯನ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಚೌಡಮ್ಮನ ಬಾನವನ್ನು ಬಾಡೂಟದೊಂದಿಗೆ ವಿಶೇಷವಾಗಿ ಆಚರಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕರಿಯಣ್ಣ, ಪುಟ್ಟರಾಮಯ್ಯ ರಂಗ ಕಲಾವಿದರು. ಜಗದೀಶ್ ಯುವಕವಿಗಳಾಗಿದ್ದಾರೆ. ವಿನಾಯಕ ಗೆಳೆಯರ ಬಳಗ, ಹನುಮಂತರಾಯರ ಜಾತ್ರಾ ಕಮಿಟಿ, ರೈತ ಸಂಘಗಳು ಇವೆ.

## ಚಿಕ್ಕ ಎಣ್ಣೆಗೆರೆ ಲಂಬಾಣಿ ತಾಂಡ

ಚಿಕ್ಕ ಎಣ್ಣೆಗೆರೆ ಲಂಬಾಣಿ ತಾಂಡವು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೩೩ ಕಿಮೀ ಅಂತರದಲ್ಲಿದೆ. ಇದು ದೊಡ್ಡ ಎಣ್ಣೆಗೆರೆ ಗ್ರಾಮಪಂಚಾಯ್ತಿಗೆ ಸೇರಿದ ಒಂದು ಮಜರೆ ಗ್ರಾಮ. ಚಿಕ್ಕ ಎಣ್ಣೆಗೆರೆಗೆ ಹೊಂದಿಕೊಂಡಂತೆ ಇರುವುದರಿಂದ ಚಿಕ್ಕಎಣ್ಣೆಗೆರೆ ಲಂಬಾಣಿ ತಾಂಡ ಎಂದು ಕರೆಯಲಾಗುವುದು. ಇದರ ಭೌಗೋಳಿಕ ವಿಸ್ತೀರ್ಣ ಮುಖ್ಯ ಗ್ರಾಮದ ೬೫೦ ಹೆಕ್ಟೇರ್‌ಗಳಲ್ಲಿ ಹಂಚಿಕೆಯಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಲಂಬಾಣಿ ಸಮುದಾಯದವರು ಮಾತ್ರ ಇದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೪೭ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೦೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೨೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ,

ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ದ್ವಿಚಕ್ರ ವಾಹನಗಳಿವೆ. ರೈತ ಕಾರ್ಮಿಕರು, ಸಾರಿಗೆ, ಕೆಇಬಿ, ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುವವರಿದ್ದಾರೆ. ಟ್ರ್ಯಾಕ್ಟರ್ ಡ್ರೈವರ್ ಇದ್ದಾರೆ. ಕುರಿ, ತೆಂಗಿನಕಾಯಿ ವ್ಯಾಪಾರಿಗಳಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದೊಡ್ಡ ಎಣ್ಣೆಗೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಪಡಿತರ, ಶಿಕ್ಷಣ ಸೌಲಭ್ಯವನ್ನು ದೊಡ್ಡ ಎಣ್ಣೆಗೆರೆಯಿಂದ ಪಡೆದುಕೊಳ್ಳಲಾಗುತ್ತಿದೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೧ ಪೆಟ್ಟಿಗೆ ಅಂಗಡಿಯಿದೆ. ಹುಳಿಯಾರು, ಹಂದನಕೆರೆ ಹಾಗೂ ಗವಿರಂಗಾಪುರಕ್ಕೆ ರಸ್ತೆ, ಬಸ್ ಸಂಪರ್ಕವಿದೆ.

ಸೇವಾಲಾಲ್ ಮಂದಿರವಿದೆ. ದೊಡ್ಡ ಎಣ್ಣೆಗೆರೆ ಗ್ರಾಮದಲ್ಲಿರುವ ಭೀಮಸತಿ ಜಾತ್ರೆಯಲ್ಲಿ ಗ್ರಾಮದವರು ಭಾಗವಹಿಸುತ್ತಾರೆ. ದೀಪಾವಳಿ ಹಿರಿಯರ ಹಬ್ಬವಾಗಿ ಹೋಮಕಾರ್ಯ, ಸಿಹಿ ಹಂಚಿಕೆ, ಸಮೂಹ ದುಃಖ, ಆಹಾರ ಸೇವನೆಯ ವ್ಯವಸ್ಥೆ ಇರುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರಂಗಾನಾಯ್ಕ ರಂಗಭೂಮಿ ಕಲಾವಿದರಾಗಿದ್ದಾರೆ. ಸೇವಾಲಾಲ್ ಯುವಕ ಸಂಘವಿದೆ.

## ಜೋಡಿಕಲ್ಲೇನಹಳ್ಳಿ

ಜೋಡಿಕಲ್ಲೇನಹಳ್ಳಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮುದ್ದೇನಹಳ್ಳಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ವಾಯವ್ಯ ದಿಕ್ಕಿಗೆ ೭ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೩೬೦.೩೫ ಹೆಕ್ಟೇರ್. ಬಯಲುನಾಡಿಗೆ ಸೇರಿದ್ದು ಇಲ್ಲಿ ಬಿಳಿ ಕಲ್ಲುಗಳು, ಬಿಳಿ ಮಣ್ಣು ಕಂಡುಬರುತ್ತದೆ. ಕರಿಕಲ್ಲು ಬಂಡೆ ಕಂಡುಬರುತ್ತದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ನವಿಲೆಕೆರೆ ಕೋಡಿಹಳ್ಳ, ಕಲ್ಲೇನಹಳ್ಳಿ ಕೆರೆ ಹಳ್ಳ ಹರಿಯುತ್ತದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ೬೦ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ. ಒಂದು ತೋಟದ ಓಣಿಯಿದೆ.

ಉಪ್ಪಾರರು ದೊಡ್ಡ ಸಮುದಾಯವಾಗಿದೆ. ವೀರಶೈವರು, ಬಿಳಿಮಗ್ಗ (ಕುರುಹಿನಶೆಟ್ಟರು), ನಾಯಕರು, ಮಡಿವಾಳರು, ಆದಿಕರ್ನಾಟಕ ಜನರು ಸಣ್ಣ ಸಮುದಾಯವಾಗಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೨೩ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೫೮೩ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೨ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೬೨ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ

ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಆಧುನಿಕ ಬೈಸಿಕಲ್, ಬೈಕ್‌ಗಳಿವೆ. ರಸ್ತೆಯಿದೆ. ನಂದಿನಿ ಡೈರಿ ಹಾಗೂ ಖಾಸಗಿ ಡೈರಿಯಿದೆ. ಶಿಕ್ಷಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಕೆಲಸ ನಿರ್ವಹಿಸುವವರಿದ್ದಾರೆ. ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ದುಡಿಮೆ ಮಾಡುವವರಿದ್ದಾರೆ. ಇಟ್ಟಿಗೆ ಫ್ಯಾಕ್ಟರಿ ಇದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಸಬಾ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮಾಳಿಗೇಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರು, ಒಬ್ಬರು ಗ್ರಾಮಪಂಚಾಯ್ತಿ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶ್ರೀಲಕ್ಷ್ಮಿ, ಶ್ರೀ ಕರಿಯಮ್ಮ, ಶ್ರೀ ಶಾರದಾ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಗ್ರಾಮಕ್ಕೆ ರಸ್ತೆ ಸಂಪರ್ಕ ಇದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೮೦% ರಷ್ಟಿದೆ. ಗ್ರಾಮದ ಕರಿಯಪ್ಪ ಎಂಬುವರು ದನಕರುಗಳಿಗೆ ನಾಟಿ ಔಷಧ ನೀಡುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೧೩ ಫಲಾನುಭವಿಗಳಿದ್ದಾರೆ.

ಆಂಜನೇಯಸ್ವಾಮಿ, ಈಶ್ವರ ದೇವಾಲಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮಾರುತಿ ಯುವಕರ ಸಂಘವಿದೆ.

## ಜೋಡಿಕಲ್ಲೇನಹಳ್ಳಿ ಎ.ಕೆ. ಕಾಲೋನಿ

ಜೋಡಿಕಲ್ಲೇನಹಳ್ಳಿ ಎ.ಕೆ. ಕಾಲೋನಿಯು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ವಾಯವ್ಯ ದಿಕ್ಕಿನಲ್ಲಿ ೭ ಕಿ.ಮೀ ದೂರದಲ್ಲಿದೆ. ಇದು ಪೂರ್ಣವಾಗಿ ಆದಿಕರ್ನಾಟಕ ಜನಾಂಗದ ಒಂದು ಪ್ರತ್ಯೇಕ ಗ್ರಾಮವಾಗಿದ್ದು ಮಾದಿಗರ ಹಟ್ಟಿ ಎಂತಲೂ ಕರೆಯುತ್ತಾರೆ. ೨೭ ಮನೆಗಳಿದ್ದು ೧೨೩ ಜನಸಂಖ್ಯೆ ಹೊಂದಿದೆ. ಇಲ್ಲಿನ ಮನೆಗಳು ಹೆಂಚಿನ, ಶೀಟಿನ ಸ್ವರೂಪದಲ್ಲಿದ್ದು ಇವು ವಸತಿ ಯೋಜನೆಯಾದ ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆ ಹಾಗೂ ಉಚಿತ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ೧೦ ಫಲಾನುಭವಿಗಳಿದ್ದಾರೆ. ಕುಡಿಯಲು ಮುದ್ದೇನಹಳ್ಳಿ ಗ್ರಾಮಪಂಚಾಯ್ತಿಯಿಂದ ಬೋರ್‌ವೆಲ್ ಮೂಲಕ ನೀರು ಪೂರೈಸುತ್ತಿದ್ದು ಒಂದು ಸಿಸ್ಟನ್ ಇದೆ. ಶಿಕ್ಷಣ, ಪಡಿತರ ಮುಖ್ಯಗ್ರಾಮಕ್ಕೆ ಹೋಗುತ್ತಾರೆ. ಮುದ್ದೇನಹಳ್ಳಿಯಿಂದ ಅಂಚೆ ಸೌಕರ್ಯವಿದೆ. ವ್ಯವಸಾಯ ಮುಖ್ಯ ಕಸುಬು. ರಾಗಿ, ಜೋಳ, ಹೆಸರು ಬೆಳೆಯುತ್ತಾರೆ. ಹಸು, ಕುರಿ, ಮೇಕೆ ಸಾಕುತ್ತಾರೆ. ಕೃಷಿ ಕಾರ್ಮಿಕರು ಇದ್ದು ಟ್ರ್ಯಾಕ್ಟರ್ ಡ್ರೈವರ್‌ಗಳಿದ್ದಾರೆ. ಶಿಕ್ಷಣ ಹಾಗೂ ಅರಣ್ಯ ಇಲಾಖೆಯ ನೌಕರರು ಇದ್ದಾರೆ. ರಾಗಿ ಮುದ್ದೆ ಮುಖ್ಯ ಆಹಾರ. ಅನ್ನ-ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯ ವೇತನದ ಫಲಾನುಭವಿಗಳಿದ್ದಾರೆ. ೨ ಸ್ತ್ರೀಶಕ್ತಿ ಸಂಘವಿದೆ. ಕರಿಯಮ್ಮ ದೇವಿಯ ಪೌಳಿಯಿದ್ದು ಬಸವೇಶ್ವರ, ಆಂಜನೇಯ ದೇವರಿಗೆ ಆರತಿ, ಬಾನ ಅರ್ಪಿಸುವುದು ವಾಡಿಕೆಯಾಗಿದೆ. ಸಾಂಪ್ರದಾಯಿಕ ಎತ್ತಿನ ಗಾಡಿಗಳ ಜೊತೆಗೆ ದ್ವಿಚಕ್ರ ವಾಹನಗಳ ಬಳಕೆಯಿದೆ. ಯುಗಾದಿ, ದೀಪಾವಳಿ, ದಸರಾ, ಗೌರಿ-ಗಣೇಶ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಜಡೆಯಪ್ಪನಪಾಳ್ಯ

ಜಡೆಯಪ್ಪನಪಾಳ್ಯ ಬೆಳ್ಳಾರ ಕಂದಾಯ ಗ್ರಾಮಕ್ಕೆ ಸೇರಿದ ಉಪಗ್ರಾಮ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೬ ಕಿಮೀ ಅಂತರದಲ್ಲಿದೆ. ಜಡೆಯಪ್ಪ ಎಂಬ ವ್ಯಕ್ತಿ ಮೂಲದಿಂದಾಗಿ ಜಡೆಯಪ್ಪನಪಾಳ್ಯ ಎಂಬ ಹೆಸರು ಬಂದಿದೆ. ಬಯಲು ಪ್ರದೇಶ. ಉತ್ತರಕ್ಕೆ

ಅಭಯಾರಣ್ಯವಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ, ಹಂದಿ, ಚಿರತೆ, ಹುಲಿ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಕುಂಚಿಟಿಗ, ಅಗಸ, ನಾಯಕ, ಬೋವಿ ಜನಾಂಗ ಕಂಡುಬರುತ್ತಾರೆ. ಒಟ್ಟು ೩೬ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೭೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೮ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ದ್ವಿಚಕ್ರ ವಾಹನಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಬೆಳ್ಳಾರದಿಂದ ಅಂಚೆ, ಪಡಿತರ, ಶಿಕ್ಷಣ ಸೌಲಭ್ಯವಿದೆ. ೨ ಸ್ತ್ರೀಶಕ್ತಿ ಸಂಘಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ. ಬೆಳ್ಳಾರ-ಸಿರಾ-ಹುಳಿಯಾರು ಮಾರ್ಗವಾಗಿ ರಸ್ತೆ ಸಾರಿಗೆ ಸಂಪರ್ಕ ಕಲ್ಪಿಸಿದೆ.

ಕರಿಯಮ್ಮ, ಏರೆಕಟ್ಟೆ ರಾಂಪುರದ ಮಾರಮ್ಮನಿಗೆ ಆರತಿ, ಬಲಿ ಅರ್ಪಿಸಿ ಊರಹಬ್ಬ ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಜಯಚಾಮರಾಜಪುರ

ಜೆ.ಸಿ. ಪುರ ಎಂದೇ ಬಳಕೆಯಲ್ಲಿರುವ ಈ ಗ್ರಾಮ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೭ ಕಿಮೀ ಅಂತರದಲ್ಲಿರುವ ಕಂದಾಯ ಗ್ರಾಮವಾಗಿದೆ. ತೂಬರೇನಹಳ್ಳಿ ಹಾಗೂ ವಡ್ಡರಹಟ್ಟಿ ಎಂಬ ಮಜರೆ ಗ್ರಾಮಗಳನ್ನು ಒಳಗೊಂಡಿದೆ. ಭೌಗೋಳಿಕ ವಿಸ್ತೀರ್ಣ ೮೧೨ ಹೆಕ್ಟೇರ್. ಮೊದಲಿಗೆ ಬಳೆಗಾರ ಶೆಟ್ಟರು ಹೆಚ್ಚಿನ ಸಂಖ್ಯೆಯಲ್ಲಿದ್ದ ಕಾರಣ ಶೆಟ್ಟಿಹಳ್ಳಿ ಎಂದು ಕರೆಯುತ್ತಿದ್ದರು. ಮುಂದೆ ಮೈಸೂರು ಅರಸರಾದ ಜಯಚಾಮರಾಜೇಂದ್ರರ ಸ್ಮಾರಕವಾಗಿ ಗ್ರಾಮಕ್ಕೆ ೧೯೨೩ ರ ಸುಮಾರಿಗೆ ಶೆಟ್ಟಿಹಳ್ಳಿಗೆ ಬದಲಾಗಿ ಜಯಚಾಮರಾಜಪುರ ಎಂದು ಕರೆಯಲಾರಂಭಿಸಿದರು. ಪ್ರಸ್ತುತ ಜೆ.ಸಿ. ಪುರ ಎಂದೇ ಜನಮಾನಸದಲ್ಲಿದೆ. ಬಯಲು ಪ್ರದೇಶ, ತೋಟ, ಗಿಡ-ಗಂಟೆಗಳ ಭೂಪ್ರದೇಶ. ಗ್ರಾಮದ ಬಲಬದಿಗೆ ರಕ್ಷಿತ ತೋಟಗಾರಿಕೆ ಫಾರಂ ಇದೆ. ಕರಿಗುಂಡುಕಲ್ಲುಗಳ ಜೊತೆಗೆ ಕೆಂಪು ಕಪ್ಪು ಮಿಶ್ರಿತ ಭೂಮಿಯಾಗಿದೆ. ಕೆ.ಬಿ. ಕ್ರಾಸಿಗೆ ಹತ್ತಿರದಲ್ಲಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೫೪೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ೨ ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಜೆ.ಸಿ.

ಪುರ ಗ್ರಾಮಪಂಚಾಯಿತ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ವೀರಶೈವರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕರು, ಕ್ಷೌರಿಕರು, ದಾಸರು, ಅಕ್ಕಸಾಲಿಗರು, ಮರಾಠರು ಕಿರು ಸಮುದಾಯವಾಗಿವೆ. ಏರಿ ಹಿಂದಲ ಓಣಿ, ತೆಂಗಿನ ಮರಜ ಓಣಿ ಎಂಬ ೨ ಓಣಿಗಳಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೨೧೫ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೦೨೭ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಲಾರಿ, ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ನಂದಿನಿ ಹಾಲಿನ ಡೈರಿಯಿದ್ದು ೨೦೦ ಲೀ. ಸರಾಸರಿ ಹಾಲು ಸಂಗ್ರಹವಾಗುತ್ತಿದೆ. ಶಿಕ್ಷಕರು, ವೈದ್ಯರು, ಕಂದಾಯ ಇಲಾಖೆಯಲ್ಲಿ, ಇಂಜಿನಿಯರ್ ಸೇರಿದಂತೆ ಒಟ್ಟು ೬೪ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವಕೀಲರು, ವೈದ್ಯರಿದ್ದಾರೆ. ಟ್ರ್ಯಾಕ್ಟರ್ ಡ್ರೈವರ್‌ಗಳಿದ್ದಾರೆ. ೨ ಇಟ್ಟಿಗೆ ಫ್ಯಾಕ್ಟರಿಗಳಿವೆ. ಸಾಂಪ್ರದಾಯಿಕ ಬಡಗಿತನವಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯಿತ್ತಿ ಕ್ಷೇತ್ರ, ತಾಲ್ಲೂಕು ಪಂಚಾಯಿತ್ತಿ ಹಾಗೂ ಜೆ.ಸಿ. ಪುರ ಗ್ರಾಮಪಂಚಾಯಿತ್ತಿ ವ್ಯಾಪ್ತಿಗೆ ಸೇರುತ್ತದೆ. ೩ ಜನ ಗ್ರಾಮಪಂಚಾಯಿತ್ತಿ ಸದಸ್ಯರಿದ್ದಾರೆ. ಜೆ.ಸಿ. ಪುರ ಗ್ರಾಮಪಂಚಾಯಿತ್ತಿ ಕೇಂದ್ರವೂ ಆಗಿದ್ದು ೨೭ ಜನ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೪ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಜೆ.ಸಿ ಪುರ ಚಿಕ್ಕನಾಯಕನಹಳ್ಳಿ, ಕೆ.ಬಿ. ಕ್ರಾಸ್ ಮೂಲಕ ಸರ್ಕಾರಿ, ಖಾಸಗಿ ವಾಹನಗಳ ಸಂಚಾರವಿದೆ. ಜೆ.ಸಿ. ಪುರ ಅಂಚೆ ಕಛೇರಿ ಹೊಂದಿದೆ. ಗ್ರಾಮದ ಜೆ.ಸಿ. ಮಾಧುಸ್ವಾಮಿಯವರು ೨ ಬಾರಿ ವಿಧಾನಸಭಾ ಸದಸ್ಯರಾಗಿ, ವಿವಿಧ ಸಮಿತಿಗಳ ಸಂಚಾಲಕರಾಗಿ ಕಾರ್ಯನಿರ್ವಹಿಸಿದ್ದಾರೆ. ರೈತ ಸೇವಾಸಂಘ, ಕಲ್ಪತರು ಗ್ರಾಮೀಣ ಬ್ಯಾಂಕ್ ಇದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಪ್ರೌಢಶಾಲೆಗಳಿವೆ. ಒಂದು ಕೈಗಾರಿಕಾ ತರಬೇತಿ ಸಂಸ್ಥೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೮೫% ರಷ್ಟಿದೆ. ಗ್ರಾಮಪಂಚಾಯಿತ್ತಿ ಗ್ರಂಥಾಲಯವಿದ್ದು ೬೫೦ ಪುಸ್ತಕಗಳಿವೆ. ನಾಟಿ ವೈದ್ಯರಾದ ನಾಗೇಶಣ್ಣ, ಚಂದ್ರಶೇಖರಯ್ಯ ಪಾರಂಪರಿಕ ಚಿಕಿತ್ಸೆ ನೀಡುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೪ ಗೂಡಂಗಡಿ, ೨ ಟೀ ಅಂಗಡಿಗಳಿವೆ. ಗ್ರಾಮದಲ್ಲಿ ೧೬ ನೇ ಶತಮಾನಕ್ಕೆ ಸೇರಿದ ೩ ವೀರಗಲ್ಲು, ೧ ಮಾಸ್ತಿಕಲ್ಲು ಇವೆ. ಮಾಸ್ತಿಕಲ್ಲನ್ನು ಮಾಸ್ತಮ್ಮ ಎಂಬ ಹೆಸರಿನಲ್ಲಿ ಆರತಿ, ಬಾನಗಳೊಂದಿಗೆ ಪೂಜಿಸುವುದು ಸಂಪ್ರದಾಯವಾಗಿದೆ. ಒಂದು ಕರುಗಲ್ಲು ಇದೆ. ಇದರ ನಡುವೆ ಒಂದು ದೊಡ್ಡ ಕಾರೇಮರವಿದ್ದು ಇದನ್ನು ಆಂಜನೇಯನೊಂದಿಗೆ ಪೂಜಿಸುತ್ತಾರೆ. ನರಸಿಂಹಸ್ವಾಮಿ ಜಾತ್ರೆಯು ೩ ವರ್ಷಗಳಿಗೊಮ್ಮೆ ತುಂಬಾ ವಿಜೃಂಭಣೆಯಿಂದ ನಡೆಯುತ್ತದೆ. ಆರತಿ, ಬಾನ, ಪರೇವು ನಡೆಯುತ್ತದೆ. ಹಟ್ನದಮ್ಮನ ಜಾತ್ರೆಗೂ ಇಲ್ಲಿಂದ ಆರತಿ ಹೋಗುವ ಆಚರಣೆಯಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಪ್ರೊ॥ ಶಿವನಂಜಯ್ಯ ಎಂಬುವವರು

ಸಾವಯವ ಕೃಷಿ ತಜ್ಞರಾಗಿದ್ದು ಬಾಳೆಕಾಯಿ ಶಿವನಂಜಯ್ಯ ಎಂದೇ ಹೆಸರಾಗಿದ್ದಾರೆ. ಸಾವಯವ ಕೃಷಿ ಎಂಬ ಪುಸ್ತಕ ರಚಿಸಿದ್ದಾರೆ.

## ಜಾಣೆಹಾರ್

ಜಾಣೆಹಾಳ್ > ಜಾಣೆಹಾರ್ ಎಂದೆಲ್ಲಾ ಕರೆಯುವ ಈ ಗ್ರಾಮ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಈಶಾನ್ಯ ದಿಕ್ಕಿಗೆ ೧೦ ಕಿಮೀ ಅಂತರದಲ್ಲಿದೆ. ಅರೆಗುಡ್ಡಗಳ ಪ್ರದೇಶ. ಈ ಪರಿಸರದಲ್ಲಿ ಜಾಣೆ ಎಂಬ ಮುಳ್ಳುಕಡ್ಡಿಯ ಗಿಡಗಳು ಬೆಳೆದ ಕಾರಣದಿಂದಾಗಿ ಜಾಣೆಯಹಳ್ಳ ಜಾಣೆಹಾಳ್ ಆಗಿದೆ. ಇನ್ನೊಂದು ಮೂಲದ ಪ್ರಕಾರ ಮದಲಿಂಗನ ನಾದಿನಿ ತನ್ನ ಅಕ್ಕನ ಗಂಡನಾದ ಮದಲಿಂಗನಿಗೆ ಗುಡ್ಡ ಏರಲು ಸ್ಪರ್ಧೆಯೊಡ್ಡಿ ಅಂತ್ಯದಲ್ಲಿ ಆತನಿಗೆ ನೀರು ಕೊಡಲಾಗದೆ ಆತನು ಮಡಿದನು. ಆ ಜಾಗವನ್ನು ಮದನಮಡು ಎಂದು ಕರೆದರೆ, ಈಕೆ ಆತನ ಸಾವಿನ ನೋವಿನಿಂದ ಮುಂದೆ ಬಂದು ಆಕೆಯೂ ಈ ಸ್ಥಳದಲ್ಲೇ ಸಾವನ್ನಪ್ಪಿದಳೆಂದು, ಅದನ್ನೇ ಜಾಣೆಯ ಹಾರ > ಬಲಿ ಎಂತಲೂ ಕರೆಯುತ್ತಾರೆ. ಇದೊಂದು ಕಂದಾಯ ಗ್ರಾಮ. ಭೌಗೋಳಿಕ ವಿಸ್ತೀರ್ಣ ೨೯೯೪ ಹೆಕ್ಟೇರ್. ಕಣಿವೆ ಭೂಪ್ರದೇಶ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೫೪೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಉಪ್ಪಿನಹಳ್ಳ, ಆತ್ರಿಹಳ್ಳಗಳಿದ್ದು ಮಳೆಗಾಲದಲ್ಲಿ ಮಾತ್ರ ನೀರಿರುತ್ತದೆ. ೪ ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ. ಅರಣ್ಯ ಭೂಭಾಗವಾಗಿದ್ದು ಹಾಗಲವಾಡಿ, ತಿಮ್ಮನಹಳ್ಳಿ, ಬೋರನಕಣಿವೆಯ ತನಕ ಬೆಟ್ಟ–ಗುಡ್ಡಗಳ ಸಾಲು ನಿಂತಿದೆ.

ನಾಯಕ ಜನಾಂಗ ದೊಡ್ಡ ಸಮುದಾಯವಾಗಿದ್ದು ಗೊಲ್ಲರು, ಆದಿಕರ್ನಾಟಕ, ಬೆಸ್ತರು, ಅಗಸರು ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೮೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೭೪೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೭೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಸಾವೆ, ನವಣೆ ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಹುಣಸೆಹಣ್ಣು ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಸ್ಕೂಟರ್, ಟ್ರ್ಯಾಕ್ಟರ್, ಟೆಂಪೋ ಇವೆ. ಒಬ್ಬರು ಬಿಎಂಟಿಸಿ ಕಂಡಕ್ಟರ್ ಸರ್ಕಾರಿ ನೌಕರರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತೀರ್ಥಪುರ ತಾಲ್ಲೂಕು ಪಂಚಾಯ್ತಿ ಹಾಗೂ ರಾಮನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಭುವನೇಶ್ವರಿ, ಕೆಂಪಮ್ಮ, ಚಾಮುಂಡಿ, ಮಂಜುನಾಥ ಸ್ತ್ರೀಶಕ್ತಿ ಸಂಘ

ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ತೀರ್ಥಪುರದಿಂದ ಅಂಚೆ ಸಂಪರ್ಕ ಕಲ್ಪಿಸಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೩% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೩ ಕಿರಾಣಿ ಅಂಗಡಿ, ೨ ಗೂಡಂಗಡಿ, ಟೀ ಅಂಗಡಿಗಳಿವೆ.

ಆಂಜನೇಯ, ಮೈಲಾರಲಿಂಗ, ಭೈರವೇಶ್ವರ ದೇವಾಲಯಗಳಿವೆ. ದಸರಾ ಹಬ್ಬದಂದು ದೇವರ ಉತ್ಸವ ಊರುತ್ತದೆ. ಯರೇಕಟ್ಟೆ, ರಾಂಪುರದ ಮಾರಮ್ಮನಿಗೆ ಆರತಿ, ಬಲಿ ಸಂಪ್ರದಾಯವಿದ್ದು ಊರಹಬ್ಬದ ಮಾದರಿಯಲ್ಲಿ ಜರುಗುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಜನಪದ ಸಂಗೀತ ಕಲಾವಿದರಾಗಿ ನಾಯಕ ಜನಾಂಗದ ಕೆಂಚಮ್ಮ, ನಿಂಗಜ್ಜಿ, ಲಕ್ಕಜ್ಜಿ, ತೊಳಸಮ್ಮ ಸೋಬಾನೆ, ಭಜನೆ, ದೇವರ ಮೇಲೆ ಪದ ಹೇಳುತ್ತಾ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ.

## ಡಿಂಕನಹಳ್ಳಿ

ಡಿಂಕನಹಳ್ಳಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೪೦ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೮೭೬.೧೦ ಹೆಕ್ಟೇರ್. ಇದೊಂದು ಕಂದಾಯ ಗ್ರಾಮ. ಇದು ವ್ಯಕ್ತಿ ಹೆಸರಿನ ಗ್ರಾಮವಾಗಿದೆ. ಬಯಲು ನಾಡಾಗಿದೆ. ಕೆಂಪು ಮಿಶ್ರಿತ ಮರಳು ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ೮೦೪ ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಹಳ್ಳವಿದ್ದು ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಲಿಂಗಾಯಿತ ಸಮುದಾಯವೇ ಪ್ರಧಾನವಾಗಿದ್ದು ಕುರುಬ ಮತ್ತು ಲಂಬಾಣಿ ಕಿರು ಸಮುದಾಯಗಳಾಗಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೮೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೩೯೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೩೧ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೧೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಟೆಂಪೋ, ಕಾರು ಮತ್ತು ದ್ವಿಚಕ್ರ ವಾಹನಗಳಿವೆ. ಖಾಸಗಿ ಬಸ್ಸು, ಆಟೋರಿಕ್ಷಾ, ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಕೃಷಿ, ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಪ್ರಭಾಕರ್ ಮತ್ತು ಆನಂದ್ ಶಿಕ್ಷಣ ಇಲಾಖೆಯಲ್ಲಿ ನೌಕರಿಯಲ್ಲಿದ್ದಾರೆ. ಆಧುನಿಕ ಡೈರಿಯ ಸೌಲಭ್ಯವಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಯಳನಡು ತಾಲ್ಲೂಕು ಪಂಚಾಯ್ತಿ ಹಾಗೂ ಕೋರಗೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೪ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೭೬% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಜಿಲ್ಲಾ ಪಂಚಾಯ್ತಿ ಮುಖ್ಯ ರಸ್ತೆ ಮತ್ತು ಕಚ್ಚಾ ರಸ್ತೆಯ ಸೌಲಭ್ಯವಿದೆ.

ಆಂಜನೇಯ ಮತ್ತು ಕಣಿವೆ ಮಾರಮ್ಮ ದೇವಿಯ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತೀರ್ಥಪುರ

ತೀರ್ಥಪುರ ಒಂದು ಕಂದಾಯ ಗ್ರಾಮ. ಗ್ರಾಮ ಪಂಚಾಯ್ತಿಯ ಕೇಂದ್ರಸ್ಥಾನವಾಗಿದೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೧೬ ಕಿಮೀ ಅಂತರದಲ್ಲಿದೆ. ಸಮೀಪವಿರುವ ತೀರ್ಥರಾಮೇಶ್ವರ ವಜ್ರದಲ್ಲಿ ನೀರು ತೀರ್ಥದೋಪಾದಿ ಬರುವುದರಿಂದ ಈ ಗ್ರಾಮಕ್ಕೆ ತೀರ್ಥಪುರ ಎಂಬ ಹೆಸರು ಬಂದಿದೆ. ಭೌಗೋಳಿಕ ವಿಸ್ತೀರ್ಣ ೬೪೮.೧೭ ಹೆಕ್ಟೇರ್. ಹೊಂಬಳಘಟ್ಟ ಎಂಬ ಬೇಚರಕ್ ಗ್ರಾಮವೂ ಇದಕ್ಕೆ ಸೇರಿದೆ. ಇತ್ತೀಚೆಗೆ ತೀರ್ಥಪುರ ಎ.ಕೆ. ಕಾಲೋನಿ, ತೀರ್ಥಪುರ ಜನತಾ ಕಾಲೋನಿಗಳು ಸೇರ್ಪಡೆಯಾಗಿವೆ. ಬಯಲುನಾಡು. ಬಿಳಿ–ಕಪ್ಪು ಕಲ್ಲು, ಬಿಳಿ–ಕೆಂಪು ಮಣ್ಣು ಕಂಡುಬರುತ್ತದೆ. ಅಬ್ಬಿಗೆಗುಡ್ಡ ಅಥವಾ ಮೂಡಲಗುಡ್ಡ ಎಂದು ಕರೆಯುವ ಗುಡ್ಡವು ಪೂರ್ವದಿಕ್ಕಿನಲ್ಲಿದೆ. ಇಲ್ಲಿ ಸಾಮಾಜಿಕ ಅರಣ್ಯವೂ ಇದೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಸಮೀಪ ಕಾಟಿಹಳ್ಳ ಹಾಗೂ ಗುಡ್ಡದಹಳ್ಳ ಎಂಬೆರಡು ಹಳ್ಳಗಳು ಹರಿಯುತ್ತವೆ. ಕಾಟಿಹಳ್ಳವು ಗುಡ್ಡಗಳ ಸಾಲಿನಿಂದ, ಮದನಮಡು ಕೆರೆಗೆ ಹಾಗೂ ಗುಡ್ಡದಹಳ್ಳ ಕೂಡ ಗುಡ್ಡಗಳ ಮತ್ತೊಂದು ದಿಕ್ಕಿನಿಂದ ಮದನಮಡು ಕೆರೆಗೆ ಹರಿದುಹೋಗುತ್ತದೆ. ಚಿಕ್ಕ ಕಟ್ಟೆಯಿದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಲಿಂಗಾಯಿತರು ದೊಡ್ಡ ಸಮುದಾಯವಾಗಿದ್ದು ನಾಯಕರು, ಕುರುಬರು, ಮುಸ್ಲಿಮರು, ಬ್ರಾಹ್ಮಣರು, ಶ್ರೀವೈಷ್ಣವರು, ದಾಸರು ಸಣ್ಣ ಸಮುದಾಯದವರಾಗಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೫೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೧೮೪ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೧೦ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೮೨ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೮೦ ಕುಟುಂಬಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ,

ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಅಡಿಕೆ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಸಿಕಲ್, ಕಾರುಗಳಿವೆ. ಗ್ರಾಮಸಡಕ್ ಚರಂಡಿ ವ್ಯವಸ್ಥೆ, ರಸ್ತೆ ಇದೆ. ಕೆ.ಎಂ.ಎಫ್‌ನ ನಂದಿನಿ ಡೈರಿಯಿದೆ. ಶಿಕ್ಷಣ ಇಲಾಖೆ, ವೈದ್ಯಕೀಯ ಇಲಾಖೆ, ಲೋಕೋಪಯೋಗಿ ಇಲಾಖೆಗಳಲ್ಲಿ ಸರ್ಕಾರಿ ಹುದ್ದೆ ಪಡೆದವರಿದ್ದಾರೆ. ಕೆಲವರು ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ದುಡಿಮೆ ಮಾಡುತ್ತಿದ್ದಾರೆ. ಬಡಗಿ, ಕಮ್ಮಾರರು ಇದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಮಾಂಸಾಹಾರ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತೀರ್ಥಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ, ಹಾಲು ಉತ್ಪಾದಕರ ಮಹಿಳಾ ಸಂಘಗಳು, ಮಾರಮ್ಮ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಅಂಚೆ ಕಛೇರಿಯಿದೆ. ಚಿಕ್ಕನಾಯಕನಹಳ್ಳಿ, ಚೇಳೂರು, ತುಮಕೂರು ಜಿಲ್ಲಾ ಪಂಚಾಯ್ತಿ ಮುಖ್ಯ ರಸ್ತೆ, ಬಸ್ ಸಂಚಾರವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಮಾಧ್ಯಮಿಕ ಪಾಠಶಾಲೆ, ಸರ್ಕಾರಿ ಪ್ರೌಢಶಾಲೆಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೧% ರಷ್ಟಿದೆ. ಕಾತ್ರಿಕೆಹಾಳ್‌ನಲ್ಲಿ ಸರ್ಕಾರಿ ಕಿರಿಯ ಕಾಲೇಜು ಇದೆ. ಪಂಚಾಯ್ತಿ ವತಿಯಿಂದ ಗ್ರಂಥಾಲಯವನ್ನು ಸ್ಥಾಪಿಸಲಾಗಿದೆ. ೯೨೫ ವಿವಿಧ ಪುಸ್ತಕಗಳಿವೆ. ಆಟದ ಮೈದಾನವಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೨ ಚಿಕ್ಕ ಹೋಟೆಲ್‌ಗಳು, ನಾಲ್ಕು ಚಿಕ್ಕ ಅಂಗಡಗಳು ಇವೆ. ಸಮೀಪದಲ್ಲಿರುವ ವಜ್ರ ಎಂಬಲ್ಲಿ ಶಾಸನ ಕಲ್ಲು ಇದೆ.

ದುರ್ಗಮ್ಮದೇವಿ, ಮುತ್ತುರಾಯಪ್ಪ, ರಾಮಪ್ಪ ದೇವಾಲಯಗಳಿವೆ. ಯರೇಕಟ್ಟೆ ರಾಮಪುರದಮ್ಮನಿಗೆ ಆರತಿ ಅರ್ಪಿಸುವುದು ಈ ಗ್ರಾಮದವರ ರೂಢಿಯಾಗಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕನ್ನಡದ ಮೇರು ಸಾಹಿತಿ ಭಾರತೀಯ ಕಾವ್ಯ ಮೀಮಾಂಸೆ ಕೃತಿಯ ಕರ್ತೃ ತೀ.ನಂ. ಶ್ರೀಕಂಠಯ್ಯ ಇದೇ ಗ್ರಾಮದವರು. ಇವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು. ಕನ್ನಡದ ಆಚಾರ್ಯ ಪುರುಷರಲ್ಲಿ ಒಬ್ಬರು. ಡಾ. ತೀ.ನಂ. ಶಂಕರನಾರಾಯಣ, ಕುವೆಂಪು ವಿಶ್ವವಿದ್ಯಾನಿಲಯದ ಕನ್ನಡ ಭಾರತಿಯಲ್ಲಿ ನಿರ್ದೇಶಕರು, ಜಾನಪದ ಸಾಹಿತ್ಯ ಮೀಮಾಂಸಕರು. ಕಾಡುಗೊಲ್ಲರ ಸಂಸ್ಕೃತಿ ಕುರಿತು ಕನ್ನಡದಲ್ಲಿ ಪ್ರಥಮ ಸಂಶೋಧನೆ ನಡೆಸಿದ ಹಿರಿಮೆ ಇವರದು. ಜುಂಜಪ್ಪ ಮಹಾಕಾವ್ಯವನ್ನು ಮೂಲ ಸೊಗಡಿನಲ್ಲಿಯೇ ಸಂಶೋಧನೆಯ ನೆಲೆಯಲ್ಲಿ ಸಂಪಾದಿಸಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಪ್ರಕಟಿಸಿದೆ. ಫಿನ್‌ಲ್ಯಾಂಡ್ ಮೊದಲಾದ ದೇಶಗಳಲ್ಲೂ ಇವರು ಪ್ರವಾಸ, ಅಧ್ಯಯನ, ಉಪನ್ಯಾಸ ನೀಡಿರುವುದು ಇವರ ವಿಶೇಷ. ತೀನಂಶ್ರೀ ಅವರ ಮಗ ನಾಗಭೂಷಣ ಸಾಂಸ್ಕೃತಿಕ ಚಿಂತಕ, ಸಂಶೋಧಕರೂ ಹೌದು. ತೀರ್ಥಪುರದಲ್ಲಿ ತೀನಂಶ್ರೀ ಮಿತ್ರಮಂಡಳಿ ಎಂಬ ಸಾಂಸ್ಕೃತಿಕ ಸಂಘವಿದ್ದು ಕನ್ನಡಪರ ಚಟುವಟಿಕೆ ನಡೆಯುತ್ತಿವೆ.

## ತೀರ್ಥಪುರ ಎ.ಕೆ. ಕಾಲೋನಿ

ತೀರ್ಥಪುರ ಚಿಕ್ಕನಾಯಕನಹಳ್ಳಿ ತಾಲ್ಲೂಕು ಶೆಟ್ಟಿಕೆರೆ ಹೋಬಳಿಗೆ ಸೇರಿದ ಕಂದಾಯ ಗ್ರಾಮ. ಇದಕ್ಕೆ ಹೊಂದಿಕೊಂಡಂತೆ ಹೊರವಲಯದಲ್ಲಿ ಆದಿಕರ್ನಾಟಕ ಜನಾಂಗದ ೩೪ ಮನೆಗಳಿದ್ದು ಅದನ್ನು ತೀರ್ಥಪುರ ಮಾದಿಗರಹಟ್ಟಿ ಎಂದು ಕರೆಯುತ್ತಾರೆ. ಇಲ್ಲಿನ ಜನಸಂಖ್ಯೆ ೧೯೮ ಇದೆ. ಹೆಂಚಿನ, ಶೀಟಿನ, ಮಾಳಿಗೆ ಸ್ವರೂಪದ ಮನೆಗಳಿದ್ದು ಇವು ಸರ್ಕಾರದ ವಸತಿ ಯೋಜನೆಯಾದ ಆಶ್ರಯ, ಜನತಾ, ಅಂಬೇಡ್ಕರ್ ಯೋಜನೆಯ ಫಲಾನುಭವಿಗಳಿದ್ದಾರೆ. ಕುಡಿಯಲು ತೀರ್ಥಪುರ ಗ್ರಾಮಪಂಚಾಯ್ತಿಯಿಂದ ಕೊಳಾಯಿಗಳ ಮೂಲಕ ನೀರನ್ನು ಪೂರೈಸಲಾಗುತ್ತಿದೆ. ೨ ಸಿಸ್ಟನ್‌ಗಳಿವೆ. ಕೃಷಿ ಇಲ್ಲಿನ ಪ್ರಮುಖ ಉದ್ಯೋಗ. ರಾಗಿ, ಹೆಸರು, ಶೇಂಗಾ, ಹುರುಳಿ ಬೆಳೆಯುತ್ತಾರೆ. ಹುಣಸೆಹಣ್ಣು, ಮುತ್ತುಗದ ಎಲೆ, ಹಂಚಿಕಡ್ಡಿ ಸಂಗ್ರಹ, ಹೊಂಗೆ ಬೀಜ

ಸಂಗ್ರಹದಂಥ ಕಸುಬನ್ನು ಮಾಡುತ್ತಾರೆ. ಕೃಷಿ ಕಾರ್ಮಿಕರಿದ್ದಾರೆ. ರಾಗಿಮುದ್ದೆ ಮುಖ್ಯಆಹಾರ. ಅನ್ನ, ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನಗಳು. ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗ್ರಾಮದಲ್ಲಿ ಎತ್ತಿನ ಬಂಡಿಗಳಿವೆ, ದ್ವಿಚಕ್ರ ವಾಹನಗಳಿವೆ. ಶಿಕ್ಷಣ, ಪಡಿತರ ವಿಚಾರಕ್ಕೆ ತೀರ್ಥಪುರ ಮುಖ್ಯ ಗ್ರಾಮಕ್ಕೆ ಹೋಗುತ್ತಾರೆ. ಸಂಧ್ಯಾ ಸುರಕ್ಷೆ, ವಿಧವಾ ವೇತನ, ಅಂಗವಿಕಲ ವೇತನದ ಫಲಾನುಭವಿಗಳಿದ್ದಾರೆ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿ ತೆರೆಸಿ ಕೃಷಿ ಕಸುಬನ್ನು ಮುಂದುವರಿಸಿದ್ದಾರೆ. ಶಿಕ್ಷಣ, ಸಾರಿಗೆ, ಕಂದಾಯ, ಅರಣ್ಯ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವವರು, ಡ್ರೈವರ್ ಗಳು ಇದ್ದಾರೆ.

ಕಂದಿಕೆರೆ ಜಿಲ್ಲಾ ಪಂಚಾಯ್ತಿ ತೀರ್ಥಪುರ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕೇಂದ್ರವೂ ಆಗಿದ್ದು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಶೇ.೬೮ ರಷ್ಟು ಸಾಕ್ಷರರಿದ್ದಾರೆ. ಮಾರಮ್ಮ, ರಾಂಪುರದಮ್ಮ ಸ್ತ್ರೀಶಕ್ತಿ ಸಂಘಗಳಿವೆ. ಅಂಬೇಡ್ಕರ್ ಸಂಘವಿದೆ. ಗ್ರಾಮದ ಹಾಲಿನ ಡೈರಿಗೆ ಈ ಬಡಾವಣೆಯಿಂದ ಹಾಲನ್ನು ಹಾಕಲಾಗುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಪ್ರತಿನಿಧಿ ಇದ್ದಾರೆ. ಮುಖ್ಯ ಗ್ರಾಮದಲ್ಲಿರುವ ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್ ಹಾಗೂ ಕೃಷಿ ಸಹಕಾರ ಸಂಘದ ಮೂಲಕ ಸಾಲ ಸೌಲಭ್ಯ ಪಡೆಯುತ್ತಿದ್ದಾರೆ. ೨ ಟೀ ಅಂಗಡಿ, ೨ ಗೂಡಂಗಡಿಗಳಿವೆ. ದುರ್ಗಮ್ಮ ದೇವಾಲಯವಿದ್ದು ವಾರ್ಷಿಕವಾಗಿ ಆರತಿ, ಬಾನ, ಬಲಿ, ಹರಕೆ ಸಂಪ್ರದಾಯವಿದೆ. ತೀರ್ಥಪುರದಿಂದ ಅಂಚೆ ಸಂಪರ್ಕವಿದೆ. ಚಿಕ್ಕನಾಯಕನಹಳ್ಳಿ, ಹಾಗಲವಾಡಿ, ಚೇಳೂರಿಗೆ ಬಸ್, ರಸ್ತೆ ಸಂಪರ್ಕವಿದೆ.

ಗ್ರಾಮದ ಶಿವಮ್ಮ ಮತ್ತು ಲಕ್ಕಮ್ಮ ಎಂಬುವರು ಸೋಬಾನೆ ಹಾಗೂ ಯರೇಕಟ್ಟೆ ರಾಂಪುರದಮ್ಮನ ಬಗೆಗೆ ಪದ ಹಾಡುತ್ತಾರೆ.

## ತೀರ್ಥಪುರ ಜನತಾ ಹೌಸ್ ಕಾಲೋನಿ

ತೀರ್ಥಪುರ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಹಾಗಲವಾಡಿ ಮಾರ್ಗದಲ್ಲಿ ೧೬ ಕಿಮೀ ದೂರದಲ್ಲಿದೆ. ಇದೊಂದು ಪ್ರಾಚೀನ ಗ್ರಾಮವಾಗಿದ್ದು ಬಹು ಸಂಸ್ಕೃತಿಯ ಗ್ರಾಮ. ಪಂಚಾಯ್ತಿ ಕೇಂದ್ರವೂ ಆಗಿದ್ದು ನಾಡಿನ ಹಿರಿಯ ಸಾಹಿತಿ ತೀನಂಶ್ರೀ ಅವರ ಜನ್ಮಸ್ಥಳ ಎಂಬುದು ವಿಶೇಷ. ಈ ಹಳೆಯ ಗ್ರಾಮ ವಿಸ್ತಾರವಾಗಿ ಬೆಳೆದಿದೆ. ಹೀಗೆ ಬೆಳೆದು ಪ್ರತ್ಯೇಕವಾಗಿ ೬೮ ಮನೆಗಳು ರಚನೆಗೊಂಡಿವೆ. ಈ ಮನೆಗಳು ಸರ್ಕಾರದ ಜನತಾ ಯೋಜನೆಯ ಅಡಿಯಲ್ಲಿ ರಚಿಸಿಕೊಂಡಿದ್ದರಿಂಗಾದಿ ಜನತಾ ಹೌಸ್ ಕಾಲೋನಿ ಎಂದು ಕರೆಯುತ್ತಾರೆ. ಈ ಮನೆಗಳು ಹೆಂಚಿನ, ಶೀಟಿನ ಸ್ವರೂಪದಲ್ಲಿದ್ದು ಇಲ್ಲಿ ಲಿಂಗಾಯಿತರು, ಮುಸ್ಲಿಂ, ಆದಿಕರ್ನಾಟಕರು, ನಾಯಕ, ಕ್ಷೌರಿಕ ಸಮುದಾಯದವರು ವಾಸಿಸುತ್ತಿದ್ದಾರೆ. ೨೧೩ ಜನಸಂಖ್ಯೆ ಹೊಂದಿದ್ದಾರೆ. ಪಡಿತರ, ಶಿಕ್ಷಣ, ಸಾರಿಗೆ ಎಲ್ಲ ಸೌಲಭ್ಯವನ್ನು ಮುಖ್ಯ ಗ್ರಾಮ ತೀರ್ಥಪುರದಿಂದಲೇ ಪಡೆದುಕೊಳ್ಳುತ್ತಿದ್ದಾರೆ. ಒಂದು ಅಂಗನವಾಡಿ ಕೇಂದ್ರವಿದೆ. ಕೃಷಿ, ವ್ಯಾಪಾರ ಇಲ್ಲಿನ ಮುಖ್ಯ ಕಾಯಕವಾಗಿದೆ. ರಾಗಿ, ತೊಗರಿ, ಹುರುಳಿ ಬೆಳೆಯುತ್ತಾರೆ. ಹಸು, ಎಮ್ಮೆ, ಕುರಿ–ಮೇಕೆ ಸಾಕುಪ್ರಾಣಿಗಳಾಗಿವೆ. ಹುಣಸೆಹಣ್ಣು, ಗರಿಕಡ್ಡಿ, ಹೊಂಗೆಬೀಜ, ತೆಂಗು ವ್ಯಾಪಾರಿ ಸರಕಾಗಿವೆ. ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಿವೆ. ಒಂದು ಅಂಗನವಾಡಿ ಕೇಂದ್ರರಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲಾಗುತ್ತಿದೆ.

ಕಂದಿಕೆರೆ ಜಿಲ್ಲಾ ಪಂಚಾಯ್ತಿ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ಹಾಗೂ ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ತೀರ್ಥಪುರ ಗ್ರಾಮ ಪಂಚಾಯ್ತಿಗೆ ಸೇರಿದ್ದು ಒಬ್ಬರು ಸದಸ್ಯರಿದ್ದಾರೆ. ಗ್ರಾಮದ ಸಾಕ್ಷರತೆ ೭೪.೬ ರಷ್ಟಿದೆ. ೬ ಜನ ಸರ್ಕಾರಿ ನೌಕರರಿದ್ದಾರೆ. ಸಾರಿಗೆ, ಅರಣ್ಯ ಹಾಗೂ ಆರೋಗ್ ಇಲಾಖೆಗೆ ಸೇರಿದ ಜನರಿದ್ದಾರೆ. ಸಮುದಾಯ ಸೌಲಭ್ಯಗಳು, ವಿಧವಾ ವೇತನ, ವೃದ್ಧಾಪ್ಯ ವೇತನದ ಫಲಾನುಭವಿಗಳಿದ್ದಾರೆ. ಎರೆಕಟ್ಟೆ ರಾಂಪುರದಮ್ಮನ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಗ್ರಾಮದ ದುರ್ಗಮ್ಮ, ಮುತ್ತುರಾಯಪ್ಪ, ರಾಮಪ್ಪ ದೇವರ ಉತ್ಸವದಲ್ಲಿ ಇವರೆಲ್ಲರೂ ಭಾಗವಹಿಸುತ್ತಾರೆ. ೧೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಪಶುಪಾಲನೆ ಇದ್ದು ಹಾಲು ಸಂಗ್ರಹಿಸಿ ತೀರ್ಥಪುರದ ಹಾಲಿನ ಡೈರಿಗೆ ಹಾಕಲಾಗುತ್ತಿದೆ. ೩ ಸ್ತ್ರೀಶಕ್ತಿ ಸಂಘಗಳಿದ್ದು ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಗಣಪತಿ ಪ್ರತಿಷ್ಠಾಪನೆ, ಉತ್ಸವ ಈ ಬಡಾವಣೆಯ ವಿಶೇಷವಾಗಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯ ವೇತನದ ೧೪ ಫಲಾನುಭವಿಗಳಿದ್ದು ಚಿಕ್ಕನಾಯಕನಹಳ್ಳಿ ಹಾಗಲವಾಡಿ ಮಾರ್ಗವಾಗಿ ರಸ್ತೆ ಸಂಪರ್ಕವಿದೆ. ಖಾಸಗಿ ಬಸ್‌ಗಳು ಓಡಾಡುತ್ತವೆ. ಗೌರಿ, ದೀಪಾವಳಿ, ದಸರಾ, ಯುಗಾದಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಿಗಳನಹಳ್ಳಿ

ತಿಗಳನಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೧ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೪೧೨ ಹೆಕ್ಟೇರ್ ಆಗಿದ್ದು ತಿಗಳನಹಳ್ಳಿಪಾಳ್ಯ ಎಂಬ ಮಜರೆ ಗ್ರಾಮವಿದೆ. ಒಂದು ಕಾಲದಲ್ಲಿ ತಿಗಳ ಸಮುದಾಯದ ಜನರು ಹೆಚ್ಚು ಸಂಖ್ಯೆಯಲ್ಲಿದ್ದ ಕಾರಣ ತಿಗಳನಹಳ್ಳಿ ಎಂಬ ಹೆಸರು ಬಂದಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೨ ತೆರೆದ ಬಾವಿಗಳಿದ್ದು ಬತ್ತಿಹೋಗಿ ೪೦೦–೫೦೦ ಅಡಿ ಆಳದ ೨೦ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೪ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಲಿಂಗಾಯಿತ ಸಮುದಾಯವು ಪ್ರಧಾನವಾಗಿದ್ದು ಮಡಿವಾಳ ಸಮುದಾಯ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೫೯ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೯೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಆಧುನಿಕ ಡೈರಿ ವ್ಯವಸ್ಥೆಯಿದೆ. ಹಾಲು ಉತ್ಪಾದಕರ ಸಹಕಾರ ಸಂಘವು ಪ್ರತಿದಿನ ೨೦೦ ಲೀ ಹಾಲು ಸಂಗ್ರಹಿಸುತ್ತಿದ್ದು ಆರ್ಥಿಕ ಚೇತರಿಕೆಗೆ ಕಾರಣವಾಗಿದೆ.

ಕೃಷಿ ಪ್ರಧಾನವಾದ ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಅಡಿಕೆ, ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕಾರು, ದ್ವಿಚಕ್ರ ವಾಹನಗಳಿವೆ. ಕೃಷಿ ಕೂಲಿ ಕಾರ್ಮಿಕರು, ಕಟ್ಟಡ ಕೆಲಸಗಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇಬ್ಬರು ಸರ್ಕಾರಿ ನೌಕರರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಜೆ.ಸಿ. ಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೨ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೫೯% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೩ ಸಣ್ಣ ಚಿಲ್ಲರೆ ಅಂಗಡಿಗಳಿವೆ.

ಕಲ್ಲೇಶ್ವರಸ್ವಾಮಿ ದೇವಾಲಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಾಡಾನಾಯ್ಕನ ತಾಂಡ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಬರಗೂರು ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೧ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೯೮.೦೮ ಹೆಕ್ಟೇರ್. ಬಯಲು ನಾಡಾಗಿದ್ದು ಬಿಳಿಕಲ್ಲು, ಕೆಂಪು ಮಣ್ಣನ್ನು ಹೊಂದಿದೆ. ಭೀಮನಾಯ್ಕನ ತಾಂಡ್ಯ ಈ ಗ್ರಾಮಕ್ಕೆ ಸೇರ್ಪಡೆಗೊಂಡ ಉಪಗ್ರಾಮವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೧ ಹಳ್ಳ, ೨ ಕುಂಟೆಗಳಿವೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ೨೦ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ೪ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೪ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಲಂಬಾಣಿ (ಬಂಜಾರ) ಜನಾಂಗ ಮಾತ್ರ ವಾಸಿಸುತ್ತಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮತ್ತು ಲಂಬಾಣಿ ಭಾಷೆ ಮಾತನಾಡುತ್ತಾರೆ. ಒಟ್ಟು ೬೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೬೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೧ ಕಾಂಕ್ರೀಟ್, ೬ ಕಲ್ಲಿನ, ೨ ಮಣ್ಣಿನ, ೧ ಗುಡಿಸಲು, ೫೦ ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ೬ ಜನತಾ, ೧೦ ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ೪ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೪ ವಸತಿ ರಹಿತ ಹಾಗೂ ೨ ನಿವೇಶನ ರಹಿತ ಕುಟುಂಬಗಳಿವೆ. ಎಲ್ಲ ಮನೆಗಳು ಶೌಚಾಲಯ ರಹಿತವಾಗಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕೃಷಿಕರು, ಕೃಷಿ ಕೂಲಿಗಾರರು, ದಿನಗೂಲಿ ಕಾರ್ಮಿಕರು ಇದ್ದಾರೆ. ೧ ಹಿಟ್ಟಿನ ಗಿರಣಿಯಿದೆ. ಇಬ್ಬರು ಶಾಲಾ ಶಿಕ್ಷಕರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಬರಗೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಹಾಲು ಉತ್ಪಾದಕರ ಸಹಕಾರ ಸಂಘ, ಕರಿಯಮ್ಮ ದೇವಿ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಒಂದು ಕಚ್ಚಾ ರಸ್ತೆಯಿದ್ದು ಖಾಸಗಿ ವಾಹನಗಳು ಸಂಚರಿಸುತ್ತವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೫೬% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೪ ದಿನಸಿ ಅಂಗಡಿಗಳಿವೆ.

ಕರಿಯಮ್ಮ, ದುರ್ಗಮ್ಮ, ಹಟ್ಟಿ ಲಕ್ಕಮ್ಮ ದೇವಾಲಯಗಳಿವೆ. ಪ್ರತಿ ವರ್ಷ ದುರ್ಗಮ್ಮನ ಜಾತ್ರೆಯನ್ನು ಆಚರಿಸುತ್ತಾರೆ. ಹರಕೆ, ಓಕುಳಿ ಸೇವೆಗಳಿವೆ. ಇವರು ಸೇವಾಲಾಲ್ ಜಾತ್ರೆ, ಭೀಮಸತಿ ಹಬ್ಬ,

ದೀಪಾವಳಿ, ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಲಕ್ಷ್ಮೀಬಾಯಿ, ಮೀರಾಬಾಯಿ, ರಂಗಮ್ಮ ಇವರು ಲಂಬಾಣಿ ನೃತ್ಯ ಕಲಾವಿದೆಯರು. ತರಬೇತಿಯನ್ನೂ ನೀಡುತ್ತಿದ್ದಾರೆ. ರೈತಸಂಘ, ಸೇವಾಲಾಲ್ ಧಾರ್ಮಿಕ ಸಂಘಗಳಿವೆ.

## ತೊನ್ನಲಾಪುರ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೯ ಕಿಮೀ ಅಂತರದಲ್ಲಿದೆ. ಇದು ಶ್ಯಾವಿಗೆಹಳ್ಳಿಯ ಮಜರೆ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ಶ್ಯಾವಿಗೆಹಳ್ಳಿಯ ೨೫೪.೦೫ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಹೊನ್ನಲಾಪುರ ಎಂಬುದು ತೊನ್ನಲಾಪುರ ಆಗಿದೆ ಎಂಬುದು ಹಿರಿಯ ಸಿದ್ದಯ್ಯ ಅವರ ಅಭಿಪ್ರಾಯವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಈಡಿಗರು, ಆದಿಕರ್ನಾಟಕ, ಉಪ್ಪಾರ ಜನಾಂಗದವರಿದ್ದು ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೨೭ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೧೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಪಡಿತರ, ಶಿಕ್ಷಣಕ್ಕೆ ಶ್ಯಾವಿಗೆಹಳ್ಳಿಗೆ ಹೋಗುತ್ತಾರೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಮಾಳಿಗೆಹಳ್ಳಿಯಿಂದ ಅಂಚೆ ವ್ಯವಸ್ಥೆ ಇದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಶಿಕ್ಷಣ, ಸಾರಿಗೆ ಇಲಾಖೆಯಲ್ಲಿ ಇಬ್ಬರು ನೌಕರರಿದ್ದಾರೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಶ್ಯಾವಿಗೆಹಳ್ಳಿಯ ಆಂಜನೇಯ ದೇವಾಲಯಕ್ಕೆ ನಡೆದುಕೊಳ್ಳುತ್ತಾರೆ. ಪರೇವು, ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತರೇದಹಳ್ಳಿ

ತರೇದಹಳ್ಳಿ ಗ್ರಾಮವು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೬ ಕಿಮೀ ಅಂತರದಲ್ಲಿರುವ ಕಂದಾಯ ಗ್ರಾಮವಾಗಿದೆ. ಗ್ರಾಮವು ಚದುರಿದಂತಿದೆ. ಭೌಗೋಳಿಕ ವಿಸ್ತೀರ್ಣ ೧೩೦.೧೨ ಹೆಕ್ಟೇರ್. ಬಯಲುನಾಡು. ಪಶು

ಸಂಸ್ಕೃತಿ ತರು (ಗೋವು) ಮೂಲದಿಂದ ಈ ಹೆಸರು ಬಂದಿದೆ. ೧೨೫.೧೨ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಕೆಂಪು ಮಿಶ್ರಿತ ಬಿಳಿ ಭೂಪ್ರದೇಶವನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಬೆರಳೆಣಿಕೆಯಷ್ಟು ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಲಂಬಾಣಿ ಜನಾಂಗ ಮಾತ್ರ ಇದೆ. ಪ್ರಮುಖ ಭಾಷೆಯಾಗಿ ಕನ್ನಡ ಮತ್ತು ಲಂಬಾಣಿ ಮಾತನಾಡುತ್ತಾರೆ. ಒಟ್ಟು ೬ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೩೦ ಜನಸಂಖ್ಯೆ ಹೊಂದಿದೆ. ಹೆಂಚಿನ ಮನೆಗಳಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಟೆಂಪೋ ಮತ್ತು ದ್ವಿಚಕ್ರ ವಾಹನಗಳಿವೆ. ಕೃಷಿ ಕೂಲಿ ಕಾರ್ಮಿಕರಿದ್ದಾರೆ. ಖಾಸಗಿ ಬಸ್ಸು, ಆಟೋರಿಕ್ಷಾ, ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಸಾರಿಗೆ, ಶಿಕ್ಷಣ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ಬರಕನಹಾಳ್ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಸಾಕ್ಷರತೆ ೫೯% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೧೨ ಫಲಾನುಭವಿಗಳಿದ್ದಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಿಮ್ಲಾಪುರ

ತಿಮ್ಲಾಪುರ ಗ್ರಾಮವು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೦ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೩೩೩.೨೧೫ ಹೆಕ್ಟೇರ್. ಜೋಡಿ ತಿರುಮಲಾಪುರ ಎಂಬ ಪ್ರಾಚೀನ ಹೆಸರಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಬಯಲು ನಾಡಾಗಿದೆ. ತಿಮ್ಮಪ್ಪನ ಹೆಸರಿನಲ್ಲಿ ಗ್ರಾಮ ರಚನೆಯಾಗಿ ನಂತರ ತಿಮ್ಮಲಾಪುರ ಎಂದಾಗಿದೆ. ಹೊಸಹಳ್ಳಿ, ಹೊಸಹಳ್ಳಿ ಪಾಳ್ಯ ೨ ಮಜರೆ ಗ್ರಾಮಗಳಿವೆ. ಮರಳು ಮಿಶ್ರಿತ ಕೆಂಪು ಚೌಳು ಮಣ್ಣಿನ ಲಕ್ಷಣವಿದ್ದು ವ್ಯವಹಾಯಕ್ಕೆ ಯೋಗ್ಯವಾಗಿದೆ. ೩೦೧೪ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ದೊಡ್ಡಕೆರೆ, ಸಾವಣಕೆರೆ, ದೊಡ್ಡಿಕೆರೆ ಹಾಗೂ ಕೆರೆಗೆ ಸೇರುವ ಚಿಕ್ಕಪುಟ್ಟ ಹಳ್ಳಗಳನ್ನು ಕಾಣಬಹುದು. ಬೆರಳೆಣಿಕೆಯಷ್ಟು ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ. ೨೭ ವಿದ್ಯುತ್ ಕಂಬಗಳಿವೆ.

ಬಲಿಜ ಸಮುದಾಯವೇ ಪ್ರಧಾನವಾಗಿದ್ದು ಮಡಿವಾಳ, ಬೆಸ್ತರು ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೫೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೬೪೭ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಗುಡಿಸಲು ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೩೬ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೫೦ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕಾರು, ಬೈಕುಗಳಿವೆ. ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಡೈರಿ ವ್ಯವಸ್ಥೆಯಿದೆ. ಶಿಕ್ಷಣ ಇಲಾಖೆಯಲ್ಲಿ ಹಾಗೂ ಐಟಿ-ಬಿಟಿ ಉದ್ಯೋಗಸ್ಥರನ್ನು ಕಾಣಬಹುದು. ರಾಗಿಮಿಲ್ಲು, ಬಟ್ಟೆ ಹೊಲಿಯುವವರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಿಮ್ಲಾಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಅಂಜನಾ, ಮಹಾಲಕ್ಷ್ಮಿ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೭೪% ರಷ್ಟಿದೆ. ಗ್ರಂಥಾಲಯ ಕೇಂದ್ರವಿದ್ದು ೫೦೦ ಪುಸ್ತಕಗಳನ್ನು ಒಳಗೊಂಡಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೪೩ ಫಲಾನುಭವಿಗಳಿದ್ದಾರೆ. ಒಂದು ಸ್ಮಶಾನವಿದೆ. ವೀರಗಲ್ಲು, ದಾನಶಾಸನಗಳಿವೆ. ಕೋಟೆ, ಪ್ರಾಚೀನ ಬಾವಿಗಳಿವೆ. ಜಿಲ್ಲಾ ಮುಖ್ಯ ರಸ್ತೆ ಹೊಂದಿದ್ದು ಖಾಸಗಿ ಬಸ್ಸು, ಆಟೋರಿಕ್ಷಾ ಸ್ವಂತ ವಾಹನಗಳು ಪ್ರಮುಖ ಸಾರಿಗೆ ಸಂಪರ್ಕವಾಗಿದೆ.

ಚಂದ್ರಮೌಳೇಶ್ವರ, ತಿರುಮಲ, ಗೋಪಾಲಕೃಷ್ಣ, ಈಶ್ವರ, ಕೊಲ್ಲಾಪುರ ಮಹಾಲಕ್ಷ್ಮಿ ಪ್ರಮುಖ ದೇವಾಲಯಗಳು. ಕೊಲ್ಲಾಪುರದಮ್ಮ ಜಾತ್ರೆ ತೇರು-ತೆಪ್ಪ, ಪಲ್ಲಕ್ಕಿ ಇಲ್ಲಿನ ವಿಶೇಷ ಆಕರ್ಷಣೆ. ಸಿಡಿ, ಓಕುಳಿ, ಬಲಿ ಚಾಲ್ತಿಯಲ್ಲಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಿಮ್ಮಪ್ಪನಹಟ್ಟಿ

ತಿಮ್ಮಪ್ಪನಹಟ್ಟಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೨ ಕಿಮೀ ಅಂತರದಲ್ಲಿದೆ. ತಿಮ್ಮಪ್ಪ ದೇವರ ಹೆಸರಲ್ಲಿ ಗ್ರಾಮ ರಚನೆಯಾಗಿದೆ. ಇದೊಂದು ಮಜರೆ

ಗ್ರಾಮವಾಗಿದ್ದು ಹೊಯ್ಸಳಕಟ್ಟೆ ಕಂದಾಯ ಗ್ರಾಮದ ವ್ಯಾಪ್ತಿಗೆ ಒಳಪಟ್ಟಿದೆ. ಬಯಲುನಾಡಿನ ಕೆಂಪು ಮಿಶ್ರಿತ ಮಣ್ಣು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಬೆರಳೆಣಿಕೆಯಷ್ಟು ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಗೊಲ್ಲ ಸಮುದಾಯ ಪ್ರಧಾನವಾಗಿದ್ದು ಪರಿಶಿಷ್ಟ ಜಾತಿಗೆ ಸೇರಿದ ಕೆಲವು ಕುಟುಂಬಗಳಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೯೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೫೧೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಗುಡಿಸಲು ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೧೯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೨ ಕುಟುಂಬಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಈರುಳ್ಳಿ, ತರಕಾರಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಹುಣಸೆಹಣ್ಣು ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೩ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಜಿಲ್ಲಾ ಪಂಚಾಯ್ತಿ ಮುಖ್ಯ ರಸ್ತೆ ಹಾಗೂ ಕಚ್ಚಾ ರಸ್ತೆಯ ಸಂಪರ್ಕವಿದ್ದು ಖಾಸಗಿ ಬಸ್ಸು, ಆಟೋರಿಕ್ಷಾ ಮತ್ತು ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೨% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಮ್ಮಡಿಹಳ್ಳಿ ಗೊಲ್ಲರಹಟ್ಟಿ

ತಮ್ಮಡಿಹಳ್ಳಿ ಗೊಲ್ಲರಹಟ್ಟಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೦ ಕಿಮೀ ಅಂತರದಲ್ಲಿದೆ. ತಮ್ಮಡಿಹಳ್ಳಿ ಗೊಲ್ಲರಹಟ್ಟಿ ಗ್ರಾಮವು ತಮ್ಮಡಿಹಳ್ಳಿ ಮಜರೆ ಗ್ರಾಮ ಹಾಗಾಗಿ ತಮ್ಮಡಿಹಳ್ಳಿ ಗೊಲ್ಲರಹಟ್ಟಿ ಎಂದು ಕರೆಯಲಾಗುವುದು. ಬಯಲು ನಾಡಾಗಿದೆ. ಮರಳು ಮಿಶ್ರಿತ ಬಿಳಿ ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಪೂರ್ವದಿಕ್ಕಿಗೆ ಅಕ್ಕಿಕಲ್ಲು ಗುಡ್ಡವಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ,

ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಹಳ್ಳವಿದೆ. ಗೌಡನಕಟ್ಟೆ ಕೆರೆ ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ೨ ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಗೊಲ್ಲ ಸಮುದಾಯ ಪ್ರಧಾನವಾಗಿದ್ದು ಪರಿಶಿಷ್ಟ ಜಾತಿ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೨೬೭ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೩೮೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ, ಗುಡಿಸಲು ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೧೨೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೧೩ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಎಳ್ಳು, ನವಣೆ, ಸಾವೆ ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಾರಿಗೆ, ಶಿಕ್ಷಣ ಇಲಾಖೆಯಲ್ಲಿ ಮಹಾಲಿಂಗಯ್ಯ ಕಾರ್ಯನಿರ್ವಹಿಸುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಯಳನಡು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಕರಿಯಮ್ಮ ದೇವಿ, ಚಿಕ್ಕಮ್ಮ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಜಿಲ್ಲಾ ರಸ್ತೆಯನ್ನು ಹೊಂದಿದ್ದು ಖಾಸಗಿ ಬಸ್ಸುಗಳು, ಆಟೋರಿಕ್ಷಾ ಮತ್ತು ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ.

ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಸರ್ಕಾರದ ವತಿಯಿಂದ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೩% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಕರಿಯಮ್ಮ, ರಾಮಪ್ಪ, ಕಾಟಮಲಿಂಗೇಶ್ವರ, ಚಿಕ್ಕಮ್ಮ, ಬೀರಪ್ಪ ಪ್ರಮುಖ ದೇವಾಲಯಗಳಾಗಿವೆ. ಕರಿಯಮ್ಮ ಜಾತ್ರೆ ತೇರು, ತೆಪ್ಪ ಉತ್ಸವ, ಸಿಡಿ, ಓಕುಳಿ, ಬಲಿ ಆಚರಣೆಯಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಮ್ಮಡಿಹಳ್ಳಿ ಎ.ಕೆ. ಕಾಲೋನಿ

ತಮ್ಮಡಿಹಳ್ಳಿ ಗ್ರಾಮಕ್ಕೆ ಹೊಂದಿಕೊಂಡಂತೆ ಪ್ರತ್ಯೇಕವಾಗಿರುವ ತಮ್ಮಡಿಹಳ್ಳಿ ಎ.ಕೆ. ಕಾಲೋನಿಯನ್ನು ಮಾದಿಗರಹಟ್ಟಿ ಎಂದು ಕರೆಯುತ್ತಾರೆ. ಮಾದಿಗ ಜನಾಂಗದ ಒಟ್ಟು ೩೬ ಮನೆಗಳಿದ್ದು ೧೪೫ ಜನಸಂಖ್ಯೆಯನ್ನು ಹೊಂದಿದೆ. ಹೆಂಚಿನ, ಶೀಟಿನ ಮಾಳಿಗೆ ಸ್ವರೂಪದ ಮನೆಗಳಿದ್ದು ಇವು ಸರ್ಕಾರದ ವಸತಿ ಯೋಜನೆಯಾದ ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆಯ ೧೦

ಫಲಾನುಭವಿಗಳಿದ್ದು ಕುಡಿಯಲು ತಮ್ಮಡಿಹಳ್ಳಿ ಗ್ರಾಮದ ಮೂಲಕ ಕೊಳಾಯಿಯಲ್ಲಿ ನೀರು ಪೂರೈಸಲಾಗುತ್ತದೆ. ಒಂದು ಸಿಸ್ಟನ್ ಇದೆ. ರಾಗಿ, ಭತ್ತ, ಹೆಸರು ಬೆಳೆಯುತ್ತಾರೆ. ತೆಂಗಿನ ತೋಟ ಇರುವವರು ತೆಂಗು ಬೆಳೆಯುತ್ತಾರೆ. ಎತ್ತಿನ ಗಾಡಿಯಿದೆ. ದ್ವಿಚಕ್ರ ವಾಹನ ಬಳಸುತ್ತಾರೆ. ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾರಿಗೆ, ಕಂದಾಯ, ಪೊಲೀಸ್ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಡ್ರೈವರ್‌ಗಳಿದ್ದಾರೆ. ಪಶುಪಾಲನೆ ಇದ್ದು ಒಂದು ಡೈರಿ ಮುಖ್ಯ ಗ್ರಾಮದಲ್ಲಿದೆ. ಅಲ್ಲಿಗೆ ಹಾಲನ್ನು ಹಾಕಲಾಗುತ್ತಿದೆ. ಸಮೀಪದಲ್ಲಿ ಇಟ್ಟಿಗೆ ಫ್ಯಾಕ್ಟರಿಯಿದೆ. ೨ ಸ್ತ್ರೀಶಕ್ತಿ ಕೇಂದ್ರಗಳಿದೆ. ಯಲ್ಲಮ್ಮ, ಕರಿಯಮ್ಮನ ಪೌಳಿಗಳಿವೆ. ಯಲ್ಲಮ್ಮನಿಗೆ ಆರತಿ ಮಾಡಿದರೆ ಕರಿಯಮ್ಮನಿಗೆ ಆರತಿ, ಬಾನ, ಬ್ಯಾಟೆಯ ಹರಕೆ ಸಂಪ್ರದಾಯವಿದೆ. ಬಾಯಿಬೀಗ, ಮಡೆ, ಬೇವಿನ ಸೀರೆ ಆಚರಣೆಗಳಿವೆ. ಕರಿಯಮ್ಮ ಜಾತ್ರೆಯಲ್ಲಿ ಕುಳವಾಡಿ ಸಂಪ್ರದಾಯದ ಪ್ರಕಾರ ಸಾಂಪ್ರದಾಯಿಕ ಪದ್ಧತಿಯಿದೆ. ತೆಪ್ಪೋತ್ಸವದಲ್ಲಿ ಈ ಬಡಾವಣೆಯವರ ಪಾತ್ರ ವಿಶೇಷವಾಗಿರುತ್ತದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನ, ಅಂಗವಿಕಲ ವೇತನದ ೧೪ ಫಲಾನುಭವಿಗಳಿದ್ದಾರೆ. ಉಳಿದಂತೆ ಯುಗಾದಿ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ಶಿಕ್ಷಣಕ್ಕೆ ತಮ್ಮಡಿಹಳ್ಳಿಗೆ ಹೋಗುತ್ತಾರೆ. ಸಾಕ್ಷರತೆ ೭೩% ರಷ್ಟಿದೆ.

## ತಿಮ್ಮನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಾಯ ಗ್ರಾಮ. ಇಲ್ಲಿ ಗ್ರಾಮಪಂಚಾಯ್ತಿ ಕೇಂದ್ರವಿದೆ. ತಾಲ್ಲೂಕು ಕೇಂದ್ರದಿಂದ ಈಶಾನ್ಯ ದಿಕ್ಕಿಗೆ ೨೨ ಕಿಮೀ ಅಂತರದಲ್ಲಿದೆ. ತಿಮ್ಮಣ್ಣನಾಯಕ ಎಂಬ ಪಾಳೇಗಾರನಿಂದ ಆಳಲ್ಪಟ್ಟಿದ್ದರಿಂದ ತಿಮ್ಮನಹಳ್ಳಿ ಎಂಬ ಹೆಸರು ಬಂದಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೯೨೩.೨೬ ಹೆಕ್ಟೇರ್. ಕಾಟಂದೇವರಹಟ್ಟಿ ಹಾಗೂ ಗೊಂದಿ ಇವು ಮಜರೆ ಗ್ರಾಮಗಳಾಗಿವೆ. ಭೌಗೋಳಿಕವಾಗಿ ಬಯಲುನಾಡಿಗೆ ಸೇರಿದ್ದು ಬಿಳಿಚು ಕಲ್ಲು, ಬಳಪದ ಕಲ್ಲು, ಕಪ್ಪು ಕಲ್ಲು ಕಂಡುಬರುತ್ತದೆ. ಹೆಚ್ಚಾಗಿ ಕೆಂಪು ಹಾಗೂ ಅಲ್ಪ ಪ್ರಮಾಣದ ಬಿಳಿ ಮಣ್ಣು ಕಂಡುಬರುತ್ತದೆ. ಪೂರ್ವದಲ್ಲಿ ಬಸವನಗುಡ್ಡ, ಕರಡಿಕಲ್ಲು ಗುಡ್ಡ ಪಶ್ಚಿಮದಲ್ಲಿ ಉಣೆಬಸವಣ್ಣನ ಗುಡ್ಡ ಕಂಡುಬರುತ್ತದೆ. ಈಗ ಒತ್ತುವರಿಯಾಗಿದೆ.

ಈ ಪರಿಸರದಲ್ಲಿ ಕಾಡುಹಂದಿ, ಕರಡಿ, ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ನವಿಲು, ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಉಪ್ಪಳ್ಳ ಇದ್ದು ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ. ಇದರ ಎರಡೂ ಭಾಗಕ್ಕೆ ಅಡಕೆ, ತೆಂಗಿನ ತೋಟಗಳಿವೆ. ಹುಚ್ಚಣ್ಣನ ಕಟ್ಟೆ, ರಂಗಣ್ಣನಕಟ್ಟೆ, ಅರಸನಕಟ್ಟೆ, ಮುದ್ದೇಗೌಡನ ಕಟ್ಟೆಗಳಿವೆ. ೩ ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆ ಹಾಗೂ ವಿಶ್ವಬ್ಯಾಂಕಿನ ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕುಂಚಿಟಿಗ ಒಕ್ಕಲಿಗರೇ ಪ್ರಧಾನವಾಗಿದ್ದು ಉಪ್ಪಾರ, ನಾಯಿಂದ, ಅಕ್ಕಸಾಲಿಗ, ತಿಗಳರು, ನಾಯಕ, ವೀರಶೈವ, ಆದಿಕರ್ನಾಟಕ, ಆದಿದ್ರಾವಿಡ, ದಾಸರು, ಮುಸ್ಲಿಂ, ಗಾಣಿಗರು, ಗೊಲ್ಲರು ಸಣ್ಣ ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ, ಉರ್ದು ಮಾತನಾಡುತ್ತಾರೆ. ಒಟ್ಟು ೧೦೦೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೪೦೨೪ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೮೦ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಗುಡಿಸಲು ಮನೆಗಳಿವೆ. ಮೇಲ್ಛಾವಣಿಗೆ ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೪೬೦ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೧೦೦೦ ಮನೆಗಳಲ್ಲಿ ಶೌಚಾಲಯ ಸೌಲಭ್ಯವಿದೆ. ಇದಕ್ಕಾಗಿ ಒಂದು ಲಕ್ಷ ರೂ. ಗೌರವಧನ ನಿರ್ಮಲ ಪುರಸ್ಕಾರವನ್ನು ಗ್ರಾಮಪಂಚಾಯ್ತಿಯಿಂದ ಪಡೆದಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಅಡಿಕೆ, ಬಾಳೆ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬಸ್ಸು, ಕಾರು, ಆಟೋ, ದ್ವಿಚಕ್ರ ವಾಹನಗಳಿವೆ. ಕಲ್ಲುಚಪ್ಪಡಿ ಚರಂಡಿಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕೆಎಂಎಫ್ ನಂದಿನಿ ಡೈರಿಯಿದ್ದು ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತದೆ. ಒಂದು ಪೆಟ್ರೋಲ್ ಬಂಕ್ ಇದೆ. ಉಪವಿಭಾಗಾಧಿಕಾರಿಗಳು, ವೈದ್ಯರು, ಇಂಜಿನಿಯರ್‌ಗಳು, ವಕೀಲರು, ಪ್ರಾಧ್ಯಾಪಕರು, ಉಪನ್ಯಾಸಕರು, ಶಿಕ್ಷಕ–ಶಿಕ್ಷಕಿಯರು ಸರ್ಕಾರಿ ನೌಕರರಾಗಿದ್ದು ಸಾಂಪ್ರದಾಯಿಕ ಉದ್ಯೋಗಿಗಳಾದ ಬಡಗಿಗಳು, ಕಮ್ಮಾರರು ಇದ್ದಾರೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಿಮ್ಮನಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ೧೨ ಜನ ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ೩ ಜನ ಗ್ರಾಮಪಂಚಾಯ್ತಿ ನೌಕರರು ಇದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸ್ಥಿರ, ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ವ್ಯವಸಾಯ ಸೇವಾ ಸಹಕಾರ ಸಂಘ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆ, ಇಂದಿರಾ ಗಾಂಧಿ, ಚೌಡೇಶ್ವರಿ, ಸರಸ್ವತಿ ಮುಂತಾದ ೩೦ ಕ್ಕೂ ಹೆಚ್ಚು ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಜಿಲ್ಲಾ ಪಂಚಾಯ್ತಿ ನಿರ್ಮಿತ ರಸ್ತೆ ತಾಲ್ಲೂಕು ಕೇಂದ್ರದಿಂದ ಗ್ರಾಮವನ್ನು ತಲುಪುತ್ತದೆ. ಅಂಚೆ ಕಛೇರಿಯಿದೆ. ಹಾಲು ಉತ್ಪಾದಕರ ಸಹಕಾರಿ ಸಂಘ, ತೀನಂಶ್ರೀ ಯುವಕ ಸಂಘ ಮುಂತಾದ ಅನೇಕ ಸಂಘಗಳಿವೆ.

ನಾಲ್ಕು ಅಂಗನವಾಡಿ ಕೇಂದ್ರ, ಸರ್ಕಾರಿ ಹಾಗೂ ಎಸ್.ಎಸ್.ವಿ.ಪಿ., ಪ್ರಿಯದರ್ಶಿನಿ, ಖಾಸಗಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಿವೆ. ಶ್ರೀ ಶಾರದಾ ವಿದ್ಯಾಪೀಠ ಸಂಯುಕ್ತ ಪದವಿ ಪೂರ್ವ ಕಾಲೇಜು ಇದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೮೦% ರಷ್ಟಿದೆ. ಸಾರ್ವಜನಿಕ ಗ್ರಂಥಾಲಯವಿದ್ದು ೨೨೦ ಕ್ಕೂ ಹೆಚ್ಚು ಪುಸ್ತಕಗಳಿವೆ. ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದು ರೋಗ–ರುಜಿನಗಳಿಗೆ ಚಿಕಿತ್ಸೆ ನೀಡುತ್ತಾರೆ. ದಾಸಣ್ಣ ಎಂಬ ನಾಟಿ ವೈದ್ಯರಿದ್ದಾರೆ. ಪಶು ಚಿಕಿತ್ಸೆಗಾಗಿ ಪಶುವೈದ್ಯಶಾಲೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೫ ಹೋಟೆಲ್‌ಗಳು ಒಂದು ಛತ್ರ, ೨೫ ಕ್ಕೂ ಹೆಚ್ಚು ಅಂಗಡಿಗಳಿವೆ. ಆಂಜನೇಯ ದೇವಸ್ಥಾನದ ಸಮೀಪ ಒಂದು ದಾನ ಶಾಸನವಿದೆ. ಹಿಂದೆ ಕೋಟೆಯಿದ್ದು ಈಗ ಶಿಥಿಲವಾಗಿದೆ. ೨ ಎಕರೆ ಸ್ಮಶಾನ ಜಾಗವಿದೆ.

ಮಸೀದಿ, ಚರ್ಚ್, ದರ್ಗಾ ಸೇರಿದಂತೆ ಆಂಜನೇಯಸ್ವಾಮಿ, ಶ್ರೀರಾಮದೇವರ, ಭೂತರಾಯ, ಕೆಂಚಮ್ಮ, ದುರ್ಗಮ್ಮ, ಕಾಲಭೈರವೇಶ್ವರ, ಮಾರಮ್ಮ ದೇವಾಲಯಗಳಿವೆ. ಅವಧೂತ ಶಾಂತವೀರಸ್ವಾಮಿ ಮಠವಿದೆ. ಅಕ್ಟೋಬರ್‌ನಲ್ಲಿ ಮಾರಮ್ಮನ ಜಾತ್ರೆಯನ್ನು, ಏಕಾದಶಿಯಲ್ಲಿ ಕೆಂಚಮ್ಮನ ಜಾತ್ರೆಯನ್ನು ಆಚರಿಸುತ್ತಾರೆ. ಇವರು ಕಾರುಹಬ್ಬದಲ್ಲಿ ಎತ್ತು–ದನಗಳ ಪೂಜೆ ಆಚರಿಸುತ್ತಾರೆ. ಜಾತ್ರೆಯಲ್ಲಿ ರಥೋತ್ಸವ, ಬಲಿ, ಕೆಂಡ ಇತ್ಯಾದಿ ಆಚರಣೆಗಳಿರುತ್ತವೆ. ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ದಿ॥ ಶೇಷಪ್ಪ ಹಾಗೂ ಮುದ್ದುರಂಗೇಗೌಡ ಗ್ರಾಮಕ್ಕೆ ಕೀರ್ತಿ ತಂದ ಸ್ವಾತಂತ್ರ್ಯ ಹೋರಾಟಗಾರರು. ಭಾಗ್ಯ ಎಂಬುವರು ಭಾವಗೀತೆ, ಭಕ್ತಿಗೀತೆ ಹಾಡುತ್ತಾರೆ. ನರಸಪ್ಪ ಮೇಷ್ಟ್ರು, ಕೇಶವಮೂರ್ತಿ ಉತ್ತಮ ಹಾರ್ಮೋನಿಯಂ ವಾದಕರಾಗಿದ್ದಾರೆ, ನಾಟಕಗಳನ್ನು ಕಲಿಸುತ್ತಾರೆ. ಅನೇಕ ಕವನಗಳು, ಸಂಶೋಧನಾ ಲೇಖನಗಳನ್ನು ಬರೆದಿದ್ದಾರೆ. ಡಾ.ತಿಮ್ಮನಹಳ್ಳಿ ವೇಣುಗೋಪಾಲ್ ಹಿರಿಯ ಚಿಂತಕ, ಲೇಖಕರಾಗಿದ್ದು ಇತಿಹಾಸ ಪ್ರಾಧ್ಯಾಪಕರಾಗಿದ್ದಾರೆ. ಕರ್ನಾಟಕ ಚುನಾವಣಾ ಆಯೋಗದಲ್ಲಿ ಸಹಾಯಕ ಆಯುಕ್ತರಾಗಿದ್ದ ಶಾಮಯ್ಯ, ಖ್ಯಾತ ವಕೀಲರಾದ ಗೋವಿಂದರಾಜು, ಗ್ರಾಮದ ಮೊದಲ ಪದವೀಧರರಾದ ಶತಮಾನದ ಸಂಭ್ರಮದಲ್ಲಿರುವ ಸಣ್ಣತಿಮ್ಮೇಗೌಡರು, ಹಿರಿಯರಾದ ಸೀತಾರಾಮ್, ಬೋರಯ್ಯ, ಶೇಷಪ್ಪ ಗ್ರಾಮದ ಹಿರಿಯರು. ೩೮ ವರ್ಷಗಳಿಂದ ವಿಧಾನಸಭಾ ಸದಸ್ಯರು, ಮಂತ್ರಿಗಳು ಆಗಿರುವ ಟಿ.ಬಿ. ಜಯಚಂದ್ರರವರು ಈ ಗ್ರಾಮದ ಸ್ಮರಣೀಯರು. ಕೃಷಿ, ಸಹಕಾರ, ಆಹಾರ ಮತ್ತು ನಾಗರಿಕ ಪೂರೈಕೆ, ಉನ್ನತ

ಶಿಕ್ಷಣ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರಾಗಿಯೂ ಕಾರ್ಯನಿರ್ವಹಿಸಿರುವುದು ಇವರ ವಿಶೇಷ.

## ತೊರೆಮನೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೨ ಕಿಮೀ ಅಂತರದಲ್ಲಿದೆ. ಈ ಗ್ರಾಮಕ್ಕೆ ಸೀಗೆಬಾಗಿ ಮಜರೆ ಗ್ರಾಮ, ಬಯಲುನಾಡಾಗಿದೆ. ಸೀಗೆಬಾಗಿಯ ಹಳ್ಳದ ಸಮೀಪ ಮನೆಗಳನ್ನು ನಿರ್ಮಿಸಿಕೊಂಡು ವಾಸ ಮಾಡುತ್ತಿದ್ದರಿಂದ ತೊರೆಯ ಮನೆ ಎಂದೇ ಕರೆದರು. ಈಗ ಊರು ಆಗಿದೆ. ಮರಳು ಮಿಶ್ರಿತ ಕೆಂಪು-ಬಿಳಿ ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ತೊರೆಹಳ್ಳವು ಮಳೆಗಾಲದಲ್ಲಿ ಮಳೆ ಬಂದರೆ ಮಾತ್ರ ತುಂಬಿ ಹರಿಯುತ್ತದೆ. ೨ ಕೆರೆಗಳಿವೆ. ಬೆರಳೆಣಿಕೆಯಷ್ಟು ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಉಪ್ಪಾರ ಸಮುದಾಯವೇ ಪ್ರಧಾನವಾಗಿದ್ದು ಗೌಡ ಬಣಜಿಗ, ಆಚಾರ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೪೬ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೬೦೭ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ, ಗುಡಿಸಲು ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೯ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಸರ್ಕಾರಿ ಉದ್ಯೋಗದಲ್ಲಿ ಕೆಲವರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಿಮ್ಲಾಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ದುರ್ಗಾಂಬ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೭೪% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಶನೇಶ್ವರ, ಭೂತಮ್ಮ, ದುರ್ಗಮ್ಮ ಪ್ರಮುಖ ದೇವಾಲಯಗಳಾಗಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತೊರೆಸೂರಗೊಂಡನಹಳ್ಳಿ

ತೊರೆಸೂರಗೊಂಡನಹಳ್ಳಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೬ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೫೩೧.೧೮ ಹೆಕ್ಟೇರ್. ಕಂದಾಯ ಗ್ರಾಮವಾಗಿದ್ದು ಬಯಲು ನಾಡಾಗಿದೆ. ತೊರೆಸೂರಪ್ಪ ಎಂಬ ವ್ಯಕ್ತಿಮೂಲದಿಂದ ಗ್ರಾಮಕ್ಕೆ ತೊರೆಸೂರನಹಳ್ಳಿ ಎಂದು ಹೆಸರು ಬಂದಿದೆ. ೪೨೩ ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ. ಸುವರ್ಣಮುಖಿ ತೊರೆಯ ದಡದ ಗ್ರಾಮವಾದ್ದರಿಂದ ತೊರೆಸೂರಗೊಂಡನಹಳ್ಳಿ ಎಂಬ ಹೆಸರು ಬಂದಿದೆ. ಕೆಂಪು-ಬಿಳಿ ಮಿಶ್ರಿತ ಮರಳು ಭೂಮಿಯು ವ್ಯವಸಾಯಕ್ಕೆ ಯೋಗ್ಯವಾಗಿದೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಸುವರ್ಣಮುಖಿ ಹಳ್ಳ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತದೆ. ೨ ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಉಪ್ಪಾರ ಸಮುದಾಯವೇ ಪ್ರದಾನವಾಗಿದ್ದು ಲಿಂಗಾಯಿತ, ವಡ್ಡ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೩೫ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೬೦೨ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಗುಡಿಸಲು ಮನೆಗಳಿವೆ. ಮೇಲ್ಚಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೭೧ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೬೦ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ದ್ವಿಚಕ್ರ ವಾಹನಗಳಿವೆ. ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಆಧುನಿಕ ಡೈರಿಯಿದೆ. ಶಿಕ್ಷಣ ಇಲಾಖೆಯಲ್ಲಿ ತ್ಯಾಗರಾಜು, ಲಿಂಗರಾಜು ಕಾರ್ಯನಿರ್ವಹಿಸುತ್ತಿದ್ದಾರೆ. ಗುರುಸ್ವಾಮಿ ಅರಣ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಿಮ್ಲಾಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಚೌಡೇಶ್ವರಿ, ಮೈಲಾರ ಲಿಂಗೇಶ್ವರ ಸ್ತ್ರೀಶಕ್ತಿ ಸಂಘ, ಬಸವೇಶ್ವರ ರೈತಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೭೪%

ರಕ್ಷಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಚೌಡೇಶ್ವರಿ, ಬಸವೇಶ್ವರಿ ಪ್ರಮುಖ ದೇವಾಲಯಗಳು. ಬಸವೇಶ್ವರ, ಚೌಡೇಶ್ವರಿ ಜಾತ್ರೆ, ತೇರು-ತೆಪ್ಪ, ಪಲ್ಲಕ್ಕಿ, ಸಿಡಿ, ಬಲಿ, ಓಕುಳಿ ಪ್ರಮುಖ ಆಕರ್ಷಣೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಜಿಲ್ಲಾ ಮುಖ್ಯರಸ್ತೆ ಹೊಂದಿದ್ದು ಖಾಸಗಿ ಬಸ್ಸುಗಳು, ಆಟೋ, ಸ್ವಂತ ವಾಹನಗಳು ಇಲ್ಲಿನ ಪ್ರಮುಖ ಸಾರಿಗೆ ವ್ಯವಸ್ಥೆಯಾಗಿದೆ.

## ತರಬೇನಹಳ್ಳಿ

ತರಬೇನಹಳ್ಳಿಯು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೫ ಕಿಮೀ ಅಂತರದಲ್ಲಿರುವ ಕಂದಾಯ ಗ್ರಾಮವಾಗಿದೆ. ತರಬೇನಹಳ್ಳಿ ಬೋವಿ ಕಾಲೋನಿ ಎಂಬ ಮಜರೆ ಗ್ರಾಮವನ್ನು ಒಳಗೊಂಡಿದೆ. ಭೌಗೋಳಿಕ ವಿಸ್ತೀರ್ಣ ೨೭೬ ಹೆಕ್ಟೇರ್. ಕೆಂಪು ಮಿಶ್ರಿತ ಮರಳು ಭೂಪ್ರದೇಶವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಹೊಲಮಾಳದಹಳ್ಳ, ತೋಪಿನ ಹಳ್ಳಗಳಿದ್ದರೂ ನೀರು ಇರುವುದಿಲ್ಲ. ಕೆರೆಯಿದ್ದು ಮಳೆಗಾಲದಲ್ಲಿ ಮಾತ್ರ ನೀರಿರುತ್ತದೆ. ೨ ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ವೀರಶೈವರು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಕುಂಬಾರ, ಮಡಿವಾಳ, ಮುಸ್ಲಿಂ ಕುಟುಂಬಗಳಿವೆ. ೪ ಓಣಿಗಳಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೨೨೬ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೮೧೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೧೧೪ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೬೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ದಾಳಿಂಬೆ ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ದಾಳಿಂಬೆ, ಅಡಿಕೆ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಟೆಂಪೋ, ಆಟೋ ಹಾಗೂ ದ್ವಿಚಕ್ರ ವಾಹನಗಳಿವೆ. ಒಂದು ಹಾಲಿನ ಕೇಂದ್ರವಿದೆ. ೬ ಜನ ಶಿಕ್ಷಕರು, ಸಾರಿಗೆ ಇಲಾಖೆ ಹಾಗೂ ಗ್ರಾಮೀಣ ಪಂಚಾಯತ್ ಇಲಾಖೆಯಲ್ಲಿ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವಕೀಲರು, ಟ್ರ್ಯಾಕ್ಟರ್ ಡ್ರೈವರ್‌ಗಳಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗೋಡೆಕೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ೩ ಜನ ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೪ ಸ್ತ್ರೀಶಕ್ತಿ ಸಂಘ ಮತ್ತು ೨ ಶ್ರೀಕ್ಷೇತ್ರ

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಗೋಡೆಕೆರೆಯಿಂದ ಅಂಚೆ ಸಂಪರ್ಕವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೮೨% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೬೨ ಫಲಾನುಭವಿಗಳಿದ್ದಾರೆ. ೨ ಗೂಡಂಗಡಿ, ಟೀ ಅಂಗಡಿ ಹಾಗೂ ಹೊರಭಾಗದಲ್ಲಿ ಒಂದು ಡಾಬ ಹೋಟೆಲ್ ಇದೆ.

ಭೈರವೇಶ್ವರ, ತಿಮ್ಮಪ್ಪ, ಈಶ್ವರ, ಬಸವಣ್ಣ ದೇವರ ದೇವಾಲಯಗಳಿವೆ. ದಸರಾ ದಿನದಂದು ದೇವರ ಮೆರವಣಿಗೆ ಏರ್ಪಡುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಒಂದು ರೈತಸಂಘದ ಕಾರ್ಯಾಲಯ, ಒಂದು ಯುವಕ ಸಂಘವಿದೆ. ಚಿಕ್ಕನಾಯಕನಹಳ್ಳಿ-ಕೆ.ಬಿ. ಕ್ರಾಸ್‌ಗೆ ಬಸ್ ಸಂಪರ್ಕವಿದೆ.

## ತರಬೇನಹಳ್ಳಿ ಬೋವಿಕಾಲೋನಿ

ತರಬೇನಹಳ್ಳಿ ಗ್ರಾಮದ ಪೂರ್ವಕ್ಕೆ ಹೊಂದಿಕೊಂಡಂತೆ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೬ ಕಿಮೀ ಅಂತರದಲ್ಲಿ ಬೋವಿ ಕಾಲೋನಿಯಿದೆ. ಇದು ತರಬೇನಹಳ್ಳಿಯ ಮಜರೆ ಗ್ರಾಮವಾಗಿದೆ. ಇದೊಂದು ಬೋವಿ ಜನಾಂಗದ ಪೂರ್ಣ ಗ್ರಾಮ. ಈ ಜನಾಂಗದ ೨೩ ಮನೆಗಳಿದ್ದು ಇವು ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಬೋವಿ ಜನಾಂಗದವರು ಮಾತ್ರ ಇದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೨೩ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೧೪ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೧೬ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ರೈತಾಪಿ, ಬಂಡೆ ಒಡೆಯುವ, ಗಾರೆ ಕೆಲಸದ ಕಾರ್ಮಿಕರಿದ್ದಾರೆ. ಶಿಕ್ಷಣ, ಪಡಿತರ ವಿಚಾರಗಳಿಗೆ ಗೋಡೆಕೆರೆ ಹಾಗೂ ತರಬೇನಹಳ್ಳಿಗೆ ಹೋಗುತ್ತಾರೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಮಟ್ಟೆ, ನಾರು, ಚಿಪ್ಪು ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗೋಡೆಕೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ

ಸಹಕಾರ ಸಂಘಗಳಿವೆ. ಅಂಚೆ ಸೌಕರ್ಯ ಗೋಡೆಕೆರೆಯಿಂದ ಪಡೆಯಲಾಗಿದೆ. ಸಾಕ್ಷರತೆ ೪೯% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಚಿಕ್ಕನಾಯಕನಹಳ್ಳಿ–ಕೆ.ಬಿ. ಕ್ರಾಸ್ ಮೂಲಕ ಬಸ್ ಸಂಚಾರವಿದೆ.

ಉಡುಸಲಮ್ಮನ ಗ್ರಾಮದೇವತೆ ಹಬ್ಬ ಆಚರಿಸುತ್ತಾರೆ. ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಗೋಡೆಕೆರೆ ಸಿದ್ಧರಾಮೇಶ್ವರನ ಜಾತ್ರೆಯ ಸಂದರ್ಭದಲ್ಲಿ ಈ ಗ್ರಾಮದವರ ಸೇವೆಯಿರುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಮ್ಮಡಿಹಳ್ಳಿ

ತಮ್ಮಡಿಹಳ್ಳಿ ಕುಪ್ಪೂರು ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಒಂದು ಕಂದಾಯ ಗ್ರಾಮ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೪ ಕಿಮೀ ಅಂತರದಲ್ಲಿದೆ. ಪಕ್ಕಕ್ಕೆ ಇರುವ ಬೆಟ್ಟದಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರ ನೆಲೆಯಿದೆ. ದೇವರುಗಳು ಬೆಟ್ಟದ ತಪ್ಪಲಿನಲ್ಲಿ ನೆಲೆನಿಂತ ಜನವಸತಿಯೇ ತಮ್ಮಡಿಹಳ್ಳಿ ಆಯಿತೆಂದು ನಂಬಲಾಗಿದೆ. ತಮ್ಮ+ಅಡಿ ಎಂಬ ಪದದಲ್ಲಿ ತಮ್ಮ ಎಂದರೆ ದೇವರುಗಳ ಅಡಿ ಎಂದರೆ ಪಾದದ ಬಳಿ ಎಂದರ್ಥ. ತಮ್ಮ ಪಾದದ ಬಳಿ ನಾವಿರುತ್ತೇವೆ ಎಂದು ಜನಗಳು ಇಲ್ಲಿ ವಾಸಿಸತೊಡಗಿದ್ದಾರೆ. ಅದೇ ತಮ್ಮಡಿಹಳ್ಳಿ ಎಂದು ಊರಾಗಿದೆ. ಭೌಗೋಳಿಕ ವಿಸ್ತೀರ್ಣ ೪೮೧.೩೨ ಹೆಕ್ಟೇರ್. ಬಯಲು ನಾಡಿಗೆ ಸೇರುವ ಈ ಗ್ರಾಮದ ಸುತ್ತ ಬಿಳಿ–ಕಪ್ಪು ಕಲ್ಲು, ಬಿಳಿ–ಕೆಂಪು ಮಣ್ಣು ಕಂಡುಬರುತ್ತದೆ. ಇಲ್ಲಿ ಮಲ್ಲಿಕಾರ್ಜುನಸ್ವಾಮಿ ಬೆಟ್ಟವಿದೆ. ಸಾಮಾಜಿಕ ಅರಣ್ಯವಿದೆ. ಗುಂಡುತೋಪು ಹಾಗೂ ಅಮರಾಯ್ ತೋಪುಗಳಿವೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಕೂಡುಹಳ್ಳ ಅಥವಾ ಕೂಡುದೋಣೆ ಎಂದು ಕರೆಯುವ ಹಳ್ಳ ಹರಿಯುತ್ತದೆ. ಇದು ಹಾಲ್ಕುರಿಕೆ ಕೆರೆಯಿಂದ ಕುಪ್ಪೂರು ಕೆರೆಗೆ ಹರಿದು ತಲುಪುತ್ತದೆ. ನಿಂಗಪ್ಪನಕಟ್ಟೆ ಎಂಬ ಒಂದು ಕಲ್ಯಾಣಿಯಿದೆ. ವಡ್ಡರಕಟ್ಟೆ, ಹೂವಿನಕಟ್ಟೆ, ಚಿಕ್ಕಟ್ಟೆಗಳಿವೆ. ೨ ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಲಿಂಗಾಯಿತರು ದೊಡ್ಡ ಸಮುದಾವಾಗಿದ್ದು ಆದಿಕರ್ನಾಟಕ, ಕಲ್ಲುಕುಟಿಗ (ಬೋವಿ) ಸಮುದಾಯದವರಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ತಮಿಳು ಮಾತನಾಡುವವರಿದ್ದಾರೆ. ಒಟ್ಟು ೧೪೪ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೫೬೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೩೨ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೧೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಲಗೇಜ್ ಆಟೋ, ಬೈಕ್‌ಗಳಿವೆ. ರಸ್ತೆ ಹಾಗೂ ಚರಂಡಿ ವ್ಯವಸ್ಥೆಯಿದೆ. ನಂದಿನಿ ಡೈರಿಗೆ ಹಾಲು ಮಾರುತ್ತಾರೆ. ಶಿಕ್ಷಕರು, ಇಂಜಿನಿಯರ್, ವಕೀಲರು, ಉಪನ್ಯಾಸಕರು ಇದ್ದಾರೆ. ಬೆಂಗಳೂರಿನ ಗಾರ್ಮೆಂಟ್ಸ್ ಹಾಗೂ ಇತರೆ

ಖಾಸಗಿ ಕಂಪನಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಒಂದು ಇಟ್ಟಿಗೆ ಫ್ಯಾಕ್ಟರಿಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಕುಪ್ಪೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಒಬ್ಬರು ಗ್ರಾಮಪಂಚಾಯ್ತಿ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಜಿಲ್ಲಾ ಪಂಚಾಯ್ತಿ ರಸ್ತೆ ಮಾರ್ಗವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೭೮% ರಷ್ಟಿದೆ. ಖಾಸಗಿ ವೇದಜ್ಯೋತಿಷ್ಯ ಶಾಲೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಚಿಕ್ಕ ಕಿರಾಣಿ ಅಂಗಡಿಯಿದೆ. ಹಿಂದೆ ಕೋಟೆಯಿದ್ದು ಈಗ ಶಿಥಿಲವಾಗಿದೆ.

ಪರ್ವತ ಮಲ್ಲಿಕಾರ್ಜುನಸ್ವಾಮಿ, ಬಸವೇಶ್ವರ ಸ್ವಾಮಿ, ವಿರೂಪಾಕ್ಷೇಶ್ವರ ಸ್ವಾಮಿ, ಮೆರವಣಿಗೆ ವಿಗ್ರಹ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನಗಳಿವೆ. ಐದು ವರ್ಷಗಳಿಗೊಮ್ಮೆ ಪರ್ವತ ಮಲ್ಲಿಕಾರ್ಜುನಸ್ವಾಮಿ ಜಾತ್ರೆ ಮಾಡಲಾಗುತ್ತದೆ. ದಸರಾದಲ್ಲಿ ಅಂಬು ಹಾಯಿಸಲಾಗುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಬಸವೇಶ್ವರ ಕಲಾಸಂಘವಿದೆ. ಭಜನಾ ತಂಡವೂ ಇದೆ. ಮಲ್ಲಿಕಾರ್ಜುನಯ್ಯ ಟಿ.ಎಸ್., ಬಸವರಾಜು, ವಿರೂಪಾಕ್ಷಯ್ಯ, ರಾಜಣ್ಣ ಮುಂತಾದವರು ಭಜನೆ ಮಾಡುತ್ತಾರೆ. ವಾಲಿಬಾಲ್ ಆಟ ಆಡುವ ತಂಡವಿದೆ. ರೇಷ್ಮೆ ಬೆಳೆಗಾರರ ಕರಿಯಮ್ಮದೇವಿ ಸಂಘ, ಬಸವೇಶ್ವರ ಸ್ವಸಹಾಯ ಸಂಘ, ಮಲ್ಲಿಕಾರ್ಜುನ ಸ್ವಸಹಾಯ ಸಂಘ, ನಂದಿನಿ ಸ್ವಸಹಾಯ ಸಂಘವಿದೆ.

## ತಗಚೇಘಟ್ಟ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೦ ಕಿಮೀ ಅಂತರದಲ್ಲಿರುವ ಕಂದಾಯ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ೧೬೧೨ ಹೆಕ್ಟೇರ್. ಇದಕ್ಕೆ ಮಜರೆ ಗ್ರಾಮಗಳಾಗಿ ಉಪ್ಪಾರಹಟ್ಟಿ, ಕೊರಚರಹಟ್ಟಿ ಗ್ರಾಮಗಳನ್ನು ಒಳಗೊಂಡಿದೆ. ಎ.ಕೆ. ಹಾಗೂ ಎ.ಡಿ. ಪ್ರತ್ಯೇಕ ಕಾಲೋನಿಗಳು ಈ ಗ್ರಾಮದ ವ್ಯಾಪ್ತಿಗೆ ಒಳಪಟ್ಟಿವೆ. ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಒಂದು ಕೆರೆಯಿದ್ದು ಮಳೆಗಾಲದಲ್ಲಿ ಮಾತ್ರ ತುಂಬುತ್ತದೆ. ೩ ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಸರ್ಪ ಒಕ್ಕಲಿಗರು ದೊಡ್ಡ ಸಮುದಾಯವಾಗಿದ್ದು ಲಿಂಗಾಯಿತರು, ಮಡಿವಾಳ, ನಾಯಕ, ಕುರುಬ ಜನಾಂಗ ಕಿರು ಸಮುದಾಯವಾಗಿದೆ. ಪ್ರತ್ಯೇಕ ಆದಿಕರ್ನಾಟಕ, ಆದಿದ್ರಾವಿಡ ಕಾಲೋನಿಗಳಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೧೭ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೯೧೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು

ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೨೯ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೩೭ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಹುಣಸೆಹಣ್ಣು, ಗರಿಕಡ್ಡಿ, ತೆಂಗಿನ ಮಟ್ಟೆ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಸ್ಕೂಟರ್, ಟೆಂಪೋ, ಕಾರುಗಳು ಇವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕೆಮ್ಮು, ಜ್ವರ, ಕಾಲರಾ ಸಾಮಾನ್ಯ ಕಾಯಿಲೆಗಳು. ಸ್ಥಳೀಯ ಆರೋಗ್ಯ ಕಾರ್ಯಕರ್ತರು ಚಿಕಿತ್ಸೆ ನೀಡುತ್ತಾರೆ. ಹೆಚ್ಚಿನ ಚಿಕಿತ್ಸೆಗೆ ಕುಪ್ಪೂರು, ಚಿಕ್ಕನಾಯಕನಹಳ್ಳಿಗೆ ಹೋಗುತ್ತಾರೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೪ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಕುಪ್ಪೂರಿನಿಂದ ಅಂಚೆ ಸಂಪರ್ಕವಿದೆ. ಚಿಕ್ಕನಾಯಕನಹಳ್ಳಿ–ಹಂದನಕೆರೆ–ಮತಿಘಟ್ಟದ ಮೂಲಕ ರಸ್ತೆ, ಬಸ್ ಸಂಪರ್ಕವಿದೆ. ಶಿಕ್ಷಣ, ಸಾರಿಗೆ, ಅಂಚೆ, ಅರಣ್ಯ ಇಲಾಖೆಗೆ ಸೇರಿದ ೧೪ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವಕೀಲರು, ಇಂಜಿನಿಯರ್ ಇದ್ದಾರೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೭೩% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಒಂದು ವೀರಗಲ್ಲು ಇದ್ದು ಶಿಥಿಲವಾಗಿದೆ. ೧೫ನೇ ಶತಮಾನಕ್ಕೆ ಸಂಬಂಧಿಸಿದ ವೀರನೊಬ್ಬನ ಸಾವಿನ ಸಂಕೇತವಾಗಿದೆ.

ಮುನಿಯಪ್ಪ, ಈಶ್ವರ ದೇವಾಲಯವಿದೆ. ಕರಿಯಮ್ಮನಿಗೆ ಆರತಿ, ಬಾನ, ಹರಕೆ ಸಂಪ್ರದಾಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಿಮ್ಮಲಾಪುರ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೧೩ ಕಿಮೀ ಅಂತರದಲ್ಲಿರುವ ಕಂದಾಯ ಗ್ರಾಮ ಅಜ್ಜಿಗುಡ್ಡೆಯ ಮಜರೆ ಗ್ರಾಮವಾಗಿದೆ. ಬಯಲು, ಕುರುಚಲು ಕಾಡಿನ ಭೂಪ್ರದೇಶ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ನಾಯಕ ಜನಾಂಗ ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಅಗಸ, ಅಕ್ಕಸಾಲಿಗ ಜನಾಂಗ ಸಣ್ಣ ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೨೬ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೧೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ,

ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೪೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಹುಣಸೆಹಣ್ಣು ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ದ್ವಿಚಕ್ರ ವಾಹನಗಳಿವೆ. ೩ ಜನ ಸರ್ಕಾರಿ ನೌಕರರಿದ್ದಾರೆ. ಶಿಕ್ಷಣ, ಪಡಿತರವನ್ನು ಅಜ್ಜಿಗುಡ್ಡೆ, ರಾಮನಹಳ್ಳಿಯಿಂದ ಪಡೆಯುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತೀರ್ಥಪುರ ತಾಲ್ಲೂಕು ಪಂಚಾಯ್ತಿ ಹಾಗೂ ರಾಮನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ತೀರ್ಥಪುರದಿಂದ ಅಂಚೆ ಸಂಪರ್ಕವಿದೆ. ತೀರ್ಥಪುರ, ಹಾಗಲವಾಡಿ ಮಾರ್ಗವಾಗಿ ಜಿಲ್ಲಾ ಪಂಚಾಯ್ತಿ ರಸ್ತೆಗೆ ಇಲ್ಲಿಂದ ಕಚ್ಚಾರಸ್ತೆ ಕೂಡುತ್ತದೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೬ ಫಲಾನುಭವಿಗಳಿದ್ದಾರೆ.

ಯರೇಕಟ್ಟೆ ರಾಂಪುರದಮ್ಮನಿಗೆ ಆರತಿ, ಬಾನ, ಬ್ಯಾಟೆಯ ಸಂಪ್ರದಾಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಾರಿಕಟ್ಟೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೆಳಗುಲಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೧೨ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೨೪೬೧.೧೫ ಹೆಕ್ಟೇರ್. ಮೊದಲಿಗೆ ತಾರಿಮರ, ಅದರ ಬುಡದಲ್ಲಿ ಕಟ್ಟೆ ಇದ್ದು ಅದರ ಸನಿಹದಲ್ಲಿ ಗ್ರಾಮ ರಚನೆಯಾದುದರಿಂದ ತಾರೀಕಟ್ಟೆ ಎಂದು ಕರೆಯಲಾಗಿದೆ. ಬಯಲುನಾಡಿಗೆ ಸೇರುವ ಈ ಗ್ರಾಮದ ಸುತ್ತ ಬಿಳಿ ನುಚ್ಚುಕಲ್ಲು, ಬಿಳಿ–ಕೆಂಪು ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಅಯ್ಯನಕಟ್ಟೆ, ಬಸಟ್ಟಿಕಟ್ಟೆ ಎಂಬ ಕಟ್ಟೆಗಳಿವೆ. ಸಿದ್ದಣ್ಣನಕೆರೆಯೂ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೪೫ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೫೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಚಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ

ಯೋಜನೆಗಳ ಫಲಾನುಭವಿಗಳಿದ್ದಾರೆ. ಚರಂಡಿ ವ್ಯವಸ್ಥೆ, ರಸ್ತೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಆರೋಗ್ಯ ಎಂಬ ಖಾಸಗಿ ಡೈರಿಯಿದೆ. ಅನೇಕರು ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಬರಗೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ವಿದ್ಯಾದೇವಿ, ಮಾರುತಿ, ಉಡುಸಲಮ್ಮ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ರಸ್ತೆ ಮಾರ್ಗವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೭೫% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೧೩ ಫಲಾನುಭವಿಗಳಿದ್ದಾರೆ. ಚಿಕ್ಕ ಅಂಗಡಿಯಿದೆ.

ಆಂಜನೇಯ ದೇವಸ್ಥಾನವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಜ್ಯೋತಿಲಕ್ಷ್ಮಿ, ಸರ್ವಮಂಗಳ, ಸುಶೀಲಮ್ಮ, ಲಕ್ಕಮ್ಮ, ಹೇಮಲತ ಎಂಬುವರು ಜನಪದ ಗೀತೆಗಳನ್ನು ಹಾಡುತ್ತಾರೆ.

## ತಾರಿಕಟ್ಟೆ ಲಂಬಾಣಿತಾಂಡ್ಯ

ತಾರಿಕಟ್ಟೆ ಲಂಬಾಣಿ ತಾಂಡ್ಯವು ಒಂದು ಮಜರೆ ಗ್ರಾಮವಾಗಿದ್ದು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೆಳಗುಲಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೧೧ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೪೬೧.೧೫ ಚ.ಕಿ.ಮೀ. ಬಿಳಿ ಕಲ್ಲು, ಬಿಳಿ ಮಣ್ಣು ಹಾಗೂ ಕೆಂಪು ಮಿಶ್ರಿತ ಬಿಳಿ ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಸಿದ್ದಣ್ಣನ ಕೆರೆ ಮತ್ತು ಹೊನ್ನವ್ವನ ಕಟ್ಟೆಯಿದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಲಂಬಾಣಿ ಜನಾಂಗವೇ ಪ್ರಧಾನವಾಗಿದ್ದು ಸರ್ಪ ಒಕ್ಕಲಿಗ ಸಮುದಾಯದವರಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೪೫ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೯೯ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಅಡಿಕೆ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಸಿಕಲ್, ಬೈಕುಗಳಿವೆ. ಗ್ರಾಮಕ್ಕೆ ರಸ್ತೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆರೋಗ್ಯ ಎಂಬ ಖಾಸಗಿ ಡೈರಿಯಿದೆ. ಬೆಂಗಳೂರಿನ ವಿವಿಧ ಖಾಸಗಿ ಕಾರ್ಖಾನೆಗಳಲ್ಲಿ ದುಡಿಯುವವರಿದ್ದಾರೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರ, ಬರಗೂರು ತಾಲ್ಲೂಕು ಪಂಚಾಯಿತಿ ಹಾಗೂ ಬೆಳಗುಲಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯಿತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ವಿದ್ಯಾದೇವಿ, ಉಡುಸಲಮ್ಮದೇವಿ, ಮರಿಯಮ್ಮ ದೇವಿ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೮% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಚಿಕ್ಕ ಕಿರಾಣಿ ಅಂಗಡಿಯಿದೆ.

ಅಜ್ಜಪ್ಪನ ದೇವಾಲಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಿರುಮಲದೇವರಹಟ್ಟಿ

ತಿರುಮಲದೇವರಹಟ್ಟಿ ಬೆಳವಾಡಿ ಉಪಗ್ರಾಮವಾಗಿದ್ದು ಇದೊಂದು ಬುಡಕಟ್ಟು ಗ್ರಾಮವಾಗಿದೆ. ಗ್ರಾಮದ ನಡುವೆ ತಿರುಮಲದೇವರ ಗುಬ್ಬ ಇರುವುದರಿಂದಾಗಿ ತಿರುಮಲದೇವರಹಟ್ಟಿ ಎಂದು ಕರೆಯುತ್ತಾರೆ. ಕಾಡುಗೊಲ್ಲರ ಒಟ್ಟು ೫೦ ಮನೆಗಳಿದ್ದು ೨೦೫ ಜನಸಂಖ್ಯೆಯಿದೆ. ಇವು ಹೆಂಚಿನ, ಶೀಟಿನ, ಹುಲ್ಲುಹಾಸಿನ ಮನೆಗಳಾಗಿದ್ದು ಸರ್ಕಾರದ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಇದೊಂದು ಶೌಚಾಲಯ ಮುಕ್ತ ಗ್ರಾಮವಾಗಿದ್ದು ಬಯಲು ಶೌಚಾಲಯ ಹೊಂದಿದ್ದಾರೆ. ಬರಕನಾಳು ಗ್ರಾಮ ಪಂಚಾಯ್ತಿಗೆ ಸೇರಿದ್ದು ಇಲ್ಲಿ ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ಕುಡಿಯಲು ಗ್ರಾಮಪಂಚಾಯ್ತಿಯಿಂದ ಕೊಳವೆ ಬಾವಿಯ ಮೂಲಕ ನೀರು ಒದಗಿಸಲಾಗುತ್ತದೆ. ಕೃಷಿ ಹಾಗೂ ಪಶುಪಾಲನೆ ಇಲ್ಲಿನ ಮುಖ್ಯ ಕಸುಬು. ರಾಗಿ, ಅವರೆ, ಹುರುಳಿ, ಹಾರಕ ಬೆಳೆಯುತ್ತಾರೆ. ತೆಂಗು ತೋಟಗಾರಿಕೆ ಬೆಳೆಯಾಗಿದ್ದು ಕೊಬ್ಬರಿ, ಹುಣಸೆಹಣ್ಣು, ಹೊಂಗೆಬೀಜ, ಹಂಚಿಕಡ್ಡಿ ವ್ಯಾಪಾರಿ ಸರಕಾಗಿದೆ. ಕುರಿಗಳೊಂದಿಗೆ ಡಿಸೆಂಬರ್–ಮೇವರೆಗೆ ಹುಲ್ಲು ನೀರಿಗಾಗಿ ಪರಸ್ಥಳಕ್ಕೆ ಹೋಗುವುದು ವಾಡಿಕೆ. ರಾಗಿಮುದ್ದೆ ಮುಖ್ಯ ಆಹಾರ. ರೊಟ್ಟಿ, ಅನ್ನ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ಆಹಾರಗಳು. ಶಿಕ್ಷಣ, ಸಾರಿಗೆ ಇಲಾಖೆಯ ೬ ಜನ ಸರ್ಕಾರಿ ನೌಕರರಿದ್ದಾರೆ. ಡಾ.ಶಿವಣ್ಣ ಲೇಖಕರಾಗಿದ್ದು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿದ್ದಾರೆ.

ತಿರುಮಲದೇವರ ಉತ್ಸವ, ಜಲಧಿ, ದೀಪ ಏರಿಸುವುದು, ದೀಪ ಇಳಿಸುವುದು ವಿಶೇಷ ಆಚರಣೆಯಾಗಿದೆ. ವಿಧವಾ ವೇತನ, ವೃದ್ಧಾಪ್ಯ ವೇತನಗಳ ಫಲಾನುಭವಿಗಳಿದ್ದಾರೆ. ದೀಪಾವಳಿ, ದಸರಾ, ಯುಗಾದಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಶಿಕ್ಷಣ, ಪಡಿತರ ಸೌಲಭ್ಯಗಳನ್ನು ಬೆಳವಾಡಿ ಗ್ರಾಮದಿಂದ ಪಡೆದುಕೊಳ್ಳಲಾಗುತ್ತಿದೆ. ಬೆಳವಾಡಿ ಮಾರ್ಗವಾಗಿ ಕಂದಿಕೆರೆ, ಹುಳಿಯಾರು ಮೂಲಕ ಬಸ್, ರಾಜ್ಯ ಹೆದ್ದಾರಿ ರಸ್ತೆ ಸಂಪರ್ಕವಿದೆ.

## ತೋಟೆಗೌಡನಪಾಳ್ಯ

ತೋಟೆಗೌಡನಪಾಳ್ಯ ಹೆಸರುಹಳ್ಳಿಗೆ ಸೇರಿದ ಮಜರೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೯ ಕಿಮೀ ಅಂತರದಲ್ಲಿದೆ. ಬಯಲು ಪ್ರದೇಶ. ಹೆಸರಹಳ್ಳಿಯ ಮೂಲ ಕುಟುಂಬದವರೊಬ್ಬರು ತೋಟ ಪರಿಸರದಲ್ಲಿ ಮೊದಲಿಗೆ ವಸತಿ ನಿರ್ಮಿಸಿಕೊಂಡು ವಾಸಿಸುತ್ತಿದ್ದ ಕಾರಣದಿಂದ ತೋಟೇಗೌಡನಪಾಳ್ಯ ಎಂದು ಕರೆಯುತ್ತಿದ್ದಾರೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ,

ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯಿತ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕುರುಬರು, ನಾಯಕರು, ಉಪ್ಪಾರ ಜನಾಂಗ ಇಲ್ಲಿ ವಾಸಿಸುತ್ತಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೩೪ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೬೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೧೬ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರ, ತಾಲ್ಲೂಕು ಪಂಚಾಯಿತಿ ಹಾಗೂ ದುಗಡಿಹಳ್ಳಿ ಗ್ರಾಮಪಂಚಾಯಿತ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಹೆಸರಹಳ್ಳಿಯಿಂದ ಅಂಚೆ ಸಂಪರ್ಕ ಹೊಂದಿದೆ. ಹೆಸರಹಳ್ಳಿಗೆ ಕಚ್ಚಾ ರಸ್ತೆ ಸಂಪರ್ಕ ಹೊಂದಿದೆ. ಶಿಕ್ಷಣ, ಪಡಿತರವನ್ನು ಹೆಸರಹಳ್ಳಿಯಿಂದ ಪಡೆಯುತ್ತಿದ್ದಾರೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಹೆಸರಹಳ್ಳಿ ಚಿಕ್ಕಮ್ಮ, ಬೀರದೇವರಿಗೆ ನಡೆದುಕೊಳ್ಳುತ್ತಾರೆ. ಆರತಿ, ಉತ್ಸವವೂ ಇರುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಿಗಳನಹಳ್ಳಿಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೧ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೨೯೬ ಹೆಕ್ಟೇರ್. ತಿಗಳನಹಳ್ಳಿಯಿಂದ ವಲಸೆ ಬಂದ ಜನರು ಈ ಗ್ರಾಮದಲ್ಲಿ ವಾಸವಾಗಿರುವುದರಿಂದ ತಿಗಳನಹಳ್ಳಿಪಾಳ್ಯ ಎಂಬ ಹೆಸರು ಬಂದಿದೆ. ಇದೊಂದು ಮಜರೆ ಗ್ರಾಮವಾಗಿದ್ದು ತಿಗಳನಹಳ್ಳಿಗೆ ಸೇರ್ಪಡೆಯಾಗಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಪಶ್ಚಿಮ ದಿಕ್ಕಿಗೆ ಹೊಸಕಟ್ಟೆ ಎಂಬ ಕಟ್ಟೆಯಿದ್ದು ಮಳೆಯ ನೀರನ್ನು ಅವಲಂಬಿಸಿದೆ. ಗ್ರಾಮಪಂಚಾಯಿತ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ೨ ಮಿನಿ ಟ್ಯಾಂಕ್, ೧೦ ಕೊಳವೆ ಬಾವಿಗಳ

ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೧ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ. ಒಟ್ಟು ೩೮ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೯೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಮಣ್ಣಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಆದಿಕರ್ನಾಟಕ ಸಮುದಾಯವು ಪ್ರಧಾನವಾಗಿದ್ದು ಮಡಿವಾಳ ಮತ್ತು ಲಿಂಗಾಯಿತ ಸಮುದಾಯಗಳು ಕಿರು ಸಮುದಾಯಗಳಾಗಿವೆ.

ಕೃಷಿ ಪ್ರಧಾನವಾದ ಮರಳು ಮಿಶ್ರಿತ ಕೆಂಪು ಮತ್ತು ಕಪ್ಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಜೆ.ಸಿ.ಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶಿಕ್ಷಣಕ್ಕೆ ಗ್ಯಾರೇಹಳ್ಳಿ ಪಾಳ್ಯಕ್ಕೆ ಹೋಗುತ್ತಾರೆ. ಶೇ.೬೨ ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೧ ಸ್ತ್ರೀಶಕ್ತಿ ಸಂಘವಿದೆ. ಸಾರಿಗೆ, ಶಿಕ್ಷಣ ಇಲಾಖೆಗೆ ಸೇರಿದ ಮೂವರು ಸರ್ಕಾರಿ ನೌಕರರಿದ್ದಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ತಿತ್ತಿಗೊರವನಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆ ಹೋಬಳಿ ಚುಂಗನಹಳ್ಳಿ ಕಂದಾಯ ಗ್ರಾಮಕ್ಕೆ ಸೇರಿದ ಒಂದು ಮಜರೆ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ಮುಖ್ಯ ಗ್ರಾಮದ ೫೨೦.೧೬ ಹೆಕ್ಟೇರ್. ಗೊರವಪ್ಪ ಮೂಲದಿಂದಾಗಿ ತಿರಿಯುವ ಗೊರವ ರೂಪಾಂತರಗೊಂಡ ತಿತ್ತಿಗೊರವನಪಾಳೆಯ ಬೀಡು ಎಂಬ ಅರ್ಥದಲ್ಲಿ ಕರೆಯಲಾಗಿದೆ. ಚಿಕ್ಕನಾಯಕನಹಳ್ಳಿಯಿಂದ ೭ ಕಿ.ಮೀ ದೂರದಲ್ಲಿದೆ. ಇದೊಂದು ರೈತಾಪಿ ಬದುಕಿನ ಗ್ರಾಮ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಚೌಳಹಳ್ಳ ಹರಿದರೂ ಬೇಸಿಗೆಯಲ್ಲಿ ನೀರಿರುವುದಿಲ್ಲ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಕುರುಬರು, ನಾಯಕರು, ಅಗಸರು, ಆದಿಕರ್ನಾಟಕರು ವಾಸವಾಗಿದ್ದಾರೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೩೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೨೮ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು.

ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ಹೈನುಗಾರಿಕೆಯೂ ಇದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಗರಿಕಡ್ಡಿ, ಕಾಯಿಮಟ್ಟೆ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಶಿಕ್ಷಣ, ಪಡಿತರ ವಿಷಯಗಳಿಗೆ ಮುಖ್ಯ ಗ್ರಾಮವನ್ನು ಅವಲಂಬಿಸಿದೆ. ಶೆಟ್ಟಿಕೆರೆಯಿಂದ ಅಂಚೆ ಸಂಪರ್ಕವಿದೆ. ಶೆಟ್ಟಿಕೆರೆ–ತಿಪಟೂರು–ಸಾಸಲು ರಸ್ತೆಯ ಮೂಲಕ ಬಸ್ ಸಂಪರ್ಕವಿದೆ. ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ನೀಡುತ್ತಾರೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೬ ಫಲಾನುಭವಿಗಳಿದ್ದಾರೆ. ಶೆಟ್ಟಿಕೆರೆ ಕೆಂಪಮ್ಮ ಹಾಗೂ ಸಾಸಲು ಬನಶಂಕರಿ ದೇವಾಲಯಗಳಿಗೆ ನಡೆದುಕೊಳ್ಳುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ದಸೂಡಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೮ ಕಿಮೀ ಅಂತರದಲ್ಲಿರುವ ಕಂದಾಯ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ೯೦೩೪.೨೫ ಹೆಕ್ಟೇರ್. ಬೊಲ್ಲಪ್ಪನಹಟ್ಟಿ, ಎಮ್ಮೆಕರಕೆಹಟ್ಟಿ, ಕರಿಮರಸರದ ಹಟ್ಟಿ, ಚಿತ್ರದೇವರಹಟ್ಟಿ, ಹು.ನಾ. ತಾಂಡ್ಯ ಸೇರ್ಪಡೆ ಗ್ರಾಮಗಳಾಗಿವೆ. ಇಲ್ಲಿನ ಮಣ್ಣು ಮರಳು ಮಿಶ್ರಿತ ಬಿಳಿ ಮತ್ತು ಚಟ್ಟು ಲಕ್ಷಣವಿದ್ದು ಹಿಟ್ಟು ಬಂಡೆ, ಕರಿಕಲ್ಲು ಕಾಣಬಹುದಾಗಿದೆ. ಮಲಕಾಪುರದ ಬೆಟ್ಟ (ಆಂಜನೇಯಸ್ವಾಮಿ ಬೆಟ್ಟ) ಮತ್ತು ದೊಣೆಕಲ್ಲು ಗುಡ್ಡಗಾಡು ಪ್ರದೇಶದಿಂದ ಆವೃತ್ತವಾಗಿದ್ದು ೩೯೯೧.೩೭ ಎಕರೆ ರಕ್ಷಿತಾರಣ್ಯ ಪ್ರದೇಶವನ್ನು ಹೊಂದಿದೆ. ಇದರಲ್ಲಿ ಮಜರೆ ಗ್ರಾಮಗಳೂ ಸೇರಿದಂತೆ ಒಟ್ಟು ೫೧೧೨ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಶ್ರೀರಾಮ ಧನಸ್ಸನ್ನು ಇದೇ ಸ್ಥಳದಲ್ಲಿ ಹೂಡಿದ್ದನೆಂಬ ಪ್ರತೀತಿಯಿದೆ. ಆದ ಕಾರಣ ಧನಸ್ಸು + ಹೂಡಿ – ಧನಸ್ಸೂಡಿ ಎಂಬ ಹೆಸರು ಕೂಡ ಇತ್ತು. ಕಾಲ ಬದಲಾವಣೆಗೆ ಸಿಲುಕಿ ದಸೂಡಿಯಾಗಿ ಮರು ನಾಮಕರಣಗೊಂಡಿದೆ. ಇಂದಿಗೂ ಆಂಜನೇಯನ ದೇವಾಲಯದಲ್ಲಿ ದೊಡ್ಡ ಧನಸ್ಸು ಇಡಲಾಗಿದೆ.

ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ರಾಮಪ್ಪನಕೆರೆ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತದೆ. ೬ ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೪ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಒಕ್ಕಲಿಗ ದೊಡ್ಡ ಸಮುದಾಯವಾಗಿದೆ. ಮಡಿವಾಳ, ಕುಂಬಾರ ಸಣ್ಣ ಸಮುದಾಯಗಳಾಗಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೪೫೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೨೫೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೧೧೬ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೨೭೦ ಮನೆಗಳು ಶೌಚಾಲಯದ ವ್ಯವಸ್ಥೆಯನ್ನು ಹೊಂದಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಸೊಪ್ಪು, ತರಕಾರಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕಾರು, ಬೈಕ್, ಟೆಂಪೋಗಳಿವೆ. ಸಾಂಪ್ರದಾಯಿಕ ಕುರಿ ಸಾಕಣೆ, ಹೈನುಗಾರಿಕೆಯ ಜೊತೆಗೆ ಆಧುನಿಕ ಡೈರಿ ವ್ಯವಸ್ಥೆಯಿದೆ. ಹಾಲು ಉತ್ಪಾದಕರ ಸಹಕಾರಿ ಸಂಘವಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ವ್ಯವಸಾಯ, ಕೂಲಿ ಹಾಗೂ ತೆಂಗಿನಕಡ್ಡಿ ಸಿಗಿಯುವುದು ಇಲ್ಲಿನ ಜನರ ಮುಖ್ಯ ಕಸುಬಾಗಿದೆ. ಸಣ್ಣ ಇಟ್ಟಿಗೆ ತಯಾರಿಕಾ ಕೈಗಾರಿಕೆಯಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ನಾಲ್ಕು ಜನ ಗ್ರಾಮಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ೧೦ ಜನ ಗ್ರಾಮಪಂಚಾಯ್ತಿ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶ್ರೀ ದುರ್ಗಾಪರಮೇಶ್ವರಿ, ಕಳಘಟ್ಟಮ್ಮ ಸ್ತ್ರೀಶಕ್ತಿ ಸಂಘ, ಮಾರುತಿ ಯುವಕ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಅಂಚೆ ಕಛೇರಿಯಿದೆ.

ಎರಡು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಹಾಗೂ ಪ್ರೌಢಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೮೩% ರಷ್ಟಿದೆ. ಬಾಲಕರ ವಿದ್ಯಾರ್ಥಿನಿಲಯವಿದೆ. ಪ್ರಾಥಮಿಕ ಆರೋಗ್ಯ ಘಟಕ ಮತ್ತು ಪಶುವೈದ್ಯಶಾಲೆಯಿದೆ. ಗ್ರಾಮಪಂಚಾಯ್ತಿ ಉಸ್ತುವಾರಿಯ ಒಂದು ಸಾರ್ವಜನಿಕ ಗ್ರಂಥಾಲಯವಿದ್ದು ಸುಮಾರು ೧೦೦೦ ಪುಸ್ತಕಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಪುರಾತನಕಾಲದ ಮಾಸ್ತಿಕಲ್ಲು ಮತ್ತು ಮಲಕಪುರದ ಬೆಟ್ಟದ ತಪ್ಪಲಿನಲ್ಲಿ ದೊರೆತಿರುವ ಶಿಲಾ ಶಾಸನವಿದೆ. ಸ್ಮಶಾನವಿದೆ.

ಆಂಜನೇಯ, ಕಳಘಟ್ಟಮ್ಮ, ಭೂತಪ್ಪನ ಗುಡಿಯಿದೆ. ವರ್ಷಕ್ಕೊಮ್ಮೆ ಆಂಜನೇಯನ ತೇರು ನಡೆಯುತ್ತದೆ. ಸಿಡಿ, ಓಕುಳಿ ಮತ್ತು ಬಲಿ ಪ್ರಮುಖ ಆಕರ್ಷಣೆಯಾಗಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮಾರುತಿ ಭಜನಾ ಮಂಡಳಿ ಹಾಗೂ ಕನ್ನಿಕಾ ಪರಮೇಶ್ವರಿ ವೈಶ್ಯ ಕಲಾಸಂಘವಿದ್ದು ಜಾನಪದ ಕಲೆ, ಕಲಾವಿದರನ್ನು ಪೋಷಿಸಿಕೊಂಡು ಬಂದಿದೆ. ಭಜನೆಯ ಚಂದ್ರಕಾಂತಮ್ಮ, ವಾದ್ಯದ ರಂಗನಾಥಪ್ಪ, ರಂಗಭೂಮಿಯ ಜ್ಞಾನಮೂರ್ತಿ ಮತ್ತು ವೀರಗಾಸೆಯ ವಸಂತಕುಮಾರ ಗ್ರಾಮದ ಪ್ರಮುಖ ಜಾನಪದ ಕಲಾವಿದರು.

## ದಸೂಡಿ–ಹೊಸೂರು ಬೋವಿ ಕಾಲೋನಿ

ದಸೂಡಿ ಹೊಸೂರು ಬೋವಿಕಾಲೋನಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೩ ಕಿಮೀ ಅಂತರದಲ್ಲಿದೆ. ಇದು ದಬ್ಬಗುಂಟೆ ಮಜರೆ ಗ್ರಾಮ. ಇದಕ್ಕೆ ಕೋಲುದೇವರಹಟ್ಟಿ ಸೇರ್ಪಡೆ ಗ್ರಾಮವಾಗಿದೆ. ಬಯಲು ನಾಡಾಗಿದೆ. ಮರಳು ಮಿಶ್ರಿತ ಬಿಳಿ ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಉತ್ತರಕ್ಕೆ ಬಸವನ ಗುಡ್ಡವಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೨ ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್

ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಒಕ್ಕಲಿಗ ಸಮುದಾಯ ಪ್ರಧಾನವಾಗಿದ್ದು ಬೆಸ್ತ ಮತ್ತು ಕಮ್ಮಾರ ಚಿಕ್ಕ ಸಮುದಾಯಗಳಾಗಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೫೩ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೬೯ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಗುಡಿಸಲು ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೭೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೬೮ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕೃಷಿ ಕೂಲಿಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ಹೈನುಗಾರಿಕೆಯಿದೆ. ದುರ್ಗರಾಜು ಎಂಬ ಸೈನಿಕರು ಹಾಗೂ ವಿಜಯಕುಮಾರ್ ಎಂಬ ಶಿಕ್ಷಕರಿದ್ದಾರೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದಸೂಡಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೨ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಖಾಸಗಿ ಬಸ್ಸು, ಆಟೋರಿಕ್ಷಾ ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ.

ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ನೀಡಲಾಗುತ್ತದೆ. ಸಾಕ್ಷರತೆ ೬೯% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ರಾಮಮಂದಿರ, ಕೋಲುದೇವರ ದೇವಾಲಯಗಳಿವೆ. ಒಂದು ಮಸೀದಿಯಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರಂಗಪ್ಪ ಭಜನೆ, ರಾಮಣ್ಣ ತಮಟೆ ಕಲಾವಿದರು. ನ್ಯಾಯಬೆಲೆ ಅಂಗಡಿಯ ಸೌಲಭ್ಯವಿದೆ.

## ದಬ್ಬಗುಂಟೆ

ದಬ್ಬಗುಂಟೆ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೨ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೯೪೧.೨೪ ಹೆಕ್ಟೇರ್. ಇದೊಂದು ಕಂದಾಯ ಗ್ರಾಮ. ರಾಮನಗರ, ಮರಾಠಿಪಾಳ್ಯ, ಹೊಸೂರು, ಬೋವಿ ಕಾಲೋನಿ ಮತ್ತು ದಸೂಡಿ ಕೋಲುದೇವರ ಹಟ್ಟಿ ಗ್ರಾಮಗಳು ಈ ಗ್ರಾಮಕ್ಕೆ ಸೇರ್ಪಡೆಯಾಗಿದೆ. ಬಯಲು ನಾಡಾಗಿದೆ. ದಿಬ್ಬದ ಸಮೀಪದ ಕೆರೆ ಇದ್ದುದರಿಂದ ದಿಬ್ಬದಕೆರೆ > ಕುಂಟೆ ದಬ್ಬಕುಂಟೆ ಎಂದಾಗಿದೆ. ಮರಳು ಮಿಶ್ರಿತ ಬಿಳಿ ಚಟ್ಟು ಭೂಪ್ರದೇಶವನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಅರವತ್ತನಹಳ್ಳವಿದ್ದು ಮಳೆಗಾಲದಲ್ಲಿ ಮಳೆ ಬಂದರೆ ಮಾತ್ರ ತುಂಬಿ ಹರಿಯುತ್ತದೆ. ಕೆರೆಯಿದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ.

ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕುಂಚಿಟಿಗ ಸಮುದಾಯವೇ ಪ್ರಧಾನವಾಗಿದ್ದು ಬೆಸ್ತ ಮತ್ತು ಮುಸ್ಲಿಮ್ ಕಿರು ಸಮುದಾಯಗಳಾಗಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮತ್ತು ಉರ್ದು ಮಾತನಾಡುತ್ತಾರೆ. ಒಟ್ಟು ೨೯೫ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೩೭೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಗುಡಿಸಲು ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೭೨ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೩೦ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ. ಜಿಲ್ಲಾ ಮುಖ್ಯ ರಸ್ತೆ, ನರೇಗಾ ಯೋಜನೆ ಹಾಗೂ ಕಚ್ಚಾ ರಸ್ತೆಯಿದೆ. ಖಾಸಗಿ ಬಸ್ಸು, ಆಟೋರಿಕ್ಷಾ ಹಾಗೂ ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಅಂಚೆ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ನವಣೆ ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕೃಷಿ, ಕೂಲಿ, ಬಟ್ಟೆ ಹೊಲಿಯುವ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿಮಿಲ್ಲು ಇದೆ. ಸಾಂಪ್ರದಾಯಿಕ ಹೈನುಗಾರಿಕೆಯಿದ್ದು ಆಧುನಿಕ ಡೈರಿಯ ಸೌಲಭ್ಯವಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದಸೂಡಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ೪ ಜನ ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೫ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ.

ಎರಡು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಸರ್ಕಾರಿ ಪ್ರೌಢಶಾಲೆಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೮೪% ರಷ್ಟಿದೆ. ಗ್ರಂಥಾಲಯದ ಸೌಲಭ್ಯವಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೪೭ ಫಲಾನುಭವಿಗಳಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪಶುವೈದ್ಯ ಆಸ್ಪತ್ರೆಯಿದೆ. ದಬ್ಬಗುಂಟೆ ಗ್ರಾಮದಲ್ಲಿ ಪ್ರಾಚೀನ ಕಾಲದ ವೀರಗಲ್ಲು ಇದೆ.

ತಿಮ್ಮಣ್ಣಸ್ವಾಮಿ, ಶನಿದೇವ, ಆಂಜನೇಯ ಹಾಗೂ ರಂಗನಾಥಸ್ವಾಮಿ ದೇವಾಲಯಗಳಿದ್ದು ತಮ್ಮಣ್ಣಸ್ವಾಮಿ ದೇವರ ಜಾತ್ರೆಯನ್ನು ಆಚರಿಸುತ್ತಾರೆ. ತೇರು, ತೆಪ್ಪ, ಪಲ್ಲಕ್ಕಿ, ಪರಿಸೆ, ಕರಗ, ಉತ್ಸವ, ಹರಕೆಗಳನ್ನು ಆಚರಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಬಕ್ರೀದ್, ಈದ್ ಮತ್ತು ರಂಜಾನ್ ಆಚರಣೆಯಿದೆ. ನ್ಯಾಯಬೆಲೆ ಅಂಗಡಿಯಿದೆ.

## ದಾಸಪ್ಪನಹಟ್ಟಿ

ದಾಸಪ್ಪನಹಟ್ಟಿಯು ಮರೆನಡು ಗ್ರಾಮಕ್ಕೆ ಸೇರಿದ ಮಜರೆ ಗ್ರಾಮ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೨ ಕಿಮೀ ಅಂತರದಲ್ಲಿದೆ. ಕಾಡುಗೊಲ್ಲರ ಬುಡಕಟ್ಟು ಗ್ರಾಮ. ಕಾಡುಗೊಲ್ಲ ಜನಾಂಗಕ್ಕೆ ಸೇರಿದ ೨೭ ಮನೆಗಳಿದ್ದು ೧೫೪ ಜನಸಂಖ್ಯೆ ಹೊಂದಿದೆ. ಇವು ಹೆಂಚಿನ, ಶೀಟಿನ, ೪ ಬಾದೆಹುಲ್ಲಿನ ಗುಡಿಸಲುಗಳಿವೆ. ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ೧೧ ಫಲಾನುಭವಿಗಳಿದ್ದಾರೆ. ಶೌಚಾಲಯ ಇಲ್ಲದೆ ಬಯಲು ಶೌಚಾಲಯ ಬಳಸುತ್ತಾರೆ. ಕೃಷಿ ಹಾಗೂ ಪಶುಪಾಲನೆ ಮುಖ್ಯ ಉದ್ಯೋಗ. ರೈತರು ರಾಗಿ, ಸೇಂಗಾ, ಹೆಸರು, ಹುರುಳಿ ಬೆಳೆಯುತ್ತಾರೆ. ಹಸು, ಕುರಿ, ಮೇಕೆ, ಕತ್ತೆ ಸಾಕುಪ್ರಾಣಿಗಳು. ಕುರಿಗಳೊಂದಿಗೆ ಡಿಸೆಂಬರ್‌ನಿಂದ ಮೇ ವರೆಗೆ ಹುಲ್ಲು-ನೀರಿಗಾಗಿ ಪರಸ್ಥಳಕ್ಕೆ ಹೋಗುತ್ತಾರೆ. ಶಿಕ್ಷಣ, ಪಡಿತರ ಸೌಲಭ್ಯಗಳನ್ನು ಮರೆನಡು ಹಾಗೂ

ದಸೂಡಿಯಿಂದ ಪಡೆಯುತ್ತಾರೆ. ದಸೂಡಿ ಗ್ರಾಮ ಪಂಚಾಯ್ತಿಯಿಂದ ಕುಡಿಯುವ ನೀರು ಒದಗಿಸಲಾಗಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ೬ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ಬಾಲದೇವರ ಗುಡಿಯಿದ್ದು ದೀಪಾವಳಿ ಸಂದರ್ಭದಲ್ಲಿ ದೀಪ ಏರಿಸುವ, ದೀಪ ಇಳಿಸುವ ವಿಶೇಷ ಆಚರಣೆ ಮಾಡುತ್ತಾರೆ. ಹಿರಿಯರ ಹಬ್ಬ ಎಂದು ಹಾಲು-ತುಪ್ಪ ಅರ್ಪಣೆ, ದೇವರುಗಳ ಮೆರವಣಿಗೆ ವಿಶೇಷವಾಗಿರುತ್ತದೆ. ತೆಂಗು, ಹುಣಸೆ ಹಣ್ಣು, ಹೊಂಗೆ ಬೀಜ ವ್ಯಾಪಾರಿ ಸರಕಾಗಿದೆ. ಕುರಿ ವ್ಯಾಪಾರವೂ ಇದೆ. ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ದಸೂಡಿ ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಬೋರನಕಣಿವೆ ಮಾರ್ಗವಾಗಿ ಹಿರಿಯೂರು-ಹುಳಿಯಾರು-ಸಿರಾ ರಸ್ತೆ ಬಸ್ ಸಂಪರ್ಕವಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ದಸೂಡಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ದುರ್ಗದಸೀಮೆ ಪಾಳ್ಯ

ದುರ್ಗದಸೀಮೆಪಾಳ್ಯ ಗ್ರಾಮವು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೬ ಕಿಮೀ ಅಂತರದಲ್ಲಿದೆ. ಹುಳಿಯಾರು ಹೋಬಳಿ ಕೆಂಕೆರೆ ಗ್ರಾಮಪಂಚಾಯ್ತಿಗೆ ಸೇರಿದ ಬರದಲೇಪಾಳ್ಯದ ಮಜರೆ ಗ್ರಾಮವಾಗಿದೆ. ಹೊಸದುರ್ಗ ಮೂಲದ ಕಡೆಯವರು ಮೊದಲಿಗೆ ಬಂದು ನೆಲೆಸಿ ಜನವಸತಿ ನಿರ್ಮಿಸಿಕೊಂಡ ಕಾರಣದಿಂದಾಗಿ ದುರ್ಗದಸೀಮೆ ಪಾಳ್ಯ ಎಂದು ಕರೆದಿದ್ದಾರೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ವೀರಶೈವರು, ಕುರುಬರು, ನಾಯಕರು, ಅಗಸರು ಇಲ್ಲಿನ ನಿವಾಸಿಗಳು. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೪೭ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೧೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಮಾಳಿಗೆ, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಚಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೧೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಶಿಕ್ಷಕರು, ಕಂದಾಯ, ಸಾರಿಗೆ, ಅರಣ್ಯ ಇಲಾಖೆಗೆ ಸೇರಿದ ಸರ್ಕಾರಿ ನೌಕರರಿದ್ದಾರೆ. ಶಿಕ್ಷಣ, ನ್ಯಾಯಬೆಲೆ ಅಂಗಡಿಗಳು ಕೆಂಕೆರೆಯಿಂದ ಪಡೆದುಕೊಳ್ಳಲಾಗುತ್ತಿದೆ. ಕಾಲೇಜು ಶಿಕ್ಷಣಕ್ಕೆ ಹುಳಿಯಾರು ಕೆಂಕೆರೆಗೆ ಹೋಗುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ, ಅಡಿಕೆ, ಚಿಪ್ಪು, ಗರಿಕಡ್ಡಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ

ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕೃಷಿ ಹಾಗೂ ಕೂಲಿ ಕಾರ್ಮಿಕರು ಇದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಲಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಕೆಂಕೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೩ ಸ್ತ್ರೀಶಕ್ತಿ ಸಂಘ ಮತ್ತು ೨ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ಸಹಕಾರ ಸಂಘ, ಬ್ಯಾಂಕ್‌ಗೆ, ಹೈಲಿನ ಡೈರಿಗೆ ಕೆಂಕೆರೆಗೆ ಹೋಗುತ್ತಾರೆ. ಹುಳಿಯಾರು–ಹಿರಿಯೂರು ಕಡೆಗೆ ರಸ್ತೆ ಸಂಪರ್ಕ, ಬಸ್‌ಗಳಿವೆ. ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ನೀಡಲಾಗುತ್ತದೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ದೊಡ್ಡಬಿದರೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೧೮ ಕಿಮೀ ಅಂತರದಲ್ಲಿರುವ ಬಯಲುನಾಡಿನ ಕಂದಾಯ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ೧೮೨೩.೦೮ ಹೆಕ್ಟೇರ್. ಹೊಸ ತಾಂಡ್ಯ ಮತ್ತು ಹಳೇ ತಾಂಡ್ಯ ಸೇರ್ಪಡೆ ಗ್ರಾಮಗಳಾಗಿವೆ. ೧೬೧೪ ಹೆಕ್ಟೇರ್ ಕೃಷಿ ಭೂಮಿಯಿದೆ. ಇಲ್ಲಿಯ ಮರಳು ಮಿಶ್ರಿತ ಬಿಳಿ ಮಣ್ಣು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಪೂರ್ವಕ್ಕೆ ಕೆರೆಯಿದ್ದು ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ಬೆರಳೆಣಿಕೆಯಷ್ಟು ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೫ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಉಪ್ಪಾರ ದೊಡ್ಡ ಸಮುದಾಯವಾಗಿದ್ದು ಲಿಂಗಾಯಿತ, ತಿಗುಳ ಮತ್ತು ನಾಯಕ ಸಣ್ಣ ಸಮುದಾಯಗಳಾಗಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೨೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೪೭೭ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ, ಗುಡಿಸಲು ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೨೯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೯೮ ಕುಟುಂಬಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ತರಕಾರಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕು, ಕಾರು, ಲಾರಿ, ಟೆಂಪೋಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ

ಭೋಜನವಾಗಿದೆ. ಕೂಲಿ ಕಾರ್ಮಿಕರು ತೆಂಗಿನಕಡ್ಡಿ ಸಿಗಿಯುವ ಜನರು ಇದ್ದಾರೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಿಮ್ಲಾಪುರ ತಾಲ್ಲೂಕು ಪಂಚಾಯ್ತಿ ಹಾಗೂ ದೊಡ್ಡಬಿದರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಗ್ರಾಮಪಂಚಾಯ್ತಿಯಲ್ಲಿ ೪ ಜನ ಸದಸ್ಯರು ಮತ್ತು ೧೦ ಜನ ನೌಕರರು ಇದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಹಾಲು ಉತ್ಪಾದಕರ ಸಹಕಾರ ಸಂಘ, ೧೦ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ. ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆ ಹಾಗೂ ಕಚ್ಚಾ ರಸ್ತೆ ಸಂಪರ್ಕವಿದ್ದು ಸರ್ಕಾರಿ, ಖಾಸಗಿ ಬಸ್ಸುಗಳ ಸೌಕರ್ಯವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೮೦.೬% ರಷ್ಟಿದೆ. ಗ್ರಾಮಪಂಚಾಯ್ತಿ ಉಸ್ತುವಾರಿಯ ಸಾರ್ವಜನಿಕ ಗ್ರಂಥಾಲಯವಿದ್ದು ೧೫೦೦ ಪುಸ್ತಕಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ೨೬ ಫಲಾನುಭವಿಗಳಿದ್ದಾರೆ.

ಈಶ್ವರ, ಕರಿಯಮ್ಮ, ಆಂಜನೇಯ, ಪಾತಲಿಂಗೇಶ್ವರ ಹಾಗೂ ಭೈರೇದೇವರ ದೇವಾಲಯಗಳಿವೆ. ವರ್ಷಕ್ಕೊಮ್ಮೆ ನಡೆಯುವ ಪಾತಲಿಂಗೇಶ್ವರನ ತೇರು, ಕರಿಯಮ್ಮ ದೇವಿ ಕರಗ ಇಲ್ಲಿನ ವಿಶೇಷ ಆಕರ್ಷಣೆ. ಹರಕೆ, ಸಿಡಿ ಹಾಗೂ ಬಲಿ ಪೂಜೆ ಚಾಲ್ತಿಯಲ್ಲಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ, ರಂಜಾನ್, ಬಕ್ರಿದ್ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕರಪಾಲ ಮೇಳದ ಬಸವರಾಜು ಜನಪ್ರಿಯ ಜನಪದ ಕಲಾವಿದರು. ಇವರು ಚಲನಚಿತ್ರದಲ್ಲೂ ಅಭಿನಯಿಸಿದ್ದಾರೆ. ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು.

## ದೊಡ್ಡಬಿದರೆ ಎ.ಕೆ. ಕಾಲೋನಿ

ದೊಡ್ಡಬಿದರೆ ಎ.ಕೆ. ಕಾಲೋನಿಯು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೧೮ ಕಿಮೀ ಅಂತರದಲ್ಲಿದೆ. ಇದು ದೊಡ್ಡಬಿದರೆ ಗ್ರಾಮಕ್ಕೆ ಹೊಂದಿಕೊಂಡಂತೆ ಪ್ರತ್ಯೇಕ ಆದಿಕರ್ನಾಟಕ ಜನಾಂಗದ ಬಡಾವಣೆ ನಿರ್ಮಾಣವಾದುದರಿಂದ ಮಾದಿಗರಹಳ್ಳಿ ಎ.ಕೆ. ಕಾಲೋನಿ ಎಂದೆಲ್ಲಾ ಕರೆಯುತ್ತಾರೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೨ ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೧೨೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೫೩೪ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೨೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಹುಣಸೆಹಣ್ಣು, ಮುತ್ತುಗದ ಎಲೆ, ಗರಿಕಡ್ಡಿ ಸಂಗ್ರಹ,

ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಸಮೀಪದ ಸಿಮೆಂಟ್ ಕಾರ್ಖಾನೆಗೆ ಕೆಲವರು ಕಾರ್ಮಿಕರಾಗಿ ಹೋಗುತ್ತಿದ್ದಾರೆ. ಶಿಕ್ಷಣ, ಅರಣ್ಯ, ಕಂದಾಯ, ಕೆಇಬಿ ಇಲಾಖೆಗೆ ಸೇರಿದ ೧೨ ಜನ ಸರ್ಕಾರಿ ನೌಕರರು ಈ ಗ್ರಾಮದಲ್ಲಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಶಿಕ್ಷಣ, ಪಡಿತರ ವಿಚಾರಗಳಿಗೆ ಮುಖ್ಯಗ್ರಾಮಕ್ಕೆ ಹೋಗುತ್ತಾರೆ. ಚಿಕ್ಕನಾಯಕನಹಳ್ಳಿ–ಹುಳಿಯಾರು ಮುಖ್ಯ ರಸ್ತೆಯಲ್ಲಿದ್ದು ಉತ್ತಮ ಬಸ ಸಂಪರ್ಕವಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಬಿದರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ದೊಡ್ಡ ಬಿದರೆ ಅಂಚೆ ಸೌಕರ್ಯವಿದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ಮಕ್ಕಳಿಗೆ ಪೌಷ್ಠಿಕ ಆಹಾರ ನೀಡುತ್ತಾರೆ. ಸಾಕ್ಷರತೆ ೬೭% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಕರಿಯಮ್ಮ, ಭೈರವೇಶ್ವರ ದೇವಾಲಯವಿದೆ. ಕರಿಯಮ್ಮ ದೇವರ ಕರಗ ಉತ್ಸವ, ಮಡೆ, ಬಾನ, ಬಾಯಿಬೀಗ ಇಲ್ಲಿನ ವಿಶೇಷ. ಗ್ರಾಮದ ಪಾತಲಿಂಗೇಶ್ವರನ ತೇರು ಈ ಗ್ರಾಮದ ಕುಲಾಚಾರ ಪದ್ಧತಿ. ತೋಟಿ, ತಳವಾರ ನಿಯಮಾವಳಿಯನ್ನು ಆಚರಿಸಲಾಗುತ್ತಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ದೊಡ್ಡಬಿದರೆ ಹಳೆ ತಾಂಡ್ಯ

ದೊಡ್ಡಬಿದರೆ ಹಳೆ ತಾಂಡ್ಯವು ದೊಡ್ಡ ಬಿದರೆಯ ಮಜರೆ ಗ್ರಾಮವಾಗಿದ್ದು ಗ್ರಾಮದಿಂದ ಪ್ರತ್ಯೇಕಗೊಂಡು ಲಂಬಾಣಿ ಜನಾಂಗದವರು ಜನವಸತಿ ನಿರ್ಮಿಸಿಕೊಂಡ ಕಾರಣ ಗ್ರಾಮ ಬೆಳೆದು ಲಂಬಾಣಿತಾಂಡ್ಯ ಎಂದು ಕರೆದರು. ನಂತರ ಇದರ ಪಕ್ಕದಲ್ಲಿಯೇ ಪ್ರತ್ಯೇಕವಾಗಿ ಲಂಬಾಣಿ ಜನಾಂಗದ ಮನೆಗಳು ನಿರ್ಮಾಣವಾದ ಕಾರಣ ಅದಕ್ಕೆ ಹೊಸತಾಂಡ್ಯ ಎಂದೂ, ಮೊದಲು ನಿರ್ಮಾಣವಾದ ಗ್ರಾಮಕ್ಕೆ ಹಳೆ ತಾಂಡ್ಯ ಎಂದು ಕರೆಯುತ್ತಾರೆ. ಲಂಬಾಣಿ ಸಮುದಾಯದ ಒಟ್ಟು ೫೮ ಮನೆಗಳಿದ್ದು ೨೦೪ ಜನಸಂಖ್ಯೆ ಹೊಂದಿದೆ. ಕೃಷಿ ಹಾಗೂ ಕೂಲಿ ಇವರ ಪ್ರಮುಖ ಉದ್ಯೋಗ. ಸಿಮೆಂಟ್ ಹಾಗೂ ನಾರಿನ ಫ್ಯಾಕ್ಟರಿಯ ಕಾರ್ಮಿಕರಿದ್ದಾರೆ. ಹೆಂಚಿನ, ಶೀಟಿನ ಮನೆಗಳಿದ್ದು ಇವೆಲ್ಲವೂ ಜನತಾ, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಕುಡಿಯಲು ದೊಡ್ಡ ಬಿದರೆ ಗ್ರಾಮದಿಂದ ಕೊಳವೆ ಬಾವಿ ಮೂಲಕ ನೀರು ಪೂರೈಸಲಾಗುತ್ತಿದೆ. ರಾಗಿಮುದ್ದೆ ಇವರ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುತ್ತಾರೆ. ಹೋಳಿಗೆ, ಪಾಯಸ, ಬಾಡೂಟ ಇವರ ಸಾಂದರ್ಭಿಕ ವಿಶೇಷ ಭೋಜನವಾಗಿದೆ. ಶಿಕ್ಷಣ, ಪಡಿತರ ವಿಷಯಗಳಿಗೆ ಮುಖ್ಯ ಗ್ರಾಮದೊಂದಿಗೆ (ದೊಡ್ಡಬಿದರೆಗೆ) ಹೋಗುತ್ತಾರೆ. ಒಂದು ಅಂಗನವಾಡಿ ಕೇಂದ್ರವಿದೆ. ಬಯಲು ಶೌಚಾಲಯ ಬಳಸುತ್ತಾರೆ. ಸಮುದಾಯದ ಸೌಲಭ್ಯಗಳಾದ ವಿಧವಾ, ವೃದ್ಧಾಪ್ಯ ವೇತನಗಳ ೩೨ ಫಲಾನುಭವಿಗಳಿದ್ದಾರೆ. ದೊಡ್ಡ ಬಿದರೆ ಗ್ರಾಮ ಪಂಚಾಯ್ತಿ, ತಿಮ್ಲಾಪುರ ತಾಲ್ಲೂಕು ಪಂಚಾಯ್ತಿ, ಹುಳಿಯಾರು ಜಿಲ್ಲಾ ಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ೨ ಸ್ತ್ರೀಸಕ್ತಿ ಸಂಘಗಳಿವೆ. ಇವು ಮಹಿಳೆಯರ ಸ್ವಾವಲಂಬನೆಗೆ ಪ್ರೇರಕವಾಗಿದೆ. ಗರಿಕಡ್ಡಿ, ಮುತ್ತುಗದ ಎಲೆ ವ್ಯಾಪಾರವಿದೆ. ಕೃಷಿಕರು ರಾಗಿ, ಹೆಸರು, ಜೋಳ ಬೆಳೆಯುತ್ತಾರೆ. ದೊಡ್ಡಬಿದರೆ ಕೆರೆಯಿದ್ದು ತುಂಬಿದರೆ ಭತ್ತದ ಬೆಳೆಯು ವಿಶೇಷವಾಗಿರುತ್ತದೆ. ಹುಳಿಯಾರು, ಚಿಕ್ಕನಾಯ್ಕನಹಳ್ಳಿ ಮಾರ್ಗವಾಗಿ ರಸ್ತೆ ಬಸ್ ಸಂಚಾರವಿದೆ. ಸೇವಾಲಾಲ್ ದೇವಾಲಯದ ಪುಟ್ಟ ಪೌಳಿಯಿದ್ದು ದೀಪಾವಳಿಯಲ್ಲಿ ವಿಶೇಷ ಉತ್ಸವ ಮಾಡುತ್ತಾರೆ. ಸಾಂಪ್ರದಾಯಿಕ ಉಡುಗೆ ತೊಡುಗೆಯೊಂದಿಗೆ ಸಾಮೂಹಿಕ ನೃತ್ಯ ಕಾರ್ಯಕ್ರಮವಿರುತ್ತದೆ. ದೀಪಾವಳಿ, ದಸರಾ, ಗೌರಿ–ಗಣೇಶ, ಯುಗಾದಿ ವಿಶೇಷ ಹಬ್ಬಗಳು.

## ದೊಡ್ಡಬಿದರೆ ಹೊಸತಾಂಡ್ಯ

ಹಳೇ ಲಂಬಾಣಿ ತಾಂಡ್ಯ ಹಾಗೂ ಹೊಸ ಲಂಬಾಣಿ ತಾಂಡ್ಯಗಳು ಸೇರಿ ದೊಡ್ಡಬಿದರೆ ತಾಂಡ್ಯ ಗ್ರಾಮವಾಗಿದೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೧೮ ಕಿಮೀ ಅಂತರದಲ್ಲಿದೆ. ದೊಡ್ಡಬಿದರೆ

ತಾಂಡ್ಯವು ಮಜರೆ ಗ್ರಾಮ ಬಯಲು ನಾಡಾಗಿದೆ. ಕೆಂಪು ಮಿಶ್ರಿತ ಮರಳು ಭೂಮಿಯು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ನರಿ, ಮೊಲ, ಜಿಂಕೆ ಮುಂತಾದ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ-ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಲಂಬಾಣಿ ಸಮುದಾಯ ಪ್ರಧಾನವಾಗಿದ್ದು ಆಚಾರ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮತ್ತು ಲಂಬಾಣಿ ಮಾತನಾಡುತ್ತಾರೆ. ಒಟ್ಟು ೫೧ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೦೮ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ನಿಲಯಗಳು ಹಾಗೂ ಇಂದಿರಾ ಆವಾಸ್ ಯೋಜನೆಯ ೮೨ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೫೧ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ತರಕಾರಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್ ಮತ್ತು ಟೆಂಪೋಗಳಿವೆ. ಕೃಷಿ ಕೂಲಿ ಕಾರ್ಮಿಕರು ಹೆಚ್ಚಾಗಿದ್ದಾರೆ. ಪೊಲೀಸ್ ಇಲಾಖೆಯಲ್ಲಿ ಸುನೀತ, ಶಿಕ್ಷಣ ಇಲಾಖೆಯಲ್ಲಿ ಚಂದ್ರನಾಯ್ಕ ಕಾರ್ಯನಿರ್ವಹಿಸುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಿಮ್ಲಾಪುರ ತಾಲ್ಲೂಕು ಪಂಚಾಯ್ತಿ ಹಾಗೂ ದೊಡ್ಡಬಿದರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಯಶಸ್ವಿನಿ ಸ್ತ್ರೀಶಕ್ತಿ ಸಂಘ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ೬೧% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಸೇವಾಲಾಲ್, ಕರಿಯಮ್ಮ ಇಲ್ಲಿನ ದೇವಾಲಯಗಳು. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ದಾಸಯ್ಯನಹಟ್ಟಿ

ದಾಸಯ್ಯನಹಟ್ಟಿ ಗ್ರಾಮವು ಗೌಡನಹಳ್ಳಿಯ ಮಜರೆ ಗ್ರಾಮವಾಗಿದ್ದು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೨ ಕಿ.ಮೀ. ದೂರದಲ್ಲಿದೆ. ಇದೊಂದು ಬಯಲುನಾಡಿನ ಪ್ರದೇಶವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ಮುಖ್ಯ ಗ್ರಾಮದ ೭೫೨.೧೧ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ. ಕಾಡುಹಂದಿ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ, ಕೋಳಿ

ಸಾಕುಪ್ರಾಣಿಗಳಾಗಿವೆ. ವಾರ್ಷಿಕ ಸರಾಸರಿ ೫೯೭ ಮಿಮೀ ಮಳೆ ಬೀಳುತ್ತಿದ್ದು ಉಷ್ಣಾಂಶ ೩೭ ಡಿಗ್ರಿ ಸೆಂಟಿಗ್ರೇಡ್ ಇದ್ದರೆ ಚಳಿ ೧೩ ಡಿಗ್ರಿ ಸೆಂಟಿಗ್ರೇಡ್ ಆಗಿದೆ. ಕುಡಿಯಲು ಗ್ರಾಮ ಪಂಚಾಯ್ತಿಯ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಒಂದು ಸೇದೋ ಬಾವಿಯಿದ್ದು ಒಣಗಿಹೋಗಿದೆ. ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುರುಹಿನ ಶೆಟ್ಟಿ ಜಾತಿಗೆ ಸೇರಿದವರು ದೊಡ್ಡ ಸಮುದಾಯವಾಗಿದ್ದು ಮಡಿವಾಳ, ಬಿಳಿ ಮಗ್ಗದವರು ಕಿರು ಸಮುದಾಯವಾಗಿದೆ. ವಿವಿಧ ಸ್ವರೂಪದ ೧೩ ಮನೆಗಳಿದ್ದು ಇವು ಹೆಂಚಿನ, ಶೀಟಿನ ಸ್ವರೂಪದ ಮನೆಗಳಿದ್ದು ಕೆಲವು ಇಂದಿರಾ ಆವಾಸ್, ಜನತಾ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಅಮುಖ್ಯ ಆಹಾರವಾಗಿದೆ. ಪಾಯಸ, ಹೋಳಿಗೆ, ಬಾಡೂಟ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ಎತ್ತಿನ ಗಾಡಿಯೊಂದಿಗೆ ದ್ವಿಚಕ್ರ ವಾಹನಗಳಿವೆ. ಕೃಷಿ ಮುಖ್ಯ ಕಸುಬಾಗಿದ್ದು ರಾಗಿ, ಹೆಸರು, ಹುರುಳಿ, ಜೋಳ ಬೆಳೆಯುತ್ತಾರೆ. ತೆಂಗು ಅಡಿಕೆ ತೋಟಗಳಿವೆ. ಅಡಿಕೆ, ತೆಂಗು ವ್ಯಾಪಾರಿ ಸರಕಾಗಿವೆ. ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಹೆಸರಹಳ್ಳಿ ಅಂಚೆ ಸಂಪರ್ಕ ಹೊಂದಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯ ವೇತನಗಳ ೧೬ ಫಲಾನುಭವಿಗಳಿದ್ದಾರೆ. ಪಡಿತರ, ಶಿಕ್ಷಣ ಸೌಲಭ್ಯವನ್ನು ಗೌಡನಹಳ್ಳಿಯಿಂದ ಪಡೆಯುತ್ತಿದ್ದಾರೆ. ಗ್ರಾಮದ ಸಾಕ್ಷರತೆ ೫೯% ರಷ್ಟಿದೆ. ಬಟ್ಟೆ ವ್ಯಾಪಾರವಿದೆ. ಕರಿಯಮ್ಮ, ಗೌಡಮ್ಮನ ಹಬ್ಬ ಆಚರಿಸುತ್ತಾರೆ. ಯುಗಾದಿ, ದೀಪಾವಳಿ, ದಸರಾ ಹಬ್ಬಗಳನ್ನು ಆಚರಿಸುತ್ತಾರೆ.

## ದಾಸಗೆರೆ

ದಾಸಗೆರೆಯು ಶೆಟ್ಟಿಕೆರೆ ಗ್ರಾಮದ ಒಂದು ಮಜರೆ ಗ್ರಾಮ. ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ೧೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ಶೆಟ್ಟಿಕೆರೆ ವಿಸ್ತೀರ್ಣದ ೧೯೪೧.೫೯ ಚ.ಕಿ.ಮೀ. ನಲ್ಲಿ ಸೇರಿದೆ. ಇದೊಂದು ಬಯಲುನಾಡಿನ ಗ್ರಾಮವಾಗಿದ್ದು ಬಿಳಿಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಈ ಸುತ್ತ ಕಾಡುಹಂದಿ, ಮೊಲ, ಕಂಕನರಿ, ತೋಳ ಇತ್ಯಾದಿ ಪ್ರಾಣಿಗಳು ನವಿಲು, ಗಿಳಿ, ಕಾಗೆ, ಗುಬ್ಬಚ್ಚಿ, ಸಾಂಬಾರ ಕಾಗೆ, ಬೆಳವನಹಕ್ಕಿ, ಉಣ್ಣೆಗೊರವ ಇತ್ಯಾದಿ ಪಕ್ಷಿಗಳು ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಇತ್ಯಾದಿ ಸಾಕುಪ್ರಾಣಿಗಳು ಕಂಡುಬರುತ್ತವೆ. ಕೋಳಿಯನ್ನು ಸ್ವಂತ ಬಳಕೆಗಾಗಿ ಸಾಕುತ್ತಾರೆ. ಇಲ್ಲಿನ ಹವಾಮಾನ ಗಮನಿಸಿದಾಗ ೧೫-೨೦ ಡಿಗ್ರಿ ಚಳಿಯೂ, ೨೬-೩೬ ಡಿಗ್ರಿ ಬಿಸಿಲೂ ಕಂಡುಬರುತ್ತದೆ. ೫೩೧.೨ ಮಿ.ಮೀ ನ ಆಸುಪಾಸು ಮಳೆ ಬಿದ್ದ ದಾಖಲೆ ಇವೆ. ಸಮೀಪ ದಾಸಗೆರೆಹಳ್ಳ ಹರಿಯುತ್ತದೆ. ಈ ಹಳ್ಳ ಶೆಟ್ಟಿಕೆರೆ ಕೆರೆಯ ಕೋಡಿ ನೀರು ಹರಿಯಲು ಇರುವ ಹಳ್ಳವಾಗಿದೆ. ಎರಡು ತೆರೆದ ಬಾವಿಗಳಿದ್ದು ನೀರು ಬತ್ತಿಹೋಗಿದೆ. ಇಲ್ಲಿ ೩ ಕೈಪಂಪುಗಳು, ೨೬ ಕೊಳವೆ ಬಾವಿಗಳಿವೆ. ಪುರ್ಲಯ್ಯನಕಟ್ಟೆ, ಕರಿಯಜ್ಜಿಕಟ್ಟೆ, ಪರಂಗಿಕಟ್ಟೆಗಳೆಂಬ ೩ ಕಟ್ಟೆಗಳಿವೆ. ಕುಡಿಯುವ ನೀರನ್ನು ಒದಗಿಸಲು ೭ ಸಿಸ್ಟನ್‌ಗಳನ್ನು ಇಟ್ಟು ೨೮ ನಲ್ಲಿಗಳನ್ನು ಅಳವಡಿಸಲಾಗಿದೆ.

ಕುರುಬರು ಹಾಗೂ ಬೆಸ್ತರು ದೊಡ್ಡ ಸಮುದಾಯವಾಗಿದ್ದು ಇವರು ಸಮಾನ ಸಂಖ್ಯೆಯಲ್ಲಿದ್ದಾರೆ. ಉಳಿದಂತೆ ಕೊರಮರು, ಜೋಗಪ್ಪಗಳು, ದಾಸಪ್ಪಗಳು ಸಣ್ಣ ಸಮುದಾಯದವರಾಗಿದ್ದಾರೆ. ಎಲ್ಲರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ತೋಟಕ್ಕೆ ಹೊಲಕ್ಕೆ ಹೋಗಲು ಗ್ರಾಮದಲ್ಲಿ ಓಣಿಗಳಿವೆ. ಒಟ್ಟಾರೆ ಗ್ರಾಮವು ೩೭೩ ಜನಸಂಖ್ಯೆಯನ್ನು ಹೊಂದಿದೆ. ಒಟ್ಟು ೮೦ ಮನೆಗಳಿರುವ ಈ ಗ್ರಾಮದಲ್ಲಿ ಮನೆಗಳನ್ನು ಮಣ್ಣು ಹಾಗೂ ಕಲ್ಲು ಬಳಸಿ ಕಟ್ಟಿದ್ದು ಮೇಲ್ಛಾವಣಿ ಕಪ್ಪು ಹೆಂಚು ಹಾಗೂ ಕೆಂಪು ಹೆಂಚನ್ನು ಹೊದಿಸಿದ್ದಾರೆ.

ಇಲ್ಲಿಯ ಜನರ ಬಹುಮುಖ್ಯ ಆಹಾರ ರಾಗಿಮುದ್ದೆ ಹಾಗೂ ಅನ್ನ. ಅಮುಖ್ಯ ಆಹಾರವಾಗಿ ಇಡ್ಲಿ, ದೋಸೆ, ಚಿತ್ರಾನ್ನ, ಉಪ್ಪಿಟ್ಟು ಬಳಸುತ್ತಾರೆ. ವಿಶೇಷ ಊಟವಾಗಿ ಪಾಯಸ, ಒಬ್ಬಟ್ಟು, ಮಾಂಸಾಹಾರ ತಯಾರಿಸುತ್ತಾರೆ. ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಬೈಸಿಕಲ್‌ಗಳು ಇರುವುದರ ಜೊತೆಗೆ ಆಧುನಿಕ ಬೈಕುಗಳು, ಟ್ರ್ಯಾಕ್ಟರ್‌ಗಳು, ಮಿನಿ ಟೆಂಪೋಗಳು, ಲಗೇಜ್ ಆಟೋಗಳು ಇವೆ. ಗ್ರಾಮಕ್ಕೆ ರಸ್ತೆ ಹಾಗೂ ಚರಂಡಿ ವ್ಯವಸ್ಥೆ ಇದೆ.

ವೃತ್ತಿ ಕೃಷಿಯಾಗಿದ್ದು ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಆಹಾರ ಬೆಳೆಯೂ ಇದೇ ಆಗಿದೆ. ಜೊತೆಗೆ ಉಪಬೆಳೆಗಳಾಗಿ ಹುರುಳಿ, ಹೆಸರು, ಉದ್ದು, ಜೋಳ, ಅವರೆ, ಎಳ್ಳು, ಅಲಸಂದೆ ಇತ್ಯಾದಿ ಬೆಳೆಯುತ್ತಾರೆ. ತೆಂಗು, ಅಡಿಕೆ, ಬಾಳೆ, ಮಾವು ಇಲ್ಲಿನ ವಾಣಿಜ್ಯ ಹಾಗೂ ತೋಟಗಾರಿಕೆ ಬೆಳೆಗಳಾಗಿವೆ. ಗ್ರಾಮದಲ್ಲಿ ಕೆಎಂಎಫ್‌ನ ನಂದಿನಿ ಡೈರಿ ಇದ್ದು ಗ್ರಾಮದ ರೈತರು ಹಸುಗಳನ್ನು ಸಾಕಿ, ಹಾಲನ್ನು ಹಿಂಡಿ ಈ ಡೈರಿಗೆ ಮಾರುವ ಮೂಲಕ ಒಂದಷ್ಟು ಹಣ ಗಳಿಸುತ್ತಾರೆ.

ತೆಂಗಿನಕಾಯಿ, ಕೊಬ್ಬರಿ, ಮಾವು, ಬಾಳೆಹಣ್ಣು ಇಲ್ಲಿನ ವ್ಯಾಪಾರಿ ಸರಕು ಆಗಿದೆ. ಗ್ರಾಮದಲ್ಲಿ ೪ ಜನ ಶಿಕ್ಷಕರು, ಒಬ್ಬರು ಕಾಲೇಜು ಉಪನ್ಯಾಸಕರು ಇದ್ದಾರೆ. ೨೦ಕ್ಕೂ ಹೆಚ್ಚು ಜನ ಬೆಂಗಳೂರಿನ ವಿವಿಧ ಖಾಸಗಿ ಫ್ಯಾಕ್ಟರಿಗಳಲ್ಲಿ ಉದ್ಯೋಗ ಪಡೆದಿದ್ದಾರೆ.

ಆಡಳಿತಾತ್ಮಕವಾಗಿ ಈ ಗ್ರಾಮವು ಶೆಟ್ಟಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತದೆ. ಶೆಟ್ಟಿಕೆರೆ ಕ್ಷೇತ್ರವು ಇದರ ತಾಲ್ಲೂಕು ಪಂಚಾಯ್ತಿ ಹಾಗೂ ಜಿಲ್ಲಾ ಪಂಚಾಯ್ತಿ ಕ್ಷೇತ್ರವಾಗಿದೆ. ಗ್ರಾಮ ಪಂಚಾಯ್ತಿಯೂ ಇದಕ್ಕೆ ಶೆಟ್ಟಿಕೆರೆಯೇ ಆಗಿದೆ. ಇದು ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರುತ್ತದೆ. ಶೆಟ್ಟಿಕೆರೆಯಿಂದ ಕಚ್ಚಾರಸ್ತೆ ಇದೆ. ಗ್ರಾಮದ ಬಹುತೇಕರು ಸಂಪರ್ಕಕ್ಕಾಗಿ ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಟಿವಿಗಳಿಗೆ ಡಿಟಿಎಚ್ ಸಂಖ್ಯೆಯಲ್ಲಿ ಅಳವಡಿಸಿಕೊಂಡಿದ್ದಾರೆ.

ತುಳಸಿ, ಕರಿಬಸವೇಶ್ವರ, ಭುವನ, ವಿನಾಯಕ ಇತ್ಯಾದಿ ಸ್ತ್ರೀಶಕ್ತಿ ಸಂಘಗಳಿವೆ. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸ್ವಸಹಾಯ ಸಂಘಗಳಿವೆ. ಶೇ.೮೦ ರಷ್ಟು ಸಾಕ್ಷರತೆ ಹೊಂದಿರುವ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದೆ. ಗ್ರಾಮದ ರಾಮಣ್ಣ ಎಂಬ ೪೫ ವರ್ಷದ ಬೆಸ್ತರ ಸಮುದಾಯದ ವ್ಯಕ್ತಿ ಉಳುಕು ತಿಕ್ಕುತ್ತಾರೆ. ರಾಮಣ್ಣ ಎಂಬ ೭೦ ವರ್ಷದ ಕುರುಬ ಸಮುದಾಯದ ವ್ಯಕ್ತಿ ನಾಟಿ ಪದ್ಧತಿ ಮೂಲಕ ಕಣ್ಣಿಗೆ ಬಿದ್ದ ಕಲ್ಲು ತೆಗೆಯುತ್ತಾರೆ. ಕೈಮಸುಕಿಗೆ ಔಷಧಿ ನೀಡುತ್ತಾರೆ, ಭಟ್ಟಿ ಕಟ್ಟುತ್ತಾರೆ.

ವೃದ್ಧಾಪ್ಯ ವೇತನ, ವಿಕಲಚೇತನ ವೇತನ, ವಿಧವಾ ವೇತನ ಪಡೆಯುವ ೨೩ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೩ ಚಿಕ್ಕ ಚಿಲ್ಲರೆ ಅಂಗಡಿಗಳಿವೆ. ಭೂತಲಿಂಗೇಶ್ವರ, ಗಣೇಶ, ಆಂಜನೇಯಸ್ವಾಮಿ ದೇವಾಲಯಗಳಿವೆ. ಇವರು ಯುಗಾದಿ, ಮಹಾನವಮಿ, ದೀಪಾವಳಿ, ಗೌರಿ–ಗಣೇಶ, ಬಸವ ಜಯಂತಿ, ಕಾರಹಬ್ಬ, ಮಾರಿಹಬ್ಬ, ದಸರಾ ಹಬ್ಬಗಳನ್ನು ಆಚರಿಸುತ್ತಾರೆ.

ಹನುಮಮ್ಮ ಎಂಬ ೭೦ ವರ್ಷದ ಕುರುಬ ಸಮುದಾಯದ, ಲಕ್ಷ್ಮಮ್ಮ ಎಂಬ ೬೫ ವರ್ಷದ ಕುರುಬ ಸಮುದಾಯದ, ಸಿದ್ಧಗಂಗಮ್ಮ ಎಂಬ ೭೮ ವರ್ಷದ ಜೋಗಪ್ಪ ಸಮುದಾಯಕ್ಕೆ ಸೇರಿದ ಮಹಿಳೆಯರು ಸೋಬಾನೆ ಹಾಡುಗಳನ್ನು ಹಾಡುತ್ತಾರೆ. ಗ್ರಾಮದಲ್ಲಿ ಒಂದು ಭಜನಾ ತಂಡವಿದೆ. ಒಂದು ರೈತ ಸಂಘವೂ ಅಸ್ತಿತ್ವದಲ್ಲಿದೆ.

## ದಿಬ್ಬದಹಳ್ಳಿ

ದಿಬ್ಬದಹಳ್ಳಿ ಒಂದು ಕಂದಾಯ ಗ್ರಾಮ ಕುಪ್ಪೂರು ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತದೆ. ಗ್ರಾಮದ ಪಕ್ಕದಲ್ಲಿ ನಾಯಕರಪಾಳ್ಯ ಇತ್ತು. ಅಲ್ಲಿ ಇತರೆ ಸಮುದಾಯದವರೂ ಇದ್ದರು. ನಂತರದ ದಿನಗಳಲ್ಲಿ ಆ ಪಾಳ್ಯದಲ್ಲಿ ವಾಸಿಸುತ್ತಿದ್ದ ವೀರಶೈವರು, ಸರ್ಪ ವಕ್ಕಲಿಗ ಜನಾಂಗದವರು ನಾಯಕರಪಾಳ್ಯ ಒಟ್ಟು ಸ್ವಲ್ಪ ಎತ್ತರ ಭಾಗದಲ್ಲಿ ವಲಸೆ ಹೋಗಿ ನೆಲೆಸಿದರು. ಈ ಜನವಸತಿಯೇ ದಿಬ್ಬದಹಳ್ಳಿಪಾಳ್ಯವಾಯಿತು. ನಂತರ ದಿಬ್ಬದಹಳ್ಳಿ ಎಂಬ ಹೆಸರು ಉಳಿಯಿತು. ನಂತರದ ದಿನಗಳಲ್ಲಿ ಮೂಲ ನಾಯಕರಪಾಳ್ಯದ ಜನ ಬೇರೆ ಊರುಗಳಿಗೆ ವಲಸೆ ಹೋದರು. ಈಗಲೂ ನಾಯಕರಪಾಳ್ಯದ ಕುರುಹುಗಳನ್ನು ಕಾಣಬಹುದು. ಅಲ್ಲಿ ಕಲ್ಲಿನಬಾವಿ ಈಗಲೂ ಇದೆ. ಈ ಸುತ್ತಮುತ್ತಲ ಜಮೀನನ್ನು ಈಗ ಉಳುಮೆ ಮಾಡಲಾಗುತ್ತಿದೆ. ಉಳುಮೆ ಮಾಡುವಾಗ ಅನೇಕ ಒರಳುಕಲ್ಲುಗಳು ಸಿಕ್ಕಿದ್ದವು ಎನ್ನುತ್ತಾರೆ ಗ್ರಾಮದ ಹಿರಿಯರಾದ ಕರಿಯಪ್ಪ ಅವರು.

ಕೆಂಪಮ್ಮದೇವಿ ದೇವಸ್ಥಾನ ಈ ಬಾವಿಯ ಪಕ್ಕದಲ್ಲಿತ್ತು ಈಗ ಶಿಥಿಲವಾಗಿದೆ. ಊರು ಹಾಳಾದಮೇಲೆ ಕೆಂಪಮ್ಮ ದೇವಿಯನ್ನು ಶೆಟ್ಟೀಕೆರೆ ಗ್ರಾಮಕ್ಕೆ ತೆಗೆದುಕೊಂಡು ಹೋದರು ಎನ್ನುತ್ತಾರೆ. ಈಗ ಶೆಟ್ಟಿಕೆರೆಯಲ್ಲಿ ಕೆಂಪಮ್ಮ ದೇವರ ಗುಡಿಯಿದೆ. ಹಿಂದೆ ಇದ್ದ ನಾಯಕರಪಾಳ್ಯದ ಜಾಗದಲ್ಲಿ ದೇವಸ್ಥಾನದ ಅವಶೇಷಗಳಿವೆ. ಬಹುಶಃ ಇಲ್ಲಿದ್ದ ಕೆಲ ನಾಯಕ ಸಮುದಾಯದವರು ದೇವರ ಸಮೇತ ಶೆಟ್ಟಿಕೆರೆಗೆ ವಲಸೆ ಹೋಗಿರುವ ಸಾಧ್ಯತೆಯಿದೆ. ಈ ಶೆಟ್ಟಿಕೆರೆ ಕೆಂಪಮ್ಮನು ಸುತ್ತಮುತ್ತಲ ಅನೇಕ ಗ್ರಾಮಗಳಿಗೆ ಗ್ರಾಮದೇವತೆಯಾಗಿದೆ.

ದಿಬ್ಬದಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೦ ಕಿಮೀ ದೂರದಲ್ಲಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೪೧೨.೧೬ ಚಕಿಮೀ. ಈ ಗ್ರಾಮಕ್ಕೆ ಕುರುಬರಹಳ್ಳಿ ಉಪಗ್ರಾಮಗಳಾಗಿ ಸೇರ್ಪಡೆಯಾಗಿವೆ.

ಇದೊಂದು ಬಯಲುನಾಡಿಗೆ ಸೇರಿದ ಗ್ರಾಮ. ಬಿಳಿಯ ಮಣ್ಣು, ಬಿಳಿಯ ಕಲ್ಲುಗಳು ಇಲ್ಲಿ ಕಂಡುಬರುತ್ತವೆ. ಇಲ್ಲಿ ಕಾಡುಹಂದಿ, ಜಿಂಕೆ, ಮೊಲ ಇತ್ಯಾದಿಗಳು ಕಂಡುಬರುತ್ತವೆ. ಇಲ್ಲಿಯ ಜನ ಹಸು, ಎಮ್ಮೆ, ಎತ್ತು, ಕುರಿಗಳನ್ನು ಸಾಕುತ್ತಾರೆ. ಕಾಗೆ, ಗಿಳಿ, ಸಾಂಬಾರ ಕಾಗೆ, ಮರಕುಟಿಗ, ಉಣ್ಣೆಗೊರವ, ಹದ್ದು ಇತ್ಯಾದಿ ಪಕ್ಷಿಗಳು ಕಾಣಸಿಗುತ್ತವೆ. ಕೋಳಿಗಳನ್ನು ಕೆಲವರು ಸಾಕುತ್ತಾರೆ. ಇಲ್ಲಿ ೫೩೧.೨ ಮಿಮೀನ

ಆಸುಪಾಸು ಮಳೆ ಬೀಳುತ್ತದೆ. ೧೯-೨೦ ಡಿಗ್ರಿ ಚಳಿ, ೨೮-೩೬ ಡಿಗ್ರಿ ಬಿಸಿಲು ಇಲ್ಲಿ ಕಂಡುಬರುತ್ತದೆ. ಊರ ಸಮೀಪದಲ್ಲಿ ಒಂದು ಹಳ್ಳವಿದೆ. ಇದು ಮಂಚಸಂದ್ರ ಕೆರೆಯಿಂದ ಕುಪ್ಪೂರು ಪಕ್ಕ ಹಾಯ್ದು ಹೋಗುತ್ತದೆ. ಗ್ರಾಮದಲ್ಲಿ ೨ ಸೇದುವ ಬಾವಿಗಳಿವೆ. ಕೊಳವೆಬಾವಿಗಳು ನೀರಾವರಿ ಹಾಗೂ ಕುಡಿಯುವ ನೀರಿನ ಉದ್ದೇಶಕ್ಕೆ ಇವೆ. ಇಲ್ಲಿ ಕೆಂಗಾಡು ಕಟ್ಟೆ, ಬಂಡೆ ಬಾವಿ, ಚನ್ನಿಂಗನಕಟ್ಟೆ, ಗವಿಯಪ್ಪಜ್ಜನ ಕಟ್ಟೆಗಳು ಇವೆ.

ಸರ್ಪವಕ್ಕಲಿಗರು ದೊಡ್ಡ ಸಮುದಾಯವಾಗಿದ್ದು ಲಿಂಗಾಯಿತರು, ಸರ್ಪ ಗೊಲ್ಲರು ಗ್ರಾಮದಲ್ಲಿ ಕಿರು ಸಮುದಾಯವಾಗಿದೆ. ಒಟ್ಟು ಜನಸಂಖ್ಯೆ ೩೧೧. ಒಟ್ಟು ೬೪ ಮನೆಗಳಿವೆ. ಎರಡು ಕಾಂಕ್ರೀಟ್ ಮನೆಗಳು ಉಳಿದವುಗಳನ್ನು ಮಣ್ಣು ಹಾಗೂ ಕಲ್ಲಿನಿಂದ ಕಟ್ಟಲಾಗಿದೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಹಾಗೂ ಕೆಂಪು ಹೆಂಚನ್ನು ಹೊದಿಸಲಾಗಿದೆ.

ಇಲ್ಲಿಯ ಜನರ ಮುಖ್ಯ ಆಹಾರ ರಾಗಿಮುದ್ದೆ ಹಾಗೂ ಅನ್ನ, ಉಪ್ಪಿಟ್ಟು, ಇಡ್ಲಿ, ದೋಸೆ, ಚಿತ್ರಾನ್ನ ಇತ್ಯಾದಿಗಳು ಅಮುಖ್ಯ ಆಹಾರಗಳು. ವಿಶೇಷ ಊಟವಾಗಿ ಪಾಯಸ, ಒಬ್ಬಟ್ಟು, ಶಾವಿಗೆ, ಕಿಚಡಿ, ಮಾಂಸದೂಟ ಇತ್ಯಾದಿಗಳನ್ನು ಮಾಡುತ್ತಾರೆ. ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನಗಾಡಿಗಳ ಜೊತೆಗೆ ಟ್ರ್ಯಾಕ್ಟರ್, ಆಟೋ, ಬೈಕ್, ಕಾರುಗಳಿವೆ. ಗ್ರಾಮದಲ್ಲಿ ರಸ್ತೆ ಹಾಗೂ ಚರಂಡಿ ವ್ಯವಸ್ಥೆ ಇದೆ.

ರಾಗಿಯನ್ನು ಮುಖ್ಯ ಬೆಳೆಯಾಗಿಯೂ ಅವರೆ, ಹುಚ್ಚೆಳ್ಳು, ಎಳ್ಳು, ಜೋಳ, ತೊಗರಿ, ಹುರುಳಿ, ಅಲಸಂದೆ, ತರಣಿ ಕಾಳುಗಳನ್ನು ಉಪಬೆಳೆಗಳಾಗಿಯೂ ಬೆಳೆಯುತ್ತಾರೆ. ತೆಂಗು ಇಲ್ಲಿನ ವಾಣಿಜ್ಯ ಬೆಳೆ. ಕೊಬ್ಬರಿ ಇಲ್ಲಿನ ವ್ಯಾಪಾರಿ ಸರಕು. ಶಿಕ್ಷಕರು, ವಕೀಲ, ಇಂಜಿನಿಯರ್ ವೃತ್ತಿ ಮಾಡುತ್ತಿದ್ದಾರೆ. ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಒಬ್ಬರಿದ್ದಾರೆ. ಒಟ್ಟು ೭ ಜನ ಸರ್ಕಾರಿ ನೌಕರರು, ಇಬ್ಬರು ಖಾಸಗಿ ವಕೀಲರಿದ್ದಾರೆ.

ಶೆಟ್ಟಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ, ಕುಪ್ಪೂರು ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೂ ತುಮಕೂರು ಲೋಕಸಭಾ ಕ್ಷೇತ್ರಕ್ಕೂ ಸೇರುತ್ತದೆ. ಗ್ರಾಮಕ್ಕೆ ರಸ್ತೆ ಸಂಪರ್ಕವಿದೆ. ಇಲ್ಲಿಯೂ ಜನ ಸಂಚಾರಿ ದೂರವಾಣಿಗಳನ್ನು ಬಳಸುತ್ತಿದ್ದಾರೆ. ಗ್ರಾಮದಲ್ಲಿ ಕರಿಯಮ್ಮದೇವಿ ಸ್ತ್ರೀಶಕ್ತಿ ಸಂಘವಿದೆ.

ಶೇ.೮೦ ರಷ್ಟು ಸಾಕ್ಷರತೆ ಹೊಂದಿರುವ ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಗ್ರಾಮದ ಮೂಡಲಸೀಮೆ ಗಿರಿಯಪ್ಪ ಎಂಬುವವರು ಕೈಮಸಗು ಕಾಯಿಲೆಗೆ ನಾಟಿ ಔಷಧಿ ನೀಡುತ್ತಾರೆ. ವಿಕಲಚೇತನ, ವಿಧವಾ, ವೃದ್ಧಾಪ್ಯ ವೇತನ ಫಲಾನುಭವಿಗಳಿದ್ದಾರೆ. ಚಿಕ್ಕ ಅಂಗಡಿಗಳಿವೆ. ಬಸವಣ್ಣನ ದೇವಸ್ಥಾನ ಹಾಗೂ ಚಿತ್ರದೇವರ (ಚಿತ್ರಲಿಂಗ) ದೇವಸ್ಥಾನಗಳಿವೆ. ಇಲ್ಲಿಯವರು ಯುಗಾದಿ, ಸಂಕ್ರಾಂತಿ, ಮಹಾನವಮಿ, ದೀಪಾವಳಿ, ಕಾರಬ್ಬ, ಬಸವನಹಬ್ಬ ಇತ್ಯಾದಿ ಹಬ್ಬಗಳನ್ನು ಆಚರಿಸುತ್ತಾರೆ.

## ದಿಬ್ಬದಹಳ್ಳಿ ಎ.ಡಿ. ಕಾಲೋನಿ

ದಿಬ್ಬದಹಳ್ಳಿ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೧೦ ಕಿಮೀ ದೂರದಲ್ಲಿದೆ. ಇದು ಕುಪ್ಪೂರು ಗ್ರಾಮ ಪಂಚಾಯ್ತಿಗೆ ಸೇರಿದ ದಿಬ್ಬದಹಳ್ಳಿ ಗ್ರಾಮದ ಮಜರೆ ಗ್ರಾಮವಾಗಿದೆ. ಆದಿಕರ್ನಾಟಕ ಜನಾಂಗದವರು ಪ್ರತ್ಯೇಕವಾಗಿ ಜನವಸತಿ ನಿರ್ಮಿಸಿಕೊಂಡು ವಾಸಿಸುತ್ತಿರುವ ಕಾರಣ ಹೊಲೆಯರ ಹಟ್ಟಿ, ಎ.ಡಿ. ಕಾಲೋನಿ ಎಂದು ಕರೆಯುವುದು ವಾಡಿಕೆಯಾಗಿದೆ. ಗ್ರಾಮದಲ್ಲಿ ಆದಿಕರ್ನಾಟಕ ಜನಾಂಗದ ೨೩ ಮನೆಗಳಿದ್ದು ೧೧೧ ಜನಸಂಖ್ಯೆ ಹೊಂದಿದೆ. ಇಲ್ಲಿನ ಮನೆಗಳು ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಇವು ಅಂಬೇಡ್ಕರ್ ವಸತಿ ಯೋಜನೆ ಹಾಗೂ ಇಂದಿರಾ ಆವಾಸ್ ವಸತಿ ಯೋಜನೆಯ ಅಡಿಯಲ್ಲಿ ೯ ಮನೆಗಳು ರಚನೆಯಾಗಿವೆ. ಇಲ್ಲಿನ ಆಹಾರ ರಾಗಿಮುದ್ದೆ, ಅನ್ನ ಆಗಿದ್ದು ವಿಶೇಷವಾಗಿ ಪಾಯಸ, ಹೋಳಿಗೆ, ಬಾಡೂಟ ಬಳಸುತ್ತಾರೆ. ಕುಡಿಯಲು ಕುಪ್ಪೂರು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಲ್ಲಿ ಕೊಳವೆ ಬಾವಿಯ ಮೂಲಕ ನೀರು ಒದಗಿಸಲಾಗುತ್ತಿದೆ. ಒಂದು ಸಿಸ್ಟನ್ ಇದೆ. ರೈತಾಪಿ ಬದುಕು. ರಾಗಿ, ಜೋಳ, ಹೆಸರು, ಹುರುಳಿ, ಅವರೆ ಆಹಾರ ಬೆಳೆಗಳು. ತೆಂಗು, ಅಡಿಕೆ ತೋಟಗಾರಿಕೆ ಬೆಳೆಗಳು. ಗ್ರಾಮದಲ್ಲಿ ಕೃಷಿಕರು, ಕೃಷಿ ಕಾರ್ಮಿಕರು ಇದ್ದಾರೆ. ಶಿಕ್ಷಣ, ಸಾರಿಗೆ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಟ್ರ್ಯಾಕ್ಟರ್ ಡ್ರೈವರ್‌ಗಳಿದ್ದಾರೆ. ಪಡಿತರ ಶಿಕ್ಷಣ ವಿಷಯಗಳಿಗೆ ಮುಖ್ಯ ಗ್ರಾಮಕ್ಕೆ ಹೋಗಬೇಕಿದೆ.

ಆಡಳಿತಾತ್ಮಕವಾಗಿ ಕುಪ್ಪೂರು ಗ್ರಾಮಪಂಚಾಯ್ತಿ, ಚಿಕ್ಕನಾಯಕನಹಳ್ಳಿ ವಿಧಾನಸಭೆ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು ತುಮಕೂರು ಲೋಕಸಭೆಗೆ ಸೇರಿದೆ. ಮಾಳಿಗೆಹಳ್ಳಿಯಿಂದ ಅಂಚೆ ಸಂಪರ್ಕವಿದೆ. ವೃದ್ಧಾಪ್ಯ ವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದು ಗ್ರಾಮದೇವತೆ ಕರಿಯಮ್ಮನ ಹಬ್ಬ ಮಾಡುತ್ತಾರೆ. ಯುಗಾದಿ, ದೀಪಾವಳಿ, ದಸರಾ, ಗೌರಿ-ಗಣೇಶ ಹಬ್ಬ ಆಚರಿಸುವುದು ರೂಢಿಯಾಗಿದೆ. ಗ್ರಾಮದ

ಸಾಕ್ಷರತೆ ೫೮.೬ ರಷ್ಟಿದೆ. ಚಿಕ್ಕನಾಯಕನಹಳ್ಳಿ–ಕುನ್ನೂರು ಮಾರ್ಗವಾಗಿ ಬಸ್ ಸಂಪರ್ಕವಿದೆ.

## ದುಗಡಿಹಳ್ಳಿ

ದುಗಡಿಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ ದೂರದಲ್ಲಿದೆ. ಕಂದಾಯ ಗ್ರಾಮ. ಗ್ರಾಮಪಂಚಾಯ್ತಿ ಕೇಂದ್ರವೂ ಆಗಿದೆ. ಬುಗುಡಿ ಎಂಬ ಬಂಗಾರದ ಆಭರಣ ಹಾಕಿಕೊಳ್ಳುವ ಸ್ತ್ರೀಮೂಲ ನಂತರ ದುಗುಡಿಹಳ್ಳಿ ಎಂದಾಗಿದೆ. ಬಯಲು ಪ್ರದೇಶ. ೧೦೧೨ ಹೆಕ್ಟೇರ್ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿದೆ. ಗೊಲ್ಲರಹಟ್ಟಿ ಇದರ ಮಜರೆ ಗ್ರಾಮವಾಗಿದೆ. ಇದರ ಸಮೀಪದ ಹೊಲ, ಮರ, ಗಿಡಗಳಲ್ಲಿ ಮೊಲ, ಜಿಂಕೆ, ಕರಡಿ ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ ಸಾಕಿದ್ದಾರೆ. ಕೋಳಿ ಸಾಕುಪಕ್ಷಿಯಾಗಿವೆ.

ವಾರ್ಷಿಕ ಸರಾಸರಿ ೫೧೩೧.೧೨ ಮಿಮೀ ಮಳೆ ಬೀಳುತ್ತಿದ್ದು ಚಳಿ ೧೨ ಡಿಗ್ರಿ ಹಾಗೂ ಬಿಸಿಲು ೩೭ ಡಿಗ್ರಿ ಇದೆ. ಒಂದು ಕೆರೆಯಿದೆ. ಪೂರ್ವಕ್ಕೆ ಒಂದು ಹಳ್ಳವಿದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ಎರಡು ಕೊಳವೆ ಬಾವಿ, ನೀರಿನ ಟ್ಯಾಂಕ್ ಹಾಗೂ ೩೪ ನಲ್ಲಿ ಸಂಪರ್ಕವಿದೆ. ವೀರಶೈವರು ದೊಡ್ಡ ಸಮುದಾಯ. ಮಡಿವಾಳ, ಕುರುಬ, ನಾಯಕ, ಆದಿಕರ್ನಾಟಕ ಸಣ್ಣ ಸಮುದಾಯವಾಗಿದೆ. ಒಟ್ಟು ೧೫೯ ಮನೆಗಳಿದ್ದು ೨೦೧೧ ರ ಜನಗಣತಿ ಪ್ರಕಾರ ೫೧೮ ಜನಸಂಖ್ಯೆ ಹೊಂದಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ಹೆಂಚಿನ, ಶೀಟಿನ, ಮಾಳಿಗೆ ಮನೆಗಳಿದ್ದು ಆಶ್ರಯ, ಜನತಾ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆಯ ೬೪ ಫಲಾನುಭವಿಗಳಿದ್ದಾರೆ. ೩೭ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ರಾಗಿಮುದ್ದೆ, ಅನ್ನ, ರೊಟ್ಟಿ ಆಹಾರಕ್ರಮ. ಮಾಂಸಾಹಾರ, ಹೋಳಿಗೆ, ಪಾಯಸವನ್ನು ಸಾಂದರ್ಭಿಕ ವಿಶೇಷ ಭೋಜನವಾಗಿ ಬಳಸುತ್ತಾರೆ.

ರಾಗಿ, ಹೆಸರು, ಜೋಳ, ಭತ್ತ, ಹುರುಳಿ, ಅವರೆ ಆಹಾರ ಬೆಳೆಗಳು. ತೆಂಗು ಅಡಿಕೆ ಬೆಳೆಯುತ್ತಾರೆ. ಕೊಬ್ಬರಿ, ಅಡಿಕೆ, ಹುಣಸೆಹಣ್ಣು, ಗರಿಕಡ್ಡಿ, ಮುತ್ತುಗದ ಎಲೆ ವ್ಯಾಪಾರಿ ಸರಕಾಗಿವೆ. ಅಂಚೆ ಕಛೇರಿ, ನ್ಯಾಯಬೆಲೆ ಅಂಗಡಿ ಇದೆ.

ತುಮಕೂರು ಲೋಕಸಭೆ, ಚಿಕ್ಕನಾಯಕನಹಳ್ಳಿ ವಿಧಾನಸಭೆ ಶೆಟ್ಟಿಕೆರೆ ಜಿಲ್ಲಾ, ತಾಲ್ಲೂಕು ಹಾಗೂ ಹೋಬಳಿ ಕೇಂದ್ರವಾಗಿದ್ದು ದುಗಡಿಹಳ್ಳಿ ಗ್ರಾಮಪಂಚಾಯ್ತಿ ಕೇಂದ್ರವೂ ಆಗಿದೆ. ಇಬ್ಬರು ಪಂಚಾಯ್ತಿ ಸದಸ್ಯರು, ೬ ಜನ ನೌಕರರಿದ್ದಾರೆ. ಸಾರಿಗೆ, ಶಿಕ್ಷಣ, ಕಂದಾಯ ಇಲಾಖೆಗೆ ಸೇರಿದ ೧೪ ಜನ ಸರ್ಕಾರಿ ನೌಕರರಿದ್ದಾರೆ. ೪ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಸರ್ಕಾರಿ ಪ್ರಾಥಮಿಕ ಪಾಠಶಾಲೆ, ಅಂಗನವಾಡಿ ಕೇಂದ್ರವಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಸೌಲಭ್ಯವಿದೆ. ಚಿಕ್ಕನಾಯಕನಹಳ್ಳಿಗೆ ಜಿಲ್ಲಾ ಪಂಚಾಯ್ತಿಯ ಮುಖ್ಯ ರಸ್ತೆ ಸಂಪರ್ಕವಿದ್ದು ಬಸ್ ಸೌಕರ್ಯವಿದೆ. ಗ್ರಾಮದ ಸಾಕ್ಷರತೆ ಶೇ.೬೭.೯.

೧೭ ವಿದ್ಯುತ್ ಕಂಬ, ದೀಪದ ಸೌಕರ್ಯವಿದೆ. ಅಂಗವಿಕಲ, ಸಂಧ್ಯಾ ಸುರಕ್ಷೆ, ವಿಧವಾ ವೇತನಗಳ ೪೭ ಫಲಾನುಭವಿಗಳಿದ್ದಾರೆ. ಶ್ರೀ ರಂಗನಾಥಸ್ವಾಮಿ, ಕರಿಯಮ್ಮ ದೇವಾಲಯಗಳಿವೆ. ರಂಗನಾಥಸ್ವಾಮಿ ರಥೋತ್ಸವ ನಡೆಯುತ್ತದೆ. ಕರಿಯಮ್ಮನ ಊರಹಬ್ಬ ಆಚರಿಸುತ್ತಾರೆ. ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಶಿವರಾತ್ರಿ, ದಸರಾ, ಯುಗಾದಿ, ಬಸವ ಜಯಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ದುಗಡಿಹಳ್ಳಿ ಗೊಲ್ಲರಹಟ್ಟಿ

ದುಗಡಿಹಳ್ಳಿ ಗೊಲ್ಲರಹಟ್ಟಿ ದುಗಡಿಹಳ್ಳಿಗೆ ಸೇರಿದ ಮಜರೆ ಗ್ರಾಮ. ಇದರ ಭೌಗೋಳಿಕ ವ್ಯಾಪ್ತಿ ದುಗಡಿಹಳ್ಳಿಯೊಂದಿಗೆ ಹಂಚಿಕೊಂಡಿದೆ. ಬಯಲುಪ್ರದೇಶ. ಕೃಷಿ ಪ್ರಧಾನ ಗ್ರಾಮ. ಕಾಡುಗೊಲ್ಲರ ೩೦ ಮನೆಗಳಿದ್ದು ದುಗಡಿಹಳ್ಳಿ ಹೊರಾಂಗಣದಲ್ಲಿ ವಸತಿ ನಿರ್ಮಿಸಿಕೊಂಡ ಕಾರಣ ದುಗಡಿಹಳ್ಳಿ ಗೊಲ್ಲರಹಟ್ಟಿ ಎಂದು ಕರೆಯುತ್ತಾರೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸುತ್ತಿದ್ದು ಒಂದು ಕೊಳವೆಬಾವಿ ಹಾಗೂ ಒಂದು ಸಿಸ್ಟನ್ ಇದೆ. ಕಾಡುಗೊಲ್ಲ ಜನಾಂಗದ ಒಟ್ಟು ೩೦ ಮನೆಗಳಿದ್ದು ೧೪೭ ಜನಸಂಖ್ಯೆ ಹೊಂದಿದೆ. ಈ ಮನೆಗಳು ಕಲ್ಲಿನ, ಶೀಟಿನ, ಹೆಂಚಿನ ಸ್ವರೂಪದಲ್ಲಿವೆ. ೪ ಮನೆಗಳು ಸೋಗೆ ಗರಿಯಿಂದ ರಚನೆಯಾಗಿವೆ. ೧೨ ಮನೆಗಳು ಜನತಾ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಶೌಚಾಲಯಕ್ಕೆ ಬಯಲನ್ನು ಬಳಸುತ್ತಾರೆ.

ರಾಗಿಮುದ್ದೆ, ಅನ್ನ, ರೊಟ್ಟಿ ಮುಖ್ಯ ಆಹಾರ. ಹೋಳಿಗೆ, ಪಾಯಸ, ಮಾಂಸಾಹಾರಗಳನ್ನು ವಿಶೇಷ ಸಾಂದರ್ಭಿಕವಾಗಿ ಬಳಸುತ್ತಾರೆ. ರಾಗಿ, ಅವರೆ, ತೊಗರಿ, ನವಣೆ, ಆರಕ ಬೆಳೆಯುತ್ತಾರೆ. ಸಾಂಪ್ರದಾಯಿಕ ಎತ್ತಿನ ಗಾಡಿಗಳಿವೆ. ಕುರಿ, ಮೇಕೆ, ಹಸು ಸಾಕುಪ್ರಾಣಿಗಳು. ಕುರಿಗಳ ಹುಲ್ಲು ನೀರಿಗಾಗಿ ಹೊರ ಪ್ರದೇಶಕ್ಕೆ ಪರಸ್ಥಳಕ್ಕೆ ಹೋಗುವುದುಂಟು. ಶಿಕ್ಷಣ, ಪಡಿತರವನ್ನು ದುಗುಡಿ ಹಳ್ಳಿಯಿಂದ ಪಡೆಯುತ್ತಾರೆ. ಶೆಟ್ಟಿಕೆರೆ ಹೋಬಳಿ,

ತುಮಕೂರು ಲೋಕಸಭೆ, ಚಿಕ್ಕನಾಯಕನಹಳ್ಳಿ ವಿಧಾನಸಭೆ, ಶೆಟ್ಟಿಕೆರೆ ಜಿಲ್ಲಾ, ದುಗಡಿಹಳ್ಳಿ ಗ್ರಾಮ ಪಂಚಾಯ್ತಿಗೆ ಸೇರಿದೆ. ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ರಂಗನಾಥ, ಚಿತ್ರದೇವರ ಪೌಳಿಗಳಿವೆ. ದೀಪಾವಳಿಯನ್ನು ಹಾಲುಮೀಸಲು, ದೀಪ ಏರಿಸುವ ಆಚರಣೆಗಳ ಮೂಲಕ ಏಳು ದಿನಗಳ ಕಾಲ ಆಚರಿಸುತ್ತಾರೆ. ವಿಧವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆಯ ಫಲಾನುಭವಿಗಳಿದ್ದಾರೆ. ದುಗುಡಿಹಳ್ಳಿ ಅಂಚೆ ಸಂಪರ್ಕವಿದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ದಸರಾ ಹಬ್ಬಗಳನ್ನು ಆಚರಿಸುತ್ತಾರೆ. ಗ್ರಾಮದ ಸಾಕ್ಷರತೆ ೬೦% ರಷ್ಟಿದೆ. ಕಚ್ಚಾ ರಸ್ತೆಯಿದೆ.

## ದುರ್ಗಮ್ಮನ ಬೆಟ್ಟ

ದುರ್ಗಮ್ಮನ ಬೆಟ್ಟ ನಿರುಗಲ್ ಕಂದಾಯ ಗ್ರಾಮಕ್ಕೆ ಸೇರಿದ ಮಜರೆ ಗ್ರಾಮವಾಗಿದೆ. ಇದು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೧೨ ಕಿಮೀ ದೂರದಲ್ಲಿದೆ. ಬಯಲು–ಬೆಟ್ಟ ಭೂಪ್ರದೇಶವಾಗಿದೆ. ನಿಡುಗಲ್‌ನಿಂದ ಹೊರಗೆ ಬೆಟ್ಟದ ಬಳಿ ಜನವಸತಿ ರಚಿಸಿಕೊಂಡ ಕಾರಣ ದುರ್ಗಮ್ಮನಬೆಟ್ಟ ಎಂದು ಕರೆಯುತ್ತಾರೆ. ಕಾಡು ಪ್ರದೇಶವಾದುದರಿಂದ ನರಿ, ಮೊಲ, ಜಿಂಕೆ ಕಂಡುಬರುತ್ತವೆ. ಹಸು, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ನೀರು ಪೂರೈಸುತ್ತಿದ್ದು ಒಂದು ಕೊಳವೆ ಬಾವಿಯಿದೆ. ಗುಡ್ಡಗಾಡು ಭೂಪ್ರದೇಶ. ಇಲ್ಲಿನ ಸಾಮಾಜಿಕ ರಚನೆಯಲ್ಲಿ ಬೋವಿ, ಈಡಿಗ, ಆದಿಕರ್ನಾಟಕರ ೩೦ ಮನೆಗಳಿವೆ. ಮಡಿವಾಳರು ಕಿರು ಸಮುದಾಯವಾಗಿವೆ. ಇಲ್ಲಿನ ಮನೆಗಳು ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಕನ್ನಡ ಮಾತನಾಡುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ರಾಗಿ, ಭತ್ತ, ಹೆಸರು ಪ್ರಮುಖ ಬೆಳೆಗಳು. ತೆಂಗಿನ ತೋಟಗಾರಿಕೆ ಇರುವವರು ತೆಂಗಿನ ಕೊಬ್ಬರಿ ವ್ಯಾಪಾರಿ ಸರಕಾಗಿದೆ. ಸಾಂಪ್ರದಾಯಿಕ ಎತ್ತಿನ ಬಂಡಿ ಇವೆ. ದ್ವಿಚಕ್ರ ವಾಹನ, ಟೆಂಪೋ ಇವೆ.

ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ, ಬೆಳಗುಲಿ ಗ್ರಾಮ ಪಂಚಾಯ್ತಿ, ಬರಗೂರು ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದೆ.

ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಶಿಕ್ಷಣ, ಪಡಿತರ, ಸಾರಿಗೆ ವ್ಯವಸ್ಥೆಯನ್ನು ಬೆಳಗುಲಿಯಿಂದ ಪೂರೈಸುತ್ತಾರೆ. ಗ್ರಾಮದ ಸಾಕ್ಷರತೆ ೫೮% ರಷ್ಟಿದೆ. ದುರ್ಗಮ್ಮ ದೇವರ ದೇವಾಲಯಕ್ಕೆ ಆರತಿ, ಬಲಿ, ಹರಕೆ ಸಂಪ್ರದಾಯವಿದೆ. ದೀಪಾವಳಿ, ದಸರಾ, ಯುಗಾದಿ ಹಬ್ಬಗಳ ಆಚರಣೆ ಇದೆ.

## ದೇವರಹಳ್ಳಿ

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೆಳಗುಲಿ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ದೇವರಹಳ್ಳಿ ಒಂದು ಕಂದಾಯ ಗ್ರಾಮ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿನಲ್ಲಿ ೧೨ ಕಿಮೀ ದೂರದಲ್ಲಿ ಬರುತ್ತದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೯೪.೦೪ ಆಗಿದೆ. ಲಕ್ಷ್ಮೀದೇವರ ದೇವಾಲಯದ ಹಿನ್ನೆಲೆಯಲ್ಲಿ ದೇವರಹಳ್ಳಿ ಎಂದು ಕರೆಯಲಾಗಿದೆ.

ಬಯಲುನಾಡಿಗೆ ಸೇರುವ ಈ ಗ್ರಾಮದಲ್ಲಿ ಕೆಂಪುಮಿಶ್ರಿತ ಬಿಳಿ ಮಣ್ಣು ಹಾಗೂ ಕೆಂಪು–ಬಿಳಿ ಕಲ್ಲುಗಳು ಕಂಡುಬರುತ್ತವೆ. ನೇರ ಪೂರ್ವಕ್ಕೆ ಬಿಳಿಕಲ್ಲು ಹಾಸಿನ ಬಂಡೆ ಕಂಡುಬರುತ್ತದೆ. ಈ ಸುತ್ತ ನರಿ, ತೋಳ, ಮೊಲ ಮುಂತಾದ ಕಾಡುಪ್ರಾಣಿಗಳು ಕಾಗೆ, ಗೂಬೆ, ಗಿಳಿ, ಪಾರಿವಾಳ, ಸಾಂಬಾರಕಾಗೆ, ಬೆಳವನಹಕ್ಕಿ ಮುಂತಾದ ಪಕ್ಷಿಗಳು ಕಂಡುಬರುತ್ತವೆ. ಇಲ್ಲಿಯ ಜನ ದನಗಳು, ಕುರಿ, ಮೇಕೆ, ಕೋಳಿಗಳನ್ನು ಸಾಕುತ್ತಾರೆ. ಇಲ್ಲಿ ៥೯೮.೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೯ ಡಿಗ್ರಿ ಹಾಗೂ ಬಿಸಿಲು ೩೦ ಡಿಗ್ರಿ ಸರಾಸರಿ ಇದೆ. ಎರಡು ತೆರೆದ ಬಾವಿಗಳಿದ್ದು ಈಗ ಬತ್ತಿಹೋಗಿವೆ. ಗ್ರಾಮದ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಕೃಷಿ ನೀರಿಗಾಗಿ ಒಟ್ಟು ೧೪ ಕೊಳವೆ ಬಾವಿಗಳಿವೆ. ಪಕ್ಕವೇ ಒಂದು ಕೆರೆಯಿದೆ. ಕುಡಿಯುವ ನೀರನ್ನು ಎರಡು ಸಿಸ್ಟನ್‌ಗಳ ಮೂಲಕ ೮ ನಲ್ಲಿಗಳನ್ನು ಜೋಡಿಸಿ ಒದಗಿಸಲಾಗುತ್ತಿದೆ.

ಸರ್ಪ ಒಕ್ಕಲಿಗ ಜನಾಂಗವು ದೊಡ್ಡ ಸಮುದಾಯವಾಗಿದ್ದು ಬೋವಿ ಜನಾಂಗವು ಸಣ್ಣ ಸಮುದಾಯವಾಗಿದೆ. ಇಲ್ಲಿನ ಒಟ್ಟು ಜನಸಂಖ್ಯೆ ೩೧೧. ಇವರಲ್ಲಿ ೧೬೦ ಪುರುಷರು, ೧೫೦ ಮಹಿಳೆಯರು ಜೊತೆಗೆ ೪೧ ಮಕ್ಕಳಿದ್ದಾರೆ. ಪ್ರಧಾನ ಭಾಷೆ ಕನ್ನಡ. ಕೆಲ ಬೋವಿ ಕುಟುಂಬದವರು ತೆಲುಗು ಮಾತನಾಡುತ್ತಾರೆ. ಊರಲ್ಲಿ ಎರಡು ಕಾಂಕ್ರೀಟ್ ಮನೆಗಳು, ನಾಲ್ಕು ಗುಡಿಸಲುಗಳು, ೫೬ ಮಣ್ಣು–ಕಲ್ಲಿನಿಂದ ಕಟ್ಟಲ್ಪಟ್ಟ ಮನೆಗಳೂ ಸೇರಿ ಒಟ್ಟು ೬೨ ಮನೆಗಳಿವೆ. ಮನೆಗಳಿಗೆ ಮಂಗಳೂರಿನ ಕೆಂಪು ಹೆಂಚನ್ನು ಹಾಕಲಾಗಿದೆ. ಕೆಲ ಕುಂಬಾರ ಹೆಂಚಿನ ಮನೆಗಳೂ ಇವೆ. ಆಶ್ರಯ, ಜನತಾ, ಬಸವ ಇತ್ಯಾದಿ ೨೦ ಮನೆಗಳು ಸರ್ಕಾರದ ಧನಸಹಾಯದಿಂದ ಕಟ್ಟಲ್ಪಟ್ಟಿವೆ. ವಸತಿ ರಹಿತರು ಹಾಗೂ ನಿವೇಶನರಹಿತರು ಯಾರೂ ಇರುವುದಿಲ್ಲ. ಪಂಚಾಯ್ತಿ ಅನುದಾನದ

ಮೂಲಕ ಒಂದೆರಡು ಮನೆಗಳಲ್ಲಿ ಮಾತ್ರ ಶೌಚಾಲಯ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ಎತ್ತಿನ ಗಾಡಿಗಳ ಜೊತೆಗೆ ಆಧುನಿಕ ಟ್ರ್ಯಾಕ್ಟರ್‌ಗಳು, ದ್ವಿಚಕ್ರ ವಾಹನಗಳನ್ನು ಹೊಂದಿದ್ದಾರೆ.

ಜನರ ಮುಖ್ಯ ವೃತ್ತಿ ವ್ಯವಸಾಯ. ಇವರು ಮುಖ್ಯ ಬೆಳೆಯಾಗಿ ರಾಗಿಯನ್ನು ಬೆಳೆಯುತ್ತಾರೆ. ಆಹಾರ ಬೆಳೆಯೂ ಇದೇ ಆಗಿದೆ. ಇತರೆ ಹೆಸರುಕಾಳು, ಅಲಸಂದೆ, ತೊಗರಿ, ಉದ್ದು, ಹುರುಳಿಕಾಳು, ಜೋಳ ಬೆಳೆಯುತ್ತಾರೆ. ತೆಂಗು ಮತ್ತು ಅಡಿಕೆ ಇಲ್ಲಿನ ವಾಣಿಜ್ಯ ಬೆಳೆಗಳು. ಕೊಬ್ಬರಿ ಇಲ್ಲಿನ ಮುಖ್ಯ ವ್ಯಾಪಾರಿ ಸರಕು. ಗ್ರಾಮದ ನಾಲ್ಕು ಜನ ಶಿಕ್ಷಣ ಇಲಾಖೆಯ ಉದ್ಯೋಗಿಗಳಾಗಿದ್ದಾರೆ. ೨೦ ಕ್ಕೂ ಹೆಚ್ಚು ಜನ ಬೆಂಗಳೂರಿನಲ್ಲಿ ಖಾಸಗಿ ಕಂಪನಿಗಳಲ್ಲಿ ದುಡಿಮೆ ಮಾಡುತ್ತಿದ್ದಾರೆ.

ಹಂದನಕೆರೆ ಹೋಬಳಿ ಆಡಳಿತಾತ್ಮಕವಾಗಿ ತುಮಕೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೂ ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೂ ಸೇರಿ ಬೆಳಗುಲಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತದೆ. ಹಂದನಕೆರೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರರು ಹಾಗೂ ಲೋಕೋಪಯೋಗಿ ಕಛೇರಿಗಾಗಿ ಇವರು ತಾಲ್ಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಗೆ ಹೋಗಬೇಕಾಗುತ್ತದೆ. ಇಲ್ಲಿ ಪ್ರವಹಿಸುವ ವಿದ್ಯುತ್ ಜಾಲ ಬೆಸ್ಕಾಂ ಕಂಪನಿಯದ್ದು. ಗ್ರಾಮ ಪಂಚಾಯ್ತಿ ವತಿಯಿಂದ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ.

ಎರಡು ಕಿ.ಮೀ. ಮಣ್ಣಿನ ರಸ್ತೆಯಲ್ಲಿ ಕ್ರಮಿಸಿದರೆ ಬೀದರ್-ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯನ್ನು ತಲುಪಬಹುದಾಗಿದೆ. ಬೆಳಗುಲಿ ಅಂಚೆ ಕಛೇರಿಯ ವ್ಯಾಪ್ತಿಯಲ್ಲಿದೆ. ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಶ್ರೀಲಕ್ಷ್ಮಿ, ಆದಿಶಕ್ತಿ ಎಂಬ ಸ್ತ್ರೀಶಕ್ತಿ ಸಂಘಗಳಿವೆ. ಅಂಗನವಾಡಿ ಕೇಂದ್ರ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ಇದೆ. ಶಾಲೆಯಲ್ಲಿ ಬಿಸಿಯೂಟ ಹಾಗೂ ಕ್ಷೀರಭಾಗ್ಯ ಯೋಜನೆ ಚಾಲ್ತಿಯಲ್ಲಿದೆ.

ಈ ಊರಿನಲ್ಲಿ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ೧೬ ಫಲಾನುಭವಿಗಳಿದ್ದಾರೆ. ಇಲ್ಲಿ ಚಿಕ್ಕ ಕಿರಾಣಿ ಅಂಗಡಿ ಇದೆ. ಶ್ರೀ ಲಕ್ಷ್ಮೀದೇವಿ ದೇವಸ್ಥಾನ ಇದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರೇಖಾ ಎಂಬುವರು ಜಾನಪದ ಗೀತೆಗಳನ್ನು ಹಾಡುತ್ತಾರೆ. ರಾಮಾಬೋವಿ ಮತ್ತು ತಿಮ್ಮಾಬೋವಿ ಎಂಬುವವರು ಕೊಳಲು ನುಡಿಸುತ್ತಾರೆ.

## ದವಣದ ಹೊಸಳ್ಳಿ

ದವಣದ ಹೊಸಳ್ಳಿ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆ ಹೋಬಳಿಯ ಮಲ್ಲಿಗೆರೆ ಗ್ರಾಮ ಪಂಚಾಯತ್‌ನ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೪ ಕಿಮೀ ದೂರದಲ್ಲಿದೆ. ದವಣ ಬೆಳೆಯುತ್ತಿದ್ದ ಭೂಪ್ರದೇಶದಲ್ಲಿ ವಸತಿ ನಿರ್ಮಾಣವಾದುದರಿಂದಾಗಿಯೇ ಗ್ರಾಮಕ್ಕೆ ದವಣದ ಹೊಸಹಳ್ಳಿ ಎಂದು ಕರೆಯುತ್ತಾರೆ.

ದವಣದ ಹೊಸಳ್ಳಿಯ ಭೌಗೋಳಿಕ ವಿಸ್ತೀರ್ಣ ಸುಮಾರು ೩೫೦.೧ ಭೂಮಿಯನ್ನು ಹೊಂದಿದ್ದು ಮರಳುಮಿಶ್ರಿತ ಬಿಳಿ ಮಣ್ಣನ್ನು ಹೊಂದಿದೆ. ಇಲ್ಲಿನ ರೈತರು ಮುಖ್ಯ ಬೆಳೆಯಾಗಿ ರಾಗಿ, ಅವರೆ, ಕಡಲೆಕಾಯಿ ಧಾನ್ಯಗಳನ್ನು ಹಾಗೂ ಉಪಬೆಳೆಯಾಗಿ ಅಡಿಕೆ, ಬಾಳೆಗಳನ್ನು ಬೆಳೆಯುತ್ತಾರೆ. ಕೃಷಿಗೆ ಸಾಂಪ್ರದಾಯಿಕ ವಾಹನವಾದ ಎತ್ತಿನಗಾಡಿ, ಸಾಂಪ್ರದಾಯಿಕ ಕೃಷಿ ಉಪಕರಣಗಳಾದ ಕುಂಟೆ, ನೇಗಿಲು, ಸಾಲುಮಣೆ, ಎಡೆಕುಂಟೆ, ಕೂರಿಗೆಯನ್ನು ಬಳಸುತ್ತಾರೆ. ಆಧುನಿಕ ಉಪಕರಣಗಳ ಬಳಕೆ ತೀರಾ ಕಡಿಮೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಉಪಕಸುಬಾಗಿ ಕುರಿಗಾರಿಕೆ ಮಾಡುತ್ತಾರೆ. ಇಲ್ಲಿ ೫೯೮.೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೯ ಡಿಗ್ರಿ ಹಾಗೂ ಬಿಸಿಲು ೩೦ ಡಿಗ್ರಿ ಸರಾಸರಿ ಇದೆ. ದುಮುಕ್ ಮಂಡಿಹಳ್ಳವಿದೆ. ರೈತರು ಎತ್ತು, ಎಮ್ಮೆ, ಹಸು, ಮೇಕೆ, ಕುರಿ, ಕೋಳಿಗಳನ್ನು ಸಾಕುತ್ತಾರೆ.

ಸರ್ಪಒಕ್ಕಲಿಗ ಸಮುದಾಯದವರು ಅಧಿಕ ಪ್ರಮಾಣದಲ್ಲಿದ್ದು ನಂತರದ ಸ್ಥಾನದಲ್ಲಿ ಲಿಂಗಾಯಿತ, ಬೋವಿ, ಆದಿಕರ್ನಾಟಕ ಜನಾಂಗದವರಿದ್ದು ಕಿರು ಸಮುದಾಯವಾಗಿದೆ. ಕನ್ನಡ ಮತ್ತು ತೆಲುಗು ಭಾಷೆಯನ್ನು ಮಾತನಾಡಲು ಬಳಸುತ್ತಾರೆ.

೧೩೦ ಮನೆಗಳಲ್ಲಿ ಹೆಂಚಿನ, ಮಣ್ಣಿನ, ಕಲ್ಲಿನ, ಕಾಂಕ್ರೀಟ್ ಮನೆಗಳಿವೆ. ೩ ಮನೆಗಳಲ್ಲಿ ಶೌಚಾಲಯ ವ್ಯವಸ್ಥೆಯಿದ್ದು ಇನ್ನುಳಿದವು ಶೌಚಾಲಯ ರಹಿತವಾಗಿವೆ. ಇಲ್ಲಿನ ಬಹುತೇಕ ಮನೆಗಳು ಜನತಾ ಮನೆಗಳು

ಹಾಗೂ ಇಂದಿರಾ ಆವಾಸ್ ಮನೆಗಳಾಗಿವೆ. ೨ ಅಂಬೇಡ್ಕರ್ ವಸತಿ ನಿಲಯಗಳಿವೆ. ೩೦ ಕುಟುಂಬಗಳು ಭಾಗ್ಯಜ್ಯೋತಿ ವಿದ್ಯುತ್ ವ್ಯವಸ್ಥೆಯನ್ನು ಹೊಂದಿವೆ. ೨ ಕುಟುಂಬಗಳು ನಿವೇಶನರಹಿತವಾಗಿವೆ. ವಿದ್ಯುಚ್ಛಕ್ತಿ ಒದಗಿಸುವ ೪೦ ಕಂಬಗಳಿದ್ದು ೩೫ ಕಂಬಗಳಲ್ಲಿ ದೀಪಗಳನ್ನು ಅಳವಡಿಸಿದ್ದಾರೆ. ೩೦ ಕೊಳವೆಬಾವಿಗಳನ್ನು, ೨ ತೆರೆದ ಬಾವಿಗಳನ್ನು ಈ ಗ್ರಾಮವು ಹೊಂದಿದೆ.

ಆಧುನಿಕ ಡೈರಿ ವ್ಯವಸ್ಥೆಯಿದೆ, ಒಂದು ಪಶು ಚಿಕಿತ್ಸಾಲಯವಿದೆ. ಒಂದು ಹಿಟ್ಟಿನ ಗಿರಣಿಯಿದೆ. ೨೦೧೧ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೩೫೦. ಒಟ್ಟು ಸಾಕ್ಷರರ ಪ್ರಮಾಣ ೬೧% ರಷ್ಟಿದೆ. ಒಂದು ಅಂಗನವಾಡಿ ಕೇಂದ್ರ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಕ್ಷೀರಭಾಗ್ಯ, ಬಿಸಿಯೂಟ ಯೋಜನೆಗಳಿವೆ.

ಹಂದನಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ತುಮಕೂರು ಲೋಕಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಮತ್ತು ಮತ್ತಿಘಟ್ಟ ತಾಲ್ಲೂಕು ಪಂಚಾಯ್ತಿ, ಮಲ್ಲಿಗೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಕಂದಾಯ ಗ್ರಾಮವಾಗಿದೆ. ಕಚ್ಚಾರಸ್ತೆಯಿಂದ ಮತ್ತಿಘಟ್ಟ–ಹಂದನಗೆರೆ–ತಿಪಟೂರು ಮಾರ್ಗಗಳಿವೆ. ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಹಕಾರಿ ಸಂಘ ಹಾಗೂ ಸ್ತ್ರೀಶಕ್ತಿ ಸಂಘಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೩ ಚಿಲ್ಲರೆ ಅಂಗಡಿಗಳಿವೆ. ಜಾನಮ್ಮ ರಾಮಚಂದ್ರಪ್ಪ ಎಂಬುವವರು ತುಮಕೂರು ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷರಾಗಿದ್ದಾರೆ.

ಕರಿಯಮ್ಮ ದೇವಿ, ಭೂತಪ್ಪನ ದೇವಾಲಯವಿದೆ. ಮಲ್ಲಿಗೆರೆಯಲ್ಲಿ ನಡೆಯುವ ಕರಿಯಮ್ಮದೇವಿ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ದಮ್ಮಡಿಹಟ್ಟಿ

ದಮ್ಮಡಿಹಟ್ಟಿಯು ಕುರಿಹಟ್ಟಿಯ ಉಪಗ್ರಾಮವಾಗಿದ್ದು ಇದರ ಭೌಗೋಳಿಕ ವ್ಯಾಪ್ತಿ ಮುಖ್ಯ ಗ್ರಾಮ ಕುರಿಹಟ್ಟಿಯೊಂದಿಗೆ ಹಂಚಿಕೆಯಾಗಿದೆ. ಒಂದು ಬಗೆಯ ಗುಡ್ಡ–ಗಿಡ–ಮರಗಳ ಭೂ ಪ್ರದೇಶವಾಗಿದೆ. ದಮ್ಮಡಿ ಎಂಬ ಕಲಾಮೂಲದಿಂದಾಗಿ ದಮ್ಮಡಿಹಟ್ಟಿ ಎಂಬ ಹೆಸರು ಬಂದಿದೆ. ಕೃಷಿ ಕುಟುಂಬವಾಗಿದ್ದು ಪಶುಪಾಲನೆ ಮುಖ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಕಾಡುಗೊಲ್ಲರು ದೊಡ್ಡ ಸಮುದಾಯವಾಗಿದ್ದು ಉಪ್ಪಾರರು ಕಿರು ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದೆ. ಗಾಣದಾಳು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ. ಒಂದು ಸಿಸ್ಟನ್ ಇದೆ.

ಒಟ್ಟು ೪೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೮೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಇದೊಂದು ಶೌಚಾಲಯ ಮುಕ್ತ ಗ್ರಾಮ. ಶಿಕ್ಷಣ, ಸಾರಿಗೆ, ಕೆಇಬಿ ಇಲಾಖೆಗೆ ಸೇರಿದ ಮೂವರು ಸರ್ಕಾರಿ ನೌಕರರಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಹುರುಳಿ, ರಾಗಿ, ಶೇಂಗಾದಂತಹ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಬೋರನಕಣಿವೆಯ ನೀರು ಈ ಬಯಲಲ್ಲಿ ಹರಿದರೆ ಬೋರ್‌ವೆಲ್ ನೀರಿಗೆ ಅನುಕೂಲ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ,

ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶಿಕ್ಷಣ, ಪಡಿತರ ವಿಷಯಕ್ಕೆ ಕುರಿಹಟ್ಟಿ ಹಾಗೂ ಗಾಣದಾಳು ಗ್ರಾಮಕ್ಕೆ ಹೋಗುತ್ತಾರೆ. ಗಾಣದಾಳುವಿನಿಂದ ಅಂಚೆ ಸಂಪರ್ಕವಿದೆ. ತಿಮ್ಮಪ್ಪದೇವರ ಪೌಳಿಯಿದೆ. ಹೊರಭಾಗದಲ್ಲಿ ಭೂತಪ್ಪನ ಗುಡಿಯಿದೆ. ದೀಪಾವಳಿ ಹಬ್ಬದಂದು ತಿಮ್ಮಪ್ಪದೇವರ ಉತ್ಸವ, ಹರಕೆ ಸಂಪ್ರದಾಯವಿರುತ್ತದೆ. ಭೂತಪ್ಪನ ಆರತಿ, ಬಾನ, ಹರಕೆ ಸಂಪ್ರದಾಯವಿರುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ವೃದ್ಧಾಪ್ಯವೇತನ, ವಿಧವಾ ವೇತನಗಳ ೬ ಜನ ಫಲಾನುಭವಿಗಳಿದ್ದಾರೆ. ಗಾಣದಾಳುವಿಗೆ ಕಚ್ಚಾ ರಸ್ತೆ ಸಂಪರ್ಕವಿದೆ. ಶಿಕ್ಷಣ, ಪಡಿತರಕ್ಕೆ ಗಾಣದಾಳುವಿಗೆ ಹೋಗುತ್ತಾರೆ. ೪೮% ಸಾಕ್ಷರತೆಯಿದೆ.

## ದಾಸಪ್ಪನಕಟ್ಟೆ

ದಾಸಪ್ಪನಕಟ್ಟೆ ಗ್ರಾಮವು ಕಮಲಾಪುರದ ಹೊರವಲಯದ ಒಂದು ಜನವಸತಿ ಗ್ರಾಮವಾಗಿದೆ. ೧೬ ಮನೆಗಳಿದ್ದು ಇವೆಲ್ಲವೂ ಕಮಲಾಪುರದ ಹೆಸರಿನಲ್ಲಿ ಹಾಗೂ ದಾಸಪ್ಪನಕಟ್ಟೆ ಎಂಬ ಹೆಸರಿನಲ್ಲಿಯೂ ಕರೆದುಕೊಳ್ಳುತ್ತಾರೆ. ದಾಸಪ್ಪ ಎಂಬ ವ್ಯಕ್ತಿಯೊಬ್ಬರು ಮೊದಲಿಗೆ ಗೋಕಟ್ಟೆ ಎಂದು ಕರೆಯುತ್ತಿದ್ದ ಪ್ರದೇಶದಲ್ಲಿ ಜನವಸತಿ ನಿರ್ಮಿಸಿಕೊಂಡ ಕಾರಣ ದಾಸಪ್ಪನಕಟ್ಟೆ ಎಂದೆ ಕರೆಯುತ್ತಾರೆ. ಕಾಡು, ಗಿಡ ಮರಗಳು, ತೆಂಗಿನ ತೋಟಸಾಲಿನ ಗ್ರಾಮ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ತೋಳ, ಮೊಲ, ಜಿಂಕೆ ಕಂಡುಬರುತ್ತವೆ. ಹಸು, ಎಮ್ಮೆ, ಮೇಕೆ ಸಾಕುಪ್ರಾಣಿಗಳು.

ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಇಲ್ಲಿ ೫೯೮.೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೯ ಡಿಗ್ರಿ ಹಾಗೂ ಬಿಸಿಲು ೩೦ ಡಿಗ್ರಿ ಸರಾಸರಿ ಇದೆ. ಕುಡಿಯಲು ಮಲ್ಲಿಗೆರೆ ಗ್ರಾಮಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಒಂದು ಕೊಳವೆಬಾವಿಯಿದ್ದು ಕಿರು ಟ್ಯಾಂಕ್ ಸೌಲಭ್ಯವಿದೆ. ಕಟ್ಟೆ ಇದ್ದರೂ ತುಂಬುವುದು ಕಡಿಮೆ. ಮಳೆಗಾಲದಲ್ಲಿ ಮಾತ್ರ ನೀರು ಬಂದು ಕುರಿ, ಮೇಕೆಗಳು ನೀರು ಕುಡಿಯಲು ಬಳಕೆಯಾಗುತ್ತದೆ.

ವಿವಿಧ ಪ್ರಕಾರಗಳ ೧೬ ಮನೆಗಳಿದ್ದು ೮೧ ಜನಸಂಖ್ಯೆಯಿದೆ. ಮನೆಗಳು ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಮರಸ ಒಕ್ಕಲಿಗರು ದೊಡ್ಡ ಸಮುದಾಯವಾಗಿದ್ದು ಮಡಿವಾಳ ಕಿರು ಸಮುದಾಯವಾಗಿದೆ. ಇಲ್ಲಿನ ಮನೆಗಳಲ್ಲಿ ಸರ್ಕಾರದ ವಸತಿ ಯೋಜನೆಯಾದ ಆಶ್ರಯ, ಜನತಾ ಯೋಜನೆಯ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ. ಭಾಗ್ಯಜ್ಯೋತಿ ಯೋಜನೆಯ ಉಚಿತ ವಿದ್ಯುತ್ ಸೌಲಭ್ಯ ಲಭ್ಯವಿದೆ. ೨ ಸ್ತ್ರೀಶಕ್ತಿ ಸ್ವಸಹಾಯ ಸಂಘವಿದ್ದು ಮಹಿಳೆಯರಿಗೆ ಆರ್ಥಿಕವಾಗಿ ಸಹಾಯಕವಾಗಿದೆ.

ರಾಗಿ, ಜೋಳ, ಆರಕ, ಭರಕ, ಹೆಸರು ಬೆಳೆಯುತ್ತಾರೆ. ಕೊಬ್ಬರಿ ವ್ಯಾಪಾರಿ ಸರಕಾಗಿದೆ. ಒಬ್ಬರು ಸರ್ಕಾರಿ ನೌಕರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಶಿಕ್ಷಣ, ಪಡಿತರಕ್ಕೆ ಕಮಲಾಪುರಕ್ಕೆ ಹೋಗುತ್ತಾರೆ. ಸಾಕ್ಷರತೆ ೫೭% ರಷ್ಟಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ದೊಡ್ಡನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರು ಹೋಬಳಿ ಗಾಣದಾಳು ಗ್ರಾಮಪಂಚಾಯ್ತಿಯ ಯರೇಹಳ್ಳಿ ಕಂದಾಯ ದಾಖಲೆಗೆ ಸೇರಿದ ಮಜರೆ ಗ್ರಾಮ. ಭೌಗೋಳಿಕ ವಿಸ್ತೀರ್ಣ ೮೧೨.೧೩ ಹೆಕ್ಟೇರ್ ಮುಖ್ಯ ಗ್ರಾಮದೊಂದಿಗೆ ಹಂಚಿಕೆಯಾಗಿದೆ. ಇಲ್ಲಿ ಉಪ್ಪಾರ, ಮಡಿವಾಳ ಆದಿಕರ್ನಾಟಕ ಹಾಗೂ ಕುಂಚಿಟಿಗ ಜನಾಂಗದ ೩೦ ಮನೆಗಳಿದ್ದು ೧೫೦ ಜನಸಂಖ್ಯೆ ಹೊಂದಿದೆ. ಇಲ್ಲಿನ ಮನೆಗಳು ಶೀಟಿನ, ಮಾಳಿಗೆ, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೮ ಮನೆಗಳನ್ನು ಕಾಣಬಹುದು.

ಕುಡಿಯಲು ಗಾಣದಾಳು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರನ್ನು ಪೂರೈಸಲಾಗುತ್ತದೆ. ಒಂದು ಸಿಸ್ಟನ್ ಇದ್ದು ಕೊಳವೆ ಬಾವಿಯಿದೆ. ರೈತಾಪಿ ಬದುಕು ಮುಖ್ಯವಾಗಿದ್ದು ಹೆಸರು, ರಾಗಿ, ಶೇಂಗಾ, ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು ಬೆಳೆಯುತ್ತಾರೆ. ಕೊಬ್ಬರಿ, ಹೊಂಗೆ ಬೀಜ ವ್ಯಾಪಾರಿ ಸರಕಾಗಿವೆ. ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳು. ಕರಡಿ, ನರಿ, ಮೊಲ ಈ ಪರಿಸರದಲ್ಲಿ ಕಂಡುಬರುವ ಕಾಡುಪ್ರಾಣಿಗಳಾಗಿವೆ. ಸೈಕಲ್ ಹಾಗೂ

ಸ್ಕೂಟರ್ ಬಳಕೆಯಿದೆ. ಜೊತೆಗೆ ಎತ್ತಿನ ಗಾಡಿಗಳಿವೆ. ಶಿಕ್ಷಣ, ಅರಣ್ಯ ಇಲಾಖೆಯ ಸರ್ಕಾರಿ ನೌಕರರಿದ್ದು ಟ್ರ್ಯಾಕ್ಟರ್ ಡ್ರೈವರ್, ಖಾಸಗಿ ಕಂಪನಿಯ ನೌಕರರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗಾಣದಾಳು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಬೋರನಕಣಿವೆ ಮೂಲಕ ಸಿರಾ–ಹುಳಿಯಾರು ರಾಜ್ಯ ಹೆದ್ದಾರಿ ಸಂಪರ್ಕವಿದೆ. ಪಡಿತರ ವಿಷಯಗಳಿಗೆ ಗಾಣದಾಳು ನ್ಯಾಯಬೆಲೆ ಅಂಗಡಿಯಿಂದ ಪಡೆದುಕೊಳ್ಳುತ್ತಾರೆ.

ಒಂದು ಅಂಗನವಾಡಿ ಕೇಂದ್ರವಿದೆ. ಹೆಚ್ಚಿನ ಶಿಕ್ಷಣಕ್ಕೆ ಮುಖ್ಯ ಗ್ರಾಮ ಯರೇಹಳ್ಳಿ ಹಾಗೂ ಬೋರನಕಣಿವೆಗೆ ಹೋಗುತ್ತಾರೆ. ೨ ಸ್ತ್ರೀಶಕ್ತಿ ಸಂಘಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೬ ಫಲಾನುಭವಿಗಳಿದ್ದಾರೆ.

ಕರಿಯಮ್ಮ ದೇವರ ಪೌಳಿಯಿದ್ದು ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ದೊಡ್ಡ ಹುಲ್ಲೇನಹಳ್ಳಿ

ಇದು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಕೇಂದ್ರದ ದೊಡ್ಡ ಎಣ್ಣೆಗೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೪೦ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣವು ೧೪೫.೨೦ ಹೆಕ್ಟೇರ್. ಬಯಲು ನಾಡಾಗಿದ್ದು ಬಿಳಿಕಲ್ಲು, ಕೆಂಪು ಮಣ್ಣನ್ನು ಹೊಂದಿದೆ. ಒಂದು ಗುಡ್ಡವನ್ನು ಹೊಂದಿದ್ದು ಇದನ್ನು ಹುಲ್ಲೇನಹಳ್ಳಿ ಗುಡ್ಡವೆಂದು ಕರೆಯುತ್ತಾರೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ತೋಳ, ಮೊಲ, ಜಿಂಕೆ ಕಂಡುಬರುತ್ತವೆ. ಹಸು, ಎಮ್ಮೆ, ಮೇಕೆ ಸಾಕುಪ್ರಾಣಿಗಳು. ಕೋಳಿ ಸಾಕುಪಕ್ಷಿಯಾಗಿದೆ.

ನಾಯಕರ/ ಪಾಳೇಗಾರಿಕೆಯಲ್ಲಿ ದೊಡ್ಡಹುಲ್ಲೇನಾಯ್ಕನು ಈ ಗ್ರಾಮವನ್ನು ಆಳ್ವಿಕೆ ಮಾಡುತ್ತಿದ್ದನೆಂದು ಇಲ್ಲಿನ ಸ್ಥಳೀಯರು ತಿಳಿಸುತ್ತಾರೆ. ಹಾಗಾಗಿ ಈ ಗ್ರಾಮಕ್ಕೆ ದೊಡ್ಡಹುಲ್ಲೇನಹಳ್ಳಿ ಎಂಬ ಹೆಸರು ಬರಲು ಕಾರಣವಾಗಿದೆ. ಇದಕ್ಕೆ ಸಾಕ್ಷಿಯೆಂಬಂತೆ ಇಲ್ಲೊಂದು ಶಿಲಾಶಾಸನವಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಇಲ್ಲಿ ೫೯೮.೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೯ ಡಿಗ್ರಿ ಹಾಗೂ ಬಿಸಿಲು ೩೦ ಡಿಗ್ರಿ ಸರಾಸರಿ ಇದೆ. ೧ ಹಳ್ಳ, ೨೦ ಕೊಳವೆ ಬಾವಿಗಳು, ೧ ಹುಲ್ಲೇನಹಳ್ಳಿ ಕಟ್ಟೆ, ೪ ಮಿನಿ ವಾಟರ್ ಟ್ಯಾಂಕ್‌ಗಳು ಮತ್ತು ೬ ಕೈಪಂಪುಗಳನ್ನು ಹೊಂದಿದೆ.

ನಾಯಕರನ್ನೊಳಗೊಂಡ ದೊಡ್ಡ ಗ್ರಾಮವಾಗಿದ್ದು ಬೇರೆ ಯಾವುದೇ ಜಾತಿಯ ಜನರು ವಾಸಿಸುತ್ತಿಲ್ಲ. ಕನ್ನಡ ಪ್ರಮುಖ ಭಾಷೆಯಾಗಿದೆ. ೨ ಕಾಂಕ್ರೀಟ್ ಮನೆಗಳು, ೨೦ ಕಲ್ಲಿನ ಮನೆಗಳು, ೨ ಮಣ್ಣಿನ ಮನೆಗಳು, ೧ ಗುಡಿಸಲು ಇದ್ದು ಹೆಂಚಿನ ಮನೆಗಳು ಹೆಚ್ಚಿವೆ. ಇವುಗಳಲ್ಲಿ ೨೦ ಆಶ್ರಯ ಮನೆಗಳು, ೧೦ ಜನತಾ ಮನೆಗಳು, ೫ ಇಂದಿರಾ ಆವಾಸ್ ಮನೆಗಳಾಗಿವೆ. ೬ ವಸತಿರಹಿತ ಕುಟುಂಬಗಳನ್ನು, ೨ ನಿವೇಶನರಹಿತ ಕುಟುಂಬಗಳನ್ನು ಹೊಂದಿದೆ. ೭೦ ಮನೆಗಳು ಮಾತ್ರ ಶೌಚಾಲಯ ವ್ಯವಸ್ಥೆ ಹೊಂದಿರುವುದಿಲ್ಲ.

೨೦೧೧ ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೧೯೫. ಇದರಲ್ಲಿ ಗಂಡಸರು ೮೦ ಮತ್ತು ಹೆಂಗಸರು ೭೦ ಮಂದಿಯಿದ್ದು ಒಟ್ಟು ಸಾಕ್ಷರರ ಪ್ರಮಾಣ ಶೇ.೫೬ ಇದೆ. ಕೃಷಿ ಕೂಲಿಕಾರರು, ಬಡಿಗೇರರು ಇದ್ದಾರೆ. ೨ ಹಿಟ್ಟಿನ ಗಿರಣಿಗಳಿವೆ. ೫ ಜನ ಶಿಕ್ಷಕರು, ಇಬ್ಬರು ಲೈನ್‌ಮನ್‌ಗಳು, ಮೂವರು ಕೆಎಸ್‌ಆರ್‌ಟಿಸಿ ಕಂಡಕ್ಟರ್‌ಗಳು, ಇಬ್ಬರು ದಾದಿಯರು ಇದ್ದಾರೆ. ಆಧುನಿಕ ಡೈರಿಯನ್ನು ಹೊಂದಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದೊಡ್ಡ ಎಣ್ಣೆಗೆರೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಡುವ ಮಜರೆ ಗ್ರಾಮ ಇದಾಗಿದೆ. ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರು, ಒಬ್ಬರು ಗ್ರಾಮ ಪಂಚಾಯ್ತಿ ನೌಕರರಿದ್ದಾರೆ. ಮಿನಿ ವಾಟರ್ ಟ್ಯಾಂಕ್‌ಗಳು ಹಾಗೂ ಕೈಪಂಪ್‌ಗಳ ಮೂಲಕ ಕುಡಿಯುವ ನೀರನ್ನು ಒದಗಿಸಲಾಗುತ್ತದೆ.

ಹಾಲು ಉತ್ಪಾದಕರ ಸಹಕಾರ ಸಂಘ, ಮಹಿಳಾ ಸ್ವಸಹಾಯ ಸಂಘಗಳು, ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಶೈಕ್ಷಣಿಕವಾಗಿ ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಗಳಿವೆ. ಶಾಲೆಗಳಲ್ಲಿ ಬಿಸಿಯೂಟ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ಭಾಗ್ಯಲಕ್ಷ್ಮಿ ಯೋಜನೆ, ವಿಕಲಚೇತನ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೪ ಅಂಗಡಿಗಳಿವೆ. ವೀರಗಲ್ಲು ಹಾಗೂ ಒಂದು ಶಿಲಾಶಾಸನವಿದ್ದು ಶಾಸನ ಅಸ್ಪಷ್ಟವಾಗಿದೆ. ಚೌಡಮ್ಮ, ಆಂಜನೇಯ, ದುರ್ಗಮ್ಮ ದೇವಾಲಯ, ರಾಮ ದೇವಾಲಯ, ಕೆಂಚರಾಯ, ಮಾಸ್ತಿಯಮ್ಮ, ಕರಿಯಮ್ಮ ದೇವಾಲಯಗಳಿವೆ. ಚೌಡಮ್ಮನ ಬಾನವನ್ನು ಬಾಡೂಟ ಮಾಡುವುದರ ಮೂಲಕ ಆಚರಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

೫೮ ವರ್ಷದ ರಂಗಯ್ಯ ಎಂಬ ನಾಯಕ ಜನಾಂಗದ ವ್ಯಕ್ತಿ ರಂಗ ಕಲಾವಿದರಾಗಿದ್ದಾರೆ. ವಾಲ್ಮೀಕಿ ಯುವಕ ಸಂಘ, ರೈತ ಸಂಘಗಳಿವೆ.

## ದೊಡ್ಡ ಎಣ್ಣೇಗೆರೆ

ತುಮಕೂರು ಜಿಲ್ಲೆ ಚಿ.ನಾ.ಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿಯಲ್ಲಿನ ಗ್ರಾಮಪಂಚಾಯಿತಿ ಹೊಂದಿರುವ ದೊಡ್ಡಎಣ್ಣೆಗೆರೆ ಕಂದಾಯ ಗ್ರಾಮವಾಗಿದೆ. ತಾಲ್ಲೂಕ್ ಕೇಂದ್ರದಿಂದ ಪಶ್ಚಿಮದಿಕ್ಕಿಗೆ ೩೫ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮವು ಪಾಳೇಗಾರಿಕೆ ಆಳ್ವಿಕೆಗೆ ಒಳಗಾಗಿದ್ದು, ಒಂದು ಭಗ್ನವಾಗಿರುವ ಕೋಟೆಯು, ಶಿಥಿಲವಾಗಿರುವ ಶಿಲಾಶಾಸನವು ಹಾಗೂ ಊರ ಮುಂದಿನ ಕೆರೆಯಲ್ಲಿರುವ ಒಂದು ಪ್ರಾಚೀನ ಬಾವಿಯು ಇದ್ದು, ಸುಮಾರು ೧೬ ನೇ ಶತಮಾನದಲ್ಲಿ ಕಟ್ಟಲ್ಪಟ್ಟಿತ್ತೆಂಬುದಕ್ಕೆ ಸಾಕ್ಷಿ ಒದಗಿಸುತ್ತವೆ. ಪಂಚನಹಳ್ಳಿ ಸಂಸ್ಥಾನದ ದೊರೆ ತನ್ನ ಪತ್ನಿಯಾದ ಭೀಮಸತಿಯನ್ನು ದೊಡ್ಡ ಎಣ್ಣೇಗೆರೆಯಲ್ಲಿ ಬಿಟ್ಟನೆಂದು ಇವಳ ನೆನಪಿಗಾಗಿ ಇಲ್ಲಿಯೇ 'ಭೀಮಸತಿ' ದೇವಾಲಯ ಕಟ್ಟಿಸಿದ್ದಾನೆಂದು ಹೇಳಿಕೆಯ ಭೀಮಸತಿ ಲಂಬಾಣಿ ಜನಾಂಗದ ಕುಲ ದೇವವಾಗಿದೆ.

ಭೌಗೋಳಿಕ ವಿಸ್ತೀರ್ಣವು ೮೦೬.೮೬ ಹೆಕ್ಟೇರ್ ಇದ್ದು, ಕೆಂಪು ಮಿಶ್ರಿತ ಬಿಳಿಮಣ್ಣನ್ನು ಹೊಂದಿದ್ದು, ಕೃಷಿಗಾರಿಕೆಯಲ್ಲಿ ರೈತರು ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾಗಿ ಅವರೆ, ಹೆಸರು, ತೊಗರಿ, ಇತ್ಯಾದಿಗಳನ್ನು ವಾಣಿಜ್ಯ ಬೆಳೆಗಳಾದ ತೆಂಗು, ಅಡಿಕೆ, ದಾಳಿಂಬೆ, ತರಕಾರಿ ಬೆಳೆಗಳನ್ನು ಬೆಳೆಯುತ್ತಾರೆ. ಕೃಷಿಗೆ ಸಾಂಪ್ರಾದಾಯಿಕ ಹಾಗೂ ಆಧುನಿಕ ವಾನಗಳು, ಉಪಕರಣಗಳನ್ನು ಬಳಸುತ್ತಾರೆ. ಹಸು, ಎಮ್ಮೆ, ಆಡು, ಕುರಿ ಎತ್ತು, ಇತ್ಯಾದಿಗಳನ್ನು ಸಾಕುಪಕ್ಷಿಯಾದ ಗಿಳಿ, ಗೊರವಂಕ, ಮೈನ, ಕೊಕ್ಕರೆ ಕಾಡು ಪಕ್ಷಿಗಳು ಕಂಡುಬರುತ್ತವೆ. ಕೋಳಿಯನ್ನು ಸಾಕುತ್ತಿದ್ದಾರೆ. ಈ ಗ್ರಾಮದ ಪಕ್ಕದಲ್ಲಿ ೦೧ ಬೆಟ್ಟ ೦೧ ಗುಡ್ಡ ವಿರುವುದರಿಂದ ಕರಡಿ, ಜಿಂಕೆ, ಕಾಡುಹಂದಿ ತೋಳ ಕಾಡುಪ್ರಾಣಿಗಳು ಈ ಗ್ರಾಮಕ್ಕೆ ದಾಳಿ ಮಾಡುತ್ತವೆ. ಇವರ ಪ್ರಧಾನ ಆಹಾರವಾಗಿ ರಾಗಿ ಮುದ್ದೆ, ಅನ್ನ ರೊಟ್ಟಿ ವಿಶೇಷವಾಗಿ ಹಬ್ಬ ಸಮಾರಂಭಗಳಲ್ಲಿ ಬಾಡೂಟ ಕೋಳಿಮಾಂಸದೂಟ ಪಾಯಸ, ಹೋಳಿಗೆ, ಲಾಡು, ಇತ್ಯಾದಿ ಸಿಹಿತಿನಿಸುಗಳನ್ನು ಮಾಡುತ್ತಾರೆ. ಉಪಕಸುಬಾಗಿ ಕುರಿಗಾರಿಕೆ ಇದೆ. ಬಯಲು ಸೀಮೆಯ ಉಷ್ಣವಲಯದಲ್ಲಿದ್ದು, ವಾರ್ಷಿಕ ಹವಮಾನ ಸರಾಸರಿ ಮಳೆ-೫೬೩-೫೬೪ ಮಿ.ಮೀ. ಚಳಿ-೦೮೧೨ ಡಿ.ಸೆ. ಬಿಸಿಲು- ೨೬-೩೧ ಡಿ.ಸೆ. ಇದೆ. ಈ ಗ್ರಾಮದಲ್ಲಿ ಒಂದು ಕೆರೆ, ೨೦೦ ಕೊಳವೆ ಬಾವಿಗಳು, ೦೧ ಹಳ್ಳ, ೧೦ ತೆರೆದ ಬಾವಿಗಳು, ೨೦ ಮಿನಿವಾಟರ್ ಟ್ಯಾಂಕ್‌ಗಳಿದ್ದು ಗ್ರಾಮಕ್ಕೆ ನೀರೂಣಿಸುತ್ತವೆ.

ಬಹುಸಂಖ್ಯಾತ ಕುರುಜನಾಂಗವೇ ಅಧಿಕ ಸಂಖ್ಯೆಯಲ್ಲಿದ್ದು, ನಂತರದಲ್ಲಿ ಲಿಂಗಾಯತರು, ಆದಿಕರ್ನಾಟಕ, ನಾಯಕರು, ಶೆಟ್ರು, ಮಡಿವಾಳ, ಕುಂಬಾರರು, ದೇವಾಂಗದವರು, ಬಣಜಿಗರು, ಕೊರಮರು, ಭೋವಿ ಆದಿದ್ರಾವಿಡರು, (ಬ್ರಾಹ್ಮಣರು, ಮುಸ್ಲಿಂರು. ಲಂಬಾಣಿ ಜನಾಂಗದವರು ವಾಸವಾಗಿದ್ದಾರೆ. ಕನ್ನಡ, ತೆಲುಗು, ಉರ್ದು, ಲಂಬಾಣಿ ಭಾಷೆಗಳನ್ನು ಮಾತನಾಡುತ್ತಾರೆ.

ಈ ಗ್ರಾಮದಲ್ಲಿ ೩೭೦ ಮನೆಗಳಿದ್ದು, ೧೦೦ ಮನೆಗಳು ಶೌಚಾಲಯ ಹೊಂದಿದ್ದು, ೩೧೯ ಮನೆಗಳು ಶೌಚಾಲಯ ರಹಿತವಾಗಿವೆ. ೩೦ ವಸತಿ ರಹಿತ ಕುಟುಂಬಗಳು, ೧೦ ನಿವೇಶನ ರಹಿತ ಕುಟುಂಬಗಳಿಲ್ಲಿ ೩೦ ಆಶ್ರಯ ಮನೆಗಳು, ೧೫

ಜನತಾ ಮನೆಗಳು, ೩೦ ಅಂಬೇಡ್ಕರ್ ವಸತಿ ನಿಲಯಗಳು ೬೦ ಇಂದಿರಾ ಆವಾಸ್ ಮನೆಗಳಿವೆ. ಬಹುತೇಕ ೩೦೦ ಹೆಂಚಿನಮನೆಗಳೇ ಅಧಿಕ ಸಂಖ್ಯೆಯಲ್ಲಿದ್ದು, ೮೦ ಕಲ್ಲಿನ ಮನೆಗಳು, ೩೦ ಕಾಂಕ್ರೀಟ್ ಮನೆಗಳು, ೧೦ ಮಣ್ಣಿನ ಮನೆಗಳು, ೦೯ ಗುಡಿಸಲು ಮನೆಗಳಿವೆ. ವಿದ್ಯುತ್ ಒದಗಿಸುವ ೧೨೦ ಕಂಬಗಳಿದ್ದು, ೧೧೦ ಕಂಬಗಳು ಮಾತ್ರ ವಿದ್ಯುತ್ ದೀಪಗಳನ್ನು ಹೊಂದಿವೆ. ೧೨೦ ಮನೆಗಳಲ್ಲಿ ಭಾಗ್ಯಜ್ಯೋತಿ ವಿದ್ಯುತ್ ವ್ಯವಸ್ಥೆಯಿದೆ. ಗ್ರಾಮದಲ್ಲಿ ೦೧ ನ್ಯಾಯಬೆಲೆ ಅಂಗಡಿ ಇದೆ. ಗ್ರಾ॥ ಪಂಚಾಯಿತಿಯ ಒಂದು ಗ್ರಂಥಾಲಯವಿದೆ. ಪುಸ್ತಕಗಳ ಕೊರತೆ ಎದ್ದು ಕಾಣುತ್ತದೆ.

೨೦೧೧ ರ ಜನಗಣತಿಯ ಪ್ರಕಾರ ಈ ಗ್ರಾಮದ ಒಟ್ಟು ಜನಸಂಖ್ಯೆ ೧೨೦೦ ಇದ್ದು, ಇದರಲ್ಲಿ ಒಟ್ಟ ಗಂಡಸರು–೫೮೫, ೫೬೫ ಹೆಂಗಸರು, ಪ.ಪಂಗಡದಲ್ಲಿ ೬೦ ಗಂಡು, ೪೦ ಹೆಂಗಸರು, ಓಟಿನೆಯ ೪೨೫ ಗಂಡಸರು, ೪೩೫ ಹೆಂಗಸರು ಹಾಗೂ ೫೦ ಮಕ್ಕಳು ವಾಸವಾಗಿದ್ದಾರೆ. ಈ ಗ್ರಾಮದ ಒಟ್ಟು ಸಾಕ್ಷರರ ಪ್ರಮಾಣ ೬೬% ಇದೆ.

ಹೈನುಗಾರಿಕೆಯಲ್ಲಿ ಆಧುನಿಕ ಡೈರಿ, ಸರ್ಕಾರಿ ನೌಕರರಲ್ಲಿ ೨೦ ಜನರು ಸಾಂಪ್ರದಾಯಿಕ ಉದ್ಯೋಗದಲ್ಲಿ ಕಮ್ಮಾರರು ಬಡಿಗತನ, ಸಾಂಪ್ರದಾಯಿಕ ಉದ್ಯೋಗದಲ್ಲಿ ೦೩ ಹಿಟ್ಟಿನಗಿರಣಿ, ಹೆಂಚಿನ ಇಟ್ಟಿಗೆ ಕಾರ್ಖಾನೆಗಳಿವೆ. ವ್ಯಾಪಾರದಲ್ಲಿ ಮುಖ್ಯ ಸರಕಾರಿ ತೆಂಗು, ಅಡಿಕೆ, ಬಾಳೆಯನ್ನು ಬಳಸುತ್ತಾರೆ.

ಹಂದನಕೆರೆ ಹೋಬಳಿ ತುಮಕೂರು ಲೋಕಸಭಾ ಕ್ಷೇತ್ರಕ್ಕೂ, ಚಿ.ನಾ.ಹಳ್ಳಿ ವಿಧಾನ ಸಭಾಕ್ಷೇತ್ರಕ್ಕೂ ಹಂದನಕೆರೆ ಜಿಲ್ಲಾ ಪಂಚಾಯತ್ ಕ್ಷೇತ್ರಕ್ಕೂ, ದೊಡ್ಡಎಣ್ಣೇಗೆರೆ ತಾಲ್ಲೂಕ್ ಪಂಚಾಯತ್ ಮತ್ತು ದೊಡ್ಡ ಎಣ್ಣೇಗೆರೆ ಗ್ರಾಮಪಂಚಾಯತ್ ಕೇಂದ್ರವಾಗಿದೆ. ೩ ಜನ ಗ್ರಾ.ಪಂ. ಸದಸ್ಯಯಿದ್ದು, ೧ ಗ್ರಾ.ಪಂ. ಸದಸ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಪೋಲಿಸ್‌ಠಾಣೆಯನ್ನು ಹಂನದಕೆರೆಯಲ್ಲಿದೆ. ತಹಶೀಲ್ದಾರ್ ಕಛೇರಿ ಲೋಕೋಪಯೋಗಿ ಇಲಾಖೆ ವಿದ್ಯುತ್ ಇಲಾಖೆ, ನೀರು ಇಲಾಖೆಗಳು ಚಿ.ನಾ.ಹಳ್ಳಿಯಲ್ಲಿವೆ.

ಜಿಲ್ಲಾ ಮುಖ್ಯ ರಸ್ತೆಯಿದ್ದು ಹುಳಿಯಾರು ಪಂಚನಹಳ್ಳಿ ಹೊಸದುರ್ಗ, ತಿಪಟೂರು ಕಡೆಗೂ, ಒಂದು ಕಚ್ಚಾರಸ್ತೆಯು ಚಿಕ್ಕಎಣ್ಣೇಗೆರೆ, ಚೋರಗೊಂದನಹಳ್ಳಿ, ಅರಸೀಕೆರೆಗೆ ಸಂಪರ್ಕ ಕಲ್ಪಿಸುತ್ತದೆ.

ಒಂದು ಸಣ್ಣ ಅಂಚೆ ಕಛೇರಿ ಇದ್ದು, ತಂತಿ, ಈಮೇಲ್ ಇದೆ. ಸ್ತ್ರೀಶಕ್ತಿ ಸಂಘಗಳು ಹಾಗೂ ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರಿ ಸಂಘಗಳು ಗ್ರಾಮಕ್ಕೆ ಹಣಕಾಸಿನ ನೆರವನ್ನು ಒದಗಿಸುತ್ತವೆ.

ಒಂದು ಅಂಗನವಾಡಿ ಕೇಂದ್ರವಿದ್ದು, ಶಾಲೆಯಿದ್ದು ಆ ಶಾಲೆಯಲ್ಲಿ ಕ್ಷೀರಭಾಗ್ಯ ಅಕ್ಷರ ದಾಸೋಹ, ಕುಡಿಯುವ ನೀರಿನ ಮತ್ತು ಶೌಚಾಲಯದ ವ್ಯವಸ್ಥೆಯಿದೆ. ಆದರೆ ಆಟದ ಮೈದಾನವಿರುವುದಿಲ್ಲ. ಪೂರಕ ಸೌಲಭ್ಯಗಳಾದ ಒಂದು ಗ್ರಾಮ ಪಂಚಾಯಿತ್ ವೃತ್ತಿಯ ಗ್ರಂಥಾಲಯವಿದ್ದು ಸುಮಾರು ೧೦೦೦ ಪುಸ್ತಕಗಳಿವೆ. ೬ ಹಾಸಿಗೆಯ ಹೊಂದಿರುವ ಒಂದು ಆಸ್ಪತ್ರೆ ಇದೆ. ಸಮುದಾಯ ಸೌಲಭ್ಯಗಳಾದ ವಿಕಲಚೇತನ ವೇತನವನ್ನೂ ಹಾಗೂ ವಿಧವಾ ವೇತನ ಪಡೆಯುವ ಜನರಿದ್ದಾರೆ. ೨ ಹೋಟೆಲ್, ೪ ಚಿಲ್ಲರೆ ಅಂಗಡಿಗಳಿವೆ. ಮದುವೆಯಂತಹ ಕಲ್ಯಾಣ ಕಾರ್ಯಕ್ರಮಗಳಿವೆ. ಒಂದು ಸಮುದಾಯ ಛತ್ರವಿದೆ.

ಸಾಂಸ್ಕೃತಿಕ ಕ್ಷೇತ್ರದಲ್ಲಿ ರೇವಣ್ಣ ೪೫, ಬೀರಣ್ಣ ೫೨ ಕುರುಬ ಜಾತಿಗೆ ಸೇರಿದ ವ್ಯಕ್ತಿಗಳು ರಂಗಭೂಮಿಯ ರಂಗಕಲಾವಿದರು, ಶಿಷ್ಟಪದದಲ್ಲಿ ಚನ್ನಬಸಪ್ಪ ಎಂಬ ೬೬ ವರ್ಷದ ವ್ಯಕ್ತಿಯು ಲಿಂಗಾಯಿತ ಜಾತಿಗೆ ಸೇರಿದ್ದು, ಇವರು ಚುಟುಕು ಸಾಹಿತ್ಯ ಕವಿತೆಯನ್ನು ರಚಿಸಿದ್ದಾರೆ.

ಗ್ರಾಮದಲ್ಲಿ ಯುವಕ ಸಂಘಗಳಿವೆ. ರೈತ ಸಂಘವಿದೆ. ಗೆಳೆಯರ ಬಳಗಗಳಿವೆ. ಜಾತ್ರಾ ಕಮುಟಿಗಳಿವೆ. ಕನ್ನಡ ಸಂಘಗಳಿವೆ. ಅಭಿಮಾನಿ ಬಳಗಗಳಿವೆ. ಒಂದು ದಲಿತವಿದೆ.

ಬಸವೇಶ್ವರ, ಚೌಡಿಕೆ ಲಕ್ಕಮ್ಮ, ಆಂಜನೇಯಸ್ವಾಮಿ ದೇವಾಲಯ, ಭೀಮಸತಿ ದೇವಾಲಯ, ಭೂತಪ್ಪನ ದೇವಾಲಯ, ದುರ್ಗಮ್ಮ ದೇವಾಲಯಗಳಿವೆ. ಪ್ರತಿವರ್ಷ ಆಂಜನೇಯ ಸ್ವಾಮಿ ಜಾತ್ರೆಯಲ್ಲಿ ಬಹಳ ವಿಜೃಂಭಣೆಯಿಂದ ಹಾಗೂ ಭೀಮಸತಿ ಜಾತ್ರೆಯ ಇಡೀ ಭಾರತದಲ್ಲಿಯೇ ಲಂಭಾಣಿಜನಾಂಗದ ದೊಡ್ಡ ಜಾತ್ರೆಯಾಗಿದ್ದು ವಿವಿಧ ರಾಜ್ಯಗಳ ಬಂಜಾರ ಸಮುದಾಯದವನು ಇಲ್ಲಿಗೆ ಆಗಮಿಸಿ ಸುಮಾರು ೭ ದಿನಗಳ ಜಾತ್ರೆಯಲ್ಲಿ ಭಾಗವಹಿಸಿ, ಹಾಡು ನೃತ್ಯ ಬಾಯಿಬೀಗ ಹರಕೆ ಇತ್ಯಾದಿಗಳನ್ನು ನೆರವೇರಿಸುತ್ತಾರೆ. ೬ ದಿನಗಳ ಸಿಹಿಯೂಟ ಕಡೆದಿನ ಮಾತ್ರ ಬಾಡೂಟಗಳನ್ನು ಏರ್ಪಡಿಸುತ್ತಾರೆ.

ಚೌಡಮ್ಮಳ ಭಾನವನ್ನು ಭೂತಪ್ಪನ ಎಡೆಯನ್ನು ಬಾಡೂಟ ಮಾಡುವುದರ ಮೂಲಕ ಬಹುಸಂಖ್ಯಾತರು

ಸಾಮೂಹಿಕವಾಗಿ ಸೇರುವುದು ಈ ಗ್ರಾಮದ ವಿಶೇಷವಾಗಿದೆ.

ಚೌಡಮ್ಮಳ ಜಾತ್ರೆಯು ಪ್ರತಿ ೭ ವರ್ಷಗಳಿಗೊಮ್ಮೆ ನಡೆಯುತ್ತದೆ. "ಚೌಡಮ್ಮಳ"ನನ್ನು ಕೆಟ್ಟ ಭಾಷೆಯಿಂದ ಬೈಯುವ ಮೂಲಕ ಊರಿನ ಪ್ರಮುಖ ಬೀದಿಗಳಲ್ಲಿ ಉತ್ಸವ ಮಾಡುವುದೇ ಈ ಜಾತ್ರೆಯ ವಿಶೇಷವಾಗಿದೆ. ಇದನ್ನು ದೇವರ ಬಯ್ಯುವ ಹಬ್ಬವೆಂದೇ ಕರೆಯಲಾಗುವುದು. ದೇವರನ್ನು ಬೈಯುತ್ತಾ, ರೇಗಿಸುತ್ತಾ, ಮೆರವಣಿಗೆ ರಂಗೇರುವುದು ಇಲ್ಲಿನ ವಿಶೇಷ.

## ದೊಡ್ಡ ಎಣ್ಣೇಗೆರೆ ಏ.ಕೆ. ಕಾಲೋನಿ

ದೊಡ್ಡಎಣ್ಣೇಗೆರೆ ಏಕೆ. ಕಾಲೋನಿಯು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೩೫ ಕಿ.ಮೀ. ದೂರದಲ್ಲಿದ್ದು, ಆದಿಕರ್ನಾಟಕ ಜನಾಂಗ ಪ್ರತ್ಯೇಕವಾಗಿ ಬಡಾವಣೆ ರಚನೆ ರೂಡಿಕೊಂಡು ವಾಸಿಸುತ್ತಿರುವುದರಿಂದಾಗಿ ಇದನ್ನು ಮಾದಿಗರಹಟ್ಟಿ ಎಂದೂ ಕರೆಯುತ್ತಾರೆ. ೪೯ ಮನೆಗಳನ್ನು ಹೊಂದಿರುವ ಇಲ್ಲಿ ೧೯೦ ಜನಸಂಖ್ಯೆಯನ್ನು ಹೊಂದಿದ್ದಾರೆ. ಇಲ್ಲಿನ ಮನೆಗಳು ಕಲ್ಲಿನ, ಹೆಂಚಿನ, ಸೀಟಿನ, ಸ್ವರೂಪದಲ್ಲಿದ್ದು, ಅವು ಸರ್ಕಾರದ ವಸತಿ ಯೋಜನೆಯಾದ ಜನತಾ, ಆಶ್ರಮ, ಅಂಬೇಡ್ಕರ್ ಯೋಜನೆಯ ಫಲಾನುಭವಿಗಳಿದ್ದಾರೆ. ಉಚಿತ ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳಿದ್ದಾರೆ. ಕುಡಿಯುವ ಗ್ರಾಮ ಪಂಚಾಯಿತಿ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸುತ್ತಿದ್ದು, ೨ ಸಿಸ್ಟನ್‌ಗಳಿವೆ. ಕೃಷಿ ಹಾಗೂ ಕೃಷಿ ಕಾರ್ಮಿಕರು ಅಧಿಕನಾಡಿದ್ದು, ರಾಗಿ, ಹೆಸರು, ಹುರುಳಿ, ಬೆಳೆಯುತ್ತಾರೆ. ತೋಟಗಾರಿಕೆ ಮನೆಯಾಗಿ ತೆಂಗು ಹಾಗೂ ಕೊಬ್ಬರಿಯನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ. ಹಸು, ಎಮ್ಮೆ, ಕುರಿ, ಸಾಕು ಪ್ರಾಣಿಗಳಾಗಿವೆ. ಎತ್ತಿನ ಗಾಡಿಯ ಬಳಕೆಯಲ್ಲಿದ್ದು, ದ್ವಿಚಕ್ರವಾಹನಗಳನ್ನು ಬಳಸುತ್ತಾರೆ. ದೊಡ್ಡಎಣ್ಣೇಗೆರೆ ಗ್ರಾಮಪಂಚಾಯಿತಿ ಒಬ್ಬರು ಸದಸ್ಯರು ಈ ಗ್ರಾಮದ ಪ್ರತಿ ನಿಧಿಯಾಗಿದ್ದಾರೆ. ಒಂದು ಅಂಗನವಾಡಿ ಕೇಂದ್ರವಿದ್ದು, ಪ್ರಾಥಮಿಕ ಶಿಕ್ಷಣ ಹಾಗೂ ಪಡಿತರ ವ್ಯವಸ್ಥೆಯನ್ನು ಮುಖ್ಯ ಗ್ರಾಮದಿಂದ ಪಡೆದುಕೊಳ್ಳುತ್ತಾರೆ. ಧಾರ್ಮಿಕವಾಗಿ ದುರ್ಗಮ್ಮ ದೇವಾಲಯವಿದ್ದು, ಚೌಡಮ್ಮನ ತಾಳಿಯಿದೆ. ಚೌಡಮ್ಮನ ಜಾತೆಯಲ್ಲಿ ಈ ಬಡಾವಣೆಯಿಂದ ಆರತಿ, ಬಾಯಿಬೀಗ, ಮಡೆ ಹೋಗುತ್ತದೆ. ಪ್ರಾಣಿ ಬಲೀನೂ ನಡೆಯುತ್ತದೆ. ರಾಗಿ ಮುದ್ದೆ ಪ್ರದಾನ ಬೋಜನವಾಗಿದ್ದು, ಅನ್ನ, ರೊಟ್ಟಿ, ಬಳಸುತ್ತಾರೆ. ಸಾಂದರ್ಭಿಕವಾಗಿ ಬಾಡೂಟ ಪಾಯಸ, ಹೋಳಿಗೆ ಬಳಸುತ್ತಾರೆ ಶಿಕ್ಷಕ ಸಾರಿಗೆ, ಹಾಗೂ ಕಂದಾಯ ಇಲಾಖೆಗೆ ಸೇರಿದ ೭ ಜನ ಸರ್ಕಾರಿ ನೌಕರರಿದ್ದಾರೆ. ಹಂದನಕೆರೆ ಜಿಲ್ಲಾ ಪಂಚಾಯಿತಿಗೆ ಸೇರಿದೆ. ಹುಳಿಯಾರು ಪಂಚನಹಳ್ಳಿ ಮಾರ್ಗವಾಗಿ ಬಸ್ ಸಂಚಾರ ರಸ್ತೆ ಮಾರ್ಗವಿದೆ. ಸಮುದಾಯದ ಸೌಲಭ್ಯಗಳಾದ ಸಂಧ್ಯಾಸುರಕ್ಷೆ, ವಿಧವಾವೇತನದ ೬ ಫಲಾನುಭವಿಗಳಿದ್ದಾರೆ. ಗೌರಿ, ದೀಪಾವಳಿ, ದಸರಾ, ಯುಗಾದಿ ಹಬ್ಬವನ್ನು ಆಚರಿಸುತ್ತಾರೆ.

## ದೊಡ್ಡ ಎಣ್ಣೇಗೆರೆ ಗೇಟ್

ತುಮಕೂರು ಜಿಲ್ಲೆ ಚಿ.ನಾ.ಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿಯಲ್ಲಿನ ದೊಡ್ಡಎಣ್ಣೇಗೆರೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಮಜುರೆ ಗ್ರಾಮ ದೊಡ್ಡೇಣ್ಣೆಗೆ ಕಂದಾಯ ಗ್ರಾಮಕ್ಕೆ ಸೇರಿದೆ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೩೨ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣವು ೫೮೦.೯೬ ಹೆಕ್ಟೇರ್ ಬಯಲು ನಾಡಾಗಿದ್ದು, ಬಿಳಿಗೋರಿಕಲ್ಲುಗಳಿಂದ ಹಾಗೂ ಕೆಂಪು ಮಿಶ್ರಿತ ಬಿಳಿ ಮಣ್ಣನ್ನು ಹೊಂದಿದೆ. ಬೆಟ್ಟ ಗುಡ್ಡ ಅರೆಕಲ್ಲುಬಂಡೆಗಳು ಇರುವುದಿಲ್ಲ. ಈ ಪರಿಸರದಲ್ಲಿ ಕಾಡು ಪ್ರಾಣಿಗಳಾದ ನರಿ, ತೋಳ, ಜಿಂಕೆ, ಮೊಲ, ಕಂಡುಬಂದರೆ, ಕಾಡು ಪಕ್ಷಿಯಾಗಿ ಗಿಳಿ, ಕೊಕ್ಕರೆ, ಕಾಗೆ, ಗಿಳಿ, ಗೀಜನ, ಕೋಳಿ ಸಾಕು ಪಕ್ಷಿಯಾಗಿದೆ.

ಕೃಷಿಗೆ ಯೋಗ್ಯವಾದ ಭೂಮಿಯಲ್ಲಿ ರೈತರು ಆಹಾರ ಹಸು, ಎಮ್ಮೆ, ಕುರಿ, ಮೇಕೆ, ಸಾಕು ಪ್ರಾಣಿಯಾಗಿವೆ. ಬೆಳೆಗಳಾಗಿ ರಾಗಿ, ಭತ್ತ, ಉಪಬೆಳೆಗಳಾಗಿ ಅವರೆ, ತೊಗರಿ, ಉದ್ದು, ಹೆಸರು ಹಾಗೂ ತೆಂಗು, ಅಡಿಕೆ, ಬಾಳೆ, ರೇಷ್ಮೆ ಬೆಳೆಗಳನ್ನು ಬೆಳೆಯುತ್ತಾರೆ. ಕೃಷಿಗೆ ಆಧುನಿಕ ಹಾಗೂ ಸಾಂಪ್ರದಾಯಿಕ ವಾಹನಗಳನ್ನು ಕೃತಕ ಹಾಗೂ ರಾಸಾಯನಿಕ ಗೊಬ್ಬರಗಳನ್ನು ಬಳಸುತ್ತಾರೆ.

ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೫೬೦– ೫೬ ಮಿ.ಮೀ. ಚಳಿ ೯–೧೧ ಡಿ.ಸೆ. ಬಿಸಿಲು, ೨೮– ೩೦ ಡಿ.ಸೆ. ಹೊಂದಿದೆ. ೫೦ ಕೊಳವೆ ಬಾವಿಗಳು ೦೧ ಕೆರೆ. ೦೬ ಕುಂಟೆಗಳು, ೦೨ ಓವರ್ ಟ್ಯಾಂಕ್‌ಗಳಿವೆ. ೦೬ ಕೈ ಪಂಪ್‌ಗಳಿವೆ.

ಲಿಂಗಾಯುತ ಸಮುದಾಯವೇ ದೊಡ್ಡ ಸಮುದಾಯದಲ್ಲಿದ್ದು, ಆದಿದ್ರಾವಿಡ, ಆದಕರ್ನಾಟಕ, ಆದಜಾಂಬವರು, ಭೋವಿ, ಕೊರಮ, ಮುಸ್ಲಿಂರು, ಕುರುಬ, ಸಮುದಾಯದ ಜನಾಂಗದವರು ವಾಸವಾಗಿದ್ದಾರೆ. ಕನ್ನಡ ಪ್ರಧಾನಭಾಷೆ ನಂತರದ

ಸ್ಥಾನದಲ್ಲಿ ತೆಲುಗು ಉರ್ದು ಭಾಷೆಗಳ ಬಳಸುತ್ತಾರೆ. ಗ್ರಾಮದಲ್ಲಿ ೧೩೦ ಮನೆಗಳಿದ್ದು, ಬಹುತೇಕ ಹೆಂಚಿನ ಮನೆಗಳೇ ಅಧಿಕವಾಗಿವೆ. ೩೦ ಕಾಂಕ್ರೀಟ್ ಮನೆಗಳಿವೆ. ಇವುಗಳಲ್ಲಿ ೧೦ ಆಶ್ರಯ ಮನೆಗಳು, ೪ ಜನತಾ ಮನೆಗಳು ೯ ಅಂಬೇಡ್ಕರ್ ವಸತಿ ನಿಲಯಗಳು ೯ ಇಂದಿರಾ ಆವಾಸ್ ಮನೆಗಳಿವೆ. ೧ ವಸತಿ ರಹಿತ ಹಾಗೂ ೨ ನಿವೇಶನ ರಹಿತ ಕುಟುಂಬಗಳಿವೆ. ಶೌಚಾಲಯ ಹೊಂದಿಲ್ಲದ ೧೧೦ ಮನೆಗಳಿವೆ.

೨೦೧೧ ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೫೨೦ ಇದರಲ್ಲಿ ಗಂಡಸರು ೨೮೦, ಹೆಂಗಸರು, ೨೦೦, ಒಟ್ಟು ಸಾಕ್ಷರತ ಪ್ರಮಾಣ ೬೬% ರಷ್ಟಿದೆ.

ಕೃಷಿಗಳು ಕೃಷಿಕೂಲಿಗಾರರು ಬಡಿಗೇರರು, ಸಾಮಿಲ್ ಕೆಲಸಗಾರರು ಬೀಡಿಕಟ್ಟುವವರು, ಆಧುನಿಕ ಉದ್ಯೋಗಗಳಲ್ಲಿ ೨ ಹಿಟ್ಟಿನ ಗಿರಣಿಗಳಿವೆ ೧೦ ಜನ ಸರ್ಕಾರಿ ನೌಕರರಿದ್ದಾರೆ. ಆಧುನಿಕ ಡೈರಿ ವ್ಯವಸ್ಥೆ ಇದೆ.

ಹಂದನಕೆರೆ ತುಮಕೂರು ಲೋಕಸಭಾಕ್ಷೇತ್ರಕ್ಕೂ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೂ, ಹಂದನಕೆರೆ ಜಿಲ್ಲಾ ಪಂಚಾಯತ್ ಹಾಗೂ ದೊಡ್ಡಣ್ಣೇಗೆರೆ ತಾಲ್ಲೂಕ್ ಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ಕ್ಷೇತ್ರಕ್ಕೂ ಸೇರಿದ ಮಜುರೆ ಗ್ರಾಮವಾಗಿದೆ. ಗ್ರಾ.ಪಂ. ಸದಸ್ಯರಾಗಲೀ, ನೌಕರರಾಗಲೀ ಇರುವುದಿಲ್ಲ. ೦೧ ಓವರ್ ಟ್ಯಾಂಕ್‌ನ ಮೂಲಕ ಕೈ ಪಂಪ್‌ಗಳ ಮೂಲಕ ನೀರು ಒದಗುಸುತ್ತಾರೆ. ವ್ಯವಸ್ಥಿತವಾದ ರಾಷ್ಟ್ರೀಯ ಹಾಗೂ ರಾಜ್ಯ ಜಿಲ್ಲಾ ಮುಖ್ಯರಸ್ತೆಯಿದ್ದು ಸರ್ಕಾರಿ ಖಾಸಗೀ ವಾಹನಗಳು ಸಂಚರಿಸುತ್ತವೆ. ಸಂಪರ್ಕಕಲ್ಪಿಸುವ ಸ್ಥಿರ ಹಾಗೂ ಸಂಚಾರಿ ದೂರವಾಣಿಗಳಿವೆ. ಆಸ್ಪತ್ರೆ ಇದೆ. ಪಶು ಶಾಲೆ ಇದೆ. ಒಂದು ಸಾಮಿಲ್ ಇದೆ. ೨೦೦೦೦ ೩೦ ಅಂಗಡಿಗಳು ೪–೬ ಹೋಟೆಲ್‌ಗಳಿವೆ. ಇಟ್ಟಿಗೆ ಕಾರ್ಖಾನೆಗಳಿವೆ.

ಹಣಕಾಸು ವ್ಯವಸ್ಥೆಯಲ್ಲಿ ಶ್ರೀಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಹಾಲು ಉತ್ಪಾದಕರ ಸಹಕಾರ ಸಂಘಗಳಿವೆ. ಚೌಡಮ್ಮ, ಕರಿಯಮ್ಮ, ಆದಿಶಕ್ತಿ, ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ ಒಂದು ಸ.ಹಿ.ಪ್ರಾ. ಶಾಲೆ ಹಾಗೂ ಒಂದು ಖಾಸಗೀ ಪ್ರೌಢಶಾಲೆಯಿದ್ದು ಶಾಲೆಗಳಲ್ಲಿ ಕ್ಷೀರಭಾಗ್ಯ ಬಿಸಿಯೂಟಯೋಜನೆ ಜಾರಿಯಲ್ಲಿವೆ. ಶೌಚಾಲಯ ಹಾಗೂ ಕುಡಿಯುವ ನೀರಿನ ಮತ್ತು ಸುವ್ಯವಸ್ಥಿತವಾದ ಆಟದ ಮೈದಾನವಿದೆ. ಗ್ರಂಥಾಲಯವಿದೆ. ಸ.ಪದವಿಪೂರ್ವಕಾಲೇಜು (ಕಲಾವಿಭಾಗ) ಸಂಧ್ಯಾಸುರಕ್ಷಾ ಯೋಜನೆ ಭಾಗ್ಯಲಕ್ಷ್ಮಿಯೋಜನೆ ವಿಕಲಚೇತನ, ವಿಧವಾ ವೇತನದ ೨೩ ಫಲಾನುಭವಿಗಳಿದ್ದಾರೆ.

ರಂಗಧಾಮಯ್ಯ ೬೮ ವರ್ಷ ಲಿಂಗಾಯಿತ ಜಾತಿಗೆ ಸೇರಿದ ವ್ಯಕ್ತಿಯು ಜನಪರ ನಾಯಕ ಹಾಗೂ ಬಿ. ಚನ್ನಬಸವಯ್ಯ ೬೭ ವರ್ಷದ ಲಿಂಗಾಯತ್ ಜಾತಿಗೆ ಸೇರಿದ ವ್ಯಕ್ತಿಯು ಲೇಖಕರಾಗಿ ಹೆಸರು ಪಡೆದುಕೊಂಡಿದ್ದಾರೆ. ಮಲ್ಲಚಾರಿ ೬೦ ವರ್ಷದ ಆಚಾರ್ಯ ಜಾತಿಗೆ ಸೇರಿದ ವ್ಯಕ್ತಿಯು ಶಿಲ್ಪ ಕೆತ್ತನೆಯಲ್ಲಿ ಹೆಸರುಗಳಿಸಿದ್ದಾರೆ. ಯುಗಾದಿ, ದಸರಾ, ಶಿವರಾತ್ರಿ, ಗೌರಿ, ಗಣೇಶನ ಹಬ್ಬವನ್ನು ಆಚರಿಸುತ್ತಾರೆ.

## ದೊಡ್ಡರಾಂಪುರ

ದೊಡ್ಡರಾಂಪುರ ಕಂದಾಯ ಗ್ರಾಮ ಇದು ತೀರ್ಥಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತದೆ. ತಾಲ್ಲೂಕು ಸ್ಥಳದಿಂದ ಪೂರ್ವ ದಿಕ್ಕಿನಲ್ಲಿ ೧೮ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೯೫೦.೩೮ ಚ.ಕಿ.ಮೀ. ವಿಸ್ತೀರ್ಣದಲ್ಲಿದೆ. ಗೊಲ್ಲರಹಟ್ಟಿ (ಯಾದವರ ಹಟ್ಟಿ) ಸೇರ್ಪಡೆಯಾಗಿದೆ. ಬಯಲುನಾಡಿಗೆ ಸೇರಿದ್ದು, ಇಲ್ಲಿ ಸಿಮೆಂಟ್‌ಕಲ್ಲು, ಕಾಡುಗಲ್ಲು, ಕಪ್ಪುಗಲ್ಲು, ಮತ್ತು ಕೆಂಪು ಮತ್ತು ಕಪ್ಪು ಮಣ್ಣು ಕಂಡುಬರುತ್ತದೆ. ರಾಮೇಶ್ವರನ ಬೆಟ್ಟ ಕಂಡುಬರುತ್ತದೆ. ದೊಡ್ಡಗುಡ್ಡ, ಚಿಕ್ಕ ಗುಡ್ಡ ಕಂಡುಬರುತ್ತದೆ. ಇಲ್ಲಿ ರಾಮೇಶ್ವರ ಕಾಡು ಇದೆ. ಬೀಟೆ, ಹೊನ್ನೆ, ಗಂಧ, ನೀಲಗಿರಿ, ಜಾಲಿಗಿಡಗಳು ಕಂಡುಬರುತ್ತವೆ. ತೀರ್ಥ ರಾಮೇಶ್ವರನ ದೇವಾಲಯ ಇರುವುದರಿಂದ ದೊಡ್ಡ ರಾಮೇನಹಳ್ಳಿ ಎಂದು ಹೆಸರು ಬಂದಿದೆ. ಈ ಭಾಗದಲ್ಲಿ ಕಾಡುಪ್ರಾಣಿಗಳಾದ ಕರಡಿ, ಹಂದಿ, ಚಿರತೆ, ಕಿರುಬ, ಜಿಂಕೆ ತೋಳ, ನರಿ ಮುಂತಾದ ಪ್ರಾಣಿಗಳು ಕಂಡುಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ, ಕಂಡು ಬರುತ್ತದೆ. ಕಾಡು ಪಕ್ಷಿಗಳಾದ ನವಿಲು, ಸಂಬಾರಕಾಗೆ, ಕಾಗೆ, ಗುಬ್ಬಚ್ಚಿ, ಇತ್ಯಾದಿ ಪಕ್ಷಿಗಳು ಕಂಡುಬರುತ್ತದೆ. ಇಲ್ಲಿಯ ಜನ ಕೋಳಿಗಳನ್ನು ಸಾಕುತ್ತಾರೆ. ಇಲ್ಲಿ ೩೭೫.೬ ಮಿ.ಮೀ. ಮಳೆ ಬಿದ್ದ ದಾಖಲೆ ಇದೆ. ೯ ಡಿ.ಸೆಂ. ಚಳಿ ಕಂಡುಬರುತ್ತದೆ. ೨೮–೩೬ ಡಿ.ಸೆಂ. ಬಿಸಿಲು ಕಂಡುಬರುತ್ತದೆ. ಇಲ್ಲಿ ರಾಮೇಶ್ವರನ ಹಳ್ಳಿ ನರಸಿಂಹಸ್ವಾಮಿ ಬೆಟ್ಟದಿಂದ ಮದನುಮಾದು ಕೆರೆಗೆ ಹರಿಯುತ್ತದೆ. ಮತ್ತು ಕಾಟಿಹಳ್ಳ ಕೊಡ್ಲಿಯಿಂದ ಮದನಮಾದು ಕೆರೆಗೆ ಹರಿಯುತ್ತದೆ. ಎಲ್.ಎಸ್.ಕ್ಯೂ. ಟ್ರಂಚ್ ಎರಡು ಕೆರೆ ಕಂಡುಬರುತ್ತವೆ.

ದೊಡ್ಡ ಸಮುದಾಯದವರಾಗಿ ಒಕ್ಕಲಿಗರು ನಾಯಕರು, ಆದಿಕರ್ನಾಟಕ ಭಜಂತ್ರಿ, ಲಿಂಗಾಯತರು,

ತಿಗಳರು ಮಡಿವಾಳರು ಸಣ್ಣ ಸಮುದಾಯದವರಾಗಿದ್ದಾರೆ. ಇವರು ಕನ್ನಡ ಭಾಷೆ ಹಾಗೂ ಕೆಲವರು ತೆಲುಗು ಭಾಷೆಯನ್ನು ಮಾತನಾಡುತ್ತಾರೆ. ೨೯೬ ಮನೆಗಳಿದ್ದು ಅವುಗಳನ್ನು ಕಲ್ಲು ಹಾಗೂ ಮಣ್ಣು ಹಾಕಿ ಕಟ್ಟಲಾಗಿದೆ.

ಮೇಲ್ಛಾವಣಿಗೆ ಕುಂಬಾರ ಕಪ್ಪು ಹೆಂಚು ಹಾಗೂ ಮಂಗಳೂರು ಕೆಂಪು ಹೆಂಚನ್ನು ಹೊದಿಸಿದ್ದಾರೆ. ೬ ಕಾಂಕ್ರೀಟ್ ಮನೆಗಳು, ಗುಡಿಸಲುಗಳು, ೯೦ ಕಲ್ಲಿನ ಮನೆ ಹಾಗೂ ಮಣ್ಣಿನ ಮನೆ ಕಂಡು ಬರುತ್ತವೆ. ೨೨೦ ಮನೆ ಹೊಂದಿದ್ದು ೯೧೪ ಜನಸಂಖ್ಯೆಯನ್ನು ಹೊಂದಿದೆ. ಜನತಾ, ಆಶ್ರಯ ಇಂದಿರಾ, ಆವಾಸ್ ಯೋಜನೆಯ ೯೮ ಫಲಾನುಭವಿಗಳಿದ್ದಾರೆ.

ಈ ಗ್ರಾಮದ ಜನರ ಬಹುಮುಖ್ಯ ಆಹಾರ ರಾಗಿ ಮುದ್ದೆ, ಅನ್ನ ಇಲ್ಲಿನ ಜನರ ಅಮುಖ್ಯ ಆಹಾರಗಳೆಂದರೆ ಉಪ್ಪಿಟ್ಟು, ಚಿತ್ರಾನ್ನ, ದೋಸೆ, ಇಡ್ಲಿ ಇತ್ಯಾದಿ ಇವರ ವಿಶೇಷ ಆಹಾರ, ಒಬ್ಬಟ್ಟು ಪಾಯಸ ಕೆಲವರ ವಿಶೇಷ ಆಹಾರ ಮಾಂಸ ಆಹಾರವಾಗಿರುತ್ತದೆ. ಈ ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳ ಜೊತೆ ಆಧುನಿಕ ಬೈಸಿಕಲ್, ಬೈಕ್, ಟ್ರಾಕ್ಟರ್ ಟೆಂಪೊ, ಆಟೋಗಳು ಇವೆ.

ಬಹುತೇಕ ಜನರು ಕೃಷಿಕರಾಗಿದ್ದು ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ರಾಗಿಯೇ ಆಹಾರ ಬೆಳೆಯೂ ಆಗಿದೆ. ಉಪಬೆಳೆಗಳಾದ ಹೆಸರು, ಹುರುಳಿ, ಜೋಳ ಅವರೆ ಅಲಸಂಡೆ, ತೊಗರಿ, ಉದ್ದು, ತರಣಿ, ಹುಚ್ಚೆಳ್ಳು ಇತ್ಯಾದಿ ಬೆಳೆಯುತ್ತಾರೆ. ತೆಂಗು, ಅಡಿಕೆ, ಮಾವು, ಬಾಳೆ ಇಲ್ಲಿನ ವ್ಯಾಪಾರಿ ಸರಕಾಗಿದೆ. ಈ ಗ್ರಾಮದಲ್ಲಿ ಆಧುನಿಕ ಡೈರಿಗಳು ಕಂಡುಬರುತ್ತವೆ. ನಂದಿನಿ, ಆರೋಗ್ಯ ಇಲ್ಲಿಯ ಜನರು ಮಿಶ್ರತಳಿ ಅಥವಾ ತಳಿಗಳಾದ ರೆಡ್ ಆ್ಯರನ್, ಜೆರ್ಸಿ, ಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಅವುಗಳಿಂದ ಹಾಲು ಕರೆದು ಡೈರಿಗೆ ಹಾಕುತ್ತಾರೆ.

ಒಟ್ಟು ೪ ಜನ ಸರ್ಕಾರಿ ನೌಕರರಿದ್ದಾರೆ. ಮಿಲಿಟರಿ, ಪೋಲಿಸ್, ಶಿಕ್ಷರೂ ಕೂಡ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಕೆಲವರು ಬೆಂಗಳೂರಿನ ಐಟಿಬಿಟಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿದಾರೆ. ಕಂದಿಕೆರೆ ಹೋಬಳಿ, ಚಿ.ನಾ.ಹಳ್ಳಿ ವಿಧಾನಸಭಾಕ್ಷೇತ್ರಕ್ಕೆ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ, ತೀರ್ಥಪುರ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕ್ಷೇತ್ರಕ್ಕೂ ಸೇರುತ್ತದೆ. ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರುತ್ತದೆ. ಇಲ್ಲಿ ಗ್ರಾಮಪಂಚಾಯ್ತಿ ಸದಸ್ಯರ ಸಂಖ್ಯೆ ೩ ಹಾಗೂ ನೌಕರರ ಸಂಖ್ಯೆ ೩ ಇಲ್ಲಿ ತಹಶೀಲ್ದಾರ್‌ರ ಕಛೇರಿ ಚಿ.ನಾ.ಹಳ್ಳಿಯಲ್ಲಿದೆ. ಪೋಲಿಸ್ ಠಾಣೆಯೂ ಚಿ.ನಾ.ಹಳ್ಳಿಯಲ್ಲಿದೆ. ಅಂಚೆಯು ತೀರ್ಥಪುರ ಗ್ರಾಮಪಂಚಾಯ್ತಿಯಾಗಿದೆ. ಜನರು ಸಂಚಾರಿ ದೂರವಾಣಿ ಬಳಸುತ್ತಾರೆ. ಈ ಗ್ರಾಮದ ನ್ಯಾಯಾಂಗ ವ್ಯವಸ್ಥೆ ಬಾರ್ ಅಸೋಸಿಯೇಷನ್ ಚಿ.ನಾ.ಹಳ್ಳಿಯಲ್ಲಿದೆ.

ಕಾಟಲಿಂಗೇಶ್ವರ ಲಕ್ಷ್ಮೀ ಸ್ತ್ರೀಶಕ್ತಿ ಸಂಘಗಳಿವೆ. ಶೇ. ೮೨% ರಷ್ಟು ಜನ ಸಾಕ್ಷರರಾಗಿದ್ದಾರೆ. ಇಲ್ಲಿ ಒಂದು ಅಂಗನವಾಡಿ ಕೇಂದ್ರ ಹಾಗೂ ಸರ್ಕಾರಿ ಪ್ರಾಥಮಿಕ ಪಾಠಶಾಲೆ ಹಾಗೂ ಶ್ರೀ ಮಾರಮ್ಮದೇವಿ ಗ್ರಾಮಾಂತರ ಪ್ರೌಢಶಾಲೆ ದೊಡ್ಡರಾಂಪುರ ಎಂಬುದು ಇದೆ.

ವೃದ್ಧಾಪ್ಯ ವೇತನ, ವಿಕಲಚೇತನ ವೇತನ ವಿಧವಾವೇತನ ಇತ್ಯಾದಿ ಸಮುದಾಯ ಸೌಲಭ್ಯಗಳನ್ನು ಪಡೆಯುವ ೧೯ ಫಲಾನುಭವಿಗಳು ಇದ್ದಾರೆ. ಇಲ್ಲಿ ಚಿಲ್ಲರೆ ಅಂಗಡಿ ಕಂಡುಬರುತ್ತದೆ. ಈ ಆತ್ಮಬಲಿದಾನದ ಕಲ್ಲು, ಶಾಸನ ಕಲ್ಲು ಇದೆ. ವಜ್ರದಿಂದ ದೊಡ್ಡ ರಾಂಪುರಕ್ಕೆ ಬರುವ ಮಾರ್ಗದಲ್ಲಿ ರಸ್ತೆ ಪಕ್ಕದಲ್ಲೇ ಕಂಡು ಬರುತ್ತದೆ. ಶಿಲಾ ಶಾಸನ ವಜ್ರದಲ್ಲಿ ಕಂಡುಬರುತ್ತದೆ. ಕೋಟೆ ಹಿಂದೆ ಇತ್ತು ಈಗ ಸಲ್ಲಿಸಿದೆ. ವಜ್ರದಲ್ಲಿ ಕೋಟೆಗೋಡೆ ಇದೆ. ಕರುಗಲ್ಲು ವಾರಬಾಗಿಲಿನಲ್ಲಿ ಇದೆ.

ಮಾರಮ್ಮ, ಆಂಜನೇಯ, ಎಂಬ ದೇವಸ್ಥಾನಗಳಿವೆ. ಈ ಗ್ರಾಮದಲ್ಲಿ ವಿಶೇಷ ರಾಂಪುರದ ಅಮ್ಮನ ಜಾತ್ರೆ ನಡೆಯುತ್ತದೆ. ರಾಂಪುರದಮ್ಮನ ಜಾತ್ರೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಪ್ರಸಿದ್ಧ ಜಾತ್ರೆಯಾಗಿದ್ದು, ಬಾರಿ ಜನ ಸೇರುತ್ತಾರೆ. ಆರತಿ, ಬಾನ, ಬ್ಯಾಟೆ ಹರಕೆ, ಸಂಪ್ರದಾಯವಿಡಿ ಗುಬ್ಬಿ, ಚಿಕ್ಕನಾಯಕನಹಳ್ಳಿ ಸಿರಾ ತಾಲ್ಲೂಕಿನ ಹಲವು ಹಳ್ಳಿಗಳಲ್ಲಿ ಈ ಜಾತ್ರೆಯ ಹೆಸರಿನಲ್ಲಿ ರಾಂಪುರದಮ್ಮನಿಗೆ ಆರತಿ ಮಾಡುವುದು ವಿಶೇಷವಾಗಿದೆ.

ಜಾತ್ರೆ ಅಕ್ಟೋಬರ್ ತಿಂಗಳಿನಲ್ಲಿ ಗೌರಿ ಹಬ್ಬ ಆದ ೨೦ ದಿವಸಕ್ಕೆ ನಡೆಸುತ್ತಾರೆ. ಮುಂಚೆ ಕೋಣ ಬಲಿ ನೀಡಲಾಗುತ್ತಿತ್ತು ಈಗ ಇಲ್ಲ ಸರ್ಕಾರ ನಿಷೇದಿಸಿದಿಂದ ಈಗ ಬಲಿ ಇಲ್ಲ. ಕುರಿ, ಮೇಕೆ ಇತ್ಯಾದಿಗಳನ್ನು ಅವರವರ ಜಮೀನಿನಲ್ಲಿ ದೇವರ ಹೆಸರಿನಲ್ಲಿ ಬಲಿನೀಡುತ್ತಾರೆ. ಸೋಬಾನೆ ಜಯಮ್ಮ, ಕಾಟಮ್ಮ, ಕವಿರಮ್ಮ ಎಂಬ ೭೦ ವರ್ಷದವರು ಸೋಬಾನೆ ಪದ ಹೇಳುತ್ತಾರೆ. ಯುಗಾದಿ, ದೀಪಾವಳಿ ಮಹಾನವಮಿ ಹಬ್ಬಗಳನ್ನು ಆಚರಿಸುತ್ತಾರೆ.

## ದೊಡ್ಡರಾಂಪುರ ಗೊಲ್ಲರಹಟ್ಟಿ

ರಾಂಪುರ ಗೊಲ್ಲರ ಹಟ್ಟಿ ಎಂದೇ ಕರೆಯಲ್ಪಡುವ ಈ ಗ್ರಾಮಕಾಡುಗೊಲ್ಲರ ಒಂದು

ಬುಡಕಟ್ಟು ಗ್ರಾಮ ಇದು ದೊಡ್ಡ ರಾಂಪುರ ಕಂದಾಯ ಗ್ರಾಮದ ಮಜರೆ ಗ್ರಾಮವಾಗಿದ್ದು, ದೊಡ್ಡ ರಾಂಪುರಕ್ಕೆ ಹೊಂದಿಕೊಂಡಿದೆ. ತೀರ್ಥಪುರಕ್ಕೆ ಎರಡು ಕಿ.ಮೀ. ದೂರದಲ್ಲಿದ್ದು, ತೀರ್ಥಪುರದ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ಕಾಡುಗೊಲ್ಲ ಜನಾಂಗಕ್ಕೆ ಸೇರಿದೆ. ಹೆಂಚಿನ, ಸೀಟಿನ, ಮಾಳಿಗೆ ಸ್ವರೂಪದ ಒಟ್ಟು ೧೮೦ ಮನೆಗಳಿವೆ. ೭೦೫ ಜನಸಂಖ್ಯೆ ಹೊಂದಿದೆ. ಇಲ್ಲಿನ ಮನೆಗಳು ಸರ್ಕಾರದ ವಸತಿ ಯೋಜನೆಯಾದ ಜನತಾ, ಆಶ್ರಯ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳಿದ್ದು, ಶೌಚಾಲಯ ಮುಕ್ತವಾಗಿದ್ದು, ಬಯಲು ಶೌಚಾಲಯ ಬಳಸುತ್ತಾರೆ. ಕುಡಿಯಲು ತೀರ್ಥಪುರ ಗ್ರಾಮ ಪಂಚಾಯಿತಿ ಮೂಲಕ ಕಿರು ನೀರು ಸರಬರಾಜು ಯೋಜನೆಯಲ್ಲಿ ನೀರು ಪೂರೈಸಲಾಗುತ್ತಿದೆ. ೨ ಕೊಳವೆ ಬಾವಿಗಳಿದ್ದು, ೨ ಸಿಸ್ಟನ್‌ಗಳಿವೆ. ಈ ಗ್ರಾಮದಿಂದ ಗ್ರಾಮ ಪಂಚಾಯಿತಿ ಒಬ್ಬರು ಸದಸ್ಯರಿದ್ದಾರೆ. ವ್ಯವಸಾಯ ಹಾಗೂ ಹೈನುಗಾರಿಕೆ ಮುಖ್ಯ ಕಸುಬಾಗಿದೆ. ಕುರಿ ಪೋಷಣೆ, ಹುಲ್ಲು ನೀರಿಗೆ ವಲಸೆ ಹೋಗುವುದು. ಈ ಗ್ರಾಮದ ವಿಶೇಷವಾಗಿದೆ. ಆಡಳಿತಾತ್ಮಕವಾಗಿ ಕಂದಿಕೆರೆ ಜಿಲ್ಲಾ ಪಂಚಾಯಿತಿ ತೀರ್ಥಪುರ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಕ್ಷೇತ್ರಕ್ಕೆ ಸೇರಿದೆ. ಶಿಕ್ಷಣ ಪೋಲಿಸ್, ಮಿಲಿಟರಿ ಇಲಾಖೆಗೆ ಸೇರಿದೆ ೬ ಜನ ಸರ್ಕಾರಿ ನೌಕರರು ಇದ್ದಾರೆ. ಮುಖ್ಯ ಬೆಳೆ ರಾಗಿ, ಶೇಂಗಾ ಹೆಸರು, ಹುರುಳಿ, ತೋಟಗಾರಿಕೆಗಾಗಿ ತೆಂಗು, ಅಡಿಕೆ ಬೆಳೆಯಿದೆ. ರಾಗಿ ಮುದ್ದೆ ಅನ್ನ ಮುಖ್ಯ ಆಹಾರ ರೊಟ್ಟಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ತೀರ್ಥಪುರದಿಂದ ಅಂಚೆ ಸೌಕರ್ಯವಿದೆ. ರಾಂಪುದಮ್ಮನ ಜಾತ್ರೆಯಲ್ಲಿನ ದೊಡ್ಡ ಮಾರಿ ಜಾತ್ರೆಯಲ್ಲಿ ಈ ಗ್ರಾಮದೇವರ ಪಾತ್ರ ವಿಶೇಷವಾಗಿರುತ್ತದೆ. ಗ್ರಾಮದಲ್ಲಿ ಕಾಳಂಲಿಂಗೇಶ್ವರ ದೇವಾಲಯವಿದ್ದು, ದೀಪಾವಳಿಯ ಏಳು ದಿನಗಳ ದೀಪ ಏರಿಸುವ ದೀಪ ಇಳಿಸುವ ಹಂತದ ವಿವಿಧ ಆಚರಣೆಗಳನ್ನು ಮಾಡುತ್ತಾರೆ. ದೇವರು ಮದಿಮಡುಹಳ್ಳಕ್ಕೆ ಗಂಗಾ ಸ್ನಾನಕ್ಕೆ ಹೋಗುತ್ತದೆ. ಅದನ್ನು ದೇವರು ಹೊಳೆ ತೆಗೆಯುವುದು ಎಂದು ಕರೆಯುತ್ತಾರೆ. ರಾಮಪುರದಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಯಿಂದ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಗ್ರಾಮದ ಸಾಕ್ಷರತೆ ೬೩.೪% ರಷ್ಟಿದೆ. ಕೆಂಪಯ್ಯ ಎಂಬ ೬೭ ವರ್ಷದ ವ್ಯಕ್ತಿ ಕುರಿ, ಮೇಕೆ, ದನಗಳಿಗೆ ಸಂಬಂಧಿಸಿದ ಚಿಕಿತ್ಸೆ ನೀಡುವಲ್ಲಿ ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ. ಗ್ರಾಮದಲ್ಲಿ ಇಂದಿಗೂ ಕಟ್ಟೆ ನವೀಕರಣ ವ್ಯವಸ್ಥೆ ಇದೆ. ೨ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳಿದ್ದು, ಮಹಿಳೆಯರ ಆರ್ಥಿಕ ಸ್ವಾವಲಂಭನೆಗೆ ಪ್ರೇರಕವಾಗಿದೆ. ಮುತ್ತುಗದೆಲೆ, ಅಂಚಿ ಕಡ್ಡಿ ಸಂಗ್ರಹದಂತಹ ಕೆಲಸಗಳಲ್ಲಿ ಹೆಂಗಸರು ತೊಡಗಿಸಿಕೊಂಡಿದ್ದಾರೆ.

ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ, ಹಬ್ಬಗಳನ್ನು ಆಚರಿಸುತ್ತಾರೆ. ಪ್ರೊ॥ ಶಂಕರ ನಾರಾಯಣ ಅವರು ತಮ್ಮ ಕಾಡುಗೊಲ್ಲರ ಸಂಪ್ರದಾಯ, ನಂಬಿಕೆ, ಆಚರಣೆ ಸಂಶೋಧನೆಯಲ್ಲಿ ಈ ಗ್ರಾಮದ ಹಲವು ಹಿರಿಯರಿಂದ ಮಾಹಿತಿ ಸಂಗ್ರಹಿಸಿದ್ದಾರೆ. ತೀರ್ಥಪುರ ಚಿಕ್ಕನಾಯಕನಹಳ್ಳಿ ಹಾಗಲವಾಡಿ ರಸ್ತೆ ಬಸ್ ಸಂಚಾರವಿದೆ. ಒಂದು ಬಯಲು ರಂಗಮಂದಿರವಿದ್ದು, ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತವೆ.

## ದಿಬ್ಬದಹಳ್ಳಿ

ದಿಬ್ಬದಹಳ್ಳಿಯು ಹೊನ್ನೆಬಾಗಿ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಮಜರೆ ಗ್ರಾಮ. ತಾಲ್ಲೂಕು ಸ್ಥಳದಿಂದ ಪೂರ್ವಕ್ಕೆ ಎರಡು ಕಿ.ಮೀ. ದೂರದಲ್ಲಿ ಇದೆ. ಇತರೆ ಊರುಗಳಿಗೆ (ಪಕ್ಕದ) ಹೋಲಿಸಿದಾಗ ಸ್ವಲ್ಪ ಎತ್ತರದ ಜಾಗದಲ್ಲಿ ಇರುವ 'ದಿಬ್ಬದಹಳ್ಳಿ' ಎಂಬ ಹೆಸರೂ ಭಾವನಹಳ್ಳಿ ಭೌಗೋಳಿಕ ವಿಸ್ತೀರ್ಣವಾದ ೩೭೪.೧೭ ಹೆಕ್ಟೇರ್‌ನಲ್ಲಿ ದಿಬ್ಬದಹಳ್ಳಿಯೂ ಭೌಗೋಳಿಕ ವಿಸ್ತೀರ್ಣ ಸೇರ್ಪಡೆ ಆಗಿದೆ.

ಬಯಲು ನಾಡಿಗೆ ಸೇರುವ ಬಿಳಿಕಲ್ಲು, ಬಿಳಿ ಮಣ್ಣುವಿನಿಂದ ಕೂಡಿದೆ. ಇಲ್ಲಿ ನರಿ, ಜಿಂಕೆ, ಮೊಲ ಇತ್ಯಾದಿ ಸಾಮಾನ್ಯ ಕಾಡುಪ್ರಾಣಿಗಳು ಕಂಡುಬರುತ್ತವೆ. ಗಿಳಿ, ಕಾಗೆ, ನವಿಲು, ಮುಂತಾದ ಪಕ್ಷಿಗಳು ಕಾಣಸಿಗುತ್ತವೆ. ಹಸು, ಎತ್ತುಗಳು, ಎಮ್ಮೆ, ಕುರಿ, ಮೇಕೆ, ನಾಯಿ, ಕೋಳಿಗಳನ್ನು ಊರಿನ ಜನ ಸಾಕುತ್ತಾರೆ. ಇಲ್ಲಿ ೫೫೮.೩ ಮಿ.ಮೀ. ನ ಆಸುಪಾಸು ಮಳೆ ಬಿದ್ದ ದಾಖಲೆ ಇದೆ. ೧೯.೨೦ ಚಳಿಯೂ, ೩೬ ಬಿಸಿಲೂ ಇರುತ್ತದೆ. ಚಿಕ್ಕನಾಯಕನಹಳ್ಳಿ ಕೆರೆಯೂ ಪೂರ್ವಭಾಗ ಈ ಗ್ರಾಮಕ್ಕೆ ಸೇರುತ್ತದೆ. ಪ್ರತ್ಯೇಕ ಕೆರೆ ಇರುವುದಿಲ್ಲ.

ಪೂರ್ಣ ಪ್ರಮಾಣದಲ್ಲಿ ಬಲಜಿಗ ಜನಾಂಗವೇ ವಾಸವಿದ್ದು ಒಟ್ಟು ೧೦೩ ಜನಸಂಖ್ಯೆಯನ್ನು ಈ ಗ್ರಾಮ ಹೊಂದಿದೆ. ಈ ಜನರು ಕನ್ನಡ ಮಾತನಾಡುತ್ತಾರೆ. ೨೬ ಮನೆಗಳಿರುವ ಒಂದು ಕಾಂಕ್ರೀಟ್ ಮನೆ ಇದ್ದು, ಉಳಿದವುಗಳು ಮಣ್ಣು ಹಾಗೂ ಕಲ್ಲನ್ನು ಬಳಸಿ ಕಟ್ಟಲ್ಪಟ್ಟವುಗಳಾಗಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಹಾಗೂ ಕೆಲವರು ಮಂಗಳೂರಿನ ಕೆಂಪು ಹೆಂಚನ್ನು ಬಳಸುತ್ತಾರೆ.

ಇಲ್ಲಿಯ ಜನರ ಮುಖ್ಯ ಆಹಾರ ರಾಗಿಮುದ್ದೆ, ಇಡ್ಲಿ, ದೋಸೆ, ಉಪ್ಪಿಟ್ಟು, ಚಿತ್ರಾನ್ನ ಇತ್ಯಾದಿಗಳನ್ನು ಅಮುಖ್ಯ ಆಹಾರವಾಗಿ ಬಳಸುತ್ತಾರೆ. ಪಾಯಸ, ಒಬ್ಬಟ್ಟು, ಮಾಂಸದೂಟಗಳನ್ನು ವಿಶೇಷ ಆಹಾರವಾಗಿ ಬಳಸುತ್ತಾರೆ. ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನಗಾಡಿಗಳ ಜೊತೆಗೆ ಟ್ರಾಕ್ಟರ್, ಬೈಕ್‌ಗಳೂ ಇವೆ. ಇಲ್ಲಿಯ ಜನ ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಆಹಾರ ಬೆಳೆಯೂ ಇದೆ ಆಗಿದೆ.

ಉಪಬೆಳೆಯಾಗಿ ಹುರಳಿ, ಹೆಸರುಕಾಳು, ಉದ್ದು, ಅಲಸಂಡೆ ಇತ್ಯಾದಿಗಳನ್ನು ಬೆಳೆಯುತ್ತಾರೆ. ತೆಂಗು ಹಾಗೂ ಅಡಿಕೆ ಇಲ್ಲಿನ ವಾಣಿಜ್ಯ ಬೆಳೆ ಕೊಬ್ಬರಿ ಹಾಗೂ ಅಡಿಕೆಯನ್ನು ಮಾರುತ್ತಾರೆ.

ಕಸಬಾಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೂ, ಶೆಟ್ಟಿಕೆರೆ ಜಿಲ್ಲಾಪಂಚಾಯ್ತಿ ಕ್ಷೇತ್ರಕ್ಕೆ, ಮಾಳಿಗೆಹಳ್ಳಿ, ತಾಲೂಕ್ಕು ಪಂಚಾಯ್ತಿ ಕ್ಷೇತ್ರಕ್ಕೆ ಹೊನ್ನೆಬಾಗಿ ಗ್ರಾ.ಪಂ ಕ್ಷೇತ್ರಕ್ಕೂ ಸೇರುತ್ತದೆ. ತುಮಕೂರು ಲೋಕಸಭಾ ವ್ಯಾಪ್ತಿಯಲ್ಲಿ ಇದು ಬರುತ್ತದೆ. ಗ್ರಾಮದ ಜನ ಸಂಚಾರಿ ದೂರವಾಣಿಗಳನ್ನುಕ ಬಳಸುತ್ತಾರೆ. ಧನಲಕ್ಷ್ಮೀ ಸ್ತ್ರೀಶಕ್ತಿ ಸಂಘವಿದೆ. ಇಲ್ಲಿ ವೃದ್ಧಾಪ್ಯ ಹಾಗೂ ವಿಧವಾವೇತನ ೧೨ ಫಲಾನುಭವಿಗಳಿದ್ದಾರೆ.

ಶ್ರೀರಾಮಮಂದಿರ ದೇವಸ್ಥಾನವಿದೆ. ಭಾವನಹಳ್ಳಿ, ದಿಬ್ಬದಹಳ್ಳಿ, ಕೋಡಿಹಳ್ಳಿ, ಈ ಮಾರು ಗ್ರಾಮಸ್ಥರು ಸೇರಿ ನಿರ್ವಾಣೇಶ್ವರ ಸ್ವಾಮಿ ಜಾತ್ರೆ ಮಾಡುತ್ತಾರೆ. ಕೊಂಡ ಆರತಿಭಾನ, ವಿಶೇಷ ಜಾತ್ರೆಯೂ ವಿಶೇಷವಾಗಿರುತ್ತದೆ.

## ದಿಬ್ಬದಹಳ್ಳಿ ಏ.ಕೆ. ಕಾಲೋನಿ

ದಿಬ್ಬದಹಳ್ಳಿ ಏ.ಕೆ. ಕಾಲೋನಿ ಚಿಕ್ಕನಾಯಕನಹಳ್ಳಿ ತಾ. ಕೇಂದ್ರದಿಂದ ೩ಕಿ.ಮೀ. ದೂರದಲ್ಲಿದೆ. ಇದು ದಿಬ್ಬದಹಳ್ಳಿಗೆ ಹೊಂದಿಕೊಂಡ ಆದಿಕರ್ನಾಟಕ ಜನಾಂಗದವರ ಪ್ರತ್ಯೇಕ ವಾಸಸ್ಥಳವಾಗಿದ್ದು, ಮಾದಿಗರ ಹಟ್ಟಿ ಎಂದು ಕರೆಯುತ್ತಾರೆ. ಇಲ್ಲಿ ೨೩ ಆದಿಕರ್ನಾಟಕ ಜನಾಂಗದ ಮನೆ ಇದ್ದು, ೯೭ ಜನಸಂಖ್ಯೆ ಹೊಂದಿದೆ. ಈ ಮನೆಗಳು ಹೆಂಚಿನ, ಸೀಟಿನ, ತಗಡಿನ ಸ್ವರೂಪದ ಮನೆಗಳಿದ್ದು, ಇವು ಸರ್ಕಾರದ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ನೀರನ್ನು ಪೂರೈಸಲಾಗುತ್ತಿದ್ದು, ಒಂದು ಸಿಷ್ಟರ್ನ್‌ಗಳಿವೆ. ವ್ಯವಸಾಯ ಮುಖ್ಯ ಕಸುಬಾಗಿದ್ದು, ಹೆಸರು, ರಾಗಿ, ಹುರುಳಿ, ಬೆಳೆಯುತ್ತಾರೆ. ಹಸು, ಎಮ್ಮೆ, ಕುರಿ, ಮೇಕೆ, ಸಾಕು ಪ್ರಾಣಿಗಳಾಗಿವೆ. ಹೊನ್ನೇಬಾಗಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ಪ್ರಾಥಮಿಕ ಶಿಕ್ಷಣಕ್ಕೆ ದಿಬ್ಬದಹಳ್ಳಿಗೆ ಹೋಗಬೇಕಾಗಿದೆ. ಪಡಿತರ ಬಾವನಹಳ್ಳಿ ಗ್ರಾಮಕ್ಕೆ ಹೋಗಬೇಕಿದೆ. ಸಮುದಾಯ ಸೌಲಭ್ಯಗಳಾದ, ವೃದ್ಧಾಪ್ಯ ವಿಧವಾ ವೇತನದ ೧೩ ಫಲಾನುಭವಿಗಳಿದ್ದಾರೆ. ಶೆಟ್ಟಿಕೆರೆಯಿಂದ ಅಂಚೆ ಸೌಲಭ್ಯವಿದೆ. ಎತ್ತಿನ ಗಾಡಿಗಳ ಜೊತೆಗೆ ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ. ಬಾವನಹಳ್ಳೀ ದಿಬ್ಬದಹಳ್ಳಿ ಕೋಡಿಹಳ್ಳಿ ಈ ಮೂರು ಗ್ರಾಮಗಳ ಜೊತೆಗೆ ನಿರ್ವಾಣೇಶ್ವರಸ್ವಾಮಿ ಜಾತ್ರೆಯನ್ನು ಎರಡುದಿನಗಳ ಕಾಲ ವಿಜೃಂಭಣೆಯಿಂದ ಮಾಡುತ್ತಾರೆ. ಲಿಂಗದ ಬೀರರ ಕುಣಿತ, ನಂದಿಕೋಲು ಕುಣಿತ ಪ್ರದರ್ಶನ ಇರುತ್ತದೆ. ಸಾಮೂಹಿಕ ದಾಸೋಹದಲ್ಲೂ ಈ ಗ್ರಾಮದರರ ಪಾತ್ರವಿರುತ್ತದೆ. ಉಳಿದಂತೆ ಕರಿಯಮ್ಮ ದೇವಿಯ ಹೆಸರಿನಲ್ಲಿ ಊರಹಬ್ಬ ಆಚರಿಸುತ್ತಾರೆ. ಬಲಿ, ಹರಟೆ, ಬಾನದ ವಿಶೇಷ ಆಚರಣೆಗಳಿರುತ್ತವೆ. ಎರಡು ಸ್ತ್ರೀಶಕ್ತಿ ಸ್ವಸಹಾಯಕ ಸಂಘಗಳಿವೆ. ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ಬೋರ್‌ವೆಲ್ ಕೊರೆಸಿ ವ್ಯವಸಾಯ ಮಾಡುತ್ತಿದ್ದಾರೆ. ಸಾಕ್ಷರತೆ ೫೯% ರಷ್ಟಿದೆ. ಶೆಟ್ಟಿಕೆರೆ ತಿಪಟೂರು ಮುಖ್ಯ ರಸ್ತೆ ಇದ್ದು ಬಸ್ ಸಂಚಾರ ವ್ಯವಸ್ಥೆ ಇದೆ.

## ದಾಸೇಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿಯ ಮತ್ತಿಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಕಂದಾಯ ಗ್ರಾಮ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೮ ಕಿ.ಮೀ. ಅಂತರದಲ್ಲಿದೆ.

ತಿರುಪತಿ ಒಕ್ಕಲಾದ ದಾಸಕುಲದ ದಾಸಯ್ಯ ಎಂಬ ವ್ಯಕ್ತಿ ಈ ಗ್ರಾಮದ ಮೂಲ ಪುರುಷನಾಗಿದ್ದು ಆತನ ಹೆಸರಿನಲ್ಲೂ ದಾಸೇಹಳ್ಳಿ ಗ್ರಾಮದ ಭೌಗೋಳಿಕ ವಿಸ್ತೀರ್ಣವು ೪೦೮.೮೬ ಹೆಕ್ಟೇರ್ ಇದ್ದು, ೩೮೨ ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ. ಕೆಂಪು ಮಿಶ್ರಿತ ಕಪ್ಪು ಮಣ್ಣನ್ನು ಹೊಂದಿ. ಕೃಷಿಗೆ ಯೋಗ್ಯವಾಗಿದ್ದು, ಇಲ್ಲಿನ ರೈತರು ರಾಗಿ, ಭತ್ತ, ಅವರೆ, ಹೆಸರು, ಅಲಸಂಧಿ, ಉಪಬೆಳೆಗಳಾಗಿ ತೆಂಗು, ಅಡಿಕೆ, ತೋಟಗಾರಿಕೆಯಲ್ಲಿ ತರಕಾರಿಗಳು, ದಾಳಿಂಬೆ ರೇಷ್ಮೆಯಂತಹ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ಕೃಷಿಗೆ ಸಾಂಪ್ರದಾಯಿಕ ವಾಹನಗಳ ಹಾಗೂ ಆಧುನಿಕ ವಾನಹಗಳು, ಉಪಕರಣಗಳನ್ನು ಹಸು, ಎಮ್ಮೆ, ಎತ್ತು, ಆಡು, ಕುರಿಯಂತಹ ಸಾಕು ಪ್ರಾಣಿಗಳನ್ನು ಬಳಸಿಕೊಂಡಿದ್ದಾರೆ. ಸಾಕ್ಷಿ ಪಕ್ಷಿಯಾದ ಕೋಳಿಯನ್ನು ಸರ್ವೇಸಾಮಾನ್ಯವಾಗಿ ಸಾಕುತ್ತಾರೆ. ಈ ಗ್ರಾಮದ ಪಕ್ಕದಲ್ಲಿ ೧ ಬೆಟ್ಟ, ೧ ಗುಡ್ಡ, ಇರುವುದರಿಂದ ಆಗಾಗ ಕರಡಿ, ತೋಳ, ಕಾಡು ಹಂದಿ, ಚಿರತೆಯ ಕಾಟ

ತಪ್ಪಿದ್ದಲ್ಲ ಪ್ರಧಾನ ಆಹಾರವಾಗಿ ರಾಗಿಮುದ್ದೆ ಅನ್ನ, ರೊಟ್ಟಿಯನ್ನು ಹಾಗೂ ವಿಶೇಷ ಸಂದರ್ಭದಲ್ಲಿ ಬಾಡೂಟ, ಪಾಯಸ, ಹೋಳಿಗೆ, ಲಾಡು ಇತ್ಯಾದಿಗಳನ್ನು ಮಾಡುತ್ತಾರೆ. ಕುರಿಗಾರಿಕೆಯೂ ಉಪಕಸುಬಾಗಿದೆ.

ವಾರ್ಷಿಕ ಮಳೆ-೫೬೩-೫೬೬ ಮಿ.ಮೀ. ಚಳಿ ೦೮-೧೨ ಡಿ.ಸೆಂ. ಬಿಸಿಲು ೨೬-೩೧ ಡಿ.ಸೆಂ. ಇದ್ದು, ಅಭಯಾರಣ್ಯ, ತೋಪುಗಳು, ಸಾಮಾಜಿಕ ಅರಣ್ಯಗಳಿರುವುದಿಲ್ಲ. ಒಂದು ಕೆರೆ (ದಾನೇಹಳ್ಳಿ ಕೆರೆ) ಒಂದು ಕುಂಟೆ, ೩ ತೆರದ ಬಾವಿಗಳು ೮೦ ಕೊಳವೆಬಾವಿಗಳು, ೪ ಕಿರುವಾಟರ್ ಟ್ಯಾಂಕ್‌ಗಳು, ೧ ಓವರ್ ಟ್ಯಾಂಕ್‌ಗಳು ೨೦ ನಲ್ಲಿಗಳನ್ನು ಬಿಟ್ಟರೆ ಬೇರೆ ಯಾವುದೇ ನೀರಿನ ಮೂಲಗಳನ್ನು ಈ ಗ್ರಾಮದಲ್ಲಿ ಕಾಣಲು ಸಾಧ್ಯವಾಗುವುದಿಲ್ಲ.

ದಾಸೇಹಳ್ಳಿ ಗ್ರಾಮದಲ್ಲಿ ದೊಡ್ಡ ಸಮುದಾಯವಾಗಿ ಕುರುಬ ಸಮುದಾಯವೇ ಅಧಿಕ ಸಂಖ್ಯೆಯಲ್ಲಿದ್ದು, ಲಿಂಗಾಯತ್ ಆದಿಕರ್ನಾಟಕದ ಜನರು ವಾಸವಾಗಿದ್ದಾರೆ. ಕನ್ನಡ ಭಾಷೆಯ ಬಳಕೆ ಮಾಡುತ್ತಾರೆ. ೧೨೦ ಮನೆಗಳಿದ್ದು, ವಸತಿ ರಹಿತ ೬ ಕುಟುಂಬಗಳನ್ನು ಹಾಗೂ ನಿವೇಶನರಹಿತ ೧ ಕುಟುಂಬವನ್ನು ಜೊತೆಗೆ ೨೦ ಆಶ್ರಯ ಮನೆಗಳು ೧೦ ಜನತಾ ಮನೆಗಳು ೧೦ ಅಂಬೇಡ್ಕರ್ ವಸತಿ ನಿಲಯಗಳು ೧೦ ಇಂದಿರಾ ಅವಾಸ್ ಮನೆಗಳು, ೩೦ ಶೌಚಾಲಯ ಸಹಿತ, ೯೦ ಶೌಚಾಲಯ ರಹಿತ ಮನೆಗಳು, ೮೦ ಹೆಂಚಿನ ಮನೆಗಳು, ೨೦ ಮಣ್ಣಿನ ಮನೆಗಳು ೧೫ ಕಲ್ಲಿನ ಮನೆಗಳು ೫ ಕಾಂಕ್ರೀಟ್‌ಮನೆಗಳನ್ನು ಕಾಣಬಹುದು ೩೦ ಕುಟುಂಬಗಳು ಮಾತ್ರ ಭಾಗ್ಯ ಜ್ಯೋತಿ ವಿದ್ಯುತ್ ವ್ಯವಸ್ಥೆಯನ್ನು ಹೊಂದಿವೆ. ೩೦ ವಿದ್ಯುಚ್ಛಕ್ತಿ ಒದಗಿಸುವ ಕಂಬಗಳಲ್ಲಿ ೨೦ ದೀಪ ಇರುವ ಕಂಬಗಳಿವೆ.

೨೦೧೧ ರ ಜನಗಣತಿಯ ಪ್ರಕಾರ ಈ ಗ್ರಾಮದ ಒಟ್ಟು ಜನಸಂಖ್ಯೆ ೪೯೦ ಇದ್ದು, ಇದರಲ್ಲಿ ೨೫೦ ಗಂಡಸರು, ೨೦೦ ಹೆಂಗಸರು, ಪ.ಜಾತಿಯ ೬೦ ಗಂಡಸರು, ೪೦ ಹೆಂಗಸರು, ಚ. ಪಂಗಡದ ಗಂಡಸರು- ೪೦, ಹೆ- ೨೫, ಓಬಿಸಿಯ ೧೫೦ ಗಂಡಸರು, ೧೩೫ ಹೆಂಗಸರು, ಮಕ್ಕಳು-೪೦ ನ್ನು ಕಾಣಬಹುದು ಈ ಗ್ರಾಮದ ಒಟ್ಟು ಸಾಕ್ಷರತೆ ೬೬% ಇದೆ.

ಹೈನುಗಾರಿಕೆಯಲ್ಲಿ ಆಧುನಿಕ ಡೈರಿ ಇದೆ. ತೆಂಗು ಮತ್ತು ಅಡಿಕೆಯನ್ನು ಮುಖ್ಯ ಸರಕಾಗಿ ಬಳಸುತ್ತಾರೆ. ಸರಕಾಗಿ ನೌಕರರು ೪ ಮಂದಿ ಮಾತ್ರ. ಸಾಂಪ್ರದಾಯಿಕ ಉದ್ಯೋಗ ಮಡುವವರಲ್ಲಿ ಬಡತನವನ್ನು ವೃತ್ತಿ ಮಾಡಿಕೊಂಡಿರುವ ೪ ಕುಟುಂಬಗಳನ್ನು, ಆಧುನಿಕದಲ್ಲಿ ೩ ಕುಟುಂಬಗಳ ಹಿಟ್ಟಿನ ಗಿರಣಿಯನ್ನು ಕಾಣಬಹುದು. ಯಾವುದೇ ನ್ಯಾಯಬೆಲೆ ಅಂಗಡಿಗಳಾಗಲೀ ಇರುವುದಿಲ್ಲ. ಹಂದನಕೆರೆ ಹೋಬಳಿ ತುಮಕೂರು ಲೋಕಸಭಾ ಕ್ಷೇತ್ರವನ್ನೂ ಚಿ.ನಾ.ಹಳ್ಳಿ ವಿಧಾನಸಭಾ ಕ್ಷೇತ್ರವನ್ನು, ಹಂದನಕೆರೆ ಜಿಲ್ಲಾ ಪಂಚಾಯತ್ ಮತ್ತಿಘಟ್ಟ ತಾ. ಪಂಚಾಯತ್ ಮತ್ತು ಗ್ರಾ. ಪಂಚಾಯತ್‌ನ್ನೂ ಹೊಂದಿದೆ. ಗ್ರಾ.ಪಂ. ಒಬ್ಬರು ಸದಸ್ಯರನ್ನು ಹಾಗೂ ೨ ನೌರರನ್ನು ಒಳಗೊಂಡಿದೆ. ತಹಶೀಲ್ದಾರ್, ಲೋಕೋಪಯೋಗಿ, ವಿದ್ಯುತ್ ಇಲಾಖೆ, ನೀರು ಸರಬರಾಜು ಇಲಾಖೆಯನ್ನೂ ಚಿ.ನಾ.ಹಳ್ಳಿಯಲ್ಲಿ ಒಳಗೊಂಡಿದೆ.

ಒಂದು ಕಚ್ಚಾರಸ್ತೆಯನ್ನು ಒಳಗೊಂಡಿದೆ. ಇದು ಶೆಟ್ಟಿಕೆರೆ ಚಿ.ನಾ.ಹಳ್ಳಿ ತಮ್ಮಡಿಹಳ್ಳಿ-ಉತ್ತಿಘಟ್ಟಕ್ಕೆ ಸಂಚಾರಿಸಲು ಅನುವು ಮಾಡಿಕೊಟ್ಟಿದೆ. ಅಂಚೆ, ತಂತಿ, ಈ ಮೇಲ್ ಇಲಾಖೆಗಳಾಗಲೀ ಕಂಡುಬರುವುದಿಲ್ಲ. ರಕ್ಷಣೆ, ನ್ಯಾಯಾಂಗ ವ್ಯವಸ್ಥೆ ಮರೀಚಿಕೆಯಾಗಿಯೇ ಉಳಿದಿದೆ.

ಹಣಕಾಸು ವ್ಯವಸ್ಥೆಯಲ್ಲಿ ಖಾಸಗೀ ವ್ಯವಸ್ಥೆಯಲ್ಲಿ ಸ್ತ್ರೀಶಕ್ತಿ ಸಂಘಗಳು ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳನ್ನು ಕಾಣಬಹುದು. ಶಿಕ್ಷಣಕ್ಕಾಗಿ ಒಂದು ಅಂಗನವಾಡಿ ಕೇಂದ್ರವನ್ನು ಒಂದು ಸ.ಕಿ.ಪ್ರಾ.ಶಾಲೆ.ಯನ್ನು ಕಂಡು ಈ ಶಾಲೆಯಲ್ಲಿ ಬಿಸಿಯೂಟ, ಕ್ಷೀಎಭಾಗ್ಯವನ್ನು ವ್ಯವಸ್ಥಿತವಾದ ಶೌಚಾಲಯ ಆಟದ ಮೈದಾನವನ್ನೂ ನೋಡಬಹುದು. ಇಬ್ಬರು ಅಂಗವಿಕಲ ಚೇತನ ವೇತನ, ೬ ಜನ ವಿಧವಾ ವೇತನ ಪಡೆಯುವ ಜನರು, ವಾಸವಾಗಿದ್ದಾರೆ. ೩ ಅಂಗಡಿಗಳಿವೆ. ಛತ್ರಗಳಾಗಲೀ ಹೋಟೆಲ್ ವಸತಿಗಳಾಗಲೀ ಕಂಡುಬರುವುದಿಲ್ಲ.

ಧಾರ್ಮಿಕ ಕ್ಷೇತ್ರದಲ್ಲಿ ೩ ಬಸವಣ್ಣ ದೇವಾಲಯಗಳು ಮಾತ್ರ ಇವೆ. ಯಾವುದೇ ಜಾತ್ರೆಗಳಿಗಾಲಿ ಜರುಗುವುದಿಲ್ಲ. ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ದೀಪಾವಳಿ ಇತ್ಯಾದಿ ಹಬ್ಬಗಳನ್ನು ಭಾನಗಳನ್ನೂ ಆಚರಿಸುತ್ತಾರೆ. ಸಾಂಸ್ಕೃತಿಕ ಕ್ಷೇತ್ರದಲ್ಲಿ ಬೀರಯ್ಯ ಎಂಬ ೪೦ ವರ್ಷದ ಕುರುಬ ಸಮಾಜದ ವ್ಯಕ್ತಿ ರಂಗಗೀತೆಯ ಗಾಯಕರಾಗಿದ್ದಾರೆ.

## ನಡುವನಹಳ್ಳಿ

ನಡುವನಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಹತ್ತು ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೧೩.೩೩ ಹೆಕ್ಟೇರ್

ಸಿದ್ದಾಪುರ ಎಂಬ ಮಜರೆ ಗ್ರಾಮವನ್ನು ಹೊಂದಿದೆ. ಕಂದಾಯ ಗ್ರಾಮ ಕೆಂಪುಮಣ್ಣನ್ನು ಹೊಂದಿದೆ. ವ್ಯವಸಾಯಕ್ಕೆ ಯೋಗ್ಯವಾಗಿದ್ದು ರಾಗಿ ಮುಖ್ಯಬೆಳೆಯಾಗಿದೆ. ತೊಗರಿ, ಹೆಸರು, ಉರುಳಿ, ಉದ್ದು, ಅವರೆ, ಅಲಸಂಡಿ, ಹರಳು, ಎಳ್ಳು, ಉಪಬೆಳೆಗಳಾಗಿವೆ. ತೆಂಗು ಮತ್ತು ಅಡಿಕೆ ತೋಟಗಾರಿಕಾ ಮತ್ತು ವಾಣಿಜ್ಯ ಬೆಳೆಗಳಾಗಿವೆ. ಟೊಮೋಟೋ, ಸೌತೆಕಾಯಿ, ಮೆಣಸಿನಕಾಯಿಗಳಂತಹ ತರಕಾರಿಗಳನ್ನು ಬೆಳೆಯುತ್ತಾರೆ. ಕಾಡು ಪ್ರಾಣಿಗಳಾದ ನರಿ, ಮೊಲ, ಮುಂಗಸಿ, ಕಾಡು ಪಕ್ಷಿಗಳಾದ ನವಿಲು, ಗೌಜಲಕ್ಕಿ, ಗುಬ್ಬಚ್ಚಿ, ಗೂಬೆ, ಮರಕುಟಿಗ, ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಗ್ರಾಮಸ್ಥರು ಹಳ್ಳಿಕಾರ್ ಮತ್ತು ದೇವದಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಮಿಶ್ರತಳಿಗಳಾದ ಜೆರ್ಸಿ, ಹೆಚ್.ಎಫ್. ಸೀಮೆಹಸುಗಳನ್ನು ಹಾಗೂ ನಾಟಿ ಹಸುಗಳನ್ನು ಸಾಕುತ್ತಾರೆ. ನಾಟಿ ತಳಿಯ ಎಮ್ಮೆಗಳಿದ್ದು ಕುರಿ ಸಾಕಣೆ ಇದೆ.

ವಾರ್ಷಿಕ ಸರಾಸರಿ ೫೦೦ ಮಿ.ಮೀ. ಮಳೆ ಬೀಳುತ್ತದೆ. ಹವಮಾನ ವೈಫರೀತ್ಯದಿಂದಾಗಿ ಕಳೆದ ಹತ್ತು ವರ್ಷಗಳಿಂದ ಜಲಕ್ಷಾಮ ಎದುರಿಸುತ್ತಿದ್ದು ಜಲಕ್ಷಾ ಬರಗಾಲಕ್ಕೆ ತುತ್ತಾಗಿದೆ.

೪೦೦ ರಿಂದ ೫೦೦ ಅಡಿ ಆಳದ ೩೦ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಿಗೆ ನೀರೊದಗಿಸುತ್ತಿವೆ. ೧ ಸೇದುವ ಬಾವಿಯಿದ್ದು ೪ ತೆರೆದ ಬಾವಿಗಳಿವೆ. ೩ ಮಿನಿಟ್ಯಾಂಕುಗಳಿದ್ದು ಕುಡಿಯುವ ನೀರಿನ ಸೌಲಭ್ಯವಿದೆ.

ಕುರುಬ ಜನಾಂಗ ಪ್ರಧಾನ ಸಮುದಾಯವಾಗಿದ್ದು, ದೊಂಬರು, ಲಿಂಗಾಯಿತರು, ನಾಯಕರು, ಗಾಣಿಗರು, ಕಿರು ಸಮುದಾಯಗಳಾಗಿವೆ. ಪ್ರಮುಖ ಭಾಷೆ ಕನ್ನಡ, ಗಾಣಿಗರು ತಮ್ಮ ಸಾಂಪ್ರದಾಯಿಕ ವೃತ್ತಿಯಾದ ಎಣ್ಣೆ ವ್ಯಾಪಾರವನ್ನು ಮಾಡುತ್ತಾರೆ. ಆಧುನಿಕ ವಾಹನಗಳಾದ ಕಾರು, ಟ್ರಾಕ್ಟರ್, ಆಟೋ ಹಾಗೂ ದ್ವಿಚಕ್ರವಾಹನಗಳೊಂದಿಗೆ ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿಗಳು ಸಹ ಉಳಿದುಕೊಂಡು ಬಂದಿವೆ.

ಒಟ್ಟು ೧೭೦ ಮನೆಗಳನ್ನು ೨೦೧೧ರ ಜನಗಣತಿಯ ಪ್ರಕಾರ ೫೩೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಕಾಂಕ್ರೀಟ್ ಮನೆಗಳು, ಮಣ್ಣಿನ ಮನೆಗಳು, ಸೀಮೆಹೆಂಚಿನ ಮನೆಗಳು, ಇವೆ. ಪ್ರಮುಖ ಆಹಾರ ಪದ್ಧತಿ ರಾಗಿಮುದ್ದೆ ಮತ್ತು ಅನ್ನ. ೨೪ ಮನೆಗಳು ಜನತಾ, ಆಶ್ರಯ ವಸತಿ ಯೋಜನೆಯ ಅಡಿಯಲ್ಲಿ ನಿರ್ಮಾಣವಾಗಿವೆ.

ಬೇಸಾಯ ಇಲ್ಲಿಯ ಪ್ರಮುಖ ಕಸುಬಾಗಿದ್ದರೂ, ಕಟ್ಟಡ ಕೆಲಸಗಾರರು, ಕೂಲಿಕಾರ್ಮಿಕರು, ಮರಗೆಲಸ ಮಾಡುವವರು, ಎಣ್ಣೆ, ವ್ಯಾಪಾರ ಮಾಡುವವರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಆಶ್ರಯ ಜನತಾ ವಸತಿ ಯೋಜನೆಯ ೬೨ ಫಲಾನುಭವಿಗಳಿದ್ದಾರೆ.

ಶೆಟ್ಟಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಶೆಟ್ಟಿಕೆರೆ ಜಿಲ್ಲಾಪಂಚಾಯಿತಿ ಕ್ಷೇತ್ರ. ಜೆ.ಸಿ. ಪುರ ತಾಲ್ಲೂಕು ಪಂಚಾಯಿತಿ ಕ್ಷೇತ್ರ ಹಾಗೂ ಗೋಡೆಕೆರೆ ಗ್ರಾಮ ಪಂಚಾಯಿತಿಗೆ ಸೇರಿದೆ. ಗ್ರಾಮದಲ್ಲಿ ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ತಾಲ್ಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಲ್ಲಿ ತಹಶೀಲ್ದಾರ್ ಕಛೇರಿ ಇದೆ. ಚಿಕ್ಕನಾಯಕನಹಳ್ಳಿ ಗ್ರಾಮಾಂತರ ಪೋಲಿಸ್ ಠಾಣೆ ಸರಹದ್ದಿಗೆ ಸೇರಿದೆ.

ಮೂರು ಸ್ತ್ರೀಶಕ್ತಿ ಸಂಘಗಳು, ಒಂದು ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಘ, ಒಂದು ಸ್ವಸಹಾಯ ಸಂಘವಿದ್ದು ಕಿರು ಹಣಕಾಸು ಸಂಸ್ಥೆಗಳಿಂದ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯುತ್ತದೆ.

ಒಂದು ಅಂಗನವಾಡಿ ಕೇಂದ್ರವಿದ್ದು ಇಬ್ಬರು ಅಂಗನವಾಡಿ ಕಾರ್ಯಕರ್ತೆಯರಿದ್ದಾರೆ. ಒಟ್ಟು ೮ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಇಬ್ಬರು ಶಿಕ್ಷಕರಿದ್ದಾರೆ. ಹಾಗೂ ೧೨ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಶೇ.೮೪ ಸಾಕ್ಷರತೆ ಇದೆ.

ಪ್ರತಿ ಮನೆಯಲ್ಲೂ ಸಂಚಾರಿ ದೂರವಾಣಿಗಳಿವೆ. ೬೮ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ. ಗ್ರಾಮದಲ್ಲಿ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನವನ್ನು ೩೨ ಫಲಾನಭವಿಗಳಿದ್ದಾರೆ.

ಸಾಂಪ್ರದಾಯಿಕ ಹೈನುಗಾರಿಕೆ ಅಲ್ಪ ಪ್ರಮಾಣದಲ್ಲಿದ್ದು, ಪಕ್ಕದ ಗೋಡೆಕೆರೆ ಗ್ರಾಮದ ಡೈರಿಗೆ ಹಾಲು ಸರಬರಾಜು ಮಾಡುತ್ತಾರೆ. ಇದು ಗ್ರಾಮದ ಆರ್ಥಿಕ ಚೇತರಿಕೆಗೆ ಕಾರಣವಾಗಿದೆ. ಇಬ್ಬರು ಸರ್ಕಾರಿ ಶಿಕ್ಷಕರಿದ್ದು, ೮ ಮಂದಿ ಖಾಸಗಿ ಬಡೆತನದ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಗುಡಿ ಕೈಗಾರಿಕೆ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಗಳು

ಕಂಡುಬರುವುದಿಲ್ಲ. ಆದರ್ಶಕುಮಾರ್ ಜಿಲ್ಲಾ ಪಂಚಾಯಿತಿ ಇಲಾಖೆಯಲ್ಲಿ ಯೋಜನಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವುದು ಈ ಗ್ರಾಮದ ವಿಶೇಷ.

ಗ್ರಾಮದಲ್ಲಿ ಆಂಜನೇಯ ಮತ್ತು ಕರಿಯಮ್ಮನ ದೇವಾಲಯಗಳಿವೆ. ಕೆಂಡ, ಬಾನ, ತೇರು ಸೇರಿದಂತೆ ಮೂರು ದಿನಗಳ ಕಾಲ ಕರಿಯಮ್ಮ ದೇವಿ ಜಾತ್ರೆಯು ನಡೆಯುತ್ತದೆ.

## ನಡುವನಹಳ್ಳಿ ಏಕೆ ಕಾಲೋನಿ

ನಡುವನಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದ್ದು ಇದಕ್ಕೆ ಹೊಂದಿಕೊಂಡಂತೆ, ಹೊರವಲಯದಲ್ಲಿ ಮಾದಿಗರ ಹಟ್ಟಿ ಇದೆ. ಇದನ್ನು ಸರ್ಕಾರದ ಲೆಕ್ಕದಲ್ಲಿ ಏಕೆ ಕಾಲೋನಿ ಎಂದು ಕರೆಯುತ್ತಾರೆ. ಇಲ್ಲಿ ಆದಿಕರ್ನಾಟಕ ಜನಾಂಗದವರು ವಾಸಿಸುತ್ತಿದ್ದರು. ಒಟ್ಟು ೩೭ ಮನೆಗಳಿದ್ದು, ೧೧೮ ಜನಸಂಖ್ಯೆಯನ್ನು ಹೊಂದಿದೆ. ಇಲ್ಲಿನ ಮನೆಗಳು ಹೆಂಚಿನ ಸೀಟಿನ ಸ್ವರೂಪದಲ್ಲಿದ್ದು, ಮಾಳಿಗೆ ಮನೆಗಳು ಇವೆ. ಇವು ಸರ್ಕಾರದ ವಸತಿ ಯೋಜನೆಯಾದ ಆಶ್ರಯ ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ಉಚಿತ ಭಾಗ್ಯ ಜ್ಯೋತಿ ಯೋಜನೆಯ ಫಲಾನುಭವಿಗಳಿದ್ದಾರೆ. ರೈತಾಪಿ ಬದುಕು ಮುಖ್ಯ ರಾಗಿ, ತೆಂಗು, ಹೆಸರು, ಬೆಳೆಯುತ್ತಾರೆ. ರಾಗಿ ಮುದ್ದೆ ಅನ್ನ ಮುಖ್ಯ ಆಹಾರ ವಿಶೇಷವಾಗಿ ಬಾಡೂಟ, ಪಾಯಸ, ಹೋಳಿಗೆ ಬಳಸುತ್ತಾರೆ.

ಕನ್ನಡ ಇಲ್ಲಿನ ಪ್ರಮುಖ ಭಾಷೆಯಾಗಿದೆ. ಕುಡಿಯಲು ಗೋಡೆಕೆರೆ ಗ್ರಾಮ ಪಂಚಾಯಿತಿಯಿಂದ ಕೊಳವೆ ಬಾವಿಯ ಮೂಲಕ ನೀರು ಪೂರೈಸುತ್ತಿದ್ದಾರೆ. ಒಂದು ಸಿಸ್ಟನ್ ಇದೆ. ಪಡಿತರ, ಶಿಕ್ಷಣ ಮುಖ್ಯ ಗ್ರಾಮದಿಂದಲೇ ಪೂರೈಸಿಕೊಳ್ಳುತ್ತಿದ್ದಾರೆ. ಗೋಡೆಕೆರೆಯಿಂದ ಅಂಚೆ ಸಂಪರ್ಕವಿದೆ. ಗೋಡೆಕೆರೆ ಪಂಚಾಯಿತಿಗೆ ಸೇರಿದ ಒಬ್ಬರು ಸದಸ್ಯರಿದ್ದಾರೆ. ಹಸು, ಎಮ್ಮೆ, ಕುರಿ, ಸಾಕಿದ್ದಾರೆ. ಹೆಂಗಸರು ಗರಿಕಡ್ಡಿ, ಸಿಗಿಯುವುದು ಇದೆ. ಕರಿಯಮ್ಮ ಸ್ತ್ರೀಶಕ್ತಿ ಸಂಘವಿದೆ. ವೃದ್ಧಾಪ್ಯ ವಿಧವಾ ವೇತನದ ಸೌಲಭ್ಯ ಪಡೆದವರಿದ್ದಾರೆ. ಗ್ರಾಮದಲ್ಲಿ ಕರಿಯಮ್ಮ ದೇವರಿಗೆ ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ. ಗೋಡೆಕೆರೆ ಸಿದ್ದರಾಮೇಶ್ವರ ದೇವರಿಗೆ ನಡೆದುಕೊಳ್ಳುತ್ತಾರೆ. ಗೋಡೆಕೆರೆ ಗೇಟಿನಿಂದ ಕಚ್ಚಾರಸ್ತೆ ಸಂಪರ್ಕವಿದೆ.

## ನರುವಗಲ್

ನರುವಗಲ್ ಒಂದು ಕಂದಾಯ ಗ್ರಾಮ ಇದು ಬೆಳಗುಲಿ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತದೆ. ತಾ. ಸ್ಥಳದಿಂದ ವಾಯುವ್ಯ ದಿಕ್ಕಿನಲ್ಲಿ ೨೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ನಿರುವಗಲ್ ೧೫೨೦. ೩೫ ಚ.ಕಿ.ಮೀ. ವಿಸ್ತೀರ್ಣದಲ್ಲಿ ಸೇರಿದೆ. ನಿರುವಗಲ್ ಗೊಲ್ಲರಹಟ್ಟಿ ಹಾಗೂ ನಿರುವಲ್ ಕಟ್ಟೆಕೋಡಿ ಎಂದು ಎರಡು ಭಾಗಗಳಾಗಿ ವಿಂಗಡಿಸಿದ್ದಾರೆ. ಬಯಲು ನಾಡಿಗೆ ಸೇರಿದ್ದು, ಇಲ್ಲಿ ಬಿಳಿಮಿಶ್ರಿತ ಕೆಂಪು ಕಲ್ಲು ಮತ್ತು ಕೆಂಪು–ಬಿಳಿ–ಕಪ್ಪು ಮಣ್ಣು ಕಂಡುಬರುತ್ತದೆ.

ಕೆರೆಯ ನಡುವೆ ಒಂದು ಅಳತೆ ಮಾಪನ ಕಲ್ಲು ಇದ್ದು, ಆಕಾರಣದಿಂದಾಗಿ ನಿಡುಗಲ್ಲು ನೀರುವಗಲ್ಲು ಎಂದಾಗಿದೆ. ಈ ಭಾಗದಲ್ಲಿ ಕಾಡುಹಂದಿಗಳು ಬಂದು ಹೋಗುತ್ತಿರುತ್ತವೆ. ಇಲ್ಲಿ ನರಿ, ತೋಳ, ಕರಡಿ, ಮೊಲ, ಇತ್ಯಾದಿ ಪ್ರಾಣಿಗಳು ಕಂಡುಬರುತ್ತವೆ. ಇಲ್ಲಿಯ ಜನ ದನ ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಇಲ್ಲಿ ಕೋಗಿಲೆ, ನವಿಲು ಕಾಗೆ, ಗೂಬೆ, ಗಿಳಿ ಪಾರಿವಾಳ ಗುಬ್ಬಚ್ಚಿ, ಗಿಡುಗ ಇತ್ಯಾದಿ ಪಕ್ಷಿಗಳು ಕಂಡುಬರುತ್ತದೆ. ಇಲ್ಲಿಯ ಜನರು ಕೋಳಿ, ಗಿರಿರಾಜಕೋಳಿಗಳನ್ನು ಸಾಕುತ್ತಾರೆ. ಇಲ್ಲಿ ೫೦೩.೦೮ ಮೀ ಮಳೆ ಬಿದ್ದ ದಾಖಲೆ ಇದೆ. ೯ ಡಿ.ಸೆಂ. ಚಳಿ ಕಂಡುಬರುತ್ತದೆ. ೨೬–೩೬ ಡಿ.ಸೆಂ. ಬಿಸಿಲು ಕಂಡುಬರುತ್ತದೆ. ಇಲ್ಲಿ ಎರಡು ಬೋರ್‌ವೆಲ್, ಒಂದು ತೊರೆ, ಒಂದು ಕೆರೆ ಕಂಡುಬರುತ್ತದೆ. ಇಲ್ಲಿ ಕುಡಿಯುವ ನೀರಿಗಾಗಿ ನಲ್ಲಿಗಳನ್ನು ಅಳವಡಿಸಲಾಗಿದೆ.

ಆದಿಕರ್ನಾಟಕ ಇವರ ದೊಡ್ಡ ಸಮುದಾಯವಿದ್ದು, ನಾಯಕರು, ಲಿಂಗಾಯುತ, ಉಪ್ಪಾರ, ಕುರುಬ ಸರ್ಪಒಕ್ಕಲಿಗ, ಬಲಿಜಿಗ ಶ್ರೀವೈಷ್ಣವ ಎಂಬ ಸಣ್ಣ ಸಮುದಾಯದವರಾಗಿದ್ದಾರೆ. ಇಲ್ಲಿಯ ಜನರು ಕನ್ನಡ ಭಾಷೆ ಮಾತನಾಡುತ್ತಾರೆ.

೨೦೧೧ ರ ಜನಗಣತಿ ಪ್ರಕಾರ ಜನಸಂಖ್ಯೆಯನ್ನು ಹೊಂದಿರುವ ಈ ಗ್ರಾಮದಲ್ಲಿ ೧೪೧ ಮನೆಗಳಿವೆ. ಅವುಗಳಲ್ಲಿ ೩ ಕಾಂಕ್ರೀಟ್ ಮನೆ, ೭೫ ಕಲ್ಲಿನ ಮನೆಗಳು ೮೩ ಮಣ್ಣಿನ ಮನೆಗಳು, ಕಂಡುಬರುತ್ತವೆ. ಈ ಮನೆಗಳನ್ನು ಕಲ್ಲು ಹಾಗೂ ಮಣ್ಣುಗಳನ್ನು ಬಳಸಿ ಕಟ್ಟಲಾಗಿದೆ. ಮೇಲ್ಛಾವಣಿಗೆ ಕುಂಬಾರ ಕಪ್ಪು ಹೆಂಚು ಹಾಗೂ ಮಂಗಳವಾರ ಕೆಂಪು ಹೆಂಚನ್ನು ಹೊದಿಸಿದ್ದಾರೆ.

ಜನರ ಬಹುಮುಖ್ಯ ಆಹಾರ ರಾಗಿ ಮುದ್ದೆ, ಅನ್ನ, ಸಾಂಬಾರು, ಪ್ರಮುಖ್ಯ ಆಹಾರಗಳೆಂದರೆ ಉಪ್ಪಿಟ್ಟು, ಚಿತ್ರಾನ್ನ, ದೋಸೆ, ಇಡ್ಲಿ ಇತ್ಯಾದಿ ಇವರ ವಿಶೇಷ

ಆಹಾರ ಹೊಬ್ಬಟ್ಟು, ಪಾಯಸ, ಬೂಂದಿ, ಇಲ್ಲಿ ಕೆಲವರು ಮಾಂಸಹಾರಿಯನ್ನು ಸೇವಿಸುತ್ತಾರೆ. ಈ ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನಗಾಡಿ, ಆಧುನಿಕ ಬೈಸಿಕಲ್, ಬೈಕ್‌ಗಳು, ಟ್ರಾಕ್ಟರ್‌ಗಳು ಇವೆ.

ಬಹುತೇಕ ಜನರು ಕೃಷಿಕರಿದ್ದಾರೆ. ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ರಾಗಿಯೇ ಆಹಾರ ಬೆಳೆಯೂ ಆಗಿದೆ. ಉಪ ಬೆಳೆಗಳಾದ ಉದ್ದು, ತರಣಿ, ಹುಚ್ಚೆಳ್ಳು, ಅವರೆ, ಇತ್ಯಾದಿ ಬೆಳೆಯುತ್ತಾರೆ. ತೆಂಗು ಹಾಗೂ ಅಡಕೆ ಇಲ್ಲಿನ ವಾಣಿಜ್ಯ ಬೆಳೆಯಾಗಿದೆ. ತೆಂಗಿನ ಕಾಯಿ ಹಾಗೂ ಕೊಬ್ಬರಿ ಇಲ್ಲಿನ ವ್ಯಾಪಾರಿ ಸರಕು, ಸರ್ಕಾರಿ ಡೈರಿ ಹಾಗೂ ಖಾಸಗಿ ಆರೋಗ್ಯ ಡೈರಿ ಇದೆ. ಇಲ್ಲಿ ಹಸುಗಳು ೫೦ ರಷ್ಟಿದೆ. ಮಿಶ್ರತಳಿ ಅಥವಾ ರಿಯಾಯಿತಿ ತಳಿಗಳು ರೆಡ್ ಆ್ಯರನ್ ಜೆರ್ಸಿ, ಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿವೆ. ಈ ಹಸುಗಳಿಂದ ಹಾಲುಕರೆದು ಡೈರಿಗೆ ಹಾಕುತ್ತಾರೆ.

ಶಿಕ್ಷಕರೂ ಕೂಡ ಇದ್ದಾರೆ. ಹಾಗೂ ಬೆಂಗಳೂರಿನಲ್ಲಿ ಐಟಿಬಿಟಿ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಹಂದನಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ, ಬೆಳಗುಲಿ ಗ್ರಾಮಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೂ ಸೇರಿದೆ. ತುಮಕೂರು ಲೋಕಸಭಾ ಕ್ಷೇತ್ರಕ್ಕೂ ಸೇರುತ್ತದೆ. ಈ ಗ್ರಾಮಕ್ಕೆ ಕಚ್ಚಾರಸ್ತೆ ಇದೆ. ಇಲ್ಲಿ ಹುಳಿಯಾರು ರಸ್ತೆ ಮಾರ್ಗವನ್ನು ಒಳಗೊಂಡಿದೆ. ಜನರು ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಚಿ.ನಾ.ಹಳ್ಳಿ ಲೋಕಾಯುಕ್ತ ನ್ಯಾಯಾಂಗ ವ್ಯವಸ್ಥೆ ಕಂಡುಬರುತ್ತದೆ.

ವರಲಕ್ಷ್ಮೀ, ದುರ್ಗಮ್ಮ, ದಿವ್ಯಭಾರತಿ, ಶ್ರೀದೇವಿ, ಸ್ವಸಹಾಯ ಸಂಘವಿದೆ. ಇಲ್ಲಿ ಜನರು ಶೇ ೬೦% ರಷ್ಟು ಸಾಕ್ಷರರಾಗಿದ್ದಾರೆ. ಇಲ್ಲಿ ಒಂದು ಅಂಗನವಾಡಿ ಕೇಂದ್ರ ಹಾಗೂ ಸರ್ಕಾರಿ ಮಾಧ್ಯಮಿಕ ಪಾಠಶಾಲೆ ಇದೆ. ಶಾಲೆಯಲ್ಲಿ ಶೌಚಾಲಯ ಕುಡಿಯುವ ನೀರಿನ ವ್ಯವಸ್ಥೆ, ಬಿಸಿಯೂಟ ಯೋಜನೆ, ಕ್ಷೀರಭಾಗ್ಯ ಯೋಜನೆ, ಜಾರಿಯಲ್ಲಿದೆ. ಸಾಕ್ಷರತೆ ೭೬% ರಷ್ಟಿದೆ.

ವೃದ್ಧಾಪ್ಯ ವೇತನ, ವಿಕಲಚೇತನವೇತನ, ವಿಧವಾ ವೇತನ ಇತ್ಯಾದಿ ಸಮುದಾಯ ಸೌಲಭ್ಯ ಪಡೆಯುವ ೧೬ ಫಲಾನುಭವಿಗಳು ಇದ್ದಾರೆ. ನಿರುವಗಲ್‌ನಲ್ಲಿ ಬಸವಣ್ಣ, ಆಂಜನೇಯ, ದುರ್ಗಮ್ಮ, ಯಲ್ಲಮ್ಮನ ದೇವಾಲಯಗಳಿವೆ. ದುರ್ಗಮ್ಮನ ಜಾತ್ರೆ ನಡೆಯುತ್ತವೆ. ಈ ಗ್ರಾಮದಲ್ಲಿ ಹೊಳೆ ಸೇವೆ ಆಚರಣೆಯಲ್ಲಿವೆ. ಇಲ್ಲಿ ಕರಿಯಮ್ಮ, ರಂಗಮ್ಮ, ಲಕ್ಕಮ್ಮ, ಚಿಕ್ಕಮ್ಮ, ಎಂಬುವವರು ಜನಪದಗಳನ್ನು ಹಾಡುತ್ತಾರೆ. ಇಲ್ಲಿಯ ಜನರು ಯುಗಾದಿ, ಶಿವರಾತ್ರಿ, ಮಹಾನವಮಿ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ.

## ನರುವಗಲ್ ಗೊಲ್ಲರಹಟ್ಟಿ

ನರುವಗಲ್ ಗ್ರಾಮಕ್ಕೆ ಸೇರಿದ ಗೊಲ್ಲರಹಟ್ಟಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೨ ಕಿ.ಮೀ. ದೂರದಲ್ಲಿದೆ. ಇದು ಮಜರೆ ಗ್ರಾಮವಾಗಿದ್ದು, ನರುವಗಲ್ ಗ್ರಾಮದ ಭೌಗೋಳಿಕ ವಿಸ್ತೀರ್ಣ ೧೫೨೦.೨೫ರಲ್ಲಿ ಇದರ ವಿಸ್ತೀರ್ಣ ಹಂಚಿಕೆಯಾಗಿದೆ. ಕಾಡುಗೊಲ್ಲ ಜನಾಂಗದವರು ಪ್ರತ್ಯೇಕವಾಗಿ ವಾಸಿಸುತ್ತಿದ್ದು, ೨೭ ಮನೆಗಳಿದ್ದು, ೧೨೮ ಜನ ಸಂಖ್ಯೆ ಹೊಂದಿದೆ. ಈ ಮನೆಗಳು ಹೆಂಚಿನ, ಸೀಟಿನ ಹಾಗೂ ಮಾಳಿಗೆ ಸ್ವರೂಪದ ಮನೆಗಳಿವೆ. ಇವು ಸರ್ಕಾರದ ವಸತಿ ಯೋಜನೆಗಳಾದ ಜನತಾ, ಆಶ್ರಮ, ಯೋಜನೆಯ ೯ ಫಲಾನುಭವಿಗಳಿದ್ದು, ಕುಡಿಯಲು ನೀರನ್ನು ಬೆಳಗಲಿ ಗ್ರಾಮ ಪಂಚಾಯಿತಿಯಿಂದ ಕೊಳವೆ ಬಾವಿಯ ಮೂಲಕ ಪೂರೈಸುತ್ತಿದ್ದಾರೆ. ಕೃಷಿ ಇವರ ಮುಖ್ಯ ಕಸುಬಾಗಿದೆ. ಕುರಿ ಸಾಕಾಣಿಕೆ ಹಾಗೂ ಪಶುಪಾಲನೆ ಇದ್ದು, ಡಿಸೆಂಬರ್ ತಿಂಗಳಿಂದ ಮೇ ತಿಂಗಳವರೆಗೆ ಕುರಿಗಳು ಪರಸ್ಥಳಕ್ಕೆ ಹುಲ್ಲು ನೀರಿಗಾಗಿ ವಲಸೆಹೋಗುವುದಿದೆ. ಉಳಿದಂತೆ ಬೇಸಾಯದಲ್ಲಿ ರಾಗಿ, ಹೆಸರು, ಹುರುಳಿ, ಬೆಳೆಯುತ್ತಾರೆ. ತೆಂಗಿನ ತೋಟಗಾರಿಕೆ ಇರುವವರು ತೆಂಗಿನ ಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕಾಗಿದೆ. ಮುತ್ತುಗದ ಎಲೆ ಸಂಗ್ರಹ, ಊಟದ ಎಲೆ ಕಟ್ಟುವುದು ಈ ಗ್ರಾಮದ ಮುಖ್ಯ ಕಾಯಕವಾಗಿದೆ. ಬೆಳದರ ಗ್ರಾಮ ಪಂಚಾಯಿತಿಗೆ ಸೇರಿದೆ. ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಸ್ಟಿಕ ಆಹಾರ ನೀಡಲಾಗುತ್ತಿದೆ. ಸಮುದಾಯ ಸೌಲಭ್ಯಗಳಾದ ವಿಧವಾವೇತನ, ಹಾಗೂ ವೃದ್ಧಾಪ್ಯ ವೇತನ ಫಲಾನುಭವಿಗಳಿದ್ದಾರೆ. ಬೆಳುಗಲಿ ಹುಳಿಯಾರು ರಸ್ತೆಗೆ ಬಸ್ ಸಂಚಾರಸಂಪರ್ಕವಿದೆ. ಜೊತೆಗೆ ಬೆಳದರ ಗ್ರಾಮದಿಂದ ಅಂಚೆ ಸಂಪರ್ಕ ಕಲ್ಪಿಸಿದೆ. ಗ್ರಾಮದಲ್ಲಿ ಕರಿಯಮ್ಮ ಬೇವಿನಮ್ಮ ಸ್ತ್ರೀಶಕ್ತಿ ಸ್ವಸಹಾಯ ಸಂಘವಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಸಹಾಯವಾಗಿದೆ. ನರುಗಲ್ ಬಸವಣ್ಣ ದೇವರಿಗೆ ಆರತಿ ಉತ್ಸವ ಮಾಡುವುದಲ್ಲದೆ, ದುರ್ಗಮ್ಮ, ಎಲ್ಲಮ್ಮನಿಗೂ ಆರತಿ, ಬಾನ, ಬ್ಯಾಟೆಯ ಹರಕೆ ಸಂಪ್ರದಾಯವಿದೆ. ಕಾಡು ಗೊಲ್ಲರ ಸಂಪ್ರದಾಯದಂತೆ ದೀಪಾವಳಿ ದಿನಗಳ ಏಳುದಿನ ಚಿತ್ರದೇವರ ಉತ್ಸವ, ದೀಪ ಏರಿಸುವ ದೀಪ ಬೆಳಗಿಸುವ ಉತ್ಸವ ಏರ್ಪಡುತ್ತದೆ.

ದೀಪಾವಳಿಯಂತೆ, ಯುಗಾದಿ, ಶಿವರಾತ್ರಿ, ದಸರಾ, ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ನರುವಗಲ್ ಕಟ್ಟೆಕೋಡಿ

ನರುವಗಲ್ ಕಟ್ಟೆ ಕೋಡಿ ಗ್ರಾಮವು, ನರುವಗಲ್ ಕಂದಾಯ ಗ್ರಾಮಕ್ಕೆ ಸೇರಿದ ಮಜರೆ ಗ್ರಾಮವಾಗಿದೆ. ನರುವಗಲ್ ಗ್ರಾಮದ ಕೆಲವರು ಹೋರಾಂಗಣದಲ್ಲಿ ಕಟ್ಟೆ ಕೋಡಿಯ ಬಳಿಯೊಂದು ಮನೆ ನಿರ್ಮಿಸಿಕೊಂಡ ಕಾರಣ ಕಟ್ಟೆ ಕೋಡಿ ಮನೆ ಎಂದೇ ಕರೆದರು. ಇಲ್ಲಿ ೧೬ ಮನೆಗಳಿದ್ದು, ಉಪ್ಪಾರ, ಕುರುಬ, ಲಿಂಗಾಯಿತರ, ಮನೆಗಳಿವೆ. ತೋಟ ಮಾದರೀಯ ಮನೆಗಳಾಗಿವೆ. ಕುಡಿಯಲು ಗ್ರಾಮ ಪಂಚಾಯಿತಿಯಿಂದ ನೀರು ಪೂರೈಸಲಾಗುತ್ತಿದೆ. ಒಂದು ಸಿಸ್ಟನ್ ಇದೆ. ಒಂದು ಕೆರೆ ಇದ್ದು ಮಳೆಗಾಲದಲ್ಲಿ ಮಾತ್ರ ತುಂಬುತ್ತದೆ. ಉಳಿದಂತೆ ಮಳೆಯನ್ನೇ ನಂಬಿದ್ದಾರೆ. ವಾರ್ಷಿಕವಾಗಿ ೫೭೪ ಮಿ.ಮೀ. ಮಳೆ ಬಿಳುತ್ತಿದ್ದು ಬಿಸಿಲು ೩೭ ಡಿ.ಸೆಂ. ಚಳಿ ೧೩ ಡಿ.ಸೆಂ. ಆಗಿದೆ. ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭೆ, ಹಂದನಕೆರೆ ಜಿಲ್ಲಾ ಪಂಚಾಯಿತಿ ಬರಗೂರು ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ಶಿಕ್ಷಣ ಸಾರಿಗೆ ಪಡಿತರ ನರುವಗಲ್ ಗ್ರಾಮಕ್ಕೆ ಹೋಗಬೇಕಾಗಿದೆ. ರಾಗಿ ಮುದ್ದೆ, ಅನ್ನ, ಮುಖ್ಯ ಆಹಾರ, ಪಾಯಸ, ಹೋಳಿಗೆ, ಬಳಸುತ್ತಾರೆ. ಕೃಷಿ ಇಲ್ಲಿನ ಪ್ರಧಾನ ಕಸುಬು ರಾಗಿ, ಭತ್ತ, ಹೆಸರು ಬೆಳೆಯುತ್ತಾರೆ. ಸಾಂಪ್ರದಾಯಕ ಎತ್ತಿನ ಗಾಡಿಗಳಿವೆ.

ದ್ವಿಚಕ್ರವಾಹನಗಳ ಬಳಕೆಯಿದೆ. ತೆಂಗು, ಅಡಿಕೆ, ವ್ಯಾಪಾರಿ ಬೆಳೆಗಳಾಗಿವೆ. ಗ್ರಾಮದಲ್ಲಿ ದುರ್ಗಮ್ಮನ ಜಾತ್ರೆಗೆ ವಿಶೇಷವಾಗಿ ಇಲ್ಲಿಂದ ಆರತಿ, ಬಾನ ಹೋಗುತ್ತದೆ. ಬಸವಣ್ಣ ದೇವರ ಉತ್ಸವವಲ್ಲಿ ಗ್ರಾಮದ ಜನರು ಬಾಗಿಯಾಗುತ್ತದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಧವಾ, ವೇತನಗಳ ಫಲಾನುಭವಿಗಳಿದ್ದಾರೆ. ಗ್ರಾಮದ ಸಾಕ್ಷರತೆ ೭೬೧% ರಷ್ಟಿದೆ. ಸಣ್ಣ ಪುಟ್ಟ ಕಾಯಿಲೆಗೆ ಸ್ಥಳೀಯರಾಗಿ ಚಿಕಿತ್ಸೆ, ಆಶಾಕಾರ್ಯ ಕರ್ತೆಯರಿಂದ ಪಡೆಯುವ ಹೆಚ್ಚಿನ ಚಿಕಿತ್ಸೆಗೆ ಹಂದನಕೆರೆ ಹುಳಿಯಾರ್‌ಗೆ ಹೋಗುತ್ತಿದ್ದಾರೆ. ಯುಗಾದಿ, ದೀಪಾವಳಿ, ದಸರಾ, ಹಬ್ಬಗಳನ್ನು ಆಚರಿಸುತ್ತಾರೆ.

## ನಂದಿಹಳ್ಳಿ

ನಂದಿಹಳ್ಳಿ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೫ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೯೫.೩೫ ಹೆಕ್ಟೇರ್ ಇದೆ. ೫೩.೨ ಹೆಕ್ಟೇರ್ ಕೃಷಿ ಭೂಮಿಯಾಗಿದೆ. ಈ ಗ್ರಾಮಕ್ಕೆ ನಂದಿಹಳ್ಳಿ ಗೊಲ್ಲರಹಟ್ಟಿ ಸೇರ್ಪಡೆಯಾಗಿದೆ. ನಂದೀಬಸವೇಶ್ವರ ದೇವಾಲಯವಿರುವುದರಿಂದ ಗ್ರಾಮಕ್ಕೆ ನಂದೀಹಳ್ಳಿ ಎಂಬ ಹೆಸರು ಬಂದಿದೆ ಶಿವನ ಹೆಸರಲ್ಲಿ ಬಸವನ ಸಂಕೇತವಾಗಿ ನಂದಿಹಳ್ಳಿ ಎಂದು ಕರೆಯಲಾಗಿದೆ.

ಮರಳು ಮಿಶ್ರಿತ ಕೆಂಪು-ಬಿಳಿ ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ.

ಕಾಡು ಪ್ರಾಣಿಗಳಾದ ಕರಡಿ, ತೋಳ, ನರಿ ಹಾಗೂ ಕಾಡು ಪಕ್ಷಿಗಳಾದ ನವಿಲು ಗಿಳಿ, ಕೋಗಿಲೆ ಹದ್ದುಗಳನ್ನು ಕಾಣಬಹುದು.

ಸಾಕು ಪ್ರಾಣಿಗಳಾದ ಹಸು ಎಮ್ಮೆ ಕುರಿ ಮೇಕೆಗಳನ್ನು ಗ್ರಾಮಸ್ಥರು ಸಾಕುತ್ತಾರೆ. ಹಸುಗಳಲ್ಲಿ ಮಿಶ್ರತಳಿಗಳಾದ ಜೆರ್ಸಿ. ಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿದೆ. ಎಮ್ಮೆಗಳ ಸಾಕಾಣಿ ಜೊತೆಗೆ ಕುರಿ-ಆಡುಗಳ ಸಾಕಾಣಿಯು ರೂಢಿಯಲ್ಲಿದೆ. ಹಾಗೂ ಸಾಕು ಪಕ್ಷಿಯಾದ ಕೋಳಿಯನ್ನು ಸಾಕಲಾಗಿದೆ. ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆ ಕಾಲದಲ್ಲಿ ೩೪ ಡಿ.ಸೆಂ.- ೩೬ ಡಿ.ಸೆಂ. ಬಿಸಿಲಿನ ತಾಪವಿರುತ್ತದೆ. ಹಾಗೂ ಚಳಿಗಾಲದಲ್ಲಿ ೧೦ ಡಿ.ಸೆಂ. - ೧೩ ಡಿ.ಸೆಂ. ಚಳಿಯಿರುವ ಹವಾಮಾನವಿರುತ್ತದೆ.

ಈ ಗ್ರಾಮಕ್ಕೆ ಹೊಂದಿಕೊಂಡಿರುವ ಸುವರ್ಣಮುಖಿ ಕಾಲುವೆ ಹೊಂದಿದ್ದು ಮಳೆಗಾಲದಲ್ಲಿ ಹೆಚ್ಚು ಮಳೆ ಬಂದರೆ ಮಾತ್ರ ತುಂಬಿ ಹರಿಯತ್ತದ ಕೆರೆಯನ್ನು ಸಹ ಕಾಣಬಹುದು.

ಬೆರಳೆಣಿಕೆಯಷ್ಟು ತೆರೆದ ಬಾವಿಗಳಿದ್ದು ಕೆಲವು ಬಾವಿಗಳು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯ್ತಿವತಿಯಿಂದ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್ ಮಿನಿ ಟ್ಯಾಂಕ್ ಮತ್ತು ಕೋಳಾಯಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕೈ ಪಂಪುಗಳಿದ್ದು ವಿದ್ಯುತ್ ಅನಿವಾರ್ಯತೆಯಲ್ಲಿ ನೀರಿನ ಹೊರತೆಗಳಾಗಿವೆ. ಕುರುಬ, ಉಪ್ಪಾರ ಸಮುದಾಯವೇ ಪ್ರಧಾನವಾಗಿದ್ದು, ಮಡಿವಾಳ, ಕಮ್ಮಾರ ಕಿರು ಸಮುದಾಯವಾಗಿದೆ. ಕನ್ನಡ ಪ್ರಮುಖ ಭಾಷೆಯಾಗಿದೆ.

ಒಟ್ಟು ೩೭೭ ಮನೆಗಳನ್ನು ೨೦೧೧ ರ ಜನಗಣತಿಯ ಪ್ರಕಾರ ೧೫೮೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ವಿವಿಧ ಮನೆಯ

ಪ್ರಕಾರಗಳಿದ್ದು ಅವುಗಳಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಹಾಗೂ ಗುಡಿಸಿಲಿನಲ್ಲಿ ನೆಲೆಸಿರುವ ಕೆಲ ಕುಟುಂಬಗಳನ್ನು ಕಾಣಬಹುದು.

೧೨೫ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ. ಸರ್ಕಾರದ ಯೋಜನೆಗಳಾದ ಜನತಾ ಆಶ್ರಯ ಅಂಬೇಡ್ಕರ್ ಹಾಗೂ ಇಂದಿರಾ ಅವಾಸ್ ಯೋಜನೆಯ ಫಲಾನುಭವಿಗಳ ೬೭ ಮನೆಯನ್ನು ಕಾಣಬಹುದು ಪ್ರಮುಖವಾಗಿ ರಾಗಿಮುದ್ದೆ, ಅನ್ನ, ರೊಟ್ಟಿ, ಹಾಗೂ ಹಬ್ಬಗಳಲ್ಲಿ ವಿಶೇಷವಾಗಿ ಹೋಳಿಗೆ, ಪಾಯಸ, ಬಾಡೂಟ, ತಯಾರಿಸುತ್ತಾರೆ.

ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಗಳ ಜೊತೆಗೆ ಆಧುನಿಕ ವಾಹನಗಳಾದ ಟ್ರಾಕ್ಟರ್, ಕಾರು ಬೈಕು ಕಾಣಬಹುದು.

ಕೃಷಿ ಇಲ್ಲಿನ ಪ್ರಮುಖ ಕಸುಬಾಗಿದ್ದರೂ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ ರಾಗಿ ಪ್ರಮುಖ ಆಹಾರ ಬೆಳೆಯಾಗಿದ್ದು, ಉಪಬೆಳೆಗಳಾದ ಜೋಳ, ದ್ವಿದಳ ಧಾನ್ಯಗಳು ಹಾಗೂ ತೋಟಗಾರಿಕೆ ಬೆಳೆಯಾದ ತೆಂಗನ್ನು ಕಾಣಬಹುದು.

ಸಾಂಪ್ರದಾಯಿಕ ಹೈನುಗಾರಿಕೆ ಮತ್ತು ಡೈರಿ ವ್ಯವಸ್ಥೆಯಿಂದ ಗ್ರಾಮದ ಆರ್ಥಿಕ ಸ್ಥಿತಿಯಲ್ಲಿ ಚೇತರಿಕೆ ಕಾಣುತ್ತಿವೆ.

ಸಣ್ಣ ಕೈಗಾರಿಕೆಯಾದ ಇಟ್ಟಿಗೆ ಕಾರ್ಖಾನೆಯನ್ನು ಕಾಣಬಹುದು. ಹುಳಿಯಾರು ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನ ಸಭಾಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಹುಳಿಯಾರು ಜಿಲ್ಲಾ ಪಂಚಾಯ್ತಿಕ್ಷೇತ್ರ, ತಿಮ್ಲಾಪುರ ತಾಲ್ಲೂಕು ಪಂಚಾಯ್ತಿಯಾಗಿದೆ. ಈ ಗ್ರಾಮವು ತಿಮ್ಲಾಪುರ ಗ್ರಾಮ ಪಂಚಾಯ್ತಿಗೆ ಒಳಪಟ್ಟಿದು ನಾಲ್ವರು ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ.

ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಹೆಚ್ ಸಂಪರ್ಕವನ್ನು ಕಾಣಬಹುದು.

ಭುವನೇಶ್ವರಿ, ರೇಣುಕಾ ಸ್ತ್ರೀಶಕ್ತಿ ಸಂಘಗಳು, ನಂದಿನಿ, ಬಸವೇಶ್ವರ, ಮಾರುತಿ ಮಹಿಳಾ ಸ್ವಸಹಾಯ ಸಂಘಗಳು ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು ಉಳಿತಾಯ ಸಾಲ ಸೌಲಭ್ಯಗಳನ್ನು ಪಡೆದಿದ್ದಾರೆ.

ಅಂಗನವಾಡಿ ಕೇಂದ್ರ ಹಿರಿಯ ಪ್ರಾಥಮಿಕ ಶಾಲೆ ಪ್ರೌಢಶಾಲೆಯಿದ್ದು ಮಕ್ಕಳಿಗೆ ಸರ್ಕಾರದ ವತಿಯಿಂದ ಬಿಸಿಯೂಟ ಕ್ಷೀರಭಾಗ್ಯ, ಶೌಚಾಲಯದ ವ್ಯವಸ್ಥೆಯನ್ನು ಕಾಣಬಹುದು ಶೇ೭೪ ಸಾಕ್ಷರತೆ ಇದೆ.

ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲ ಚೇತನ, ವಿಧವಾ ವೇತನ ಪಡೆಯುತ್ತಿರುವ ೪೧ ಫಲಾನುಭವಿಗಳಿದ್ದಾರೆ. ಐತಿಹಾಸಿಕ ನೆಲೆಯಾದ ಶ್ರೀ ನಂದಿ ಬಸವೇಶ್ವರ ದೇಗುಲವಿದೆ.

ನಂದಿ ಬಸವೇಶ್ವರ, ಶನೇಶ್ವರ, ಈಶ್ವರ, ಆಂಜನೇಯ ರೇಣುಕಾಯಲ್ಲಮ್ಮ ಪ್ರಮುಖ ದೇವಾಲಯಗಳು ಯುಗಾದಿ ದೀಪಾವಳಿ, ಶಿವರಾತ್ರಿ, ಗೌರಿ–ಗಣೇಶ ಹಬ್ಬಗಳನ್ನು ಗ್ರಾಮಸ್ಥರು ಸಡಗರದಿಂದ ಆಚರಿಸುತ್ತಾರೆ.

ಬಸವೇಶ್ವರ ಜಾತ್ರೆ ತೇರು–ತೆಪ್ಪ ಪಲ್ಲಕ್ಕಿ, ಕರಗ ಇಲ್ಲಿನ ವಿಶೇಷ ಆಕರ್ಷಣೆ ಸಿಪಿ, ಓಕುಳಿ, ಚಾಲ್ತಿಯಲ್ಲಿದೆ. ಸೋಬಾನೆಪದದ ದೇವಮ್ಮ, ಮಲ್ಲಮ್ಮ, ಡೊಳ್ಳುಕುಣಿತದ ಕೃಷ್ಣಮೂರ್ತಿ ನಾಟಕದ ಕಲಾವಿದ ರಾಜಣ್ಣ, ಭಜನೆಯ ರೇವಣ್ಣ ಪ್ರಮುಖರ ಜಿಲ್ಲಾ ಮುಖ್ಯರಸ್ತೆ ಹೊಂದಿದ್ದು, ಖಾಸಗಿ ಬಸ್ ಆಟೋರಿಕ್ಷಾ ಸ್ವಂತ ವಾಹನಗಳು ಪ್ರಮುಖ ಸಾರಿಗೆ ಸಂಪರ್ಕವಾಗಿದೆ.

## ನಂದಿಹಳ್ಳಿ ಎ.ಕೆ.ಕಾಲೋನಿ

ನಂದಿಹಳ್ಳಿ ಎ.ಕೆ. ಕಾಲೋನಿಯು, ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೫ ಕಿ.ಮೀ. ದೂರದಲ್ಲಿದೆ. ಆದಿದ್ರಾವಿಡ ಜನಾಂಗದ ೩೭ ಮನೆಗಳು ಪ್ರತ್ಯೇಕವಾಗಿದ್ದು ಹೊಲೆಯರ ಹಟ್ಟಿ ಎಂದೇ ಕರೆಯುತ್ತಾರೆ. ಹೆಂಚಿನ, ಸೀಟಿನ, ಸ್ವರೂಪದ ಇಲ್ಲಿನ ಮನೆಗಳು ಆಶ್ರಯ ಅಂಬೇಡ್ಕರ್ ವಸತಿ ಯೊಜನೆಯ ಫಲಾನುಭವಿಗಳಿದ್ದಾರೆ. ಕುಡಿಯಲು ಗ್ರಾಮಪಂಚಾಯಿತಿ ವತಿಯಿಂದ ಕೊಳವೆ ಬಾವಿಗಳ ಮೂಲಕ ನೀರು ಪೂರೈಸಲಾಗುತ್ತಿದೆ. ರೈತಾಪಿ ಬದುಕು ಇಲ್ಲಿ ಮುಖ್ಯವಾಗಿದ್ದು, ರಾಗಿ, ಭತ್ತ, ಜೋಳ ಬೆಳೆಯುತ್ತಾರೆ. ಹಸು, ಎಮ್ಮೆ, ಕುರಿ, ಸಾಕು ಪ್ರಾಣಿಗಳಾಗಿವೆ. ತೆಂಗು, ಹೊಂಗೆಬೀಜ, ಹುಣಸೆಹಣ್ಣು, ವ್ಯಾಪಾರಿ ಸರಕಾಗಿದೆ. ಪಡಿತರ, ಶಿಕ್ಷಣ ವ್ಯವಸ್ಥೆ ನಂದಿಹಳ್ಳಿ ಮುಖ್ಯ ಗ್ರಾಮದಿಂದ ಪಡೆಯುತ್ತಿದ್ದಾರೆ. ತಿಮ್ಲಾಪುರ ಗ್ರಾಮ ಪಂಚಾಯಿತಿಗೆ ಸೇರಿದ್ದು, ಹುಳಿಯಾರು ಜಿಲ್ಲಾ ಪಂಚಾಯಿತಿಗೆ ಸೇರಿದೆ. ಗ್ರಾಮದ ಸಾಕ್ಷರತೆ ೬೨% ರಷ್ಟಿದೆ. ಗ್ರಾಮದಲ್ಲಿ ರೇಣುಕಮ್ಮ ಯಲ್ಲಮ್ಮ, ದೇವಾಲಯವಿದೆ. ಆಂಜನೇಯನಿಗೆ ಆರತಿ ಮಾಡುವುದು ವಾಡಿಕೆಯಲ್ಲಿದೆ. ರೇಣುಕಾ ಯಲ್ಲಮ್ಮನಿಗೆ ಆರತಿ, ಬಾನ ಬ್ಯಾಟೆ ಹರಕೆ ಸಂಪ್ರದಾಯವಿದೆ. ಹಗಲು ಪರಿಸೆ, ರಾತ್ರಿ ಪರಿಸೆ ನಡೆಯುತ್ತದೆ. ಎತ್ತಿನ ಗಾಡಿಗಳ ಜೊತೆಗೆ ದ್ವಿಚಕ್ರವಾಹನಗಳು ಬಳಕೆಯಿದೆ. ಟ್ರಾಕ್ಟರ್‌ಗಳು ಇವೆ. ಚಿಕ್ಕನಾಯಕನಹಳ್ಳಿ ಹುಳಿಯಾರಿಗೆ ಸಾರಿಗೆ ಸೌಲಭ್ಯವಿದೆ. ಸಮುದಾಯ ಸೌಲಭ್ಯಗಳಾದ

ವೃದ್ಧಾಪ್ಯವೇತನ, ವಿಧವಾ ವೇತನದ ಫಲಾನುಭವಿಗಳಿದ್ದು, ಶಿಕ್ಷಣಸಾರಿಗೆ ಕಂದಾಯ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರಿದ್ದಾರೆ. ಯುಗಾದಿ ದೀಪಾವಳಿ, ದಸರಾ, ಕಾರಹಬ್ಬ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ನಂದಿಹಳ್ಳಿ ಗೊಲ್ಲರಹಟ್ಟಿ

ನಂದಿಹಳ್ಳಿ ಗೊಲ್ಲರಹಟ್ಟಿಯು ಚಿಕ್ಕನಾಯಕನಹಳ್ಳಿ ತಾ. ಕೇಂದ್ರದಿಂದ ೩೬ ಕಿ.ಮೀ. ದೂರದಲ್ಲಿದ್ದು, ನಂದಿಹಳ್ಳಿಯ ಮಜರೆ ಗ್ರಾ. ಕಾಡುಗೊಲ್ಲರ ಒಟ್ಟು ೩೫ ಮನೆಗಳಿದ್ದು ಇವು ಹೆಂಚಿನ, ಸೀಟಿನ, ಮಾಳಿಗೆಯ ಸ್ವರೂಪದಲ್ಲಿವೆ. ಕೆಲವು ವಸತಿ ಯೋಜನೆಯಾದ ಜನತಾ, ಆಶ್ರಮ ಯೋಜನೆಯ ಫಲಾನುಭವಿಗಳಿದ್ದಾರೆ. ಕುಡಿಯಲು ನಂದಿಹಳ್ಳಿ ಮುಖ್ಯ ಗ್ರಾಮದ ಹೆಸರಲ್ಲಿ ಗ್ರಾಮ ಪಂಚಾಯಿತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತದೆ. ಒಂದು ಕೊಳವೆ ಬಾವಿ ಇದ್ದು, ಒಂದು ಸಿಸ್ಟನ್ ಇದೆ. ಕೃಷಿ ಇಲ್ಲಿನ ಮುಖ್ಯ ಕಸುಬಾಗಿದ್ದು, ರಾಗಿ, ಹೆಸರು, ಹುರುಳಿ, ಅವರೆ ಬೆಳೆಯುತ್ತಾರೆ. ತೆಂಗಿನ ತೋಟಗಾರಿಕೆ ಇದ್ದು ಕೊಬ್ಬರಿ, ತೆಂಗಿನ ಚಿಪ್ಪು, ಗರಿಕಡ್ಡಿ ಬಳಸುತ್ತಾರೆ.

ಕುರಿ ಪೋಷಣೆ ಇಲ್ಲಿನ ಮುಖ್ಯ ಉದ್ಯೋಗ ಕುರಿಗಳೊಂದಿಗೆ ಹುಲ್ಲು ನೀರಿಗಾಗಿ ವಲಸೆ ಹೋಗುವುದು ಸಹಜವಾಗಿದೆ. ೧೯೩ ಜನಸಂಖ್ಯೆ ಹೊಂದಿದ್ದು, ಇನ್ನೊಂದು ಶೌಚಾಲಯ ರಹಿತ, ಬಯಲು ಶೌಚಾಲಯ ಹೊಂದಿರುವ ಗ್ರಾಮವಾಗಿದೆ. ಶಿಕ್ಷಣ ಪೋಲಿಸ್ ಇಲಾಖೆಯ ಮೂವರು ಸರ್ಕಾರಿ ನೌಕರರಿದ್ದಾರೆ. ರಂಗಪ್ಪ, ಚಿತ್ರದೇವರ ಸಂಘವಿದೆ. ಸ್ತ್ರೀಶಕ್ತಿ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಭನೆಗೆ ಸಹಕಾರಿಯಾಗಿದೆ. ಎತ್ತಿನ ಗಾಡಿಗಳಿವೆ. ದ್ವಿಚಕ್ರವಾಹನ ಬಳಸುತ್ತಾರೆ. ತಿಮ್ಲಾಪುರ ಗ್ರಾಮ ಪಂಚಾಯಿತಿಗೆ ಒಳಪಟ್ಟಿದ್ದು, ಒಬ್ಬರು ಪಂಚಾಯಿತಿ ಪ್ರತಿನಿಧಿ ಇದ್ದಾರೆ. ಒಂದು ಅಂಗನವಾಡಿ ಕೇಂದ್ರವಿದೆ. ಶಿಕ್ಷಣಕ್ಕೆ ನಂದಿಹಳ್ಳಿಗೆ ಹೋಗುತ್ತದೆ. ನಂದಿಹಳ್ಳಿಯಿಂದ ಪಡಿತರ ಅಂಚೆ ವ್ಯವಸ್ಥೆ ಇದೆ. ರಂಗನಾಥ ದೇವಾಲಯ ಇದೆ. ದಸರಾ ಹಬ್ಬದೊಂದು ವಿಶೇಷ ಉತ್ಸವ ಹೊರಡುತ್ತದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನಗಳ ೬ ಫಲಾನುಭವಿಗಳಿದ್ದಾರೆ. ನಂದಿಹಳ್ಳಿ ಬಸವಣ್ಣ ದೇವರಿಗೆ ಆರತಿ ಪೂಜೆ ಮಾಡುತ್ತಾರೆ. ಯುಗಾದಿ, ದೀಪಾವಳಿ, ದಸರಾ ಶಿವರಾತ್ರಿ, ಹಬ್ಬಗಳನ್ನು ಆಚರಿಸುತ್ತಾರೆ. ದೀಪ ಏರಿಸುವ ಆಚರಣೆ ಇದೆ. ರಾಗಿ ಮುದ್ದೆ, ಮುಖ್ಯ ಆಹಾರ, ಬಾಡೂಟ ಪಾಯಸ, ಹೋಳಿಗೆ ಸಾಂದರ್ಭಿಕವಾಗಿ ಬಳಸುತ್ತಾರೆ. ಸಮೀಪದಲ್ಲಿ ನಂದಹಳ್ಳಿ ಕೆರೆ, ಸುವರ್ಣಮುಖಿ ನದಿ ಹರಿಯುತ್ತವೆ. ಮಳೆಗಾಲದಲ್ಲಿ ಮಾತ್ರ ನೀರು ಇರುತ್ತದೆ. ಹುಳಿಯಾರು ಜಿಲ್ಲಾ ಪಂಚಾಯಿತಿ ರಸ್ತೆ ಇದೆ.

## ನಾಗೇನಹಳ್ಳಿ

ನಾಗೇನಹಳ್ಳಿಯು ಜೆ.ಸಿ. ಪುರ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಒಂದು ಕಂದಾಯ ಗ್ರಾಮ ತಾ. ಸ್ಥಳದಿಂದ ದಕ್ಷಿಣಕ್ಕೆ ೧೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೮.೧೩ ಎಕರೆಯಾಗಿದೆ. ಇದೊಂದು ಬಯಲುನಾಡಿನಲ್ಲಿ ಬರುವ ಗ್ರಾಮ. ಇಲ್ಲಿ ಬಿಳಿಕಲ್ಲು, ಬಿಳಿಮಣ್ಣು, ಕಂಡುಬರುತ್ತದೆ. ಈ ಸುತ್ತಾ, ನರಿ, ತೋಳ, ಮೊಲ ಇತ್ಯಾದಿ ಪ್ರಾಣಿಗಳು, ಕಾಗೆ, ಗುಬ್ಬಚ್ಚಿ, ಉಣ್ಣೆಗೊರವ, ಮರಕುಟಿಗ, ಸೋಬಾನದಹಕ್ಕಿ, ಇತ್ಯಾದಿ ಪಕ್ಷಿಗಳು ಕಂಡುಬರುತ್ತವೆ. ಹಸು, ಎತ್ತು, ಎಮ್ಮೆ, ಕುರಿ, ಮೇಕೆಗಳನ್ನು ಸಾಕುತ್ತಾರೆ. ಇಲ್ಲಿ ೫೩೧.೨ ಮಿ.ಮೀ.ನ ಆಸುಪಾಸು ಮಳೆ ಬಿದ್ದ ದಾಖಲೆ ಇದೆ. ೧೫-೨೦ ಚಳಿಯೂ, ೨೬-೩೬ ಡಿ.ಸೆಂ. ಬಿಸಿಲೂ ಇಲ್ಲಿ ಕಂಡುಬರುತ್ತದೆ. ಗ್ರಾಮದಲ್ಲಿ ಒಂದು ತೆರೆದ ಬಾವಿ ಇದ್ದು, ನೀರುರುವುದಿಲ್ಲ. ೫ ಕೊಳವೆಬಾವಿಗಳಿವೆ.

ಲಿಂಗಾಯುತ ಜನಾಂಗದವರಾಗಿದ್ದಾರೆ. ಕನ್ನಡ ಭಾಷೆಯನ್ನು ಬಳಸುತ್ತಾರೆ. ಒಟ್ಟು ೮೮ ಜನಸಂಖ್ಯೆಯನ್ನು ಗ್ರಾಮ ಹೊಂದಿದೆ. ಒಟ್ಟಾರೆ ೨೨ ಮನೆಗಳಿದ್ದು, ಅವರಲ್ಲಿ ಒಂದು ಕಾಂಕ್ರೀಟ್ ಮನೆ ಉಳಿದವುಗಳನ್ನು ಕಲ್ಲು ಹಾಗೂ ಮಣ್ಣು ಬಳಸಿ ಕಟ್ಟಿದ್ದಾರೆ. ಮೇಲ್ಚಾವಣಿಗೆ ಕಪ್ಪು ಹಾಗೂ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಇಲ್ಲಿಯ ಜನರ ಮುಖ್ಯ ಆಹಾರ ರಾಗಿಮುದ್ದೆ, ಉಪ್ಪಿಟ್ಟು, ಚಿತ್ರಾನ್ನ ಇಡ್ಲಿ, ದೋಸೆ ಇತ್ಯಾದಿಗಳನ್ನು ಅಮುಖ್ಯ ಆಹಾರಗಳನ್ನು ಪಾಯಸ, ಹೋಳಿಗೆ ವಿಶೇಷವಾಗಿ ಆಹಾರವಾಗಿ ಬಳಸುತ್ತಾರೆ. ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನಗಾಡಿ ಬೈಸಿಕಲ್, ಜೊತೆಗೆ ಆಧುನಿಕ ಟ್ರಾಕ್ಟರ್, ಬೈಕುಗಳು ಇವೆ. ರಸ್ತೆ ಸಂಪರ್ಕ ಇದೆ.

ಇಲ್ಲಿನ ಬಹುತೇಕ ಜನರ ವೃತ್ತಿ ಕೃಷಿ ಆಗಿದ್ದು ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಆಹಾರ ಬೆಳೆಯಲ್ಲಿ ಇದೇ ಆಗಿದೆ. ಉಪಬೆಳೆಯಾಗಿ ಹುರಳಿ, ಹೆಸರು, ಉದ್ದು, ತೊಗರಿ ಹರಳು, ಎಳ್ಳು, ಇತ್ಯಾದಿ ಬೆಳೆಯುತ್ತಾರೆ. ತೆಂಗು ಮತ್ತು ಅಡಿಕೆ ಇಲ್ಲಿನ ವಾಣಿಜ್ಯ ಬೆಳೆಗಳು ೩ ಜನ ಶಿಕ್ಷಕರು, ಒಬ್ಬರು ಇಂಜಿನಿಯರ್, ಪೋಲಿಸ್ ಇಲಾಖೆಯಲ್ಲಿ ಒಬ್ಬರು, ಪದವಿ ಕಾಲೇಜಿನಲ್ಲಿ ಒಬ್ಬರು ಪ್ರಾಧ್ಯಾಪಕರು ಹೀಗೆ ೬ ಜನ ಸರ್ಕಾರಿ ಉದ್ಯೋಗಿಗಳಿದ್ದಾರೆ.

ಶೆಟ್ಟಿಕೆರೆ ಹೋಬಳಿ ತುಮಕೂರು ಲೋಕಸಭಾ ವ್ಯಾಪ್ತಿಯಲ್ಲಿ ಚಿಕ್ಕನಾಯಕನಹಳ್ಳಿ ವಿಧಾನ ಸಭಾ ವ್ಯಾಪ್ತಿಯಲ್ಲಿ ಶೆಟ್ಟಿಕೆರೆ ಜಿಲ್ಲಾಪಂಚಾಯತ್ ಜೆ.ಸಿ. ಪುರ ಗ್ರಾಮ ಹಾಗೂ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಯಲ್ಲಿ ಇದೆ. ಸಂಚಾರಕ್ಕಾಗಿ ರಸ್ತೆ ಮಾರ್ಗ ಇದೆ. ಸಂಪರ್ಕಕ್ಕಾಗಿ ಎಲ್ಲರೂ ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಗ್ರಾಮದಲ್ಲಿ ಸ್ತ್ರೀಶಕ್ತಿ ಸಂಘಗಳಿವೆ. ಶೇ.೭೫ ರಷ್ಟು ಜನ ಸಾಕ್ಷರರಿದ್ದಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನ ಪಡೆಯುವ ೧೪ ಫಲಾನುಭವಿಗಳಿದ್ದಾರೆ. ಆಂಜನೇಯಸ್ವಾಮಿ ದೇವಾಲಯವಿದೆ. ಇವರು ಯುಗಾದಿ, ಮಹಾನವಮಿ ಶಿವರಾತ್ರಿ, ಗೌರ–ಗಣೇಶ, ಬಸವಜಯಂತಿ, ಕಾರಹಬ್ಬ, ಏಕಾದಶಿ ಇತ್ಯಾದಿ ಹಬ್ಬಗಳನ್ನು ಆಚರಿಸುತ್ತಾರೆ.

## ನವಿಲೆ

ಕುಪ್ಪೂರು ಕಂದಾಯ ಗ್ರಾಮದ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೬ ಕಿ.ಮೀ. ದೂರದಲ್ಲಿದೆ. ಹಿಂದೆ ನವಿಲುಗಳು ಈ ಗ್ರಾಮದ ಸುತ್ತ ಹೆಚ್ಚು ವಾಸಿಸುತ್ತಿದ್ದರಿಂದ ಈ ಹೆಸರು ಬಂದಿದೆ. ಈಗಲೂ ಇಲ್ಲಿ ನವಿಲುಗಳಿವೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೩೮.೩೧ ಚ.ಕಿ.ಮೀ. ಗಳೂ ಭೌಗೋಳಿಕವಾಗಿ ಬಯಲು ನಾಡಿಗೆ ಸೇರುತ್ತದೆ. ಇಲ್ಲಿ ಬಿಳಿಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಈ ಸುತ್ತಾ ನರಿ, ಮೊಲ, ತೋಳ ಮುಂತಾದವುಗಳು ಇವೆ. ನವಿಲು, ಗಿಳಿ, ಕಾಗೆ, ಗುಬ್ಬಚ್ಚಿ, ಸಾಂಬಾರ್ ಕಾಗೆ, ಬೆಳವನಹಕ್ಕಿ, ಪೊಡರೆಹಕ್ಕಿ, ಉಣ್ಣೆಗೊರವ ಇತ್ಯಾದಿ ಪಕ್ಷಿಗಳು ಕಾಣಬರುತ್ತವೆ. ಕೋಳಿಗಳನ್ನು ಕೆಲವರು ಸ್ವಂತಕ್ಕಾಗಿ ಸಾಕುತ್ತಾರೆ.

ಈ ಭಾಗದ ಹವಮಾನ ಗಮನಿಸಿದಾಗ ೧೫.೨೦ ಡಿ.ಸೆಂ. ಚಳಿಯೂ, ೨೬–೩೬ ಡಿ.ಸೆಂ. ಬಿಸಿಲೂ ಕಂಡುಬರುತ್ತದೆ. ೫೯೮.೩ ಮಿ.ಮೀ. ನ ಆಸುಪಾಸು ಮಳೆ ಬಿದ್ದ ದಾಖಲೆ ಇದೆ. ಕೆರೆ ಇದೆ. ಇದನ್ನು ನವಿಲೆಕೆರೆ ಎಂತಲೇ ಕರೆಯುತ್ತಾರೆ. ೪ ಕಟ್ಟೆಗಳು ಇವೆ. ತಿಪ್ಪೆಗುಂಡಿಕಟ್ಟೆ, ಗಂಜಲಗಟ್ಟೆ, ಹೊಸಕಟ್ಟೆ, ಹೊಸಕಟ್ಟೆ ೨ ಇವೆ. ಆ ನಾಲ್ಕು ಕಟ್ಟೆಗಳು ಇಲ್ಲಿ ಎರಡು ಹಳ್ಳಗಳಾದ ಕಲ್ಲೇನಹಳ್ಳಿ ಹಳ್ಳ ಕಾರೇಹಳ್ಳಿ ಹಳ್ಳಗಳು ಹರಿಯುತ್ತವೆ. ಗ್ರಾಮದಲ್ಲಿ ಎರಡು ತೆರೆದ ಬಾವಿಗಳಿವೆ. ನಾಲ್ಕು ಕೈ ಪಂಪುಗಳಿವೆ. ೧೨೦ ಕೊಳವೆಬಾವಿಗಳಿವೆ. ಕುಡಿಯುವ ನೀರಿಗಾಗಿ ೮ ಸಿಸ್ಟನ್‌ಗಳನ್ನು ಇಟ್ಟು, ೩೨ ನಲ್ಲಿಗಳನ್ನು ಅಳವಡಿಸಲಾಗಿದೆ.

ಸಾಮಾಜಿಕ ರಚನೆಯನ್ನು ಗಮನಿಸಿದ್ದು ವೀರಶೈವ ಸಮುದಾಯದವರು ಪ್ರಧಾನವಾಗಿದ್ದು, ಉಳಿದಂತೆ ನಾಯಕರು, ಮುಸ್ಲಿಂರು, ಮಡಿವಾಳರು, ದಾಸಪ್ಪಗಳು, ಆಚಾರ್ಯರು, ಸಣ್ಣ ಸಮುದಾಯದವರಾಗಿದ್ದಾರೆ. ಬಹುತೇಕರು ಕನ್ನಡ ಭಾಷೆ ಬಳಸುತ್ತಾರೆ. ಮುಸ್ಲಿಂರು ಮಾತ್ರ ಉರ್ದು ಮತ್ತು ಕನ್ನಡ ಎರಡನ್ನು ಬಳಸುತ್ತಾರೆ. ತೋಟದ ಓಣಿ, ಹೊಲದ ಓಣಿ ಎಂಬ ಎರಡು ಓಣಿಗಳು ಇಲ್ಲಿವೆ. ೪೨೫ ಜನಸಂಖ್ಯೆ ೧೨೮ ಮನೆಗಳಿದ್ದು ಅವುಗಳಲ್ಲಿ ೩ ಕಾಂಕ್ರೀಟ್ ಮನೆಗಳು, ಉಳಿದ ಮನೆಗಳನ್ನು ಕಲ್ಲು ಹಾಗೂ ಮಣ್ಣು ಬಳಸಿ ಕಟ್ಟಿದ್ದಾರೆ. ಮೇಲ್ಛಾವಣಿಗೆ ಕಪ್ಪು ಹಾಗೂ ಕೆಂಪು ಹೆಂಚನ್ನು ಹೊದಿಸಿದ್ದಾರೆ.

ಮುಖ್ಯ ಆಹಾರ ರಾಗಿಮುದ್ದೆ, ಅನ್ನ ಆಗಿದೆ. ಅಮುಖ್ಯ ಆಹಾರವಾಗಿ ದೋಸೆ, ಇಡ್ಲಿ, ಉಪ್ಪಿಟ್ಟು, ಚಿತ್ರಾನ್ನ, ರೊಟ್ಟಿ, ಬಳಸುತ್ತಾರೆ. ವಿಶೇಷ ಆಹಾರವಾಗಿ ಪಾಯಸ, ಹೋಳಿಗೆ, ಹಾಗೂ ಮಾಂಸಹಾರ ಸೇವಿಸುತ್ತಾರೆ. ಸಾಂಪ್ರದಾಯಿಕ ಎತ್ತಿನಗಾಡಿ, ಬೈಸಿಕಲ್ ಜೊತೆಗೆ, ಆಧುನಿಕ ವಾಹನಗಳಾದ ಟ್ರಾಕ್ಟರ್, ಕಾರು, ಬೈಕುಗಳು, ಇವೆ. ಗ್ರಾಮಕ್ಕೆ ರಸ್ತೆ ಹಾಗೂ ಚರಂಡಿ ವ್ಯವಸ್ಥೆ ಇದೆ.

ಕೃಷಿಯನ್ನು ಅವಲಂಬಿಸಿದ್ದಾರೆ. ಇವರು ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಆಹಾರ ಬೆಳೆಯೂ ಇದೆ ಆಗಿದೆ. ಉಪಬೆಳೆಗಳಾಗಿ ಹುರಳಿ, ಎಳ್ಳು, ಅವರೆ, ಹೆಸರು, ಉದ್ದು, ತೊಗರಿ, ಬೆಳೆಯುತ್ತಾರೆ. ತೆಂಗು ಹಾಗೂ ಅಡಿಕೆ ಬೆಳೆಗಳು ಇಲ್ಲಿನ ವಾಣಿಜ್ಯ ಹಾಗೂ ತೋಟಗಾರಿಕೆ ಬೆಳೆಗಳಾಗಿವೆ. ಗ್ರಾಮದ ಕೆರೆ ತುಂಬಿದಾಗ ಮಾತ್ರ ಮೀನು ಕೃಷಿ ಮಾಡುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ಇಲ್ಲಿನ ವ್ಯಾಪಾರಿ ಸರಕು ಶಿಕ್ಷಕರು ಅಭಿಯಂತರರು ಚಾಲಕ ನಿರ್ವಾಹಕರು ಸೇರಿದಂತೆ ಐವರು ಸರ್ಕಾರಿ ಉದ್ಯೋಗ ಪಡೆದಿದ್ದಾರೆ. ೧೫ ಕ್ಕೂ ಹೆಚ್ಚು ಜನ ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ದುಡಿಮೆ ಮಾಡುತ್ತಿದ್ದಾರೆ. ಗ್ರಾಮದ ಇಬ್ಬರೂ ಎರಡು ಇಟ್ಟಿಗೆ ಫ್ಯಾಕ್ಟರಿಗಳನ್ನು ನಡೆಸುತ್ತಿದ್ದಾರೆ. ಊರಿನಲ್ಲಿ ಬಡಗಿಗಳು ಕಮ್ಮಾರರು ಇದ್ದಾರೆ.

ಶೆಟ್ಟಿಕೆರೆ ಹೋಬಳಿ ತುಮಕೂರು ಲೋಕಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲೂ ಇದೆ. ಶೆಟ್ಟಿಕೆರೆ ಜಿಲ್ಲಾಪಂಚಾಯಿತಿ ವ್ಯಾಪ್ತಿಯಲ್ಲಿ ಕುಪ್ಪೂರು ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲೂ ಇದೆ. ಇಬ್ಬರು ಗ್ರಾಮಪಂಚಯ್ತಿಯಲ್ಲೂ ಸದಸ್ಯರಿದ್ದಾರೆ. ಒಬ್ಬರು ಪಂಚಾಯ್ತಿ ನೌಕರರಿದ್ದಾರೆ. ಗ್ರಾಮಕ್ಕೆ ರಸ್ತೆ ಸಂಪರ್ಕ ಇದೆ. ಜಿಲ್ಲಾ ಮುಖ್ಯ ರಸ್ತೆಯಾನ ಚಿಕ್ಕನಾಯಕನಹಳ್ಳಿಯಿಂದ ಮತಿಘಟ್ಟಕ್ಕೆ ರಸ್ತೆ ಹಾಯ್ದು

ಹೋಗುತ್ತದೆ. ಗ್ರಾಮದ ಎಲ್ಲರೂ ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ದೂರದರ್ಶಗಳಿಗೆ ಡಿ.ಟಿ.ಹೆಚ್. ಸಂಪರ್ಕ ಪಡೆದಿದ್ದಾರೆ.

ಶ್ರೀನಿಧಿ, ಶ್ರೀಲಕ್ಷ್ಮೀ, ಶ್ರೀದೇವಿ, ಚಿಕ್ಕಮ್ಮದೇವಿ, ಲಕ್ಷ್ಮೀದೇವಿ ಮುಂತಾದ ಸ್ತ್ರೀಶಕ್ತಿ ಸಂಘಗಳು ಹಾಗೂ ಇನ್ನಿತರ ಸ್ವಸಹಾಯ ಸಂಘಗಳು ಇವೆ. ಶೇ. ೮೦ ರಷ್ಟು ಸಾಕ್ಷರತೆ ಹೊಂದಿರುವ ಈ ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು, ಸರ್ಕಾರಿ ಮಾದರಿ ಪ್ರಾಥಮಿಕ ಪಾಠಶಾಲೆಯೂ ಇದೆ. ಶಾಲೆಯಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯ ವ್ಯವಸ್ಥೆ ಇದೆ. ಶಾಲೆಯಲ್ಲಿ ಬಿಸಿಯೂಟ, ಯೋಜನೆ ಕ್ಷೀರಭಾಗ್ಯ ಯೋಜನೆಗಳು ಚಾಲ್ತಿಯಲ್ಲಿವೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಧವಾ, ವಿಕಲಚೇತನ ವೇತನ ಪಡೆಯುವ ೨೮ ಫಲಾನುಭವಿಗಳಿದ್ದಾರೆ. ಒಂದು ಚಿಕ್ಕ ಹೋಟೆಲ್ ಇದೆ. ನಾಲ್ಕು ಚಿಕ್ಕ ಅಂಗಡಿಗಳು ಇವೆ. ಕೊಡಲಾಗರದ ನಂಜಪ್ಪ ಎಂಬೂವವರ ತೋಟದಲ್ಲಿ ಹಾಗೂ ಬೊಮ್ಮಯ್ಯನರ ರುದ್ರಯ್ಯ ಎಂಬುವವರ ತೋಟದಲ್ಲಿ ವೀರಗಲ್ಲುಗಳು ಇವೆ. ಅಲ್ಲದೆ ಬಸವೇಶ್ವರ ದೇವಾಲಯದ ಮುಂದೆಯೂ ಒಂದು ವೀರಗಲ್ಲು ಹಾಗೂ ಮಾಸ್ತಿಕಲ್ಲು ಇದೆ. ಇಲ್ಲೇ ಶಿಲಾಶಾಸನವೂ ಇದೆ. ಹಿಂದೆ ಇದ್ದ ಕೋಟೆ ಈಗ ಶಿಥಿಲವಾಗಿದೆ. ಮುಸ್ಲಿಂರಿಗಾಗಿ ಸ್ಮಶಾನ ಇದೆ.

ಮಲ್ಲೇಶ್ವರಸ್ವಾಮಿ ದೇವಾಲಯ, ತ್ರಿಲಿಂಗೇಶ್ವರ ದೇವಾಲಯ, ಬಸವೇಶ್ವರ ದೇವಾಲಯ, ವಿಘ್ನೇಶ್ವರ, ತಿಮ್ಮಪ್ಪಸ್ವಾಮಿ, ಆಂಜನೇಯಸ್ವಾಮಿ ಬಿಸಿಲುಮಲ್ಲೇಶ್ವರ, ಬೈರವೇಶ್ವರ, ವೇಣುಗೋಪಾಲ, ದೇವಾಲಯಗಳಿವೆ. ಮುಸ್ಲಿಂರಿಗಾಗಿ ಮಸೀದಿಯೂ ಇದೆ. ಊರಲ್ಲಿ ಬಸವೇಶ್ವರಸ್ವಾಮಿ ಜಾತ್ರೆ ಮಾಡುತ್ತಾರೆ. ಜಾತ್ರೆಯಲ್ಲಿ ಕೆಂಡ, ಉತ್ಸವ, ಆತರಿಬಾನ, ಮಾಡುತ್ತಾರೆ. ಗ್ರಾಮಸ್ಥರು ಯುಗಾದಿ, ಶಿವರಾತ್ರಿ, ಮಹಾನವಮಿ ಗೌರಿ-ಗಣೇಶ, ಮಾರಿಹಬ್ಬ, ಬಸವನಹಬ್ಬ ಇತ್ಯಾದಿ ಹಬ್ಬಗಳನ್ನು ಆಚರಿಸುತ್ತಾರೆ.

ತುಳಸಮ್ಮ ಎಂಬ ೬೫ ವರ್ಷ ವಯಸ್ಸಿನ ನಾಯಕ ಸಮುದಾಯದ ಮಹಿಳೆ ಚಿಕ್ಕಮ್ಮಜ್ಜಿ ಎಂಬ ಮಹಿಳೆಯರು ಸೋಬಾನೆ ಹಾಡುಗಳನ್ನು ಹಾಡುತ್ತಾರೆ. ಚಂದ್ರಯ್ಯ, ಶಂಕರಲಿಂಗಯ್ಯ, ಗಂಗಾಧರಯ್ಯ, ಮರುಳಪ್ಪ, ಮುಂತಾದವರು ಸೇರಿ ಭಜನಾತಂಡ ಮಾಡಿಕೊಂಡು ಭಜನೆ ಮಾಡುತ್ತಾರೆ. ಊರಲ್ಲಿ ರೈತ ಸಂಘ ಹಾಗೂ ಧರ್ಮಸ್ಥಳ, ಸಂಘಗಳು ಅಸ್ಥಿತ್ವದಲ್ಲಿವೆ.

## ನವಿಲೆ ಪಾಳ್ಯ

ನವಿಲೆ ಪಾಳ್ಯ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೭ ಕಿ.ಮೀ. ದೂರದಲ್ಲಿದೆ. ಇದು ನವಿಲೆ ಮುಖ್ಯ ಗ್ರಾಮಕ್ಕೆ ಸೇರಿದ ಜನ ವಸತಿ ಪ್ರದೇಶವಾಗಿದೆ. ನವಿಲೆ ಗ್ರಾಮದ ಉಪಗ್ರಾಮವಾದುದರಿಂದ ನವಿಲೆ ಪಾಳ್ಯ ಎಂದು ಕರೆಯುತ್ತಾರೆ. ನಾಯಕ, ವಕ್ಕಲಿಗ, ಅಗಸ, ಜನಾಂಗಕ್ಕೆ ಸೇರಿದ ೪೭ ಮನೆಗಳಿದ್ದು, ೧೯೩ ಜನಸಂಖ್ಯೆಯನ್ನು ಹೊಂದಿದೆ. ಈ ಮನೆಗಳು ಕಲ್ಲಿನ, ಹೆಂಚಿನ, ಸೀಟಿನ, ಸ್ವರೂಪದಲ್ಲಿದ್ದು, ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಜನತಾ ಇಂದಿರಾ, ಅವಾಸ್ ಯೋಜನೆ ಹಾಗೂ ಉಚಿತ ವಿದ್ಯುತ್ ಯೋಜನೆಯ ಫಲಾನುಭವಿಗಳಿದ್ದಾರೆ. ಇವರ ಮುಖ್ಯ ಆಹಾರ ರಾಗಿಮುದ್ದೆ ಅನ್ನವಾಗಿದ್ದು, ಸಾಂದರ್ಭಿಕವಾಗಿ ಬಾಡೂಟ, ಪಾಯಸ ಹೋಳಿಗೆ ಬಳಸುತ್ತಾರೆ. ೧೦ ಮನೆಯಲ್ಲಿ ಶೌಚಾಲಯದ ಬಳಕೆ ಇದೆ. ರಾಗಿ, ಹೆಸರು, ಜೋಳ, ಹುರುಳಿ, ಮುಖ್ಯ ಬೆಳೆ ತೋಟಗಾರಿಕೆ ಬೆಳೆಯಾಗಿ ತೆಂಗನ್ನು ಬೆಳೆಯುತ್ತಾರೆ. ಹೈನುಗಾರಿಕೆ ಇದ್ದು, ಹಸು ಎಮ್ಮೆ, ಕುರಿಗಳನ್ನು ಸಾಕಿದ್ದಾರೆ. ಶಿಕ್ಷಣ, ಸಾರಿಗೆ, ಕೆ.ಇ.ಬಿ. ಇಲಾಖೆಗಳಿಗೆ ಸೇರಿದ ೪ ಜನ ಸರ್ಕಾರಿ ನೌಕರಿದ್ದಾರೆ. ಒಂದು ಪ್ರಾಥಮಿಕ ಶಾಲೆಇದ್ದು, ಅಂಗನವಾಡಿ ಕೇಂದ್ರವಿದೆ. ಶಾಲೆಯಲ್ಲಿ ಮಕ್ಕಳಿಗೆ ಬಿಸಿಯೂಟ, ಕ್ಷೀರಭಾಗ್ಯ ಶೌಚಾಲಯದ ಸೌಲಭ್ಯವಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಧವಾ ವೇತನ, ೬ ಫಲಾನುಭವಿಗಳಿದ್ದಾರೆ. ಕರಿಯಮ್ಮ, ಲಕ್ಷ್ಮೀದೇವಿ ಸ್ವಸಹಾಯ ಸಂಘಗಳಿವೆ. ಕುಪ್ಪೂರು ಗ್ರಾಮ ಪಂಚಾಯಿತಿಗೆ ಸೇರಿದ್ದು, ಕುಡಿಯುವ ನೀರನ್ನು ಕೊಳವೆಬಾವಿಗಳ ಮೂಲಕ ಪೂರೈಸಲಾಗುತ್ತಿದೆ. ಗ್ರಾಮದ ಸಾಕ್ಷರತೆ ೬೭% ರಷ್ಟಿದೆ. ನವಿಲೆ ಗ್ರಾಮದಿಂದ ಅಂಚೆ ಸಂಪರ್ಕವಿದೆ. ಚಿಕ್ಕನಾಯಕನಹಳ್ಳಿ ಮತಿಘಟ್ಟದ ಮಾರ್ಗದಲ್ಲಿ ರಸ್ತೆ ಸಂಪರ್ಕವಿದ್ದು, ಬಸ್ ಓಡಾಡುತ್ತಿವೆ. ನವಿಲೆಯ ಬಸವೇಶ್ವರ ಜಾತ್ರೆಯಲ್ಲಿ ಈ ಗ್ರಾಮದವರ ಪಾತ್ರ ಅಧಿಕವಾಗಿರುತ್ತದೆ. ಉಳಿದಂತೆ ಯುಗಾದಿ, ದಸರಾ, ದೀಪಾವಳಿ, ಗೌರಿ-ಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ. ಚಿಕ್ಕನಾಯಕನಹಳ್ಳಿ ತಾತಯ್ಯನಿಗೆ ಸಕ್ಕರೆ ಓದಿಸುವ ಸಂಪ್ರದಾಯವಿದೆ.

## ನಾಗೇನಹಳ್ಳಿ

ನಾಗೇನಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೨ ಕಿಮೀ ದೂರದಲ್ಲಿದೆ. ಇದೊಂದು ಹಾಲುಗೊಣ ಮಜರೆ ಗ್ರಾಮ. ಇದರ ಕೃಷಿ ಭೂಮಿ ವ್ಯಾಪ್ತಿ ೨೧೨ ಹೆಕ್ಟೇರ್ ಆಗಿದೆ. ಬಯಲು

ಕೆಂಪು ಮರಳು ಮಿಶ್ರಿತ ಭೂಪ್ರದೇಶ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಣೆ, ಕುರಿ–ಆಡುಗಳ ಸಾಕಣೆ ಇದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಜೆ.ಸಿ. ಪುರ ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಮಿನಿ ಟ್ಯಾಂಕ್, ಕೊಳವೆ ಬಾವಿ, ನಲ್ಲಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ವೀರಶೈವರು ದೊಡ್ಡ ಸಮುದಾಯವಾಗಿದ್ದು ಕುರುಬರು, ನಾಯಕರು, ಅಗಸರು ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೩೬ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೭೪ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಮಾಳಿಗೆ, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೩೭ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ. ೧೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಜೆ.ಸಿ. ಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು.

ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ನೀಡಲಾಗುತ್ತದೆ. ಸಾಕ್ಷರತೆ ೫೬% ರಷ್ಟಿದೆ. ಶಿಕ್ಷಣ, ಪಡಿತರ ವಿಷಯಗಳಿಗೆ ಗೋಡೆಕೆರೆಗೆ ಹೋಗುತ್ತಾರೆ. ಸಾರಿಗೆ, ಶಿಕ್ಷಣ, ಅರಣ್ಯ ಇಲಾಖೆಗಳಲ್ಲಿ ೪ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಡ್ರೈವರ್, ವಕೀಲರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಗರಿಕಡ್ಡಿ ಹೆರೆಯುವುದು ಉಪಕಸುಬಾಗಿದೆ. ಕಿಬ್ಬನಹಳ್ಳಿ ಕ್ರಾಸ್–ಚಿಕ್ಕನಾಯಕನಹಳ್ಳಿ ಮಾರ್ಗವಾಗಿ ಬಸ್ ಸಂಚಾರವಿದೆ.

ಹಟ್ಟದ ಉಡುಸಲಮ್ಮ ದೇವರ ಉತ್ಸವದಲ್ಲಿ ಈ ಗ್ರಾಮದವರು ಆರತಿ, ಬಾನ ಅರ್ಪಿಸುತ್ತಾರೆ. ೨ ಸ್ತ್ರೀಶಕ್ತಿ ಸಂಘಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ನಾರಸೀಹಳ್ಳಿ

ನಾರಸೀಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೧೧ ಕಿ.ಮೀ ದೂರದಲ್ಲಿದೆ. ಇದು ಸೋಮನಹಳ್ಳಿಯ ಮಜರೆ ಗ್ರಾಮ. ಇದರ ಭೌಗೋಳಿಕ ವ್ಯಾಪ್ತಿ ೪೯೫.೫೩ ರಲ್ಲಿ ಹಂಚಿಕೆಯಾಗಿದೆ. ನರಸಿಂಹನಹಳ್ಳಿ ಕ್ರಮೇಣ ನಾರಸಿಹಳ್ಳಿ ಎಂದಾಗಿದೆ. ಬಯಲು ಪ್ರದೇಶ. ಕೆಂಪು ಮಿಶ್ರಿತ ಮರಳು ಮಣ್ಣಿನಿಂದ ಕೂಡಿದ ಭೂಭಾಗವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ತೆಂಗು, ಅಡಿಕೆ, ಗರಿಕಡ್ಡಿ ವ್ಯಾಪಾರಿ ಸರಕಾಗಿವೆ. ಗೋಡೆಕೆರೆ–ಕಿಬ್ಬನಹಳ್ಳಿ ಕ್ರಾಸ್ – ಚಿಕ್ಕನಾಯಕನಹಳ್ಳಿ ಮಾರ್ಗವಾಗಿ ರಸ್ತೆ ಸಂಪರ್ಕವಿದ್ದು ಬಸ್ ಸಂಚಾರವಿದೆ.

ಇಲ್ಲಿ ೫೯೮.೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೯ ಡಿಗ್ರಿ ಹಾಗೂ ಬಿಸಿಲು ೩೦ ಡಿಗ್ರಿ ಸರಾಸರಿ ಇದೆ. ಕುಡಿಯಲು ಗೋಡೆಕೆರೆ ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತದೆ. ಒಂದು ಕೊಳವೆ ಬಾವಿಯಿದ್ದು ಒಂದು ಕಿರು ಟ್ಯಾಂಕ್ ಇದೆ.

ಶ್ರೀವೈಷ್ಣವ, ಉಪ್ಪಾರ, ಮಡಿವಾಳ, ನಾಯಕ ಜನಾಂಗದವರು ಇಲ್ಲಿದ್ದಾರೆ. ಒಟ್ಟು ೨ ಮನೆಗಳಿದ್ದು ಇವು ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಸರ್ಕಾರದ ವಸತಿ ಯೋಜನೆಗಳಾದ ಜನತಾ, ಆಶ್ರಯ ಯೋಜನೆಯ ಫಲಾನುಭವಿಗಳಿದ್ದಾರೆ. ೧೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭೆ, ಗೋಡೆಕೆರೆ ಗ್ರಾಮಪಂಚಾಯ್ತಿ ಹಾಗೂ ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರವಾಗಿದ್ದು ಶಿಕ್ಷಣ, ಸಾರಿಗೆ, ಆರೋಗ್ಯ ಇಲಾಖೆಯಲ್ಲಿ ೪ ಜನ ಸರ್ಕಾರಿ ನೌಕರರಿದ್ದಾರೆ. ಗೋಡೆಕೆರೆಯಿಂದ ಪಡಿತರ, ಅಂಚೆ ವ್ಯವಸ್ಥೆ ಕಲ್ಪಿಸಲಾಗಿದೆ. ಒಂದು ಪ್ರಾಥಮಿಕ ಶಾಲೆ, ಅಂಗನವಾಡಿ ಕೇಂದ್ರವಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯಗಳ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೬೯% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಉಡುಸಲಮ್ಮ ಹಾಗೂ ಸಿದ್ದರಾಮೇಶ್ವರ ದೇವರ ಉತ್ಸವ ಮಾಡುತ್ತಾರೆ. ಗೋಡೆಕೆರೆ ಸಿದ್ದರಾಮೇಶ್ವರನ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ನಿರುಗಲ್ ಬಸವಾಪಟ್ಟಣ ತಾಂಡ್ಯ

ಬಸವಾಪಟ್ಟಣ ತಾಂಡ್ಯ ಒಂದು ಲಂಬಾಣಿ ಬುಡಕಟ್ಟು ಗ್ರಾಮವಾಗಿದ್ದು ನಿರುವಗಲ್ ಕಂದಾಯ ಗ್ರಾಮದ ಉಪಗ್ರಾಮವಾಗಿದೆ. ಲಂಬಾಣಿ ಜನಾಂಗದವರು ಪ್ರತ್ಯೇಕವಾದ ಜನವಸತಿ ರಚಿಸಿಕೊಂಡ ಕಾರಣ ಬಸವಾಪಟ್ಟಣ ತಾಂಡ್ಯ ಎಂದು ಕರೆಯುತ್ತಾರೆ. ಬಯಲುಸೀಮೆ ಪ್ರದೇಶ. ಕುರುಚಲು ಗಿಡ–ಮರಗಳಿವೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಗರಿಕಡ್ಡಿ, ಕೊಬ್ಬರಿ, ಕಾಯಿಮಟ್ಟೆ ವ್ಯಾಪಾರಿ ಸರಕಾಗಿದೆ. ಗೂಡಂಗಡಿ, ತಲೆ ಮೇಲೆ ಹೊತ್ತು ಪಾತ್ರೆ ವ್ಯಾಪಾರವಿದೆ.

ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಇಲ್ಲಿ ೫೯೮.೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೯ ಡಿಗ್ರಿ ಹಾಗೂ ಬಿಸಿಲು ೩೦ ಡಿಗ್ರಿ ಸರಾಸರಿ ಇದೆ. ಕುಡಿಯಲು ಬೆಳಗುಲಿ ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಒಂದು ಸಿಸ್ಟನ್ ಇದ್ದು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ೧೪ ಜನ ಕೊಳವೆ ಬಾವಿ ತೆಗೆಸಿಕೊಂಡು ಕೃಷಿಯಲ್ಲಿ ತೊಡಗಿದ್ದಾರೆ. ಒಂದು ಕೆರೆಯಿದ್ದು ಒಂದು ಗೋಕಟ್ಟೆ ಇದೆ.

ಸಾಮಾಜಿಕ ರಚನೆಯಲ್ಲಿ ಲಂಬಾಣಿ ಜನಾಂಗ ದೊಡ್ಡ ಸಮುದಾಯವಾಗಿದ್ದು ವಿವಿಧ ಸ್ವರೂಪದ ೨೭ ಮನೆಗಳಿವೆ. ಇವು ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಇವುಗಳಲ್ಲೆ ಕೆಲವು ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯ ೧೬ ಫಲಾನುಭವಿಗಳಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಮಾತೃಭಾಷೆ ಕನ್ನಡವಾಗಿದ್ದು ಲಂಬಾಣಿ, ಹಿಂದಿ ಮಾತನಾಡುತ್ತಾರೆ.

ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾನಸಭೆ, ಹಂದನಕೆರೆ ಜಿಲ್ಲಾ ಪಂಚಾಯ್ತಿ, ಬರಗೂರು ತಾಲ್ಲೂಕು ಪಂಚಾಯ್ತಿ ಹಾಗೂ ಬೆಳಗುಲಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದ್ದು ಬೆಳಗುಲಿ ಅಂಚೆ ಸಂಪರ್ಕ ಹೊಂದಿದೆ. ಪಡಿತರ, ಶಿಕ್ಷಣ, ಸಾರಿಗೆ ವಿಷಯಗಳಿಗೆ ಬೆಳಗುಲಿ ನಿರುಗಲ್ ಗ್ರಾಮಗಳಿಂದ ಪಡೆಯುತ್ತಿದ್ದಾರೆ.

ಸೇವಾಲಾಲ್ ದೇವರ ಉತ್ಸವ ನಡೆಯುತ್ತದೆ. ದೀಪಾವಳಿ ಹಬ್ಬದಂದು ಹಿರಿಯರ ಹಬ್ಬವಾಗಿ ಆಚರಿಸಿ ಸಾಂಪ್ರದಾಯಿಕ ಉಡುಗೆ, ತೊಡುಗೆ, ಅಡಿಗೆ ಊಟ ಉಪಚಾರದೊಂದಿಗೆ ಆಚರಿಸುತ್ತಾರೆ. ಉಳಿದಂತೆ ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ಆಚರಿಸುತ್ತಾರೆ.

## ನುಲೇನೂರು

ನುಲೇನೂರು ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೦ ಕಿ.ಮೀ. ದೂರದಲ್ಲಿದೆ. ನೇಯ್ಗೆ ವೃತ್ತಿಯ ದೇವಾಂಗ ಜನಾಂಗ ಇಲ್ಲಿ ವಾಸಿಸುತ್ತಿದ್ದು ವೃತ್ತಿಸೂಚಕವಾಗಿ ನೂಲೇನೂರು ಆಗಿದೆ. ಇದೊಂದು ಕಂದಾಯ ಗ್ರಾಮ. ಬೆಂಚೆಹಟ್ಟಿ, ಮಾಳಮ್ಮನಹಟ್ಟಿ, ಬಂಡೆಹಟ್ಟಿ, ವೆಂಕಟನರಸಯ್ಯನ ಗುಡ್ಲು ಮಜರೆ ಗ್ರಾಮಗಳನ್ನು ಹೊಂದಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೨೪೦೨.೨೩ ಹೆಕ್ಟೇರ್. ಬಯಲುನಾಡು. ಬಳಪದ ಮಣ್ಣು ಮಣ್ಣಿನ ಲಕ್ಷಣವಾಗಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ೨೦೧೨ ಹೆಕ್ಟೇರ್ ಕೃಷಿ ಭೂಮಿಯನ್ನು, ಮಜರೆ ಗ್ರಾಮಗಳೊಂದಿಗೆ ಹಂಚಿಕೊಂಡಿದೆ. ಗ್ರಾಮಕ್ಕೆ ಹೊಂದಿಕೊಂಡಂತಿರುವ ರಂಗನಗುಡ್ಡ, ಪಶ್ಚಿಮಕ್ಕೆ ಅರೆಕಲ್ಲು ಬಂಡೆಗಳ ಹಾಸು ಹಾಗೂ ರಕ್ಷಿತಾರಣ್ಯ ಪ್ರದೇಶವನ್ನು ಹೊಂದಿದೆ.

ಕಾಡುಪ್ರಾಣಿಗಳಾದ ಕರಡಿ, ಚಿರತೆ, ಹಂದಿ, ಮೊಲ, ನರಿ ಹಾಗೂ ಕಾಡುಪಕ್ಷಿಗಳಾದ ಗೌಜುಗ, ಗಿಳಿ, ನವಿಲು, ಕೋಗಿಲೆ, ಬುಲ್‌ಬುಲ್ ಮತ್ತು ವಿಷಪೂರಿತ ಹಾವುಗಳನ್ನು ಕಾಣಬಹುದಾಗಿದೆ. ಸಾಕುಪ್ರಾಣಿಗಳಾದ ಹಸು, ಎಮ್ಮೆ, ಕುರಿ–ಮೇಕೆಗಳನ್ನು ಸಾಕುತ್ತಾರೆ. ಹಸುಗಳಲ್ಲಿ ಹಳ್ಳಿಕಾರ್ ತಳಿ, ಮಿಶ್ರ ತಳಿಗಳಾದ ಹೆಚ್.ಎಫ್., ಜೆರ್ಸಿ ಹೆಚ್ಚಿನ ಸಂಖ್ಯೆಯಲ್ಲಿವೆ. ಸಾಕುಪಕ್ಷಿಯಾದ ನಾಟಿಕೋಳಿ, ಗಿರಿರಾಜ ಕೋಳಿಯನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆ ಬೀಳುತ್ತದೆ. ಬೇಸಿಗೆ ಕಾಲದಲ್ಲಿ ಸುಮಾರು ૩೪–૩೬ ಡಿಗ್ರಿ ತಾಪವಿರುತ್ತದೆ ಹಾಗೂ ಚಳಿಗಾಲದಲ್ಲಿ ೧೦ ರಿಂದ ೧೨ ಡಿಗ್ರಿ ಚಳಿಯಿರುವ ವಾತಾವರಣವಿರುತ್ತದೆ.

ನುಲೇನೂರು ಗ್ರಾಮಕ್ಕೆ ಹೊಂದಿಕೊಂಡಂತಿರುವ ಬಂಡೆಗುಂಡಿಹಳ್ಳ, ಬಾವಿಹಳ್ಳ, ಹೂವಿನತಟ್ಟೆ, ಹೊಸಕೆರೆ ಮಳೆಗಾಲದಲ್ಲಿ ತುಂಬಿದಾಗ ವ್ಯವಸಾಯಕ್ಕೆ ಅನುಕೂಲ ಮಾಡಿಕೊಡುತ್ತವೆ. ಬೆರಳೆಣಿಕೆಯಷ್ಟು ತೆರೆದ ಬಾವಿಗಳಿದ್ದು ಅವುಗಳಲ್ಲಿ ಕೆಲವು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ. ನಾಲ್ಕು ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ. ೧೯ ವಿದ್ಯುತ್ ಕಂಬಗಳಿವೆ.

ಸರ್ಪಒಕ್ಕಲಿಗ ಪ್ರಮುಖವಾಗಿದ್ದು ಭಜಂತ್ರಿ ಮತ್ತು ಮಡಿವಾಳ ಸಣ್ಣ ಸಮುದಾಯಗಳಾಗಿವೆ. ಮೊದಲಿಗೆ ದೇವಾಂಗ ಜನಾಂಗ ಇಲ್ಲಿ ವಾಸಿಸುತ್ತಿದ್ದು ಈಗ ಒಂದು ಕುಟುಂಬವೂ ಇರುವುದಿಲ್ಲ. ಪ್ರಮುಖ ಭಾಷೆಯಾಗಿ ಕನ್ನಡವನ್ನು ಬಳಸುತ್ತಾರೆ.

ಒಟ್ಟು ೧೯೫ ಮನೆಗಳನ್ನು ಹೊಂದಿದ್ದು ೨೦೧೧ ರ ಜನಗಣತಿಯ ಪ್ರಕಾರ ೮೧೪ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ವಿವಿಧ ಮನೆಯ ಪ್ರಕಾರಗಳಿದ್ದು ಮಣ್ಣಿನ, ಹೆಂಚಿನ, ಗುಡಿಸಲು ಮತ್ತು ಶೀಟಿನ ಮನೆಗಳನ್ನು ಕಾಣಬಹುದಾಗಿದೆ. ಸರ್ಕಾರದ ಜನತಾ, ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ವಸತಿ ಯೋಜನೆಯ ೫೯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಒಟ್ಟು ಸುಮಾರು ೮೦ ಕುಟುಂಬಗಳು ಶೌಚಾಲಯದ ವ್ಯವಸ್ಥೆಯನ್ನು ಹೊಂದಿವೆ.

ಪ್ರಮುಖವಾಗಿ ರಾಗಿಮುದ್ದೆ, ಅನ್ನ ಇತರೆ ರೊಟ್ಟಿ, ಉಪ್ಪಿಟ್ಟು, ಚಿತ್ರಾನ್ನ, ದೋಸೆ ಹಾಗೂ ಸಾಂಪ್ರದಾಯಿಕವಾಗಿ ಹಬ್ಬಗಳಲ್ಲಿ ಹೋಳಿಗೆ, ಪಾಯಸ, ಸಿಹಿಕಡುಬು ಹಾಗೂ ಬಾಡೂಟ ತಯಾರಿಸುವುದುಂಟು.

ರಾಗಿ ಪ್ರಮುಖ ಬೆಳೆಯಾಗಿದ್ದು ಜೋಳ, ಹೆಸರು, ದ್ವಿದಳ ಧಾನ್ಯಗಳು ಮತ್ತು ಈರುಳ್ಳಿ ಹಾಗೂ ತೋಟಗಾರಿಕಾ ಬೆಳೆಗಳಾದ ತೆಂಗು, ಅಡಿಕೆ ಬೆಳೆಯುತ್ತಾರೆ. ಕೃಷಿ ಇಲ್ಲಿನ ಪ್ರಮುಖ ಉದ್ಯೋಗವಾಗಿದ್ದರೂ ಕೃಷಿ, ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಇಂಜಿನಿಯರ್ ಕೃಷ್ಣಮೂರ್ತಿ, ಮಂಜುನಾಥ ಮತ್ತು ಪ್ರಶಾಂತ ಸರ್ಕಾರಿ ನೌಕರಿಯಲ್ಲಿರುವವರು.

ಹುಳಿಯಾರು ಹೋಬಳಿ, ಚಿ.ನಾ.ಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ, ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ

ಒಳಪಡುತ್ತದೆ. ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಬರುತ್ತದೆ. ಗ್ರಾಮವು ಇಬ್ಬರು ಚುನಾಯಿತ ಗ್ರಾಮಪಂಚಾಯ್ತಿ ಸದಸ್ಯರನ್ನು ಹೊಂದಿದೆ. ಕಚ್ಚಾರಸ್ತೆ ಸಂಪರ್ಕ ಹೊಂದಿರುವ ಈ ಗ್ರಾಮದಲ್ಲಿ ಆಟೋರಿಕ್ಷಾ, ಖಾಸಗಿ ಬಸ್ಸು ಮತ್ತು ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಸಾಂಪ್ರದಾಯಿಕ ಎತ್ತಿನ ಗಾಡಿಗಳ ಜೊತೆಗೆ ಆಧುನಿಕ ಬೈಕು, ಟ್ರ್ಯಾಕ್ಟರ್, ಟೆಂಪೋ, ಆಟೋ ರಿಕ್ಷಾಗಳು ಗ್ರಾಮದಲ್ಲಿ ಕಂಡುಬರುತ್ತವೆ. ಬಹುಪಾಲು ಮನೆಗಳಲ್ಲಿ ಸಂಚಾರಿ ದೂರವಾಣಿ ಹಾಗೂ ಕೆಲವು ಮನೆಗಳಲ್ಲಿ ಡಿಟಿಎಚ್ ಸಂಪರ್ಕವನ್ನು ಕಾಣಬಹುದಾಗಿದೆ.

ಅನ್ನಪೂರ್ಣೇಶ್ವರಿ, ಕರಿಯಮ್ಮದೇವಿ ಸ್ತ್ರೀಶಕ್ತಿ ಸಂಘಗಳು ಹಾಗೂ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಯಿದ್ದು ಕನ್ನಡ ಭಾಷಾ ಮಾಧ್ಯಮವಾಗಿದೆ. ವಿದ್ಯಾರ್ಥಿಗಳಿಗೆ ಬಿಸಿಯೂಟ, ಕ್ಷೀರಭಾಗ್ಯ ಹಾಗೂ ಶೌಚಾಲಯದ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನ, ಕಲಾ ಮಾಸಾಶನ, ವಿಕಲಚೇತನ ವೇತನ ಪಡೆಯುವ ೪೨ ಫಲಾನುಭವಿಗಳಿದ್ದಾರೆ.

ಕರಿಯಮ್ಮ, ಆಂಜನೇಯಸ್ವಾಮಿ, ನರಸಿಂಹಸ್ವಾಮಿ, ತಿರುಮಲ ದೇವಸ್ಥಾನಗಳು ನುಲೇನೂರು ಗ್ರಾಮದ ಪ್ರಮುಖ ದೇವಾಲಯಗಳಾಗಿವೆ. ಕರಿಯಮ್ಮ ದೇವಿಯ ಜಾತ್ರಾ ಮಹೋತ್ಸವ ಇಲ್ಲಿನ ವಿಶೇಷ. ಉಳಿದಂತೆ ಯುಗಾದಿ, ದೀಪಾವಳಿ, ಶಿವರಾತ್ರಿ, ಮಹಾನವಮಿ, ಸಂಕ್ರಾಂತಿ ಹಬ್ಬಗಳನ್ನು ಸಡಗರದಿಂದ ಆಚರಿಸುತ್ತಾರೆ.

ಗ್ರಾಮ ಅರಣ್ಯ ಸಮಿತಿಯನ್ನು ಹೊಂದಿರುವ ಗ್ರಾಮವು ಸಸಿ ನೆಡುವ ಕಾರ್ಯಕ್ರಮವನ್ನು ವರ್ಷಕ್ಕೊಮ್ಮೆ ಮಾಡುತ್ತಾರೆ. ಒಂದು ಭಜನಾ ಕಲಾತಂಡವಿದೆ.

## ನೂಲೇನೂರು ಎ.ಕೆ. ಕಾಲೋನಿ

ನೂಲೇನೂರು ಗ್ರಾಮಕ್ಕೆ ಹೊಂದಿಕೊಂಡಂತೆ ಆದಿಕರ್ನಾಟಕದವರ ಪ್ರತ್ಯೇಕ ಕಾಲೋನಿ ಇದೆ. ಇದನ್ನು ಎ.ಕೆ. ಕಾಲೋನಿ ಎಂದೂ ಕರೆಯುತ್ತಾರೆ. ೬೦ ಮನೆಗಳ ಬಡಾವಣೆಗೆ ಮೊದಲಿಗೆ ಮಾದಿಗರ ಹಟ್ಟಿ ಎಂದು ಕರೆಯುತ್ತಿದ್ದರು. ಇಲ್ಲಿನ ಮನೆಗಳು ಹೆಂಚಿನ, ಶೀಟಿನ, ಮಾಳಿಗೆಯ ಸ್ವರೂಪದಲ್ಲಿವೆ. ಸರ್ಕಾರದ ಜನತಾ, ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೧೮ ಮನೆಯಲ್ಲಿ ಶೌಚಾಲಯದ ಬಳಕೆಯಿದೆ. ರಾಗಿಮುದ್ದೆ ಮುಖ್ಯ ಆಹಾರ. ಬಾಡೂಟ, ಹೋಳಿಗೆ, ಪಾಯಸ ಸಾಂದರ್ಭಿಕ ವಿಶೇಷ ಭೋಜನವಾಗಿದೆ. ವ್ಯವಸಾಯ ಮಾಡುತ್ತಾರೆ. ರಾಗಿ, ಹಾರಕ, ನವಣೆ, ಹುರುಳಿ, ಅವರೆ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ ಬೆಳೆಗಳಿವೆ. ಕೊಬರಿ ವ್ಯಾಪಾರಿ ಸರಕಾಗಿದೆ. ಕುಡಿಯಲು ಮುಖ್ಯ ಗ್ರಾಮ ನೂಲೇನೂರು ಗ್ರಾಮದ ಮೂಲಕ ನೀರು ಸರಬರಾಜು ಮಾಡುತ್ತಾರೆ. ೨ ಸಿಸ್ಟನ್‌ಗಳಿವೆ. ಒಂದು ಪ್ರತ್ಯೇಕ ಅಂಗನವಾಡಿ ಕೇಂದ್ರವಿದೆ.

ಹುಳಿಯಾರು ಹೋಬಳಿ, ಹೊಯ್ಸಳಕಟ್ಟೆ ಗ್ರಾಮಪಂಚಾಯ್ತಿಗೆ ಸೇರಿದ್ದು ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಈ ಕಾಲೋನಿಯ ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ. ಶಿಕ್ಷಣ, ಪಡಿತರ ವಿಚಾರಗಳಿಗೆ ಮುಖ್ಯ ಗ್ರಾಮಕ್ಕೆ ಹೋಗುತ್ತಾರೆ. ಸಾರಿಗೆ, ಶಿಕ್ಷಣ, ಅರಣ್ಯ, ನೀರಾವರಿ ಇಲಾಖೆಗೆ ಸೇರಿದ ೭ ಜನ ಸರ್ಕಾರಿ ನೌಕರರಿದ್ದಾರೆ. ಕುರಿ, ಎಮ್ಮೆ, ಹಸು, ಮೇಕೆ ಇವರ ಸಾಕುಪ್ರಾಣಿಗಳು.

ಕರಿಯಮ್ಮ, ರಾಂಪುರದಮ್ಮ ಸ್ತ್ರೀಶಕ್ತಿ ಕೇಂದ್ರಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿವೆ. ಹೊಯ್ಸಳಕಟ್ಟೆಯಿಂದ ಅಂಚೆ ಸಂಪರ್ಕವಿದೆ. ಕರಿಯಮ್ಮ ದೇವರ ತಾಳಿಯಿದೆ. ವಾರ್ಷಿಕ ಆರತಿ, ಬಾನ, ಬ್ಯಾಟೆಯ ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ದಸರಾ, ಗೌರಿ–ಗಣೇಶ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ೬೦ ವರ್ಷದ ನೂಲೇನೂರು ಕದರಮ್ಮ ಆದಿಕರ್ನಾಟಕ ಜನಾಂಗದವರಾಗಿದ್ದು ತತ್ವಪದ ಗಾಯನದಲ್ಲಿ ಹೆಸರು ಮಾಡಿದ್ದಾರೆ. ಜಿಲ್ಲಾ ರಾಜ್ಯೋತ್ಸವ, ಕನಕ ಪ್ರಶಸ್ತಿ ಇವರಿಗೆ ಸಂದಿವೆ. ಕೆಂಪಣ್ಣ ಎಂಬ ೬೩ ವರ್ಷದ ವ್ಯಕ್ತಿ ಈಕೆಯ ಸಹ ಕಲಾವಿದರಾಗಿಯೂ ಗುರುತಿಸಿಕೊಂಡಿದ್ದಾರೆ. ಒಂದು ಭಜನೆ ಕಲಾತಂಡವಿದೆ.

## ಪೋಚಕಟ್ಟೆ ಎ.ಕೆ.ಕಾಲೋನಿ

ಪೋಚಕಟ್ಟೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೨೦ ಕಿಮೀ ದೂರವಿದ್ದು ಇದಕ್ಕೆ ಹೊಂದಿಕೊಂಡಂತೆ ಪೋಚಕಟ್ಟೆ ಎ.ಕೆ. ಕಾಲೋನಿ ಇದೆಯ ಇದನ್ನು ಮಾದಿಗರಹಟ್ಟಿ ಎಂದೂ ಕರೆಯಲಾಗುವುದು. ಇಲ್ಲಿ ಆದಿಕರ್ನಾಟಕ ಜನಾಂಗದ ಒಟ್ಟು ೨೭ ಮನೆಗಳಿದ್ದು ೧೨೩ ಜನಸಂಖ್ಯೆ ಹೊಂದಿದೆ. ಇಲ್ಲಿನ ಮನೆಗಳು ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಇವು ಸರ್ಕಾರದ ವಸತಿ ಯೋಜನೆಗಳಾದ ಜನತಾ, ಇಂದಿರಾ ಆವಾಸ್ ಹಾಗೂ ಅಂಬೇಡ್ಕರ್ ವಸತಿ

ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ಇಲ್ಲಿ ಶೌಚಾಲಯ ಮುಕ್ತವಾಗಿದ್ದು ಬಯಲು ಶೌಚಾಲಯ ಅವಲಂಬಿಸಿದ್ದಾರೆ. ವ್ಯವಸಾಯ ಇಲ್ಲಿನ ಮುಖ್ಯ ಕಸುಬು. ಪಶುಪಾಲನೆ, ಕುರಿ–ಮೇಕೆ ಸಾಕಾಣಿಕೆ ಇದೆ. ರೈತರು ರಾಗಿ, ಜೋಳ, ಹೆಸರು ಬೆಳೆಯುತ್ತಾರೆ. ರಾಗಿಮುದ್ದೆ ಮುಖ್ಯ ಆಹಾರ. ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ಬಳಸುತ್ತಾರೆ.

ಶಿಕ್ಷಣ, ಪಡಿತರ ವಿಷಯದಲ್ಲಿ ಪೋಚಕಟ್ಟೆ ಅವಲಂಬಿಸಿದ್ದಾರೆ. ದೊಡ್ಡಬಿದರೆ ಗ್ರಾಮಪಂಚಾಯ್ತಿ ಹುಳಿಯಾರು ಜಿಲ್ಲಾ ಪಂಚಾಯ್ತಿಗೆ ಸೇರಿದ್ದು ಅಂಚೆ ಸಂಪರ್ಕ ದೊಡ್ಡಬಿದರೆ ಮೂಲಕ ಬರುತ್ತದೆ. ಒಂದು ಸ್ತ್ರೀಶಕ್ತಿ ಸ್ವಸಹಾಯ ಸಂಘವಿದೆ. ಹೆಸರು ಗರಿಕಟ್ಟಿ, ಮುತ್ತುಗಲ ಎಲೆ ಸಂಗ್ರಹದ ಉಪಕಸುಬು ಮಾಡುತ್ತಾರೆ. ಗ್ರಾಮದಲ್ಲಿಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ದಸರಾ, ಯುಗಾದಿ, ಶಿವರಾತ್ರಿ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ. ಗ್ರಾಮದ ಸಾಕ್ಷರತೆ ೬೧ ರಷ್ಟಿದೆ. ಗ್ರಾಮದ ಲಕ್ಷ್ಮಿ ಹಾಗೂ ಆಂಜನೇಯ ದೇವರಿಗೆ ಆರತಿ ಅರ್ಪಿಸುವುದು ವಾಡಿಕೆಯಾಗಿದೆ.

## ಪಿನ್ನೇನಹಳ್ಳಿ

ಪಿನ್ನೇನಹಳ್ಳಿ ಜೋಡಿಕಲ್ಲೇನಹಳ್ಳಿಗೆ ಸೇರಿದ ಮಜರೆ ಗ್ರಾಮವಾಗಿದೆ. ಇದರ ಕೃಷಿಭೂಮಿ ಒಟ್ಟು ೧೧೨ ಹೆಕ್ಟೇರ್ ಇದೆ. ಬಯಲು ಪ್ರದೇಶ. ಕೃಷಿ ಅವಲಂಬಿತರು. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರಕ್ಕೆ ೫ ಕಿಮೀ ದೂರದಲ್ಲಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಮಗ್ಗದವರು ಬಟ್ಟೆ ವ್ಯಾಪಾರ ಮಾಡುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಇಲ್ಲಿ ೫೯೮.೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೯ ಡಿಗ್ರಿ ಹಾಗೂ ಬಿಸಿಲು ೩೦ ಡಿಗ್ರಿ ಸರಾಸರಿ ಇದೆ. ಕುಡಿಯಲು ಮುದ್ದೇನಹಳ್ಳಿ ಗ್ರಾಮಪಂಚಾಯ್ತಿದಿಂದ ನೀರು ಪೂರೈಸಲಾಗುತ್ತಿದೆ. ಒಂದು ಕೊಳವೆ ಬಾವಿಯಿದ್ದು ೨ ಸಿಸ್ಟನ್‌ಗಳಿವೆ. ನವಿಲೇಹಳ್ಳದ ನೀರು ಮಳೆಗಾಲದಲ್ಲಿ ಸ್ವಲ್ಪ ಮಟ್ಟಿಗೆ ಸಹಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ಚಿಕ್ಕನಾಯಕನಹಳ್ಳಿ ವಿಧಾನಸಭೆ, ತುಮಕೂರು ಲೋಕಸಭೆ, ಕಂದಿಕೆರೆ ಜಿಲ್ಲಾ ಪಂಚಾಯ್ತಿಗೆ ಸೇರಿದ್ದು ಮಾಳಿಗೆಹಳ್ಳಿ ಅಂಚೆ ಸಂಪರ್ಕ ಕಲ್ಪಿಸಿದೆ. ಶಿಕ್ಷಣ, ಪಡಿತರವನ್ನು ಕಲ್ಲೇನಹಳ್ಳಿಯಿಂದ ಪಡೆಯುತ್ತಾರೆ.

ಗ್ರಾಮದಲ್ಲಿ ಉಪ್ಪಾರ, ಮಗ್ಗದವರು, ವೀರಶೈವರೂ ಸೇರಿದಂತೆ ಒಟ್ಟು ೩೨ ಮನೆಗಳಿವೆ. ಇವು ಹೆಂಚಿನ, ಶೀಟಿನ, ಕಾಂಕ್ರೀಟ್ ಸ್ವರೂಪದಲ್ಲಿವೆ. ಸರ್ಕಾರದ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೬ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೬ ಫಲಾನುಭವಿಗಳಿದ್ದಾರೆ. ೨ ಸ್ತ್ರೀಶಕ್ತಿ ಸಂಘಗಳಿವೆ. ಚಿಕ್ಕನಾಯಕನಹಳ್ಳಿ, ಕಂದಿಕೆರೆ, ಹುಳಿಯಾರಿಗೆ ಸಾಲುಕಟ್ಟೆ, ಮುದ್ದೇನಹಳ್ಳಿ ಮಾರ್ಗವಾಗಿ ಬಸ್ ಸಂಚಾರವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಪೆಮ್ಮಲದೇವರಹಳ್ಳಿ

ಪೆಮ್ಮಲದೇವರಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕುಕೇಂದ್ರದಿಂದ ದಕ್ಷಿಣಕ್ಕೆ ೧೮ ಕಿಮೀ ದೂರದಲ್ಲಿದೆ. ಇದು ಕಂದಾಯಗ್ರಾಮ. ಇದರ ಭೌಗೋಳಿಕ ವಿಸ್ತೀರ್ಣ ೧೪೮ ಹೆಕ್ಟೇರ್ ಆಗಿದೆ. ತೋಟಗಾರಿಕೆಯ ಪ್ರದೇಶ. ಸಮೀಪದಲ್ಲಿ ಹೊಸಕೆರೆ ಎಂಬ ದೊಡ್ಡ ಜಲಾಶಯವಿದ್ದು ಇಲ್ಲಿಗೆ ಹೇಮಾವತಿ ಜಲಾಶಯದಿಂದ ನೀರು ತುಂಬಿಸಿ ಚಿಕ್ಕನಾಯಕನಹಳ್ಳಿ ಕೇಂದ್ರವೂ ಸೇರಿದಂತೆ ಹಲವು ಕಡೆ ಕುಡಿಯುವ ನೀರು ಪೂರೈಸಲಾಗುತ್ತಿದೆ. ತೋಟಸಾಲು ಮನೆ, ಚದುರಿದಂತೆ ೨೩ ಮನೆಗಳಿವೆ. ೨೦೧೧ ರ ಜನಗಣತಿ ಪ್ರಕಾರ ೯೪ ಜನಸಂಖ್ಯೆ ಇದೆ.

ಲಿಂಗಾಯಿತ, ನಾಯಕ, ಆದಿಕರ್ನಾಟಕ ಜನಾಂಗದವರು ಇಲ್ಲಿದ್ದಾರೆ. ತೋಟಗಳಲ್ಲಿ ಮನೆ ಕಟ್ಟಿಕೊಂಡಿರುವುದರಿಂದ ಕುಡಿಯಲು ತಾವೇ ಕೊಳವೆ ಬಾವಿಯ ಮೂಲಕ ನೀರು ಪೂರೈಸಿಕೊಳ್ಳುತ್ತಾರೆ. ಕೆರೆ, ಒಂದು ಬೋರ್‌ವೆಲ್, ಒಂದು ಮಿನಿ ಸಿಸ್ಟನ್ ಇದೆ.

ಗ್ರಾಮದೇವತೆ ಕೆಂಪಮ್ಮನ ಮೂಲದಿಂದಾಗಿ ಅಮ್ಮ, ದೇವತೆಯ ಊರು, ಮುಂದೆ ಪೆಮ್ಮೆದೇವರಹಳ್ಳಿ ಎಂದಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕೊಬ್ಬರಿ, ತೆಂಗಿನ ಚಿಪ್ಪು ಹಾಗೂ ಮಟ್ಟೆ ವ್ಯಾಪಾರಿ ಸರಕಾಗಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋಗಳಿದ್ದು ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿ ಬಳಕೆಯಿದೆ. ದೂರವಾಣಿ, ಮೊಬೈಲ್ ಸಂಪರ್ಕವಿದೆ.

ಇಲ್ಲಿ ೫೯೮.೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೯ ಡಿಗ್ರಿ ಹಾಗೂ ಬಿಸಿಲು ೩೦ ಡಿಗ್ರಿ ಸರಾಸರಿ ಇದೆ. ಶೆಟ್ಟಿಕೆರೆ ಹೋಬಳಿ, ಚಿಕ್ಕನಾಯಕನ ಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ತುಮಕೂರು ಲೋಕಸಭಾ ಕ್ಷೇತ್ರವಾಗಿದೆ. ಶೆಟ್ಟಿಕೆರೆಯಿಂದ ಅಂಚೆ ಸಂಪರ್ಕ ಹೊಂದಿದೆ. ಶೆಟ್ಟಿಕೆರೆ–ತಿಪಟೂರು ಜಿಲ್ಲಾ ಪಂಚಾಯ್ತಿ ರಸ್ತೆ ಸಂಪರ್ಕ, ಬಸ್ ಸೌಲಭ್ಯವಿದೆ. ಶಿಕ್ಷಣ, ಸಾರಿಗೆ, ಪಡಿತರಗಳಿಗೆ ಗೋಪಾಲನಹಳ್ಳಿಗೆ ಹೋಗುತ್ತಾರೆ. ಗ್ರಾಮದ ಸಾಕ್ಷರತೆ ೬೩% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಗ್ರಾಮದಲ್ಲಿ ಆಂಜನೇಯ ದೇವಾಲಯವಿದ್ದು ಶ್ರಾವಣ ಮಾಸದಲ್ಲಿ ಪರೇವು ಮಾಡುತ್ತಾರೆ. ಶೆಟ್ಟಿಕೆರೆ ಕರಿಯಮ್ಮ ದೇವರಿಗೆ ಎದುರೆತ್ತಿ, ಬಲಿ, ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಸಾಸಲು ಬನಶಂಕರಮ್ಮನಿಗೆ ನಡೆದುಕೊಳ್ಳುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಪಾಪನಕೋಣ

ಪಾಪನಕೋಣ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೩ ಕಿಮೀ ದೂರದಲ್ಲಿದೆ. ಇದು ಬಂಗಾರಗೆರೆಗೆ ಸೇರಿದ ಮಜರೆ ಗ್ರಾಮ. ಪಾಪಣ್ಣ ಎಂಬ ವ್ಯಕ್ತಿಯ ಹೆಸರಿನ ಕೊಳ ಇದ್ದ ಕಾರಣದಿಂದಾಗಿ ಪಾಪನಕೊಳ > ಪಾಪನಕೋಣ ಎಂದಾಗಿದೆ. ಆಡುಭಾಷೆಯಲ್ಲಿ ಪಾಪನಕೋಣ ಎಂದೂ ಕರೆಯುತ್ತಾರೆ. ಇದನ್ನು ಬರಗೂರು ಪಾಪನಕೋಣ ಎಂದೂ ಕರೆಯುತ್ತಾರೆ. ಇದರ ಭೌಗೋಳಿಕ ವ್ಯಾಪ್ತಿ ಮುಖ್ಯಗ್ರಾಮ ಬಂಗಾರಗೆರೆಯ ೪೪೮ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಮರಳು ಮಿಶ್ರಿತ ಕೆಂಪು ಮಣ್ಣಿನ ಪ್ರದೇಶವಾಗಿದೆ. ಕೃಷಿ ಪ್ರಧಾನ ಕಸುಬು. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಹೈನುಗಾರಿಕೆ ಇದ್ದು ನಂದಿನಿ ಹಾಲಿನ ಡೈರಿಗೆ ಬಂಗಾರಗೆರೆಗೆ ಹಾಕುತ್ತಾರೆ. ಶಿಕ್ಷಣ, ಪಡಿತರ, ಬಂಗಾರಗೆರೆ ಬರಗೂರಿಗೆ ಹೋಗುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಇಲ್ಲಿ ೫೯೮.೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೯ ಡಿಗ್ರಿ ಹಾಗೂ ಬಿಸಿಲು ೩೦ ಡಿಗ್ರಿ ಸರಾಸರಿ ಇದೆ. ಕುಡಿಯಲು ಬರಗೂರು ಗ್ರಾಮಪಂಚಾಯ್ತಿ ವತಿಯಿಂದ ನೀರು ಪೂರೈಸಲಾಗುತ್ತಿದೆ. ಒಂದು ಸಿಸ್ಟನ್ ಇದ್ದು ೨ ಕೊಳವೆ ಬಾವಿಗಳಿವೆ. ಇಲ್ಲಿನ ಸಮುದಾಯ ರಚನೆಯಲ್ಲಿ ಆದಿಕರ್ನಾಟಕ, ಕುರುಬ, ನಾಯಕ ಜನಾಂಗದವರಿದ್ದಾರೆ. ಒಟ್ಟು ೬೨ ಮನೆಗಳಿದ್ದು ಅವು ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಎಲ್ಲರೂ ಬಯಲು ಶೌಚಾಲಯ ಬಳಸುತ್ತಾರೆ. ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ೨೮ ಫಲಾನುಭವಿಗಳಿದ್ದಾರೆ.

ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ, ಬರಗೂರು ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕ್ಷೇತ್ರಗಳಿಗೆ ಸೇರಿದ್ದು ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಬರಗೂರಿನಿಂದ ಅಂಚೆ ಸಂಪರ್ಕ ಕಲ್ಪಿಸಲಾಗಿದೆ. ಗ್ರಾಮದ ಸಾಕ್ಷರತೆ ೫೩% ಇದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಪಾಪನಕೊಣ

ಪಾಪನಕೊಣ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೩ ಕಿಮೀ ದೂರದಲ್ಲಿದೆ. ಇದೊಂದು ಬೆಳಗುಲಿ ಕಂದಾಯ ಗ್ರಾಮಕ್ಕೆ ಸೇರಿದ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ಮುಖ್ಯ ಗ್ರಾಮದಲ್ಲಿ ಹಂಚಿಕೆಯಾಗಿದೆ. ೩೩೦೭ ಹೆಕ್ಟೇರ್‌ನಲ್ಲಿ ಸೇರಿದೆ. ಕೆಂಪು ಮಣ್ಣಿನ ಮರಳು ಮಿಶ್ರಿತ ಭೂ ಪ್ರದೇಶವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಬಯಲುನಾಡಿನ ಭೂ ಪ್ರದೇಶ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಅಡಿಕೆ, ತೆಂಗು, ಗಣಪತಿ ವಿಗ್ರಹ, ದೇವರ ವಿಗ್ರಹಗಳ ತಯಾರಿಕೆ ಹಾಗೂ ಮಾರಾಟ ಮುಖ್ಯ ವ್ಯಾಪಾರವಾಗಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಇಲ್ಲಿ ೫೯೮.೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೯ ಡಿಗ್ರಿ ಹಾಗೂ ಬಿಸಿಲು ೩೦ ಡಿಗ್ರಿ ಸರಾಸರಿ ಇದೆ. ಕುಡಿಯಲು ಗ್ರಾಮ ಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ಒಂದು ಕೊಳವೆ ಬಾವಿಯಿದ್ದು ೨ ಸಿಸ್ಟನ್‌ಗಳಿವೆ. ಗ್ರಾಮದಲ್ಲಿ ಕುಂಬಾರರು ದೊಡ್ಡ ಸಮುದಾಯವಾಗಿದೆ. ಕುರುಬರು, ಸರ್ಪ ಒಕ್ಕಲಿಗರು ಕಿರು ಸಮುದಾಯವಾಗಿದೆ. ಇಲ್ಲಿ ೮೧ ಮನೆಗಳಿದ್ದು ೪೦೪ ಜನಸಂಖ್ಯೆ ಹೊಂದಿದೆ. ಇವು ಹೆಂಚಿನ, ಶೀಟಿನ, ಕುಂಬಾರ ಹೆಂಚಿನ ಮನೆಗಳಾಗಿವೆ. ಕೆಲವು ಮನೆಗಳು ಆಶ್ರಯ, ಜನತಾ ವಸತಿ ಯೋಜನೆಯ ೨೩ ಫಲಾನುಭವಿಗಳಿದ್ದಾರೆ. ೨೨ ಮನೆಗಳಲ್ಲಿ ಶೌಚಾಲಯ ಸೌಲಭ್ಯವಿದೆ. ಕುಂಬಾರ ಓಣಿ, ಕುರುಬರ ಓಣಿಗಳಿವೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ, ಬರಗೂರು ತಾಲ್ಲೂಕು ಪಂಚಾಯ್ತಿ ಹಾಗೂ ಬೆಳಗುಲಿ ಗ್ರಾಮ ಪಂಚಾಯ್ತಿಗೆ ಸೇರಿದ್ದು ತುಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ. ಬೆಳಗುಲಿ ಅಂಚೆ ಸಂಪರ್ಕ ಹೊಂದಿದೆ. ಒಂದು ಕಿರಿಯ ಪಾಠಶಾಲೆಯಿದ್ದು ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಸೌಲಭ್ಯವಿದೆ. ಕಾಂಪೌಂಡ್ ಇದೆ. ಗ್ರಾಮದ ಸಾಕ್ಷರತೆ ೭೪% ಇದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಕರಿಯಮ್ಮ, ರಂಗನಾಥ ಸ್ತ್ರೀಶಕ್ತಿ ಸಂಘಗಳಿವೆ. ಗರಿಕಡ್ಡಿ, ತೆಂಗಿನ ಮಟ್ಟೆ ವ್ಯಾಪಾರಿ ಸರಕಾಗಿವೆ. ಕರಿಯಮ್ಮ, ರಂಗನಾಥ ದೇವಾಲಯಗಳಿವೆ. ರಂಗನಾಥ ದೇವರ ಉತ್ಸವ ನಡೆಯುತ್ತದೆ. ಕರಿಯಮ್ಮ ದೇವರ ಉತ್ಸವ, ಆರತಿ, ಬಾನ, ಹರಕೆ ಸಂಪ್ರದಾಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಇಲ್ಲಿನ ಕುಂಬಾರ ಜನಾಂಗದವರು ಮಣ್ಣಿನಿಂದ ಗಣಪತಿ ವಿಗ್ರಹಗಳನ್ನು ನಿರ್ಮಿಸಿ, ಗಣೇಶನ ಹಬ್ಬಗಳಿಗೆ ತುಮಕೂರು ಜಿಲ್ಲೆಯಾದ್ಯಂತ ಸರಬರಾಜು ಮಾಡುವುದು ಇಲ್ಲಿನ ವಿಶೇಷವಾಗಿದೆ.

## ಪುರುಸೇನಹಳ್ಳಿ

ಪುರುಸೇನಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೭ ಕಿಮೀ ದೂರದಲ್ಲಿದೆ. ಇದು ಬೇಚಾರಕ್ ಗ್ರಾಮ. ಇಂದಿಗೂ ಜನವಸತಿಯ ಅವಶೇಷಗಳು, ಅಡಿಕಲ್ಲು, ನಿಲುಗಲ್ಲುಗಳು ಕಂಡುಬರುತ್ತವೆ. ೩೦ ವರ್ಷಗಳ ಹಿಂದೆ ಇಲ್ಲಿಂದ ಜನ ಸಮೀಪದ ಆತ್ರೀಹಾಳ್, ಜಾಣೆಹಾಳ್ ಕಡೆಗೆ ವಲಸೆ ಹೋಗಿ ವಸತಿ ನಿರ್ಮಿಸಿಕೊಂಡಿರುವುದಾಗಿ ಹೇಳುತ್ತಾರೆ. ಆತ್ರಿಹಾಳ್ ಕಂದಾಯ ಗ್ರಾಮದ ಹೆಸರಿನಲ್ಲಿ ಈ ಗ್ರಾಮದ ಸರ್ವೆ ನಂಬರ್ ಪಡೆಯಬಹುದು. ಸುತ್ತಲೂ ಗುಡ್ಡೆ, ಕಣಿವೆ, ಕುರುಚಲು ಕಾಡಿನ ಭೂಭಾಗವಾಗಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಂದಿಕೆರೆ ಹೋಬಳಿ ತೀರ್ಥಪುರ ತಾಲ್ಲೂಕು ಪಂಚಾಯ್ತಿ ಹಾಗೂ ರಾಮನಹಳ್ಳಿ ಗ್ರಾಮಪಂಚಾಯ್ತಿಗೆ ಸೇರಿದೆ.

## ಪಂಕಜನಹಳ್ಳಿ (ಜೆ.ಸಿ.ಪುರ)

ಪಂಕಜನಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದ ದಕ್ಷಿಣ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ಹದಿಮೂರು ಕಿ.ಮೀ. ದೂರದಲ್ಲಿದೆ. ಪ್ರಾಚೀನ ಹೆಸರು ರಂಗಸನಹಳ್ಳಿಯಾಗಿದ್ದು ಇತ್ತೀಚಿನ ದಿನಗಳಲ್ಲಿ ಪಂಕನಹಳ್ಳಿ ಎಂದು ಕರೆಯಲಾಗಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೭೫ ಹೆಕ್ಟೇರ್.

ಪಂಕಜನಹಳ್ಳಿ ಕಂದಾಯ ಗ್ರಾಮ ಮರಳು ಮಿಶ್ರಿತ ಕೆಂಪುಮಣ್ಣನ್ನು ಹೊಂದಿದೆ. ಇದು ವ್ಯವಸಾಯಕ್ಕೆ ಯೋಗ್ಯವಾಗಿದ್ದು ರಾಗಿ ಮುಖ್ಯ ಬೆಳೆಯಾಗಿದೆ. ತೊಗರಿ, ಹೆಸರು, ಉರುಳಿ, ಉದ್ದು, ಅವರೆ, ಉಪಬೆಳೆಗಳಾಗಿವೆ. ತೆಂಗು ಮತ್ತು ಅಡಿಕೆ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಾಗಿವೆ.

ಕಾಡುಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ, ಮುಳ್ಳುಹಂದಿ ಹಾಗೂ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಕಾಡುಪಕ್ಷಿಗಳಾದ ನವಿಲು, ಗುಬ್ಬಚ್ಚಿ, ಮರಕುಟಿಗ ಕಾಡುಪಕ್ಷಿ, ಸೋರೆಹಕ್ಕಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಗ್ರಾಮಸ್ಥರು ಹಳ್ಳಿಕಾರ್ ಮತ್ತು ದೇವದಾರ್ ತಳಿಯ ಎತ್ತುಗಳನ್ನು ನಾಟಿ ಹಸು ನಾಟಿ ಎಮ್ಮೆಗಳನ್ನು ಸಾಕುತ್ತಾರೆ. ವಾರ್ಷಿಕ ಸರಾಸರಿ ೫೦೦ ಮಿ.ಮೀ. ಮಳೆ ಬೀಳುತ್ತದೆ. ಹವಾಮಾನ ವೈಫರೀತ್ಯದಿಂದಾಗಿ ಕಳೆದ ಹತ್ತು ವರ್ಷಗಳಿಂದ ಜಲಕ್ಷಾಮ ಎದುರಿಸುತ್ತಿದ್ದು ಬರಗಾಲಕ್ಕೆ ತುತ್ತಾಗಿದೆ.

೪೦೦ ರಿಂದ ೫೦೦ ಅಡಿ ಆಳದ ೧೫ ಕೊಳವೆ ಬಾವಿಗಳನ್ನು ಹೊಂದಿದ್ದು ಕೃಷಿ ಚಟುವಟಿಕೆಗಳಿಗೆ ನೀರೊದಗಿಸುತ್ತದೆ. ೦೨ ಮಿನಿಟ್ಯಾಂಕುಗಳು ೦೩ ಕೈ ಪಂಪುಗಳಿದ್ದು ಕುಡಿಯುವ ನೀರಿನ ಸೌಲಭ್ಯವಿದೆ.

ಆದಿಕರ್ನಾಟಕ ಸಮುದಾಯವೇ ಪ್ರಧಾನ ಸಮುದಾಯವಾಗಿದ್ದು ಲಿಂಗಾಯಿತ ವಿಶ್ವಕರ್ಮ ಆಚಾರ್ ಸಮುದಾಯಗಳು ಕಿರುಸಮುದಾಯಗಳಾಗಿವೆ. ಪ್ರಮುಖ ಭಾಷೆ ಕನ್ನಡ, ಆಧುನಿಕ ವಾಹನಗಳಾದ ಆಟೋ, ದ್ವಿಚಕ್ರವಾಹನಗಳೊಂದಿಗೆ ಸಾಂಪ್ರದಾಯಿಕ ವಾಹನವಾದ ಎತ್ತಿನಗಾಡಿಗಳು ಸಹ ಉಳಿದುಕೊಂಡು ಬಂದಿವೆ.

ಒಟ್ಟು ೭೫ ಮನೆಗಳನ್ನು ಹೊಂದಿರುವ ಇತ್ತೀಚಿನ ಜನಗಣತಿಯ ಪ್ರಕಾರ ೩೧೧ ಜನಸಂಖ್ಯಾಪ್ರಮಾಣವನ್ನು ಹೊಂದಿದೆ. ಮಣ್ಣಿನ ಮನೆಗಳು ಗುಡಿಸಲುಗಳು, ಕುಂಬಾರು ಹೆಂಚಿನ ಮನೆಗಳು, ಸೀಮೆಹಂಚಿನ ಮನೆಗಳಿವೆ. ಇವುಗಳಲ್ಲಿ ಜನತಾ, ಆಶ್ರಯ ವಸತಿ ಯೋಜನೆಯ ೨೭ ಫಲಾನುಭವಿಗಳಿದ್ದಾರೆ. ಪ್ರಮುಖ ಆಹಾರಪದ್ಧತಿ ರಾಗಿಮುದ್ದೆ ಮತ್ತು ಅನ್ನ ಬೇಸಾಯ ಇಲ್ಲಿಯ ಕಸುಬಾಗಿದ್ದರೂ ಕಟ್ಟಡ ಕೆಲಸಗಾರರು ಮತ್ತು ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಾಂಪ್ರದಾಯಿಕ ಹೈನುಗಾರಿಕೆ ಅಲ್ಪಪ್ರಮಾಣದಲ್ಲಿದ್ದು ಆಧುನಿಕ ಡೈರಿ ವ್ಯವಸ್ಥೆ ಕಂಡುಬರುವುದಿಲ್ಲ, ಮೀನುಗಾರಿಕೆ ಕಂಡುಬರುವುದಿಲ್ಲ. ಸರ್ಕಾರಿ ನೌಕರರು ಕಂಡುಬರುವುದಿಲ್ಲ. ಗುಡಿ ಕೈಗಾರಿಕೆ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಗಳು ಕಂಡುಬರುವುದಿಲ್ಲ. ಬಯಲು ಶೌಚಾಲಯ ಬಳಸುತ್ತಾರೆ.

ಶೆಟ್ಟಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಶೆಟ್ಟಿಕೆರೆ ಜಿಲ್ಲಾಪಂಚಾಯಿತಿ ಕ್ಷೇತ್ರ, ಜೆ.ಸಿ.ಪುರ ತಾಲ್ಲೂಕು ಪಂಚಾಯಿತಿ ಕ್ಷೇತ್ರ ಮತ್ತು ಗ್ರಾಮಪಂಚಾಯಿತಿಗೆ ಒಳಪಟ್ಟಿದೆ. ತಾಲ್ಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಲ್ಲಿ ತಹಶೀಲ್ದಾರ್ ಕಛೇರಿ ಇದೆ. ಚಿಕ್ಕನಾಯಕನಹಳ್ಳಿ ಗ್ರಾಮಾಂತರ ಪೋಲಿಸ್ ಠಾಣೆ ಸರಹದ್ದಿಗೆ ಸೇರಿದೆ.

ರಸ್ತೆ ಸಂಚಾರಕ್ಕೆ ಯಾವುದೇ ಬಸ್ಸುಗಳ ಸೌಲಭ್ಯವಿರುವುದಿಲ್ಲ. ಸ್ಥಿರ ದೂರವಾಣಿ ಸಂಪರ್ಕಗಳಿರುವುದಿಲ್ಲ. ಪ್ರತಿ ಮನೆಯಲ್ಲೂ ಸಂಚಾರಿ ದೂರವಾಣಿಗಳಿವೆ.

೦೨ ಸ್ತ್ರೀಶಕ್ತಿ ಸಂಘಗಳು, ೦೧ ಸ್ವಸಹಾಯ ಸಂಘವಿದ್ದು ಜನರು ಕಿರುಹಣಕಾಸು ಸಂಸ್ಥೆಗಳಿಂದ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಸೌಲಭ್ಯವನ್ನು ಪಡೆಯುತ್ತಿದ್ದಾರೆ.

ಒಂದು ಅಂಗನವಾಡಿ ಕೇಂದ್ರವಿದ್ದು ೦೯ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಹಾಗೂ ಇಬ್ಬರು ಕಾರ್ಯಕರ್ತೆಯರಿದ್ದಾರೆ. ಶಾಲಾ ಸೌಲಭ್ಯವಿರುವುದಿಲ್ಲ. ಹತ್ತು ಮಕ್ಕಳು ಮಲಗೊಂಡನಹಳ್ಳಿ ಗ್ರಾಮಕ್ಕೆ ಶಾಲೆಗೆ ಹೋಗುತ್ತಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾವೇತನದ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಪಾರ್ವತಮ್ಮ, ವೀರಭದ್ರ, ಆಂಜನೇಯ, ಗಣಪತಿ ದೇವಾಲಯಗಳಿವೆ. ಗ್ರಾಮದ ಜನರು ಮಲ್ಲಿಕಾರ್ಜುನಸ್ವಾಮಿ ದೇವಾಲಯ–ಗಿರಿಜಾ ಕಲ್ಯಾಣವನ್ನು ನಡೆಸುತ್ತಾರೆ. ತೆಪ್ಪೋತ್ಸವ ಕೂಡ ಜರುಗುತ್ತದೆ. ಮಲ್ಲಿಕಾರ್ಜುನ ದೇವಾಲಯವು ದ್ರಾವಿಡ

ಶೈಲಿಯಲ್ಲಿ ನಿರ್ಮಿತವಾಗಿದ್ದು ದೊಡ್ಡದೂ ಸುಂದರವೂ ಆಗಿದೆ. ನೂರೊಂದು ಲಿಂಗಗಳ ಪ್ರತೀಕವಾಗಿ ಈ ಶಿವಲಿಂಗವು ನೂರೊಂದು ಶಿಲಾಸ್ಫಟಿಕಗಳಿಂದ ಮಾಡಲಾಗಿದೆ.

## ಪುರದ ಕಟ್ಟೆ

ಪುರದಕಟ್ಟೆ ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹೋಬಳಿ ಘಟಕವಾದ ಹಂದನಕೆರೆ ಗ್ರಾಮ ಪಂಚಾಯಿತ್‌ಗೆ ಸೇರಿದ ಕಂದಾಯ ಗ್ರಾಮ ತಾಲ್ಲೂಕ್ ಕೇಂದ್ರದಿಂದ ಪಶ್ಚಿಮಕ್ಕೆ ೩೦ ಕಿ.ಮೀ. ಹಂತರದಲ್ಲಿದೆ. ಮೂಲತಃ ಈ ಗ್ರಾಮ ಹಂದನಕೆರೆಯಲ್ಲಿತ್ತು. ಪಾಳೇಗಾರಿಕೆಗೆ ಒಳಪಟ್ಟು ಹಂದನಕರೆ ಸಂಸ್ಥಾನವು ಇಲ್ಲಿದ್ದ ಲಿಂಗಾಯಿತ್ ಸಮುದಾಯದವನ್ನು ಸುಕ್ಷೇಮದಿಂದ ನಡೆಸಿಕೊಳ್ಳಲಿಲ್ಲ ಎಂಬ ಕಾರಣಕ್ಕೆ ಪುರದ ಕಟ್ಟೆಯಲ್ಲಿ ಲಿಂಗಾಯತ್ ಸಮುದಾಯದವರು ನೆಲೆಸಲು ಕಾರಣವಾಯಿತೆಂದು ಅಲ್ಲಿನ ಸ್ಥಳೀಯರ ಅಭಿಪ್ರಾಯವಾಗಿದೆ. ಈ ಗ್ರಾಮವು ತಕ್ಕಲು ಪಾಳನದ ನಾಯಕರ ಅಧೀನದಲ್ಲಿ ಸೇರಿತ್ತೆಂದು ಹೇಳುತ್ತಾರೆ. ಹಂದನಕೆರೆ ಪುರವಾದರೆ ಹೊರ ಊರಾದ ಇಲ್ಲಿ ನೆಲೆಸಿದ್ದ ಜನಾಂಗ ಗ್ರಾಮದವರಿಗೆ ಒಂದು ಕೆರೆ ಮನೆ ಕಟ್ಟಿಸಿದ ಪುರದ ಕಟ್ಟೆಯ ಭೌಗೋಳಿಕ ವಿಸ್ತೀರ್ಣವು ೩೭೧.೮೨ ಹೆಕ್ಟೇರ್ ಇದ್ದು.

ಕೃಷಿಯೋಗ್ಯವಾದ ಕಂದು ಕೆಂಪು ಮಿಶ್ರಣ ಮಣ್ಣನ್ನು ಹೊಂದಿದ್ದು, ಇದೊಂದು ಬಯಲು ನಾಡ ಸೀಮೆಯಾಗಿದೆ. ಯಾವುದೇ ಅಭಯಾರಣ್ಯವಾಗಲೀ, ತೋಪುಗಳಾಗಲೀ ಕಂಡುಬರುವುದಿಲ್ಲ ಇಲ್ಲಿನ ರೈತರ ಮುಖ್ಯ ವೃತ್ತಿ ಕೃಷಿಯಾಗಿದ್ದು, ಮುಖ್ಯಬೆಳೆಯಾಗಿ ರಾಗಿ, ಭತ್ತ, ಜೋಳ, ತೆಂಗನ್ನು ಹಾಗೂ ಉಪಬೆಳೆಗಳಾಗಿ ಅಡಿಕೆ, ದಾಳಿಂಬೆ ತರಕಾರಿ ರೇಷ್ಮೆಯನ್ನು ಬೆಳೆಯುತ್ತಾರೆ. ಪಕ್ಕದಲ್ಲಿ ತಿಮ್ಮಪ್ಪನ ಬೆಟ್ಟವಿದೆ. ಬಯಲು ಸೀಮೆಯ ಉಷ್ಣವಲಯದಲ್ಲಿರುವ ಈ ಗ್ರಾಮದ ಹವಮಾನ ಸರಾಸರಿ ಪ್ರಮಾಣ ಹೀಗಿದೆ. ಮಳೆ ೫೬೪ ಮಿ.ಮೀ. ವಾರ್ಷಿಕ ಬೆಳೆ ೧೨ ಡಿ.ಸೆ. ಬಿಸಿಲು ೩೮ ಡಿ.ಸೆ. ಪುರದ ಕಟ್ಟೆಯಲ್ಲಿ ಪುರದಹಳ್ಳ ಇದೆ. ಇಲ್ಲಿನ ಜನರು ಹಸು, ಎತ್ತು, ಆಡು, ಕುರಿ, ಮೇಕೆ ಪ್ರಾಣಿಗಳನ್ನು ಸಾಕುತ್ತಾರೆ. ತಿಮ್ಮಪ್ಪನ ಬೆಟ್ಟ ಪಕ್ಕದಲ್ಲಿರುವ ಕಾರಣದಿಂದ ಆಗಾಗ ಕರಡಿ, ಜಿಂಕೆ, ನರಿ, ತೋಳಗಳ ದರ್ಶನವನ್ನು ಪಡೆಯುತ್ತಾರೆ. ೧೮೦ ಮನೆಗಳಿದ್ದು ೨೦೧೧ ರ ಜನಗಣತಿ ಪ್ರಕಾರ ೬೪೩ ಜನಸಂಖ್ಯೆಯೊಂದಿದ್ದು, ಪರಿಶಿಷ್ಟ ಪಂಗಡದ ೦೮ ಮನೆಗಳಿದ್ದು, ಬಹುತೇಕ ಲಿಂಗಾಯತ್ ಸಮುದಾಯದವರೇ ಅಧಿಕವಾಗಿದ್ದಾರೆ. ಸುಮಾರು ೬೦೦ ಮಂದಿ ಜನಸಂಖ್ಯೆಯುಳ್ಳರಾಗಿದ್ದಾರೆ. ಕನ್ನಡ ಪ್ರಮುಖ ಭಾಷೆಯಾಗಿ ಎಲ್ಲ) ಜನಾಂಗದವರು ಬಳಸುತ್ತಾರೆ. ಬಹುತೇಕ ಹೆಂಚಿನ ಮನೆಗಳೇ ಅಧಿಕವಾಗಿದ್ದು, ಆಶ್ರಯ ಮನೆಗಳು ೩೦ ಜನತಾ ಮನೆಗಳು ೬೦ ಇಂದಿರಾ ಆವಾಸ್ ಮನೆಗಳು ಇವೆ. ೬ ಮನೆಗಳು ಮಾತ್ರ ಶೌಚಾಲಯ ವ್ಯವಸ್ಥೆಯೊಂದಿದ್ದು, ೧೩೦ ಮನೆಗಳ ಶೌಚಾಲಯ ಮೂಲವು ಬಯಲು ಪ್ರದೇಶವಾಗಿದೆ. ವಸತಿ ರಹಿತ ಕುಟುಂಬದ ಸಂಖ್ಯೆ ಬಂದಿದ್ದು ಮತ್ತು ನಿವೇಶನ ರಹಿತದ ಸಾಮಾನ್ಯ ಕುಟುಂಬವಿದೆ.

ಹೈನುಗಾರಿಕೆಯಲ್ಲಿ ಆಧುನಿಕ ಡೈರಿಯು ಇದೆ. ಮೀನುಗಾರಿಕೆ ಹಾಗೂ ವ್ಯಾಪಾರವು ಇರುವುದಿಲ್ಲ. ಸರ್ಕಾರಿ ನೌಕರರಲ್ಲಿ ಬಸವರಾಜು ಎಂಬ ಬಿ.ಇ.ಓ. ಅಧಿಕಾರಿ ಇದ್ದಾರೆ. ೬ ಮಂದಿ ಶಿಕ್ಷಕರು, ೦೧ ಅಂಗನವಾಡಿ ಶಿಕ್ಷಕಿ, ೪ ಮಂದಿ ಕೆ.ಇ.ಬಿ. ಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಾಂಪ್ರದಾಯಿಕ ಕಸಬುಗಳಾದ ಕುಂಬಾರಿಕೆ, ಬಾಡಿಗೆತನ ಗುಡಿಕಾರರು ಇತ್ಯಾದಿಗಳು ಇಲ್ಲಿ ಕಂಡುಬರುವುದಿಲ್ಲ ಹಂದನಕೆರೆ ಹೋಬಳಿ. ತುಮಕೂರು ಲೋಕಸಭಾಕ್ಷೇತ್ರಕ್ಕೂ ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರ ಹಂದನಕೆರೆ ಜಿಲ್ಲಾ ಪಂಚಾಯಿತಿ ಹಂದನಕೆರೆ ತಾ॥ಪ॥ ಕ್ಷೇತ್ರಕ್ಕೂ ಸೇರಿದೆ. ಹಂದನಕೆರೆ ಗ್ರಾಮ ಪಂಚಾಯತ್‌ಗೆ ಸೇರಿ ಈ ಗ್ರಾಮದಲ್ಲಿಂದ ಒಬ್ಬ ಗ್ರಾ॥ಪಂ ಸದಸ್ಯರಿದ್ದಾರೆ. ಹಾಗೂ ೦೧ ಗ್ರಾ॥ಪಂ ನೌಕರನಿದ್ದಾರೆ. ತಹಶೀಲ್ದಾರ್ ಕಚೇರಿಗೆ ಚಿಕ್ಕನಾಯಕನಹಳ್ಳಿ ಪೋಲಿಸ್‌ಠಾಣೆಗೆ ಬರುವಂತಾಗಿದೆ. ಸಂಚಾರ ವ್ಯವಸ್ಥೆಯಲ್ಲಿ ರೈಲು, ಜಲ, ವಾಯು ಮಾರ್ಗಗಳಿಲ್ಲ. ಅರಸೀಕೆರೆ, ಚಿ.ನಾ.ಹಳ್ಳಿ, ತಿಪಟೂರು ಮಾರ್ಗಕ್ಕೆ ಸಂಚಾರ ಮಾಡಲು ಬಸ್ ವ್ಯವಸ್ಥೆಯಿದೆ. ಒಂದು ಪುಟ್ಟ ಅಂಚೆ ಕಛೇರಿ ಇದೆ. ಸ್ತ್ರೀಶಕ್ತಿ ಸಂಘಗಳಾದ ಕರಿಯಮ್ಮ, ಭುವನೇಶ್ವರಿ, ಲಕ್ಷ್ಮೀದೇವಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಒಂದು ಸ॥ಕಿ॥ಪ್ರಾ॥ಪ್ರಾ॥ ಶಾಲೆ ಇದ್ದು, ಕುಟುಂಬ ಕಲ್ಯಾಣ ವ್ಯವಸ್ಥೆ ಚಾಲ್ತಿಯಲ್ಲಿದ್ದು, ಒಬ್ಬರು ಆರೋಗ್ಯ ಕಾರ್ಯಕರ್ತೆ ಇದ್ದಾರೆ. ಸಮುದಾಯ ಸೌಲಭ್ಯಗಳಾದ ವಿಕಲಚೇತನ ವೇತನವನ್ನು ೬ ಮಂದಿ, ವಿಧವಾ ವೇತನ ಪಡೆಯುವ ೩೦ ಮಂದಿ ಹಾಗೂ ಮಾಸಾಶನವನ್ನು ಪಡೆಯುತ್ತಿದ್ದಾರೆ. ಹೋಟೆಲ್, ಛತ್ರ, ವಸತಿಗಳು ಇರುವುದಿಲ್ಲ. ೦೪ ಪುಟ್ಟ ಚಿಲ್ಲರೆ ಅಂಗಡಿಗಳಿವೆ. ಹಂದನಕೆರೆಯಲ್ಲಿ ದೊರೆತ ಶಾಸನಗಳಿಂದ ಈ ಗ್ರಾಮವು ಸುಮಾರು ೧೩ಮತ್ತು ೧೪ ನೇ ಶತಮಾನದಲ್ಲಿ ಸ್ಥಾಪಿತವಾಗಿರಬೇಕೆಂದು ಲಭ್ಯವಾಗಿದೆ.

ಬಸವಣ್ಣ, ಗಣೇಶ, ವೀರಭದ್ರ, ತಿಮ್ಮಪ್ಪನ ದೇವಾಲಯಗಳನ್ನು ಕಾಣಬಹುದು. ಪ್ರತಿವರ್ಷ ತಿಮ್ಮಪ್ಪನ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

ಶಂಕರಲಿಂಗಯ್ಯ ಎಂಬ ಲಿಂಗಾಯತ್ ಜಾತಿಗೆ ಸೇರಿದ ವ್ಯಕ್ತಿಯು ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ.

## ಪುರದ ಮಠ

ಈ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೨ ಕಿ.ಮೀ. ದೂರದಲ್ಲಿದೆ. ಪುರದ ಮಠ ಗ್ರಾಮವು ಕೆಂಕೆರೆ ಮಜರೆ ಗ್ರಾಮವಾಗಿದ್ದು, ಬಯಲು ನಾಡಾಗಿದೆ. ಕೆಂಕೆರೆ ಗ್ರಾಮದ ಹೊರಗೆ ಕೂಲಿಮಠ ಇದುದರಿಂದಾಗಿ ಪುರದ ಮಠ ಎಂದು ಹೆಸರಾಗಿದೆ. ಇಲ್ಲಿ ಕರಿಕಲ್ಲು ಮಿಶ್ರಿತ ಕೆಂಪು ಮಣ್ಣಿನ ಲಕ್ಷಣವಿದ್ದು, ವ್ಯವಸಾಯಕ್ಕೆ ಯೋಗ್ಯವಾಗಿದೆ. ವೀರಶೈವ ಜನಾಂಗದ ದೇವಾಲಯಗಳು ಇಂದು ಹಿಂದೆ ಇಲ್ಲಿ ಮಠ ಶಾಲೆ ಇತ್ತೆಂದು ಹೇಳಲಾಗುತ್ತಿದೆ.

ಕಾಡುಪ್ರಾಣಿಗಳಾದ ಕರಡಿ, ತೋಳ, ಹಂದಿ ಹಾಗೂ ಕಾಡು ಪಕ್ಷಿಗಳಾದ ನವಿಲು, ಗಿಳಿ, ಹದ್ದು, ಪಾರಿವಾಳಗಳನ್ನು ಕಾಣಬಹುದು. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕುತ್ತಾರೆ. ಹಸುಗಳಲ್ಲಿ ಮಿಶ್ರಿತಗಳಾದ ಜೆರ್ಸಿ ಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿದೆ. ಎಮ್ಮೆಗಳ ಸಾಕಾಣಿ ಜೊತೆಗೆ ಕುರಿ ಮೇಕೆಗಳನ್ನು ಸಾಕುತ್ತಾರೆ. ಹಾಗೂ ಸಾಕು ಪಕ್ಷಿಯಾದ ಕೋಳಿಯನ್ನು ಕಾಣಬಹುದು.

ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆ ಕಾಲದಲ್ಲಿ ಸುಮಾರು ೩೪ ಡಿ.ಸೆಂ. – ೩೬ ಡಿ.ಸೆಂ. ಬಿಸಿಲಿನ ತಾಪವಿರುತ್ತದೆ. ಹಾಗೂ ಚಳಿಗಾಲದಲ್ಲಿ ೧೦ ಡಿ.ಸೆಂ. –೧೩ ಡಿ.ಸೆಂ. ಹವಾಮಾನವಿರುತ್ತದೆ.

ಬೆರಳೆಣಿಕೆಯಷ್ಟು ತೆರೆದ ಬಾವಿಗಳಿದ್ದು ಕೆಲವು ಬಾವಿಗಳು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಳಿಗೆ ಅಲ್ಪ ನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗಾಗಿ ಗ್ರಾಮಪಂಚಾಯ್ತಿವತಿಯಿಂದ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್ ಕೊಳಾಯಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಒಂದು ಕೈಪಂಪುಗಳ ವ್ಯವಸ್ಥೆಯಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಹೊರತೆಗಳಾಗಿವೆ.

ಲಿಂಗಾಯತ ಸಮುದಾಯವೇ ಪ್ರಧಾನವಾಗಿದ್ದು, ಆದಿಕರ್ನಾಟ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ.

ಒಟ್ಟು ೪೭ ಮನೆಗಳನ್ನು ಹೊಂದಿರುವ ಈ ಗ್ರಾಮವು ೨೦೧೧ ರ ಜನಗಣತಿಯ ಪ್ರಕಾರ ೧೮೫ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ವಿವಿಧ ಮನೆಯ ಪ್ರಕಾರಗಳಿದ್ದು ಅವುಗಳಲ್ಲಿ ಕಾಂಕ್ರೀಟ್ ಮನೆಗಳು ಸೀಟಿನ ಕಲ್ಲಿನ ಮನೆಗಳು ಹಾಗೂ ಹೆಂಚಿನ ಮನೆಗಳಿವೆ. ೧೦ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ.

ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಅಂಬೇಡ್ಕರ್ ಹಾಗೂ ಇಂದಿರಾ ಅವಾಜ್ ಯೋಜನೆಯ ಫಲಾನುಭವಿಗಳ ೨೫ ಮನೆಗಳನ್ನು ಕಾಣಬಹುದು.

ಪ್ರಮುಖವಾಗಿ ರಾಗಿಮುದ್ದೆ, ಅನ್ನ, ಹಾಗೂ ಹಬ್ಬಗಳಲ್ಲಿ ಪಾಯಸ ಹೋಳಿಗೆ ಹಾಗೂ ಬಾಡೂಟ ತಯಾರಿಸುತ್ತಾರೆ.

ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಗಳ ಜೊತೆಗೆ ಆಧುನಿಕ ವಾಹನಗಳಾದ ಟ್ರಾಕ್ಟರ್ ಟೆಂಪೋ ಬೈಕು ಕಾಣಬಹುದು.

ಕೃಷಿ ಇಲ್ಲಿನ ಪ್ರಮುಖ ಕಸುಬಾಗಿದ್ದರೂ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿ ಪ್ರಮುಖ ಆಹಾರ ಬೆಳೆಯಾಗಿದೆ. ಹಾಗೂ ಉಪಬೆಳೆಗಳಾದ ಜೋಳ, ಸಾಸಿವೆ, ದ್ವಿದಳದಾನ್ಯಗಳು ಪ್ರಮುಖ ಆಹಾರ ಬೆಳೆಯಾಗಿದೆ. ಹಾಗೂ ತೋಟಗಾರಿಕೆ ಬೆಳೆಯಾದ ತೆಂಗು ಬೆಳೆಯುತ್ತಾರೆ.

ಸಾಂಪ್ರದಾಯಿಕ ವಾಹನಗಳಾದ ಕುರಿ–ಹಸುಗಳ ಸಾಕಾಣಿಯಿಂದ ಗ್ರಾಮದ ಆರ್ಥಿಕ ಸ್ಥಿತಿ ಚೇತರಿಕೆ ಕಾಣುತ್ತಿದೆ.

ಅಂಗನವಾಡಿ ಇಲಾಖೆಯಲ್ಲಿ ಇಂದ್ರಮ್ಮ ಹಾಗೂ ಶಿಕ್ಷಣ ಇಲಾಖೆಯಲ್ಲಿ ಉಮೇಶ್, ಚಿದಾನಂದಮೂರ್ತಿ ಕಾರ್ಯನಿರ್ವಹಿಸುತ್ತಿದ್ದಾರೆ.

ಹುಳಿಯಾರು ಹೋಬಳಿ ಚಿಕ್ಕನಾಯಕನಹಳ್ಳಿ, ವಿಧಾನಸಭಾಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಹೋಯ್ಸಳ ಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೆಂಕೆರೆ ಗ್ರಾಮ ಪಂಚಾಯ್ತಿಗೆ ಒಳಪಟ್ಟಿದೆ.

ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಪಿ.ಟಿ.ಎಚ್. ಸಂಪರ್ಕವನ್ನು ಕಾಣಬಹುದಾಗಿದೆ.

ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಮಕ್ಕಳಿಗೆ ಸರ್ಕಾರದ ವತಿಯಿಂದ ಬಿಸಿಯೂಟ, ಕ್ಷೀರಭಾಗ್ಯ ಹಾಗೂ ಶೌಚಾಲಯದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಶೇ. ೮೩% ಸಾಕ್ಷರತೆ ಇದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ, ವಿಧವಾವೇತನ ಪಡೆಯುತ್ತಿರುವ ೧೨ ಫಲಾನುಭವಿಗಳಿದ್ದಾರೆ.

ಚನ್ನಬಸವೇಶ್ವರ, ಬಸವೇಶ್ವರಿ ಗುಡಿಗಳು ಇಲ್ಲಿನ ಪ್ರಮುಖ ದೇವಾಲಯಗಳಾಗಿವೆ. ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ಮಹಾನವಮಿ, ಗೌರಿ–ಗಣೇಶ ಹಬ್ಬಗಳನ್ನು ಗ್ರಾಮಸ್ಥರು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ.

ಚನ್ನ ಬಸವೇಶ್ವರ ತೇರು, ತೆಪ್ಪ–ಉತ್ಸವ ಇಲ್ಲಿನ ವಿಶೇಷ ಆಕರ್ಷಣೆ ಹಾಗೂ ಸಿಡಿ ಹರಕೆಯೂ ಚಾಲ್ತಿಯಲ್ಲಿದೆ.

### ಪುರ

ಪುರ ಒಂದು ಬೇಚಕಾರ್ ಗ್ರಾಮವಾಗಿದ್ದು, ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೮. ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಹಿಂದೆ ಬೇಚಕಾರ್ ಗ್ರಾಮ ಆಗಿತ್ತು. ಆದರೆ ಈಗ ಜನವಸತಿ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣವು ಒಟ್ಟು ೨೪೬.೧೫ ಚ.ಕಿ.ಮೀ. ವ್ಯಾಪ್ತಿಯಲ್ಲಿ ಸೇರಿದೆ. ಬಯಲು ನಾಡಾಗಿದ್ದು, ಬಿಳಿಕಲ್ಲು, ಬಿಳಿ ಮಣ್ಣನ್ನು ಹೊಂದಿದೆ. ಮೊದಲಿಗೆ ಗ್ರಾಮ ನಾಶವಾಗಿ ಅಲ್ಲಿ ಪುನಃ ಮನೆ ನಿರ್ಮಾಣವಾದುದರಿಂದ ಪುರ ಎಂದು ಕರೆಯಲಾಗುತ್ತದೆ ಎಂದು ಸಿದ್ದರಾಮಯ್ಯ ಅಭಿಪ್ರಾಯ ಪಡುತ್ತಾರೆ.

ಕಂಕನರಿ ತೋಳ ಮೊಲಗಳು ಇತ್ಯಾದಿ ಕಾಡು ಪ್ರಾಣಿಗಳು ಕಂಡುಬರುತ್ತವೆ. ಹಸು, ಎಮ್ಮೆ, ಎತ್ತು, ಇತ್ಯಾದಿ ಪ್ರಾಣಿಗಳನ್ನು ಸಾಕಿದ್ದಾರೆ. ಈ ಸುತ್ತ ಒಳವನಹಕ್ಕಿ ಮರಕುಟಿಗ ಸೋಬಾನದ ಹಕ್ಕಿ ಇತ್ಯಾದಿ ಪಕ್ಷಿಗಳು ಕಂಡು ಬರುತ್ತವೆ.

೫೦೩.೮ ಮಿ.ಮೀ. ಮಳೆ ಬಿದ್ದ ದಾಖಲೆ ಇದೆ. ಡಿ.ಸೆಂ. ನಷ್ಟಿದ್ದು, ಬಿಸಿಲು ೨೬.೩೦ ಡಿ.ಸೆಂ. ನಷ್ಟಿದೆ. ಈ ಗ್ರಾಮದಲ್ಲಿ ಒಂದು ಸಿಸ್ಟನ್ ಇದೆ. ಕಿರು ನೀರು ಸರಬರಾಜು ಯೋಜನೆ ಇದೆ. ಚಳಿ ೧೪೩ ಡಿ.ಸೆಂ. ಬಿಸಿಲು ೩೬ ಡಿ.ಸೆಂ. ಇದೆ.

ಲಿಂಗಾಯಿತರು ದೊಡ್ಡ ಸಮುದಾಯದವರಾಗಿದ್ದಾರೆ. ಇಲ್ಲಿ ಎಲ್ಲರೂ ಕನ್ನಡ ಭಾಷೆಯನ್ನೇ ಮಾತನಾಡುತ್ತಾರೆ. ಈ ಗ್ರಾಮದಲ್ಲಿ ಒಟ್ಟು ೩೦ ಮನೆಗಳಿವೆ. ಆ ಮನೆಗಳನ್ನು ಕಲ್ಲು ಹಾಗೂ ಮಣ್ಣಿನಿಂದ ಕಟ್ಟಿದ್ದಾರೆ. ಆ ಮನೆಗಳನ್ನು ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಹಾಗೂ ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಈ ಗ್ರಾಮದ ಒಟ್ಟು ಜನಸಂಖ್ಯೆ ೧೫೧ ಆಗಿದೆ. ಮುಖ್ಯ ಆಹಾರ ರಾಗಿಮುದ್ದೆ ಆಗಿದೆ. ಇಡ್ಲಿ, ದೋಸೆ, ಉಪ್ಪಿಟ್ಟು, ಇತ್ಯಾದಿಗಳು ಅಮುಖ್ಯ ಆಹಾರವಾಗಿದೆ. ಪಾಯಸ, ಒಬ್ಬಟ್ಟು, ವಿಶೇಷ ಆಹಾರಗಳಾಗಿವೆ. ಈ ಗ್ರಾಮದ ಜನರ ಸಾಂಪ್ರದಾಯಿಕ ವಾಹನ ಎತ್ತಿನಗಾಡಿ ಹಾಗೂ ಆಧುನಿಕ ವಾಹನ ಟ್ರಾಕ್ಟರ್, ಬೈಕ್‌ಗಳು ಆಗಿದೆ. ಈ ಗ್ರಾಮದ ೩೦ ಮನೆಗಳಲ್ಲಿ ಶೌಚಾಲಯಗಳನ್ನು ಹೊಂದಿದ್ದಾರೆ. ವಿದ್ಯಾಭ್ಯಾಸಕ್ಕೆ ಸಮೀಪದ ಅಣೆಕಟ್ಟೆ ಅರಳೀಕೆರೆಗೆ ಶಾಲೆಗೆ ಹೋಗುತ್ತಾರೆ.

ಜನರ ಮುಖ್ಯ ಬೆಳೆ ರಾಗಿ ಆಗಿದೆ. ಆಹಾರ ಒಳೆಯೂ ರಾಗಿ ಆಗಿದೆ. ಹುರುಳಿ ಹೆಸರು, ಉದ್ದು, ಇತ್ಯಾದಿಗಳು ಉಪಬೆಳೆಗಳಾಗಿವೆ. ತೆಂಗನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ. ಜನರ ಮುಖ್ಯ ವ್ಯಾಪಾರಿ ಸರಕು ತೆಂಗಿನಕಾಯಿ ಹಾಗೂ ಕೊಬ್ಬರಿ ಆಗಿದೆ.

ಶೆಟ್ಟಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೂ , ಶೆಟ್ಟಿಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೂ ಕುಪ್ಪೂರು, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಕ್ಷೇತ್ರಕ್ಕೂ ತುಮಕೂರು ಲೋಕಸಭಾ ವ್ಯಾಪ್ತಿಗೂ ಸೇರಿದೆ. ಜನರು ಸಂಪರ್ಕಕ್ಕಾಗಿ ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ.

ಬಸವೇಶ್ವರ ಸ್ತ್ರೀಶಕ್ತಿ ಸಂಘ ಇದೆ. ಶೇ. ೮೦ ರಷ್ಟು ಸಾಕ್ಷರರಿದ್ದಾರೆ. ವೃದ್ಧಾಪ್ಯ ವೇತನ ವಿಧವಾ ವೇತನ ಪಡೆಯುವ ಫಲಾನುಭವಿಗಳಿದ್ದಾರೆ. ಬಸವಣ್ಣನ ದೇವಸ್ಥಾನವಿದೆ.

### ಪೋಚಕಟ್ಟೆ ತಾಂಡ್ಯ

ಪೋಚಕಟ್ಟೆ ತಾಂಡ್ಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿದೆ. ಪೋಚುಕಟ್ಟೆ ತಾಂಡ್ಯ ಮಜರೆ ಗ್ರಾಮ ಬಯಲುನಾಡಾಗಿದೆ. ಕೆಂಪು ಮಿಶ್ರಿತ ಮರಳು ಭೂಮಿಯು ವ್ಯವಸಾಯಕ್ಕೆ ಯೋಗ್ಯವಾಗಿದೆ.

ಕಾಡು ಪ್ರಾಣಿಗಳಾದ ಕರಡಿ, ತೋಳ, ಕಾಡುಹಂದಿ ಕಂಡುಬರುತ್ತವೆ. ಕಾಡು ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ ಹದ್ದುಕ ಹಾಗೂ ಇನ್ನಿತರ ಪಕ್ಷಿಗಳನ್ನು ಕಾಣಬಹುದು.

ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು ಮಿಶ್ರತಳಿಗಳಾದ ಜೆರ್ಸಿ.ಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಾಣಿ ಕುರಿ, ಆಡುಗಳ ಸಾಕಾಣಿ ಇವೆ. ಹಾಗೆಯೇ ಸಾಕು ಪಕ್ಷಿಗಳಾದ ನಾಟಿ ಕೋಳಿಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ೪೫೦.೪೫೦ ಮಿ.ಮೀ. ಮಳೆ ಬೀಳುತ್ತದೆ. ಹವಾಮಾನದ ವೈಪರಿತ್ಯದಿಂದ ಬಿಸಿಲು ೩೨–೩೪ ಡಿ.ಸೆಂ. ಮತ್ತು ಚಳಿಯ ೧೧.ಡಿ.ಸೆಂ. –೧೩ ಡಿ.ಸೆಂ. ಗಿಂತ ಹೆಚ್ಚಾಗಿದೆ. ಕಳೆದ ೧೦ ವರ್ಷಗಳಿಂದ ಜಲಕ್ಷಾಮ ಎದುರಿಸುತ್ತಿದ್ದು, ಬರಗಾಲದ ಹೊಸ್ತಿಲಲ್ಲಿದೆ.

ಪೋಚುಕಟ್ಟೆ ತಾಂಡ್ಯ ಹೊಂದಿಕೊಂಡಿರುವ ಮಲ್ಲಯ್ಯನ ಕಟ್ಟೆ ಹಳ್ಳ ಮಳೆಗಾಲದಲ್ಲಿ ಹರಿಯುತ್ತಿದೆ. ಪ್ರಾಚೀನ ಕಾಲದ ಬಾವಿಗಳು ಬತ್ತಿಹೋಗಿ ಆಧುನಿಕ ಕೊಳವೇ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ.

ಎರಡು ಕೈಪಂಪುಗಳಿದ್ದು, ವಿದ್ಯುತ್ ಅನಿವಾರ್ಯತೆಯ ಸಂದರ್ಭಗಳಲ್ಲಿ ನೀರಿನ ಹೊರತಗಳಾಗಿವೆ.

ಲಂಬಾಣಿ ಸಮುದಾಯವೇ ಪ್ರಧಾನವಾಗಿದ್ದು ಅಕ್ಕಸಾಲಿಗರು ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಲಂಬಾಣಿ ಕನ್ನಡ ಮಾತನಾಡುತ್ತಾರೆ.

ಒಟ್ಟು ೯೮ ಮನೆಗಳನ್ನು ಹೊಂದಿರುವ ಈ ಗ್ರಾಮವು ೨೦೧೧ ರ ಜನಗಣತಿಯ ಪ್ರಕಾರ ೪೯೯ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ.

ಕಾಂಕ್ರೀಟ್ ಮನೆಗಳು ಕಲ್ಲಿನ ಮತ್ತು ಮಣ್ಣಿನ ಹೆಂಚಿನ ಮನೆಗಳಿವೆ. ಹಾಗೆಯೇ ಗುಡಿಸಲಿನಲ್ಲಿ ನೆಲೆಸಿರುವ ಕೆಲವು ಕಟುಂಬಗಳು ಕಾಣಸಿಗುತ್ತದೆ. ಸರ್ಕಾರದ ವಸತಿ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ಯೋಜನೆ ಇಂದಿರಾ ಅವಾಜ್ ಯೋಜನೆಯ ೪೨ ಫಲಾನುಭವಿಗಳಿದ್ದಾರೆ.

ಪ್ರಮುಖ ಆಹಾರ ಪದ್ಧತಿ ರಾಗಿ ಮುದ್ದೆ ಅನ್ನ ರೊಟ್ಟಿ ಚಪಾತಿ, ಹೋಳಿಗೆ, ಬಾಡೂಟ ಪಾಯಸ ವಿಶೇಷವಾಗಿದೆ.

ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಗಳು ಜೊತೆಗೆ ಆಧುನಿಕ ವಾಹನಗಳಾದ ಟ್ರಾಕ್ಟರ್ ಟೆಂಪೋ ಹಾಗೂ ದ್ವಿಚಕ್ರ ವಾಹನಗಳನ್ನು ಕಾಣಬಹುದು. ೫ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಸಾಂಪ್ರದಾಯಿಕ ಹೈನುಗಾರಿಕೆಯ ಜೊತೆಗೆ ಆಧುನಿಕ ಡೈರಿ ವ್ಯವಸ್ಥೆಯೂ ಇದೆ. ಪಶುಪಾಲನೆ ಹೈನುಗಾರಿಕೆಯಿಂದ ಗ್ರಾಮದ ಆರ್ಥಿಕ ಸ್ಥಿತಿ ಚೇತರಿಕೆ ಕಾಣುತ್ತಿದೆ.

ಸಣ್ಣ ಕೈಗಾರಿಕೆಯಾದ ತೆಂಗಿನ ನಾರಿನ ತಯಾರಿಕೆ ಘಟಕವಿರುವುದರಿಂದ ಕೂಲಿ ಕಾರ್ಮಿಕರಿಗೆ ಹೆಚ್ಚಿನ ಅನುಕೂಲವಾಗಿದೆ.

ಹುಳಿಯಾರು ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಹುಳಿಯಾರು ಜಿಲ್ಲಾ ಪಂಚಾಯಿತಿ ಕ್ಷೇತ್ರ ಹುಳಿಯಾರು ತಾಲ್ಲೂಕು ಪಂಚಾಯಿತಿ ಕ್ಷೇತ್ರ ಮತ್ತು ದೊಡ್ಡ ಬಿದರೆ ಗ್ರಾಮ ಪಂಚಾಯಿತಿಯಾಗಿ ಹೊಂದಿದ್ದು, ಇಬ್ಬರು ಗ್ರಾಮ ಪಂಚಾಯತಿ ಸದಸ್ಯರಿದ್ದಾರೆ. ೫೨.೯ರಷ್ಟು ಸಾಕ್ಷರತರಿದ್ದಾರೆ.

ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಯಾಗಿದ್ದು, ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿ.ಟಿ.ಹೆಚ್. ಸಂಪರ್ಕಗಳಿವೆ.

ಹಾಲು ಉತ್ಪಾದಕರ ಸಹಕಾರ ಸಂಘ ಮರಿಯಮ್ಮ ದೇವಿ, ಕೆಂಪಮ್ಮ ದೇವಿ ಸ್ತ್ರೀಶಕ್ತಿ ಸಂಘಗಳಿವೆ. ಒಂದು ಅಂಗನವಾಡಿ ಕೇಂದ್ರವಿದ್ದು ಇಬ್ಬರು ಕಾರ್ಯಕರ್ತೆಯರಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದ್ದು ೫೮ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಇವರಿಗೆ ಬಿಸಿಯೂಟ ಕ್ಷೀರಭಾಗ್ಯ ಹಾಗೂ ಶೌಚಾಲಯದ ವ್ಯವಸ್ಥೆ ಕಲ್ಪಿಸಲಾಗಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ ಮತ್ತು ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಭೂತಪ್ಪ, ಬೇವನಹಳ್ಳಿ ಅಮ್ಮ ಇಲ್ಲಿನ ಪ್ರಮುಖ ದೇವಾಲಯಗಳಾಗಿವೆ. ಯುಗಾದಿ, ದೀಪಾವಳಿ, ಗೌರಿ–ಗಣೇಶ ಹಬ್ಬಗಳನ್ನು ವಿಶೇಷವಾಗಿ ಆಚರಿಸಲ್ಪಡುತ್ತದೆ.

## ಪೋಚಕಟ್ಟೆ

ಪೋಚಕಟ್ಟೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೦೦.೭.೨೩ ಹೆಕ್ಟೇರ್ ಇದೆ. ೯೨೩ ಹೆಕ್ಟೇರ್ ಕೃಷಿ ಭೂಮಿಯಾಗಿದೆ. ಇದೊಂದು ಕಂದಾಯ ಗ್ರಾಮ ಬಯಲು ನಾಡಾಗಿದೆ. ಪಾಚಿಕಟ್ಟೆ ಮೂಲದಿಂದಾಗಿ ಮೌಖಿಕವಾಗಿ ಪೋಚಕಟ್ಟೆ ಎಂದು ಕರೆಯುತ್ತಾರೆ.

ಕೆಂಪು ಮಿಶ್ರಿತ ಮರಳು ಭೂಮಿಯ ವ್ಯವಸಾಯಕ್ಕೆ ಯೋಗ್ಯವಾಗಿದೆ. ಕಾಡು ಪ್ರಾಣಿಗಳಾದ

ಕರಡಿ, ತೋಳ ಹಂದಿ ಹಾಗೂ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಕಾಡು ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಹದ್ದು, ಇನ್ನಿತರ ಪಕ್ಷಿಗಳನ್ನು ಕಾಣಬಹುದು.

ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು ಮಿಶ್ರ ತಳಿಗಳಾದ ಜೆರ್ಸಿ.ಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಾಣಿ ಕುರಿ ಆಡುಗಳ ಸಾಕಾಣಿ ಇದೆ. ಹಾಗೆಯೇ ಸಾಕು ಪಕ್ಷಿಗಳಾದ ನಾಟಿ ಕೋಳಿ ಗಿರಿರಾಜಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ೪೫೦.೪೫೦ ಮಿ.ಮೀ. ಮಳೆ ಬೀಳುತ್ತದೆ. ಹವಾಮಾನದ ವೈಪರಿತ್ಯದಿಂದ ಬಿಸಿಲು ೩೭.೩೪ ಡಿ.ಸೆಂ. ಮತ್ತು ಚಳಿ ೧೧.೧೩ ಡಿ.ಸೆಂ. ಗಿಂತ ಹೆಚ್ಚಾಗಿದೆ. ಕಳೆದ ೧೦ ವರ್ಷಗಳಿಂದ ಜಲಕ್ಷಾಮ ಎದುರಿಸುತ್ತಿದ್ದು, ಬರಗಾಲದ ಹೊಸ್ತಿಲಲ್ಲಿದೆ.

ಕೃಷಿ ಚಟುವಟಿಕೆಗಳಿಗೆ ಉಪಯುಕ್ತವಾಗುವಂತಹ ಕೆರೆ ಪ್ರಾಚೀನ ಕಾಲದ ಬಾವಿಗಳು ಬತ್ತಿ ಹೋಗಿ ಆಧುನಿಕ ಕೊಳವೇ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿಯ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಒದಗಿಸಲಾಗುತ್ತದೆ. ಹಾಗೂ ೨ ಕೈ ಪಂಪುಗಳಿದ್ದು ವಿದ್ಯುತ್ ಅನಿ ವಾರ್ಯತೆಯ ಸಂದರ್ಭಗಳಲ್ಲಿ ನೀರಿನ ಹೊರತೆಗಳಾಗಿವೆ.

ಉಪ್ಪಾರ ಸಮುದಾಯವೇ ಪ್ರಧಾನವಾಗಿದ್ದು ಅಗಸರು ನಾಯಕರು ಕಿರು ಸಮುದಾಯಗಳಾಗಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ.

ಒಟ್ಟು ೯೯ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ ರ ಜನಗಣತಿಯ ಪ್ರಕಾರ ೫೧೫ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಕಾಂಕ್ರೀಟ್ ಮನೆಗಳು ಕಲ್ಲಿನ ಮನೆ ಮತ್ತು ಮಣ್ಣಿನ, ಹೆಂಚಿನ ಮನೆಗಳಿವೆ. ಹಾಗೆಯೇ ಗುಡಿಸಲಿನಲ್ಲಿ ನೆಲೆಸಿರುವ ಕೆಲವು ಕುಟುಂಬಗಳೂ ಕಾಣಸಿಗುತ್ತವೆ.

ಸರ್ಕಾರದ ವಸತಿ ಯೋಜನೆಯ ಜನತಾ, ಆಶ್ರಯ, ಅಂಬೇಡ್ಕರ್ ಯೋಜನೆ, ಇಂದಿರಾ ಅವಾಜ್ ಯೋಜನೆಯ ೪೩ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯದ ಬಳಕೆಯಿದೆ.

ಪ್ರಮುಖ ಆಹಾರ ಪದ್ಧತಿ ರಾಗಿಮುದ್ದೆ ಅನ್ನ ರೊಟ್ಟಿ ಚಪಾತಿ, ಹೋಳಿಗೆ ಬಾಡೂಟ, ಪಾಯಸ ವಿಶೇಷವಾಗಿದೆ.

ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿಗಳ ಜೊತೆಗೆ ಆಧುನಿಕ ವಾಹನಗಳಾದ ಟೆಂಪೋ ಟ್ರಾಕ್ಟರ್ ಬೈಕ್ ಕಾಣಬಹುದು.

ಮುಖ್ಯ ರಸ್ತೆಯನ್ನು ಡಾಂಬರಿನಿಂದ ನಿರ್ಮಿಸಿದ್ದಾರೆ. ೬೦ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಬೇಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದರೂ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿ ಪ್ರಮುಖ ಬೆಳೆಯಾಗಿದ್ದು, ಜೋಳ ಭತ್ತ, ತೆಂಗು, ಅಡಿಕೆ, ಮಾವು, ಹುಣಸೇ ಹಣ್ಣು ಕೆಲಭಾಗದಲ್ಲಿ ತರಕಾರಿ ಬೆಳೆಯುತ್ತಾರೆ.

ಸಾಂಪ್ರದಾಯಿಕ ಹೈನುಗಾರಿಕೆಯ ಜೊತೆಗೆ ಆಧುನಿಕ ಡೈರಿ ವ್ಯವಸ್ಥೆಯೂ ಇದೆ ಪಶುಪಾಲನೆ ಹೈನುಗಾರಿಕೆಯಿಂದ ಗ್ರಾಮದ ಆರ್ಥಿಕ ಸ್ಥಿತಿ ಚೇತರಿಕೆ ಕಾಣುತ್ತಿದೆ.

ಹುಳಿಯಾರು ಹೋಬಳಿ ಚಿ.ನಾ.ಹಳ್ಳಿ ವಿಧಾನ ಸಭಾಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತಿವೆ. ಹುಳಿಯಾರು ಜಿಲ್ಲಾ ಪಂಚಾಯಿತಿ ಕ್ಷೇತ್ರ, ತಿಮ್ಲಾಪುರ ತಾಲ್ಲೂಕು ಪಂಚಾಯಿತಿ ಕ್ಷೇತ್ರ ಮತ್ತು ದೊಡ್ಡ ಬಿದರೆ ಗ್ರಾಮ ಪಂಚಾಯಿತಿಯಾಗಿ ಹೊಂದಿದ್ದು ಇಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ.

ಜಿಲ್ಲಾ ರಸ್ತೆ ಹೊಂದಿದ್ದು ಖಾಸಗಿ ಬಸ್ಸುಗಳು ಆಟೋರಿಕ್ಷಾ ಮತ್ತು ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಯಾಗಿದೆ. ಬಹುಪಾಲು ಮನೆಯಲ್ಲಿ, ಸಂಚಾರಿ ದೂರವಾಣಿ ಮತ್ತು ಡಿ.ಟಿ.ಹೆಚ್. ಸಂಪರ್ಕಗಳಿವೆ. ಹಾಲು ಉತ್ಪಾದಕರ ಸಹಕಾರ ಸಂಘ ೪ ಸ್ತ್ರೀಶಕ್ತಿ ಸಂಘ {ಚಾಮುಂಡೇಶ್ವರಿ, ಶ್ರೀಲಕ್ಷ್ಮೀ}ಗಳಿವೆ.

ಒಂದು ಅಂಗನವಾಡಿ ಕೇಂದ್ರಗಳಿದ್ದು ಇಬ್ಬರು ಕಾರ್ಯಕರ್ತೆಯರಿದ್ದಾರೆ. ಪ್ರಾಥಮಿಕ ಶಾಲೆಯಿದ್ದು, ೪೦ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಸೌಲಭ್ಯವಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ ಮತ್ತು ವಿಧವಾ ವೇತನದ ೧೩ ಫಲಾನುಭವಿಗಳಿದ್ದಾರೆ. ಲಕ್ಷ್ಮೀ ದೇವಸ್ಥಾನ, ಆಂಜನೇಯ ದೇವಸ್ಥಾನ ಇಲ್ಲಿನ ಪ್ರಮುಖ ದೇವಾಲಯಗಳಾಗಿವೆ. ಯುಗಾದಿ ದೀಪಾವಳಿ, ಶಿವರಾತ್ರಿ, ಗೌರಿ–ಗಣೇಶ ಹಬ್ಬಗಳು ವಿಶೇಷವಾಗಿ ಆಚರಿಸಲ್ಪಡುತ್ತದೆ.

# ಬಗ್ಗನಹಳ್ಳಿ

ಬಗ್ಗನಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ಹತ್ತು ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೮೪.೫೫ ಹೆಕ್ಟೇರ್. ೪೫೮.೫೩ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಮರಳು ಮಿಶ್ರಿತ ಕೆಂಪುಮಣ್ಣನ್ನು ಹೊಂದಿದು, ವ್ಯವಸಾಯಕೆ ಯೋಗ್ಯವಾಗಿದೆ. ರಾಗಿ ಮುಖ್ಯ ಬೆಳೆಯಾಗಿದ್ದು, ತೊಗರಿ, ಹೆಸರು, ಉರುಳಿ, ಉದ್ದು, ಅವರೆ ಉಪಬೆಳೆಗಳಾಗಿವೆ. ತೆಂಗು ಮತ್ತು ಅಡಿಕೆ ತೋಟಗಾರಿಕಾ ಮತ್ತು ವಾಣಿಜ್ಯ ಬೆಳೆಗಳಾಗಿವೆ. ಕಾಡುಪ್ರಾಣಿಗಳಾದ ಮುಳ್ಳುಹಂದಿ ಹಾಗೂ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಕಾಡು ಪಕ್ಷಿಗಳಾದ ನವಿಲು, ಕಾಡುಹಕ್ಕಿ, ಗೌಜಲಕ್ಕಿ, ಗುಬ್ಬಚ್ಚಿ, ಗೂಬೆ ರಣಹದ್ದು, ಗಿಡುಗ, ಮರಕುಟಿಗಗಳು ಕಂಡುಬರುತ್ತವೆ.

ಹಳ್ಳಿಕಾರ್ ಮತ್ತು ದೇವದಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ನಾಟಿಹಸು ಹಾಗೂ ನಾಟಿ ಎಮ್ಮೆಗಳನ್ನು ಜೆರ್ಸಿ ಮತ್ತು ಹೆಚ್.ಎಫ್. ಸೀಮೆಹಸುಗಳನ್ನು ಸಾಕುತ್ತಾರೆ. ಕುರಿ ಸಾಕಣೆ ಇದೆ.

ವಾರ್ಷಿಕ ಸರಾಸರಿ ೫೦೦ ಮಿ.ಮೀ. ಮಳೆ ಬೀಳುತ್ತದೆ. ಹವಾಮಾನ ವೈಪರೀತ್ಯದಿಂದಾಗಿ ಕಳೆದ ಹತ್ತು ವರ್ಷಗಳಿಂದ ಜಿಲಕ್ಷಾಮ ಎದುರಿಸುತ್ತಿದ್ದು ಬರಗಾಲಕ್ಕೆ ತುತ್ತಾಗಿದೆ.

ವಾಯುವ್ಯ ದಿಕ್ಕಿಗೆ ಹೂವಿನ ಹಳ್ಳವಿದ್ದು ಹರಿಯುತ್ತಿದ್ದು ಮಳೆ ಬಂದಾಗ ಮಾತ್ರ ಹರಿಯುತ್ತದೆ. ಪೂರ್ವ ದಿಕ್ಕಿನಲ್ಲಿ ಒಂದು ಕಟ್ಟೆಯಿದ್ದು ಇದರಿಂದ ಕೃಷಿ ಚಟುವಟಿಕೆಗಳಿಗೆ ಯಾವುದೇ ಉಪಯೋಗವಿಲ್ಲ.

೪೦೦ ರಿಂದ ೫೦೦ ಅಡಿ ಆಳದ ೨೦ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಿಗೆ ನೀರೋಣ್ಣದಗಿಸುತ್ತದೆ. ಕುಡಿಯುವ ನೀರಿಗೆ ೧ ಲಕ್ಷ ಲೀಟರ್ ನೀರಿನ ಸಂಗ್ರಹ ಸಾಮರ್ಥ್ಯದ ಒಂದು ನೀರಿನ ಮೇಲ್ತೊಟ್ಟಿ ಇದ್ದು, ೦೩ ಮಿನಿಟ್ಯಾಂಕುಗಳು ಇವೆ. ಒಂದು ಸೇದುವ ಬಾವಿಯಿದ್ದು ಸಂಪೂರ್ಣವಾಗಿ ಬತ್ತಿಹೋಗಿದೆ.

ಕುರುಬ ಸಮುದಾಯದವರೇ ಪ್ರಧಾನ ಸಮುದಾಯವಾಗಿದ್ದು ನಾಯಕರು, ಲಿಂಗಾಯಿತರು, ವಡ್ಡರು ಕಿರು ಸಮುದಾಯಗಳಾಗಿವೆ. ಪ್ರಮುಖ ಭಾಷೆ ಕನ್ನಡ.

ಆಧುನಿಕ ವಾಹನಗಳಾದ ಟ್ರಾಕ್ಟರ್, ಕಾರು, ಆಟೋ, ಟೆಂಪೋ, ದ್ವಿಚಕ್ರ ವಾಹನಗಳೊಂದಿಗೆ ಸಾಂಪ್ರದಾಯಿಕ ವಾಹನವಾದ ಎತ್ತಿನಗಾಡಿಗಳು ಸಹ ಉಳಿದುಕೊಂಡು ಬಂದಿವೆ.

ಒಟ್ಟು ೧೩೦ ಮನೆಗಳನ್ನು ಹೊಂದಿರುವ ೨೦೧೧ ರ ಜನಗಣತಿಯ ಪ್ರಕಾರ ೬೫೦ ಜನಸಂಖ್ಯಾ ಪ್ರಮಾಣವನ್ನು ಒಳಗೊಂಡಿದೆ. ಕಾಂಕ್ರೀಟ್ ಮನೆಗಳು, ಮಣ್ಣಿನ ಮನೆಗಳು, ಸೀಮೆಹೆಂಚಿನ ಮನೆಗಳು ಮತ್ತು ಗುಡಿಸಲುಗಳಿವೆ. ಪ್ರಮುಖ ಆಹಾರಪದ್ಧತಿ ರಾಗಿಮುದ್ದೆ ಮತ್ತು ಅನ್ನ.

ಬೇಸಾಯ ಇಲ್ಲಿಯ ಪ್ರಮುಖ ಕಸುಬಾಗಿದ್ದರೂ ಕಟ್ಟಡ ಕೆಲಸಗಾರರು, ಮತ್ತು ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದರೆ. ಮೀನುಗಾರಿಕೆ ಕಂಡುಬರುವುದಿಲ್ಲ. ಪೋಲಿಸ್ ಇಲಾಖೆ, ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ೦೩ ಮಂದಿ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಬಡೆತನದ ಕಂಪನಿಗಳಲ್ಲಿ ೧೦ ಮಂದಿ ಕೆಲಸ ಮಾಡುತ್ತಿದ್ದಾರೆ. ಗುಡಿ ಕೈಗಾರಿಕೆ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಗಳು ಕಂಡುಬರುವುದಿಲ್ಲ.

ಶೆಟ್ಟಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಶೆಟ್ಟಿಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರ, ಜೆ.ಸಿ. ಪುರ ಗ್ರಾ.ಪಂ.ತಾ.ಪಂ. ಕ್ಷೇತ್ರ ಹಾಗೂ ಗೋಡೆಕೆರೆ ಗ್ರಾಮ ಪಂಚಾಯಿತಿಗೆ ಸೇರಿದೆ. ತಾಲ್ಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಲ್ಲಿ ತಹಶೀಲ್ದಾರ್ ಕಛೇರಿ ಇದೆ. ಚಿಕ್ಕನಾಯಕನಹಳ್ಳಿ ಗ್ರಾಮಾಂತರ ಪೋಲಿಸ್ ಠಾಣೆ ಸರಹದ್ದಿಗೆ ಸೇರಿದೆ.ಇಬ್ಬರು ಗ್ರಾಮಪಂಚಾಯಿತಿ ಸದಸ್ಯರಿದ್ದಾರೆ.

ರಸ್ತೆ ಸಂಚಾರಕ್ಕೆ ಯಾವುದೇ ಬಸ್ಸುಗಳ ಸೌಲಭ್ಯವಿಲ್ಲ. ಸ್ಥಿರ ದೂರವಾಣಿ ಸಂಪರ್ಕಗಳಿರುವುದಿಲ್ಲ. ಪ್ರತಿ ಮನೆಯಲ್ಲೂ ಸಂಚಾರಿ ದೂರವಾಣಿಗಳಿವೆ. ಮೂರು ಸ್ತ್ರೀಶಕ್ತಿ ಸಂಘಗಳು, ೧ ಸ್ವಸಹಾಯ ಸಂಘವಿದ್ದು ಗ್ರಾಮದ ಜನರು ಕಿರು ಹಣಕಾಸು ಸಂಸ್ಥೆಗಳಿಂದ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯುತ್ತವೆ.

ಒಂದು ಅಂಐವಾಡಿ ಇದ್ದು ಇಬ್ಬರು ಅಂಗನವಾಡಿ ಕಾರ್ಯಕರ್ತೆಯರಿದ್ದಾರೆ. ಹಾಗೂ ೧೦ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೩ ಮಂದಿ ಶಿಕ್ಷಕರಿದ್ದಾರೆ. ಒಟ್ಟು ೨೦ ಮಂದಿ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಬಸವೇಶ್ವರ ದೇವಾಲಯವಿದೆ.

## ಬಸವನಗುಡಿ

ಬಸವನಗುಡಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೨ ಕಿ.ಮೀ. ದೂರದಲ್ಲಿದೆ. ಬಸವನಗುಡಿ ಗ್ರಾಮವು ಕೆಂಕೆರೆ ಮಜರೆ ಗ್ರಾಮ ಬಯಲುನಾಡಾಗಿದೆ.

ಕರಿಕಲ್ಲು ಮಿಶ್ರಿತ ಕೆಂಪು ಮಣ್ಣಿನ ಲಕ್ಷಣವಿದ್ದು, ವ್ಯವಸಾಯಕ್ಕೆ ಯೋಗ್ಯವಾಗಿದೆ. ಬಸವೇಶ್ವರ ದೇವರ ಗುಡಿ ಆ ಪ್ರದೇಶದಲ್ಲಿ ನಗರ ಬೆಳೆದು ಬಸವನಗುಡಿ ಎಂದಾಗಿದೆ.

ಕಾಡು ಪ್ರಾಣಿಗಳಾದ ತೋಳ, ಕರಡಿ, ಹಂದಿ ಹಾಗೂ ಕಾಡುಪಕ್ಷಿಗಳಾದ ಗಿಳಿ, ನವಿಲು, ಹದ್ದು, ಪಾರಿವಾಳಗಳನ್ನು ಕಾಣಬಹುದು. ಸಾಕುಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕುತ್ತಾರೆ. ಹಸುಗಳಲ್ಲಿ ಮಿಶ್ರಿತಳಿಗಳಾದ ಜೆರ್ಸಿಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ಎಮ್ಮೆಗಳ ಸಾಕಾಣಿ ಜೊತೆಗೆ ಕುರಿ–ಮೇಕೆಗಳ ಸಾಕಾಣಿಯು ರೂಢಿಯಲ್ಲಿವೆ. ಹಾಗೂ ಸಾಕು ಪಕ್ಷಿಯಾದ ಕೋಳಿಯನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆ ಕಾಲದಲ್ಲಿ ಸುಮಾರು ೩೪ ಡಿ.ಸೆಂ.,೩೬ ಡಿ.ಸೆಂ. ಬಿಸಿಲಿನ ತಾಪವಿರುತ್ತದೆ ಹಾಗೂ ಚಳಿಗಾಲದಲ್ಲಿ ೧೦ ಡಿ.ಸೆಂ.– ೧೫ ಡಿ.ಸೆಂ. ಚಳಿಯಿರುವ ಹವಾಮಾನವಿರುತ್ತದೆ.

ಹೊಂದಿಕೊಂಡಿರುವ ಗಂಗಮ್ಮನ ಹಳ್ಳ ಮಳೆಗಾಲದಲ್ಲಿ ಹೆಚ್ಚು ಮಳೆ ಬಂದರೆ ಮಾತ್ರ ತುಂಬಿ ಹರಿಯುತ್ತದೆ. ತೆರೆದ ಬಾವಿಗಳಿದ್ದು ಕೆಲವು ಬಾವಿಗಳು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೆ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯ್ತಿವತಿಯಿಂದ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

೧ ಕೈ ಪಂಪುಗಳ ವ್ಯವಸ್ಥೆಯಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಹೊರತೆಗಳಾಗಿವೆ.

ಲಿಂಗಾಯುತ ಸಮುದಾಯವೇ ಪ್ರಧಾನವಾಗಿದ್ದು, ನಾಯಕ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ.

ಒಟ್ಟು ೨೮ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೨೭ ಜನ ಸಂಖ್ಯಾ ಪ್ರಮಾಣವನ್ನು ಹೊಂದಿದೆ. ವಿವಿಧ ಮನೆಯ ಪ್ರಕಾರಗಳಿದ್ದು, ಅವುಗಳಲ್ಲಿ ಕಾಂಕ್ರೀಟ್ ಮನೆಗಳು, ಕಲ್ಲಿನ ಮಣ್ಣಿನ ಮನೆಗಳು ಕಂಡುಬರುತ್ತವೆ.

೨೬– ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ. ಸರ್ಕಾರದ ಯೋಜನೆಯಾದ ಅಂಬೇಡ್ಕರ್ ಹಾಗೂ ಇಂದಿರಾ ಅವಾಜ್ ಯೋಜನೆ ಕಾಣಬಹುದು. ಪ್ರಮುಖವಾಗಿ ರಾಗಿಮುದ್ದೆ, ಅನ್ನ ಹಾಗೂ ಹಬ್ಬಗಳಲ್ಲಿ ಪಾಯಸ, ಹೋಳಿಗೆ ಹಾಗೂ ಬಾಡೂಟ ತಯಾರಿಸುತ್ತಾರೆ.

ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಗಳ ಜೊತೆಗೆ ಆಧುನಿಕ ವಾಹನಗಳಾದ ಟ್ರಾಕ್ಟರ್, ಟೆಂಪೋ ಬೈಕು ಕಾಣಬಹುದು.

ಕೃಷಿ ಇಲ್ಲಿನ ಪ್ರಮುಖ ಕಸುಬಾಗಿದ್ದರೂ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿ, ಭತ್ತ, ಪ್ರಮುಖ ಆಹಾರ ಬೆಳೆಗಳು ಉಪಬೆಳೆಗಳಾದ ಜೋಳ, ದ್ವಿದಳ ಧಾನ್ಯಗಳು ಪ್ರಮುಖ ಆಹಾರ ಬೆಳೆಗಳಾದ ತೆಂಗು ತೋಟಗಾರಿಕೆ ಬೆಳೆಯಾಗಿದೆ.

ಸಾಂಪ್ರದಾಯಿಕ ಹೈನುಗಾರಿಕೆಯಾದ ಕುರಿ–ಹಸು ಸಾಕಾಣಿಯನ್ನು ಇಲ್ಲಿ ಕಾಣಬಹುದು. ಪಶುಪಾಲನೆ ಹೈನುಗಾರಿಕೆಯಿಂದ ಗ್ರಾಮದ ಆರ್ಥಿಕ ಸ್ಥಿತಿಯಲ್ಲಿ ಚೇತರಿಕೆ ಕಾಣುತ್ತಿದೆ. ಶಿಕ್ಷಣ ಇಲಾಖೆಯಲ್ಲಿ ಲೀಲಾವತಿ ಹಾಗೂ ಕೆ.ಇ.ಬಿ. ಯಲ್ಲಿ ಶಿವಕುಮಾರ ಕಾರ್ಯನಿರ್ವಹಿಸುತ್ತಿದ್ದಾರೆ.

ಹುಳಿಯಾರು ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಹೊಯ್ಸಳ ಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಕೆಂಕೆರೆ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಹಾಗೂ ಕೆಂಕೆರೆ ಗ್ರಾಮ ಪಂಚಾಯ್ತಿಗೆ ಒಳಪಟ್ಟಿದೆ.

ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಟಿ.ಟಿ.ಹೆಚ್. ಸಂಪರ್ಕವನ್ನು ಕಾಣಬಹುದಾಗಿದೆ. ಸ್ತ್ರೀಶಕ್ತಿ ಸಂಘ ಹಾಗೂ ಬಸವೇಶ್ವರ ಮಹಿಳಾ ಸ್ವಸಹಾಯ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಗ್ರಾಮಸ್ಥರು ಉಳಿತಾಯ ಸಾಲ ಸೌಲಭ್ಯಗಳನ್ನು ಪಡೆದಿದ್ದಾರೆ. ಸಾಕ್ಷರತೆ ೮೩% ರಷ್ಟಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ ವಿಕಲ ಚೇತನ, ವಿಧವಾ ವೇತನ ಪಡೆಯುತ್ತಿರುವ ೧೨ ಫಲಾನುಭವಿಗಳಿದ್ದಾರೆ. ಬಸವೇಶ್ವರ ಗುಡಿಯು ಇಲ್ಲಿನ ಪ್ರಮುಖ ದೇವಾಲಯವಾಗಿದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ಮಹಾನವಮಿ, ಗೌರಿ–ಗಣೇಶ, ಹಬ್ಬಗಳನ್ನು ಗ್ರಾಮಸ್ಥರು ಸಡಗರದಿಂದ ಆಚರಿಸುತ್ತಾರೆ.

## ಬೆನಕನಕಟ್ಟೆ ಗೊಲ್ಲರಹಟ್ಟಿ

ಬೆನಕನಕಟ್ಟೆ ಗೊಲ್ಲರಹಟ್ಟಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದ ದಕ್ಷಿಣ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದದ ಹನ್ನೆರಡು ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೨೦ ಹೆಕ್ಟೇರ್.

ಮಜರೆ ಗ್ರಾಮ ಬೆನಕನಕಟ್ಟೆಗೆ ಸೇರಿದೆ. ಗೊಲ್ಲ ಸಮುದಾಯದವರು ಮಾತ್ರ ಕಂಡುಬರುವುದರಿಂದ ಬೆನಕನಕಟ್ಟೆ ಗೊಲ್ಲರಹಟ್ಟಿ ಎಂಬ ಹೆಸರು ಬಂದಿದೆ.

ಕಪ್ಪು ಹಾಗೂ ಮರಳುಮಿಶ್ರಿತ ಕೆಂಪುಮಣ್ಣನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ರಾಗಿ ಮುಖ್ಯ ಬೆಳೆಯಾಗಿದ್ದು, ತೊಗರಿ, ಹೆಸರು, ಉರುಳಿ, ಉದ್ದು, ಅವರೆ ಉಪಬೆಳೆಗಳಾಗಿವೆ. ಕಾಡುಪ್ರಾಣಿಗಳಾದ ಮುಳ್ಳುಹಂದಿ, ವಿಷಪೂರಿತ ಹಾವುಗಳು ಕಂಡುಬರುತ್ತವೆ. ಕಾಡುಪಕ್ಷಿಗಳಾದ ನವಿಲು, ಕಾಡುಕೋಳಿ, ಕಾಡುಹಕ್ಕಿ, ಗೌಜಲಕ್ಕಿ, ಗುಬ್ಬಚ್ಚಿ, ಗೂಬೆ, ಮರಕುಟಿಗಳು ಕಂಡುಬರುತ್ತವೆ.

ನಾಟಿ ಹಸು, ನಾಟಿ ಎತ್ತು, ಎಮ್ಮೆ ಹಾಗೂ ಕುರಿಗಳು ಮುಖ್ಯ ಸಾಕುಪ್ರಾಣಿಗಳಾಗಿವೆ. ಕೋಳಿ ಮುಖ್ಯ ಸಾಕುಪಕ್ಷಿಯಾಗಿದೆ. ವಾರ್ಷಿಕ ಸರಾಸರಿ ೫೩೦ ಮಿ.ಮೀ. ಮಳೆ ಬೀಳುತ್ತದೆ. ಹವಾಮಾನ ವೈಪರೀತ್ಯದಿಂದಾಗಿ ಕಳೆದ ಹತ್ತು ವರ್ಷಗಳಿಂದ ಜಲಕ್ಷಾಮ ಎದುರಿಸುತ್ತಿದ್ದು ಬರಗಾಲಕ್ಕೆ ತುತ್ತಾಗಿದೆ.

ಪೂಜಾರಿ ಕಟ್ಟೆ, ರಾಮೇಗೌಡನಕಟ್ಟೆ, ಕಾಚಾಪುರ ಕಟ್ಟೆ ಎಂಬ ಮೂರು ಕಟ್ಟೆಗಳಿವೆ. ಇವುಗಳು ಮಳೆಯ ನೀರನ್ನು ಅವಲಂಬಿಸಿದ್ದು ದನಕರುಗಳಿಗೆ ನೀರನ್ನು ಒದಗಿಸುತ್ತವೆ. ಆದರೆ ಇವುಗಳಿಂದ ಕೃಷಿ ಚಟುವಟಿಕೆಗಳಿಗೆ ಯಾವುದೇ ಉಪಯೋಗವಿಲ್ಲ.

೪೦೦ ರಿಂದ ೫೦೦ ಅಡಿ ಆಳದ ೦೩ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಗೆ ನೀರೊದಗಿಸುತ್ತಿದೆ. ೦೧ ಕೈಪಂಪು ೧ ಮಿನಿಟ್ಯಾಂಕು ಇದ್ದು ಕೃಷಿ ಚಟುವಟಿಕೆಗಳಿಗೆ ನೀರನ್ನೊದಗಿಸುತ್ತದೆ. ಕುಡಿಯುವ ನೀರಿನ ಸೌಲಭ್ಯವಿದೆ.

ಗೊಲ್ಲ (ಯಾದವ) ಸಮುದಾಯದವರು ಮಾತ್ರ ಕಂಡುಬರುತ್ತಾರೆ. ಜನರ ಭಾಷೆ ಕನ್ನಡ. ಒಟ್ಟು ೧೮ ಮನೆಗಳನ್ನು ಹೊಂದಿರುವ ಇತ್ತೀಚಿನ ಜನಗಣತಿಯ ಪ್ರಕಾರ ೮೮ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಮಣ್ಣಿನ ಮನೆಗಳು ಕುಂಬಾರು ಹೆಂಚಿನ ಮನೆಗಳು ಹಾಗೂ ಗುಡಿಸಲುಗಳಿವೆ. ಪ್ರಮುಖ ಆಹಾರ ಪದ್ಧತಿ ರಾಗಿಮುದ್ದೆ ಮತ್ತು ಅನ್ನ.

ರಸ್ತೆ ವ್ಯವಸ್ಥೆಯು ಹಾಗೂ ಚರಂಡಿ ವ್ಯವಸ್ಥೆಯು ಕಂಡುಬರುವುದಿಲ್ಲ. ಗ್ರಾಮದಲ್ಲಿ ಸಾಂಪ್ರದಾಯಿಕ ಹೈನುಗಾರಿಕೆಯಿದ್ದು ಆಧುನಿಕ ಡೈರಿ ವ್ಯವಸ್ಥೆ ಇರುವುದಿಲ್ಲ. ಸರ್ಕಾರಿ ನೌಕರರು ಕಂಡುಬರುವುದಿಲ್ಲ. ೦೩ ಮಂದಿ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಗುಡಿ ಕೈಗಾರಿಕೆ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಗಳು ಕಂಡುಬರುವುದಿಲ್ಲ.

ಶೆಟ್ಟಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಶೆಟ್ಟಿಕೆರೆ ಜಿಲ್ಲಾಪಂಚಾಯಿತಿ ಕ್ಷೇತ್ರ, ಕುಪ್ಪೂರು ತಾಲ್ಲೂಕು ಪಂಚಾಯಿತಿ ಕ್ಷೇತ್ರ ಹಾಗೂ ಗ್ರಾಮಪಂಚಾಯಿತಿಗೆ ಒಳಪಟ್ಟಿದೆ. ತಾಲ್ಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಲ್ಲಿ ತಹಶೀಲ್ದಾರ್ ಕಛೇರಿ ಇದೆ. ಚಿಕ್ಕನಾಯಕನಹಳ್ಳಿ ಗ್ರಾಮಾಂತರ ಪೋಲಿಸ್ ಠಾಣೆ ಸರಹದ್ದಿಗೆ ಸೇರಿದೆ.

ನರೇಗರಸ್ತೆ ಸಂಚಾರವಿದೆ. ಸ್ಥಿರ ದೂರವಾಣಿ ಸಂಪರ್ಕ ವ್ಯವಸ್ಥೆಯು ಇರುವುದಿಲ್ಲ. ಪ್ರತಿ ಮನೆಯಲ್ಲೂ ಸಂಚಾರಿ ದೂರವಾಣಿಗಳಿವೆ.

ಒಂದು ಸ್ತ್ರೀಶಕ್ತಿ ಸಂಘವಿದ್ದು ಜನರು ಕಿರುಹಣಕಾಸು ಸಂಸ್ಥೆಗಳಿಂದ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲಸೌಲಭ್ಯ ಪಡೆಯುತ್ತಾರೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನ ಫಲಾನುಭವಿಗಳಿದ್ದಾರೆ.

ಉಜ್ಜಿನಿ ಸಿದ್ದೇಶ್ವರ ದೇವಾಲಯವಿದ್ದು ಪ್ರತಿವರ್ಷ ದೀಪಾವಳಿ ಸಮಯದಲ್ಲಿ ಕೆಂಡ ಪಲ್ಲಕ್ಕಿ ಉತ್ಸವವನ್ನು ನಡೆಸುತ್ತಾರೆ. ಒಂದು ಅಂಗನವಾಡಿ ಇದ್ದು ೯ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಹಾಗೂ ಇಬ್ಬರು ಅಂಗನವಾಡಿ ಕಾರ್ಯಕರ್ತೆಯರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಒಂದರಿಂದ ಐದನೇ ತರಗತಿಯವರೆಗೆ ೧೬ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ.

## ಬಲ್ಲಪ್ಪನಹಟ್ಟಿ

ಬಲ್ಲಪ್ಪನಹಟ್ಟಿ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೯ ಕಿ.ಮೀ. ದೂರದಲ್ಲಿದೆ. ಬಲ್ಲಪ್ಪ ಎಂಬ ವ್ಯಕ್ತಿ ಮೂಲದಿಂದಾಗಿ ಗ್ರಾಮಕ್ಕೆ ಈ ಹೆಸರು ಬಂದಿದೆ. ಇದು ದಸೂಡಿ ಮಜರೆ ಗ್ರಾಮ ಬಯಲುನಾಡಾಗಿದೆ. ಈ ಗ್ರಾಮಕ್ಕೆ ಬಾದೇಹಟ್ಟಿ ಗ್ರಾಮ ಸೇರ್ಪಡೆ ಗ್ರಾಮವಾಗಿದೆ. ಕೆಂಪು ಮಿಶ್ರಿತ ಬಿಳಿ ಮರಳು ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ.

ಕಾಡು ಪ್ರಾಣಿಗಳಾದ ಕರಡಿ, ತೋಳ, ಹಂದಿ ಮತ್ತು ಮೊಲಗಳು ಕಂಡು ಬರುತ್ತವೆ. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ ಮತ್ತು ನಾಯಿಗಳನ್ನು ಗ್ರಾಮಸ್ಥರು ಸಾಕುತ್ತಾರೆ. ಹಸುಗಳಲ್ಲಿ ಹಳ್ಳಿಕಾರ್, ಮಿಶ್ರತಳಿಗಳಾದ ಜೆರ್ಸಿ, ಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿವೆ. ಕಾಡು ಪಕ್ಷಿಗಳಾದ ಹದ್ದು-ಗಿಳಿ, ನವಿಲು, ಪಾರಿವಾಳ ಮತ್ತು ಗೌಜಿಗ ಪಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ.

ಸಾಕು ಪಕ್ಷಿಗಳಾದ ನಾಟಿಕೋಳಿ, ಗಿರಿರಾಜಗಳನ್ನು ಸಾಕುತ್ತಾರೆ. ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆ ಕಾಲದಲ್ಲಿ ೩೪-೩೬ ಡಿ.ಸೆಂ. ಬಿಸಿಲಿನ ತಾಪವಿದ್ದು, ಚಳಿಗಾಲದಲ್ಲಿ ೧೦-೧೨ ಡಿ.ಸೆಂ. ಹವಾಮಾನವಿರುತ್ತದೆ.

ಎರಡು ತೆರೆದ ಬಾವಿಗಳಿದ್ದು ಕೆಲವು ಬತ್ತಿ ಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗೆ ಅಲ್ಪ ನೀರಿನ ಮೂಲಗಳಾಗಿವೆ. ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಮಿನಿಟ್ಯಾಂಕ್ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತಿದೆ. ಗೊಲ್ಲ ಸಮುದಾಯವೇ ಪ್ರಧಾನವಾಗಿದ್ದು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ.

ಸಾಂಪ್ರದಾಯಿಕ ಎತ್ತಿನಗಾಡಿಯ ಜೊತೆಗೆ ಆಧುನಿಕ ವಾಹನಗಳಾದ ಟ್ರಾಕ್ಟರ್ ಟೆಂಪೋ ಮತ್ತು ದ್ವಿಚಕ್ರವಾಹನಗಳನ್ನು ಕಾಣಬಹುದಾಗಿದೆ. ಒಟ್ಟು ೧೨೦ ಮನೆಗಳನ್ನು ಹೊಂದಿರುವ ೨೦೧೧ ರ ಜನಗಣತಿಯ ಪ್ರಕಾರ ೫೬೨ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಸೀಟಿನ ಕಲ್ಲು, ಮಣ್ಣಿನ ಮತ್ತು ಹೆಂಚಿನ, ಗುಡಿಸಲು ಮನೆಗಳನ್ನು ಕಾಣಬಹುದು.

ಪ್ರಮುಖ ಆಹಾರ ಪದ್ಧತಿಯಾಗಿ ರಾಗಿ ಮುದ್ದೆ ಅನ್ನ, ರೊಟ್ಟಿ, ಚಪಾತಿ ಚಿತ್ರಾನ್ನ, ಪಾಯಸ ಮತ್ತು ಹೋಳಿಗೆ ಬಾಡೂಟ ವಿಶೇಷವಾಗಿವೆ.

ಬೇಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದರೂ ಕೂಲಿ ಕೃಷಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿ, ಜೋಳ, ದ್ವಿದಳಧಾನ್ಯಗಳು ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಹೈನುಗಾರಿಕೆ ಪ್ರಸ್ತುತದಲ್ಲಿದೆ. ಹುಳಿಯಾರು ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯಿತಿ ಕ್ಷೇತ್ರ. ದಸೂಡಿ ತಾಲ್ಲೂಕು ಪಂಚಾಯಿತಿ ಕ್ಷೇತ್ರ ಹಾಗೂ ಗ್ರಾಮ ಪಂಚಾಯಿತಿ ಕಛೇರಿಯನ್ನಾಗಿ ಹೊಂದಿದೆ.

ಖಾಸಗಿ ಬಸ್ಸು-ಆಟೋರಿಕ್ಷಾ ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಬಹುಪಾಲು ಮನೆಗಳಲ್ಲಿ ಸಂಚಾರಿ ದೂರವಾಣಿ ಹಾಗೂ ಡಿ.ಟಿ.ಎಚ್. ಸಂಪರ್ಕವನ್ನು ಕಾಣಬಹುದಾಗಿದೆ.

ಎರಡು ಸ್ತ್ರೀಶಕ್ತಿ ಸಂಘ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಭಿವೃದ್ಧಿ ಸಂಘಗಳಿದ್ದು ಸಣ್ಣ ಉಳಿತಾಯ ಮತ್ತು ಸಾಲ ಸೌಲಭ್ಯ ಪಡೆಯುತ್ತಿದ್ದಾರೆ. ಒಂದು ಅಂಗನವಾಡಿ ಕೇಂದ್ರ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಹಾಗೂ ಶೌಚಾಲಯದ ಸೌಲಭ್ಯವಿದೆ. ಶೇ. ೬೩% ಸಾಕ್ಷರತೆ ಇದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ಮತ್ತು ವಿಧವಾ ವೇತನ ಫಲಾನುಭವಿಗಳಿದ್ದಾರೆ.

ಬೈರಪ್ಪ, ಭೂತಪ್ಪ ಮತ್ತು ಮಾರಮ್ಮ ದೇವಿಯ ದೇವಾಲಯಗಳನ್ನು ಕಾಣಬಹುದಾಗಿದೆ. ಯುಗಾದಿ, ದೀಪಾವಳಿ, ಶಿವರಾತ್ರಿ, ಸಂಕ್ರಾಂತಿ, ಮಹಾನವಮಿ ಮತ್ತು ಗೌರಿ-ಗಣೇಶ ಹಬ್ಬಗಳನ್ನು ಸಡಗರದಿಂದ ಆಚರಿಸುತ್ತಾರೆ.

## ಬಂದ್ರೇಹಳ್ಳಿ

ಬಂದ್ರೇಹಳ್ಳಿ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾ. ಹಂದನಕೆರೆ ಹೋಬಳಿಯ ಮಲ್ಲಿಗೆರೆ ಗ್ರಾಮ ಪಂಚಾಯತ್‌ಗೆ ಸೇರಿದ ಒಂದು ಕಂದಾಯ ಗ್ರಾಮ. ತಾಲ್ಲೂಕ್ ಕೇಂದ್ರದಿಂದ ಪಶ್ಚಿಮಕ್ಕೆ ೨೩.ಕಿ.ಮೀ. ಅಂತರದಲ್ಲಿದೆ. ಬಂದ್ರೆ ಎಂಬ ಗಿಡಗಳು ಹೆಚ್ಚಾಗಿ ಬೆಳೆಯುತ್ತಿದ್ದ ಪ್ರದೇಶದಲ್ಲಿ ಗೃಹಗಳು ನಿರ್ಮಾಣವಾಗಿರುವುದರಿಂದ ಬಂದ್ರಿಹಳ್ಳಿ ಎಂದು ಕರೆಯಲಾಗುತ್ತೆಂದು ಗ್ರಾಮದ ಸಿದ್ದರಾಮಣ್ಣ ಅಭಿಪ್ರಾಯ ಪಡುತ್ತಾರೆ.

ಬಂದ್ರೇಹಳ್ಳಿಯ ಭೌಗೋಳಿಕ ವಿಸ್ತೀರ್ಣ ಸುಮಾರು ೪೫೮.೮೨ ಹೆಕ್ಟೇರ್ ಭೂಮಿಯನ್ನು ಹೊಂದಿದ್ದು, ಕೆಂಪು ಮಣ್ಣನ್ನು ಹೊಂದಿ ಕೃಷಿಗೆ ಯೋಗ್ಯವಾಗಿದೆ. ಇಲ್ಲಿನ ರೈತರು ಮುಖ್ಯವಾಗಿ ರಾಗಿ, ಹೆಸರು, ಅವರೆ ಧಾನ್ಯಗಳನ್ನು ಹಾಗೂ ಉಪಬೆಳೆಯಾಗಿ ತೆಂಗು, ಬಾಳೆ, ತರಕಾರಿ, ದಾಳಿಂಬೆ ಬೆಳೆಗಳನ್ನು ಬೆಳೆಯುತ್ತಾರೆ. ಕೃಷಿಗೆ ಎತ್ತಿನಗಾಡಿಯನ್ನು ಹಾಗೂ ಆಧುನಿಕ ಉಪಕರಣಗಳನ್ನು ವಾಹನಗಳನ್ನು ಬಳಸುತ್ತಾರೆ. ಇವರ ಮುಖ್ಯ ಆಹಾರ ರಾಗಿ ಮುದ್ದೆ, ಅನ್ನ, ಚಪಾತಿ, ವಿಶೇಷವಾಗಿ ಇಲ್ಲಿನ ಬಹುತೇಕ ಲಿಂಗಾಯತ್ ಕುಟುಂಬಗಳು ಹಬ್ಬದ ಸಂದರ್ಭಗಳಲ್ಲಿ

ಸಿಹಿ ತಿಂಡಿಗಳನ್ನು ಮಾಡುತ್ತಾರೆ ಆದಿ ಕರ್ನಾಟಕದ ಜನಾಂಗದವರು ಬಾಡೂಟವನ್ನು ಸವಿಯುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಾರೆ. ತೆಂಗು, ಅಡಿಕೆ ವ್ಯಾಪಾರಿ ಸರಕಾಗಿದೆ.

ಬಯಲು ಸೀಮೆಯ ಉಷ್ಣವಲಯದಲ್ಲಿದೆ. ಇಲ್ಲಿ ಯಾವುದೇ ಬೆಟ್ಟ, ಅಭಿಯಾರಣ್ಯ, ರಕ್ಷಿವಾರಣ್ಯಗಳಿರುವುದಿಲ್ಲ. ಹವಾಮಾನ ಸರಾಸರಿ ವಾರ್ಷಿಕ ಪ್ರಮಾಣ ಮಳೆ ೫೦೪–೫೬೬ ಮಿ.ಮೀ. ಚಳಿ–೮–೧೨ ಡಿ.ಸೆಂ. ಬಿಸಿಲು ೨೭–೩೧ ಡಿ.ಸೆಂ. ಇದೆ.

“ಮೂಡಲಹಳ್ಳ” ಹಾಗೂ ತಳವಾರಗಟ್ಟೆ ಕೆರೆ ನೋಡಬಹುದು, ಹೊಳೆ, ಬಗ್ಗೆ, ಕುಂಟೆ, ಜಲಪಾತಗಳಾಗಲೀ ಕಂಡುಬರುವುದಿಲ್ಲ. ಮೂಡಲಹಳ್ಳ ಪಕ್ಕದಲ್ಲಿ ಹಾದು ಹೋಗುತ್ತದೆ. ರೈತರು ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ನಾಯಿ, ಬೆಕ್ಕು, ಕೋಳಿಗಳನ್ನು ಹಾಗೂ ಆದಿಕರ್ನಾಟಕದ ಜನರು ಹಂದಿಗಳನ್ನು ಸಾಕುತ್ತಾರೆ.

ಲಿಂಗಾಯತ್ ಸಮುದಾಯದವರು ದೊಡ್ಡ ಸಂಖ್ಯೆ (೩೨೩) ಯಲ್ಲಿದ್ದು, ನಂತರದ ಕಡಿಮೆ ಸಂಖ್ಯೆಯಲ್ಲಿ ಆದಿಕರ್ನಾಟಕದ ಜನರಿದ್ದಾರೆ. (೨೬ ಮಂದಿ) ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ೯೨ ಮನೆಗಳಿದ್ದು, ಅದರಲ್ಲಿ ೬೦ ಹೆಂಚಿನ ಮನೆಗಳು ೧೦ ಕಲ್ಲಿನ ಮನೆಗಳು ೨೦ ಮಣ್ಣಿನ ಮನೆಗಳು ೨ ಕಾಂಕ್ರೀಟ್ ಮನೆಗಳು ಇದ್ದು, ಗುಡಿಸಲು ಮನೆಗಳಿರುವುದಿಲ್ಲ. ಈ ಮನೆಗಳಲ್ಲಿ ೧೦ ಆಶ್ರಯ ಮನೆಗಳು, ೬ ಜನತಾ ಮನೆಗಳು ೬ ಅಂಬೇಡ್ಕರ್ ವಸತಿ ನಿಲಲಯಗಳು, ೨ ಇಂದಿರಾ ಆವಾಸ್ ಮನೆಗಳಿವೆ. ೨೦ ಮನೆಗಳು ಮಾತ್ರ ಶೌಚಾಲಯ ಹೊಂದಿದ್ದು ೭೨ ಮನೆಗಳು ಶೌಚಾಲಯ ರಹಿತವಾಗಿವೆ. ೧೦ ಮನೆಗಳು ಭಾಗ್ಯಜ್ಯೋತಿ ವಿದ್ಯುತ್ ಅನ್ನು ಒಳಗೊಂಡಿವೆ. ವಸತಿ ರಹಿತ ನಿವೇಶನ ರಹಿತ ಕುಟುಂಬಗಳಿರುವುದಿಲ್ಲ. ವಿದ್ಯುಚ್ಛಕ್ತಿ ಒದಗಿಸುವ ೨೫ ಕಂಬಗಳಿವೆ. ೧ ಕಂಬಕ್ಕೆ ಮಾತ್ರ ಮೀಟರ್ ಅಳವಡಿಸಿದ್ದಾರೆ. ೨೦ ಕಂಬಗಳಲ್ಲಿ ದೀಪವನ್ನು ಅಳವಡಿಸಿದ್ದಾರೆ. ಕಿರು ನೀರು ಸರಬರಾಜು ಯೋಜನೆಯಲ್ಲಿ ೬ ಮಿನಿವಾಟರ್ ಟ್ಯಾಂಕ್‌ಗಳಿಂದ ನೀರು ಒದಗಿಸಲಾಗುತ್ತದೆ. ೫೦ ಕೊಳವೆ ಬಾವಿಗಳಿವೆ. ಇತ್ತೀಚೆಗೆ ಮಳೆ ಇಲ್ಲದೆ ೨೦ ಕೊಳವೆ ಬಾವಿಗಳು ಚಾಲ್ತಿಯಲ್ಲಿ ಇಲ್ಲ.

ಹೈನುಗಾರಿಕೆಯ ಪ್ರೋತ್ಸಾಹದ ಆಧುನಿಕ ಡೈರಿ ಇದೆ. ಸಾಂಪ್ರದಾಯಿಕ ಉದ್ಯೋಗದಲ್ಲಿ ೨ ಕುಟುಂಬಗಳು ಬಡಗಿ ಕಸುಬನ್ನು ಮುಂದುವರಿಸಿದ್ದಾರೆ. ಸರ್ಕಾರಿ ನೌಕರರಲ್ಲಿ ೮ ಜನ ಶಿಕ್ಷಕರು ೨ ಬಿ.ಎಂ.ಟಿ.ಸಿ. ಕಂಟ್‌ಕ್ಟರ್ ಆರ್.ಟಿ.ಓ. ಕಛೇರಿಯಲ್ಲಿ ಗುಮಾಸ್ತರು ೨ ಅಂಗನವಾಡಿ ಶಿಕ್ಷಕಿಯರು ೩, ಇಬ್ಬರು ಇಂಜಿನಿಯರ್‌ಗಳಿದ್ದಾರೆ. ಯಾವುದೇ ವ್ಯಾಪಾರ ಮೀನುಗಾರಿಕೆ ಕೈಗಾರಿಕೆ ಕೇಂದ್ರಗಳಾಗಲೀ ಇರುವುದಿಲ್ಲ.

೨೦೧೧ ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೩೪೯ ರಷ್ಟಿದ್ದು ಅದರಲ್ಲಿ ಗಂಡಸರು ೧೯೦ ಹೆಂಗಸರು ೧೪೦ ಪ.ಜಾತಿಯ ಗಂಡು–೧೪ ಹೆಣ್ಣು–೧೨ ಮಕ್ಕಳು–ಗಂ.–೧೦, ಹೆಂ–೯ ಮಂದಿ ಇದ್ದು, ಈ ಗ್ರಾಮದ ಒಟ್ಟು ಸಾಕ್ಷರರ ಪ್ರಮಾಣ ೬೯% ಇದೆ.

ಒಂದು ಅಂಗನವಾಡಿ ಕೇಂದ್ರವಿದ್ದು ೧೫ ಮಕ್ಕಳು ಹಾಗೂ ೨ ಸಿಬ್ಬಂದಿ ವರ್ಗದವರು ಮತ್ತು ೧ ಸ.ಕಿ.ಪ್ರಾ. ಶಾಲೆ ಇದ್ದು ೧೭ ಮಕ್ಕಳು ಹಾಗೂ ೩ ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಕ್ಷೀರಭಾಗ್ಯ ಅಕ್ಷರದಾಸೋಹವು ಇರುತ್ತದೆ. ಶಾಲೆಯಲ್ಲಿ ವ್ಯವಸ್ಥಿತವಾದ ಶೌಚಾಲಯವು ಇದೆ. ಆದರೆ ಆಟದ ಮೈದಾನವಿರುವುದಿಲ್ಲ.

ಹಂದನಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರಕ್ಕೂ, ಹಂದನಕೆರೆ ಜಿಲ್ಲಾಪಂಚಾಯತ್ ಮತ್ತಿಘಟ್ಟ ತಾಲ್ಲೂಕು ಪಂಚಾಯತ್ ಕ್ಷೇತ್ರಕ್ಕೂ, ಮಲ್ಲಿಗೆರೆ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ಒಬ್ಬರು ಗ್ರಾಮ ಪಂಚಾಯತ್ ಸದಸ್ಯರು ಇದ್ದು, ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದೆ.

ಮತ್ತಿಘಟ್ಟ, ಹಂದನಕೆರೆ, ತಿಪಟೂರು, ಹೊಸದುರ್ಗಕ್ಕೆ ರಾಜ್ಯ ಹೆದ್ದಾರಿ ಸಂಪರ್ಕ ಕಲ್ಪಿಸುತ್ತದೆ. ಒಂದು ಕಚ್ಚಾರಸ್ತೆ ಇದೆ. ರಕ್ಷಣೆ ನ್ಯಾಯಾಂಗ ವ್ಯವಸ್ಥೆಗಳು, ಹಣಕಾಸಿಗೆ ಸಂಬಂದಿಸಿದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರಕಾರದ ಬ್ಯಾಂಕ್‌ಗಳಿರುವುದಿಲ್ಲ. ಖಾಸಗಿ ಹಣಕ್ಕೆ ವ್ಯವಸ್ಥೆಯಲ್ಲಿ ಶ್ರೀ ಶಿವಗಂಗಾ, ಕಲ್ಪಶ್ರೀ, ಶಂಕರಿ, ಸ್ತ್ರೀಶಕ್ತಿ ಸಂಘಗಳಿವೆ. ಆದರೆ ಕುಟುಂಬ ಕಲ್ಯಾಣ ವ್ಯವಸ್ಥೆಯನ್ನು ಜನರು ಪಾಲಿಸುತ್ತಿದ್ದಾರೆ.

ಸಮುದಾಯ ಸೌಲಭ್ಯಗಳಾದ ವಿಕಲಚೇತನ ವೇತನ ಪಡೆಯುವ ೩ ಜನರು ವಿಧವಾ ವೇತನ ಪಡೆಯುವ ೧೫ ಜನರು ಇದ್ದು, ಮದುವೆಯಂತಹ ಕಲ್ಯಾಣ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ೨೧ ಹೋಟೆಲ್ ಛತ್ರಗಳು ೨ ಅಂಗಡಿಗಳಿವೆ.

ಶಂಕರೇಶ್ವರ,ಬಸವೇಶ್ವರ, ಲಕ್ಕಮ್ಮದೇವಿ ದೇವಾಲಯಗಳಿವೆ. ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ದೀಪಾವಳಿ ಹಬ್ಬಗಳನ್ನು ಮಾಡುತ್ತಾರೆ. ಆದಿಕರ್ನಾಟಕದವರು ವಿಶೇಷವಾಗಿ ಕರಿಯಮ್ಮ

ದೇವಿಯ ಭಾನವನ್ನು ಮಾಡುತ್ತಾರೆ. ಸಿಹಿತಿಂಡಿಗಳನ್ನು ಲಿಂಗಾಯತರು ಮಾಡುತ್ತಾರೆ.

ಬಂದ್ರೇಹಳ್ಳಿಯಲ್ಲಿ ಆಕಾಶವಾಣಿ ಗಾಯಕರಾದ ರುದ್ರಾರಾಧ್ಯ ೬೦, ಮರುಳುಸಿದ್ಧಯ್ಯ ೪೦, ಬಸವಲಿಂಗಯ್ಯ ೪೫, ಚಂದ್ರಶೇಖರಯ್ಯ ೬೧, ರುದ್ರಯ್ಯ ೬೦, ಶಿವಕುಮಾರ ೫೫, ಇವರು ಈ ಗ್ರಾಮದಲ್ಲಿ ನಾಟಕಗಳನ್ನು ಕಲಿಸುತ್ತಾರೆ. ಜನಪದ ತತ್ವಪದ, ಭಜನೆ ಕಲಾವಿದರಾಗಿ ಸ್ಥಳೀಯವಾಗಿ ಗುರುವೆನಿಸಿಕೊಂಡಿದ್ದಾರೆ. ಕಲಾಸಂಸ್ಥೆಯಲ್ಲಿ ದಲಿತ ಸಂಘಗಳಿಲ್ಲ, ಮಹಿಳಾ ಸಂಘಗಳಾದ ನಂದಿನಿ, ಕರಿಯಾಂಭ ಸಂಘಗಳಿವೆ.

## ಬಂದ್ರೇಹಳ್ಳಿ ತಾಂಡ್ಯ

ಬಂದ್ರೇಹಳ್ಳಿಯು ಒಂದು ಕಂದಾಯ ಗ್ರಾಮವಾಗಿದ್ದು, ಹಂದನಕೆರೆ ಹೋಬಳಿಗೆ ಸೇರಿದೆ. ಇದರ ಮಜರೆ ಗ್ರಾಮವಾಗಿ ಲಂಬಾಣಿ ಜನಾಂಗದವರು ಪ್ರತ್ಯೇಕವಾಗಿ ಜನ ವಸತಿ ನಿರ್ಮಿಸಿಕೊಂಡ ಕಾರಣ ಲಂಬಾಣಿ ತಾಂಡ ಎಂದು ಬಂದ್ರೇಹಳ್ಳಿಗೆ ಸೇರಿದ ಗ್ರಾಮವಾದುದರಿಂದದ ಬಂದ್ರೇಹಳ್ಳಿ ತಾಂಡ್ಯ ಎಂದು ಕರೆಯುತ್ತಾರೆ. ಮಲ್ಲಿಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದೆ. ಕಾಡು, ಗಿಡ, ಭೂಪ್ರದೇಶ ಇಲ್ಲಿ ಕಾಡು ಪ್ರಾಣಿಗಳಾದ ಜಿಂಕೆ, ಮೊಲ, ಹಂದಿ, ತೋಳ ಕಂಡು ಬರುತ್ತವೆ. ಹಸು, ಕುರಿ, ಮೇಕೆ, ಸಾಕುಪ್ರಾಣಿಗಳಾಗಿವೆ. ವಾರ್ಷಿಕ ೫೪೬ ಮಿ.ಮೀ. ಮಳೆ ಬೀಳುತ್ತದೆ. ಬಿಸಿಲು ३೬ ಡಿ.ಸೆಂ. ಇದ್ದರೆ ಚಳಿ ೧३ ಡಿ.ಸೆಂ. ಇರುತ್ತದೆ. ಲಂಬಾಣಿ ಸಮುದಾಯ ಮಾತ್ರ ಇದ್ದು, ಒಟ್ಟು ೨೭ ಮನೆಗಳಿವೆ. ಇವು ಹೆಂಚಿನ ಸೀಟಿನ, ಸ್ವರೂಪದಲ್ಲಿದ್ದು, ಸರ್ಕಾರದ ವಸತಿ ಯೋಜನೆಗಳಾದ ಜನತಾ ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಉಚಿತ ಭಾಗ್ಯಲಕ್ಷ್ಮೀ ಯೋಜನೆಯಲ್ಲಿ ಕರೆಂಟ್ ಪಡೆಯುತ್ತಾರೆ. ರಾಗಿಮುದ್ದೆ ಮುಖ್ಯ ಆಹಾರ ರೊಟ್ಟಿ, ಅನ್ನ, ಬಳಸುತ್ತಾರೆ. ಬಾಡೂಟ, ಪಾಯಸ, ಸಾಂದರ್ಭಿಕ ವಿಶೇಷ ಭೋಜನವಾಗಿದೆ. ಹಸು, ಎಮ್ಮೆ, ಕುರಿ, ಮೇಕೆ, ಸಾಕುಪ್ರಾಣಿಗಳಾಗಿವೆ. ಕೋಳಿ ಸಾಕು ಪಕ್ಷಿಯಾಗಿದ ಕುಡಿಯಲು ಮಲ್ಲಿಗೆರೆ ಗ್ರಾಮಪಂಚಾಯಿತಿಯಿಂದ ನೀರು ಪೂರೈಸಲಾಗುತ್ತಿದ್ದ, ಒಂದು ಕಿರು ಟ್ಯಾಂಕ್ ಇದೆ. ಸಾರಿಗೆ, ಅರಣ್ಯ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಸಮುದಾಯ ಸೌಲಭ್ಯಗಳಾದ ಅಂಗವಿಕಲ, ವೃದ್ಧಾಪ್ಯ, ವಿಧವಾವೇತನದ ಫಲಾನುಭವಿಗಳಿದ್ದಾರೆ. ಭೀಮಾವಸತಿ ದೇವರ ಒಂದು ಮಂಟಪವಿದೆ. ಸೇವಾಲಾಲ್ ದೇವರ ಉತ್ಸವ, ಭಿಮಾಸತಿ ಆರತಿ, ಬಾನ, ಸೇವಾ ಸಂಪ್ರದಾಯವಿರುತ್ತದೆ. ದೀಪಾವಳಿಯನ್ನು ಸಾಮೂಹಿಕ ನೃತ್ಯದ ಮೂಲಕ ಹೋಮ, ಹಿರಿಯರ ಪೂಜೆಯೊಂದಿಗೆ ಆಚರಿಸುತ್ತಾರೆ. ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುವುದು ವಾಡಿಕೆಯಾಗಿದೆ.

## ಭದ್ಯನಾಯ್ಕನ ತಾಂಡ

ಭದ್ಯನಾಯ್ಕನ ತಾಂಡ ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾ. ಹಂದನಕೆರೆ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿದ ಕೆಂಗಲಾಪುರ ಕಂದಾಯ ಗ್ರಾಮದ ಮಜರೆ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೯ ಕಿ.ಮೀ. ಅಂತರ 'ಭದ್ಯನಾಯ್ಕ' ಎಂಬ ಲಂಬಾಣಿ ವ್ಯಕ್ತಿಯೊಬ್ಬ ಚಿಕ್ಕಮಗಳೂರಿನಿಂದ ಈ ಗ್ರಾಮಕ್ಕೆ ಒಂದು ನೆಲೆಸಿ ಇಲ್ಲಿಯೇ ಈ ತಾಂಡ್ಯವನ್ನು ಕಟ್ಟಿಸಿದ್ದಾನೆಂದು ಅಲ್ಲಿನ ಸ್ಥಳೀಯರ ನಂಬಿಕೆಯಾಗಿದೆ. ಹಾಗಾಗಿ ಅವನ ಹೆಸರನ್ನೇ ಈ ಪುಟ್ಟ ಗ್ರಾಮಕ್ಕೆ ನಾಮಕರಣ ಮಾಡಲಾಯಿತು.

ಭದ್ಯನಾಯ್ಕನ ತಾಂಡ್ಯ ಗ್ರಾಮವು ಭೌಗೋಳಿ ವಿಸ್ತೀರ್ಣ ೨೨३.३೨ ಹೆಕ್ಟೇರ್ ಹೊಂದಿದ್ದು, ಕಪ್ಪು ಮಣ್ಣನ್ನು ಹೊಂದಿದೆ. ಇಲ್ಲಿನ ರೈತರು ಮುಖ್ಯ ಬೆಳೆಯಾಗಿ ರಾಗಿ, ಅವರೆ, ಹೆಸರು, ಅಲಸಂಧಿ, ಧಾನ್ಯಗಳನ್ನು ಹಾಗೂ ಉಪಬೆಳೆಯಾಗಿ ಕಡಲೆಕಾಯಿ ತೆಂಗು ಬೆಳೆಯುತ್ತಾರೆ. ಕೃಷಿಗೆ ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಗಳನ್ನು ಬಳಸುತ್ತಾರೆ. ಇವರ ಮುಖ್ಯ ಆಹಾರ ರಾಗಿಮುದ್ದೆ, ಅನ್ನ, ರೊಟ್ಟಿ ವಿಶೇಷವಾಗಿ ಹಬ್ಬ-ಹರಿದಿನಗಳಲ್ಲಿ ಬಾಡೂಟ, ಪಾಯಸವನ್ನು ಸವಿಯುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಕೆಲವು ರೈತರು ಮಾಡುತ್ತಾರೆ.

ಬಯಲು ಸೀಮೆಯದಲ್ಲಿದೆ. ಇಲ್ಲಿ ೧ ಬೆಟ್ಟ, ೨ ಗುಡ್ಡಗಳಿವೆ. ರಕ್ಷಿತಾರಣ್ಯ ಇದೆ. ಹವಾಮಾನ ಸರಾಸರಿ ವಾರ್ಷಿಕ ಪ್ರಮಾಣ ಮಳೆ ೫೬೮-೫೭೯ಮಿ.ಮೀ. ಚಳಿ- ೯-೧೨ ಡಿ.ಸೆಂ. ಬಿಸಿಲು ೨೬-३೦ ಡಿ.ಸೆಂ. ಇದೆ. ಕೆಂಗಲಾಪುರ ಕೆರೆ ಇದೆ. ಇಲ್ಲಿನ ರೈತರು ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ನಾಯಿ, ಬೆಕ್ಕು, ಕೋಳಿಗಳನ್ನು ಸಾಕುತ್ತಾರೆ.

ಲಂಬಾಣಿ ಸಮುದಾಯದವರು ದೊಡ್ಡ ಸಮುದಾಯದಲ್ಲಿದ್ದು ३೦೦ ಲಂಬಾಣಿ ಭಾಷೆಯನ್ನು ಪ್ರಧಾನವಾಗಿ ಮಾತನಾಡುತ್ತಾರೆ. ೮೦ ಮನೆಗಳಿದ್ದು, ಅದರಲ್ಲಿ ೫೦ ಹೆಂಚಿನ ಮನೆಗಳು, ೧೦ ಮಣ್ಣಿನ ಮನೆಗಳು, ೨೦ ಕಲ್ಲಿನ ಮನೆಗಳು ಇದ್ದು, ೫ ಮನೆಗಳಲ್ಲಿ ಮಾತ್ರ ಶೌಚಾಲಯ ವ್ಯವಸ್ಥೆ ಇದ್ದು, ೮೦ ಮನೆಗಳು ಶೌಚಾಲಯ ರಹಿತವಾಗಿವೆ. ಇಲ್ಲಿನ

ಬಹುತೇಕ ಮನೆಗಳು ಜನತಾ ಮನೆಗಳು, ಇಂದಿರಾ ಆವಾಸ್ ಮನೆಗಳಾಗಿವೆ. ಸುಮಾರು ೨೦ ಕುಟುಂಬಗಳು ಭಾಗ್ಯಜ್ಯೋತಿ ವಿದ್ಯುತ್ ವ್ಯವಸ್ಥೆಯನ್ನು ಹೊಂದಿವೆ. ೧ ಕುಟುಂಬ ನಿವೇಶನ ರಹಿತ ಮತ್ತು ೧ ಕುಟುಂಬ ವಸತಿ ರಹಿತವಾಗಿವೆ. ಈ ಗ್ರಾಮದಲ್ಲಿ ವಿದ್ಯುಚ್ಛಕ್ತಿ ಒದಗಿಸುವ ೨೦ ಕಂಬಗಳಿವೆ. ೩೦ ಕೊಳವೆಬಾವಿಗಳನ್ನು ಕಾಣಬಹುದು. ಈ ಗ್ರಾಮದಲ್ಲಿ ಕಿರು ನೀರು ಸರಬರಾಜು ಯೋಜನೆಯಲ್ಲಿ ೫ ಮಿನಿವಾಟರ್ ಟ್ಯಾಂಕ್‌ಗಳಿವೆ. ತೆರದ ಚರಂಡಿ ವ್ಯವಸ್ಥೆ ಇದೆ.

ಹೈನುಗಾರಿಕೆಯಲ್ಲಿ ಸಾಂಪ್ರದಾಯಿಕ ಆಧುನಿಕ ಡೈರಿ, ಮೀನುಗಾರಿಕೆ ವ್ಯಾಪಾರ ಕೇಂದ್ರಗಳಾಗಲೀ ಇರುವುದಿಲ್ಲ ಕೆಂಗಲಾಪುರ ಡೈರಿಗೆ ಹಾಲು ತಂದು ವಿತರಿಸುತ್ತಾರೆ. ಸಾಂಪ್ರದಾಯಿಕ ಉದ್ಯೋಗಗಳು ಇರುವುದಿಲ್ಲ.

೨೦೧೧ ರ ಜನಗಣತಿಯಂತೆ ಈ ಗ್ರಾಮದ ಒಟ್ಟು ಜನಸಂಖ್ಯೆ ೩೦೦ ರಷ್ಟಿದ್ದು, ಈ ಗ್ರಾಮದ ಒಟ್ಟು ಸಾಕ್ಷರರ ಪ್ರಮಾಣ ೫೬ % ರಷ್ಟಿದೆ.

ಒಂದು ಅಂಗನವಾಡಿ ಕೇಂದ್ರವಿದ್ದು ಸರ್ಕಾರಿ ಕಿರಿಯ ಪಾಠಶಾಲೆ ಇದೆ. ಆಡಳಿತ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೂ ಹಂದನಕೆರೆ ಜಿಲ್ಲಾ ಪಂಚಾಯತ್, ಹಂದನಕೆರೆ ತಾಲ್ಲೂಕು ಪಂಚಾಯತ್ ಕೇಂದ್ರಕ್ಕೂ ಹಾಗೂ ಹಂದನಕೆರೆಯ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸೇರಿದೆ. ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದ್ದು, ಕಚ್ಛಾರಸ್ತೆಯಿದ್ದು, ಹಂದನಕೆರೆ ಮಾಡಾಳು ಕಮಾಲಾಪುರಕ್ಕೆ ಸಂಪರ್ಕ ಕಲ್ಪಿಸುತ್ತದೆ. ಸಂಪರ್ಕ ಸಾಧನಗಳಾದ ಅಂಚೆ ತಂತಿ ದೂರವಾಣಿ ಈಮೇಲ್, ನ್ಯಾಯಾಂಗ ಹಣಕಾಸಿಗೆ ಸಂಬಂಧಿಸಿದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಬ್ಯಾಂಕ್‌ಗಳು ಇರುವುದಿಲ್ಲ ಆದರೆ ಖಾಸಗಿ ಹಣಕಾಸಿನ ವ್ಯವಸ್ಥೆಯಲ್ಲಿ ಕನ್ನಡಾಂಬೆ, ಲಕ್ಕಮ್ಮದೇವಿ ಸ್ತ್ರೀಶಕ್ತಿ ಸಂಘಗಳಿವೆ. ಕುಟುಂಬ ಕಲ್ಯಾಣ ವ್ಯವಸ್ಥೆಯನ್ನು ಜನರು ಪಾಲಿಸುತ್ತಿದ್ದಾರೆ.

ವಿಕಲಚೇತನ ವೇತನವನ್ನು ಪಡೆಯುವ ೪ ಜನರು ವಿಧವಾ ವೇತನವನ್ನು ಪಡೆಯುವ ೧೦ ಜನರು ಇದ್ದು, ಮದುವೆಯಂತಹ ಕಲ್ಯಾಣ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ೨ ಚಿಲ್ಲರೆ ಅಂಗಡಿಗಳಿವೆ.

ಪ್ರತಿ ವರ್ಷ ಗಣೇಶ–ಗೌರಿ ಹಬ್ಬವನ್ನು ಆಚರಿಸುತ್ತಾರೆ. ಇಲ್ಲಿ ವಿಶೇಷವಾಗಿ ದೀಪಾವಳಿ ಹಬ್ಬವನ್ನು ಸಂಭ್ರಮದಿಂದ ವಿಶಿಷ್ಟವಾಗಿ ಬಾಡೂಟವನ್ನು ಹಬ್ಬದ ವಿಶೇಷವಾಗಿ ಮಾಡಿ. ಲಂಬಾಣಿ ನೃತ್ಯವನ್ನು ಮಹಿಳೆಯರು ಮಾಡುತ್ತಾರೆ. ಸುಮಾರು ಮೂರು ದಿನಗಳ ಕಾಲ ಈ ಹಬ್ಬವನ್ನು ಆಚರಿಸುತ್ತಾರೆ. ಯುಗಾದಿ, ದಸರಾ, ದೀಪಾವಳಿ, ರಾಮನವಮಿ, ಪಿತೃಪಕ್ಷ, ಸಂಕ್ರಾಂತಿ, ಹಬ್ಬಗಳನ್ನು ಮಾಡುತ್ತಾರೆ. ಮಾರ್ಚಿ ತಿಂಗಳಲ್ಲಿ ಜರುಗುವ ದೊಡ್ಡ ಎಣ್ಣೇಗೆರೆಯಲ್ಲಿರುವ ಭೀಮಸತಿಯೆಮ್ಮ' ನ ಜಾತ್ರೆಗೆ ಈ ಗ್ರಾಮದ ಗ್ರಾಮಸ್ಥರು ಭಾಗವಹಿಸಿ ಅಲ್ಲಿಯೇ ೬ ದಿನಗಳ ಕಾಲ ತಂಗುತ್ತಾರೆ. ಈ ಜಾತ್ರೆಯು ಭಾರತದಲ್ಲಿಯೇ ವಿಶಿಷ್ಠವಾದ ಅವರ ಜನಾಂಗದ ದೊಡ್ಡ ಜಾತ್ರೆಯಾಗಿದೆ. ವಿವಿಧ ರಾಜ್ಯಗಳಿಂದ ಲಂಬಾಣಿ ಗ್ರಾಮಸ್ಥರು ಇಲ್ಲಿಗೆ ಆಗಮಿಸುತ್ತಾರೆ. ಲಕ್ಕಮ್ಮ, ಪ್ಲೇಗಲಮ್ಮ, ದೇವಾಲಯಗಳಿವೆ.

ಸಾಂಸ್ಕೃತಿಕವಾಗಿ ಲಂಬಾಣಿ ಮಹಿಳೆಯರು ನೃತ್ಯವನ್ನು ಸುಗ್ಗಿ ಸಂಭ್ರಮದ ಕಾಲದಲ್ಲಿ ಹಾಡುತ್ತಾರೆ. ಲಂಬಾಣಿ ಗೀತೆಗಳನ್ನು ಸಾಮೂಹಿಕವಾಗಿ ಹಾಡುತ್ತಾರೆ.

## ಬಳ್ಳೆಕಟ್ಟೆ

ಬಳ್ಳೆಕಟ್ಟೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಭೌಗೋಳಿಕಕ ವಿಸ್ತೀರ್ಣ ೯೫೪.೨೬ ಹೆಕ್ಟೇರ್ ಇದೆ. ಇದು ಕಂದಾಯ ಗ್ರಾಮ ಬಯಲು ನಾಡಾಗಿದೆ. ೯೦೪ ಹೆಕ್ಟೇರ್ ಕೃಷಿಭೂಮಿಯಾಗಿದೆ.

ಕೆಂಪು ಮಿಶ್ರಿತ ಮರಳು ಭೂಮಿಯ ವ್ಯವಸಾಯಕ್ಕೆ ಯೋಗ್ಯವಾಗಿದೆ. ಕಾಡು ಪ್ರಾಣಿಗಳಾದ ಕರಡಿ, ತೋಳ, ಹಂದಿ ಹಾಗೂ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಕಾಡು ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಹದ್ದು, ಇನ್ನಿತರ ಪಕ್ಷಿಗಳನ್ನು ಕಾಣಬಹುದು.

ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು ಮಿಶ್ರತಳಿಗಳಾದ ಜೆರ್ಸಿ ಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿ ಎಮ್ಮೆಗಳ ಸಾಕಾಣಿ ಕುರಿ–ಮೇಕೆಗಳ ಸಾಕಾಣಿ ಇದೆ. ಹಾಗೆಯೇ ಸಾಕು ಪಕ್ಷಿಗಳಾದ ನಾಟಿ ಕೋಳಿಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ೪೫೦–೪೫೦ ಮಿ.ಮೀ. ಮಳೆ ಬೀಳುತ್ತದೆ. ಹವಾಮಾನದ ವೈಪರಿತ್ಯದಿಂದ ಬಿಸಿಲು ೩೨–೩೪ ಡಿ.ಸೆಂ. ಮತ್ತು ಚಳಿ ೧೧–೧೩ ಡಿ.ಸೆಂ. ಗಿಂತ ಹೆಚ್ಚಾಗಿದೆ. ಕಳೆದ ೧೦ ವರ್ಷಗಳಿಂದ ಜಲಕ್ಷಾಯ ಎದುರಿಸುತ್ತಿದ್ದು, ಬರಗಾಲದ ಹೊಸ್ತಿಲಲ್ಲಿದೆ.

ಬಳ್ಳೆಕಟ್ಟೆ ಗ್ರಾಮಕ್ಕೆ ಹೊಂದಿಕೊಂಡಿರುವ ಸುವರ್ಣಮುಖಿ ಹಳ್ಳ ದಕ್ಷಿದಿಕ್ಕಿಗೆ ಮಳೆಗಾಲದಲ್ಲಿ ಹೆಚ್ಚು ಮಳೆ ಬಂದರೆ ಮಾತ್ರ ತುಂಬಿ ಹರಿಯುತ್ತದೆ.

ಕೃಷಿ ಚಟುವಟಿಕೆಗಳಿಗೆ ಉಪಯುಕ್ತವಾಗುವಂತಹ ಯಾವುದೇ ಕೆರೆ-ಕಟ್ಟೆಗಳು ಇಲ್ಲಿ ಕಂಡುಬರುವುದಿಲ್ಲ. ಪ್ರಾಚೀನ ಕಾಲದ ಬಾವಿಗಳು ಬತ್ತಿಹೋಗಿ ಆಧುನಿಕ ಕೊಳವೆ ಬಾವಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿಯ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲೂ ನೀರು ಒದಗಿಸಲಾಗುತ್ತಿದೆ. ಹಾಗೂ ೨ ಕೈ ಪಂಪುಗಳಿದ್ದು ವಿದ್ಯುತ್ ಅನಿವಾರ್ಯತೆಯ ಸಂದರ್ಭಗಳಲ್ಲಿ ನೀರಿನ ಹೊರತೆಗಳಾಗಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ.

ಒಟ್ಟು ೧೯೦ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ ಜನಗಣತಿಯ ಪ್ರಕಾರ ೮೦೨ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ೮೫ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ.

ಕಾಂಕ್ರೀಟ್ ಮನೆಗಳು, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ ಹಾಗೆಯೇ ಗುಡಿಸಲಿನಲ್ಲಿ ನೆಲೆಸಿರುವ ಕೆಲವು ಕುಟುಂಬಗಳೂ ಕಾಣಸಿಗುತ್ತದೆ. ಸರ್ಕಾರದ ವಸತಿ ಯೋಜನೆಯ, ಇಂದಿರಾ ಅವಾಜ್ ಯೋಜನೆಯ ಫಲಾನುಭವಿಗಳಿದ್ದಾರೆ. ಪ್ರಮುಖ ಆಹಾರ ಪದ್ಧತಿ ರಾಗಿಮುದ್ದೆ, ಅನ್ನ, ರೊಟ್ಟಿ, ಚಪಾತಿ, ಹೋಳಿಗೆ, ಬಾಡೂಟ ಪಾಯಸ ವಿಶೇಷವಾಗಿದೆ. ಸಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಗಳ ಜೊತೆಗೆ ಆಧುನಿಕ ವಾಹನಗಳಾದ ಟ್ರಾಕ್ಟರ್ ಬೈಕ್-ಟೆಂಪೋ ಕಾಣಬಹುದು.

ಬೇಸಾಯ ಇಲ್ಲಿಯ ಪ್ರಮುಖ ಕಸುಬಾಗಿದ್ದರೂ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿ ಪ್ರಮುಖ ಬೆಳೆಯಾಗಿದ್ದು, ಜೋಳ ಭತ್ತ ತೆಂಗು ಹಾಗೂ ತರಕಾರಿ ಬೆಳೆಯುತ್ತಾರೆ.

ಸಾಂಪ್ರದಾಯಿತ ಹೈನುಗಾರಿಕೆಯ ಜೊತೆಗೆ ಆಧುನಿಕ ಡೈರಿ ವ್ಯವಸ್ಥೆಯೂ ಇದೆ. ಪಶುಪಾಲನೆ ಹೈನುಗಾರಿಕೆಯಿಂದ ಗ್ರಾಮದ ಆರ್ಥಿಕ ಸ್ಥಿತಿ ಚೇತರಿಕೆ ಕಾಣುತ್ತಿದೆ. ೪ ಜನ ಸರ್ಕಾರಿ ನೌಕರಿಯಲ್ಲಿ ಕೂಡ ಕೆಲಸ ನಿರ್ವಹಿಸುತ್ತಿದ್ದಾರೆ. ೬೮.೬ ರಷ್ಟು ಸಾಕ್ಷರತೆ ಇದೆ.

ಹುಳಿಯಾರು ಹೋಬಳಿ ಚಿ.ನಾ.ಹಳ್ಳಿ. ವಿಧಾನ ಸಭಾಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಹುಳಿಯಾರು ಜಿಲ್ಲಾ ಪಂಚಾಯಿತಿ ಕ್ಷೇತ್ರ, ಕೆಂಕೆರೆ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಮತ್ತು ದೊಡ್ಡ ಬಿದರೆ ಗ್ರಾಮ ಪಂಚಾಯಿತಿಯಾಗಿ ಹೊಂದಿದ್ದು ಮೂವರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ.

ಜಿಲ್ಲಾ ಮುಖ್ಯರಸ್ತೆ ಹಾಗೂ ರಾಜ್ಯ ಹೆದ್ದಾರಿ ಇರುವುದರಿಂದ ಖಾಸಗಿ ಬಸ್ಸುಗಳು, ಆಟೋರಿಕ್ಷಾ ಮತ್ತು ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ.ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿ.ಟಿ.ಎಚ್. ಸಂಪರ್ಕಗಳಿವೆ.

ಹಾಲು ಉತ್ಪಾದಕ ಸಹಕಾರ ಸಂಘ ಕರಿಯಮ್ಮ, ಭಾಗ್ಯಲಕ್ಷ್ಮೀ ಸ್ತ್ರೀಶಕ್ತಿ ಸಂಘ, ಹಾಗೂ ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರಗಳಿದ್ದು ಇಬ್ಬರು ಕಾರ್ಯಕರ್ತೆಯರಿದ್ದಾರೆ. ಉರ್ದು ಪ್ರಾಥಮಿಕ ಶಾಲಯಲ್ಲಿ ೪೩ ಮಕ್ಕಳಿದ್ದಾರೆ. ಹಾಗೂ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ೩೬ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ೩೬ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಹಾಗೂ ಶೌಚಾಲಯದ ಸೌಲಭ್ಯವಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ ವಿಧವಾ ವೇತನದ ೬ ಫಲಾನುಭವಿಗಳಿದ್ದಾರೆ. ಗಣಪತಿ, ಈಶ್ವರ, ಆಂಜನೇಯ ಸೇರಿದವರಿಗೆ ಮಸೀದಿಯೂ ಇಲ್ಲಿನ ಪ್ರಮುಖ ದೇವಾಲಯಗಳು ಸ್ಮಶಾನವಿದೆ. ಹಿಂದೂ ಜನಾಂಗದವರು ಯುಗಾದಿ, ದೀಪಾವಳಿ ರಾತ್ರಿ ಗೌರಿ-ಗಣೇಶ ಇನ್ನೂ ಮುಂತಾದ ಮತ್ತು ಮುಸ್ಲಿಂ ಧರ್ಮದವರು ರಂಜಾನ್ ಈದ್-ಮಿಲ್ ಬಕ್ರೀದ್ ಹಲ್ಬಗಳನ್ನು ಸಡಗರದಿಂದ ಆಚರಿಸುತ್ತಾರೆ.

## ಬಳ್ಳೆಕಟ್ಟೆ ತಾಂಡ್ಯ

ಬಳ್ಳೆಕಟ್ಟೆ ತಾಂಡ್ಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿದೆ. ಬಳ್ಳೆಕಟ್ಟೆ ಮಜರೆ ಗ್ರಾಮ ಬಯಲುನಾಡು.

ಕೆಂಪು ಮಿಶ್ರಿತ ಮರಳು ಭೂಮಿಯು ವ್ಯವಸಾಯಕ್ಕೆ ಯೋಗ್ಯವಾಗಿದೆ. ಕಾಡು ಪ್ರಾಣಿಗಳಾದ ಕರಡಿ, ತೋಳ, ಹಂದಿ ಹಾಗೂ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಕಾಡು ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಹದ್ದು, ಇನ್ನಿತರ ಪಕ್ಷಿಗಳನ್ನು ಕಾಣಬಹುದು.

ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರತಳಿಗಳಾದ ಜೆರ್ಸಿ ಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಾಣಿ ಕುರಿ–ಆಡುಗಳ ಸಾಕಾಣಿ ಇದೆ. ಹಾಗೆಯೇ ಸಾಕು ಪಕ್ಷಿಗಳಾದ ನಾಟಿ ಕೋಳಿ ಗಿರಿರಾಜಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ೪೫೦–೪೫೦ ಮಿ.ಮೀ. ಮಳೆ ಬೀಳುತ್ತದೆ. ಹವಾಮಾನದ ವೈಪರಿತ್ಯದಿಂದ ಬಿಸಿಲು ೩೪–೩೬ ಡಿ.ಸೆಂ. ಮತ್ತು ೧೧–೧೨ ಡಿ.ಸೆಂ. ಗಿಂತ ಹೆಚ್ಚಾಗಿದೆ. ಕಳೆದ ೧೦ ವರ್ಷಗಳಿಂದ ಜಲಕ್ಷಾಮ ಉದುರಿಸುತ್ತಿದ್ದು, ಬರಗಾಲದ ಹೊಸ್ತಿಲಲ್ಲಿದೆ.

ಕೃಷಿ ಚಟುವಟಿಕೆಗಳಿಗೆ ಉಪಯುಕ್ತವಾಗುವಂತಹ ಯಾವುದೇ ಕೆರೆ–ಕಟ್ಟೆಗಳು ಇಲ್ಲಿ ಕಂಡುಬರುವುದಿಲ್ಲ. ಪ್ರಾಚೀನ ಕಾಲದ ೨ ಬಾವಿಗಳು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿಯ ಅಲ್ಪ ನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗೆ ಗ್ರಾಮ ಪಂಚಾಯ್ತಿಯ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಒದಗಿಸಲಾಗುತ್ತಿದೆ. ೨ ಕೈ ಪಂಪುಗಳಿದ್ದು, ವಿದ್ಯುತ್ ಅನಿವಾರ್ಯತೆಯ ಸಂದರ್ಭಗಳಲ್ಲಿ ನೀರಿನ ಹೊರತೆಗಳಾಗಿವೆ.

ಲಂಬಾಣಿ ಸಮುದಾಯವೇ ಪ್ರಧಾನವಾಗಿದ್ದು, ಕುರುಬ, ದರ್ಜೆಗಳು, ಸಣ್ಣ ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಲಂಬಾಣಿ ಮತ್ತು ಕನ್ನಡ ಮಾತನಾಡುತ್ತಾರೆ.

ಒಟ್ಟು ೯೫ ಮನೆಗಳನ್ನು ಹೊಂದಿರುವ ೨೦೧೧ ರ ಜನಗಣತಿಯ ಪ್ರಕಾರ ೪೦೩ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ ಹಾಗೆಯೇ ಕೆಲವು ಮಂದಿ ಗುಡಿಸಲಿನಲ್ಲಿ ವಾಸಿಸುತ್ತಿದ್ದಾರೆ.

ಸರ್ಕಾರದ ವಸತಿ ಯೋಜನೆಯ ಜನತಾ, ಆಶ್ರಯ, ಅಂಬೇಡ್ಕರ್ ಯೋಜನೆ, ಇಂದಿರಾ ಅವಾಜ್ ಯೋಜನೆಯ ೨೭ ಫಲಾನುಭವಿಗಳಿದ್ದಾರೆ.

ಪ್ರಮುಖ ಆಹಾರ ಪದ್ಧತಿ ರಾಗಿಮುದ್ದೆ, ಅನ್ನ, ರೊಟ್ಟಿ, ಚಪಾತಿ, ಹೋಳಿಗೆ, ಬಾಡೂಟ, ಪಾಯಸ, ವಿಶೇಷವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿಗಳ ಜೊತೆಗೆ ಆಧುನಿಕ ವಾಹನಗಳಾದ ಟ್ರಾಕ್ಟರ್, ಬೈಕ್, ಟೆಂಪೋ ಕಾಣಬಹುದು ೩೫ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಸೇವಾಲಾಲ್, ಆಂಜನೇಯ, ಇಲ್ಲಿನ ಪ್ರಮುಖ ದೇವಾಲಯಗಳು ಯುಗಾದಿ, ದೀಪಾವಳಿ, ಗೌರಿ–ಗಣೇಶ ಹಬ್ಬಗಳು ವಿಶೇಷವಾಗಿ ಆಚರಿಸಲ್ಪಡುತ್ತಾರೆ.

ಬೇಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿ, ಜೋಳ, ತೆಂಗು ಮತ್ತು ದ್ವಿದಳ ಧಾನ್ಯಗಳನ್ನು ಪ್ರಮುಖವಾಗಿ ಬೆಳೆಯುತ್ತಾರೆ.

ಹುಳಿಯಾರು ಹೋಬಳಿ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುತ್ತದೆ. ಹುಳಿಯಾರು ಜಿಲ್ಲಾ ಪಂಚಾಯಿತಿ ಕ್ಷೇತ್ರ, ತಿಮ್ಲಾಪುರ ತಾಲ್ಲೂಕ್ ಪಂಚಾಯಿತಿ ಕ್ಷೇತ್ರ ಹಾಗೂ ದೊಡ್ಡಬಿದರೆ ಗ್ರಾಮ ಪಂಚಾಯಿತಿ ಕ್ಷೇತ್ರ ಕಛೇರಿಯನ್ನು ಒಳಗೊಂಡಿದ್ದು ನಾಲ್ಕು ಗ್ರಾಮ ಪಂಚಾಯಿತಿ ಸದಸ್ಯರನ್ನು ಒಳಗೊಂಡಿದೆ.

ನರೇಗಾ ಯೋಜನೆ ಮತ್ತು ಕಚ್ಚಾರಸ್ತೆಯ ಸೌಲಭ್ಯವಿದೆ. ಖಾಸಗಿ ಬಸ್ಸುಗಳು, ಆಟೋರಿಕ್ಷಾ ಮತ್ತು ಸ್ವಂತ ವಾಹನಗಳ ಸೌಲಭ್ಯವಿದ್ದು, ಬಹುತೇಕ ಮನೆಗಳಲ್ಲಿ ಸಂಚಾರಿ ದೂರವಾಣಿ ಮತ್ತು ಡಿ.ಟಿ. ಹೆಚ್.ಗಳ ಸೌಲಭ್ಯವಿದೆ.

## ಬರದಲೇ ಪಾಳ್ಯ

ಬರದಲೇ ಪಾಳ್ಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೫ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೯೫೦.೦೨ ಹೆಕ್ಟೇರ್ ಇದೆ. ೮೧೨ ಹಕ್ಟೇರ್ ಕೃಷಿ ಭೂಮಿ ಹೊಂದಿದೆ. ಇದೊಂದು ಕಂದಾಯ ಗ್ರಾಮ ಬಯಲು ನಾಡಾಗಿದೆ.

ಬರಗಾಲದ ಸಂದರ್ಭದಲ್ಲಿಕ ಕೆಲಭಾಗದಲ್ಲಿನ ಮುತ್ತುಗದ ಎಲೆಗಳನ್ನು ಕುಯ್ಯಲು ಮಾಡಿ ಮಾರುವ ಕಾಯಕದ ಜಾಗವಾಗಿದ್ದು ನಂತರ ಗ್ರಾಮ ಬೆಳೆದಾಗ ಅದಕ್ಕೆ ಬರದ ಎಲೆ ಸ್ಥಳ ಬರದಲೇಪಾಳ್ಯ ಎಂದಾಗಿದೆ.

ಅಲಗಪ್ಪನ ಪಾಳ್ಯ, ಸುಬೇದಾರ್ ಪಾಳ್ಯ, ದುರ್ಗದ ಸೀಮೆಪಾಳ್ಯ ಸೇರ್ಪಡೆಯಾಗಿವೆ. ಮರಳು ಮಿಶ್ರಿತ ಬಿಳಿ ಮಣ್ಣಿನ ಲಕ್ಷಣವಿದ್ದು, ವ್ಯವಸಾಯಕ್ಕೆ ಯೋಗ್ಯವಾಗಿದೆ. ಕಾಡು ಪ್ರಾಣಿಗಳಾದ ಕರಡಿ, ತೋಳ, ನರಿ, ಹಂದಿ ಹಾಗೂ ಕಾಡು ಪಕ್ಷಿಗಳಾದ ನವಿಲು, ಗೌಜುಗ, ಗಿಳಿಗಳನ್ನು ಕಾಣಬಹುದು. ಸಾಕುಪ್ರಾಣಿಗಳಾದ ಹಸು ಎಮ್ಮೆ, ಕುರಿ ಮೇಕೆಗಳನ್ನು ಸಾಕುತ್ತಾರೆ. ಹಸುಗಳಲ್ಲಿ ಮಿಶ್ರತಳಿಗಳಾದ ಜೆರ್ಸಿ ಹೆಚ್. ಎಫ್. ಹೆಚ್ಚಿನ ಸಂಖ್ಯೆಯಲ್ಲಿದೆ. ಎಮ್ಮೆಗಳ ಸಾಕಾಣಿ ಜೊತೆಗೆ ಕುರಿ–

ಮೇಕೆಗಳ ಸಾಕಾಣಿಯು ರೂಢಿಯಲ್ಲಿದೆ. ಹಾಗೂ ಸಾಕು ಪಕ್ಷಿಯಾದ ಕೋಳಿಯನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆ ಬರುತ್ತದೆ. ಬೇಸಿಗೆ ಕಾಲದಲ್ಲಿ ಸುಮಾರು ೩೪ ಡಿ.ಸೆಂ. – ೩೬ ಡಿ.ಸೆಂ. ಬಿಸಿಲಿನ ತಾಪವಿರುತ್ತದೆ. ಹಾಗೂ ಚಳಿಗಾಲದಲ್ಲಿ ೧೦ ಡಿ.ಸೆಂ.– ೧೫ ಡಿ.ಸೆಂ. ಚಳಿಯಿರುವ ಹವಾಮಾನವಿರುತ್ತದೆ.

ಈ ಗ್ರಾಮಕ್ಕೆ ಹೊಂದಿಕೊಂಡಿರುವ ಗೋಮಾಳದಹಳ್ಳ, ದೊಡ್ಡನಕಟ್ಟಹಳ್ಳ ಮಳೆಗಾಲದಲ್ಲಿ ಹೆಚ್ಚು ಮಳೆ ಬಂದರೆ ಮಾತ್ರ ಹರಿಯುತ್ತದೆ. ೨ ತೆರೆದ ಬಾವಿಗಳಿದ್ದು ಕೆಲವು ಬಾವಿಗಳು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗಾಗಿ ಗ್ರಾಮಪಂಚಾಯ್ತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್ ಮತ್ತು ಕೊಳಾಯಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೪ ಕೈಪಂಪುಗಳ ವ್ಯವಸ್ಥೆಯಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಹೊರತೆಗಳಾಗಿವೆ. ಲಿಂಗಾಯುತ ಸಮುದಾಯವೇ ಪ್ರಧಾನವಾಗಿದ್ದು, ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ.

ಒಟ್ಟು ೧೪೯ ಮನೆಗಳನ್ನು ಹೊಂದಿರುವ ೨೦೧೧ ರ ಜನಗಣತಿ ಪ್ರಕಾರ ೫೯೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ವಿವಿಧ ಮನೆಯ ಪ್ರಕಾರಗಳಿದ್ದು ಅವುಗಳಲ್ಲಿ ಕಾಂಕ್ರೀಟ್ ಮನೆಗಳು, ಕಲ್ಲಿನ, ಮಣ್ಣಿನ ಮನೆಗಳು ಕಂಡುಬರುತ್ತವೆ. ಹಾಗೆಯೇ ಕೆಲವು ಗುಡಿಸಿಲಿನಲ್ಲಿ ನೆಲೆಸಿರುವ ಕುಟುಂಬಗಳನ್ನು ಕಾಣಬಹುದು.

೬೦ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ. ಪ್ರಮುಖವಾಗಿ ರಾಗಿ ಮುದ್ದೆ, ಅನ್ನ, ರೊಟ್ಟಿ, ಚಪಾತಿ, ಹಾಗೂ ಹಬ್ಬಗಳಲ್ಲಿ ಪಾಯಸ ಹೋಳಿಗೆ ತಯಾರಿಸುತ್ತಾರೆ.

ಸಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಗಳ ಜೊತೆಗೆ ಆಧುನಿಕ ವಾಹನಗಳಾದ ಬೈಕು, ಟ್ರಾಕ್ಟರ್, ಟೆಂಪೋ ಕಾಣಬಹುದು.

ಕೃಷಿಕ ಇಲ್ಲಿನ ಪ್ರಮುಖ ಕಸುಬಾಗಿದ್ದರೂ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿ ಭತ್ತ ಪ್ರಮುಖ ಆಹಾರ ಬೆಳೆಗಳು ಉಪಬೆಳೆಗಳಾದ ಜೋಳ, ದ್ವಿದಳ ದಾನ್ಯಗಳು ಹಾಗೆಯೇ ತೋಟಗಾರಿಕೆ ಬೆಳೆಯಾದ ತೆಂಗನ್ನು ಬೆಳೆಯುತ್ತಾರೆ. ಸಾಂಪ್ರದಾಯಿಕ ಹೈನುಗಾರಿಕೆ ಹಾಗೂ ಆಧುನಿಕ ಡೈರಿ ವ್ಯವಸ್ಥೆಯಿಂದ ಗ್ರಾಮದ ಆರ್ಥಿಕ ಸ್ಥಿತಿಯಲ್ಲಿ ಚೇತರಿಕೆ ಕಾಣುತ್ತಿದೆ.

ಶಿಕ್ಷಣ ಇಲಾಖೆಯಲ್ಲಿ ರೇವಣ್ಣ, ಚನ್ನಬಸವಯ್ಯ, ಹಾಗೂ ಲೋಕೇಶ್ ಉಮಾಪತಿ ಪೋಲಿಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಣ್ಣ ಕೈಗಾರಿಕೆಯಾದ ತೆಂಗಿನ ಕಡ್ಡಿ ಸಿಗಿಯುವುದನ್ನು ಕಾಣಬಹುದು. ಹುಳಿಯಾರು ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಹೋಯ್ಸಳ ಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಕೆಂಕೆರೆ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಹಾಗೂ ಕೆಂಕೆರೆ ಗ್ರಾಮಪಂಚಾಯ್ತಿಗೆ ಒಳಪಟ್ಟಿದೆ. ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿ.ಟಿ.ಹೆಚ್. ಸಂಪರ್ಕವನ್ನು ಕಾಣಬಹುದು.

ದೇವಿ, ಲಕ್ಷ್ಮೀ ಸ್ತ್ರೀಶಕ್ತಿ, ಸಂಘ ಹಾಗೂ ಗಂಗಾ ಮಹಿಳಾ ಸ್ವಸಹಾಯ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಗ್ರಾಮಸ್ಥರು, ಉಳಿತಾಯ ಸಾಲ–ಸೌಲಭ್ಯಗಳನ್ನು ಪಡೆದಿದ್ದಾರೆ. ಶೇ. ೮೦% ಸಾಕ್ಷರತೆ ಪ್ರಮಾಣವಿದೆ.

ಅಂಗನವಾಡಿ ಕೇಂದ್ರ ಹಾಗೂ ಕಿರಿಯ ಪ್ರಾಥಮಿಕ ಶಾಲೆಯಿದ್ದು ಮಕ್ಕಳಿಗೆ ಸರ್ಕಾರದ ವತಿಯಿಂದ ಕ್ಷೀರ ಭಾಗ್ಯ ಬಿಸಿಯೂಟ ಹಾಗೂ ಶೌಚಾಲಯದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯ ವೇತನ, ವಿಕಲಚೇತನ, ವೇತನ, ಪಡೆಯುತ್ತಿರುವ ೯ ಫಲಾನುಭವಿಗಳಿದ್ದಾರೆ.

ದೇವಿಕಾಂಬ, ಚನ್ನಬಸವಣ್ಣ ಇಲ್ಲಿನ ಪ್ರಮುಖ ದೇವಾಲಯಗಳು ಯುಗಾದಿ, ದೀಪಾವಳಿ, ಶಿವರಾತ್ರಿ, ಮಹಾನವಮಿ, ಸಂಕ್ರಾಂತಿ ಹಬ್ಬಗಳನ್ನು ಗ್ರಾಮಸ್ಥರು ಸಡಗರದಿಂದ ಆಚರಿಸುತ್ತಾರೆ.

ಸರ್ಕರದ ಯೋಜನೆಗಳಾದ ಜನತಾ– ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಅವಾಜ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಕಚ್ಚಾರಸ್ತೆ ಸಂಪರ್ಕವಿದ್ದು ಸ್ವಂತವಾಹನಗಳೇ ಸಾರಿಗೆ ಸಂಪರ್ಕದ ಮೂಲವಾಗಿದೆ.

## ಬರಸಿಡ್ಲೇಹಳ್ಳಿ

ಬರಶಿಡ್ಲೇಹಳ್ಳಿಯು ತೀರ್ಥಪುರ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಒಂದು ಕಂದಾಯ ಗ್ರಾಮ. ಭೀಕರ ಸಿಡಿಲು ಬಡಿದು ಕಾಡಿನ ಭಾಗ ಸುಟ್ಟು ಹೋಗಿದ್ದು ಆ ಜಾಗದಲ್ಲಿ ಜನವಸತಿ ನಿರ್ಮಾಣವಾದಾಗ ಬರಸಿಡ್ಲೇಹಳ್ಳಿ ಎಂದು ಕರೆದರು. ಬರಸಿ ಬೊಮ್ಮೆಗೌಡ ಎಂಬುವವರು ಈ ಊರಿಗೆ ಮೂಲ ವ್ಯಕ್ತಿ, ಹಾಗಾಗಿ ಆತನ ಹೆಸರಿನ ಸೂಚಕ ಪದವೇ ಬರಸಿಡ್ಲೇಹಳ್ಳಿ ಆಗಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೮೧-೦೭ ಚ.ಕಿ.ಮೀ. ಬಯಲು ನಾಡು ಕಪ್ಪು, ಬಿಳಿ ಕಲ್ಲುಗಳಿಂದ ಹಾಗೂ ಬಿಳಿ, ಕೆಂಪುಮಣ್ಣು ಕಂಡುಬರುತ್ತದೆ. ಇಲ್ಲಿ ಕರಡಿ ಗುಡ್ಡ, ಬಾಳಗುಡ್ಡ, ಕಾಟಂದೇವರಗುಡ್ಡ, ಊರಹಿಂದೂ ಗುಡ್ಡ, ಇತ್ಯಾದಿ ಹತ್ತಕ್ಕು ಹೆಚ್ಚು ಗುಡ್ಡಗಳು ಕಂಡುಬರುತ್ತವೆ. ಹೋಬಳದೇವರ ಬೆಟ್ಟವೂ ಇಲ್ಲಿದೆ. ಸಾಮಾಜಿಕ ಅರಣ್ಯ ಇದೆ. ಇದನ್ನು ಕರಡಿಕಲ್ಲು ಕಾಡು ಎನ್ನುತ್ತಾರೆ. ಇಲ್ಲಿ ಕರಡಿ, ತೋಳ, ನರಿ, ಉಡ, ಹಾವುಗಳು ಮುಂತಾದ ಕಾಡುಪ್ರಾಣಿಗಳು, ನವಿಲು, ಪೂಡರೆಹಕ್ಕಿ, ಬೆಳವನಹಕ್ಕಿ, ಬಿಳಿಕೊಕ್ಕರೆ, ಚರಲೆಹಕ್ಕಿ, ಮರಕುಟಿಗ, ಗಿಳಿ, ಗೋಜನಹಕ್ಕಿ, ಸಾಂಬಾರಕಾಗೆ, ಕಾಗೆ, ಕೋಗಿಲೆ ಇತ್ಯಾದಿ ಕಾಡುಪಕ್ಷಿಗಳು, ಹಸು, ಎಮ್ಮೆ, ಎತ್ತು, ಕುರಿ, ಮೇಕೆ ಮುಂತಾದವುಗಳು ಸಾಕುಪ್ರಾಣಿಗಳು ಕಂಡುಬರುತ್ತವೆ. ಕೋಳಿಗಳನ್ನು ಇಲ್ಲಿಯ ಜನ ಸಾಕುತ್ತಾರೆ.

ಇಲ್ಲಿ ಸರಾಸರಿ ೩೭೫.೬ ಮಿ.ಮೀ. ಮಳೆ ಆಗುತ್ತದೆ. ಇಲ್ಲಿಯೂ ಚಳಿ ೯ ಡಿ.ಸೆಂ. ಆಗಿದ್ದು, ೩೬ ಸೆಂ. ಬಿಸಿಲು ಇರುತ್ತದೆ. ಊರಿನ ಹಳ್ಳ ಅಡ್ಡಹಳ್ಳ ಕೋಟಿಗಲ್ ಹಳ್ಳ, ಕರಡಿಕಲ್‌ಹಳ್ಳ, ಹೂವಿನಹಳ್ಳ, ಅರದಗೆರೆ ಹಳ್ಳ, ಮಾರಹಳ್ಳದ ಕೊಟವೆ ಇತ್ಯಾದಿ ಹಳ್ಳಗಳು ಕಂಡು ಬರುತ್ತವೆ. ಈ ಗ್ರಾಮದ ಕೆರೆ ಹೆಸರು 'ಹೊಸಕೆರೆ' ಎಂಬುದಾಗಿದೆ. ೨೮೭ ಮನೆಗಳಿವೆ.

೨೦೧೧ ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೧೨೫೦ ಆಗಿದ್ದು ಇದರಲ್ಲಿ ೭೧೩ ಗಂಡಸರು, ೬೫೭ ಹೆಂಗಸರು ಆಗಿದ್ದಾರೆ. ಇಲ್ಲಿ ಕುಂಚಿಟಿಗ ಒಕ್ಕಲಿಗರು ದೊಡ್ಡ ಸಮುದಾಯವಾಗಿದ್ದು, ನಾಯಕರು, ಮಡಿವಾಳ, ಗಾಣಿಗ, ಮುಸ್ಲಿಂ, ಕಮ್ಮಾರ, ವಡ್ಡರು, ಶೆಟ್ಟಿಬಣಜಿಗರು ಸಣ್ಣಸಮುದಾಯಗಳಾಗಿವೆ. ಇಲ್ಲಿಯ ಜನ ಹೆಚ್ಚಾಗಿ ಕಲ್ಲಿನ ಮನೆಗಳಲ್ಲಿ ವಾಸಿಸುತ್ತಾರೆ. ಹತ್ತು ಕಾಂಕ್ರೀಟ್ ಆಧುನಿಕ ಮನೆಗಳು ಇದ್ದು, ಹದಿನೈದು ಗುಡಿಸಲು ಕುಟುಂಬಗಳೂ ಇವೆ. ಮನೆಗಳಿಗೆ ಮಂಗಳೂರು ಹೆಂಚು ಬಳಸಿದ್ದಾರೆ. ಕೆಲವು ಕಪ್ಪು ಹೆಂಚು ಹಾಗೂ ಶೀಟ್‌ಗಳನ್ನು ಹಾಕಿದ್ದಾರೆ. ಜನತಾ, ಆಶ್ರಯ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆಯ ೭೪ ಮನೆಗಳಿವೆ.

ಇಲ್ಲಿನ ಮುಖ್ಯ ಆಹಾರ ರಾಗಿಮುದ್ದೆ, ಅನ್ನ, ಸಾಕು, ಉಪ್ಪಿಟ್ಟು, ದೋಸೆ, ಇಡ್ಲಿ, ಚಿತ್ರಾನ್ನ ಅಮುಖ್ಯ ಆಹಾರಗಳು, ಹೋಳಿಗೆ, ಪಾಯಸ, ಮಾಂಸಹಾರ ವಿಶೇಷ ಆಹಾರಗಳಾಗಿವೆ. ಇಲ್ಲಿಯ ಜನ ಕಾರು, ಬೈಕ್, ಟ್ರಾಕ್ಟರ್, ಆಟೋಗಳನ್ನು ಹೊಂದಿರುವುದರ ಜೊತೆಗೆ ಸಾಂಪ್ರದಾಯಿಕ ಎತ್ತಿನ ಗಾಡಿಗಳನ್ನು ಹೊಂದಿದ್ದಾರೆ. ೩೨ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನ ರಾಗಿ, ಜೋಳ, ತೊಗರಿ, ಅವರೆ, ಹೆಸರು, ಉದ್ದು, ನವಣೆ, ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗು, ಅಡಿಕೆ, ಬಾಳೆಗಳು ಇಲ್ಲಿಯ ವಾಣಿಜ್ಯ ಬೆಳೆಗಳಾಗಿವೆ. ಅಡಿಕೆ ಹಾಗೂ ತೆಂಗು ಬೆಳೆಯೇ ಇಲ್ಲಿನ ಮುಖ್ಯ ವ್ಯಾಪಾರಿ ಸರಕು, ಗ್ರಾಮದ ೨೦ ಕ್ಕೂ ಹೆಚ್ಚು ಜನ ಶಿಕ್ಷಕ ವೃತ್ತಿ ಮಾಡುತ್ತಿದ್ದಾರೆ. ಮೂರು ಜನ ಇಂಜಿನಿಯರ್‌ಗಳಿದ್ದಾರೆ. ಎಪ್ಪತ್ತಕ್ಕೂ ಹೆಚ್ಚು ಜನ ಬೆಂಗಳೂರಿನಲ್ಲಿ ಗಾರ್ಮೆಂಟ್ಸ್ ಇತ್ಯಾದಿ ಫ್ಯಾಕ್ಟರಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಕಂದಿಕೆರೆ ಹೋಬಳಿ ಬರಸಿಡ್ಲೆಹಳ್ಳಿಯ ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಇದೆ. ಈ ಗ್ರಾಮಕ್ಕೇ ಕಂದಿಕೆರೆ ಜಿಲ್ಲಾಪಂಚಾಯಿತಿ ಕ್ಷೇತ್ರವಾಗಿದ್ದು, ತೀರ್ಥಪುರ ತಾಲ್ಲೂಕು ಪಂಚಾಯ್ತಿ ಕ್ಷೇತ್ರವಾಗಿದೆ. ಇದು ತಿರ್ಥಪುರ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿದೆ. ಮೂರು ಜನ ಪಂಚಾಯ್ತಿ ಸದಸ್ಯರಿದ್ದಾರೆ. ಒಬ್ಬರು ಗ್ರಾಮಪಂಚಾಯ್ತಿ ನೌಕರರಿದ್ದಾರೆ. ತಹಶೀಲ್ದಾರರ ಕಛೇರಿ ಪೋಲಿಸ್ ಠಾಣೆ, ಲೋಕೋಪಯೋಗಿ ಇಲಾಖಾ ಕಛೇರಿಗಳಿಗಾಗಿ ತಾಲ್ಲೂಕು ಕೇಂದ್ರವಾದ ಚಿಕ್ಕನಾಯಕನಹಳ್ಳಿಗೆ ಹೋಗಬೇಕಾಗುತ್ತದೆ. ಇದು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಬರುತ್ತದೆ. ಕುಡಿಯುವ ನೀರು ಸರಬರಾಜನ್ನು ಗ್ರಾಮಪಂಚಾಯ್ತಿ ನಿರ್ವಹಿಸುತ್ತಿದೆ. ತಾಲ್ಲೂಕು ಕೇಂದ್ರಕ್ಕೂ ಗ್ರಾಮದಿಂದ ರಸ್ತೆ ಮಾರ್ಗವಿದೆ. ಕೊಂಡ್ಲಿಕ್ರಾಸ್ ಮೂಲಕ ರಾಜ್ಯ ಹೆದ್ದಾರಿ ೨೦೬ ನ್ನು ಸಂಪರ್ಕಿಸಬಹುದಾಗಿದೆ. ಇದೇ ಗ್ರಾಮದಲ್ಲಿ ಅಂಚೆ ಕಛೇರಿ ಇದ್ದು, ಇಲ್ಲಿಯ ಜನ ಸಂಚಾರಿ ದೂರವಾಣಿಗಳನ್ನು ಬಳಸುತ್ತಿದ್ದಾರೆ. ಗ್ರಾಮದಲ್ಲಿ ನ್ಯಾಯಬೆಲೆ ಅಂಗಡಿ ಇದೆ. ಅಲ್ಲದೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘವೂ ಇದೆ.

ಅನ್ನಪೂರ್ಣೇಶ್ವರಿ, ಬಸವೇಶ್ವರ, ಮಹಾಲಕ್ಷ್ಮೀ ಶನೇಶ್ವರ ರೇಣುಕಾಂಬ ಮುಂತಾದ ಸ್ತ್ರೀಶಕ್ತಿ ಸಂಘಗಳಿವೆ.

ಎರಡು ಅಂಗನವಾಡಿ ಕೇಂದ್ರಗಳು, ಸರ್ಕಾರಿಕ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿದ್ದು, ೧೩೦ ಹೆಣ್ಣುಮಕ್ಕಳು ಹಾಗೂ ೧೪೦ ಗಂಡುಮಕ್ಕಳು ಒಟ್ಟು ೨೭೦ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ೯೭೬ ಜನ ಸಾಕ್ಷರರಿದ್ದಾರೆ. ಶಾಲೆಗಳಲ್ಲಿ ಶೌಚಾಲಯ, ಬಿಸಿಯೂಟ, ಕ್ಷೀರಭಾಗ್ಯ ಯೋಜನೆಗಳು ಇದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಕಲಚೇತನ, ವಿಧವಾವೇತನ ೩೨ ಫಲಾನುಭವಿಗಳು ಇದ್ದಾರೆ. ೧೫ ಚಿಕ್ಕ ಚಿಕ್ಕ ಅಂಗಡಿಗಳಿವೆ. ವಿದ್ಯುತ್ ಸಂಪರ್ಕವಿದ್ದು, ೨೦ ಬೀದಿ ದೀಪಗಳನ್ನು ಅಳವಡಿಸಲಾಗಿದೆ. ೪೨ ಕಂಬಗಳಿವೆ.

ಎರಡು ಪ್ರಾಚೀನ ಬಾವಿಗಳಿವೆ, ಅದರಲ್ಲಿ ನೀರಿಲ್ಲ, ಗ್ರಾಮಕ್ಕೆ ಸ್ಮಶಾನ ಜಾಗವಿದೆ. ಬಸವಣ್ಣನ ದೇವಸ್ಥಾನ, ಶನೇಶ್ವರ ದೇವಾಲಯ, ಮಾರಮ್ಮನ ಗದ್ದಿಗೆ, ಆಂಜನೇಯ ಸ್ವಾಮಿ ದೇವಾಲಯ ಭೂತಪ್ಪನ ದೇವಸ್ಥಾನ ಇತ್ಯಾದಿ ದೇವಾಲಯಗಳಿವೆ. ಮಾರಮ್ಮನ ಜಾತ್ರೆ ಕಾರ್ತಿಕಮಾಸದಲ್ಲಿ ಶನಿದೇವರ ಜಾತ್ರೆ ಆಗುತ್ತವೆ. ಜಾತ್ರೆಯಲ್ಲಿ ವಾನೋತ್ಸವ ಇರುತ್ತದೆ. ಮಾರಮ್ಮನ ಜಾತ್ರೆಯಲ್ಲಿ ಬಲಿ ಹರಕೆ ನೆರವೇರಿಸಲಾಗುತ್ತದೆ. ಮಡಿವಾಳ ಜನಾಂಗದ ೮೦ ವರ್ಷ ವಯಸ್ಸಿನ ಸಣ್ಣ ಹನುಮಯ್ಯ ರಂಗ ಸಂಗೀತದಲ್ಲಿ ಪ್ರವೀಣರು, ನಾಟಿಕಗಳನ್ನು ಕಲಿಸುತ್ತಾರೆ., ಹಾರ್ಮೋನಿಯಂ, ನುಡಿಸುತ್ತಾರೆ. ಊರಲ್ಲಿ ಭಜನಾ ತಂಡವಿದೆ. ನರಸಿಂಹಯ್ಯ, ತಿಮ್ಮಕ್ಕ, ಮಹಲಿಂಗಮ್ಮ, ಮುಂತಾದವರು ಭಜನೆ ಮಾಡುತ್ತಾರೆ. ಯುಗಾದಿ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಬರಸಿಡ್ಲೇಹಳ್ಳಿ ಎ.ಕೆ. ಕಾಲೋನಿ

ಬರಶಿಡ್ಲೇಹಳ್ಳಿ ಎ.ಕೆ. ಕಾಲೋನಿಯು ಚಿಕ್ಕನಾಯಕನಹಳ್ಳಿ ಯಿಂದ ಪೂರ್ವಕ್ಕೆ ಹಾಗಲವಾಡಿ ತೀರ್ಥಪುರ ರಸ್ತೆಯಲ್ಲಿದೆ. ಹಾಗಲವಾಡಿ ಮದನಮಡು ಕಾಡು ಗದ್ದೆಗಳಿಂದ ಕೂಡಿದ ಭೂಪ್ರದೇಶವಾಗಿದೆ. ೩೫೪ ಒಟ್ಟು ಗ್ರಾಮದಲ್ಲಿ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವರು ಬರಸಿಡ್ಲೇಹಳ್ಳಿ ಗ್ರಾಮದ ಹೊರಗೆ ಪ್ರತ್ಯೇಕವಾಗಿ ಜನವಸತಿ ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಇದನ್ನು ಮಾದಿಗರ ಹಟ್ಟಿ ಎಂತಲೇ ಕರೆಯಲಾಗಿದೆ. ಆದಿಕರ್ನಾಟಕ ಜನಾಂಗಕ್ಕೆ ಸೇರಿದ ೬೭ ಮನೆಗಳಿದ್ದು, ೨೬೯ ಜನಸಂಖ್ಯೆ ಹೊಂದಿದ್ದಾರೆ. ಇಲ್ಲಿನ ಮನೆಗಳು ಕಾಡುಗಲ್ಲಿನಿಂದ ಕೂಡಿದ್ದು, ಹೆಂಚಿನ, ಸೀಟಿನ, ಸ್ವರೂಪದಲ್ಲಿವೆ. ಇವು ಸರ್ಕಾರದ ವಸತಿ ಯೋಜನೆಯಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿಯೋಜನೆಯು ಫಲಾನುಭವಿಗಳಿದ್ದಾರೆ. ಕುಡಿಯಲು ತೀರ್ಥಪುರದ ಗ್ರಾಮಪಂಚಾಯಿತಿಯಿಂದ ಕೊಳಾಯಿ ಮೂಲಕ ನೀರು ಪೂರೈಸುತ್ತಿದ್ದಾರೆ. ೨ ಸಿಸ್ಟನ್‌ಗಳಿದ್ದು ಒಂದು ಕೊಳವೆ ಬಾವಿಯಿದೆ. ರೈತಾಪಿ ಬದುಕು ಇಲ್ಲಿ ಮುಖ್ಯವಾಗಿದೆ. ಬಯಲು ಇಲ್ಲಿನ ಭೂಪ್ರದೇಶ ರೈತರು ರಾಗಿ,ಶೇಂಗಾ, ಹೆಸರು, ಹುರುಳಿ, ಬೆಳೆಯುತ್ತಾರೆ. ಹುಣಸೆಹಣ್ಣು, ಹೊಂಗೆ ಬೀಜ, ಮುತ್ತುಗದ ಎಲೆ ಸಂಗ್ರಹ ವ್ಯಾಪಾರಿ ಸರಕಾಗಿದೆ. ಕಂದಿಕೆರೆ ಜಿಲ್ಲಾ ಪಂಚಾಯಿತಿಗೆ ಸೇರಿದ್ದು, ತೀರ್ಥಪುರ ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರವಾಗಿದೆ. ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ಕುರಿ, ಹಸು, ಎಮ್ಮೆ, ಸಾಕುಪ್ರಾಣಿಗಳಾಗಿವೆ. ಶಿಕ್ಷಕರು ಸಾರಿಗೆ ಅರಣ್ಯ ಇಲಾಖೆಯ ಸರ್ಕಾರಿ ನೌಕರರಿದ್ದಾರೆ. ಶಿಕ್ಷಣ, ಬರಸೀಡ್ಲೇಹಳ್ಳಿ ಹಾಗೂ ತೀರ್ಥಪುರ ಹಾಗಲವಾಡಿಗೆ ಹೋಗುತ್ತಾರೆ. ತೀರ್ಥಪುರದಿಂದ ಪಡಿತರ ಹಾಗೂ ಅಂಚೆ ಸಂಪರ್ಕವಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಒಂದು ಅಂಗನವಾಡಿ ಕೇಂದ್ರವಿದೆ. ಮಾರಿದೇವತೆಯ ಉತ್ಸವ. ಈ ಬಡಾವಣೆಯ ವಿಶೇಷವಾಗಿದೆ. ಬಲಿ, ಆರತಿ, ಹಗಲು ಜಾತ್ರೆ, ಪರಿಸೆ ನಡೆಯುತ್ತದೆ. ಬಾಯಿ ಬೀಗ ಚಾಟಿ ಸೇವೆ ನಡೆಯುತ್ತದೆ. ಇದೊಂದು ಜಾತ್ಯಾತೀತ ಪರಿಸೆಯಾಗಿದೆ. ಎರೆಕಟ್ಟೆ ರಾಂಪುರದಮ್ಮನ ಜಾತ್ರೆಗೂ ಈ ಗ್ರಾಮದವರು ಎದುರೆತ್ತಿ ಆರತಿ, ಬಲಿ ಮಾಡುವುದು ವಾಡಿಕೆ ಸಾಕ್ಷರತೆ ೬೩% ರಷ್ಟಿದೆ. ಅರಣ್ಯ ಪರಿಸರದಲ್ಲಿನ ಬಾಗೆಹುಲ್ಲು ತರಿ, ನೇರಲೆ, ಹೊನ್ನೆ, ಮತ್ತಿ ಮರಗಳನ್ನು ಈ ಗ್ರಾಮದ ಪರಿಸರದಲ್ಲಿವೆ. ನವಿಲು, ಕರಡಿ, ಜಿಂಕೆ, ತೋಳ, ಕಂಡುಬರುತ್ತವೆ. ಒಂದು ದಲಿತ ಸಂಘವಿದೆ. ಮಾರಮ್ಮ, ರಾಂಪುರದಮ್ಮ, ಸ್ತ್ರೀಶಕ್ತಿ ಸಂಘಗಳಿವೆ. ಹಾಗಲವಾಡಿ, ಚಿಕ್ಕನಾಯಕನಹಳ್ಳಿ ಚೇಳೂರು ಹೊಸಕೆರೆ ಮಾರ್ಗವಾಗಿ ಖಾಸಗಿ ಬಸ್ ಸಂಚಾರವಿದೆ.

## ಬನಶಂಕರಿ ನಗರ

ಬನಶಂಕರಿನಗರ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ಹತ್ತು ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೫ ಹೆಕ್ಟೇರ್.

ಸಾಸಲು ಬಡತನದ ರೇಖೆಗಿಂತ ಕೆಳಗಿದ್ದವರಿಗೆ ಸರ್ಕಾರವು ಗ್ರಾಂಟನ್ನು ನೀಡಿ ಮನೆಯನ್ನು ಕಟ್ಟಿಸಿಕೊಟ್ಟಿದ್ದು, ಈ ಗ್ರಾಮಕ್ಕೆ ಸಾಸಲು ಗ್ರಾಮದೇವತೆ ಬನಶಂಕರಿ ದೇವಿಯ ಹೆಸರನ್ನು ಇಡಲಾಗಿದೆ.

ಬನಶಂಕರಿ ನಗರ ಮಜರೆ ಗ್ರಾಮ ಸಾಸಲು ಗ್ರಾಮಕ್ಕೆ ಸೇರಿದೆ.

ವಿಷಪೂರಿತ ಹಾವುಗಳನ್ನು ಹೊರತುಪಡಿಸಿ ಯಾವುದೇ ಪ್ರಾಣಿ ಕಾಡು ಪ್ರಾಣಿಗಳು ಕಂಡುಬರುವುದಿಲ್ಲ. ಕಾಡು ಪಕ್ಷಿಗಳಾದ ನವಿಲು, ಗೌಜಲಕ್ಕಿ, ಗುಬ್ಬಚ್ಚಿ, ಗೂಬೆ, ಸೋರೆಹಕ್ಕಿ, ಬಾವುಲಿಗಳು ಕಂಡುಬರುತ್ತವೆ.

ಮರಳುಮಿಶ್ರಿತ ಕೆಂಪುಮಣ್ಣನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ತೀರಾ ಹಿಂದುಳಿದ ಗ್ರಾಮವಾಗಿದ್ದು ಬಡತನದ ರೇಖೆಗಿಂತ ಕೆಳಗಿದ್ದವರೇ ಹೆಚ್ಚಾಗಿದ್ದು ಕೆಲವರು ಮಾತ್ರವೇ ಜಮೀನಿನ ಸೌಲಭ್ಯವನ್ನು ಹೊಂದಿದ್ದಾರೆ. ರಾಗಿ ಮುಖ್ಯ ಬೇಳೆಯಾಗಿದ್ದು, ತೊಗರಿ, ಹೆಸರು, ಉರುಳಿ, ಉದ್ದು, ಅವರೆ ಉಪಬೆಳೆಗಳಾಗಿವೆ. ತೆಂಗು ಮತ್ತು ಅಡಿಕೆ ವಾಣಿಜ್ಯ ಮತ್ತು ತೋಟಗಾರಿಕಾ ಬೆಳಗಳಾಗಿವೆ.

ಗ್ರಾಮಸ್ಥರು ನಾಟಿಹಸು, ನಾಟಿಎತ್ತು, ಜೆರ್ಸಿ ಮತ್ತು ಹೆಚ್.ಎಫ್. ಸೀಮೆಹಸುಗಳನ್ನು ಸಾಕುತ್ತಾರೆ. ಕುರಿ, ಮೇಕೆ, ಕೋಳಿಗಳ ಸಾಕಣೆ ಕಂಡುಬರುವುದಿಲ್ಲ.

ವಾರ್ಷಿಕ ಸರಾಸರಿ ೪೬೪.೮ ಮಿ.ಮೀ. ಮಳೆ ಬೀಳುತ್ತದೆ. ಹವಾಮಾನ ವೈಪರೀತ್ಯದಿಂದಾಗಿ ಕಳೆದ ಹತ್ತು ವರ್ಷಗಳಿಂದ ಜಲಕ್ಷಾಮ ಎದುರಿಸುತ್ತಿದ್ದು ಬರಗಾಲಕ್ಕೆ ತುತ್ತಾಗಿದೆ.

ಹೊಳೆ, ಹಳ್ಳಗಳಾಗಲೀ, ಕೆರೆ ಕಟ್ಟೆಗಳಾಗಲೀ ಕಂಡುಬರುವುದಿಲ್ಲ. ೪೦೦ ರಿಂದ ೫೦೦ ಅಡಿ ಆಳದ ೨ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಿಗೆ ನೀರೋದಗಿಸುತ್ತಿದೆ. ಒಂದು ಮಿನಿಟ್ಯಾಂಕ್, ಎರಡು ಕೈ ಪಂಪುಗಳಿದ್ದು ಕುಡಿಯುವ ನೀರಿನ ಸೌಲಭ್ಯವಿದೆ.

ಪರಿಶಿಷ್ಟ ಜಾತಿ ಸಮುದಾಯದವರೇ ಪ್ರಧಾನ ಸಮುದಾಯವಾಗಿದ್ದು ವಿಶ್ವಕರ್ಮ ಆಚಾರ್, ಕುರುಬ, ನಾಯಕ, ಹಾಗೂ ಲಿಂಗಾಯಿತ ಸಮುದಾಯಗಳು ಕಿರು ಸಮುದಾಯಗಳಾಗಿವೆ. ಗ್ರಾಮದ ಭಾಷೆ ಕನ್ನಡವಾಗಿದೆ. ಆಧುನಿಕ ವಾಹನಗಳಾದ ದ್ವಿಚಕ್ರವಾಹನ ಹಾಗೂ ಕಾರುಗಳು ಕಂಡುಬರುತ್ತವೆ. ಆದರೆ ಸಾಂಪ್ರದಾಯಿಕ ವಾಹನಗಳು ಕಂಡುಬರುವುದಿಲ್ಲ.

ಒಟ್ಟು ೧೫ ಮನೆಗಳನ್ನು ಹೊಂದಿರುವ ೨೦೧೧ ರ ಜನಗಣತಿಯ ಪ್ರಕಾರ ೫೮ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಕಾಂಕ್ರೀಟ್ ಮನೆಗಳು, ಮಣ್ಣಿನ ಮನೆಗಳು, ಸೀಮೆಹೆಂಚಿನ ಮನೆಗಳು ಕಂಡುಬರುತ್ತದೆ. ಪ್ರಮುಖ ಆಹಾರ ಪದ್ಧತಿ ರಾಗಿಮುದ್ದೆ ಮತ್ತು ಅನ್ನ. ಇವು ಜನತಾ, ಆಶ್ರಯ ವಸತಿ ಯೋಜನೆಯ ಅಡಿಯಲ್ಲಿ ರಚನೆಯಾಗಿವೆ.

ಬೇಸಾಯ ಇಲ್ಲಿಯ ಪ್ರಮುಖ ಕಸುಬಾಗಿದ್ದರೂ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಾಂಪ್ರದಾಯಿಕ ಹೈನುಗಾರಿಕೆ ಅಲ್ಪ ಪ್ರಮಾಣದಲ್ಲಿದ್ದು ಆಧುನಿಕ ಡೈರಿ ವ್ಯವಸ್ಥೆ ಇರುವುದಿಲ್ಲ ಪಕ್ಕದ ಒಂದು ಕಿ.ಮೀ. ದೂರದಲ್ಲಿರುವ ಗೋಪಾಲನಹಳ್ಳಿ ಗ್ರಾಮದಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಹಾಲನ್ನು ಸರಬರಾಜು ಮಾಡುತ್ತಾರೆ.

ಮೀನುಗಾರಿಕೆ ಕಂಡುಬರುವುದಿಲ್ಲ. ಯಾವುದೇ ಸರ್ಕಾರಿ ನೌಕರರು ಹಾಗೂ ಖಾಸಗಿ ಕಂಪನಿಯ ನೌಕರರು ಕಂಡುಬರುವುದಿಲ್ಲ. ಗುಡಿ ಕೈಗಾರಿಕೆ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಗಳು ಕಂಡುಬರುವುದಿಲ್ಲ. ಬನಶಂಕರಿ ನಗರ ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಶೆಟ್ಟಿಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರ, ಜೆ.ಸಿ. ಪುರ ತಾಲ್ಲೂಕು ಪಂಚಾಯಿತಿ ಕ್ಷೇತ್ರ ಹಾಗೂ ಗ್ರಾಮಪಂಚಾಯಿತಿಗೆ ಒಳಪಟ್ಟಿದೆ. ಒಬ್ಬರು ಗ್ರಾಮಪಂಚಾಯಿತಿ ನೌಕರರಿದ್ದಾರೆ. ತಾಲ್ಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಲ್ಲಿ ತಹಶೀಲ್ದಾರ್ ಕಛೇರಿ ಇದೆ. ಚಿಕ್ಕನಾಯಕನಹಳ್ಳಿ ಗ್ರಾಮಾಂತರ ಪೋಲಿಸ್ ಠಾಣೆ ಸರಹದ್ದಿಗೆ ಸೇರಿದೆ.

ಬನಶಂಕರಿನಗರ ಚಿಕ್ಕನಾಯಕನಹಳ್ಳಿ – ತಿಪಟೂರು ಮಾರ್ಗ ಮಧ್ಯದಲ್ಲಿರುವುದರಿಂದ ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಸ್ಥಿರ ದೂರವಾಣಿ ಸಂಪರ್ಕ ವ್ಯವಸ್ಥೆ ಕಂಡುಬರುವುದಿಲ್ಲ. ಪ್ರತಿ ಮನೆಯಲ್ಲೂ ಸಂಚಾರಿ ದೂರವಾಣಿಗಳಿವೆ. ಒಂದು ಸ್ತ್ರೀಶಕ್ತಿಕ ಸಂಘವಿದ್ದು ಕಿರು ಹಣಕಾಸು ಸಂಸ್ಥೆಗಳಿಂದ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲಸೌಲಭ್ಯ ಪಡೆಯುತ್ತವೆ.

ಅಂಗನವಾಡಿ ಸೌಲಭ್ಯವಾಗಲೀ ಶಾಲಾ ಸೌಲಭ್ಯವಾಗಲೀ ಕಂಡುಬರುವುದಿಲ್ಲ. ಗ್ರಾಮದ ನಾಲ್ಕೂ ಮಕ್ಕಳು ಪಕ್ಕದ ಒಂದು ಕಿ.ಮೀ. ದೂರದಲ್ಲಿರುವ ಗೋಪಾಲನಹಳ್ಳಿ ಶಾಲೆಗೆ ಹೋಗುತ್ತಾರೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವವೇತನದ ಫಲಾನುಭವಿಗಳಿದ್ದಾರೆ. ಯಾವುದೇ ದೇವಾಲಯಗಳು ಕಂಡು ಬರುವುದಿಲ್ಲ.

## ಬನ್ನಿಕೆರೆ

ಬನ್ನಿಕೆರೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೪೫

ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೫೬ ಹೆಕ್ಟೇರ್ ಇದೆ.

ಬನ್ನಿಕೆರೆ ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಹಂದನಕೆರೆ ಜಿಲ್ಲಾಪಂಚಾಯಿತಿ ಕ್ಷೇತ್ರ, ದೊಡ್ಡೆಣ್ಣೇಗೆರೆ ಗ್ರಾಮ ಪಂಚಾಯಿತಿಗೆ ಸೇರಿದೆ. ತಾಲ್ಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಲ್ಲಿ ತಹಶೀಲ್ದಾರ್ ಕಛೇರಿ ಇದೆ. ಹೋಬಳಿ ಕೇಂದ್ರ ಹಂದನಕೆರೆಯಲ್ಲಿ ಉಪ ತಹಶೀಲ್ದಾರರ ಕಛೇರಿ ಇದೆ. ಹಂದನಕೆರೆ ಪೋಲಿಸ್‌ಠಾಣೆ ಸರಹದ್ದಿಗೆ ಸೇರಿದೆ.

ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದ್ದು ರಾಗಿ ಮುಖ್ಯ ಬೆಳೆಯಾಗಿದ್ದು ತೊಗರಿ, ಹೆಸರು, ಅವರೆ, ಉದ್ದು, ಉರುಳಿ ಉಪಬೆಳೆಗಳಾಗಿವೆ. ತೆಂಗು, ಅಡಿಕೆ, ದಾಳಿಂಬೆ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಾಗಿವೆ.

ಗ್ರಾಮಸ್ಥರು ನಾಟಿಹಸು, ನಾಟಿ ಎತ್ತು, ಮೇಕೆ, ಕುರಿ, ಜೆರ್ಸಿ ಮತ್ತು ಹೆಚ್.ಎಫ್. ಸೀಮೆಹಸುಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ಗಿರಿರಾಜ ಮತ್ತು ನಾಟಿಕೋಳಿಗಳನ್ನು ಸಾಕುತ್ತಾರೆ.

ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೫೦೦ ಮಿ.ಮೀ. ಮಳೆ ಬೀಳುತ್ತದೆ. ಹವಾಮಾನ ವೈಪರೀತ್ಯದಿಂದಾಗಿ ಕಳೆದ ಹತ್ತು ವರ್ಷಗಳಿಂದ ಜಲಕ್ಷಾಮ ಎದುರಿಸುತ್ತಿದ್ದು ಬರಗಾಲಕ್ಕೆ ತುತ್ತಾಗಿದೆ.

೪೦೦ ರಿಂದ ೫೦೦ ಅಡಿ ಆಳದ ೨೦ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಿಗೆ ನೀರೊದಗಿಸುತ್ತಿವೆ. ಕಲ್ಲಿನಿಂದ ನಿರ್ಮಿಸಿರುವ ಮೂರು ಸೇದುವ ಬಾವಿಗಳಿದ್ದು ಇಂದಿಗೂ ಬಳಕೆಯಲ್ಲಿವೆ.

ಕುಡಿಯುವ ನೀರಿಗೆ ೫ ಮಿನಿಟ್ಯಾಂಕುಗಳಿವೆ. ೩ ಕೈ ಪಂಪುಗಳಿದ್ದು ಇಂದು ಸಂಪೂರ್ಣವಾಗಿ ಬತ್ತಿಹೋಗಿವೆ. ಗ್ರಾಮದ ಪೂರ್ವ ದಿಕ್ಕಿಗೆ ಬೋರಜ್ಜನಕಟ್ಟೆ, ಪಶ್ಚಿಮ ದಿಕ್ಕಿಗೆ ನಂಜೇಗೌಡನ ಕಟ್ಟೆ ಎಂಬ ೨ ಕಟ್ಟೆಗಳಿವೆ. ಇವುಗಳಿಂದ ಕೃಷಿ ಚಟುವಟಿಕೆಗಳಿಗೆ ಉಪಯೋಗವಿಲ್ಲ.

ಲಿಂಗಾಯಿತ ಸಮುದಾಯವು ಪ್ರಧಾನ ಸಮುದಾಯವಾಗಿದ್ದು ಬ್ರಾಹ್ಮಣರು, ವಾಲ್ಮೀಕಿ ಆದಿಕರ್ನಾಟಕ ಸಮುದಾಯದವರು ಕಿರು ಸಮುದಾಯದ ಪ್ರಮುಖ ಭಾಷೆ ಕನ್ನಡ.

ಆಧುನಿಕ ವಾಹನಗಳಾದ ಟ್ರಾಕ್ಟರ್, ದ್ವಿಚಕ್ರವಾಹನಗಳೊಂದಿಗೆ ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಗಳು ಸಹ ಉಳಿದುಕೊಂಡು ಬಂದಿವೆ. ಒಟ್ಟು ೬೦ ಮನೆಗಳನ್ನು ಹೊಂದಿರುವ ಇತ್ತೀಚಿನ ಜನಗಣತಿ ಪ್ರಕಾರ ೨೯೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಕಾಂಕ್ರೀಟ್ ಮನೆಗಳು ಮಣ್ಣಿನ ಮನೆಗಳು, ಸೀಮೆಹೆಂಚಿನ ಮನೆಗಳು ಇವೆ. ಪ್ರಮುಖ ಆಹಾರ ಪದ್ಧತಿ ರಾಗಿಮುದ್ದೆ ಮತ್ತು ಅನ್ನ. ೧೪ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ಸಾಂಪ್ರದಾಯಿಕ ಹೈನುಗಾರಿಕೆ ಅಲ್ಪಪ್ರಮಾಣದಲ್ಲಿದ್ದು, ಆಧುನಿಕ ಡೈರಿ ವ್ಯವಸ್ಥೆ ಇದೆ. ಪೂಜಾ ಹಾಲಿನ ಡೈರಿಯು ಪ್ರತಿ ದಿನ ೧೦೦ ಲೀಟರ್ ಹಾಲು ಸಂಗ್ರಹಿಸುತ್ತಿದ್ದು ಆರ್ಥಿಕ ಚೇತರಿಕೆಗೆ ಕಾರಣವಾಗಿದೆ. ಮೀನುಗಾರಿಕೆ ಕಂಡು ಬರುವುದಿಲ್ಲ. ೩ ಮಂದಿ ಸರ್ಕಾರಿ ನೌಕರರು, ೮ ಮಂದಿ ಖಾಸಗಿ ಬಡೆತನದ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಗುಡಿಕೈಗಾರಿಕೆ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಗಳು ಕಂಡುಬರುವುದಿಲ್ಲ.

ರಸ್ತೆ ಸಂಚಾರಕ್ಕೆ ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಪ್ರತಿ ಮನೆಯಲ್ಲೂ ಸಂಚಾರಿ ದೂರವಾಣಿಗಳಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ಇಬ್ಬರು ಅಂಗನವಾಡಿ ಕಾರ್ಯಕರ್ತೆಯರಿದ್ದಾರೆ. ೧೧ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ೧ ರಿಂದ ೫ ನೇ ತರಗತಿಯವರೆಗೆ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೧೮ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಹಾಗೂ ಇಬ್ಬರು ಶಿಕ್ಷಕರಿದ್ದಾರೆ.

ಸಿಮೆಂಟ್ ರಸ್ತೆಗಳಾಗಲೀ ಡಾಂಬರು ರಸ್ತೆಗಳಾಗಲೀ ಕಂಡುಬರುವುದಿಲ್ಲ. ಚರಂಡಿ ವ್ಯವಸ್ಥೆಯ ಸೌಲಭ್ಯವು ಇರುವುದಿಲ್ಲ. ೨ ಸ್ತ್ರೀಶಕ್ತಿ ಸಂಘಗಳು, ೩ ಸ್ವಸಹಾಯ ಸಂಘಗಳು, ೬ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಘಗಳಿದ್ದು ಗ್ರಾಮದ ಜನರು ಕಿರು ಹಣಕಾಸು ಸಂಸ್ಥೆಗಳಿಂದ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯುತ್ತವೆ. ಗ್ರಾಮದಲ್ಲಿ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ಮತ್ತು ವಿಧವಾ ವೇತನಗಳನ್ನು ಪಡೆಯುವ ಫಲಾನುಭವಿಗಳಿದ್ದಾರೆ.

ಆಂಜನೇಯ, ಕರಿಯಮ್ಮ, ಈಶ್ವರ ದೇವಾಲಯಗಳಿವೆ. ಗ್ರಾಮದ ಜನರು ಹಳ್ಳಿಕಾರಬ್ಬ ಎಂಬ ಹಬ್ಬದಲ್ಲಿ ಕರಗ ಉತ್ಸವವನ್ನು ಆಚರಿಸುತ್ತಾರೆ.

## ಬಿಳಿಗೆಹಳ್ಳಿ

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿಯ ಮತ್ತಿಘಟ್ಟ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಒಳಪಡುವ ಕಂದಾಯ ಗ್ರಾಮವೇ ಬಿಳಿಗೆಹಳ್ಳಿ. ಈ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೧ ಕಿ.ಮೀ. ಅಂತರದಲ್ಲಿದ್ದು, ಬಯಲು ಪ್ರದೇಶವಾಗಿದೆ.

ಭೌಗೋಳಿಕ ವಿಸ್ತೀರ್ಣವು ೪೦೨.೮೭ ಹೆಕ್ಟೇರ್ ಇದ್ದು, ಕೆಂಪು ಮಿಶ್ರಿತ ಬಿಳಿ ಮಣ್ಣನ್ನು ಹೊಂದಿದೆ. ಕೃಷಿಗೆ ಯೋಗ್ಯವಾಗಿದ್ದು ೩೮೨ ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ.

ಇಲ್ಲಿನ ರೈತರು ರಾಗಿ, ಮುದ್ದೆ ಅವರೆ, ಹೆಸರು, ಅವರೆ, ಉದ್ದು, ಕಡಲೆಕಾಯಿ, ಧಾನ್ಯಗಳನ್ನು ಹಾಗೂ ಉಪಬೆಳೆಯಾಗಿ ತೆಂಗು, ಅಡಿಕೆಯನ್ನು ವಾಣಿಜ್ಯ ಬೆಳೆಗಳಾಗಿ ದಾಳಿಂಬೆ ತರಕಾರಿ ಬೆಳೆಗಳನ್ನು ಬೆಳೆಯುತ್ತಾರೆ. ಕೃಷಿಗೆ ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿ ಹಾಗೂ ಕೃಷಿ ಉಪಕರಣಗಳನ್ನು ಮತ್ತು ಆಧುನಿಕ ವಾಹನಗಳಾದ ಟ್ರಾಕ್ಟರ್‌ಗಳನ್ನು ಕೊಯ್ಲು ಯಂತ್ರಗಳನ್ನು ಬಳಸುತ್ತಾರೆ. ಹಸು, ಎಮ್ಮೆ, ಕುರಿ, ಹಂದಿ, ನಾಯಿ, ಬೆಕ್ಕು, ಆಡು ಇತ್ಯಾದಿ ಪ್ರಾಣಿಗಳನ್ನು ಸಾಕುತ್ತಾರೆ. ಸಾಕು ಪಕ್ಷಿಯಾದ ಕೋಳಿಯನ್ನು ಹೆಚ್ಚಾಗಿ ಸಾಕುತ್ತಾರೆ. ಇವರ ಪ್ರಧಾನ ಆಹಾರ ರಾಗಿಮುದ್ದೆ ಅನ್ನ ರೊಟ್ಟಿ ವಿಶೇಷ ಸಂದರ್ಭಗಳಲ್ಲಿ ಬಾಡೂಟ ಹಾಗೂ ಪಾಯಸ ಹೋಳಿಗೆ ಒಬ್ಬಟ್ಟು ಲಾಡು ಆಹಾರ ಪದಾರ್ಥಗಳನ್ನು ಅಡುಗೆ ಮಾಡುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಾರೆ.

ಬಿಳಿಗೆ ಹಳ್ಳಿಯ ವಾರ್ಷಿಕ ಹವಾಮಾನ ಪ್ರಮಾಣವು ಹೀಗಿದೆ. ಮಳೆ ೫೬೨–೫೬೪ ಮಿ.ಮೀ. ಚಳಿ ೮–೧೨, ಡಿ.ಸೆಂ., ಬಿಸಿಲು ೨೬–೩೧ ಡಿ.ಸೆಂ. ಇದ್ದು, ಬೆಟ್ಟ, ಕಾಡು, ಅಭಯಾಯಣ್ಯ ರಕ್ಷರಾರಣ್ಯ ಸಾಮಾಜಿಕ ಅರಣ್ಯಗಳಾಗಲೀ ಇರುವುದಿಲ್ಲ.

ನೀರಿನ ವ್ಯವಸ್ಥೆಯಲ್ಲಿ ೧ ಕೆರೆ, ೧ ಕುಂಟೆ, ೧ ತೆರೆದಬಾವಿ, ೬೦ ಕೊಳವೆ ಬಾವಿಗಳು ೬ ಕಿರು ವಾಹನ ಟ್ಯಾಂಕ್‌ಗಳಿವೆ. ಇನ್ನುಳಿದ ಹಳ್ಳ ಜಲಪಾತ, ಬುಗ್ಗೆ, ಹೊಳೆಗಳಾಗಲೀ ಕಂಡುಬರುವುದಿಲ್ಲ.

ಈ ಗ್ರಾಮದಲ್ಲಿ ಆದಿ ಕರ್ನಾಟಕ ಜನಾಂಗವೇ ಅಧಿಕ ಸಂಖ್ಯೆಯಲ್ಲಿದ್ದು, ನಂತರದ ಸ್ಥಾನದಲ್ಲಿ ನಾಯಕ, ವೈಷ್ಣವ, ಲಿಂಗಾಯಿತ, ಆಚಾರಿ ಜನಾಂಗವು ಇದ್ದು, ಕನ್ನಡ ಭಾಷೆಯನ್ನು ಮಾತನಾಡಲು ಬಳಸುತ್ತಾರೆ. ಈ ಗ್ರಾಮದಲ್ಲಿ ೨೪೦ ಮನೆಗಳಿದ್ದು, ೪೦ ಮನೆಗಳು ಶೌಚಾಲಯ ಸಹಿತವಾಗಿವೆ. ೨ ವಸತಿ ರಹಿತ ಕುಟುಂಬಗಳು ೧ ನಿವೇಶನ ರಹಿತ ಕುಟುಂಬಗಳು ೩೦ ಆಶ್ರಯ ಮನೆಗಳು, ೨೦ ಜನತಾ ಮನೆಗಳು, ೩೦ ಅಂಬೇಡ್ಕರ್ ವಸತಿ ನಿಲಯಗಳು ೧೦ ಇಂದಿರಾ ಆವಾಸ್ ಮನೆಗಳಿವೆ. ೧೫೦ ಹೆಂಚಿನ, ಕಲ್ಲಿನ ೪೫ –೫ ಕಾಂಕ್ರೀಟ್ ಮನೆಗಳಿದ್ದು, ೮೦ ಮನೆಗಳು ವಿದ್ಯುತ್ ಜ್ಯೋತಿ ವ್ಯವಸ್ಥೆ ಹೊಂದಿವೆ.

ಗ್ರಾಮದಲ್ಲಿ ರಂಗನಾಥ, ಭೂತಪ್ಪ ದೇವಾಲಯವಿದ್ದು ಬಾನಪುರ ಊರಹಬ್ಬ ಆರತಿ, ಬಾನ, ಬ್ಯಾಟೆಯೊಂದಿಗೆ ನಡೆಯುತ್ತದೆ. ಗ್ರಾಮದಲ್ಲಿ ಯುಗಾದಿ, ಗೌರಿ–ಗಣೇಶ, ದೀಪಾವಳಿ, ಮನಾನವಮಿ, ಶಿವರಾತ್ರಿ ಹಬ್ಬಗಳನ್ನು ಮಾಡುತ್ತಾರೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಗ್ರಾಮದಲ್ಲಿ ೨೮ ಮಕ್ಕಳಿದ್ದು, ೨ ಶಿಕ್ಷಕರಿದ್ದಾರೆ. ಕ್ಷೀರಭಾಗ್ಯ, ಶೌಚಾಲಯ, ಬಿಸಿಯೂಟ ಸೌಲಭ್ಯಗಳಿವೆ.

## ಬೆಳ್ಳಾರ

ಬೆಳ್ಳಾರ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರದಿಕ್ಕಿಗೆ ೩೫ ಕಿ.ಮೀ. ದೂರದಲ್ಲಿದೆ. ಬಿಳಿಯಹಾರ ಹೂ ಬೆಳೆಯುವ ಪ್ರದೇಶ ಎಂಬ ಹಿನ್ನೆಲೆಯಲ್ಲಿ ಬೆಳ್ಳಾರವಾಗಿದೆ ಎಂದು ಶಿಕ್ಷಕ ರಂಗೇಗೌಡ ಅಭಿಮತವಾಗಿದೆ. ಇದೊಂದು ಕಂದಾಯ ಗ್ರಾಮ ಬಯಲುನಾಡಾಗಿದೆ. ಭೌಗೋಳಿಕ ವಿಸ್ತೀರ್ಣ ೪೦೫೬.೧೦ ಹೆಕ್ಟೇರ್ ಇದ್ದು, ಜಡೆಯಪ್ಪನ ಪಾಳ್ಯ, ಹೊನ್ನಯ್ಯನ ಪಾಳ್ಯ ಬೆಳ್ಳಾರ ಗೊಲ್ಲರಹಟ್ಟಿ, ಬೆಳ್ಳಾರ ಸೇತುವೆ, ಬೆಳ್ಳಾರ ಎಕೆ ಕಾಲೋನಿ ಬೆಳ್ಳಾರ ಜನತಾ ಕಾಲೋನಿ ಸೇರ್ಪಡೆ ಗ್ರಾಮಗಳಾಗಿವೆ.

ಕೆಂಪು ಮಿಶ್ರಿತ ಮತ್ತು ಎರೆ ಭೂಮಿಯನ್ನು ಹೊಂದಿರುವ ಗ್ರಾಮದ ಭೂಭಾಗವು ವ್ಯವಸಾಯಕ್ಕೆ ಯೋಗ್ಯವಾಗಿದೆ. ಇದರಲ್ಲಿ ೩೨೧೬ ಹೆಕ್ಟೇರ್ ಕೃಷಿ ಭೂಮಿಯಾಗಿದೆ. ಗ್ರಾಮದ ದಕ್ಷಿಣದಿಕ್ಕಿಗೆ ಬೂದಿಗುಡ್ಡ, ಗಣಿಗುಡ್ಡವಿದ್ದು ಚಿನ್ನದ ನಿಕ್ಷೇಪವಿದೆ ಮತ್ತು ಗಣಿಗಾರಿಕೆ ನಡೆದಿತ್ತು ಎನ್ನಲಾಗಿದೆ.

ರಕ್ಷಿತಾರಣ್ಯ, ಧರ್ಮವೀರ ಫಾರಂ ಇದ್ದು ಸಸ್ಯಪ್ರಭೇಧಗಳು ತವರಾಗಿದೆ. ಕಾಡು ಪ್ರಾಣಿಗಳಾದ ಕರಡಿ, ಚಿರತೆ, ತೋಳ, ಮೊಲ, ಹಂದಿ ಹಾಗೂ ಕಾಡು ಪಕ್ಷಿಗಳಾದ ನವಿಲು, ಗೌಜುಗ, ಗಿಳಿ, ಕೋಗಿಲೆಗಳನ್ನು ಕಾಣಬಹುದು.

ಸಾಕುಪ್ರಾಣಿಗಳಾದ ಹಸು, ಎಮ್ಮೆ, ಕುರಿ–ಮೇಕೆ, ನಾಯಿ, ಬೆಕ್ಕುಗಳನ್ನು ಗ್ರಾಮದಲ್ಲಿ ಸಾಕುತ್ತಾರೆ. ಹಸುಗಳಲ್ಲಿ ಹಳ್ಳಿಕಾರ್ ತಳಿ ಮತ್ತು ಮಿಶ್ರತಳಿಗಳಾದ ಜೆರ್ಸಿ, ಹೆಚ್.ಎಫ್ ಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಕೋಳಿ ಸಾಕು ಪಕ್ಷಿಯಾಗಿದೆ.

ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆಯಲ್ಲಿ ಸುಮಾರು ೩೪ಡಿ.ಸೆಂ.– ೩೬ ಡಿ.ಸೆಂ. ಬಿಸಿಲಿನ ತಾಪವಿದ್ದು, ಚಳಿಗಾಲದಲ್ಲಿ ೧೦ ಡಿ.ಸೆಂ. –೧೨ ಡಿ.ಸೆಂ. ಚಳಿಯಿರುತ್ತದೆ.

ಗ್ರಾಮಕ್ಕೆ ಹೊಂದಿಕೊಂಡಂತಿರು ಹೊಸಕೆರೆಹಳ್ಳ, ದೊಡ್ಡಕೆರೆಹಳ್ಳ, ಮಳೆಗಾಲದಲ್ಲಿ ಹೆಚ್ಚು ಮಳೆ ಬಂದರೆ ತುಂಬಿ ಹರಿಯುತ್ತದೆ. ೩ ತೆರೆದ ಬಾವಿಗಳಿದ್ದು, ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗಾಗಿಕ ಗ್ರಾಮಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ, ನೀರಿನ ಟ್ಯಾಂಕ್, ಮಿನಿ ಟ್ಯಾಂಕ್ ಹಾಗೂ ಕೊಳಾಯಿಯ ಮೂಲಕ ಸಾರ್ವಜನಿಕವಾಗಿ ನೀರನ್ನು ಒದಗಿಸಲಾಗುತ್ತಿದೆ.

ಮೂರು ಕೈಪಂಪುಗಳಿದ್ದು, ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರು ಕುಡಿಯುವ ನೀರಿನ ಹೊರತೆಗಳಾಗಿವೆ.

ಬೆಳ್ಳಾರ ಗ್ರಾಮದಲ್ಲಿ ಮುಸ್ಲಿಂ ಕುಂಚಿಟಿಗ, ಬೋವಿ, ಮಡಿವಾಳ, ನಾಯಕ ಸಮುದಾಯದವರು ಸಣ್ಣ ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಹಾಗೂ ಉರ್ದು ಭಾಷಿಕರಿದ್ದಾರೆ. ಒಟ್ಟು ೩೨೫ ಮನೆಗಳನ್ನು ಹೊಂದಿರುವ ಜನಗಣತಿಯ ಪ್ರಕಾರ ೧೧೪೬ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ.

ವಿವಿಧ ಮನೆಯ ಪ್ರಕಾರಗಳಿದ್ದು ಕಾಂಕ್ರೀಟ್, ಮಣ್ಣಿನ, ಕಲ್ಲಿನ, ಹೆಂಚಿನ ಮತ್ತು ಸೀಟಿನ ಮನೆಗಳನ್ನು ಕಾಣಬಹುದು ಹಾಗೇಯೇ ೧೫ ಕುಟುಂಬಗಳು ಗುಡಿಸಲಿನಲ್ಲಿ ವಾಸವಾಗಿವೆ.

ಸರ್ಕಾರದ ಜನತಾ, ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ವಸತಿಯೋಜನೆಯ ೧೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದಾಗಿದೆ. ೧೦೬ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ.

ಪ್ರಮುಖವಾಗಿ ರಾಗಿಮುದ್ದೆ, ಅನ್ನ, ರೊಟ್ಟಿ, ಉಪ್ಪಿಟ್ಟು, ಚಿತ್ರಾನ್ನ, ದೋಸೆ ಹಾಗೂ ಹಬ್ಬಗಳಲ್ಲಿ ಹೋಳಿಗೆ, ಪಾಯಸ ಸಿಹಿ ಕಡುಬು ಮತ್ತು ಬಾಡೂಟವನ್ನು ವಿಶೇಷವಾಗಿ ಮಾಡುತ್ತಾರೆ.

ರಾಗಿ ಮುಖ್ಯ ಬೆಳೆಯಾಗಿದ್ದು, ಜೋಳ, ಸಾವೆ, ದ್ವಿದಳಧಾನ್ಯಗಳು ಹಾಗೂ ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ ಮತ್ತು ಕೆಲಭಾಗದಲ್ಲಿ ತರಕಾರಿ ಬೆಳೆಯುತ್ತಾರೆ. ಸಾಂಪ್ರದಾಯಿಕ ಹೈನುಗಾರಿಕೆಯ ಜೊತೆಗೆ ಆಧುನಿಕ ಡೈರಿಯಿದೆ. ಪಶುಪಾಲನೆ ಹೈನುಗಾರಿಕೆಯಿಂದ ಗ್ರಾಮದ ಆರ್ಥಿಕ ಸ್ಥಿತಿ ಚೇತರಿಕೆ ಕಾಣುತ್ತಿದೆ.

ಕೃಷಿ ಇಲ್ಲಿನ ಮುಖ್ಯ ಕಸುಬಾಗಿದ್ದರೂ ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಪೋಲಿಸ್ ಇಲಾಖೆಯಲ್ಲಿ ಅನಂತಕುಮಾರ್, ವೆಂಕಟೇಶ್, ಮತ್ತು ಶ್ರೀನಿವಾಸ ಹಾಗೂ ಡಾಕ್ಟರ್, ಕುಮಾರಸ್ವಾಮಿ ಸಬ್‌ರಿಜಿಸ್ಟ್ರಾರ್ ರಾಮದಾಸೇಗೌಡ ಸರ್ಕಾರಿ ನೌಕರಯಲ್ಲಿರುವ ಊರಿನ ಪ್ರಮುಖರು ಒಟ್ಟು ೧೨ ಜನ ಸರ್ಕಾರಿ ನೌಕರರಿದ್ದಾರೆ. ಯಲದಬಾಗಿ ಚಿಕ್ಕರಂಗೇಗೌಡರು ಉಪನ್ಯಾಸಕರಾಗಿದ್ದು, ಸಾಹಿತಿಯಾಗಿದ್ದರು. ವ್ಯವಸಾಯದ ಜೊತೆಗೆ ಕಡ್ಡಿ ಸಿಗಿಯುವುದು, ಬೀಡಿ ಸುತ್ತುವುದು ಇಲ್ಲಿನ ಕುಲಕಸುಬುಗಳಾಗಿವೆ.

ಹುಳಿಯಾರು ಹೋಬಳಿ ಚಿ.ನಾ.ಹಳ್ಳಿ ವಿಧಾನಸಭಾ ಕ್ಷೇತ್ರಕ್ಕು ಮತ್ತು ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತದೆ. ಬಿ. ಗಂಗಣ್ಣ ಇದೇ ಗ್ರಾಮದವರಾಗಿದ್ದು, ಸಿರಾ ತಾಲ್ಲೂಕು ಕಳ್ಳಂಬೆಳ್ಳ ಕ್ಷೇತ್ರದಿಂದ ಸ್ಪರ್ಧಿಸಿ ಎರಡು ಬಾರಿ ಶಾಸಕರಾಗಿದ್ದರು.

ಹೊಯ್ಸಳಕಟ್ಟೆ–ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮಪಂಚಾಯಿತಿಯಾಗಿ ಹೊಂದಿದೆ. ಮೂವರು ಸದಸ್ಯರಿದ್ದಾರೆ.

ರಾಜ್ಯ ಹೆದ್ದಾರಿ ಸಂಪರ್ಕವಿದ್ದು ಸರಕಾರಿ, ಖಾಸಗಿ ಬಸ್ಸುಗಳು, ಆಟೋರಿಕ್ಷಾ, ಟೆಂಪೋ ಮತ್ತು ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ.

ಬಹುಪಾಲು ಮನೆಗಳಲ್ಲಿ ಸಂಚಾರಿ ದೂರವಾಣಿ ಹಾಗೂ ಡಿ.ಟಿ.ಹೆಚ್. ಸಂಪರ್ಕವನ್ನು ಕಾಣಬಹುದಾಗಿದೆ. ಅಂಚೆ ಕಛೇರಿ, ಸರ್ಕಾರಿ ಸಂಘ, ಕೃಷಿ ಬ್ಯಾಂಕ್ ಸ್ತ್ರೀಶಕ್ತಿ ಸಂಘಗಳು ಹಾಗೂ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು ಗ್ರಾಮಸ್ಥರು ಉಳಿತಾಯ–ಸಾಲ ಸೌಲಭ್ಯಗಳ ಉಪಯೋಗ ಪಡೆದುಕೊಂಡಿದ್ದಾರೆ.

ಎರಡು ಅಂಗನವಾಡಿ ಕೇಂದ್ರಗಳಿದ್ದು, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿದ್ದು, ವಿದ್ಯಾರ್ಥಿಗಳಿಗೆ ಬಿಸಿಯೂಟ, ಕ್ಷೀರಭಾಗ್ಯ ಹಾಗೂ ಶೌಚಾಲಯದ ವ್ಯವಸ್ಥೆ ಕಲ್ಪಿಸಲಾಗಿದೆ. ೮೨.೪ ರಷ್ಟು ಸಾಕ್ಷರತೆ ಇದೆ.

ನಾಟಿ ವೈದ್ಯ ಗೋವಿಂದಪ್ಪನವರು ಹಾವು ಕಡಿದವರಿಗೆ ಔಷಧಿನೀಡುತ್ತಾರೆ. ಗ್ರಾಮದಲ್ಲಿ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನ, ಪಡೆಯುವ

೧೬ ಫಲಾನುಭವಿಗಳಿದ್ದಾರೆ. ಕರಿಯಮ್ಮ, ಆಂಜನೇಯ, ಕಾಳಘಟ್ಟಮ್ಮ, ಮುನಿಯಪ್ಪ ದೇವಾಲಯಗಳು ಹಾಗೂ ೧ ಮಸೀದಿ ಇದೆ.

ಕರಿಯಮ್ಮದೇವಿ ಮತ್ತು ಆಂಜನೇಯ ಸ್ವಾಮಿ ಜಾತ್ರೆ ನಡೆಯುತ್ತದೆ. ಸಿಡಿ, ಓಕುಳಿ, ಬಲಿ ಹಾಗೂ ಕೊಂಡದ ಆಚರಣೆಯೂ ನಡೆಯುತ್ತದೆ. ಸೋಬಾನೆಪದದ ಲಕ್ಷ್ಮಮ್ಮ, ಲಕ್ಷ್ಮಕ್ಕ, ಹಾಗೂ ಭಜನೆಯ ಕೆಂಪಯ್ಯ ಪ್ರಮುಖ ಜಾನಪದರು.

ಯುಗಾದಿ, ದೀಪಾವಳಿ, ಶಿವರಾತ್ರಿ, ಮಹಾನವಮಿ, ಗೌರಿ–ಗಣೇಶ ಹಾಗೂ ರಂಜಾನ್, ಬಕ್ರೀದ್ ಹಬ್ಬಗಳನ್ನು ಸಡಗರದಿಂದ ಆಚರಿಸುತ್ತಾರೆ.

## ಬೆಳ್ಳಾರ ಎ.ಕೆ. ಕಾಲೋನಿ

ಬೆಳ್ಳಾರ ಎ.ಕೆ. ಕಾಲೋನಿಯು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೩೫ ಕಿ.ಮೀ. ದೂರದಲ್ಲಿದ್ದು, ಸಿರಾ ಹುಳಿಯಾರು ಮುಖ್ಯ ರಸ್ತೆಯಲ್ಲಿದೆ. ಬೆಳ್ಳಾರ ಗ್ರಾಮಕ್ಕೆ ಹೊಂದಿಕೊಂಡಿದೆ. ಆದಿ ಕರ್ನಾಟಕ ಜನಾಂಗದವರು ಪ್ರತ್ಯೇಕವಾಗಿ ಜನ ವಸತಿ ಮಾಡಿಕೊಂಡ ಕಾರಣ ಆದಿ ಕರ್ನಾಟಕದ ಕಾಲೋನಿ, ಮಾದಿಗರ ಹಟ್ಟಿ ಎಂತಲೂ ಕರೆಯುತ್ತಾರೆ. ೩೦ ಮನೆಗಳು ಮಾತ್ರ ಇದ್ದು, ೧೭೪ ಜನಸಂಖ್ಯೆ ಹೊಂದಿವೆ. ಇಲ್ಲಿ ಹೆಂಚಿನ, ಸೀಟಿನ, ಸ್ವರೂಪದಲ್ಲಿದ್ದು, ಸರ್ಕಾರದ ವಸತಿ ಯೋಜನೆಗಳಾದ ಆಶ್ರಮ, ಜನತಾ, ಅಂಬೇಡ್ಕರ್ ಯೋಜನೆಯ ಫಲಾನುಭವಿಗಳಿದ್ದಾರೆ. ಉಚಿತ ವಿದ್ಯುತ್ ಸೌಲಭ್ಯ ಪಡೆಯುತ್ತಾರೆ. ಬಯಲು ಶೌಚಾಲಯ ಬಳಸುತ್ತಾರೆ. ಶಾಲೆಗೆ ಬೆಳ್ಳಾರ ಮುಖ್ಯ ಗ್ರಾಮಕ್ಕೆ ಹೋಗುತ್ತಾರೆ. ಪಡಿತರ ವ್ಯವಸ್ಥೆಗೂ ಬೆಳ್ಳಾರ ಗ್ರಾಮಕ್ಕೆ ಬರಬೇಕಿದೆ. ಕುಡಿಯಲು ಗ್ರಾಮ ಪಂಚಾಯಿತಿಯಿಂದ ಒಂದು ಕೊಳವೆ ಬಾವಿ ಮೂಲಕ ನೀರು ಪೂರೈಸುತ್ತಾರೆ. ಎರಡು ಕಿರು ಟ್ಯಾಂಕ್‌ಗಳಿವೆ. ವ್ಯವಸಾಯ ಮುಖ್ಯ ಕಸುಬು, ಕೂಲಿ, ಟ್ರಾಕ್ಟರ್ ಡ್ರೈವಿಂಗ್ ಕೆಲಸಕ್ಕೂ ಹೋಗುತ್ತಾರೆ. ಹೆಂಗಸರು ಮುತ್ತುಗದ ಎಲೆ ಸಂಗ್ರಹ, ಕಟ್ಟುವುದು, ಹೊಂಗೆ ಬೀಜ, ಗರಿಕಡ್ಡಿ ಎರಡಯುವ ಕೆಲಸ ಮಾಡುತ್ತಾರೆ. ದುರ್ಗಮ್ಮನ ಆರತಿ, ಹರಕೆ, ಬಲಿ ಸಂಪ್ರದಾಯವಿದೆ. ಸಮುದಾಯ ಸೌಲಭ್ಯಗಳಾದ ಸಂಧ್ಯಾಸುರಕ್ಷೆ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಸಾರಿಗೆ, ಶಿಕ್ಷಣ, ನೀರು ಸೇರಿ ೩ ಜನ ಸರ್ಕಾರಿ ನೌಕರರಿದ್ದಾರೆ. ಯುಗಾದಿ, ದೀಪಾವಳಿ, ದಸರಾ ಹಬ್ಬವನ್ನು ಆಚರಿಸುತ್ತಾರೆ. ಹೊಯ್ಸಳ ಕಟ್ಟೆ ಗ್ರಾಮ ಪಂಚಾಯಿತಿ ಚಿಕ್ಕನಾಯಕನಹಳ್ಳಿ ವಿಧಾನ ಸಭಾಕ್ಷೇತ್ರಕ್ಕೆ ಹುಳಿಯಾರು ಹೋಬಳಿಗೆ ಸೇರಿದೆ.

## ಬೆಳ್ಳಾರ ಸೇತುವೆ

ಬೆಳ್ಳಾರ ಸೇತುವೆ ೧೬ ಮನೆಗಳು ಒಂದು ಪುಟ್ಟ ಸಮುದಾಯ ಚಿಕ್ಕನಾಯಕನಹಳ್ಳಿ ಕಂದಿಕೆರೆ ಮಾರ್ಗದಲ್ಲಿ ಒಂದು ತಿರುವು ರಸ್ತೆ ಇದ್ದುದರಿಂದ ಅಲ್ಲಿ ಕೆಲವು ಜನ ವಸತಿ ನಿರ್ಮಾಣವಾದುದರಿಂದಾಗಿ ಬೆಳ್ಳಾರ ಸೇತುವೆ ತಿಮ್ಮನಹಳ್ಳಿ ಕ್ರಾಸ್ ಎಂತಲೂ ಕರೆಯುತ್ತಾರೆ. ಕುಂಚಿಟಿಗ, ನಾಯಕ ಜನಾಂಗದ ಆರು ಮನೆಗಳಿದ್ದು, ೩೦ ಜನ ಸಂಖ್ಯೆ ಹೊಂದಿದೆ. ಬೋರ್ಗ ಕಣಿವೆಯ ಹಳ್ಳಕ್ಕೆ ರಸ್ತೆ ಸಂಚಾರದ ಕಾರಣದಿಂದ ಬ್ರೀಟಿಷರ ಕಾಲದಲ್ಲಿ ಸೇತುವೆ ನಿರ್ಮಿಸಿದ್ದರಿಂದ ಬೆಳ್ಳಾರ ಸೇತುವೆ ಎಂತಲೇ ಕರೆಯುವುದು. ವಾಡಿಕೆಯಾಗಿದೆ. ಬೆಳ್ಳಾರ ಮುಖ್ಯ ಗ್ರಾಮಕ್ಕೆ ಸೇರಿದ್ದು, ಹೋಯ್ಸಳಕಟ್ಟೆ ಗ್ರಾಮ ಪಂಚಾಯಿತಿ ಸೇರಿದೆ. ಸಿರಾ ಹುಳಿಯಾರು ಮುಖ್ಯ ರಸ್ತೆಯಲ್ಲಿದೆ. ಇಲ್ಲಿ ಪ್ರಮುಖ ಉದ್ಯೋಗ ವ್ಯವಸಾಯ ಅಡಿಕೆ, ತೆಂಗು, ಬೆಳೆಯುತ್ತಾರೆ. ಶೇಂಗಾ ಬಯಲು ಬೆಳೆಯಾಗಿದೆ. ಜೋಜನ ಕಣಿವೆ ತುಂಬಿದರೆ ಭತ್ತ ಬೆಳೆಯುತ್ತಾರೆ. ರಾಗಿ ವಿಶೇಷವಾಗಿ ಬೆಳೆಯುತ್ತಾರೆ. ಮುಖ್ಯ ಆಹಾರ ರಾಗಿಮುದ್ದೆ, ಅನ್ನ ಅಮುಖ್ಯವಾಗಿ ಬಾಡೂಟ ಬಳಸುತ್ತಾರೆ. ಕಣಿವೆಯ ಗ್ರಾಮ ಪಂಚಾಯಿತಿಯಿಂದ ಒಂದು ನಲ್ಲಿ ಇದೆ. ಗ್ರಾಮದವರು ಪ್ರತ್ಯೇಕವಾಗಿ ಕೊಳವೆ ಬಾವಿ ಕೊರೆಸಿ ವ್ಯವಸಾಯಕ್ಕೆ ಬಳಸಿ ಕೊಳ್ಳುತ್ತಾರೆ. ಕುರಿ ಸಾಕಾಣಿಕೆ ಇದೆ. ಅಡಿಕೆ, ಕೊಬ್ಬರಿ, ವ್ಯಾಪಾರವಿದೆ. ಸಮುದಾಯ ಸೌಲಭ್ಯವಾದ ವೃದ್ಧಾಪ್ಯ ಹಾಗೂ ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಹೆಂಚಿನ, ಕಾಂಕ್ರೀಟ್ ಮನಗಳಿವೆ. ಕೃಷಿ ಇಲಾಖೆ, ಇಂಜಿನಿಯರಿಂಗ್ ಇಲಾಖೆಗೆ ಸೇರಿದ ೨ ಸರ್ಕಾರಿ ನೌಕರರಿದ್ದಾರೆ.

ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ, ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಶಾಲೆಗೆ ಬೋರನಕಣಿವೆ ಶಾಲೆಗೆ, ಹೋಗುತ್ತಾರೆ. ಸಾಕ್ಷರತೆ ೭೪.೬ ರಷ್ಟಿದೆ. ಪಡಿತರ ಸೌಲಭ್ಯಕ್ಕೆ ಹೊಯ್ಸಳ ಕಟ್ಟೆಗೆ ಹೋಗಬೇಕಾಗಿದೆ. ಬಯಲು ಶೌಚಾಲಯ ಬಳಸುತ್ತಾರೆ.

## ಬೆಳ್ಳಾರ ಜನತಾ ಕಾಲೋನಿ

ಬೆಳ್ಳಾರ ಜನತಾ ಕಾಲೋನಿಯು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೩೬ ಕಿ.ಮೀ. ದೂರದಲ್ಲಿದೆ. ಸಿರಾ ಹುಳಿಯಾರು ಮುಖ್ಯರಸ್ತೆಯಲ್ಲಿ ಬೆಳ್ಳಾರದ ಹೊರವಲಯದಲ್ಲಿ ಹೊಸದಾಗಿ ವಸತಿ ನಿರ್ಮಾಣವಾದುದರಿಂದಾಗಿ ಬೆಳ್ಳಾರ ಜನತಾ ಕಾಲೋನಿ, ಎಂದು ಕರೆಯುತ್ತಾರೆ. ಇಲ್ಲಿ ಕುಂಚಿಟಿಗ, ನಾಯಕ, ಆದಿಕರ್ನಾಟಕ ಕ್ಷೌರಿಕ,

ಕುರುಬ ಹಾಗೂ ಬೋವಿ ಜನಾಂಗಗಳು ಒಟ್ಟು ೨೯ ಮನೆಗಳಿವೆ. ೧೫೧ ಜನಸಂಖ್ಯೆ ಇದೆ. ಇಲ್ಲಿನ ಮನೆಗಳು ಹೆಂಚಿನ, ಸೀಟಿನ ಸ್ವರೂಪದಲ್ಲಿದ್ದು, ಇವು ಸರ್ಕಾರದ ಜನತಾ ಯೋಜನೆಯ ಫಲಾನುಭವಿಗಳಿದ್ದಾರೆ. ೧೭ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ. ಶಿಕ್ಷಣ, ಪಡಿತರ, ಅಂಗನವಾಡಿಗೆ ಮುಖ್ಯ ಗ್ರಾಮ ಬೆಳ್ಳಾರಕ್ಕೆ ಹೋಗುತ್ತಾರೆ. ಕುಡಿಯಲು ಗ್ರಾಮ ಪಂಚಾಯಿತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸುತ್ತಾರೆ. ಕೂಲಿ ಕಾರ್ಮಿಕರು ಅಧಿಕವಾಗಿದ್ದು, ಟ್ರಾಕ್ಟರಿ ಡ್ರೈವರ್, ಹುಣಸೆಹಣ್ಣು ಗರಿಕಡ್ಡಿ, ಮುತ್ತುಗದ ಎಲೆ ಸಂಗ್ರಹ ಹಾಗೂ ಎಲೆಕಟ್ಟುವುದಕ್ಕೆ ಹೋಗುತ್ತಾರೆ.

ರಾಗಿಮುದ್ದೆ ಮುಖ್ಯ ಆಹಾರವಾಗಿದೆ. ಬಾಡೂಟ ಪಾಯಸ ಹೋಳಿಗೆಯನ್ನು ವಿಶೇಷವಾಗಿ ಸಾಂದರ್ಭಿಕವಾಗಿ ಬಳಸುತ್ತಾರೆ. ಕರಿಯಮ್ಮ ದೇವರ ಜಾತ್ರೆಯ ಕಾಲದಲ್ಲಿ ಆರತಿ, ಬಲಿ ವಿಶೇಷ ಆಂಜನೇಯ, ಮುನಿಯಪ್ಪ, ಕಾಳಗಟ್ಟಮ್ಮ ದೇವರುಗಳಿಗೆ ನಡೆದುಕೊಳ್ಳುತ್ತಾರೆ. ಹೋಯ್ಸಳ ಕಟ್ಟೆ ಗ್ರಾಮ ಪಂಚಾಯ್ತಿಗೆ ಸೇರಿದ್ದು ಗ್ರಾಮದ ಗೇಟಿನಲ್ಲಿ ೪ ಟೀ ಅಂಗಡಿ, ೨ ಚಿಲ್ಲರೆ ಅಂಗಡಿಗಳಿವೆ. ೫೯.೬ ಸಾಕ್ಷರತೆ ಇದೆ. ಹುಳಿಯಾರು ಸಿರಾ ರಸ್ತೆ ಸಂಪರ್ಕಬಸ್ ಸೌಕರ್ಯವಿದೆ. ಯುಗಾದಿ ದೀಪಾವಳಿ ದಸರಾ ಹಬ್ಬಗಳನ್ನು ಆಚರಿಸುತ್ತಾರೆ.

## ಬೆಂಚೆಹಟ್ಟಿ

ಬೆಂಚೆಹಟ್ಟಿ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರದಿಕ್ಕಿಗೆ ೪೫ ಕಿ.ಮೀ. ದೂರದಲ್ಲಿದೆ.

ಗ್ರಾಮವು ನುಲೇನೂರು ಮಜರೆ ಗ್ರಾಮವಾಗಿದ್ದು, ಬಂಡೆಹಟ್ಟಿ ಸೇರ್ಪಡೆಯಾಗಿದೆ. ಬಯಲುನಾಡಿನ ಕೆಂಪು ಮಿಶ್ರಿತ ಬಿಳಿ ಮತ್ತು ಎರೆ ಭೂಮಿ ವ್ಯವಸಾಯಕ್ಕೆ ಯೋಗ್ಯವಾಗಿದೆ. ಕಾಡು ಪ್ರಾಣಿಗಳಾದ ಕರಡಿ ನರಿ, ಮೊಲ ಹಾಗೂ ಕಾಡು ಪಕ್ಷಿಗಳಾದ ನವಿಲು ಕೋಗಿಲೆ, ಗೌಜಗ, ಗಿಳಿ, ಗಿಡುಗ, ಕಾಣಬಹುದು.

ಸಾಲು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ ಸಾಕುವುದರ ಜೊತೆಗೆ ಸಾಕುಪಕ್ಷಿಗಳಾದ ಕೋಳಿಯನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ೪೫೦ ಮಿ.ಮೀ. ಮಳೆಬೀಳುತ್ತದೆ. ಬೇಸಿಗೆಯಲ್ಲಿ ಸುಮಾರು ೩೪ ಡಿ.ಸೆಂ. – ೩೬ ಡಿ.ಸೆಂ. ಬಿಸಿಲಿನ ತಾಪವಿದ್ದು, ಚಳಿಗಾಲದಲ್ಲಿ ೧೦ ಡಿ.ಸೆಂ. –೧೨ ಡಿ.ಸೆಂ. ಚಳಿಯಿರುತ್ತದೆ. ಗ್ರಾಮಕ್ಕೆ ಹೊಂದಿಕೊಂಡಿರುವ ಅರವತ್ತನಹಳ್ಳಿ ಹಳ್ಳ ಮಳೆಗಾಲದಲ್ಲಿ ಹೆಚ್ಚು ಮಳೆಬಂದರೆ ತುಂಬಿ ಹರಿಯುತ್ತದೆ.

ಬೆರಳೆಣಿಕೆಯಷ್ಟು ತೆರೆದ ಬಾವಿಗಳಿದ್ದು ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪನೀರಿನ ಮೂಲಗಳಾಗಿವೆ. ಕುಡಿಯುವ ನೀರಿಗಾಗಿ ಗ್ರಾಮಪಂಚಾಯಿತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಮಿನಿಟ್ಯಾಂಕ್ ಮತ್ತು ಕೊಳಾಯಿ ವ್ಯವಸ್ಥೆ ಕಲ್ಪಿಸಲಾಗಿದೆ.

ಎರಡು ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಹೊರತೆಗಳಾಗಿವೆ. ಗ್ರಾಮದಲ್ಲಿ ಗೊಲ್ಲ ಸಮುದಾಯದವರು ವಾಸವಾಗಿದ್ದು, ಕನ್ನಡ ಪ್ರಮುಖ ಭಾಷೆಯಾಗಿದೆ. ಒಟ್ಟು ೭೫ ಮನೆಗಳಿರುವ ಈ ಗ್ರಾಮದಲ್ಲಿ ಇತ್ತೀಚಿನ ಜನಗಣತಿಯ ಪ್ರಕಾರ ೪೦೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ.

ವಿವಿಧ ಮನೆಯ ಪ್ರಕಾರಗಳಿದ್ದು ಮಣ್ಣಿನ ಹೆಂಚಿನ ಸೀಟಿನ ಮನೆಗಳನ್ನು ಮತ್ತು ಗುಡಿಸಲುಗಳನ್ನು ಕಾಣಬಹುದು ಐದು ಕುಟುಂಬಗಳು ಶೌಚಾಲಯದ ಸೌಲಭ್ಯ ಹೊಂದಿವೆ.ಸರ್ಕಾರದ ಜನತಾ ಆಶ್ರಯ ಮತ್ತು ಇಂದಿರಾ ಆವಾಜ್ ವಸತಿ ಯೋಜನೆಯಡಿಯ ಫಲಾನುಭವಿ ಮನೆಗಳನ್ನು ಕಾಣಬಹುದಾಗಿದೆ.

ಪ್ರಮುಖವಾಗಿ ರಾಗಿಮುದ್ದೆ, ಅನ್ನ, ಅಪ್ರಮುಖವಾಗಿ ಉಪ್ಪಿಟ್ಟು, ಚಿತ್ರಾನ್ನ, ದೋಸೆ, ರೊಟ್ಟಿ, ಚಪಾತಿ, ಹಾಗೂ ಹಬ್ಬಗಳಲ್ಲಿ ವಿಶೇಷವಾಗಿ ಹೋಳಿಗೆ ಪಾಯಸ ಸಿಹಿಕಡುಬು ಮತ್ತು ಬಾಡೂಟವನ್ನು ತಯಾರಿಸುತ್ತಾರೆ. ಕೃಷಿ ಇಲ್ಲಿನ ಮುಖ್ಯ ಕಸುಬಾಗಿದ್ದರೂ, ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ.

ರಾಗಿ ಮುಖ್ಯ ಬೆಳೆಯಾಗಿದ್ದು, ಜೋಳ, ದ್ವಿದಳಧಾನ್ಯಗಳು ಹಾಗೂ ತೋಟಗಾರಿಕಾ ಬೆಳೆಯಾದ ತೆಂಗು, ಅಡಿಕೆ, ಮತ್ತು ಕೆಲಭಾಗದಲ್ಲಿ ತರಕಾರಿ ಬೆಳೆಯುತ್ತಾರೆ. ಸಾಂಪ್ರದಾಯಿಕ ಹೈನುಗಾರಿಕೆ, ಪಶುಪಾಲನೆಯಿಂದ ಗ್ರಾಮದ ಆರ್ಥಿಕ ಸ್ಥಿತಿ ಚೇತರಿಕೆ ಕಾಣುತ್ತಿದೆ.

ಹುಳಿಯಾರು ಹೋಬಳಿ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ತುಮಕೂರು ಲೋಕಸಭಾ ಕ್ಷೇತ್ರದ, ಹೋಯ್ಸಳಕಟ್ಟೆ ಜಿಲ್ಲಾ–ತಾಲ್ಲೂಕು–ಗ್ರಾಮ ಪಂಚಾಯಿತಿಯ ಕಾರ್ಯವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಪಂಚಾಯಿತಿ ಸದಸ್ಯರಿದ್ದಾರೆ.ಬಹುಪಾಲು ಮನೆಗಳಲ್ಲಿ ಸಂಚಾರಿ ದೂರವಾಣಿ ಡಿ.ಟಿ.ಹೆಚ್. ಸಂಪರ್ಕವಿದೆ.

ಜಿಲ್ಲಾ ಮುಖ್ಯ ರಸ್ತೆ ಹಾಗೂ ಕಚ್ಚಾರಸ್ತೆಯ ಸಂಪರ್ಕವಿದ್ದು ಖಾಸಗಿ ಬಸ್ಸು, ಆಟೋ, ಟೆಂಪೋ ಮತ್ತು ಸ್ವಂತವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ಮಕ್ಕಳಿಗೆ ಬಿಸಿಯೂಟದ ಕ್ಷೀರಭಾಗ್ಯದ ಹಾಗೂ ಶೌಚಾಲಯದ ಸೌಲಭ್ಯ ಕಲ್ಪಿಸಲಾಗಿದೆ.

ಸ್ತ್ರೀಶಕ್ತಿ ಸಂಘ, ಶ್ರೀಕ್ಷೇತ್ರ ಧರ್ಮಸ್ಥಳ ಸಂಘಗಳ ಕಾರ್ಯನಿರ್ವಹಿಸುತ್ತಿದ್ದು ಗ್ರಾಮಸ್ಥರು ಉಳಿತಾಯ ಸಾಲ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವೇತನ, ವಿಧವಾವೇತನ, ಪಡೆಯುತ್ತಿರುವ ಫಲಾನುಭವಿಗಳಿದ್ದಾರೆ.

ಈರಣ್ಣ ದೇವಾಲಯವಿದ್ದು, ಯುಗಾದಿ, ದೀಪಾವಳಿ, ಶಿವರಾತ್ರಿ ಮತ್ತು ಸಂಕ್ರಾಂತಿ ಹಬ್ಬಗಳನ್ನು ಗ್ರಾಮಸ್ಥರು ಸಡಗರದಿಂದ ಆಚರಿಸುತ್ತಾರೆ.

## ಬಿಳಿಕಲ್ಲು ಗೊಲ್ಲರಹಟ್ಟಿ

ಬಿಳಿಕಲ್ಲು, ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕಿದೆ. ೩೪ ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಬಿಳಿಕಲ್ಲು ಹೆಚ್ಚಿರುವುದರಿಂದ ಹೆಸರು ಬಂದಿದೆ. ಬಿಳಿಕಲ್ಲು ಗೊಲ್ಲರಹಟ್ಟಿ ಗ್ರಾಮವು ತಮ್ಮಡಿಹಳ್ಳಿ ಮಜರೆ ಗ್ರಾಮ ಬಯಲು ನಾಡಾಗಿದೆ.

ಮರಳು ಮಿಶ್ರಿತ ಬಿಳಿಮಣ್ಣಿನ ಲಕ್ಷಣವಿದ್ದು, ವ್ಯವಸಾಯಕ್ಕೆ ಯೋಗ್ಯವಾಗಿದೆ.

ಕಾಡು ಪ್ರಾಣಿಗಳಾದ ಕರಡಿ, ತೋಳ, ಹಂದಿ, ಮೊಲ, ನರಿ ಹಾಗೂ ಕಾಡು ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಕಾಗೆ ಕಾಣಬಹುದು. ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆಗಳನ್ನು ಗ್ರಾಮಸ್ಥರು ಸಾಕುತ್ತಾರೆ. ಹಸುಗಳಲ್ಲಿ ಮಿಶ್ರತಳಿಗಳಾದ ಜೆರ್ಸಿ ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿದೆ. ಎಮ್ಮೆಗಳ ಸಾಕಾಣಿ ಜೊತೆಗೆ ಕುರಿ–ಆಡುಗಳ ಸಾಕಾಣಿಯು ರೂಢಿಯಲ್ಲಿದೆ ಹಾಗೂ ಸಾಕು ಪಕ್ಷಿಯಾದ ಕೋಳಿಯನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆ ಕಾಲದಲ್ಲಿ ಸುಮಾರು ೩೪ ಡಿ.ಸೆಂ. ೩೬ ಡಿ.ಸೆಂ. ಬಿಸಿಲಿನ ತಾಪವಿರುತ್ತದೆ. ಹಾಗೂ ಚಳಿಗಾಲದಲ್ಲಿ ೧೦ ಡಿ.ಸೆಂ. ೧೩ ಡಿ.ಸೆಂ. ಚಳಿಯಿರುವ ಹವಾಮಾನವಿರುತ್ತದೆ. ಬಿಳಿಕಲ್ಲು ಗೊಲ್ಲರಹಟ್ಟಿಗೆ ಹೊಂದಿಕೊಂಡಿರುವ ತರೇದಹಳ್ಳ, ಕಟ್ಟೇಹಳ್ಳಗಳು ಉತ್ತರಕ್ಕೆ ಮಳೆಗಾಲದಲ್ಲಿ ಹೆಚ್ಚು ಮಳೆ ಬಂದರೆ ಮಾತ್ರ ತುಂಬಿ ಹರಿಯುತ್ತದೆ.

ಬೆರಳೆಣಿಕೆಯಷ್ಟು ೨ ತೆರೆದ ಬಾವಿಗಳಿದ್ದು ಕೆಲವು ಬಾವಿಗಳು ಬತ್ತಿ ಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್‌ಗಳ ಮೂಲಕ ಸಾರ್ವಜನಿಕವಾಗಿಕ ನೀರು ಒದಗಿಸಲಾಗುತ್ತದೆ.

೧ ಕೈ ಪಂಪು ವ್ಯವಸ್ಥೆಯಿದ್ದು, ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರು ಕುಡಿಯುವ ನೀರಿನ ಹೊರತೆಗಳಾಗಿವೆ. ಗೊಲ್ಲ ಸಮುದಾಯವೇ ಪ್ರಧಾನವಾಗಿದ್ದು ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ.

ಒಟ್ಟು ೧೦೦ ಮನೆಗಳನ್ನು ಹೊಂದಿರುವ ಈ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೯೬ ಜನಸಂಖ್ಯಾಪ್ರಮಾಣವನ್ನು ಹೊಂದಿದೆ. ವಿವಿಧ ಮನೆಯ ಪ್ರಕಾರಗಳಿದ್ದು ಅವುಗಳಲ್ಲಿ ಕಾಂಕ್ರೀಟ್ ಮನೆಗಳು ಕಲ್ಲಿನ ಮನೆಗಳು ಹಾಗೂ ಹೆಂಚಿನ ಮನೆಗಳಿವೆ. ಹಾಗೆಯೇ ಗುಡಿಸಲಿನಲ್ಲಿ ನೆಲೆಸಿರುವ ಕೆಲವು ಕುಟುಂಬಗಳು ಕಾಣಸಿಗುತ್ತವೆ.

ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಅವಾಜ್ ಯೋಜನೆಯ ೧೯ ಫಲಾನುಭವಿಗಳ ಮನೆಗಳನ್ನು ಕಾಣಬಹುದು.

ಪ್ರಮುಖವಾಗಿ ರಾಗಿಮುದ್ದೆ, ಅನ್ನ, ಸಾವೆರೊಟ್ಟಿ, ಚಪಾತಿ, ಹಾಗೂ ಹಬ್ಬಗಳಲ್ಲಿ ವಿಶೇಷವಾಗಿ ಹೋಳಿಗೆ, ಎಳ್ಳುಒಬ್ಬಟ್ಟು, ಪಾಯಸ ಹಾಗೂ ಬಾಡೂಟ ತಯಾರಿಸುತ್ತಾರೆ.

ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಗಳ, ಜೊತೆಗೆ ಆಧುನಿಕ ವಾಹನಗಳಾದ ಟ್ರಾಕ್ಟರ್ ಬೈಕ್ ಕಾಣಬಹುದು.

ಕೃಷಿ ಇಲ್ಲಿನ ಪ್ರಮುಖ ಕಸುಬಾಗಿದ್ದರೂ, ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿ, ಜೋಳ, ಪ್ರಮುಖ ಆಹಾರ ಬೆಳೆಯಾಗಿದ್ದು ಉಪಬೆಳೆಗಳಾದ ಎಳ್ಳು, ಸಾವೆ, ನವಣೆ ಹಾಗೂ ದ್ವಿದಳ ಧಾನ್ಯಗಳು ಹಾಗೂ ತೋಟಗಾರಿಕೆ ಬೆಳೆಯಾದ ತೆಂಗು ಬೆಳೆಯುತ್ತಾರೆ.

ಸಾಂಪ್ರದಾಯಿಕ ಹೈನುಗಾರಿಕೆಯಾದ ಕುರಿ–ಹಸು ಸಾಕಾಣಿಯಿಂದ ಆರ್ಥಿಕ ಸ್ಥಿತಿ ಚೇತರಿಕೆ ಕಾಣುತ್ತಿದೆ.

ಹುಳಿಯಾರು ಹೋಬಳಿ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಹುಳಿಯಾರು ಜಿಲ್ಲಾಪಂಚಾಯಿತಿ ಕ್ಷೇತ್ರ ಯಳನಡು ತಾಲ್ಲೂಕು ಪಂಚಾಯ್ತಿ ಕ್ಷೇತ್ರವಾಗಿದೆ. ಈ ಗ್ರಾಮವು ಯಳನಡು ಗ್ರಾಮ ಪಂಚಾಯ್ತಿಗೆ ಒಳಪಟ್ಟಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಸಂಪರ್ಕವನ್ನು ಕಾಣಬಹುದಾಗಿದೆ.

ಶ್ರೀ ಕರಿಯಮ್ಮದೇವಿ ಸ್ತ್ರೀಶಕ್ತಿ ಸಂಘ ಕಾರ್ಯನಿರ್ವಹಿಸುತ್ತಿದ್ದ ಗ್ರಾಮಸ್ಥರು ಉಳಿತಾಯ ಸಾಲ ಸೌಲಭ್ಯಗಳನ್ನು ಪಡೆದಿದ್ದಾರೆ.

ಅಂಗನವಾಡಿ ಕೇಂದ್ರ ಹಾಗೂ ಕಿರಿಯ ಪ್ರಾಥಮಿಕ ಶಾಲೆಯನ್ನು ಒಳಗೊಂಡಿದ್ದು ಮಕ್ಕಳಿಗೆ ಸರ್ಕಾರದ ವತಿಯಿಂದ ಬಿಸಿಯೂಟ, ಕ್ಷೀರಭಾಗ್ಯ ಹಾಗೂ ಶೌಚಾಲಯದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಶೇ. ೬೪ ರಷ್ಟು ಸಾಕ್ಷರತೆ ಇದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವೀಧವಾ ವೇತನ ಪಡೆಯುತ್ತಿರುವ ಫಲಾನುಭವಿಗಳಿದ್ದಾರೆ.

ಭೂತಪ್ಪನ ಗುಡಿ ಇಲ್ಲಿನ ಪ್ರಮುಖ ದೇವಾಲಯ ಯುಗಾದಿ, ದೀಪಾವಳಿ, ಶಿವರಾತ್ರಿ, ಮಹನವಮಿ, ವಿಜಯದಶಮಿ ಹಬ್ಬಗಳನ್ನು ಗ್ರಾಮಸ್ಥರು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ. ಕರಿಯಮ್ಮ ಜಾತ್ರೆ, ತೇರು–ತೆಪ್ಪ, ಉತ್ಸವ ಇಲ್ಲಿಯ ವಿಶೇಷ ಆಕರ್ಷಣೆ ಮತ್ತು ಸಿಡಿ–ಓಳಿ ಆಚರಣೆಯೂ ಚಾಲ್ತಿಯಲ್ಲಿದೆ.

## ಭಟ್ಟರಹಳ್ಳಿ

ಭಟ್ಟರಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೩೫ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣವು ೧೪೮೯.೩ ಹೆಕ್ಟೇರ್, ಕಂದಾಯ ಗ್ರಾಮ ಬಯಲು ನಾಡಾಗಿದೆ. ಅಡಿಗೆ ತಯಾರಿಕೆಯ ವ್ಯಕ್ತಿ ಮೂಲದಿಂದಾಗಿ ಗ್ರಾಮಕ್ಕೆ ಭಟ್ಟರಹಳ್ಳಿ ಎಂದು ಹೆಸರು ಬಂದಿದೆ.

ಎರೆಮಣ್ಣು–ಮರಳು ಮಿಶ್ರಿತ ಬಿಳಿ ಭೂ–ಪ್ರದೇಶವನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ೧೩೧೨ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಕಾಡು ಪ್ರಾಣಿಗಳಾದ ಕರಡಿ, ತೋಳ ಮತ್ತು ಹಂದಿಗಳು ಕಂಡುಬರುತ್ತದೆ. ಕಾಡು ಪಕ್ಷಿಗಳಾದ ನವಿಲು, ಗಿಳಿ ಕಾಗೆ ಮತ್ತು ಗೌಜಿಗಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ.

ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಮೇಕೆ, ನಾಯಿ ಮತ್ತು ಕುರಿಗಳನ್ನು ಹಳ್ಳಿಗಾರರು ಸಾಕುತ್ತಾರೆ. ಹಸುಗಳಲ್ಲಿ ಹಳ್ಳಿಕಾರ್ ಮಿಶ್ರತಳಿಗಳಾದ ಹೆಚ್.ಎಫ್ ಹೆಚ್ಚಿನ ಸಂಖ್ಯೆಯಲ್ಲಿವೆ. ಸಾಕು ಪಕ್ಷಿಗಳಾದ ನಾಡಿಕೋಳಿ, ಗಿರಿರಾಜಗಳನ್ನು ಸಾಕುತ್ತಾರೆ.

ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆ ಕಾಲದಲ್ಲಿ ೩೪–೩೬ ಡಿ.ಸೆಂ. ಬಿಸಿಲಿನ ತಾಪವಿರುತ್ತದೆ. ಹಾಗೂ ಚಳಿಗಾಲದಲ್ಲಿ ೧೦–೧೨ ಡಿ.ಸೆಂ. ಚಳಿ ಇರುವ ಹವಾಮಾನವಿರುತ್ತದೆ.

ಎರಡು ತೆರೆದ ಬಾವಿಗಳಿದ್ದು, ಕೆಲವು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗೆ ಅಲ್ಪ ನೀರಿನ ಮೂಲಗಳಾಗಿವೆ. ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯ್ತಿ ವತಿಯಿಂದ ಕಿರು–ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಮಿನಿಟ್ಯಾಂಕು ಮತ್ತು ಕೊಳಾಯಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತಿದೆ.

ಲಿಂಗಾಯುತ ಸಮುದಾಯವೇ ಪ್ರದಾನವಾಗಿದ್ದು, ನಾಯಕ ಎಂಬ ಕಿರುದಾಯಕವಿದೆ. ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಒಟ್ಟು ೧೮೯ ಮನೆಗಳಿದ್ದು ೨೦೧೧ ರ ಜನಗಣತಿಯ ಪ್ರಕಾರ ೪೪೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು, ಹೆಂಚಿನ ಮತ್ತು ಕಾಂಕ್ರೀಟ್ ಮನೆಗಳಿವೆ. ೨೯ ಮನೆಗಳಲ್ಲಿ ಶೌಚಾಲಯಗಳಿವೆ. ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ ಜನತಾ ಮತ್ತು ಇಂದಿರಾ ಆವಾಸ್ ೪೩ ಮನೆಗಳ ಫಲಾನುಭವಿಗಳಿದ್ದಾರೆ.

ಪ್ರಮುಖ ಆಹಾರ ಪದ್ಧತಿಯಾಗಿ ರಾಗಿ ಮುದ್ದೆ, ಅನ್ನ, ಚಪಾತಿ, ರೋಟ್ಟಿ ಬಾಡೂಟ, ಹೋಳಿಗೆ ಮತ್ತು ಪಾಯಸ ವಿಶೇಷವಾಗಿದೆ.

ಸಾಂಪ್ರದಾಯಿಕ ವಾಹನವಾದ ಎತ್ತಿನಗಾಡಿ ಮತ್ತು ಆಧುನಿಕ ವಾಹನಗಳಾದ ಟ್ರಾಕ್ಟರ್, ಟೆಂಪೋ ಮತ್ತು ದ್ವಿಚಕ್ರವಾಹನಗಳನ್ನು ಕಾಣಬಹುದು. ಖಾಸಗಿ ಬಸ್ಸು, ಆಟೋರಿಕ್ಷಾ ಸ್ವಂತ ವಾಹನಗಳ ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಬಹುಪಾಲು ಮನೆಗಳಲ್ಲಿ ಸಂಚಾರಿ ದೂರವಾಣಿ ಹಾಗೂ ಡಿ.ಟಿ.ಹೆಚ್. ಸಂಪರ್ಕವನ್ನು ಕಾಣಬಹುದಾಗಿದೆ.

ಬೇಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಗ್ರಾಮದಲ್ಲಿ ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಮಲಿಂಗಯ್ಯ (ಶಿಕ್ಷಕರು) ಮತ್ತು ಯೋಗಿಶ್ (ಇಂಜಿನಿಯರ್) ಗ್ರಾಮಸ್ಥರಾಗಿದ್ದಾರೆ.

ಹುಳಿಯಾರು ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುತ್ತದೆ. ಹುಳಿಯಾರು ಜಿಲ್ಲಾ ಪಂಚಾಯಿತಿ ಕ್ಷೇತ್ರ ಯಳನಡು ತಾಲ್ಲೂಕು ಪಂಚಾಯಿತಿ ಕ್ಷೇತ್ರ ಹಾಗೂ ಕೋರಗೆರೆ ಗ್ರಾಮ ಪಂಚಾಯಿತಿ ಕಛೇರಿಯನ್ನಾಗಿ ಹೊಂದಿದೆ. ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರನ್ನು ಹೊಂದಿದೆ.

ಮೂರು ಸ್ತ್ರೀ ಶಕ್ತಿ ಸಂಘಗಳು ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳನ್ನು ಸಣ್ಣ ಉಳಿತಾಯ ಮತ್ತು ಸಾಲ ಸೌಲಭ್ಯ ಪಡೆಯುತ್ತಿದ್ದಾರೆ. ಒಂದು ಅಂಗನವಾಡಿ ಕೇಂದ್ರವಿದ್ದು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ಬಿಸಿಯೂಟ ಕ್ಷೀರಭಾಗ್ಯ ಮತ್ತು ಶೌಚಾಲಯಗಳಿವೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ ಮತ್ತು ವಿಧವಾ ವೇತನ ಹಾಗೂ ವಿದ್ಯಾರ್ಥಿನಿಲಯದ ಫಲಾನುಭವಿಗಳಿದ್ದಾರೆ. ಶೇ. ೬೯.೧ ಸಾಕ್ಷರತೆ ಇದೆ. ವೀರಗಲ್ಲು ಇದೆ.

ಶ್ರೀ ಸಿದ್ದರಾಮೇಶ್ವರ ಬನಶಂಕರಿ ಮತ್ತು ಆಂಜನೇಯ ಸ್ವಾಮಿಯ ದೇವಾಲಯಗಳಿವೆ. ಶ್ರೀ ಸಿದ್ದರಾಮೇಶ್ವರ ಸ್ವಾಮಿ ಜಾತ್ರೆಯನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಯುಗಾದಿ ದೀಪಾವಳಿ ಮಹಾನವಮಿ ಗೌರಿ–ಗಣೇಶ ಹಬ್ಬಗಳನ್ನು ಸಡಗರದಿಂದ ಆಚರಿಸುತ್ತಾರೆ. ನರೇಗಾ ಯೋಜನೆ ಮತ್ತು ಕಚ್ಚಾ ರಸ್ತೆಗಳಿವೆ.

## ಬಟ್ಟರಹಳ್ಳಿ ಎ.ಕೆ. ಕಾಲೋನಿ

ಭಟ್ಟರಹಳ್ಳಿ ಎ.ಕೆ. ಕಾಲೋನಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೩೫ ಕಿ.ಮೀ. ದೂರದಲ್ಲಿದೆ. ಇದು ಭಟ್ಟರಹಳ್ಳಿಯ ಹೊರವಲಯದಲ್ಲಿ ಮಾದಿಗ ಜನಾಂಗದವರು ಪ್ರತ್ಯೇಕವಾಗಿ ಭಟ್ಟರಹಳ್ಳಿಗೆ ನಿರ್ಮಿಸಿಕೊಂಡ ಕಾರಣ ಮಾದಿಗರಹಟ್ಟಿ ಎಂದು ಕರೆಯುತ್ತಾರೆ. ಇಲ್ಲಿನ ಹೆಂಚಿನ, ಸೀಟಿನ, ಹಾಗೂ ಮಣ್ಣಿನ ಸ್ವರೂಪದ ಒಟ್ಟು ೯೭ ಮನೆಗಳಿದ್ದು ಒಟ್ಟು ೪೦೩ ಜನಸಂಖ್ಯೆ ಹೊಂದಿದೆ. ಇಲ್ಲಿನ ಮನೆಗಳು ಸರ್ಕಾರದ ಜನವಸತಿ ಯೋಜನೆಯ ಇಂದಿರಾ ಆವಾಸ್, ಅಂಬೇಡ್ಕರ್ ಅವಾಸರ ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ಇಲ್ಲಿನ ಜನರು ಕೃಷಿಕರಾಗಿದ್ದು, ವ್ಯವಸಾಯ ಮುಖ್ಯ ಕಸುಬಾಗಿದೆ. ರಾಗಿ, ಜೋಳ, ಹೆಸರು, ಅವರೆ ಹುರುಳಿ, ಬೆಳೆಯುತ್ತಾರೆ. ತೆಂಗು, ಅಡಿಕೆ ತೋಟಗಾರಿಕೆ ಇದೆ.

ಗಂಗಾ ಕಲ್ಯಾಣ ಯೋಜನೆಯ ನೀರಾವರಿ, ಕೊಳವೆ ಬಾವಿ ಕೊರೆಸಿದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ, ಮುಖ್ಯ ಆಹಾರ, ಬಾಡೂಟ, ಪಾಯಸ, ಹೋಳಿಗೆ, ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕೃಷಿ ಕೂಲಿ ಕಾರ್ಮಿಕರು ಹೆಚ್ಚಿದ್ದು, ಸಾರಿಗೆ, ಶಿಕ್ಷಣ, ಅರಣ್ಯ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ. ಒಂದು ಅಂಗನವಾಡಿ ಕೇಂದ್ರವಿದ್ದು, ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಸಲಾಗುವುದು. ಶಿಕ್ಷಣಕ್ಕು ಭಟ್ಟರಹಳ್ಳಿ, ಹುಳಿಯಾರು, ಚಿಕ್ಕನಾಯಕನಹಳ್ಳಿಗೆ ಹೋಗುತ್ತಾರೆ. ಹಸು, ಎಮ್ಮೆ, ಕುರಿ, ಸಾಕಿದ್ದಾರೆ. ಹಾಲು ಮಾರಟವೂ ಇದೆ. ಕೊರಟಗೆರೆಯಿಂದ ಪಡಿತರ ವ್ಯವಸ್ಥೆ ಇದೆ. ಕೊರಟಗೆರೆ ಗ್ರಾಮ ಪಂಚಾಯಿತಿ ಒಬ್ಬರು ಸದಸ್ಯರಿದ್ದಾರೆ. ಆಂಜನೇಯ, ಕೊಲ್ಲಾಪುರದಮ್ಮ, ದೇವಾಲಯಗಳಿವೆ. ಮುಖ್ಯ ಗ್ರಾಮದ ಸಿದ್ದರಾಮೇಶ್ವರನ ಜಾತ್ರೆಯಲ್ಲಿ ಈ ಗ್ರಾಮದವರ ಸೇವೆ ಅಪಾರವಾಗಿರುತ್ತದೆ. ಯಳನಡು ಸಿದ್ದರಾಮೇಶ್ವರನ ಜಾತ್ರೆಗೂ ಇವರು ಸೇವೆಸಲ್ಲಿಸುತ್ತಾರೆ. ಸಮುದಾಯದ ಸೌಲಭ್ಯಗಳಾದ ವಿಧವಾ ವೃದ್ಧಾಪ್ಯ ವೇತನದ ೬ ಫಲಾನುಭವಿಗಳಿದ್ದಾರೆ. ಶೈಕ್ಷಣಿಕವಾಗಿ ೬೩% ರಷ್ಟು ಸಾಕ್ಷರತರಿದ್ದಾರೆ.

ಯುಗಾದಿ, ದೀಪಾವಳಿ, ದಸರಾ, ಹಬ್ಬಗಳನ್ನು ಆಚರಿಸುತ್ತಾರೆ. ಸಿದ್ದರಾಮೇಶ್ವರನ ತೇರು ಉತ್ಸವದಲ್ಲಿ ಇವರು ಪಾಲುಗೊಳ್ಳುತ್ತಾರೆ.

## ಬೈರಾಪುರ ಗೊಲ್ಲರಹಟ್ಟಿ

ಬೈರಾಪುರ ಗೊಲ್ಲರ ಹಟ್ಟಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ದೊಡ್ಡ ಬಿದರೆಗೆ ಸೇರಿದ ಬೈರಾಪುರ ಗೊಲ್ಲರ ಹಟ್ಟಿ ಮಜರೆ ಗ್ರಾಮ ಬಯಲು ನಾಡು ಬೈರಾಪುರದ ಉಪಗ್ರಾಮವಾಗಿರುವುದರಿಂದ ಬೈರಾಪುರ ಗೊಲ್ಲರಹಟ್ಟಿ ಎಂದು ಕರೆಯುತ್ತಾರೆ.

ಕೆಂಪು–ಮಿಶ್ರಿತ ಮರಳು ಭೂಮಿಯು ವ್ಯವಸಾಯಕ್ಕೆ ಯೋಗ್ಯವಾಗಿದೆ. ಕಾಡು ಪ್ರಾಣಿಗಳಾದ ಕರಡಿ, ನರಿ, ಕತ್ತೆ, ಕಿರುಬ, ಮೊಲ, ಜಿಂಕೆ ಹಾಗೂ ವಿಷಪೂರಿತ ಹಾವುಗಳು ಕಂಡು ಬರುತ್ತವೆ. ಕಾಡು ಪಕ್ಷಿಗಳಾದ ನವಿಲು, ಗಿಳಿ, ಗೌಜುಗ, ಗೂಬೆ ಬುಲ್ ಬುಲ್ ಬಾವಲಿ ಮತ್ತು ಮರಕುಟಿಗ ಹಾಗೂ ಇನ್ನಿತರ ಪಕ್ಷಿಗಳನ್ನು ಕಾಣಬಹುದು.

ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು ಮಿಶ್ರತಳಿಗಳಾದ ಜೆರ್ಸಿಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿತಳಿಯ ಎಮ್ಮೆಗಳ ಸಾಕಾಣಿ ಕುರಿ–ಆಡುಗಳ ಸಾಕಾಣಿ ಇದೆ. ಹಾಗೆಯೇ ಸಾಕು ಪಕ್ಷಿಗಳಾದ, ನಾಟಿ

ಕೋಳಿ, ಗಿರಿರಾಜ ಹಾಗೂ ಪಾರಿವಾಳಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆ ಕಾಲದಲ್ಲಿ ಸುಮಾರು ೩೨-೩೪ ಡಿ.ಸೆಂ. ಮತ್ತು ಚಳಿ ೧೦-೧೩ ಡಿ.ಸೆಂ. ಗಿಂತ ಹೆಚ್ಚಾಗಿದೆ. ಕಳೆದ ೧೦ ವರ್ಷಗಳಿಂದ ಜಲಕ್ಷಾಮ ಎದುರಿಸುತ್ತಿದ್ದು ಬರಗಾಲದ ಹೊಸ್ತಿಲಲ್ಲಿದೆ.

ಕೃಷಿ ಚಟುವಟಿಕೆಗಳಿಗೆ ಉಪಯುಕ್ತವಾಗುವಂತಹ ಯಾವುದೇ ಕೃಷಿ ಕೆರೆ ಕಟ್ಟೆಗಳು ಇಲ್ಲಿ ಕಂಡುಬರುವುದಿಲ್ಲ. ಪ್ರಾಚೀನ ಕಾಲದ ಬಾವಿಗಳು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿಯ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಒದಗಿಸಲಾಗುತ್ತದೆ. ಹಾಗೂ ಕೈ ಪಂಪುಗಳಿದ್ದು, ವಿದ್ಯುತ್ ಅನಿವಾರ್ಯತೆಯ ಸಂದರ್ಭಗಳಲ್ಲಿ ನೀರಿನ ಹೊರತೆಗಳಾಗಿವೆ.

ಗೊಲ್ಲ ಸಮುದಾಯವೇ ಪ್ರದಾನವಾಗಿದ್ದು, ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಸಾಕ್ಷರತೆ ೫೧.೬ ರಷ್ಟಿದೆ. ಒಟ್ಟು ೩೧ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೧೩೫ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಕಲ್ಲಿನ ಮನೆಗಳು, ಮಣ್ಣಿನ ಹೆಂಚಿನ, ಮನೆಗಳಿವೆ ಜನತಾ ಆಶ್ರಯ, ಅಂಬೇಡ್ಕರ್ ಯೋಜನೆ, ಇಂದಿರಾ ಅವಾಜ್ ಯೋಜನೆಯ ೧೩ ಫಲಾನುಭವಿಗಳಿದ್ದಾರೆ.

ಪ್ರಮುಖ ಆಹಾರ ಪದ್ಧತಿ, ರಾಗಿಮುದ್ದೆ, ಅನ್ನ, ರೊಟ್ಟಿ, ಚಪಾತಿ, ಹೋಳಿಗೆ, ಬಾಡೂಟ, ಪಾಯಸ ವಿಶೇಷವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಗಳ ಜೊತೆಗೆ ಆಧುನಿಕ ವಾಹನಗಳಾದ ಟ್ರಾಕ್ಟರ್ ಬೈಕು-ಟೆಂಪೋ ಕಾಣಬಹುದು ೪ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಬೇಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದರೂ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿ ಪ್ರಮುಖ ಬೆಳೆಯಾಗಿದ್ದು ಜೋಳ ಭತ್ತ ತೆಂಗು ಹಾಗೂ ತರಕಾರಿ ಬೆಳೆಯುತ್ತಾರೆ.

ಸಾಂಪ್ರದಾಯಿಕ ಹೈನುಗಾರಿಕೆಯಿಂದ ಗ್ರಾಮದ ಆರ್ಥಿಕ ಸ್ಥಿತಿ ಚೇತರಿಕೆ ಕಾಣುತ್ತಿದೆ. ಶಿಕ್ಷಣ ಇಲಾಖೆಯಲ್ಲಿ ಚಿಕ್ಕಣ್ಣ ಕಾರ್ಯ ನಿರ್ವಹಿಸುತ್ತಿದ್ದಾರೆ.

ಹುಳಿಯಾರು ಹೋಬಳಿ, ಚಿ.ನಾ.ಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಹುಳಿಯಾರು ಜಿಲ್ಲಾ ಪಂಚಾಯಿತಿ ಕ್ಷೇತ್ರ, ತಿಮ್ಲಾಪುರ ತಾಲ್ಲೂಕು ಪಂಚಾಯ್ತಿಕ್ಷೇತ್ರ ಮತ್ತು ದೊಡ್ಡ ಬಿದರೆ ಗ್ರಾ.ಪಂ. ಯಾಗಿ ಹೊಂದಿದ್ದು, ಗ್ರಾ.ಪಂ. ಒಬ್ಬರು ಸದಸ್ಯರಿದ್ದಾರೆ.

ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿ.ಟಿ.ಹೆಚ್. ಸಂಪರ್ಕಗಳಿವೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ಮತ್ತು ವಿಧವಾ ವೇತನದ ೮ ಫಲಾನುಭವಿಗಳಿದ್ದಾರೆ.

ದೊಡ್ಡಮ್ಮದೇವಿ ಇಲ್ಲಿನ ಪ್ರಮುಖ ದೇವಾಲಯ ಯುಗಾದಿ ದೀಪಾವಳಿ ಶಿವರಾತ್ರಿ ಗೌರಿ-ಗಣೇಶ ಹಬ್ಬಗಳು ವಿಶೇಷವಾಗಿ ಆಚರಿಸಲ್ಪಡುತ್ತದೆ.

## ಬೈರಾಪುರ

ಬೈರಾಪುರ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೧೭ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೯೭೧.೨೦ ಹೆಕ್ಟೇರ್ ಇದೆ. ಇದೊಂದು ಕಂದಾಯ ಗ್ರಾಮವಾಗಿದ್ದು, ಬಯಲು ನಾಡಾಗಿದೆ. ಬೈರಪ್ಪ ಮೂಲದಿಂದ ಬೈರನಪುರ ಬೈರಾಪುರ ಎಂದಾಗಿದೆ. ೮೧೪ ಹೆಕ್ಟೇರ್ ಕೃಷಿ ಭೂಮಿಯಾಗಿದೆ.

ಕೆಂಪು ಮಿಶ್ರಿತ ಮರಳು ಭೂಮಿಯ ವ್ಯವಸಾಯಕ್ಕೆ ಯೋಗ್ಯವಾಗಿದೆ. ಕಾಡು ಪ್ರಾಣಿಗಳಾದ ಕರಡಿ, ತೋಳ, ಹಂದಿ ಹಾಗೂ ವಿಷಪೂರಿತ ಹಾವುಗಳು ಕಂಡುಬರುತ್ತವೆ.

ಕಾಡು ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಹದ್ದು, ಇನ್ನಿತರ ಪಕ್ಷಿಗಳನ್ನು ಕಾಣಬಹುದು.

ಗ್ರಾಮಸ್ಥರು ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು ಮಿಶ್ರತಳಿಗಳಾದ ಜೆರ್ಸಿ ಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಾಣಿ, ಕುರಿ, ಮೇಕೆಗಳ ಸಾಕಾಣಿ ಇದೆ. ಹಾಗೆಯೇ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ೨೫೦-೪೫೦ ಮಿ.ಮೀ. ಮಳೆ ಬೀಳುತ್ತದೆ. ಹವಾಮಾನ ವೈಪರಿತ್ಯದಿಂದ ೩೨-೩೪ ಡಿ.ಸೆಂ. ಮತ್ತು ಚಳಿ ೧೧ ಡಿ.ಸೆಂ. -೧೨ ಡಿ.ಸೆಂ. ಗಿಂತ ಹೆಚ್ಚಾಗಿದೆ. ಕಳೆದ ಹತ್ತು ವರ್ಷಗಳಿಂದ ಜಲಕ್ಷಾಮ ಎದುರಿಸುತ್ತಿದ್ದು ಬರಗಾಲದ ಹೊಸ್ತಿಲಲ್ಲಿದೆ.

ಬೈರಾಪುರ ಗ್ರಾಮಕ್ಕೆ ಹೊಂದಿಕೊಂಡಿರುವ ಹಿರೇಹಳ್ಳಿ ಹೆಚ್ಚು ಮಳೆ ಬಂದರೆ ತುಂಬಿ ಹರಿಯುತ್ತಿದೆ.

ಕೃಷಿ ಚಟುವಟಿಕೆಗಳಿಗೆ ಉಪಯುಕ್ತವಾಗುವಂತಹ ಯಾವುದೇ ಕೆರೆ–ಕಟ್ಟೆಗಳು ಇಲ್ಲಿ ಇದ್ದರೂ ಬತ್ತಿಹೋಗಿವೆ. ಪ್ರಾಚೀನ ಕಾಲದ ಬಾವಿಗಳು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗೆ ಗ್ರಾಮಪಂಚಾಯಿತಿಯ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಒದಗಿಸಲಾಗುತ್ತದೆ.

ಸರ್ಪ ಒಕ್ಕಲಿಗ ಸಮುದಾಯವೇ ಪ್ರಧಾನವಾಗಿದ್ದು, ಮಡಿವಾಳ, ಶ್ರೀವೈಷ್ಣವ ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ.

ಒಟ್ಟು ೫೫ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ ರ ಜನಗಣತಿಯ ಪ್ರಕಾರ ೨೮೮ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಕಲ್ಲಿನ, ಮನೆ, ಕಾಂಕ್ರೀಟ್, ಮನೆಗಳು ಹಾಗೂ ಮಣ್ಣಿನ ಮನೆಗಳಿವೆ. ವಸತಿ ಯೋಜನೆಯ ಜನತಾ, ಆಶ್ರಯ, ಅಂಬೇಡ್ಕರ್, ಯೋಜನೆ, ಇಂದಿರಾ ಅವಾಜ್ ಯೋಜನೆಯ ೨೧ ಫಲಾನುಭವಿಗಳಿದ್ದಾರೆ.

ಪ್ರಮುಖ ಆಹಾರ ಪದ್ಧತಿ ರಾಗಿ ಮುದ್ದೆ ಅನ್ನ ರೊಟ್ಟಿ ಚಪಾತಿ, ಹೋಳಿಗೆ ಬಾಡೂಟ ಪಾಯಸ ವಿಶೇಷವಾಗಿದೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಗಳ ಜೊತೆಗೆ ಆಧುನಿಕ ವಾಹನಗಳಾದ ಟ್ರಾಕ್ಟರ್, ಬೈಕು, ಟೆಂಪೋ ಕಾಣಬಹುದು. ೩೦ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಬೇಸಾಯ ಇಲ್ಲಿಯ ಪ್ರಮುಖ ಕಸುಬಾಗಿದ್ದರೂ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದರೆ, ರಾಗಿ ಪ್ರಮುಖ ಬೆಳೆಯಾಗಿದ್ದು, ಜೋಳ, ಭತ್ತ, ತೆಂಗು, ಹಾಗೂ ತರಕಾರಿ ಬೆಳೆಯುತ್ತಾರೆ. ಸಾಂಪ್ರದಾಯಿಕ ಹೈನುಗಾರಿಕೆಯಿಂದ ಆರ್ಥಿಕ ಸ್ಥಿತಿ ಚೇತರಿಕೆ ಕಾಣುತ್ತಿದೆ.

ಹುಳಿಯಾರು ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ ತಿಮ್ಲಾಪುರ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಮತ್ತು ದೊಡ್ಡ ಬಿದರೆ ಗ್ರಾಮ ಪಂಚಾಯ್ತಿಯಾಗಿ ಹೊಂದಿದ್ದು ಒಬ್ಬ ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ.

ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಸಂಪರ್ಕಗಳಿವೆ. ಗ್ರಾಮದಲ್ಲಿ ೨ ಶ್ರೀರಾಮ ಸ್ತ್ರೀಶಕ್ತಿ ಸಂಘ ಕರಿಯಮ್ಮ ದೇವಿ, ಮಾರುತಿ ಸ್ವಸಹಾಯ ಸಂಘಗಳಿವೆ. ಗ್ರಾಮದಲ್ಲಿ ಸಮುದಾಯ ಸೌಲಭ್ಯಗಳಾದ, ವೃದ್ಧಾಪ್ಯ ವೇತನ ವಿಕಲಚೇತನ, ಮತ್ತು ವಿಧವಾ ವೇತನದ ೯ ಫಲಾನುಭವಿಗಳಿದ್ದಾರೆ.

ಅಂಗನವಾಡಿ ಕೇಂದ್ರವಿದ್ದು ಇಬ್ಬರು ಕಾರ್ಯಕರ್ತೆಯರಿದ್ದಾರೆ. ಪ್ರಾಥಮಿಕ ಶಾಲೆ ಇದ್ದು ೩೧ ಮಕ್ಕಳು  ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ ಕ್ಷೀರಭಾಗ್ಯ, ಶೌಚಾಲಯದ ಸೌಲಭ್ಯವಿದೆ.

ಗ್ರಂಥಾಲಯವಿದ್ದು ಕಾರ್ಯನಿರ್ವಹಿಸುತ್ತಿಲ್ಲ ಗ್ರಾಮದಲ್ಲಿ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ಮತ್ತು ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೬೭.೯ ರಷ್ಟು ಸಾಕ್ಷರತೆ ಇದೆ.

ಆಂಜನೇಯ ಲಕ್ಷ್ಮೀದೇವಿ ದೇವಾಲಯಗಳಾಗಿವೆ. ಯುಗಾದಿ, ದೀಪಾವಳಿ, ಗೌರಿ–ಗಣೇಶ ಶಿವರಾತ್ರಿ ಹಬ್ಬಗಳು ವಿಶೇಷವಾಗಿ ಆಚರಿಸಲ್ಪಡುತ್ತವೆ.

ಗ್ರಾಮದಲ್ಲಿ ಜಾನಪದ ಕಲಾವಿದೆಯಾದ ನಾಯಕ ಜನಾಂಗಕ್ಕೆ ಸೇರಿದ ಗಂಗಮ್ಮ (ಸೋಬಾನೆ ಪದ) ಹಾಗೂ ಪ್ರಮುಖರು ಯುಗಾದಿ, ದೀಪಾವಳಿ ಹಬ್ಬವನ್ನು ಆಚರಿಸುತ್ತಾರೆ.

## ಬೈರಾಪುರ ಎ.ಕೆ. ಕಾಲೋನಿ

ಬೈರಾಪುರ ಎ.ಕೆ. ಕಾಲೋನಿ ಪಕ್ಕದಲ್ಲಿ, ಅದಕ್ಕೆ ಹೊಂದಿಕೊಂಡಂತಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೭ ಕಿ.ಮೀ. ದೂರದಲ್ಲಿದೆ. ಮಾದಿಗ ಜನಾಂಗದವರೇ ಪ್ರತ್ಯೇಕವಾಗಿ ಜನವಸತಿ ನಿರ್ಮಿಸಿಕೊಂಡ ಕಾರಣದಿಂದಾಗಿ ಮಾದಿಗರಹಟ್ಟಿ ಎಂದೂ ಕರೆಯುತ್ತಾರೆ. ಇಲ್ಲಿ ವಿವಿಧ ಸ್ವರೂಪದ ೬೨ ಮನೆಗಳಿದ್ದು, ೨೭೩ ಜನಸಂಖ್ಯೆ ಹೊಂದಿವೆ. ಇವು ಕಲ್ಲಿನ, ಹೆಂಚಿನ, ಸೀಟಿನ ಸ್ವರೂಪದಲ್ಲಿದ್ದು, ಇವು ಆಶ್ರಯ, ಇಂದಿರಾ ಆವಾಸ್ ಹಾಗೂ ಅಂಬೇಡ್ಕರ್ ಅವಾಸ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೧೪ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು, ಅನ್ನ, ರೊಟ್ಟಿ ಅಮುಖ್ಯವಾಗಿ ಬಳಸುತ್ತಾರೆ. ಬಾಡೂಟ, ಪಾಯಸ, ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕನ್ನಡ ಇಲ್ಲಿನ ಮನೆಯ ಮಾತಾಗಿದೆ. ರಾಗಿ, ಜೋಳ, ಅವರೆ, ಹೆಸರು ಮುಖ್ಯ ಬೆಳೆಗಳು ತೋಟಗಾರಿಕೆ ಇರುವ ಕೆಲವರು ತೆಂಗು ಬೆಳೆ ಇದೆ. ಕೊಬ್ಬರಿ ವ್ಯಾಪಾರಿ ಬೆಳೆಯಾಗಿದೆ. ಶಿಕ್ಷಕರು, ಸಾರಿಗೆ, ಹಾಗೂ ಕೆ.ಇ.ಬಿ. ಅರಣ್ಯ ಇಲಾಖೆಗೆ ಸೇರಿದ ೭ ಜನ ಸರ್ಕಾರಿ ನೌಕರರಿದ್ದಾರೆ. ಕೃಷಿ ಕಾರ್ಮಿಕರಿದ್ದಾರೆ. ಹೆಂಗಸರು ಗರಿಕಡ್ಡಿ ಎರೆಯುತ್ತಾರೆ. ಮುತ್ತುಗದ ಎಲೆ ಸಂಗ್ರಹಿಸುವ

ಕೆಲಸ ಮಾಡುತ್ತಾರೆ. ಬೈರವೇಶ್ವರ, ಶಾರದ ಸ್ತ್ರೀಶಕ್ತಿ ಸಂಘಗಳಿವೆ. ದೊಡ್ಡ ಬಿದರೆ ಗ್ರಾಮ ಪಂಚಾಯಿತಿಗೆ ಈ ಗ್ರಾಮದ ಒಬ್ಬರು ಸದಸ್ಯರಿದ್ದಾರೆ. ಶಿಕ್ಷಣ, ಸಾರಿಗೆ ಪಡಿತರ ವಿಷಯಗಳಿಗೆ ಮುಖ್ಯ ಗ್ರಾಮ ಬೈರಾಪುರದಿಂದ ಪಡೆಯುತ್ತಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯ ವೇತನಗಳು ಫಲಾನುಭವಿಗಳಿದ್ದಾರೆ. ಗ್ರಾಮದ ಸಾಕ್ಷರತೆ ೬೩% ರಷ್ಟಿದೆ. ಆಂಜನೇಯ ದೇವರಿಗೆ ಪೂಜೆ, ಹರಕೆ ಒಪ್ಪಿಸುತ್ತಾರೆ. ಕರಿಯಮ್ಮ ದೇವರ ಗುಡಿ ಇದ್ದು, ಹರಕೆಯಾಗಿ, ಆರತಿ, ಬಲಿ, ಅರ್ಪಿಸುತ್ತಾರೆ. ಯುಗಾದಿ, ದೀಪಾವಳಿ, ದಸರಾ ಹಬ್ಬಗಳನ್ನು ಆಚರಿಸುತ್ತಾರೆ.

## ಬೈರಾಪುರ ತಾಂಡ್ಯ

ಬೈರಾಪುರ ತಾಂಡ್ಯ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಮಜರೆ ಗ್ರಾಮ ಬಯಲು ನಾಡಾಗಿದೆ.

ಕೆಂಪು ಮಿಶ್ರಿತ ಮರಳು ಭೂಮಿಯು ವ್ಯವಸಾಯಕ್ಕೆ ಯೋಗ್ಯವಾಗಿದೆ. ಕಾಡು ಪ್ರಾಣಿಗಳಾದ ಕರಡಿ, ತೋಳ, ಹಂದಿ, ಹಾಗೂ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಕಾಡು ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಹದ್ದು, ಇನ್ನಿತರ ಪಕ್ಷಿಗಳನ್ನು ಕಾಣಬಹುದು.

ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರಗಳಾದ ಜೆರ್ಸಿಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿದೆ. ನಾಟಿ ತಳಿಯ ಎಮ್ಮೆಗಳ ಸಾಕಾಣಿ ಕುರಿ–ಮೇಕೆಗಳ ಸಾಕಾಣಿ ಇದೆ. ಹಾಗೆಯೇ ಸಾಕು ಪಕ್ಷಿಗಳಾದ ನಾಟಿ ಕೋಳಿ ಗಿರಿರಾಜಗಳನ್ನೂ ಸಾಕಲಾಗಿದೆ.

ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆ ಬೀಳುತ್ತದೆ. ಹವಾಮಾನದ ವೈಪರಿತ್ಯದಿಂದ ಬಿಸಿಲು ೩೨–೩೪ ಡಿ.ಸೆಂ. ಮತ್ತು ಚಳಿ ೧೧–೧೩ ಡಿ.ಸೆಂ. ಗಿಂತ ಹೆಚ್ಚಾಗಿದೆ. ಕಳೆದ ೧೦ ವರ್ಷಗಳಿಂದ ಜಲಕ್ಷಾಮ ಎದುರಿಸುತ್ತಿದ್ದು, ಬರಗಾಲದ ಹೊಸ್ತಿಲಲ್ಲಿದೆ.

ಕೃಷಿ ಚಟುವಟಿಕೆಗಳಿಗೆ ಉಪಯುಕ್ತವಾಗುವಂತಹ ಯಾವುದೇ ಕೆರೆ ಕಟ್ಟೆಗಳು ಇಲ್ಲಿ ಕಂಡುಬರುವುದಿಲ್ಲ. ಪ್ರಾಚೀನ ಕಾಲದ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿಯ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಒದಗಿಸುಲಾಗುತ್ತದೆ. ಹಾಗೂ ೨ ಕೈಪಂಪುಗಳಿದ್ದು, ವಿದ್ಯುತ್ ಅನಿವಾರ್ಯತೆಯ ಸಂದರ್ಭಗಳಲ್ಲಿ ನೀರಿನ ಹೊರತಗಳಾಗಿವೆ. ಲಂಬಾಣಿ ಸಮುದಾಯವೇ ಪ್ರಧಾನವಾಗಿದ್ದು ಪ್ರಮುಖ ಭಾಷೆಯಾಗಿ ಕನ್ನಡ ಮತ್ತು ಲಂಬಾಣಿ ಮಾತನಾಡುತ್ತಾರೆ.

ಒಟ್ಟು ೧೦೫ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ ರ ಜನಗಣತಿಯ ಪ್ರಕಾರ ೪೭೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಕಾಂಕ್ರೀಟ್ ಮನೆಗಳು, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಜನತಾ ಆಶ್ರಯ, ಅಂಬೇಡ್ಕರ್ ಯೋಜನೆ ಇಂದಿರಾ ಅವಾಜ್ ಯೋಜನೆಯ ೩೯ ಫಲಾನುಭವಿಗಳಿದ್ದಾರೆ.

ಪ್ರಮುಖ ಆಹಾರ ಪದ್ಧತಿ ರಾಗಿ ಮುದ್ದೆ, ಅನ್ನ ರೊಟ್ಟಿ, ಚಪಾತಿ, ಹೋಳಿಗೆ ಬಾಡೂಟ ಪಾಯಸ ವಿಶೇಷವಾಗಿದೆ.

ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಗಳ ಜೊತೆಗೆ ಆಧುನಿಕ ವಾಹನಗಳಾದ ಟ್ರಾಕ್ಟರ್ ಬೈಕು ಟೆಂಪೋ ಕಾಣಬಹುದು. ೧೨ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಬೇಸಾಯ ನಾರು ಬಿಡಿಸುವುದು ಇಲ್ಲಿನ ಪ್ರಮುಖ ಕಸುಬಾಗಿದ್ದರೂ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದರೆ. ರಾಗಿ ಪ್ರಮುಖ ಬೆಳೆಯಾಗಿದ್ದು ಜೋಳ, ಭತ್ತ, ತೆಂಗು, ಹಾಗೂ ತರಕಾರಿ ಬೆಳೆಯುತ್ತಾರೆ.

ಸಾಂಪ್ರದಾಯಿಕ ಹೈನುಗಾರಿಕೆಯಿಂದ ಗ್ರಾಮದ ಆರ್ಥಿಕ ಸ್ಥಿತಿ ಚೇತರಿಕೆ ಕಾಣುತ್ತಿದೆ. ಕೆ.ಇ.ಬಿ. ಇಲಾಖೆಯಲ್ಲಿ ನಾಗರಾಜು ಮತ್ತು ಮೋಹನ ಕುಮಾರ್ ಶಿಕ್ಷಣ ಇಲಾಖೆಯಲ್ಲಿ ಪ್ರಶಾಂತ್ ಕಾರ್ಯನಿರ್ವಹಿಸುತ್ತಿದ್ದಾರೆ.

ಹುಳಿಯಾರು ಹೋಬಳಿ ಚಿ.ನಾ.ಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಹುಳಿಯಾರು ಜಿಲ್ಲಾ ಪಂಚಾಯಿತಿ ಕ್ಷೇತ್ರ ತಿಮ್ಲಾಪುರ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಮತ್ತು ದೊಡ್ಡ ಬಿದರೆ ಗ್ರಾಮ ಪಂಚಾಯಿತಿಯಾಗಿ ಹೊಂದಿದ್ದು, ಇಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ.

ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿ.ಟಿ.ಹೆಚ್. ಸಂಪರ್ಕಗಳಿವೆ. ಆರ್ಥಿಕ ಶಕ್ತಿ ಸ್ತ್ರೀಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ಇಬ್ಬರು ಕಾರ್ಯಕರ್ತೆಯರಿದ್ದಾರೆ. ಪ್ರಾಥಮಿಕ ಶಾಲೆಯಲ್ಲಿ ೪೫ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಹಾಗೂ ಶೌಚಾಲಯದ ವ್ಯವಸ್ಥೆ ಇದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ ವಿಕಲಚೇತನ ಮತ್ತು ವಿಧವಾ ವೇತನದ ಫಲಾನುಭವಿಗಳಿದ್ದಾರೆ.

ಸೇವಾಲಾಲ್, ಮರಿಯಮ್ಮ ಇಲ್ಲಿನ ಪ್ರಮುಖ ದೇವಾಲಯಗಳು ಯುಗಾದಿ, ದೀಪಾವಳಿ, ಶಿವರಾತ್ರಿ, ಗೌರಿ–ಗಣೇಶ ಹಬ್ಬಗಳು ವಿಶೇಷವಾಗಿ ಆಚರಿಸಲ್ಪಡುತ್ತವೆ. ಶ್ರೀ ಮರಿಯಮ್ಮ ದೇವಿಯ ಉತ್ಸವ ಇಲ್ಲಿಯ ವಿಶೇಷ ಆಕರ್ಷಣೆ.

## ಬೋರನ ಕಣಿವೆ

ಬೋರನ ಕಣಿವೆ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರದಿಕ್ಕಿಗೆ ೩೫ ಕಿ.ಮೀ. ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮ. ೧೯೯೧.೩೭ ಹೆಕ್ಟೇರ್೧೧೧೪ ಹೆಕ್ಟೇರ್ ಕೃಷಿಭೂಮಿಯಾಗಿದೆ. ಭೌಗೋಳಿಕ ವಿಸ್ತೀರ್ಣ ಹೊಂದಿದೆ ಮತ್ತು ಬಯಲು ನಾಡಾಗಿದೆ. ಪೂರ್ವದಿಂದ ಪಶ್ಚಿಮಕ್ಕೆ ಸಾಲಾಗಿ ಕಣಿವೆ ಅಥವಾ ಬೆಟ್ಟಸಾಲು ಇದ್ದು ಆ ಕಣಿವೆ ಸಾಲಿನಲ್ಲಿ ಬೋರಣ್ಣ ಎಂಬ ವ್ಯಕ್ತಿ ಮನೆವೊಂದನ್ನು ನಿರ್ಮಿಸಿ ಗ್ರಾಮ ನಿರ್ಮಿಸುತ್ತಿದೆ. ಕಾರಣವಾದ ಹಿನ್ನೆಲೆಯಲ್ಲಿ ವ್ಯಕ್ತಿ ಮೂಲದಿಂದ ಈ ಹೆಸರು ಬಂದಿದೆ. ಜಯಚಂದ್ರ ನಗರವು ಗ್ರಾಮಕ್ಕೆ ಸೇರ್ಪಡೆಯಾಗಿದೆ. ಎರೆ ಕೆಂಪು ಮಿಶ್ರಿತ ಮಣ್ಣು ವ್ಯವಸಾಯಕ್ಕೆ ಯೋಗ್ಯವಾಗಿದೆ.

ಗ್ರಾಮದ ದಕ್ಷಿಣಕ್ಕೆ ಬೋರನಕಣಿವೆ ಗುಡ್ಡಗಳ ಸಾಲು ಇದೆ. ಕಾಡು ಪ್ರಾಣಿಗಳಾದ ಕರಡಿ, ಹಂದಿ, ಮೊಲ, ನರಿ, ಮುಂಗುಸಿ, ಹಾಗೂ ಕಾಡು ಪಕ್ಷಿಗಳಾದ ನವಿಲು, ಗೌಜುಗ, ಗಿಳಿ, ಬುಲ್ ಬುಲ್, ಮರಕುಟಿಗ ಮತ್ತು ವಿಷಪೂರಿತ ಹಾವುಗಳನ್ನು ಕಾಣಬಹುದು.

ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆ ಕಾಲದಲ್ಲಿ ಸುಮಾರು ೩೪–೩೬ ಡಿ.ಸೆಂ. ಬಿಸಿಲಿನ ತಾಪವಿರುತ್ತದೆ. ಚಳಿಗಾಲದಲ್ಲಿ ೧೦ಡಿ.ಸೆಂ.–೧೨ ಡಿ.ಸೆಂ. ಚಳಿಯಿರುವ ವಾತಾವರಣವಿರುತ್ತದೆ.

ಬೋರನಕಣಿವೆ ಜಲಾನಯನ ಪ್ರದೇಶವಾಗಿದ್ದು, ಎರಡು ಕಣಿವೆ ಗುಡ್ಡದ ನಡುವೆ ಡ್ಯಾಮ್ ನಿರ್ಮಿಸಲಾಗಿದೆ. ಇದಕ್ಕೆ ಬೋರನಕಣಿವೆ ಜಲಾಶಯವೆಂದೂ ಕರೆಯುತ್ತಾರೆ.

ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್ ಮಿನಿಟ್ಯಾಂಕ್ ಮತ್ತು ಕೊಳಾಯಿಯ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತಿದೆ.

೪ ಕೈ ಪಂಪು ವ್ಯವಸ್ಥೆಯಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಮೂಲಗಳಾಗಿವೆ. ಪರಿಶಿಷ್ಟ ಜಾತಿಯೇ ಪ್ರಮುಖ ಸಮುದಾಯವಾಗಿದ್ದು, ಮುಸ್ಲಿಂ ಸಣ್ಣ ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಹಾಗೂ ಉರ್ದು ಮಾತನಾಡುವವರಿದ್ದಾರೆ.

ಒಟ್ಟು ೭೨ ಮನೆಗಳನ್ನು ಹೊಂದಿರುವ ೨೦೧೧ ರ ಜನಗಣತಿ ಇತ್ತೀಚಿನ ಪ್ರಕಾರ ೩೯೪ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ.

ವಿವಿಧ ಪ್ರಕಾರಗಳ ಮನೆಗಳಿದ್ದು, ಮಣ್ಣಿನ, ಕಲ್ಲಿನ, ಸೀಟಿನ, ಹೆಂಚಿನ ಮತ್ತು ಕಾಂಕ್ರೀಟ್ ಮನೆಗಳನ್ನು ಕಾಣಬಹುದಾಗಿದೆ. ಹಾಗೆಯೇ ಗುಡಿಸಿಲಿನಲ್ಲಿ ನೆಲೆಸಿರುವ ಕೆಲವು ಕುಟುಂಬಗಳೂ ಸಹ ಕಾಣಸಿಗುತ್ತವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಆವಾಜ್ ವಸತಿಯೋಜನೆಯ ೯೬ ಫಲಾನುಭವಿಗಳಿದ್ದಾರೆ.

ಸರಿ ಸುಮಾರು ೧೫ ಕುಟುಂಬಗಳು ಶೌಚಾಲಯದ ವ್ಯವಸ್ಥೆಯನ್ನು ಹೊಂದಿರುತ್ತವೆ. ಪ್ರಮುಖವಾಗಿ ರಾಗಿಮುದ್ದೆ, ಅನ್ನ, ರೊಟ್ಟಿ, ಉಪ್ಪಿಟ್ಟು, ಚಿತ್ರಾನ್ನ, ದೋಸೆ ಹಾಗೂ ಸಾಂಪ್ರದಾಯಿಕವಾಗಿ ಹಬ್ಬಗಳಲ್ಲಿ ಹೋಳಿಗೆ ಪಾಯಸ, ಸಿಹಿಕಡುಬು ಹಾಗೂ ಬಾಡೂಟ ತಯಾರಿಸುತ್ತಾರೆ.

ಕೃಷಿ ಇಲ್ಲಿನ ಪ್ರಮುಖ ಕಸುಬಾಗಿದ್ದರೂ ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿ, ಭತ್ತ, ಪ್ರಮುಖ ಬೆಳೆಯಾಗಿದ್ದು, ಜೋಳ ದ್ವಿದಳಧಾನ್ಯಗಳು ಹಾಗೂ ತೋಟಗಾರಿಕಾ ಬೆಳೆಗಳಾದ ಅಡಿಕೆ, ತೆಂಗು ಬೆಳೆಯುತ್ತಾರೆ.

ಸಾಂಪ್ರದಾಯಿಕ ಪಶುಪಾಲನೆ ಹೈನುಗಾರಿಕೆ ಪ್ರಸ್ತುತಿಯಲ್ಲಿದ್ದು, ಹಸು, ಎಮ್ಮೆ, ಕುರಿ–ಮೇಕೆಯನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ಕೋಳಿ, ಪಾರಿವಾಳ, ಸಾಕಾಣಿಕೂಡಯಿದೆ.

ಹುಳಿಯಾರು ಹೋಬಳಿ ಚಿ.ನಾ.ಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ, ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತದೆ. ಹೋಯ್ಸಳಕಟ್ಟೆ ಜಿಲ್ಲಾಪಂಚಾಯಿತಿ ಕ್ಷೇತ್ರ, ತಾಲ್ಲೂಕ್ ಪಂಚಾಯಿತಿ ಕ್ಷೇತ್ರ, ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಡುತ್ತದೆ. ಹೋಯ್ಸಳ ಕಟ್ಟೆ ಗ್ರಾಮ ಪಂಚಾಯಿತಿ ಆಯ್ಕೆಯಾಗಿರುವ ಇಬ್ಬರು ಚುನಾಯಿತ ಪ್ರತಿನಿಧಿಗಳಿದ್ದಾರೆ.

ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆ ಹಾಗೂ ಕಚ್ಚಾರಸ್ತೆಯ ಸಂಪರ್ಕವಿದ್ದು, ಸರಕಾಗಿ, ಖಾಸಗಿ ಬಸ್ಸುಗಳು, ಆಟೋರಿಕ್ಷಾ, ಟೆಂಪೋ ಮತ್ತು ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಬಹುಪಾಲು ಮನೆಗಳಲ್ಲಿ ಸಂಚಾರಿ ದೂರವಾಣಿ ಹಾಗೂ ಡಿ.ಟಿ.ಹೆಚ್. ಸಂಪರ್ಕವನ್ನು ಕಾಣಬಹುದಾಗಿದೆ.

ಸ್ತ್ರೀಶಕ್ತಿ ಸಂಘಗಳು ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಾದ ಗ್ರಾಮಸ್ಥರು ಉಳಿತಾಯ ಸಾಲಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ.

ಅಂಗನವಾಡಿ ಕಿರಿಯ-ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜು ಇದ್ದು ವಿದ್ಯಾರ್ಥಿಗಳಿಗೆ ಬಿಸಿಯೂಟ, ಕ್ಷೀರಭಾಗ್ಯ ಹಾಗೂ ಶೌಚಾಲಯದ ವ್ಯವಸ್ಥೆ ಮಾಡಲಾಗಿದೆ. ಸಾಕ್ಷರತೆ ೬೨.೪ ರಷ್ಟಿದೆ. ಬಾಲಕರ ವಿದ್ಯಾರ್ಥಿನಿಯೂ ಇದ್ದು, ಹೆಚ್ಚಿನ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವಾಗಿದೆ.

ಗ್ರಾಮದಲ್ಲಿ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನರ, ವಿಧವಾವೇತನದ ೧೬ ಫಲಾನುಭವಿಗಳಿದ್ದಾರೆ. ಭೂತಪ್ಪನಗುಡಿ, ಸಾಯಿಬಾಬಾ ಮಂದಿರ ಇಲ್ಲಿನ ಪ್ರಮುಖ ದೇವಾಲಯಗಳಾಗಿವೆ. ಯುಗಾದಿ, ದೀಪಾವಳಿ, ಶಿವರಾತ್ರಿ, ಸಂಕ್ರಾಂತಿ ಹಬ್ಬಗಳನ್ನು ತುಂಬಿ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತದೆ. ಜನಪದ ಕಲಾವಿದೆ ಲಕ್ಷ್ಮಕ್ಕ (ಸೋಬಾನೆಪದ) ಇಲ್ಲಿಯ ವಿಶೇಷ ಆಕರ್ಷಣೆ.

## ಬೇವಿನಹಳ್ಳಿ

ಮಜರೆ ಗ್ರಾಮ ಕುಪ್ಪೂರು ಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ಬೇವಿನ ಗಿಡಗಳು ಜಾಸ್ತಿ ಇದ್ದುದ್ದರಿಂದ ಬೇವಿನಹಳ್ಳಿ ಎಂಬ ಹೆಸರು ಬಂದಿದೆ. ಪಶ್ಚಿಮ ದಿಕ್ಕಿನ ೧೫ ಕಿ.ಮೀ. ದೂರದಲ್ಲಿ ಇದೆ. ಒಟ್ಟು ಭೌಗೋಳಿಕ ವಿಸ್ತೀರ್ಣವೂ೧೨೩೭.೧೫ ಚ.ಕಿ.ಮೀ. ವ್ಯಾಪ್ತಿಯನ್ನು ಹೊಂದಿದೆ. ಹಾಗೂ ಇಲ್ಲಿ ಬಿಳಿ ಕಲ್ಲು ಬಿಳಿಯ ಮಣ್ಣು ಕಂಡುಬರುತ್ತದೆ. ಬೇವು ಮೂಲದಿಂದ ಗ್ರಾಮಕ್ಕೆ ಬೇವಿನಹಳ್ಳಿ ಎಂದು ಕರೆಯಲಾಗುವುದು.

ಸುತ್ತ ಕಾಡು ಹಂದಿ, ನರಿ, ತೋಳ, ಮೊಲ ಇತ್ಯಾದಿ ಕಾಡು ಪ್ರಾಣಿಗಳು ಕಂಡು ಬರುತ್ತವೆ. ಜನರು ಹಸು, ಎಮ್ಮೆ, ಕುರಿ, ಮೇಕೆ ಎತ್ತು ಇತ್ಯಾದಿಗಳನ್ನು ಸಾಕುತ್ತಾರೆ. ಈ ಸುತ್ತ, ನವಿಲು, ಕಾಗೆ, ಗುಬ್ಬಚ್ಚಿ ಮರಕುಟಿಗ ಗೀಜುಗ, ಸಂಬಾರಗಾಗೆ, ಪಾರಿವಾಳ ಇತ್ಯಾದಿ ಪಕ್ಷಿಗಳು ಕಂಡು ಬರುತ್ತವೆ. ಕೆಲವು ಸಮುದಾಯದವರೂ ಸ್ವಂತ ಉಪಯೋಗಕ್ಕಾಗಿ ಕೋಳಿಗಳನ್ನು ಸಾಕುತ್ತಾರೆ.

ಇಲ್ಲಿ ೫೦೩, ೮ ಕಿ.ಮೀ. ನಷ್ಟು ಮಳೆ ಬಿದ್ದ ದಾಖಲೆ ಇದೆ. ಚಳಿಯೂ ೧೯-೨೦ ಡಿ.ಸೆಂ. ನಷ್ಟಿದ್ದು ಬಿಸಿಲು ೨೬-೩೬ ಡಿ.ಸೆಂ. ನಷ್ಟಿರುತ್ತದೆ. ಈ ಹಳ್ಳದಲ್ಲಿ ಬೇವಿನಹಳ್ಳಿ ಹಳ್ಳ ಹರಿಯುತ್ತದೆ. ತೆರೆದ ಬಾವಿ (ಸೇದಾಬಾವಿ) ಇದೆ. ಬೇವಿನಹಳ್ಳಿ ಕೆರೆ ಹಾಗೂ ಮಾದಾಪುರ ಕೆರೆ ಕೋಡಿಯಿಂದ ನೀರು ಬರುತ್ತದೆ. ಹಾಗೂ ಹೊಲಮಾಳದ ನೀರು ಹರಿಯುತ್ತದೆ.

ಸಾಮೂಹಿಕ ರಚನೆಯನ್ನು ಗಮನಿಸಿದಾಗ ವೀರಶೈವರು ದೊಡ್ಡ ಸಮುದಾಯವಾಗಿದ್ದು ಆದಿ ಕರ್ನಾಟಕ, ಲಂಬಾಣಿ ಮಡಿವಾಳ, ನಾಯಕಿ ಈಡಿಗ, ಬೆಸ್ತರು ಬ್ರಾಹ್ಮಣ ಬಳೆಗಾರ ಶೆಟ್ರು ಸಣ್ಣ ಸಮುದಾಯದವರಾಗಿದ್ದಾರೆ. ಒಟ್ಟು ಜನಸಂಖ್ಯೆ ೪೦೧ ಆಗಿದೆ.

ಈ ಗ್ರಾಮದಲ್ಲಿ ಒಟ್ಟು ೧೦೪ ಮನೆಗಳಿದ್ದು ಇದರಲ್ಲಿ ಮೂರು ಕಾಂಕ್ರೀಟ್ ಮನೆಗಳಿವೆ. ಉಳಿದ ಎಲ್ಲಾ ಮನೆಗಳನ್ನು ಕಲ್ಲು ಹಾಗೂ ಮಣ್ಣು ಬಳಸಿ ಕಟ್ಟಿದ್ದಾರೆ. ಮೆಲ್ಛಾವಣೆಗೆ ಕೆಲವರು, ಕುಂಬಾರರ ಕಪ್ಪು ಹೆಂಚು ಮತ್ತು ಕೆಲವರು ಮಂಗಳೂರು ಕೆಂಪು ಹೆಂಚನ್ನು ಬಳಸಿದ್ದಾರೆ. ಒಂದಷ್ಟು ಜನ ಶೌಚಾಲಯ ವ್ಯವಸ್ಥೆಯನ್ನು ಹೊಂದಿದ್ದಾರೆ.

ಜನರ ಬಹುಮುಖ್ಯ ಆಹಾರ ರಾಗಿ, ಜೋಳ, ಆಗಿದೆ. ಉಪ್ಪಿಟ್ಟು, ಚಿತ್ರಾನ್ನ ರೊಟ್ಟಿ, ಇಡ್ಲಿ ದೋಸೆ ಚಪಾತಿ ಇತ್ಯಾದಿಗಳು ಅಮುಖ್ಯ ಆಹಾರವಾಗಿವೆ. ಈ ಗ್ರಾಮದ ಸಾಂಪ್ರದಾಯಿಕ ಎತ್ತಿನಗಾಡಿಗಳ ಜೊತೆಗೆ ಟ್ರಾಕ್ಟರ್ ಆಟೋ ಇದೆ.

ಬಹುತೇಕ ಜನ ಕೃಷಿಯನ್ನೇ ಅವಲಂಬಿಸಿದ್ದು ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಇವರು ಉಪಬೆಳೆಗಳಾಗಿಅವರೆ, ಅಲಸಂಡೆ, ಎಳ್ಳು, ಉಚ್ಚೆಳ್ಳು, ಬೆಳೆಯನ್ನು ಬೆಳೆಯುತ್ತಾರೆ. ಇಲ್ಲಿನ ಜನರ ವಾಣಿಜ್ಯ ಬೆಳೆ ತೆಂಗು, ಅಡಿಕೆ ಆಗಿದೆ. ಆರೋಗ್ಯ ಖಾಸಗಿ ಡೈರಿ ಹಾಗೂ ನಂದಿನಿ ಡೈರಿಯಾಗಿ ಕೂಡ ಇದೆ. ಹಾಗೂ ಕೆರೆ ತುಂಬಿದಾಗ ಮೀನು ಕೃಷಿ ಮಾಡುತ್ತಾರೆ. ಇಲ್ಲಿನ ಮುಖ್ಯ ವ್ಯಾಪಾರಿ ಸರಕು

ಎಂದರೆ ಕೊಬ್ಬರಿ ಇಲ್ಲಿನ ಮುಖ್ಯ ವ್ಯಾಪಾರಿ ಸರಕು ಎಂದರೆ ಕೊಬ್ಬರಿ ಆಗಿದೆ. ಶಿಕ್ಷಕರೂ ಹಾಗೂ ಹೈಕೋರ್ಟ್‌ನಲ್ಲಿ ಕ್ಲರ್ಕ್ ವಕೀಲರು ಖಾಸಗಿಯವರಾಗಿದ್ದರು. ಇಲ್ಲಿ ಇಟ್ಟಿಗೆ ಕಾರ್ಖಾನೆಯೂ ಕೂಡ ಇದೆ.

ಶೆಟ್ಟಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಮತಕ್ಷೇತ್ರಕ್ಕೂ ಹಂದನಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೂ ಕುಪ್ಪೂರು ತಾಲ್ಲೂಕು ಪಂಚಾಯಿತಿ ಕ್ಷೇತ್ರಕ್ಕೂ ಕುಪ್ಪೂರು ಗ್ರಾಮ ಪಂಚಾಯಿತಿ ಕ್ಷೇತ್ರಕ್ಕೂ ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೂ ಸೇರುತ್ತದೆ.

ಗ್ರಾಮದ ಬಹುತೇಕ ಜನ ಸಂಪರ್ಕಕ್ಕಾಗಿ ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಚಿಕ್ಕನಾಯಕನಹಳ್ಳಿಯಲ್ಲಿ ಕಾನೂನು ನೆರವು ಮಂಡಳಿ ಹಾಗೂ ಬಾರ್ ಅಸೋಸಿಯೇಷನ್ ನ್ಯಾಯಾಂಗ ವ್ಯವಸ್ಥೆಯಾಗಿವೆ. ಹಾಗೂ ಶಾಂತಲಾ ಮಹಿಳಾ ಸಂಘದಲ್ಲಿಯೂ ಕೂಡ ರೇಷನ್ ಕೊಡುತ್ತಾರೆ. ಕರಿಯಮ್ಮ ದೇವಿ, ಭುವನೇಶ್ವರಿ ಪ್ರಗತಿ ಅಪೂರ್ವ ಸಂಘಗಳಿವೆ. ಶೇ. ೭೨% ಸಾಕ್ಷರರಿದ್ದು ಒಂದು ಅಂಗನವಾಡಿ ಕೇಂದ್ರ ಇದೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದೆ. ವೃದ್ಧಾಪ್ಯ ವಿಧವಾ ವೇತನ ಪಡೆಯುವ ಫಲಾನುಭವಿಗಳಿದ್ದಾರೆ. ಹಿಂದೆ ಕೋಟೆ ಇದ್ದು ಈಗ ಗಳಿಸಿದೆ.

ಶ್ರೀ ತಿರುಮಲೇಶ್ವರ ದೇವಸ್ಥಾನ ಈಶ್ವರ ದೇವಸ್ಥಾನವಿದೆ. ಹಾಗೂ ಬೇವಿನಹಳ್ಳಿ ಕರಿಯಮ್ಮ ದೇವರ ಜಾತ್ರೆ ನಡೆಯುತ್ತಿತ್ತು ಈಗ ಸುಮಾರು ೧೨ ವರ್ಷಗಳ ಹಿಂದೆ ನಡೆದಿದ್ದು ಈಗ ನಡೆಯುತ್ತಿಲ್ಲ. ಸಿಡಿ ಓಕುಳಿಬಲಿ, ಹರಕೆ ಕೊಂಡ ಹಿಂದೆ ಇದ್ದವೂ ಈಗ ಆಚರಣೆಯಲ್ಲಿ ಇಲ್ಲ.

## ಬೇವಿನಹಳ್ಳಿ ಗೊಲ್ಲರ ಹಟ್ಟಿ

ಬೇವಿನಹಳ್ಳಿ ಗೊಲ್ಲರಹಟ್ಟಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಇದು ಬೇವಿನಹಳ್ಳಿಗೆ ಸೇರಿದ ಮಜರೆ ಗ್ರಾಮ. ಬೇವಿನಹಳ್ಳಿ ಗೊಲ್ಲರಹಟ್ಟಿ ಎಂದು ಕರೆಯುತ್ತಾರೆ. ಕಾಡು ಗೊಲ್ಲ ಸಮುದಾಯದ ೨೬ ಮನೆಗಳಿದ್ದು ೧೧೨ಜನಸಂಖ್ಯೆ ಹೊಂದಿದೆ. ಈ ಮನೆಯ ಕಲ್ಲಿನ ಹೆಂಚಿನ ಸೀಟಿನ ಸ್ವರೂಪದಲ್ಲಿವೆ. ಇವು ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ ಜನತಾ ಯೋಜನೆಯ ಫಲಾನುಭವಿಗಳಿದ್ದಾರೆ. ಕುಡಿಯಲು ಗ್ರಾಮ ಪಂಚಾಯಿತಿ ಕಿರು ನೀರು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ವ್ಯವಸಾಯ ಮತ್ತು ಕುರಿಗಾರಿಕೆ ಇಲ್ಲಿನ ಮುಖ್ಯ ಕಸುಬಾಗಿದೆ. ರಾಗಿ, ಭತ್ತ, ಜೋಳ, ತೋಗರಿ, ಅವರೆ, ಹುರುಳಿ ಬೆಳೆಯುತ್ತಾರೆ. ಕುರಿ ಪಾಲನೆ ಹಾಗೂ ಕುರಿಯೊಂದಿಗೆ ಹುಲ್ಲು ನೀರಿಗೆ ವಲಸೆ ಹೋಗುವುದು ಇಲ್ಲಿನ ವಿಶೇಷವಾಗಿದೆ. ರಾಗಿ, ಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು, ಬಾಡೂಟ, ಪಾಯಸ ಹಾಗೂ ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಶೌಚಾಲಯ ಮುಕ್ತ ಗ್ರಾಮ. ಬಯಲು ಶೌಚಾಲಯ ಬಳಸುತ್ತಾರೆ. ಸಾಂಪ್ರದಾಯಿಕ ಎತ್ತಿನಗಾಡಿಗಳಿವೆ. ದ್ವಿಚಕ್ರವಾಹನಗಳ ಬಳಕೆ ಇದೆ. ಮೊಬೈಲ್ ಬಳಕೆಯಿದೆ. ಶಿಕ್ಷಣ, ಪಡಿತರ ವಿಷಯಗಳಿಗೆ, ಬೇವಿನಹಳ್ಳಿ ಹಾಗೂ ಕುಪ್ಪೂರಿಗೆ ಹೋಗುತ್ತಾರೆ. ಗ್ರಾಮದ ಶೈಕ್ಷಣಿ ಪ್ರಗತಿ ಶೇ. ೫೭% ರಷ್ಟಿದೆ. ಶಿಕ್ಷಣ ಕಂದಾಯ ಇಲಾಖೆಯಲ್ಲಿ ೩ ಜನ ಸರ್ಕಾರಿ ನೌಕರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಧವಾ ವೇತನಗಳು ಫಲಾನುಭವಿಗಳಿದ್ದಾರೆ. ಚಿತ್ರದೇವರು, ತಿಮ್ಮಪ್ಪ, ದೇವರ ಪೌಳಿಗಳಿವೆ. ಕುಪ್ಪೂರು ಮಲ್ಲಿಕಾರ್ಜುನ ದೇವರಿಗೆ ನಡೆದುಕೊಳ್ಳುತ್ತಾರೆ. ದೀಪಾವಳಿ, ದಸರಾ, ಯುಗಾದಿ, ಗೌರಿ–ಗಣೇಶಹಬ್ಬಗಳನ್ನು ಆಚರಿಸುತ್ತಾರೆ. ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾಪಂಚಾಯಿತಿ ತುಮಕೂರು ಲೋಕಸಭೆ ಹಾಗೂ ಕುಪ್ಪೂರು ಗ್ರಾಮ ಪಂಚಾಯಿತಿ ಕ್ಷೇತ್ರಗಳ ವ್ಯಾಪ್ತಿಗೆ ಒಳಪಟ್ಟಿದೆ. ಕುಪ್ಪೂರು ಚಿಕ್ಕನಾಯಕನಹಳ್ಳಿ –– ಬಸ್ ಸಂಪರ್ಕವಿದೆ.

## ಬಾಣದೇವರ ಹಟ್ಟಿ

ಬಾಣದೇವರ ಹಟ್ಟಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಒಂಭತ್ತು ಕಿ.ಮೀ. ದೂರದಲ್ಲಿದೆ. ಬಾಣದೇವರ ಜುಂಜಪ್ಪನ ದೇವಾಲಯವಾಗಿದ್ದು ಗೊಲ್ಲ ಸಮುದಾಯದವರು ಮಾತ್ರವೇ ಕಂಡುಬರುವುದರಿಂದ ಬಾಣದೇವರ ಹಟ್ಟಿ ಎಂಬ ಹೆಸರು ರೂಢಿಗೆ ಬಂದಿದೆ.

ಬಾಣದೇವರಹಟ್ಟಿ ಮಜರೆ ಗ್ರಾಮವಾಗಿದ್ದು, ಗೋಡೆಕೆರೆಗೆ ಒಳಪಡುತ್ತದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೦೦ ಹೆಕ್ಟೇರ್ ಕೆಂಪು ಮಣ್ಣನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ರಾಗಿ ಮುಖ್ಯ ಬೆಳೆಯಾಗಿದ್ದು ಹೆಸರು, ತೊಗರಿ, ಅವರೆ, ಉರುಳಿ, ಉದ್ದು, ಉಪಬೆಳೆಗಳಾಗಿವೆ. ತೆಂಗು ಮತ್ತು ಅಡಿಕೆ ತೋಟಗಾರಿಕಾ ಮತ್ತು ವಾಣಿಜ್ಯ ಬೆಳೆಗಳಾಗಿವೆ.

ನಾಟಿ ಹಸು, ನಾಟಿಎತ್ತು, ಕುರಿ, ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ಕೋಳಿಗಳನ್ನು ಸಾಕುತ್ತಾರೆ. ವಾರ್ಷಿಕ ಸರಾಸರಿ ೫೦೦ ಮಿ.ಮೀ. ಮಳೆ ಬೀಳುತ್ತದೆ. ಹವಾಮಾನ ವೈಪರೀತ್ಯದಿಂದಾಗಿ

ಕಳೆದ ಹತ್ತು ವರ್ಷಗಳಿಂದ ಜಲಕ್ಷಾಮ ಎದುರಿಸುತ್ತಿದ್ದು ಬರಗಾಲಕ್ಕೆ ತುತ್ತಾಗಿದೆ.

೪೦೦ ರಿಂದ ೫೦೦ ಅಡಿ ಆಳದ ೧೦ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಿಗೆ ನೀರೊದಗಿಸುತ್ತಿವೆ. ೧ ತೆರೆದ ಬಾವಿ ಹಾಗೂ ಕಲ್ಲಿನಿಂದ ಕಟ್ಟಿದ ಹಳೆಯದಾದ ೧ ಸೇದುವ ಬಾವಿಯಿದ್ದು ಸಂಪೂರ್ಣವಾಗಿ ಬತ್ತು ಹೋಗಿವೆ.

ಗೋಮಾಳದ ಮತ್ತು ಕಡೆ ಹೋಗಲು ಓಣಿ ಇದ್ದು ಗ್ರಾಮದ ಹೊಲ ಮತ್ತು ಗೋಮಾಳವನ್ನು ಸಂಪರ್ಕಿಸುತ್ತದೆ. ಆಧುನಿಕ ವಾಹನಗಳಾದ ಆಟೋ, ದ್ವಿಚಕ್ರವಾಹನಗಳೊಂದಿಗೆ ಸಾಂಪ್ರದಾಯಿಕ ವಾಹನವಾದ ಎತ್ತಿನಗಾಡಿಗಳು ಸಹ ಉಳಿದು ಕೊಂಡು ಬಂದಿವೆ. ಮುಖ್ಯ ಭಾಷೆ ಕನ್ನಡವಾಗಿದೆ.

ಒಟ್ಟು ೮೦ ಮನೆಗಳನ್ನು ಹೊಂದಿರುವ ೨೦೧೧ ರ ಜನಗಣತಿ ಪ್ರಕಾರ ೩೮೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ೧೭೦ ಪುರುಷರು, ೨೧೦ ಮಹಿಳೆಯರು ಕಂಡುಬರುತ್ತಾರೆ. ಕಾಂಕ್ರೀಟ್ ಮನೆಗಳು, ಮಣ್ಣಿನ ಮನೆಗಳು, ಕುಂಬಾರು ಹೆಂಚಿನ ಮನೆಗಳು ಮತ್ತು ಗುಡಿಸಲುಗಳಿವೆ. ಪ್ರಮುಖ ಆಹಾರ ಪದ್ಧತಿ ರಾಗಿಮುದ್ದೆ ಮತ್ತು ಅನ್ನ.

ಬೇಸಾಯ ಇಲ್ಲಿಯ ಪ್ರಮುಖ ಕಸುಬಾಗಿದ್ದರೂ ಕಟ್ಟಡ ಕೆಲಸಗಾರರು ಮತ್ತು ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಕಚ್ಚಾರಸ್ತೆ ಸಂಚಾರಕ್ಕೆ ಇದೆ. ಗೋಡೆಕೆರೆ ಗೇಟ್ ಗ್ರಾಮದಿಂದ ಆಟೋಗಳ ಸೌಲಭ್ಯವಿದೆ. ಸ್ಥಿರ ದೂರವಾಣಿ ಸಂಪರ್ಕಗಳು ಕಂಡುಬರುವುದಿಲ್ಲ. ಪ್ರತಿ ಮನೆಯಲ್ಲೂ ಸಂಚಾರಿ ದೂರವಾಣಿಗಳಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು, ಇಬ್ಬರು ಅಂಗನವಾಡಿ ಕಾರ್ಯಕರ್ತೆಯರಿದ್ದಾರೆ. ಒಟ್ಟು ೮ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ೧ರಿಂದ ೫ನೇ ತರಗತಿಯವರೆಗೆ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು, ಒಟ್ಟು ೧೭ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ಮತ್ತು ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಸಣ್ಣ ಚಿಲ್ಲರೆ ಅಂಗಡಿಗಳಿವೆ. ಬಾಣದ ದೇವರ ದೇವಸ್ಥಾನಕ್ಕೆ ಸೇರಿದ ಒಂದು ದೊಡ್ಡ ಸಮುದಾಯ ಭವನವಿದೆ. ಪ್ರತಿವರ್ಷ ದೀಪಾವಳಿ ಸಮಯದಲ್ಲಿ ಬಾಣದ ದೇವರು ಜುಂಜಪ್ಪನಿಗೆ ಪಲ್ಲಕ್ಕಿ ಉತ್ಸವ ಮತ್ತು ದೀಪೋತ್ಸವವನ್ನು ಮಾಡುತ್ತಾರೆ. ಹಾವು, ಚೇಳು, ಕಡಿತಕ್ಕೆ ಔಷಧ ನೀಡುವ ಪರಂಪರೆ ಈ ದೇವಾಲಯದಲ್ಲಿ ಪಟ್ಟದ ಪೂಜಾರಿಯಿಂದ ನಡೆಯುತ್ತದೆ.

## ಬರಗೂರು

ಬರಗೂರು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೦ ಕಿ.ಮೀ. ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೭೮೦.೯೦ ಹೆಕ್ಟೇರ್, ಬಯಲು ನಾಡಾಗಿದ್ದು ಬಿಳಿಕಲ್ಲು ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದೆ ಬೆಟ್ಟ, ಗುಡ್ಡ, ಅರಣ್ಯಗಳಾಗಲಿ ಕಂಡುಬರುವುದಿಲ್ಲ ಬರಗು ಎಂಬ ಸಸ್ಯ ಮೂಲದ ಹುಲ್ಲು ಬೆಳೆಯುತ್ತಿದ್ದ ಕಾರಣದಿಂದ ಬರಗೂರು ಎಂದು ಹೆಸರು ಬಂದಿದೆ. ಒಟ್ಟು ವ್ಯವಸಾಯ ಭೂಮಿ ೭೦೦ ಹೆಕ್ಟೇರ್ ಇದೆ.

ಭೋವಿ ನಾಯಕ ಆದಿಕರ್ನಾಟಕ ಆದಿಕರ್ನಾಟಕ, ಮಡಿವಾಳ ಮುಸ್ಲಿಂರು ಆಚಾರ್ಯರು ಕುರುಬರನ್ನೊಳಗೊಂಡ ಲಿಂಗಾಯತ ಸಮುದಾಯವೇ ದೊಡ್ಡ ಸಮುದಾಯ ಕನ್ನಡ ಪ್ರಧಾನಭಾಷೆ ನಂತರ ತೆಲುಗು ಉರ್ದು ಉಪಭಾಷೆಯಾಗಿದೆ. ಈ ಪರಿಸರದಲ್ಲಿ ಕಾಡು ಪ್ರಾಣಿಗಳು ನರಿ, ಮೊಲ, ಜಿಂಕೆ,ಕ ತೋಳ, ಕಂಡುಬಂದರೆ, ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ, ಸಾಕಲಾಗಿದೆ. ಕಾಡುಪಕ್ಷಿಗಾಗಿ ಗಿಳಿ, ಕೋಗಿಲೆ, ಗೂಬೆ, ಗೊರವಂಕ ಬೆಳವ ಕಂಡುಬರುತ್ತವೆ. ಕೋಳಿ ಸಾಕು ಪಕ್ಷಿಯಾಗಿದೆ. ಕೃಷಿಗೆ ಯೋಗ್ಯದ ಭೂಮಿಯಲ್ಲಿ ರೈತರು ಮುಖ್ಯ ಬೆಳೆಯಾಗಿ ರಾಗಿ ಉಪಬೆಳೆಗಳಾದ ಅವರೆ ಭತ್ತ ಕಡಲೆಕಾಯಿ ಉದ್ದು, ತೊಗರಿ ಹೆಸರು ಸಣ್ಣಕಾಳು ಬೆಳೆಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ ಬಾಳೆ ಮಾವು ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ವ್ಯವಸಾಯಕ್ಕೆ ಹಸು ಎತ್ತು ಪ್ರಾಣಿಗಳನ್ನು ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ ಆಧುನಿಕ ವಾಹನಗಳಾದ ಟ್ರಾಕ್ಟರ್‌ಗಳನ್ನು ಹೆಚ್ಚಾಗಿ ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆ ಇದೆ.

ವಾರ್ಷಿಕ ಸುಮಾರು ೫೫೮–೫೬೦ ಮಿ.ಮೀ. ಮಳೆ ೮೪೮.೧೨ ಡಿ.ಸೆಂ. ಬಿಸಿಲು ೨೮–೩೧ ಡಿ.ಸೆಂ. ಹೊಂದಿದೆ. ಪ್ರದೇಶವಾಗಿದ್ದು ೧ ಹಳ್ಳ ೧೦೦ ಕೊಳವೆ ಬಾವಿಗಳಿವೆ ೨ ಕೆರೆ ೬ ಕುಂಟೆ ೮ಮಿನಿ ವಾಟರ್ ಟ್ಯಾಂಕ್, ೯ ಕೈ ಪಂಪುಗಳಿವೆ.

ಒಟ್ಟು ೩೬೦ ಮನೆಗಳಿದ್ದು ಕಾಂಕ್ರೀಟ್ ಮನೆಗಳು ೧೦ ಕಲ್ಲಿನ ಮನೆಗಳು ೮೦ ಮಣ್ಣಿನ ಮನೆಗಳು ೧೦ ಗುಡಿಸಲು ಮನೆಗಳು ೧೦ ಇದ್ದು ಬಹುತೇಕ ಅಧಿಕ ಸಂಖ್ಯೆಯಲ್ಲಿ ಹೆಂಚಿನ ಮನೆಗಳೇ ಅಧಿಕವಾಗಿದೆ. ೧೦೦ ಇವುಗಳಲ್ಲಿ ಆಶ್ರಯ ಮನೆಗಳು ೫೦ ಜನತಾ

ಮನೆಗಳು ೨೦ ಅಂಬೇಡ್ಕರ್ ವಸತಿ ನಿಲಯಗಳು ೩೫ ಇಂದಿರಾ ಆವಾಸ್ ಮನೆಗಳು ೩೯ ಇದ್ದು, ೧೦ ವಸತಿ ರಹಿತ ಕುಟುಂಬಗಳು ಹಾಗೂ ೪ ನಿವೇಶನ ರಹಿತ ಕುಟುಂಬಗಳಿದ್ದು, ೮೦ ಮನೆಗಳು ಮಾತ್ರ ಶೌಚಾಲಯ ಹೊಂದಿದ್ದು, ೩೪೦ ಮನೆಗಳು ಶೌಚಾಲಯ ರಹಿತವಾಗಿವೆ.

೨೦೧೧ ರ ಜನಗಣತಿಯ ಪ್ರಕಾರ ೧೨೩೭ ಜನಸಂಖ್ಯಾಯಿದ್ದು ಇದರಲ್ಲಿ ೬೭೦ ಗಂಡಸರು, ೫೪೭ ಹೆಂಗಸರು ಇದ್ದು, ಈ ಗ್ರಾಮದ ಒಟ್ಟು ಸಾಕ್ಷರರ ಪ್ರಮಾಣ ೬೯% ಇದೆ.

ಕೃಷಿಕರು ಕೃಷಿ ಕೂಲಿಗಾರರು, ಬಡಿಗೇರರು ಕಮ್ಮಾರರು ಇದ್ದಾರೆ. ಆಧುನಿಕ ಉದ್ಯೋಗದಲ್ಲಿ ೨ ಹದ್ದಿನ ಗಿರಣಿಗಳು ೮ ದಿನಸಿ ಅಂಗಡಿಗಳು ೩ ಹೋಟೆಲ್‌ಗಳು ೧ ವಿದ್ಯಾರ್ಥಿ ನಿಲಯವಿದೆ. ೧೦ ಮಂದಿ ಸರ್ಕಾರಿ ನೌಕರಿದ್ದಾರೆ. ೫ ಶಿಕ್ಷಕರು ೨ ಅಭಿಯಂತರು ೨ ಕೆ.ಎಸ್.ಆರ್.ಟಿ.ಎಸ್. ಕಂಡಾಕ್ಟರ್ ೧ ನರ್ಸ್ ಇದ್ದಾರೆ. ಆಧುನಿಕ ಡೈರಿ ವ್ಯವಸ್ಥೆ ಹೊಂದಿದೆ.

ಹಂದನಕೆರೆ ಹೋಬಳಿ ತುಮಕೂರು ಜಿಲ್ಲೆ ಲೋಕಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯಿತ್ ಕ್ಷೇತ್ರ ಬರಗೂರು ತಾಲ್ಲೂಕ್ ಪಂಚಾಯಿತಿ ಹಾಗೂ ಗ್ರಾಮ ಪಂಚಾಯತ್ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕಂದಾಯ ಗ್ರಾಮವಾಗಿದೆ. ೨ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ೨ ಗ್ರಾಮ ಪಂಚಾಯಿತ್ ನೌಕರರಿದ್ದಾರೆ. ಮಿನಿವಾಟರ್ ಟ್ಯಾಂಕ್‌ಗಳ ಮೂಲಕ ಹಾಗೂ ಕೈ ಪಂಪ್‌ಗಳ ಮೂಲಕ ಕುಡಿಯುವ ನೀರನ್ನು ಒದಗಿಸುತ್ತದೆ. ರಸ್ತೆ ಮಾರ್ಗವಿದೆ. ಖಾಸಗಿ ವಾಹನಗಳ ಮಾತ್ರ ಸಂಚಾರಿಸುತ್ತವೆ. ಅಂಚೆ ಸ್ಥಿರ ಮತ್ತು ಸ್ವರದೂರವಾಣಿ ಸೌಲಭ್ಯಗಳಿವೆ. ರಕ್ಷಣಾ ವ್ಯವಸ್ಥೆ ಮತ್ತು ನ್ಯಾಯಾಂಗ ವ್ಯವಸ್ಥೆಗಳಿರುವುದಿಲ್ಲ.

ಹಣಕಾಸು ವ್ಯವಸ್ಥೆಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ ಶ್ರೀ ಧರ್ಮಸ್ಥಳ ಗ್ರಾಮಿಣಾಭಿವೃದ್ಧಿ ಸ್ವಸಹಾಯ ಸಂಘಗಳು ಇತರೆ ಸ್ತ್ರೀಶಕ್ತಿ ಸಂಘಗಳಿವೆ. ವಾರದ ಪ್ರತಿ ಬುಧವಾರ ಸಂತೆ ಜರುಗುತ್ತದೆ.

ಶಿಕ್ಷಣ: ಒಂದು ಅಂಗನವಾಡಿ ಕೇಂದ್ರ ಸ.ಹಿ.ಪ್ರಾ.ಶಾಲೆ ಹಾಗೂ ಒಂದು ಸರ್ಕಾರಿ ಪ್ರೌಢಶಾಲೆಯಿದ್ದು, ಶಾಲೆಗಳಲ್ಲಿ ಬಿಸಿಯೂಟ ಕ್ಷೀರಭಾಗ್ಯ ಕುಡಿಯುವ ನೀರಿನ ಮತ್ತು ಶೌಚಾಲಯದ ವ್ಯವಸ್ಥೆಯಿದೆ. ಹಾಗೂ ಸುವ್ಯವಸ್ಥಿತವಾದ ಆಟದ ಮೈದಾನವಿದೆ.

ಸಂಧ್ಯಾ ಸುರಕ್ಷಾ ಯೋಜನೆ,ಮ ಭಾಗ್ಯ ಲಕ್ಷ್ಮೀ ಯೋಜನೆ ವಿಕಲ ಚೇತನ, ವಿಧವಾ ವೇತನಗಳಾದ ಫಲಾನುಭವಿಗಳು ಇದ್ದಾರೆ. ಕಲ್ಯಾಣ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಆಸ್ಪತ್ರೆ ಇರುವುದಿಲ್ಲ. ಗ್ರಂಥಾಲಯ ವ್ಯವಸ್ಥೆಯಿದೆ. ಒಂದು ಶಿಲಾಶಾಸನ ಒಂದು ಸ್ಮಶಾನ ಇದೆ. ಈ ಶಾಸನ ಸಂಪೂರ್ಣವಾಗಿ ಶಿಥಿಲವಾಗಿದ್ದು, ಅಸ್ಥವ್ಯಸ್ಥವಾಗಿದೆ.

ಆಂಜನೇಯ ದುರ್ಗಮ್ಮ ಲಕ್ಕಮ್ಮ, ವಿನಾಯಕ ದೇವಾಲಯಗಳಿವೆ. ಬಸವೇಶ್ವರ, ಕರಿಯಮ್ಮ ದೇವರ ಜಾತ್ರೆಗಳನ್ನು ನಡೆಸುತ್ತಾರೆ. ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಬಸವಜಯಂತಿ, ಸಂಕ್ರಾಂತಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಬಾಯಿಬೀಗ, ಸಿಡಿ, ಆರತಿ, ಬಾನ, ಬಲಿ, ಹರಕೆ ಸಂಪ್ರದಾಯವಿದೆ. ಶಿಲ್ಪ ಕೆತ್ತನೆಯಲ್ಲಿ ೬೦ ವರ್ಷದ ಆಚಾರಿ ಜಾತಿಗೆ ವೃತ್ತಿಯು ಶಿಲ್ಪಕೆತ್ತನೆಯಲ್ಲಿ ಹಾಗೂ ರಂಗಯ್ಯ ಎಂಬ ೬೬ ವರ್ಷದ ಲಿಂಗಾಯಿತ ಜನಾಂಗಕ್ಕೆ ಸೇರಿದ ವ್ಯಕ್ತಿ ರಂಗಕಲಾವಿದರಾಗಿದ್ದಾರೆ. ರೈತಸಂಘ ಹಸಿರು ಸೇನೆ. ಬಸವೇಶ್ವರ ಯುವಕ ಸಂಘಗಳ ಸಾಂಸ್ಕೃತಿಕವಾಗಿ ನಾಟಕ, ಜನಪದ ಸಂಗೀತ ಕಾರ್ಯಕ್ರಮಗಳನ್ನು ಸಂಘಟಿಸುತ್ತಿದೆ.

## ಬರಗೂರು ಎ.ಕೆ. ಕಾಲೋನಿ

ಬರಗೂರು ಹಂದನಕೆರೆ ಹೋಬಳಿ ವ್ಯಾಪ್ತಿಗೆ ಸೇರಿದ ಒಂದು ಕಂದಾಯ ಗ್ರಾಮ ಬರಗೂರಿನ ಹೊರ ವಲಯಕ್ಕೆ ಹೊಂದಿಕೊಂಡಂತೆ ಎ.ಕೆ. ಕಾಲೋನಿ ಇದೆ. ಇದನ್ನು ಮಾದಿಗರ ಹಟ್ಟಿ ಎಂತಲೂ ಕರೆಯುತ್ತಾರೆ. ಆದಿಕರ್ನಾಟಕ ಸಮುದಾಯದವರು ಪ್ರತ್ಯೇಕವಾಗಿ ಜನವಸತಿ ನಿರ್ಮಿಸಿಕೊಂಡು ವಾಸಮಾಡುತ್ತಿರುವುದರಿಂದ ಮಾದಿಗರಹಟ್ಟಿ ಎಂದೇ ಗುರುತಿಸಿದ್ದಾರೆ. ಒಟ್ಟು ೬೦ ಮನೆಗಳಿವೆ. ಈ ಮನೆಗಳು ಹೆಂಚಿನ, ಸೀಟಿನ, ಮಾಳಿಗೆ ಸ್ವರೂಪದಲ್ಲಿವೆ. ಇವು ಸರ್ಕಾರದ ವಿವಿಧ ವಸತಿ ಯೋಜನೆಯಾದ ಆಶ್ರಮ, ಇಂದಿರಾ ಆವಾಸ್, ಅಂಬೇಡ್ಕರ್, ವಸತಿಯೋಜನೆಯ ಫಲಾನುಭವಿಗಳಿದ್ದಾರೆ. ಭಾಗ್ಯಜ್ಯೋತಿ ಯೋಜನೆಯಲ್ಲಿ ಉಚಿತ ವಿದ್ಯುತ್ ಸೌಲಭ್ಯ ಪಡೆಯುತ್ತಿದ್ದಾರೆ. ಕುಡಿಯಲು ಬರಗೂರು ಗ್ರಾಮ ಪಂಚಾಯಿತಿಯಿಂದ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ಕೊಳಾಯಿ ಮೂಲಕ ನೀರು ಪೂರೈಸಲಾಗುತ್ತಿದೆ. ಒಟ್ಟು ೭ ನಲ್ಲಿ ಸಂಪರ್ಕವಿದೆ. ಬೇಸಾಯ ಪ್ರಧಾನ ಕಸುಬು, ರಾಗಿ, ಹೆಸರು, ಶೇಂಗಾ, ತೊಗರಿ, ಹುರುಳಿ ಬೆಳೆಯುತ್ತಾರೆ. ತೆಂಗಿನ ತೋಟಗಾರಿ ಇದ್ದು, ಕೊಬ್ಬರಿ, ತೆಂಗಿನ ಚಿಪ್ಪು ಹಾಗೂ ಮಟ್ಟೆ ವ್ಯಾಪಾರಿ ಸರಕಾಗಿದೆ. ಹಸು, ಎಮ್ಮೆ, ಕುರಿ, ಮೇಕೆ, ಸಾಕುಪ್ರಾಣಿಯಾಗಿದ್ದು,

ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಪಡಿತರ, ಶಿಕ್ಷಣಕ್ಕೆ ಬರಗೂರು ಮುಖ್ಯ ಗ್ರಾಮದಿಂದ ಸೌಲಭ್ಯ ಪಡೆಯುತ್ತಿದ್ದಾರೆ. ೨೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಶಿಕ್ಷಣ, ಅರಣ್ಯ, ಸಾರಿಗೆ ಇಲಾಖೆಗೆ ಸೇರಿದ ೭ ಜನ ಸರ್ಕಾರಿ ನೌಕರರಿದ್ದಾರೆ. ಗಂಗಾ ಕಲ್ಯಾಣ ಯೋಜನೆಯಲ್ಲಿ ಜಮೀನಿನ ಉಚಿತ ನೀರಾವರಿ ಯೋಜನೆಬಾವಿ, ಪಂಪ್‌ಸೆಟ್ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಸಮುದಾಯ ಸೌಲಭ್ಯಗಳಾದ ಅಂಗವಿಕಲ ವಿಧವಾ ವೃದ್ಧಾಪ್ಯ ವೇತನದ ೧೬ ಫಲಾನುಭವಿಗಳಿದ್ದಾರೆ. ಬರಗೂರಿನಿಂದ ಅಂಚೆ ಸೌಕರ್ಯ ಕಲ್ಪಿಸಲಾಗಿದೆ. ಬರಗೂರು, ಹಂದನಕೆರೆ ಚಿಕ್ಕಕಾರ್ಮಿಕನ ಹಳ್ಳಿಗೆ ರಸ್ತೆ ಸಂಪರ್ಕವಿದ್ದು, ಸಾರಿಗೆ ಸೌಕರ್ಯವಿದೆ. ಗ್ರಾಮದಲ್ಲಿ ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ದಸರಾ, ಯುಗಾದಿ, ದೀಪಾವಳಿ, ಗೌರಿಗಣೇಶನ ಹಬ್ಬ ಆಚರಿಸುತ್ತಾರೆ. ಗ್ರಾಮದ ದುರ್ಗಮ್ಮ ದೇವರಿಗೆ ಬೇವಿನ ಸೀರೆ ಉಡುವುದು, ಬಾಯಿಬೀಗ, ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ದಸರಾ ನಂತರ ದುರ್ಗಮ್ಮನ ಉತ್ಸವ ವಿಶೇಷವಾಗಿ ನಡೆಯುತ್ತದೆ. ದುರ್ಗಾದೇವರ ವಿಶೇಷ ವ್ಯವಸ್ಥೆ ಈ ಬಡಾವಣೆಯವರು ತೊಡಗುತ್ತಾರೆ.

## ಬರಕನಹಾಳ್

ಬರಕನಹಾಳ್ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೦ ಕಿಮೀ ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣವು ೯೮೦.೧೭ ಹೆಕ್ಟೇರ್ ಇದ್ದು ಇದು ಕಂದಾಯ ಗ್ರಾಮ. ಈ ಗ್ರಾಮಕ್ಕೆ ಬರಕನಹಾಳ್ ತಾಂಡ್ಯ ಸೇರ್ಪಡೆ ಗ್ರಾಮವಾಗಿದ್ದು ಬಯಲುನಾಡಾಗಿದೆ. ಬರಮಕ್ಕನಹಳ್ಳ ನಂತರ ಬರಕನಹಳ್ಳ > ಬರಕನಹಾಳ್ ಎಂದಾಗಿದೆ.

ಕೆಂಪು–ಬಿಳಿ ಮಿಶ್ರಿತ ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಇಲ್ಲಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೨ ತೆರೆದ ಬಾವಿಗಳಿದ್ದು ಕೆಲವು ಬತ್ತಿಹೋಗಿದ್ದು ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗೆ ಅಲ್ಪ ನೀರಿನ ಮೂಲಗಳಾಗಿವೆ. ಕುಡಿಯುವ ನೀರಿಗಾಗಿ ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕು ಮತ್ತು ಕೊಳಾಯಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತಿದೆ.

ಲಿಂಗಾಯಿತ ದೊಡ್ಡ ಸಮುದಾಯವಾಗಿದ್ದು ಮಡಿವಾಳ, ಕಮ್ಮಾರ ಮತ್ತು ಮುಸ್ಲಿಂ ಕಿರು ಸಮುದಾಯಗಳಿವೆ. ಕನ್ನಡ ಮತ್ತು ಉರ್ದು ಭಾಷೆಗಳನ್ನು ಮಾತನಾಡುತ್ತಾರೆ.

೧೫೬ ಮನೆಗಳಿದ್ದು ೨೦೧೧ ರ ಜನಗಣತಿ ಪ್ರಕಾರ ೭೦೨ ಜನಸಂಖ್ಯಾ ಪ್ರಮಾಣವನ್ನು ಹೊಂದಿದ್ದು ವಿವಿಧ ಪ್ರಕಾರದ ಮನೆಗಳಾದ ಗುಡಿಸಲು, ಕಲ್ಲು–ಮಣ್ಣು, ಹೆಂಚು ಮತ್ತು ಕಾಂಕ್ರೀಟ್ ಮನೆಗಳಿವೆ. ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಜನತಾ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಗಳ ೭೪ ಫಲಾನುಭವಿಗಳ ಮನೆಗಳನ್ನು ಕಾಣಬಹುದಾಗಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಟೆಂಪೋ, ಕಾರು ಮತ್ತು ದ್ವಿಚಕ್ರ ವಾಹನಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ಹೈನುಗಾರಿಕೆ ಪ್ರಸ್ತುತದಲ್ಲಿದ್ದು ಆಧುನಿಕ ಡೈರಿಯ ಸೌಲಭ್ಯವಿದೆ. ಖಾಸಗಿ ಬಸ್ಸು, ಆಟೋರಿಕ್ಷಾ, ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಬಹುಪಾಲು ಮನೆಗಳಲ್ಲಿ ಸಂಚಾರಿ ದೂರವಾಣಿ ಹಾಗೂ ಡಿಟಿಎಚ್ ಸಂಪರ್ಕವನ್ನು ಕಾಣಬಹುದಾಗಿದೆ.

ಹುಳಿಯಾರು ಹೋಬಳಿ, ಚಿ.ನಾ ಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಒಳಪಡುತ್ತದೆ. ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಮತ್ತು ಬರಕನಹಾಳ್ ಗ್ರಾಮಪಂಚಾಯ್ತಿ ಕಛೇರಿಯನ್ನು ಒಳಗೊಂಡಿದ್ದು ಇಬ್ಬರು ಗ್ರಾಮ ಪಂಚಾಯ್ತಿ ಸದಸ್ಯರು, ೧೨ ಜನ ಗ್ರಾಮ ಪಂಚಾಯ್ತಿ ನೌಕರರನ್ನು ಹೊಂದಿದೆ.

೬ ಸ್ತ್ರೀಶಕ್ತಿ ಸಂಘಗಳು, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವಿದ್ದು ಗ್ರಾಮಸ್ಥರು ಸಣ್ಣ ಉಳಿತಾಯ ಮತ್ತು ಸಾಲ ಸೌಲಭ್ಯ ಪಡೆದಿರುತ್ತಾರೆ. ಅಂಗನವಾಡಿ ಕೇಂದ್ರ ಸರ್ಕಾರಿ ಹಿರಿಯ ಪ್ರಾಥಮಿಕ

ಶಾಲೆ ಹಾಗೂ ಸರ್ಕಾರಿ ಪ್ರೌಢಶಾಲೆಯಿದ್ದು ಬಿಸಿಯೂಟ, ಕ್ಷೀರಭಾಗ್ಯ ಮತ್ತು ಶೌಚಾಲಯದ ಸೌಲಭ್ಯವಿದೆ. ಶೇ.೭೩.೯ ಸಾಕ್ಷರತೆಯಿದೆ. ಗ್ರಂಥಾಲಯವಿದ್ದು ಒಟ್ಟು ೫೦೦ ಪುಸ್ತಕಗಳು ಮತ್ತು ಒಬ್ಬರು ಸಿಬ್ಬಂದಿಯನ್ನು ಒಳಗೊಂಡಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೦ ಫಲಾನುಭವಿಗಳಿದ್ದಾರೆ.

ಭೈರವೇಶ್ವರ, ಕರಿಯಮ್ಮ ಮತ್ತು ಆಂಜನೇಯ ದೇವಾಲಯಗಳಿದ್ದು ತೇರು, ಉತ್ಸವಗಳು ಜರುಗುತ್ತವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಜಾನಪದ ಕಲಾವಿದರಾದ ಲಿಂಗಾಯಿತ ಜನಾಂಗಕ್ಕೆ ಸೇರಿದ ಕೃಷ್ಣಮೂರ್ತಿ ಪ್ರಮುಖ ವೀರಗಾಸೆ ಕಲಾವಿದರು. ಭೈರವೇಶ್ವರ ಕಲಾಸಂಘ ಮತ್ತು ರಂಗಮಂದಿರವಿದೆ. ನ್ಯಾಯಬೆಲೆ ಅಂಗಡಿಯಿದೆ. ಜಿಲ್ಲಾ ಮುಖ್ಯ ರಸ್ತೆ, ಅಂಚೆ ಕಛೇರಿ ಇದೆ.

## ಬರಕನಹಾಳ್ ತಾಂಡ್ಯ

ಬರಕನಹಾಳ್ ತಾಂಡ್ಯವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೦ ಕಿಮೀ ದೂರದಲ್ಲಿದೆ. ಬರಕನಹಾಳ್ ಮಜರೆ ಗ್ರಾಮವಾಗಿದ್ದು ಬಯಲುನಾಡಾಗಿದೆ. ಗೋಪಾಲನಾಯಕನ ತಾಂಡ್ಯ ಮತ್ತು ರಾಮಾನಾಯ್ಕನ ತಾಂಡ್ಯಗಳು ಸೇರಿ ಬರಕನಹಾಳ್ ತಾಂಡ್ಯವೆಂದು ಕರೆಯಲ್ಪಟ್ಟಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮದಲ್ಲಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ. ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಮಿನಿ ಟ್ಯಾಂಕ್ ಮತ್ತು ಕೊಳಾಯಿ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತಿದೆ. ೩ ಕೈಪಂಪುಗಳ ವ್ಯವಸ್ಥೆಯಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಈ ಗ್ರಾಮದಲ್ಲಿ ಲಂಬಾಣಿ ಸಮುದಾಯದವರು ವಾಸಿಸುತ್ತಿದ್ದು ಕನ್ನಡ ಮತ್ತು ಲಂಬಾಣಿ ಮುಖ್ಯ ಭಾಷೆಯಾಗಿವೆ. ಒಟ್ಟು ೭೫ ಮನೆಗಳಿದ್ದು ೨೦೧೧ ರ ಜನಗಣತಿ ಪ್ರಕಾರ ೪೦೨ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಕಾಂಕ್ರೀಟ್, ಕಲ್ಲಿನ, ಮಣ್ಣಿನ ಹಾಗೂ ಶೀಟಿನ ಮನೆಗಳನ್ನು ಕಾಣಬಹುದು. ೩ ಕುಟುಂಬಗಳಲ್ಲಿ ಶೌಚಾಲಯವಿರುತ್ತದೆ. ಸರ್ಕಾರದ ಜನತಾ, ಆಶ್ರಯ ಮತ್ತು ಇಂದಿರಾ ಆವಾಸ್ ವಸತಿ ಯೋಜನೆಯ ೧೩ ಫಲಾನುಭವಿಗಳನ್ನು ಕಾಣಬಹುದಾಗಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಕೆಲ ಭಾಗಗಳಲ್ಲಿ ತರಕಾರಿ ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕೃಷಿ ಕೂಲಿ ಕಾರ್ಮಿಕರು, ತೆಂಗಿನ ನಾರು ಬಿಡಿಸುವ ಕೆಲಸಗಾರರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಬರಕನಹಾಳ್ ತಾಂಡ್ಯ ಗ್ರಾಮವು ಚಿ.ನಾ. ಹಳ್ಳಿ ವಿಧಾನಸಭಾ ಕ್ಷೇತ್ರದ, ತುಮಕೂರು ಲೋಕಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಗಾಣದಾಳು ತಾಲ್ಲೂಕು ಹಾಗೂ ಬರಕನಹಾಳ್ ಗ್ರಾಮ ಪಂಚಾಯ್ತಿಯ ವ್ಯಾಪ್ತಿಗೆ ಒಳಪಟ್ಟಿದೆ. ಬಹುಪಾಲು ಮನೆಗಳಲ್ಲಿ ಸಂಚಾರಿ ದೂರವಾಣಿ, ಡಿಟಿಎಚ್ ಸಂಪರ್ಕವಿದೆ. ಮರಿಯಮ್ಮದೇವಿ ಸ್ತ್ರೀಶಕ್ತಿ ಸಂಘ ಕಾರ್ಯ ನಿರ್ವಹಿಸುತ್ತಿದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ಮಕ್ಕಳಿಗೆ ಬಿಸಿಯೂಟ, ಕ್ಷೀರಭಾಗ್ಯ ಮತ್ತು ಶೌಚಾಲಯದ ಸೌಲಭ್ಯ ಕಲ್ಪಿಸಲಾಗಿದೆ. ಶೇ.೫೭.೬ ರಷ್ಟು ಸಾಕ್ಷರತೆ ಹೊಂದಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೬ ಫಲಾನುಭವಿಗಳಿದ್ದಾರೆ.

ಸೇವಾಲಾಲ್ ಮತ್ತು ಮರಿಯಮ್ಮ ದೇವಿ ದೇವಸ್ಥಾನಗಳಿದ್ದು ತೀಜ್, ಯುಗಾದಿ, ನವರಾತ್ರಿ, ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸೋಬಾನೆ ಪದದ ಪುಟ್ಟಬಾಯಿ ಮತ್ತು ಭೀಮಿಬಾಯಿ ಪ್ರಮುಖ ಜಾನಪದರು. ಗ್ರಾಮಕ್ಕೆ ಕಚ್ಚಾರಸ್ತೆ ಸಂಪರ್ಕವಿದ್ದು ಖಾಸಗಿ ಹಾಗೂ ಸ್ವಂತ ವಾಹನಗಳೇ ಸಾರಿಗೆ ವ್ಯವಸ್ಥೆಯ ಮೂಲಾಧಾರ.

## ಬರಕನಹಾಳ್ ಎ.ಕೆ. ಕಾಲೋನಿ

ಬರಕನಾಳ್ ಎ.ಕೆ. ಕಾಲೋನಿಯು ಬರಕನಾಳ್ ಗ್ರಾಮಕ್ಕೆ ಹೊಂದಿಕೊಂಡಂತೆ ಪ್ರತ್ಯೇಕ ಬಡಾವಣೆ ಹೊಂದಿರುವ ಆದಿಕರ್ನಾಟಕ ಜನಾಂಗದವರ ವಸತಿನಿಲಯಗಳ ಗ್ರಾಮ. ಇದನ್ನು ಮಾದಿಗರಹಟ್ಟಿ ಎಂತಲೂ ಕರೆಯುತ್ತಾರೆ. ಮಾದಿಗ ಜನಾಂಗದವರ ೨೩ ಮನೆಗಳಿದ್ದು ೧೦೨ ಜನಸಂಖ್ಯೆಯನ್ನು ಹೊಂದಿದೆ. ಈ ಮನೆಗಳು ಹೆಂಚಿನ, ಶೀಟಿನ ಸ್ವರೂಪದ್ದಾಗಿದ್ದು ಇವು ಸರ್ಕಾರದ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಶೌಚಾಲಯ ಮುಕ್ತ ಗ್ರಾಮವಾಗಿದ್ದು ಬಯಲು ಶೌಚಾಲಯ ಅವಲಂಬಿಸಿದ್ದಾರೆ. ಇಲ್ಲಿನ ಮನೆಗಳು ಜನತಾ, ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಉಚಿತ ವಿದ್ಯುತ್ ಯೋಜನೆಯ ಫಲಾನುಭವಿಗಳಿದ್ದಾರೆ. ಶಾಲೆ, ಪಡಿತರ ಸೌಲಭ್ಯವನ್ನು ಬರಕನಾಳ್ ಗ್ರಾಮ ಪಂಚಾಯ್ತಿ ಕೇಂದ್ರವೂ ಆಗಿದೆ. ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ಶಿಕ್ಷಣ, ಪಡಿತರ, ಅಂಚೆ ಸಂಪರ್ಕ ಬರಕನಾಳ್ ಗ್ರಾಮದಿಂದಲೇ ಪೂರೈಸಲಾಗುತ್ತಿದೆ. ರೈತಾಪಿ ಬದುಕು ಇಲ್ಲಿ ಪ್ರಧಾನ. ರೈತ ಕಾರ್ಮಿಕರೂ ಇದ್ದಾರೆ. ರಾಗಿ, ಶೇಂಗಾ, ಹುರುಳಿ, ಹೆಸರು ಮುಖ್ಯ ಬೆಳೆ. ಹಸು, ಕುರಿ, ಮೇಕೆ ಸಾಕಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕುಡಿಯಲು ಬರಕನಾಳ್ ಮುಖ್ಯ ಗ್ರಾಮದಿಂದ ನೀರು ಪೂರೈಕೆಯಾಗುತ್ತದೆ. ಎ.ಕೆ. ಕಾಲೋನಿಗೆ ಪ್ರತ್ಯೇಕವಾಗಿ ಒಂದು ಸಿಸ್ಟನ್ ಇದ್ದು ಕೊಳಾಯಿ ಸೌಲಭ್ಯವಿದೆ. ಸಾರಿಗೆ, ಅರಣ್ಯ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಕೃಷಿ ಕಾರ್ಮಿಕರು ಅಧಿಕವಾಗಿದ್ದಾರೆ. ಕರಿಯಮ್ಮ ದೇವಾಲಯವಿದ್ದು ಆರತಿ, ಬಾನ, ಹರಕೆ ಸಂಪ್ರದಾಯವಿದೆ. ಕದರಿ ನರಸಿಂಹ ದೇವರ ಪೌಳಿಯಿದೆ. ವೃದ್ಧಾಪ್ಯ, ವಿಧವಾ ವೇತನದ ೯ ಫಲಾನುಭವಿಗಳಿದ್ದಾರೆ. ತಾಲ್ಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಗೆ ೨೪ ಕಿಮೀ ದೂರದಲ್ಲಿದ್ದು ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಹೊಯ್ಸಳಕಟ್ಟೆ–ಸಿರಾ ಮಾರ್ಗವಾಗಿ ಬಸ್ ಸಂಪರ್ಕವಿದೆ.

## ಬಡಕೆಗುಡ್ಲು

ಕಂದಾಯ ಗ್ರಾಮ ಬಡಕೆಗುಡ್ಲು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೫ ಕಿಮೀ ದೂರದಲ್ಲಿದೆ. ಮೂಲ ನಿವಾಸಿ ಬಡಕಲ ಅಜ್ಜಿ ಎನ್ನುತ್ತಾರೆ. ಗುಡಿಸಲಿನಲ್ಲಿ ವಾಸವಾಗಿದ್ದ ಆ ಅಜ್ಜಿಯ ತರುವಾಯ ಅನೇಕ ಕುಟುಂಬಗಳು ನೆಲೆನಿಂತವು ಬಡಕಲು ಅಜ್ಜಿಯ ಹೆಸರಿನಲ್ಲಿ ಬಡಕಿ? ಬಡಕೆಗುಡ್ಲು ಎಂದಾಗಿ ಬಡಕ್ಕನ ಗುಡ್ಲು ಎಂದು ನಂತರ ಆಗಿದೆ ಎನ್ನುತ್ತಾರೆ. ೧೭೦೧.೨೩ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣವುಳ್ಳ ಈ ಗ್ರಾಮಕ್ಕೆ ಎ.ಕೆ. ಕಾಲೋನಿ, ವಡ್ಡರಹಟ್ಟಿ, ಸೊಬಗಬೋವಿಹಟ್ಟಿಗಳು ಮಜರೆ ಗ್ರಾಮಗಳಾಗಿವೆ.

ಬಯಲುನಾಡಲ್ಲಿ ಬರುವ ಈ ಗ್ರಾಮದ ಸುತ್ತ ಕೆಂಪು ಬಂಡೆಕಲ್ಲು, ಕೆಂಪು–ಕಪ್ಪು ಮಣ್ಣು ಕಂಡುಬರುತ್ತದೆ. ಸಮೀಪದಲ್ಲಿ ಬೋರನಗುಡ್ಡವಿದೆ. ಸಾಮಾಜಿಕ ಅರಣ್ಯ ಹಾಗೂ ಗುಂಡುತೋಪು ಇದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ३४–३೬ ಡಿಗ್ರಿ ಸರಾಸರಿ ಇದೆ. ಗ್ರಾಮದ ಸಮೀಪ ಗಂಟೇನಹಳ್ಳಿ ತೊರೆ ಮಳೆಗಾಲದಲ್ಲಿ ಹರಿಯುತ್ತದೆ. ಎರಡು ಸಾದಾ ಬಾವಿಗಳು ಗ್ರಾಮದಲ್ಲಿದ್ದು ಈಗ ನೀರಿಲ್ಲ. ಬಕ್ಕನಕಟ್ಟೆ ಎಂಬ ಕಿರು ಕಟ್ಟೆಯಿದೆ. ಸಿಸ್ಟನ್‌ಗಳ ಮೂಲಕ ಗ್ರಾಮಕ್ಕೆ ಕುಡಿಯಲು ನೀರು ಒದಗಿಸಲಾಗುತ್ತದೆ. ಮನೆಗಳಿಗೆ ೭೫ ಕ್ಕೂ ಹೆಚ್ಚು ನಲ್ಲಿಗಳನ್ನು ಅಳವಡಿಸಲಾಗಿದೆ. ಓವರ್‌ಹೆಡ್ ಟ್ಯಾಂಕ್ ಕೂಡ ಇದೆ.

ಒಟ್ಟು ३೮೨ ಕುಟುಂಬಗಳನ್ನು ಹೊಂದಿದೆ. ದೊಡ್ಡ ಸಮುದಾಯವೆಂದರೆ ಕುಂಚಿಟಿಗ ಒಕ್ಕಲಿಗರು. ಬೋವಿ, ನಾಯಕ, ಮಡಿವಾಳ, ಹಜಾಮರು, ಆದಿ ಕರ್ನಾಟಕ, ಲಂಬಾಣಿ, ಮುಸ್ಲಿಂ, ಅಕ್ಕಸಾಲಿಗರು, ಸಿಂಪಿಗ, ಲಿಂಗಾಯಿತ, ಸಿಳ್ಳೇಕ್ಯಾತರು, ಕುರುಬರು ಇಲ್ಲಿನ ಸಣ್ಣ ಸಮುದಾಯಗಳಾಗಿವೆ. ೨೦೧೧ ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೨೧೦೨. ಮುಖ್ಯ ಭಾಷೆ ಕನ್ನಡ. ಅಲ್ಪ ಸಂಖ್ಯೆಯಲ್ಲಿ ಉರ್ದು, ತೆಲುಗು ಭಾಷಿಕರಿದ್ದಾರೆ.

ನಾಲ್ಕು ಕಾಂಕ್ರೀಟ್ ಮನೆಗಳು, ಮೂರು ಗುಡಿಸಲುಗಳು ಉಳಿದವುಗಳು ಮಣ್ಣು ಹಾಗೂ ಕಲ್ಲಿನಿಂದ ಕಟ್ಟಲ್ಪಟ್ಟಿವೆ. ಮೇಲ್ಹಾವಣಿಗೆ ಕುಂಬಾರರ ಹಾಗೂ ಮಂಗಳೂರು ಹೆಂಚನ್ನು ಬಳಸಿದ್ದಾರೆ. ಕೆಲವರು ತಗಡಿನ ಹಾಗೂ ಸಿಮೆಂಟಿನ ಶೀಟನ್ನು ಬಳಸಿದ್ದಾರೆ. ವಸತಿ ಯೋಜನೆಗಳಾದ ಜನತಾ, ಆಶ್ರಯ, ಇಂದಿರಾ ಆವಾಸ್ ಯೋಜನೆಯ ೧೪३ ಫಲಾನುಭವಿಗಳಿದ್ದಾರೆ. ೮೬ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ. ಸಾಂಪ್ರದಾಯಿಕ ಎತ್ತಿನ ಗಾಡಿಗಳೊಂದಿಗೆ ಕಾರು,

ಟ್ರ್ಯಾಕ್ಟರ್, ದ್ವಿಚಕ್ರ ವಾಹನಗಳು, ಸರಕು ಸಾಗಣೆ ಆಟೋಗಳನ್ನು ಕೆಲವರು ಹೊಂದಿದ್ದಾರೆ. ಚಪ್ಪಡಿ ಚರಂಡಿ, ಕೆಲವೆಡೆ ಬಾಕ್ಸ್ ಚರಂಡಿ ಇದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ನವಣೆ, ಸಜ್ಜೆ, ಜೋಳ, ಕಡಲೆಕಾಯಿ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಗ್ರಾಮದ ಇಬ್ಬರು ಸರ್ಕಾರಿ ಶಾಲಾ ಶಿಕ್ಷಕರಾಗಿದ್ದಾರೆ. ಗ್ರಾಮದಲ್ಲಿ ಬಡಗಿಗಳು ಇದ್ದಾರೆ.

ಕಂದಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ ಸೇರಿರುತ್ತದೆ. ತಿಮ್ಮನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತದೆ. ಐದು ಜನ ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ. ಮೂರು ಜನ ನೌಕರರಿದ್ದರೆ. ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರುತ್ತದೆ. ಗ್ರಾಮಕ್ಕೆ ರಸ್ತೆ ಮಾರ್ಗವಿದೆ. ಬೆಳ್ಳಾರ ಅಂಚೆಗೆ ಸೇರುತ್ತದೆ. ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಧವಾ ವೇತನಗಳ ೩೨ ಫಲಾನುಭವಿಗಳಿದ್ದಾರೆ.

ಎರಡು ಅಂಗನವಾಡಿ ಕೇಂದ್ರಗಳಿವೆ. ಸರ್ಕಾರಿ ಕಿರಿಯ, ಹಿರಿಯ ಹಾಗೂ ಪ್ರೌಢಶಾಲೆಗಳಿವೆ. ಸಾಕ್ಷರಭಾರತಿಯ ಕಾರ್ಯಕರ್ತರಿದ್ದಾರೆ. ಶೇ.೯೫.೩೮ ರಷ್ಟು ಜನ ಸಾಕ್ಷರರಿದ್ದಾರೆ. ಶಾಲೆಗಳಲ್ಲಿ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಕ್ಷೀರಭಾಗ್ಯ ಯೋಜನೆ, ಬಿಸಿಯೂಟದ ವ್ಯವಸ್ಥೆ ಇದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಜಯರಂಗಪ್ಪ ಎಂಬುವವರು ದನಗಳಿಗೆ ಬರುವ ಸಾಮಾನ್ಯ ಕಾಯಿಲೆಗಳಿಗೆ ನಾಟಿ ಔಷಧಿ ನೀಡುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಚಿಕ್ಕ ಹೋಟೆಲ್ ಹಾಗೂ ಕಿರಾಣಿ ಅಂಗಡಿಗಳಿವೆ. ಸ್ಮಶಾನದ ಜಾಗವಿದೆ.

ಈಶ್ವರ, ಎಲ್ಲಮ್ಮ, ಚೌಡೇಶ್ವರಿ, ಸತ್ಯಮ್ಮ, ಮಾರಮ್ಮ, ಉಲ್ಲೇನಹಳ್ಳಿ ಭೂತಪ್ಪ ದೇವಾಲಯ ಹಾಗೂ ಬಸವನಗುಡ್ಡೆಗಳಿವೆ. ಊರು ಮಾರಮ್ಮನ ಜಾತ್ರೆ ಮೂರು ವರ್ಷಗಳಿಗೊಮ್ಮೆ ನಡೆಯುತ್ತದೆ. ಜಾತ್ರೆಯಲ್ಲಿ ಆರತಿ, ಬಲಿ, ಬಾನ ಇರುತ್ತದೆ. ಸೋಬಾನೆ ಪದಗಳನ್ನು ಹೇಳುವ ೩೫ ವರ್ಷದ ಆದಿ ಕರ್ನಾಟಕ ಸಮುದಾಯದ ಗೌರಮ್ಮ ಜನಪದ ಹಾಡುಗಾರ್ತಿಯಾಗಿದ್ದಾರೆ. ಶ್ರೀ ರಂಗನಾಥ ಕೃಪಾಪೋಷಿತ ನಾಟಕಮಂಡಳಿಯಿದ್ದು 'ಸಂಪೂರ್ಣ ರಾಮಾಯಣ' ನಾಟಕ ಅಭಿನಯಿಸುತ್ತಾರೆ. ಊರಲ್ಲಿ ರೈತ ಸಂಘವನ್ನು ಕಟ್ಟಿಕೊಂಡಿದ್ದಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಬಡಕೆಗುಡ್ಲು ವಡ್ಡರಹಟ್ಟಿ

ಬಡಕೆಗುಡ್ಲು ಸಮೀಪದಲ್ಲಿ ಈ ಗ್ರಾಮದ ಮಜರೆ ಗ್ರಾಮವಾಗಿ ವಡ್ಡರಹಟ್ಟಿ ಇದೆ. ಇದರ ಭೌಗೋಳಿಕ ವ್ಯಾಪ್ತಿ ಮುಖ್ಯ ಗ್ರಾಮ ಬಡಕೆಗುಡ್ಲು ಗ್ರಾಮದೊಂದಿಗೆ ಹಂಚಿಕೆಯಾಗಿದೆ (೧೭೦೧.೨೩ ಹೆಕ್ಟೇರ್‌ನಲ್ಲಿ) ಇದು ಪೂರ್ಣವಾಗಿ ಬೋವಿ ಜನಾಂಗದವರು ವಾಸಿಸುತ್ತಿದ್ದು ೨೭ ಮನೆಗಳಿವೆ. ೨೦೧೧ ರ ಜನಗಣತಿ ಪ್ರಕಾರ ೧೪೩ ಜನಸಂಖ್ಯೆ ಹೊಂದಿದೆ. ನೀರನ್ನು ಬಡಕೆಗುಡ್ಲು ಕಂದಾಯ ಗ್ರಾಮದಿಂದ ಪೂರೈಸಿಕೊಳ್ಳುತ್ತಾರೆ. ಮುಖ್ಯ ಕಸುಬು ವ್ಯವಸಾಯ. ಸೈಜುಗಲ್ಲು ಒಡೆಯುವುದು, ಜಲ್ಲಿಕಲ್ಲು ಕುಟ್ಟುವುದು ಇವರ ಕಾಯಕವಾಗಿದೆ. ಉಳಿದಂತೆ ಗರಿಕಡ್ಡಿ ವ್ಯಾಪಾರ, ತೆಂಗಿನ ಮಟ್ಟೆ ಸಂಗ್ರಹ, ವ್ಯಾಪಾರದ ಕಾಯಕ ಮಾಡುತ್ತಿದ್ದಾರೆ. ರಾಗಿ ಇಲ್ಲಿನ ಮುಖ್ಯ ಬೆಳೆ. ಹೆಸರು, ಹುರುಳಿ, ತೊಗರಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗಿನ ಬಳಕೆಯಿದೆ. ಕೊಬ್ಬರಿ, ಮಟ್ಟೆ ಹಾಗೂ ಚಿಪ್ಪು, ಹೊಂಗೆಬೀಜ, ಹುಣಸೇಹಣ್ಣು ವ್ಯಾಪಾರಿ ಸರಕುಗಳಾಗಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ತಿಮ್ಮನಹಳ್ಳಿ ಗ್ರಾಮಪಂಚಾಯ್ತಿಗೆ ಸೇರಿದ ಈ ಗ್ರಾಮದಲ್ಲಿ ಕನ್ನಡ ಮುಖ್ಯ ಭಾಷೆಯಾಗಿದ್ದು ತೆಲುಗು ಮಾತನಾಡುವವರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೩ ಫಲಾನುಭವಿಗಳಿದ್ದಾರೆ. ವ್ಯಾಪಾರಕ್ಕೆ ಬಡ್ಕೆಗುಡ್ಲು ಗ್ರಾಮಕ್ಕೆ ಬರಬೇಕಾಗಿದೆ. ಒಂದು ಪೆಟ್ಟಿಗೆ ಅಂಗಡಿ ಇದೆ. ಹಸು, ಎಮ್ಮೆ, ಕುರಿ ಸಾಕುಪ್ರಾಣಿಗಳಾಗಿವೆ. ಹೈನುಗಾರಿಕೆ ಹಾಲನ್ನು ಬಡಕೆಗುಡ್ಲು ಡೈರಿಗೆ ಹಾಕಲಾಗುತ್ತದೆ. ಎಲ್ಲಮ್ಮ, ಚೌಡಮ್ಮ ದೇವರ ಆರತಿ, ಬಾನ, ಬ್ಯಾಟೆ ಹರಕೆ ಸಂಪ್ರದಾಯವಿದೆ. ಜೊತೆಗೆ ಭೂತಪ್ಪನಿಗೆ ಮರಿಬಲಿ ಸಂಪ್ರದಾಯವಿದೆ. ಊರು ಮಾರಿಯಾಗಿ ಬಡಕೆ ಗುಡ್ಲುವಿನಲ್ಲಿ ಜರುಗುವ ಮಾರಿ ಜಾತ್ರೆಯಲ್ಲಿ ಈ ಗ್ರಾಮದವರ ಕೂಡಿಗೆ, ಭಾಗವಹಿಸುವಿಕೆ ಅಪಾರವಾಗಿದೆ. ಸಿರಾ–ಚಿಕ್ಕನಾಯಕನಹಳ್ಳಿ ರಸ್ತೆ, ಬಸ್ ಸಂಚಾರವಿದೆ. ತಿಮ್ಮನಹಳ್ಳಿಯಿಂದ ಅಂಚೆ ಸಂಪರ್ಕವಿದೆ. ಇವರು

ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಬಗ್ಗನಹಳ್ಳಿ

ಬಗ್ಗನಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೭ ಕಿಮೀ ದೂರದಲ್ಲಿದೆ. ಇದು ಕಂದಾಯ ಗ್ರಾಮ. ರಂಗನಾಥಪುರ ಎಂಬ ಮಜರೆ ಗ್ರಾಮವನ್ನು ಹೊಂದಿದೆ. ಬಗ್ಗ ಎಂದರೆ ಹುಲಿ ಎಂಬ ಅರ್ಥವಿದೆ. ಆದರೂ ಕುರುಬರ ಮೂಲದ ವಗ್ಗ > ಗೊರವಯ್ಯನ ಮೂಲದಿಂದ ವಗ್ಗ > ಬಗ್ಗವಾಗಿ ಬಗ್ಗನಹಳ್ಳಿ ಎಂದಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೬೪೨ ಹೆಕ್ಟೇರ್ ಕಪ್ಪು ಮಿಶ್ರಿತ ಬಿಳಿ ಮಣ್ಣನ್ನು ಹೊಂದಿದ್ದು ಒಂದು ಕೆರೆಯಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕುಡಿಯಲು ಗ್ರಾಮ ಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆಯಲ್ಲಿ ನೀರು ಪೂರೈಸಲಾಗುತ್ತದೆ. ೩ ಕೊಳವೆ ಬಾವಿಗಳಿದ್ದು ೩೬ ನಲ್ಲಿ ಸಂಪರ್ಕಗಳಿಗೆ ೪ ಸಿಸ್ಟನ್‌ಗಳಿವೆ.

ವೀರಶೈವರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಆದಿ ದ್ರಾವಿಡ, ಕುರುಬರು, ಅಕ್ಕಸಾಲಿಗ, ಉಪ್ಪಾರ ಜನಾಂಗ ಕಿರು ಸಮುದಾಯವಾಗಿದೆ. ಒಟ್ಟು ೨೯೪ ಮನೆಗಳಿದ್ದು ೨೦೧೧ ರ ಜನಗಣತಿ ಪ್ರಕಾರ ೧೨೭೭ ಜನಸಂಖ್ಯೆ ಹೊಂದಿದೆ. ಇಲ್ಲಿನ ಮನೆಗಳು ಕಲ್ಲಿನ, ಹೆಂಚಿನ. ಶೀಟಿನ ಸ್ವರೂಪದಲ್ಲಿವೆ. ಇವು ಜನತಾ. ಆಶ್ರಯ ಹಾಗೂ ಅಂಬೇಡ್ಕರ ವಸತಿ ಯೋಜನೆಯ ೪೮ ಫಲಾನುಭವಿಗಳಿದ್ದಾರೆ. ೬೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ತೆಂಗಿನ ಕಾಯಿ, ಕೊಬ್ಬರಿ, ಮಟ್ಟೆ ಹಾಗೂ ಚಿಪ್ಪು ವ್ಯಾಪಾರಿ ಸರಕಾಗಿದೆ. ಟ್ರ್ಯಾಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ. ಚರ-ಸ್ಥಿರ ದೂರವಾಣಿ ಸಂಪರ್ಕವಿದೆ. ಶಿಕ್ಷಣ, ಸಾರಿಗೆ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಟ್ರ್ಯಾಕ್ಟರ್ ಡ್ರೈವರ್‌ಗಳಿದ್ದಾರೆ. ಖಾಸಗಿ ವಕೀಲರು, ಉಪನ್ಯಾಸಕರು ಇದ್ದಾರೆ. ಒಂದು ಪ್ರಾಥಮಿಕ ಪಾಠಶಾಲೆ, ಅಂಗನವಾಡಿ ಕೇಂದ್ರವಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರದ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೮೮% ಆಗಿದೆ.

ಶೆಟ್ಟಿಕೆರೆ ಹೋಬಳಿ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭೆ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ, ಗೋಡೆಕೆರೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕ್ಷೇತ್ರವಾಗಿದ್ದು ಗ್ರಾಮದಲ್ಲಿ ೩ ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ. ಜೈಪುರದಿಂದ ಅಂಚೆ ಸೌಕರ್ಯವಿದೆ. ಚಿಕ್ಕನಾಯಕನಹಳ್ಳಿ-ಕೆ.ಬಿ. ಕ್ರಾಸ್‌ಗೆ ಬಸ್ ಸಂಪರ್ಕ ಸೌಲಭ್ಯವಿದೆ. ಇಟ್ಟಿಗೆ ಫ್ಯಾಕ್ಟರಿ, ಕೋಳಿಫಾರಂ ಇದೆ. ೩ ಸ್ತ್ರೀಶಕ್ತಿ ಸಂಘ, ೩ ಧರ್ಮಸ್ಥಳ ಸ್ವಸಹಾಯ ಸಂಘಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೪ ಕಿರಾಣಿ ಅಂಗಡಿ, ೩ ಟೀ ಹೋಟೆಲ್‌ಗಳಿವೆ. ಧಾರ್ಮಿಕವಾಗಿ ಲಕ್ಷ್ಮಿ, ಈಶ್ವರ, ಉಡುಸಲಮ್ಮನ ದೇವಾಲಯವಿದೆ. ಮಾರಮ್ಮನ ಪೌಳಿಯಿದೆ. ಉಡುಸಲಮ್ಮನ ಆರತಿ, ಬಲಿ, ಹರಕೆ ಸಂಪ್ರದಾಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಬಗ್ಗನಹಳ್ಳಿ ರಂಗನಾಥಪುರ

ಬಗ್ಗನಹಳ್ಳಿ ರಂಗನಾಥಪುರ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೮ ಕಿಮೀ ದೂರದಲ್ಲಿದೆ. ಬಗ್ಗನಹಳ್ಳಿಗೆ ಸೇರಿದ ಮಜರೆ ಗ್ರಾಮವಾಗಿದೆ. ಇದು ಬಗ್ಗನಹಳ್ಳಿಯ ಉಪಗ್ರಾಮವಾದುದರಿಂದ ಬಗ್ಗನಹಳ್ಳಿ ರಂಗನಾಥಪುರ ಎಂದು ಕರೆಯುತ್ತಾರೆ. ಇದರ ಭೌಗೋಳಿಕ ವ್ಯಾಪ್ತಿ ಬಗ್ಗನಹಳ್ಳಿ ಕಂದಾಯ ಗ್ರಾಮದಲ್ಲಿ ಹಂಚಿಕೆಯಾಗಿದೆ. ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ

ಹಾಗೂ ಬಿಸಿಲು ३೪-३೬ ಡಿಗ್ರಿ ಸರಾಸರಿ ಇದೆ. ಕುಡಿಯಲು ಗೋಡೆಕೆರೆ ಗ್ರಾಮಪಂಚಾಯ್ತಿ ವತಿಯಿಂದ ನೀರು ಪೂರೈಸಲಾಗುತ್ತದೆ. ಒಂದು ಕೊಳವೆ ಬಾವಿಯಿದ್ದು ಒಂದು ಸಿಸ್ಟನ್ ಇದೆ.

ಆದಿಕರ್ನಾಟಕ, ಉಪ್ಪಾರ, ಅಗಸ ಜನಾಂಗದವರು ವಾಸಿಸುತ್ತಿದ್ದು ಇಲ್ಲಿ ೧೮ ಮನೆಗಳಿವೆ. ಇವು ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಇವುಗಳು ಆಶ್ರಯ, ಅಂಬೇಡ್ಕರ್ ಆವಾಸ್ ವಸತಿ ಯೋಜನೆಯ ೯ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ. ಶಿಕ್ಷಣ ಪಡಿತರ ವಿಚಾರಗಳಿಗೆ ಬಗ್ಗನಹಳ್ಳಿ, ಜೆ.ಸಿ. ಪುರಕ್ಕೆ ಹೋಗುತ್ತಾರೆ. ಜೆ.ಸಿ. ಪುರದಿಂದ ಅಂಚೆ ಸೌಕರ್ಯವಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಹಾಗೂ ಗೋಡೆಕೆರೆ ಗ್ರಾಮ ಪಂಚಾಯ್ತಿಗೆ ಸೇರಿದೆ. ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಹುಣಸೆಹಣ್ಣು, ಕೊಬ್ಬರಿ ಹಾಗೂ ಅಡಿಕೆ ವ್ಯಾಪಾರಿ ಸರಕಾಗಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶಿಕ್ಷಣ ಇಲಾಖೆಯಲ್ಲಿ ಒಬ್ಬರು ಸರ್ಕಾರಿ ನೌಕರರಿದ್ದಾರೆ. ಉಳಿದಹಾಗೆ ಖಾಸಗಿ ಟ್ರ್ಯಾಕ್ಟರ್ ಡ್ರೈವರ್, ಕಾರ್ಮಿಕರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಗ್ರಾಮದ ಸಾಕ್ಷರತೆ ೬೨% ಆಗಿದೆ.

ಉಡುಸಲಮ್ಮನ ಉತ್ಸವ ಹಾಗೂ ಗೋಡೆಕೆರೆ ಸಿದ್ಧರಾಮೇಶ್ವರನ ಜಾತ್ರೆಯಲ್ಲಿ ಈ ಗ್ರಾಮದ ಪಾತ್ರವಿರುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಬಸವಾಪಟ್ಟಣ

ಬಸವಾಪಟ್ಟಣ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೪ ಕಿಮೀ ದೂರದಲ್ಲಿದೆ. ಇದು ನಿರುವಗಲ್ ಗ್ರಾಮದ ಮಜರೆ ಗ್ರಾಮವಾಗಿದ್ದು ಇದರ ಕೃಷಿಭೂಮಿ ವ್ಯಾಪ್ತಿ ೧೫೨೦.३೫ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಬಯಲು ಮಿಶ್ರಿತ ಕುರುಚಲು ಗಿಡ, ಗುಡ್ಡ ಭೂಪ್ರದೇಶವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ನರುವಗಲ್ ಮೂಲದ ಬಸವಣ್ಣ ಎಂಬ ವ್ಯಕ್ತಿ ಪ್ರತ್ಯೇಕವಾಗಿ ಜನವಸತಿ ನಿರ್ಮಿಸಿಕೊಂಡು ಗ್ರಾಮ ಬೆಳೆದಾಗ ನಿರುಗಲ್ ಬಸವಾಪಟ್ಟಣ ಎಂದು ಕರೆದರು. ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ३೪-३೬ ಡಿಗ್ರಿ ಸರಾಸರಿ ಇದೆ. ಕುಡಿಯಲು ಗ್ರಾಮಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತದೆ. ೨ ತೆರೆದ ಬಾವಿಗಳಿದ್ದು ಒಣಗಿಹೋಗಿವೆ.

ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ, ಬರಗೂರು ತಾಲ್ಲೂಕು ಪಂಚಾಯ್ತಿ ಕ್ಷೇತ್ರಗಳ ವ್ಯಾಪ್ತಿಗೆ ಸೇರಿದ್ದು ಬಳಗುವಾಡಿಯಿಂದ ಅಂಚೆ ಸೌಕರ್ಯ ಕಲ್ಪಿಸಿದೆ. ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ. ಇಲ್ಲಿನ ಸಾಮಾಜಿಕ ರಚನೆಯಲ್ಲಿ ಸರ್ಪ ಒಕ್ಕಲಿಗರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ನಾಯಕ, ಮಡಿವಾಳ ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ಮಣ್ಣಿನ, ಕಲ್ಲಿನ, ಹೆಂಚಿನ ಸ್ವರೂಪದ ಮನೆಗಳಿದ್ದು ೨೦೧೧ ರ ಜನಗಣತಿಯಂತೆ ೨३೭ ಜನಸಂಖ್ಯೆ ಹೊಂದಿದೆ. ಇಲ್ಲಿನ ಮನೆಗಳು ಜನತಾ, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ೭३ ಫಲಾನುಭವಿಗಳಿದ್ದಾರೆ. ೧೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಲಾರಿ, ಟಿಪ್ಪರ್, ಸ್ಕೂಟರ್‌ಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ೪ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಹಂದನಕೆರೆಯಿಂದ ಅಂಚೆ ಬಟವಾಡೆಯಾಗುತ್ತದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಗ್ರಾಮದ ಸಾಕ್ಷರತೆ ೬೯% ರಷ್ಟಿದೆ. ಕಾನ್ಕೆರೆ, ಹಂದನಕೆರೆ, ಮತಿಘಟ್ಟ ಮೂಲಕ ರಸ್ತೆ ಸಂಪರ್ಕವಿದ್ದು ಬಸ್ ಸಂಚಾರವಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ. ಶಿಕ್ಷಣ, ಸಾರಿಗೆ, ಅರಣ್ಯ ಹಾಗೂ ಆರೋಗ್ಯ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವಕೀಲರು, ಇಂಜಿನಿಯರ್‌ಗಳಿದ್ದಾರೆ. ಖಾಸಗಿ ವಾಹನ ಚಾಲಕರಿದ್ದಾರೆ.

ಒಂದು ಈಶ್ವರ ದೇವಾಲಯವಿದೆ. ಶಿವರಾತ್ರಿ ಹಾಗೂ ದಸರಾ ಹಬ್ಬಗಳಲ್ಲಿ ವಿಶೇಷ ಪೂಜೆ, ಅಭಿಷೇಕ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಭೈಲಪ್ಪನ ಮಠ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಸಬಾ ಹೋಬಳಿ ಮುದ್ದೇನಹಳ್ಳಿ ಗ್ರಾಮಪಂಚಾಯ್ತಿಯ ಮಜರೆ ಗ್ರಾಮ. ಬೈಲಪ್ಪನ ಮಠ ಎಂಬ ಚಿಕ್ಕ ಮಠವೊಂದು ಇಲ್ಲಿದೆ. ಆದ ಕಾರಣ ಇಲ್ಲಿನ ಜನವಸತಿಗೆ ಬೈಲಪ್ಪನ ಮಠ ಎಂಬ ಹೆಸರು ಬಂದಿದೆ. ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೧೧ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೨೨೩೮.೨೦ ಹೆಕ್ಟೇರ್. ಬಯಲು ಪ್ರದೇಶ. ಬಿಳಿ ಕಲ್ಲು ಮತ್ತು ಬಿಳಿ ಮಣ್ಣಿನಿಂದ ಕೂಡಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ೧೨ ಕೊಳವೆ ಬಾವಿಗಳಿವೆ.

ವೀರಶೈವರು ದೊಡ್ಡ ಸಮುದಾಯವಾಗಿದೆ. ಮುಸ್ಲಿಮರು, ನಾಯಕರು, ಸರ್ಪ ಒಕ್ಕಲಿಗರು, ಕುರುಬ, ಶೆಟ್ರು, ಆದಿಕರ್ನಾಟಕ, ಆಚಾರ್ರು ಸಣ್ಣ ಸಮುದಾಯದವರಾಗಿದ್ದಾರೆ. ೨೦೧೧ ರ ಜನಗಣತಿ ಪ್ರಕಾರ ೨೭೪ ಜನರಿದ್ದಾರೆ. ಜನರು ಪ್ರಮುಖವಾಗಿ ಕನ್ನಡ ಭಾಷೆಯನ್ನು ಮತ್ತು ಮುಸ್ಲಿಮರು ಉರ್ದು ಭಾಷೆಯನ್ನು ಮಾತನಾಡುತ್ತಾರೆ. ಒಟ್ಟು ೫೫ ಮನೆಗಳಿದ್ದು ಮೂರು ಕಾಂಕ್ರೀಟ್ ಮನೆಗಳಿವೆ. ಉಳಿದ ಎಲ್ಲಾ ಮನೆಗಳನ್ನು ಕಲ್ಲು ಹಾಗೂ ಮಣ್ಣನ್ನು ಬಳಸಿ ಕಟ್ಟಿದ್ದಾರೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಕೆಲವು ಮನೆಗಳಲ್ಲಿ ಶೌಚಾಲಯ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಸರ್ಕಾರಿ ನೌಕರಿಯಲ್ಲಿ ಇಬ್ಬರು ಶಿಕ್ಷಕರಿದ್ದಾರೆ. ಕೆಲವರು ಬೆಂಗಳೂರಿನ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಎನ್.ಆರ್. ಸಿಮೆಂಟ್ ಕಾರ್ಖಾನೆ ಮತ್ತು ೨ ಇಟ್ಟಿಗೆ ಫ್ಯಾಕ್ಟರಿಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮುದ್ದೇನಹಳ್ಳಿ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುತೇಕ ಜನ ಸಂಚಾರಿ ದೂರವಾಣಿಗಳನ್ನು ಬಳಸುವರು. ಬಯಲು ಬಸವೇಶ್ವರ ಸಂಘ ಎಂಬ ಸ್ತ್ರೀಶಕ್ತಿ ಸಂಘವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಮತ್ತು ಲಕ್ಷ್ಮೀನರಸಿಂಹ ಪ್ರೌಢಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೇ.೬೦ ರಷ್ಟು ಸಾಕ್ಷರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ,

ವೃದ್ಧಾಪ್ಯವೇತನದ ೩೧ ಫಲಾನುಭವಿಗಳಿದ್ದಾರೆ. ಚಿಕ್ಕ ಅಂಗಡಿಗಳಿವೆ.

ಶ್ರೀ ಬಯಲು ಬಸವೇಶ್ವರ ಸ್ವಾಮಿ ದೇವಾಲಯವಿದೆ. ಬಸವ ಜಯಂತಿಯಲ್ಲಿ ಜಾತ್ರೆಯನ್ನು ಮಾಡುವರು. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಬಯಲು ಬಸವೇಶ್ವರ ಸಂಘ ಎಂಬ ಭಜನಾ ಸಂಘವಿದೆ.

## ಬ್ಯಾಲದ ಕೆರೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆ ಹೋಬಳಿ ಮುದ್ದೇನಹಳ್ಳಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩ ಕಿಮೀ ಅಂತರದಲ್ಲಿದೆ. ಇಲ್ಲಿ ಬ್ಯಾಲದ ಮರಗಳು ಹೆಚ್ಚಿರುವುದರಿಂದ ಈ ಹೆಸರು ಬಂದಿದೆ. ಭೌಗೋಳಿಕ ವಿಸ್ತೀರ್ಣ ೫೭೭.೩೪ ಹೆಕ್ಟೇರ್. ಬಯಲು ನಾಡಾಗಿದ್ದು ಬಿಳಿ ಕಲ್ಲು ಮತ್ತು ಬಿಳಿ ಮಣ್ಣನ್ನು ಹೊಂದಿದೆ. ಸಾಲುಗುಡ್ಡ ಸಮೀಪದಲ್ಲಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ನರಿಹಳ್ಳ ಮತ್ತು ತುಂಡಹಳ್ಳ ಎಂಬ ೨ ಹಳ್ಳಗಳಿವೆ. ಚಿಕ್ಕೆರೆ, ದುರ್ಗದ ಕೆರೆ, ಹೊಸಕೆರೆ ಎಂಬ ೩ ಕೆರೆಗಳಿವೆ. ಕೊಳವೆ ಬಾವಿಗಳಿವೆ. ಕಿರು ನೀರು ಸರಬರಾಜು ಯೋಜನೆಯಿದೆ. ೧೮ ನಲ್ಲಿಗಳಿವೆ.

ವೀರಶೈವ, ಕುರುಬರು, ಶೆಟ್ಟಿ ಬಣಜಿಗರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಬೆಸ್ತರು, ಮುಸ್ಲಿಮರು ಸಣ್ಣ ಸಮುದಾಯದವರಾಗಿದ್ದಾರೆ. ಕನ್ನಡವನ್ನು ಮತ್ತು ಮುಸ್ಲಿಮರು ಉರ್ದುವನ್ನು ಮಾತನಾಡುತ್ತಾರೆ. ೨೦೧೧ ರ ಜನಗಣತಿ ಪ್ರಕಾರ ೩೨೬ ಜನಸಂಖ್ಯೆ ಇದೆ. ಒಟ್ಟು ೬೪ ಮನೆಗಳಿದ್ದು ೩ ಕಾಂಕ್ರೀಟ್ ಮನೆಗಳು ಉಳಿದವು ಕಲ್ಲು ಮತ್ತು ಮಣ್ಣಿನಿಂದ ಕಟ್ಟಿದ ಮನೆಗಳು. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಕೆಲವು ಮನೆಗಳಲ್ಲಿ ಶೌಚಾಲಯವಿದೆ. ಜನತಾ, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ೩೨ ಮನೆಗಳಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಉದ್ದು, ಎಳ್ಳು, ಹರಳು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್‌ಗಳು, ಕಾರು, ಆಟೋಗಳಿವೆ. ರಸ್ತೆ ಹಾಗೂ ಚರಂಡಿ ವ್ಯವಸ್ಥೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಇಂಜಿನಿಯರ್, ಶಿಕ್ಷಕರು ಹಾಗೂ ಬೆಂಗಳೂರಿನ ಕಂಪನಿಗಳಲ್ಲಿ ಕಾರ್ಯ ನಿರ್ವಹಿಸುವ ಕೆಲವರಿದ್ದಾರೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮಾಳಿಗೆಹಳ್ಳಿ ತಾಲ್ಲೂಕು ಪಂಚಾಯ್ತಿ ಮತ್ತು ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಕೆಂಪಾಂಬ, ಗಂಗಾಂಬಿಕ, ದುರ್ಗಾಂಬ, ಆದಿಶಕ್ತಿ ಮುಂತಾದ ಸ್ತ್ರೀಶಕ್ತಿ ಸಂಘಗಳಿವೆ. ಧರ್ಮಸ್ಥಳ ಸಂಘ ಮತ್ತು ೪ ಸ್ವಸಹಾಯ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರವಿದೆ. ಶೇ.೮೦ ರಷ್ಟು ಸಾಕ್ಷರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಭಾಗ್ಯಜ್ಯೋತಿ ಫಲಾನುಭವಿಗಳೂ ಇದ್ದಾರೆ. ಮಲ್ಲೇಶ್ವರ ಸ್ವಾಮಿ ದೇವಾಲಯದ ಬಳಿ ೪ ಬರಹವಿರುವ ವೀರಗಲ್ಲುಗಳಿವೆ. ಕೆಂಪಮ್ಮದೇವಿ, ಮಲ್ಲಿಕಾರ್ಜುನ ಸ್ವಾಮಿ, ಆಂಜನೇಯಸ್ವಾಮಿ ದೇವಾಲಯಗಳಿವೆ. ಯುಗಾದಿ ಹಾಗೂ ಶಿವರಾತ್ರಿ ನಂತರ ಜಾತ್ರೆ ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಲಿಂಗದೇವರು ಎಂಬುವವರು ಧಾರಾವಾಹಿ ನಿರ್ದೇಶಕರು ಮತ್ತು ನಿರ್ಮಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರಿಗೆ ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಗಳು ಸಂದಿವೆ. 'ಮೌನಿ', 'ಕಾಡ ಬೆಳದಿಂಗಳು', 'ನಾನು ಅವನಲ್ಲ ಅವಳು' ಮುಂತಾದ ಚಿತ್ರಗಳನ್ನು ನಿರ್ದೇಶಿಸಿದ್ದಾರೆ.

## ಬಿದರಕಟ್ಟೆ

ಬಿದರಕಟ್ಟೆ ಮುದ್ದೇನಹಳ್ಳಿ ಗ್ರಾಮದ ಮಜರೆ ಗ್ರಾಮ. ಇದು ತಾಲ್ಲೂಕು ಕೇಂದ್ರದಿಂದ ೭ ಕಿಮೀ ದೂರದಲ್ಲಿದೆ. ಇದೊಂದು ಸ್ಥಳಾಂತರಗೊಂಡ ಜನವಸತಿ ಆಗಿದೆ. ಮೂಲ ಊರು ಪ್ರಸ್ತುತ ಸೋಮೇಶ್ವರ ದೇವಾಲಯವಿರುವಲ್ಲಿ ಇತ್ತು. ಭೌಗೋಳಿಕ ವಿಸ್ತೀರ್ಣವು ಮುದ್ದೇನಹಳ್ಳಿಯ ಒಟ್ಟು ಭೌಗೋಳಿಕ ವಿಸ್ತೀರ್ಣವಾದ ೨೨೩೮.೨೦ ಎಕರೆಯಲ್ಲೇ ಸೇರಿದೆ. ಇದೊಂದು ಬಯಲುನಾಡಿನಲ್ಲಿ ಬರುವ ಗ್ರಾಮ. ಇಲ್ಲಿ ಬಿಳಿ ಕಲ್ಲು ಮತ್ತು ಬಿಳಿ ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಒಂದು ಕಲ್ಲು ಬಾವಿಯಿದೆ. ೨ ಕೈಪಂಪುಗಳು, ೧೦ ಕೊಳವೆ ಬಾವಿಗಳಿವೆ. ಬಿದರಕಟ್ಟೆ ಹಳ್ಳ ಮತ್ತು ಕರಲ ಹಳ್ಳ ಎಂಬ ೨ ಹಳ್ಳಗಳು ಹರಿಯುತ್ತವೆ.

ವೀರಶೈವರು ಪ್ರಧಾನ ಸಮುದಾಯವಾಗಿದೆ. ಮುಸಲ್ಮಾನರ ಒಂದು ಕುಟುಂಬ ಮಾತ್ರ ವಾಸವಿದೆ. ಮುಸಲ್ಮಾನರು ಉರ್ದು, ಉಳಿದವರೆಲ್ಲರೂ ಕನ್ನಡ ಮಾತನಾಡುತ್ತಾರೆ. ೨೦೧೧ರ ಜನಗಣತಿ ಪ್ರಕಾರ ಒಟ್ಟು ೮೭ ಜನಸಂಖ್ಯೆಯನ್ನು ಹೊಂದಿದೆ. ೧೧ ಮನೆಗಳಲ್ಲಿ ೨ ಕಾಂಕ್ರೀಟ್ ಮನೆಗಳು ಹಾಗೂ ಉಳಿದವು ಕಲ್ಲು ಹಾಗೂ ಮಣ್ಣು ಬಳಸಿ ಕಟ್ಟಿದ್ದಾರೆ. ಮೇಲ್ಛಾವಣಿಗೆ ಕಪ್ಪು ಹಾಗೂ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಒಂದು ಮನೆಗೆ ಶೀಟ್‌ನ್ನು ಹೊದಿಸಲಾಗಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಐದಾರು ಜನ ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮುದ್ದೇನಹಳ್ಳಿ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಶೇ.೮೦ ರಷ್ಟು ಸಾಕ್ಷರತೆ ಹೊಂದಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಸ್ವಲ್ಪ ದೂರದಲ್ಲಿ ಸೋಮೇಶ್ವರ, ಆಂಜನೇಯಸ್ವಾಮಿ ದೇವಾಲಯಗಳಿವೆ. ಶಿವರಾತ್ರಿಯಲ್ಲಿ ಪರೇವು ಹಾಗೂ ವಿಶೇಷ ಪೂಜೆಯನ್ನು ಸೋಮೇಶ್ವರ ದೇವರಿಗೆ ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಬಳ್ಳೇನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಸಬಾ ಹೋಬಳಿ ಹೊನ್ನೇಬಾಗಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೫ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೦೨೨.೨೦ ಹೆಕ್ಟೇರ್. ಕಳೆದ ಐದು ವರ್ಷಗಳಿಂದೀಚೆಗೆ ವಲಸೆ ಬಂದ ೫ ಕುಟುಂಬಗಳು ಇಲ್ಲಿವೆ. ಹಿಂದೆ ಕರಡಿ ಬುಳ್ಳಣ್ಣ ಎಂಬ ಕಾಡುಗೊಲ್ಲರ ವ್ಯಕ್ತಿ ವಾಸಿಸುತ್ತಿದ್ದನೆಂಬ ಕಾರಣದಿಂದ ಬುಳ್ಳೇನಹಳ್ಳಿಯಾಗಿದೆ. ಬಯಲುನಾಡಿಗೆ ಸೇರಿರುವ ಈ ಗ್ರಾಮದ ಸುತ್ತ ಬಿಳಿಕಲ್ಲು, ಬಿಳಿ-ಕೆಂಪು ಮಣ್ಣು ಕಂಡುಬರುತ್ತದೆ. ಸಮೀಪ ಅಬ್ಬಿಗೆ ಗುಡ್ಡ (ಮಲ್ಲೇಶ್ವರ ಗುಡ್ಡ)ವಿದೆ. ಸಾಮಾಜಿಕ ಅರಣ್ಯವಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ.

ಮಂಚಕಟ್ಟೆಹಳ್ಳ, ಚಿಕ್ಕಹಳ್ಳ, ಹಿಟ್ಟರಕಟ್ಟೆಹಳ್ಳ ಎಂಬ ಹಳ್ಳಗಳಿವೆ. ಒಂದು ಕಲ್ಯಾಣಿ ಇದೆ. ಅಂಬಳ್ಳಿಕಟ್ಟೆ, ಗಂಗಮ್ಮಜ್ಜಿಕಟ್ಟೆ, ಚಿಕ್ಕಟ್ಟೆ, ಸೊಪ್ಪಿನಗುಡ್ಡದ ಕಟ್ಟೆ ಎಂಬ ಕಟ್ಟೆಗಳಿವೆ. ೬ ಸಿಸ್ಟನ್‌ಗಳು, ೨೪ ನಲ್ಲಿಗಳ ಮೂಲಕ ಕುಡಿಯುವ ನೀರನ್ನು ಒದಗಿಸಲಾಗುತ್ತದೆ. ದನಿನ ಓಣಿ ಎಂಬ ಓಣಿಯಿದೆ. ೧೦೦ ಮನೆಗಳಲ್ಲಿ ೩ ಕಾಂಕ್ರೀಟ್ ಮನೆಗಳು, ೧ ಗುಡಿಸಲು ಉಳಿದವುಗಳನ್ನು ಕಲ್ಲು, ಇಟ್ಟಿಗೆ, ಮಣ್ಣು ಸೇರಿಸಿ ಕಟ್ಟಲಾಗಿದೆ. ಮೇಲ್ಛಾವಣಿಗೆ ಕಪ್ಪು ಹಾಗೂ ಕೆಂಪು ಹೆಂಚನ್ನು ಹೊದಿಸಲಾಗಿದೆ. ೫೪ ಮನೆಗಳು ಜನತಾ, ಆಶ್ರಯ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೧೮ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ನಾಯಕರು ದೊಡ್ಡ ಸಮುದಾಯವಾಗಿದ್ದು ವೀರಶೈವ, ಕುರುಬರು, ಒಡ್ಡರು, ಬೋವಿಗಳು, ಮುಸ್ಲಿಂ ಚಿಕ್ಕ ಸಮುದಾಯವಾಗಿದೆ. ೨೦೧೧ ರ ಜನಗಣತಿ ಪ್ರಕಾರ ೪೯೫ ಜನಸಂಖ್ಯೆಯನ್ನು ಹೊಂದಿದೆ. ಇಲ್ಲಿಯ ಜನ ಕನ್ನಡ ಮಾತನಾಡುತ್ತಾರೆ. ಮುಸ್ಲಿಮರು ಉರ್ದು ಭಾಷೆ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಎಳ್ಳು, ಹುಚ್ಚೆಳ್ಳು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಲಾರಿ, ಕಾರು ಹಾಗೂ ಬೈಕ್‌ಗಳಿವೆ. ಚಿಕ್ಕನಾಯಕನಹಳ್ಳಿಯಿಂದ ಕೊಂಡ್ಲಿಕ್ರಾಸ್‌ಗೆ ಹೋಗುವ ಜಿಲ್ಲಾ ಮುಖ್ಯರಸ್ತೆಯಿದೆ. ಶಿಕ್ಷಕರು, ಪೊಲೀಸ್ ಹಾಗೂ ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಗಣಿಗಾರಿಕೆಯಿದ್ದು ಮ್ಯಾಂಗನೀಸ್ ಅದಿರನ್ನು ಹೊರತೆಗೆಯಲಾಗುತ್ತದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಸಬಾ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಗ್ರಾಮದ ಇಬ್ಬರು ಗ್ರಾಮ ಪಂಚಾಯ್ತಿ ಸದಸ್ಯರು, ಒಬ್ಬರು ಗ್ರಾಮಪಂಚಾಯ್ತಿ ನೌಕರರಾಗಿದ್ದಾರೆ. ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಶ್ರೀಲಕ್ಷ್ಮಿ, ಶ್ರೀ ಭುವನೇಶ್ವರಿ, ಶ್ರೀ ಕರಿಯಮ್ಮ ಮುಂತಾದ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೇ.೭೮ ರಷ್ಟು ಸಾಕ್ಷರರಿದ್ದಾರೆ. ಸಂಚಾರಿ ವೈದ್ಯ ಸವಲತ್ತು ಇದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೩ ಫಲಾನುಭವಿಗಳಿದ್ದಾರೆ. ಚಿಕ್ಕ ಅಂಗಡಿಗಳಿವೆ. ಊರ ಮುಂಭಾಗದ ಅರಳಿಮರದ ಹತ್ತಿರ ಒಂದು ವೀರಗಲ್ಲು ಇದೆ. ಆಂಜನೇಯಸ್ವಾಮಿ, ಬಸವಣ್ಣ ದೇವರ ಗುಡಿಗಳಿವೆ. ಯುಗಾದಿ ಹಬ್ಬದ ತರುವಾಯ ಜಾತ್ರೆ ಮಾಡುತ್ತಾರೆ. ನೂರೊಂದೆಡೆ ಸೇವೆ, ಗಂಗಾಸ್ನಾನ, ಅನ್ನದಾಸೋಹ ಮಾಡಲಾಗುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಗ್ರಾಮದ ನಾಗರಾಜ, ಲಕ್ಕಣ್ಣ, ಮೋಹನ್‌ಕುಮಾರ್ ಎಂಬುವವರು ಭಜನೆ ಹಾಡುಗಳನ್ನು ಹಾಡುತ್ತಾರೆ. ಮಹಾಲಕ್ಷ್ಮಿ ಮಹಿಳಾ ಸಂಘ, ಅಬ್ಬಿಗೆ ಮಲ್ಲೇಶ್ವರ ಸಂಘ, ಧರ್ಮಸ್ಥಳ ಸಂಘ, ಕರ್ನಾಟಕ ಬೇಡ ವಾಲ್ಮೀಕಿ ನಾಯಕ ಜನಾಂಗದ ಕ್ಷೇಮಾಭಿವೃದ್ಧಿ ಸಂಘಗಳಿವೆ. ಬುಳ್ಳೇನಹಳ್ಳಿ ಪ್ರಕಾಶ್ ತಾಲ್ಲೂಕಿನ ಯುವ ರಾಜಕಾರಣಿಯಾಗಿ ಬೆಳೆಯುತ್ತಿದ್ದಾರೆ.

## ಬುಳ್ಳೇನಹಳ್ಳಿ ಗೊಲ್ಲರಹಟ್ಟಿ

ಬುಳ್ಳೇನಹಳ್ಳಿ ಗೊಲ್ಲರಹಟ್ಟಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೨೩ ಕಿಮೀ ದೂರದಲ್ಲಿದೆ. ಇದೊಂದು ಪೂರ್ಣವಾಗಿ ಕಾಡುಗೊಲ್ಲರ ಹಟ್ಟಿಯಾಗಿದೆ. ಇತ್ತೀಚೆಗೆ ಯಾದವರಹಟ್ಟಿ ಎಂತಲೂ ಕರೆಯುತ್ತಾರೆ. ಕಾಡುಗೊಲ್ಲ ಜನಾಂಗದ ೩೦ ಮನೆಗಳಿದ್ದು ೧೩೦ ಜನಸಂಖ್ಯೆ ಹೊಂದಿದೆ. ಇಲ್ಲಿನ ಮನೆಗಳು ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ೪ ಗುಡಿಸಲುಗಳೂ ಇವೆ. ಇಲ್ಲಿನ ಮನೆಗಳು ಸರ್ಕಾರದ ವಸತಿ ಯೋಜನೆಯಾದ ಜನತಾ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿದ್ದಾರೆ. ಹೊನ್ನೇಬಾಗಿ ಗ್ರಾಮ ಪಂಚಾಯ್ತಿ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ಹಾಗೂ ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿಗೆ ಸೇರಿದೆ. ನೀರನ್ನು ಗ್ರಾಮಪಂಚಾಯ್ತಿಯಿಂದ ಕೊಳವೆ ಬಾವಿಯ ಮೂಲಕ ಪೂರೈಸುತ್ತಾರೆ. ಒಂದು ಸಿಸ್ಟನ್ ಇದೆ. ಕೃಷಿ ಮುಖ್ಯ ಕಸುಬು. ಕುರಿ ಸಾಕಣೆ ಇದೆ. ರಾಗಿ, ಹೆಸರು, ಅವರೆ ಮುಖ್ಯ ಬೆಳೆಗಳು. ಅದರಂತೆ ತೆಂಗಿನ ತೋಟಗಾರಿಕೆಯೂ ಇದ್ದು ಕೊಬ್ಬರಿ, ತೆಂಗಿನ ಮಟ್ಟೆ ವ್ಯಾಪಾರಿ ಸರಕಾಗಿದೆ. ಶಿಕ್ಷಣ, ಪಡಿತರಕ್ಕೆ ಬುಳ್ಳೇನಹಳ್ಳಿಗೆ

ಹೋಗುತ್ತಾರೆ. ಇದೊಂದು ಶೌಚಾಲಯ ರಹಿತ ಗ್ರಾಮವಾಗಿದೆ.

ಗ್ರಾಮದಲ್ಲಿ ಆಂಜನೇಯ, ಬಸವಣ್ಣ ದೇವರ ಜಾತ್ರೆಯಲ್ಲಿ ಗೊಲ್ಲರಹಟ್ಟಿಯ ಜನರ ಭಾಗವಹಿಸುವಿಕೆ ಮುಖ್ಯವಾಗಿರುತ್ತದೆ. ಚಿತ್ರದೇವರ ಪೌಳಿಯಿದ್ದು ದೀಪಾವಳಿಯಲ್ಲಿ ಏಳು ದಿನಗಳ ಕಾಲ ದೀಪ ಏರಿಸುವ ಹಬ್ಬ ಎಂದು ವಿಶೇಷವಾಗಿ ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಕೋಲಾಟ, ಸೋಬಾನೆ ಹಾಡುಗಾರಿಕೆ ಇರುತ್ತದೆ. ರಾಗಿಮುದ್ದೆ ಮುಖ್ಯ ಆಹಾರ. ಪಾಯಸ, ಬಾಡೂಟ ವಿಶೇಷ ಸಾಂದರ್ಭಿಕ ಭೋಜನ. ಗಾಡಿ ಇದೆ. ದ್ವಿಚಕ್ರ ವಾಹನದ ಬಳಕೆಯೂ ಇದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನದ ೨೧ ಫಲಾನುಭವಿಗಳಿದ್ದಾರೆ. ಯುಗಾದಿ, ದೀಪಾವಳಿ, ದಸರಾ ಹಬ್ಬಗಳನ್ನು ಆಚರಿಸುತ್ತಾರೆ. ಕುರಿಯೊಂದಿಗೆ ಹುಲ್ಲು ನೀರಿಗಾಗಿ ವಲಸೆ ಹೋಗುವುದು ವಾಡಿಕೆಯಾಗಿದೆ.

## ಭಾವನಹಳ್ಳಿ

ಭಾವನಹಳ್ಳಿಯು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹೊನ್ನೇಬಾಗಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೩ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೩೭೪.೧೭ ಚ.ಕಿ.ಮೀ. ದಿಬ್ಬದಹಳ್ಳಿ ಹಾಗೂ ಕೋಡಿಹಳ್ಳಿಗಳು ಮಜರೆ ಗ್ರಾಮಗಳಾಗಿವೆ. ಆರಂಭದಲ್ಲಿ ೨ ಮನೆಗಳಿದ್ದು ದೂರದ ಹಳ್ಳಿಯಿಂದ ಹೆಣ್ಣು ತಂದಾಗ ಅವರು ಹೆಣ್ಣಿನ ಕಡೆಯವರು ಭಾವನ ಮನೆ, ಭಾವನ ಊರು ನಂತರ ಭಾವನಹಳ್ಳಿಯಾಗಿದೆ ಎಂದು ಹಿರಿಯರು ಹೇಳುತ್ತಾರೆ. ಬಯಲುನಾಡಿಗೆ ಸೇರುವ ಈ ಗ್ರಾಮದ ಸುತ್ತ ಬಿಳಿ ಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಗ್ರಾಮದ ಪೂರ್ವ ದಿಕ್ಕಿನಲ್ಲಿ ಆದಿಕಲ್ಲು ಗುಡ್ಡ, ಸಪ್ಪಿನಕಲ್ಲುಗುಡ್ಡ, ಅರೆಕಲ್ಲು ಗುಡ್ಡ ಎಂಬ ೩ ಗುಡ್ಡಗಳು ಕಂಡುಬರುತ್ತವೆ. ಬಿಳಿ ಬಳಪದಕಲ್ಲು ಇಲ್ಲಿ ದೊರೆಯುತ್ತದೆ. ಸಾಮಾಜಿಕ ಅರಣ್ಯ ಇದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ៩೫೮.೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಸುತ್ತ ದೇವರಹಳ್ಳ, ಹೊಂಗೆಹಳ್ಳ, ಕಾರೆಕಲ್ಲಹಳ್ಳಗಳು ಹರಿಯುತ್ತವೆ. ೩ ತೆರೆದ ಬಾವಿಗಳಿವೆ. ನೀರಾವರಿಗಾಗಿ ಕೊಳವೆ ಬಾವಿಗಳನ್ನು ಆಶ್ರಯಿಸಿದ್ದಾರೆ. ಹೊಸಕೆರೆ, ದುರ್ಗದಕೆರೆ ಎಂಬ ೨ ಕೆರೆಗಳಿವೆ. ಕುಡಿಯುವ ನೀರಿಗಾಗಿ ೬ ಸಿಸ್ಟನ್‌ಗಳನ್ನು ಇಡಲಾಗಿದೆ.

೨೦೧೧ರ ಜನಗಣತಿ ಪ್ರಕಾರ ೨೮೪ ಜನಸಂಖ್ಯೆಯುಳ್ಳ ಈ ಗ್ರಾಮದಲ್ಲಿ ಬಲಜಿಗ ಜನಾಗದವರೇ ದೊಡ್ಡ ಸಮುದಾಯ. ಅಲ್ಲದೆ ಆದಿಕರ್ನಾಟಕ, ಲಂಬಾಣಿ, ಲಿಂಗಾಯಿತ, ಕುರುಬ, ನಾಯಕ ಮುಂತಾದ ಸಣ್ಣ ಸಮುದಾಯಗಳಿವೆ. ಎಲ್ಲರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ೬೬ ಮನೆಗಳಿವೆ. ೩ ಕಾಂಕ್ರೀಟ್ ಮನೆಗಳು ಉಳಿದವು ಮಣ್ಣು ಹಾಗೂ ಕಲ್ಲಿನಿಂದ ಕಟ್ಟಲಾಗಿದೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚುಗಳನ್ನು ಹಾಗೂ ಮಂಗಳೂರಿನ ಕೆಂಪುಹೆಂಚನ್ನು ಬಳಸಲಾಗಿದೆ. ಆಶ್ರಯ, ಜನತಾ ವಸತಿ ಯೋಜನೆಯ ೨೪ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ನಂದಿನಿ ಡೈರಿಯಿದೆ. ಕೆರೆಯಲ್ಲಿ ನೀರು ತುಂಬಿದಾಗ ಮೀನು ಸಾಕಣೆ ಮಾಡುತ್ತಾರೆ. ಕೊಬ್ಬರಿ, ಅಡಿಕೆ ಇಲ್ಲಿನ ವ್ಯಾಪಾರಿ ಸರಕಾಗಿದೆ. ಹೋಮಿಯೋಪತಿ ವೈದ್ಯರಿದ್ದಾರೆ. ಶಿಕ್ಷಕರು, ಬೆಂಗಳೂರಿನ ಕಂಪನಿಯಲ್ಲಿ ಕೆಲಸ ಮಾಡುವವರು ಇದ್ದಾರೆ. ಇಟ್ಟಿಗೆ ಫ್ಯಾಕ್ಟರಿ, ಒಂದು ಕೋಳಿಫಾರಂ ಇದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಸಬಾ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮಾಳಿಗೆಹಳ್ಳಿ ತಾಲ್ಲೂಕು ಪಂಚಾಯ್ತಿ, ಹೊನ್ನೇಬಾಗಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ರಸ್ತೆ ಮಾರ್ಗವಿದೆ. ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಶ್ರೀಲಕ್ಷ್ಮಿ ಸ್ತ್ರೀಶಕ್ತಿ ಸಂಘವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ,

ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೬ ಫಲಾನುಭವಿಗಳಿದ್ದಾರೆ. ಲಕ್ಕಮ್ಮದೇವಿ ವೀರಗಲ್ಲು ಇದೆ. ನಿರ್ವಾಣೇಶ್ವರ, ದುರ್ಗಮ್ಮದೇವಿ ಮಂದಿರ ಎಂಬ ದೇವಸ್ಥಾನಗಳಿವೆ. ಏಪ್ರಿಲ್ ತಿಂಗಳಿನಲ್ಲಿ ನಿರ್ವಾಣಸ್ವಾಮಿ ಜಾತ್ರೆ ಮಾಡುತ್ತಾರೆ. ಕೆಂಡ ಹಾಯುವುದು ಜಾತ್ರೆಯ ವಿಶೇಷ. ಮಾರಿಕಾಂಬಾ ಸುಜಲಾ ಸ್ವಸಹಾಯ ಸಂಘ, ಗ್ರಾಮೀಣ ಕೂಟ, ಧರ್ಮಸ್ಥಳ ಸಂಘ ಇತ್ಯಾದಿಗಳು ಅಸ್ತಿತ್ವದಲ್ಲಿವೆ. ತಿಪಟೂರು-ಚಿಕ್ಕನಾಯಕನಹಳ್ಳಿ ಕಡೆಗೆ ರಸ್ತೆ ಸಂಪರ್ಕ ಹೊಂದಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಭದ್ರಯ್ಯನಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೩೬ ಕಿಮೀ ಅಂತರದಲ್ಲಿದೆ. ಗಾಣದಾಳು ಕಂದಾಯ ಗ್ರಾಮಕ್ಕೆ ಸೇರಿದ ಮಜರೆ ಗ್ರಾಮ. ಭದ್ರಯ್ಯ ಎಂಬ ವ್ಯಕ್ತಿಮೂಲದಿಂದಾಗಿ ಗ್ರಾಮಕ್ಕೆ ಭದ್ರಯ್ಯನಪಾಳ್ಯ ಎಂದು ಹೆಸರು ಬಂದಿದೆ. ಭೌಗೋಳಿಕ ವಿಸ್ತೀರ್ಣ ೧೩೧ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಕಪ್ಪು ಮಿಶ್ರಿತ ಮರಳು ಮಣ್ಣಿನಿಂದ ಕೂಡಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ವೀರಶೈವರು ದೊಡ್ಡ ಸಮುದಾಯವಾಗಿದ್ದು ನಾಯಕರು, ಆದಿಕರ್ನಾಟಕ ಕಿರು ಸಮುದಾಯವಾಗಿದೆ. ಒಟ್ಟು ೩೧ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೬೨ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೬ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೧೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಸಾವೆ, ಹಾರಕ, ನವಣೆ ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಹುಣಸೆಹಣ್ಣು ವ್ಯಾಪಾರಿ ಸರಕಾಗಿದೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸಾರಿಗೆ, ಶಿಕ್ಷಣ ಇಲಾಖೆಯಲ್ಲಿ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಟ್ರ್ಯಾಕ್ಟರ್ ಡ್ರೈವರ್ ಇದ್ದಾರೆ. ಶಿಕ್ಷಣ, ಪಡಿತರಕ್ಕೆ ಗಾಣದಾಳು ಗ್ರಾಮದಿಂದ ಪಡೆದುಕೊಳ್ಳುತ್ತಾರೆ. ೧೬ ಪಂಪ್‌ಸೆಟ್ ಬೋರ್‌ವೆಲ್‌ಗಳಿದ್ದು ಕೃಷಿಗೆ ಅನುಕೂಲವಾಗಿದೆ. ಗ್ರಾಮದ ಸಾಕ್ಷರತೆ ೬೭% ರಷ್ಟಿದೆ. ಖಾಸಗಿ ವಕೀಲರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ರಂಗನಾಥ, ಈಶ್ವರ ದೇವಾಲಯಗಳಿಗೆ ನಡೆದುಕೊಳ್ಳುತ್ತಾರೆ. ದಸರಾ ಹಬ್ಬದಂದು ವಿಶೇಷ ಪೂಜೆ, ಉತ್ಸವ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಹುಳಿಯಾರು-ಸಿರಾ ಕಡೆ ರಸ್ತೆ ಮಾರ್ಗವಿದ್ದು ಬಸ್ ಸಂಚಾರವಿದೆ. ಬೋರನಕಣಿವೆ ತುಂಬಿದರೆ ಈ ಗ್ರಾಮಕ್ಕೆ ಸೇರಿದ ಗದ್ದೆಯಲ್ಲಿ ವಿಶೇಷವಾಗಿ ಬೆಳೆ ಬೆಳೆಯುತ್ತಾರೆ.

## ಬಸವಣ್ಣನ ಗುಡಿ

ಬಸವಣ್ಣನ ಗುಡಿ ಹೊಸದಾಗಿ ನಿರ್ಮಾಣವಾಗಿರುವ ಜನವಸತಿ ಪ್ರದೇಶ. ಇದು ಕಾಡೇನಹಳ್ಳಿಯ ಉಪಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ ೨೭೪.೩೮ ಹೆಕ್ಟೇರ್ ಮುಖ್ಯ ಗ್ರಾಮದೊಂದಿಗೆ ಹಂಚಿಕೆಯಾಗಿದೆ.

ಕಾಡೇನಹಳ್ಳಿಯ ಹೊರಾಂಗಣದಲ್ಲಿದ್ದ ಬಸವೇಶ್ವರ ದೇವಸ್ಥಾನದ ಸಮೇತ ಕೆಲವು ಜನವಸತಿ ಮನೆಗಳು ರಚನೆಯಾದುದರಿಂದಾಗಿ ಬಸವಣ್ಣನ ಗುಡಿ ಎಂದೇ ಕರೆಯುತ್ತಾರೆ. ಕೆಂಪು-ಬಿಳಿ ಮಿಶ್ರಿತ ಭೂಪ್ರದೇಶವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕುಡಿಯಲು ಕಾಡೇನಹಳ್ಳಿ ಮೂಲಗ್ರಾಮದ ಕೊಳವೆ ಬಾವಿ ಮೂಲಕ ನೀರು ಪೂರೈಕೆಯಾಗುತ್ತದೆ. ಒಂದು ಸಿಸ್ಟನ್ ಇದೆ. ಒಂದು ಕೆರೆಯಿದ್ದು ಮಳೆಯಾಶ್ರಿತವಾಗಿದೆ.

ದೇವಾಂಗ, ಲಿಂಗಾಯಿತರು ದೊಡ್ಡ ಸಮುದಾಯ. ಆದಿಕರ್ನಾಟಕ, ಮಡಿವಾಳ ಕಿರು ಸಮುದಾಯವಾಗಿದೆ. ೨೩ ಮನೆಗಳಿದ್ದು ಶಿಕ್ಷಣ, ಪಡಿತರ ವಿಷಯಗಳಿಗೆ ಮುಖ್ಯಗ್ರಾಮಕ್ಕೆ ಬರಬೇಕಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಸೀಗೆಬಾಗಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಗ್ರಾಮದ ಸಾಕ್ಷರತೆ ೬೨% ರಷ್ಟಿದೆ. ಸೀಗೆಬಾಗಿಯಿಂದ ಅಂಚೆ ಸಂಪರ್ಕ ಕಲ್ಪಿಸಿದೆ. ಚಿಕ್ಕನಾಯಕನಹಳ್ಳಿಯಿಂದ ಬಸ್ ಸಂಪರ್ಕ ಕಲ್ಪಿಸಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಬೊಮ್ಮೇನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ದೊಡ್ಡ ಎಣ್ಣೆಗೆರೆ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೪೮ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೩೨೦.೮೬ ಹೆಕ್ಟೇರ್. ಬಿಳಿಕಲ್ಲು, ಕೆಂಪು ಮಣ್ಣನ್ನು ಹೊಂದಿದೆ. ಬೊಮ್ಮಣ್ಣ ಎಂಬ ವ್ಯಕ್ತಿಮೂಲದಿಂದ ಗ್ರಾಮಕ್ಕೆ ಬೊಮ್ಮನಹಳ್ಳಿ > ಬೊಮ್ಮೇನಹಳ್ಳಿ ಎಂದಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ೧ ಹಳ್ಳ, ೨ ತೆರೆದ ಬಾವಿ, ೮೦ ಕೊಳವೆ ಬಾವಿಗಳು, ೧ ಕೆರೆ, ೪ ಕುಂಟೆಗಳು, ೫ ಮಿನಿ ವಾಟರ್ ಟ್ಯಾಂಕ್‌ಗಳ ಮೂಲಕ ಹಾಗೂ ಕೈಪಂಪುಗಳ ಮೂಲಕ ಗ್ರಾಮಕ್ಕೆ ನೀರು ಒದಗಿಸಲಾಗುತ್ತದೆ.

ಲಿಂಗಾಯಿತ ಸಮುದಾಯವೇ ಅಧಿಕ ಸಂಖ್ಯೆಯಲ್ಲಿದ್ದು ನಾಯಕ, ಬೋವಿ, ಆದಿಕರ್ನಾಟಕ, ಆದಿದ್ರಾವಿಡ ಸಮುದಾಯದವರಿದ್ದಾರೆ. ಕನ್ನಡ ಪ್ರಧಾನ ಭಾಷೆಯಾಗಿ ತೆಲುಗು ನಂತರದ ಭಾಷೆಯಾಗಿ ಬಳಕೆಯಲ್ಲಿದೆ. ೧೭೪ ಮನೆಗಳಿದ್ದು ೧೩೦ ಹೆಂಚಿನ, ೧೦ ಕಾಂಕ್ರೀಟ್, ೨೦ ಕಲ್ಲಿನ, ೪ ಮಣ್ಣಿನ ಮನೆಗಳು ಹಾಗೂ ೧೦ ಗುಡಿಸಲುಗಳಿವೆ. ಇವುಗಳಲ್ಲಿ ೨೦ ಆಶ್ರಯ, ೧೦ ಜನತಾ, ೧೦ ಅಂಬೇಡ್ಕರ ವಸತಿ ಯೋಜನೆಯ ಮನೆಗಳಾಗಿವೆ. ಒಂದು ವಸತಿ ರಹಿತ ಮತ್ತು ೨ ನಿವೇಶನ ರಹಿತ ಕುಟುಂಬಗಳಿವೆ. ೭೪ ಮನೆಗಳಲ್ಲಿ ಶೌಚಾಲಯವಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ

ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

೨೦೧೧ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೪೫೦. ಸಾಕ್ಷರತಾ ಪ್ರಮಾಣ ೬೯% ರಷ್ಟಿದೆ. ಆಧುನಿಕ ಡೈರಿ ಹೊಂದಿದೆ. ಕೃಷಿಕರು, ಕೃಷಿ ಕೂಲಿಗಾರರು, ಬಡಿಗೇರರು ಇದ್ದಾರೆ. ೩ ಹಿಟ್ಟಿನ ಗಿರಣಿಗಳಿವೆ. ೧೦ ಜನ ಸರ್ಕಾರಿ ನೌಕರರಿದ್ದಾರೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದೊಡ್ಡ ಎಣ್ಣೆಗೆರೆ ತಾಲ್ಲೂಕು ಪಂಚಾಯ್ತಿ ಮತ್ತು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರು ಮತ್ತು ಒಬ್ಬರು ಗ್ರಾಮ ಪಂಚಾಯ್ತಿ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ವ್ಯವಸ್ಥಿತವಾದ ರಾಜ್ಯ ಹಾಗೂ ಜಿಲ್ಲಾ ರಸ್ತೆಗಳಿವೆ. ಚರದೂರವಾಣಿಗಳಿವೆ.

ಹಾಲು ಉತ್ಪಾದಕರ ಸಹಕಾರ ಸಂಘ, ಮಹಿಳಾ ಸ್ವಸಹಾಯ ಸಂಘಗಳು, ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘ ಮತ್ತು ಕರಿಯಮ್ಮ ಸ್ತ್ರೀಶಕ್ತಿ ಸಂಘಗಳಿವೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಕರ್ಯ ಜಾರಿಯಲ್ಲಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೩ ಅಂಗಡಿಗಳಿವೆ. ವೀರಗಲ್ಲು ಇದೆ. ೧೨ ನೇ ಶತಮಾನದಲ್ಲಿ ಪಾಳೆಗಾರಿಕೆಗೆ ಒಳಪಟ್ಟ ಗ್ರಾಮ ಎಂಬುದಕ್ಕೆ ಹಂಪಣ್ಣ ಕವಿಯು ರಚಿಸಿದ ಕಾವ್ಯವು ದೊರೆತಿದೆ. ಊರಿನ ಕೆರೆಯ ಪಕ್ಕ ದೊರೆತ ಶಿಲಾಶಾಸನವು ಇದಕ್ಕೆ ಪುಷ್ಟಿ ನೀಡುತ್ತದೆ. ಹಂಪನ ಪಟ್ಟಿಗಳು ಎಂಬ ಒಂದು ಪ್ರಾಚೀನ ಬಾವಿಯು ಊರ ಮುಂಭಾಗದಲ್ಲಿದೆ. ಇದಕ್ಕೆ ಮಧ್ಯರಾತ್ರಿಯಲ್ಲಿ ಪೂಜೆ ಮಾಡಿದರೆ ಸಕಲ ಇಷ್ಟಾರ್ಥಗಳು ಲಭ್ಯವಾಗುತ್ತವೆಂದು ನಂಬುತ್ತಾರೆ.

ಹಂಪಣ್ಣನ, ಈಶ್ವರನ, ಆಂಜನೇಯನ ಮತ್ತು ಮಾರಮ್ಮನ ದೇವಾಲಯಗಳಿವೆ. ಆಂಜನೇಯಸ್ವಾಮಿಯ ಜಾತ್ರೆಯನ್ನು ಆಚರಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗ್ರಾಮದ ಶಿವಲಿಂಗಯ್ಯ ರಂಗಭೂಮಿ ಕಲಾವಿದರಾಗಿದ್ದಾರೆ.

## ಮಂಚೀಕಟ್ಟೆ

ಮಂಚೀಕಟ್ಟೆ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೨ ಕಿಮೀ ದೂರದಲ್ಲಿದೆ. ಇದು ಕಂದಾಯಗ್ರಾಮವಾಗಿದ್ದು ಇದರ ಕೃಷಿಭೂಮಿ ೨೧೨ ಹೆಕ್ಟೇರ್ ಹೊಂದಿದೆ. ಮಂಚಿಕಟ್ಟೆ ಎಂಬ ಕೆರೆ ಮೂಲದಿಂದ  ಗ್ರಾಮಕ್ಕೆ ಇದೇ ಹೆಸರು ನಿಂತಿದೆ. ಇದೊಂದು ಬಯಲುನಾಡಿನ ಭೂ ಪ್ರದೇಶವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು  ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಇಲ್ಲಿ ೫೯೮.೩ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೯ ಡಿಗ್ರಿ ಹಾಗೂ ಬಿಸಿಲು ೩೦ ಡಿಗ್ರಿ ಸರಾಸರಿ ಇದೆ. ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುರುಬರು, ನಾಯಕರು, ಅಗಸರು ಕಂಡುಬರುತ್ತಾರೆ ಇವರ ಮಾತೃಭಾಷೆ ಕನ್ನಡವಾಗಿದೆ. ಇಲ್ಲಿನ ಮನೆಗಳು ಕಲ್ಲಿನ, ಹೆಂಚಿನ ಸ್ವರೂಪದಲ್ಲಿದ್ದು ಇವು ಸರ್ಕಾರದ ವಸತಿ ಯೋಜನೆಗಳಾದ ಜನತಾ, ಆಶ್ರಯ ಯೋಜನೆಯ ೪ ಫಲಾನುಭವಿಗಳಿದ್ದಾರೆ. ೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಒಟ್ಟು ೧೩ ಮನೆಗಳಿದ್ದು ೬೭ ಜನಸಂಖ್ಯೆ ಹೊಂದಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಾಕುವಳ್ಳಿ

ಮಾಕುವಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೨ ಕಿಮೀ ದೂರದಲ್ಲಿದೆ. ಇದೊಂದು ಕಂದಾಯ ಗ್ರಾಮವಾಗಿದ್ದು ಮಾಕುವಳ್ಳಿ ಗೊಲ್ಲರಹಟ್ಟಿ, ಮಾಕುವಳ್ಳಿ ಪಾಳ್ಯ ಎಂಬ ಎರಡು ಮಜರೆ ಗ್ರಾಮಗಳನ್ನು ಹೊಂದಿದೆ. ಇದರ ಭೌಗೋಳಿಕ ವಿಸ್ತೀರ್ಣ ೨೪೭ ಹೆಕ್ಟೇರ್ ಹೊಂದಿದೆ. ಬಯಲು ಪ್ರದೇಶ. ತೆಂಗಿನ ತೋಟ ಸಾಲುಗಳಿವೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು  ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಕೊಳವೆ ಬಾವಿಗಳ ಮೂಲಕ ನೀರು ಪೂರೈಸುತ್ತಾರೆ. ನಲ್ಲಿ ಹಾಗೂ ೧೫೦೦ ಲೀ. ಸಾಮರ್ಥ್ಯದ ನೀರಿನ ಟ್ಯಾಂಕ್ ಇದೆ. ಕೃಷಿಗಾಗಿ ರೈತರು ೭೫ ಬೋರ್‌ವೆಲ್ ಕೊರೆಸಿಕೊಂಡಿದ್ದಾರೆ. ವೀರಶೈವರು ದೊಡ್ಡ ಸಮುದಾಯವಾಗಿದ್ದು ಕುರುಬರು, ಕುಂಬಾರ, ಅಕ್ಕಸಾಲಿಗ, ಬೆಸ್ತ, ಬೇಡ, ಉಪ್ಪಾರ, ಆದಿಕರ್ನಾಟಕ ಕಿರು ಸಮುದಾಯವಾಗಿದೆ. ಎಲ್ಲರೂ ಕನ್ನಡ ಮಾತನಾಡುತ್ತಾರೆ. ೧೭೬ ಮನೆಗಳಿದ್ದು ೨೦೧೧ ರ ಜನಗಣತಿ ಪ್ರಕಾರ ೮೧೬ ಜನಸಂಖ್ಯೆ ಹೊಂದಿದೆ. ಇಲ್ಲಿಯ ಮನೆಗಳು ಕಲ್ಲಿನ, ಹೆಂಚಿನ, ಶೀಟಿನ ಕಪ್ಪು ಹೆಂಚಿನ, ಮಾಳಿಗೆ ಸ್ವರೂಪದಲ್ಲಿದ್ದು ಕೆಲವರು ಜನತಾ, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೧೦೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಟ್ರ್ಯಾಕ್ಟರ್, ಟೆಂಪೋ, ಕಾರು ಹಾಗೂ ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ. ಮೊಬೈಲ್ ಬಳಕೆಯಿದೆ. ಕೆಮ್ಮು, ನೆಗಡಿ, ಜ್ವರ ಈ ತರಹದ ಸಾಮಾನ್ಯ ಖಾಯಿಲೆಗಳಿಗೆ ಸ್ಥಳೀಯವಾಗಿ ಚಿಕಿತ್ಸೆ ಪಡೆಯುತ್ತಾರೆ. ಹೆಚ್ಚಿನ ಚಿಕಿತ್ಸೆಗೆ ಶೆಟ್ಟಿಕೆರೆ, ಚಿಕ್ಕನಾಯಕನಹಳ್ಳಿಗೆ ಹೋಗುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯ್ತಿ ಕ್ಷೇತ್ರವಾಗಿದ್ದು ಸ್ಥಳೀಯವಾಗಿ ಇಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಶೆಟ್ಟಿಕೆರೆಯಿಂದ ಅಂಚೆ ಸಂಪರ್ಕವಿದೆ. ೪ ಸ್ತ್ರೀಶಕ್ತಿ ಸಂಘಗಳಿವೆ. ೨ ಧರ್ಮಸ್ಥಳ ಸ್ವಸಹಾಯ ಗುಂಪುಗಳಿವೆ. ಇವು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪ್ರೇರಕವಾಗಿವೆ. ಶಿಕ್ಷಣ, ಸಾರಿಗೆ, ಕಂದಾಯ, ಆರೋಗ್ಯ ಇಲಾಖೆಗಳಲ್ಲಿ ೨೩ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವಕೀಲರು, ಇಂಜಿನಿಯರ್ ಇದ್ದಾರೆ. ಕೂಲಿ ಕಾರ್ಮಿಕರಿದ್ದಾರೆ.

ಸರ್ಕಾರಿ ಪ್ರಾಥಮಿಕ ಪಾಠಶಾಲೆಯಿದ್ದು ಮಕ್ಕಳಿಗೆ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಸೌಕರ್ಯವಿದೆ. ಗ್ರಾಮದ ಸಾಕ್ಷರತೆ ೭೯% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಈಶ್ವರ, ಮಾರಮ್ಮ ದೇವಸ್ಥಾನಗಳಿದ್ದು ಮಾರಮ್ಮನ ಊರಹಬ್ಬ ಆಚರಿಸುತ್ತಾರೆ. ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಈಶ್ವರ ದೇವರ ಉತ್ಸವ ದಸರಾ ಹಬ್ಬದಂದು ನಡೆಯುತ್ತದೆ. ಶಿವರಾತ್ರಿ ಭಜನೆ, ಪರೇವು ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಚಿಕ್ಕನಾಯಕನಹಳ್ಳಿ-ಶೆಟ್ಟಿಕೆರೆ ಮಾರ್ಗವಾಗಿ ಬಸ್ ಸಂಪರ್ಕವಿದೆ. ನ್ಯಾಯಬೆಲೆ ಅಂಗಡಿ ಇದೆ.

## ಮೈಸೂರಪ್ಪನಪಾಳ್ಯ

ಮೈಸೂರಪ್ಪನಪಾಳ್ಯ ಗ್ರಾಮವು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿಯಲ್ಲಿದ್ದು ಮಲ್ಲಿಗೆರೆ ಗ್ರಾಮ ಪಂಚಾಯ್ತಿಗೆ ಸೇರಿದ ಮಜರೆ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೨೫ ಕಿಮೀ ದೂರದಲ್ಲಿದೆ. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೨೬೧.೮೬ ಹೆಕ್ಟೇರ್. ಇದೊಂದು ಬಯಲು ಪ್ರದೇಶ. ೨೦೦ ಎಕರೆ ಮಾವು ಕೃಷಿಗೆ ಯೋಗ್ಯವಾದ ಕಪ್ಪು ಮಿಶ್ರಿತ ಕೆಂಪುಮಣ್ಣನ್ನು ಮಾತ್ರ ಹೊಂದಿದ್ದು ಇಲ್ಲಿನ ರೈತರು ಹೆಚ್ಚಾಗಿ ರಾಗಿ, ಅವರೆ, ಹೆಸರು, ತೆಂಗು, ಅಡಿಕೆ, ತರಕಾರಿಗಳನ್ನು ಮಾತ್ರ ಬೆಳೆಯುವಲ್ಲಿ ನಿರತರಾಗಿದ್ದಾರೆ.

೧೮ನೇ ಶತಮಾನದಲ್ಲಿ ಮೈಸೂರಿನಿಂದ ಒಂದು ಮನೆತನದವರು ಇಲ್ಲಿಗೆ ಬಂದು ನೆಲೆಸಿ ಇಲ್ಲಿಯೇ ಒಂದು ಪುಟ್ಟ ಹಳ್ಳಿಯನ್ನು ಕಟ್ಟಿದರೆಂದು, ಅವರ ನೆನಪಾಗಿ ಈ ಗ್ರಾಮಕ್ಕೆ ಮೈಸೂರಪ್ಪನಪಾಳ್ಯ ಎಂಬ ಹೆಸರು ಬರಲು ಕಾರಣವಾಗಿದೆ. ಈ ಮನೆತನದವರು ಈಗಲೂ ಈ ಗ್ರಾಮದಲ್ಲಿಯೇ ನೆಲೆಯೂರಿದ್ದಾರೆ. ವೀರಶೈವ ಲಿಂಗಾಯಿತರು ದೊಡ್ಡ ಸಮುದಾಯದಲ್ಲಿದ್ದು ಮುಸ್ಲಿಂ ಜನಾಂಗ ಕಿರು ಸಮುದಾಯದವರಾಗಿದ್ದಾರೆ. ಕನ್ನಡ, ಉರ್ದು ಭಾಷೆಯನ್ನು ಮಾತನಾಡಲು ಬಳಸುತ್ತಾರೆ. ೬೦ ಮನೆಗಳಿದ್ದು ಕಾಂಕ್ರೀಟ್ ಮನೆ ಒಂದೆರಡು ಮಾತ್ರ ಉಳಿದ ಮನೆಗಳು ಹೆಂಚಿನ ಮನೆಗಳಾಗಿವೆ. ಆಶ್ರಯ, ಜನತಾ, ಇಂದಿರಾ ಆವಾಸ್

ಯೋಜನೆಯ ೧೪ ಮನೆಗಳಿವೆ. ಆಧುನಿಕ ಉದ್ಯೋಗದಲ್ಲಿ ಒಂದು ಹಿಟ್ಟಿನ ಗಿರಣಿಯಿದೆ. ಒಂದು ಚಿಕ್ಕ ಅಂಗಡಿಯಿದ್ದು ೬ ಮಂದಿ ಸರ್ಕಾರಿ ನೌಕರರಿದ್ದಾರೆ. ಬಸವೇಶ್ವರ ದೇವಾಲಯವಿದೆ.

ತುಮಕೂರು ಲೋಕಸಭಾ ಕ್ಷೇತ್ರ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ಹಂದನಕೆರೆ ಜಿಲ್ಲಾ ಪಂಚಾಯತ್ ಕ್ಷೇತ್ರ, ಮತ್ತಿಘಟ್ಟ ತಾಲ್ಲೂಕು ಪಂಚಾಯತ್ ಕ್ಷೇತ್ರ ಹೊಂದಿದ್ದು ಮಲ್ಲಿಗೆರೆ ಗ್ರಾಮ ಪಂಚಾಯ್ತಿಗೆ ಸೇರಿದ ಮಜರೆ ಗ್ರಾಮ. ತೆರೆದ ಚರಂಡಿಗಳಿದ್ದು ಸಮರ್ಪಕ ಕಚ್ಚಾ ರಸ್ತೆಗಳಿವೆ. ಕುಡಿಯುವ ನೀರಿಗೆ ಮಲ್ಲಿಗೆರೆಯ ಗ್ರಾಮಪಂಚಾಯ್ತಿಗೆ ಸೇರಿದೆ ಮಿನಿ ವಾಟರ್ ಟ್ಯಾಂಕ್ ಗಳನ್ನು ನೆಚ್ಚಿಕೊಳ್ಳಬೇಕಾಗಿದೆ. ಸ್ತ್ರೀಶಕ್ತಿ ಸಂಘಗಳು ಹಾಗೂ ಧರ್ಮಸ್ಥಳ ಗ್ರಾಮೀಣ ಸಂಘಗಳು ಕಾರ್ಯನಿರ್ವಹಿಸಬೇಕಾಗಿದೆ.

೨೦೧೧ ರ ಜನಗಣತಿಯಂತೆ ಒಟ್ಟು ಜನಸಂಖ್ಯೆ ೧೮೫ ಮಂದಿ. ಒಟ್ಟು ಸಾಕ್ಷರತೆಯ ಪ್ರಮಾಣ ೭೮% ಆಗಿದೆ. ಹೈನುಗಾರಿಕೆಯಲ್ಲಿ ಆಧುನಿಕ ಡೈರಿಯಿದೆ. ಮೀನುಗಾರಿಕೆ, ವ್ಯಾಪಾರ ಕೇಂದ್ರಗಳಿರುವುದಿಲ್ಲ. ಸರ್ಕಾರಿ ನೌಕರರು ೬ ಜನರಿದ್ದಾರೆ. ೨ ಆಧುನಿಕ ಹಿಟ್ಟಿನ ಗಿರಣಿಗಳಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಅಕ್ಷರ ದಾಸೋಹ, ಕ್ಷೀರಭಾಗ್ಯ ಯೊಜನೆಯಿದೆ. ಬುತ್ತಿಘಟ್ಟ–ಕಾಮಲಾಪುರ–ತಿಪಟೂರು ಕಡೆಗೆ ಸಂಪರ್ಕ ಕಲ್ಪಿಸುವ ರಸ್ತೆಗಳಿವೆ. ಖಾಸಗಿ ಹಣಕಾಸಿನ ವ್ಯವಸ್ಥೆಯಲ್ಲಿ ಸ್ತ್ರೀಶಕ್ತಿ ಸಂಘಗಳಿವೆ. ಸಮುದಾಯ ಸೌಲಭ್ಯಗಳಾದ ವಿಕಲಚೇತನ ವೇತನವನ್ನು ಪಡೆಯುವ ೪ ಜನರು ವಿಧವಾ ವೇತನಪಡೆಯುವ ೫ ಜನರಿದ್ದಾರೆ. ಇಲ್ಲಿನ ಜನರು ಮಾರ್ಚ್ ತಿಂಗಳಲ್ಲಿ ಜರುಗುವ ಮಲ್ಲಿಗೆರೆ ಕರಿಯಮ್ಮ ದೇವಿಯವರ ಜಾತ್ರೆಗೆ ಹೋಗುತ್ತಾರೆ. ಇನ್ನುಳಿದಂತೆ ಯುಗಾದಿ, ದೀಪಾವಳಿ, ಶಿವರಾತ್ರಿ ಇತ್ಯಾದಿ ಹಬ್ಬಗಳನ್ನು ಸಂತೋಷದಿಂದ ಮಾಡುತ್ತಾರೆ. ಮಲ್ಲಿಗೆರೆ ದೇವರಿಗೆ ಎದುರೆತ್ತಿ ಆರತಿ ಮಾಡುವ ಸಂಪ್ರದಾಯವಿದೆ.

## ಮಲ್ಲಿಗೆರೆ

ಮಲ್ಲಿಗೆರೆ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೨ ಕಿಮೀ ದೂರದಲ್ಲಿದೆ. ಈ ಗ್ರಾಮಕ್ಕೆ ಮಲ್ಲಿಯಮ್ಮ ಎಂಬ ಮಹಿಳೆ ಸರಿಸುಮಾರು ೧೭ ನೇ ಶತಮಾನದಲ್ಲಿ ಊ ಗ್ರಾಮದಲ್ಲಿ ಮೈಸೂರು ಪ್ರಾಂತ್ಯದಿಂದ ಬಂದು ನೆಲೆಸಿ ಇಲ್ಲೊಂದು ಕೆರೆಯನ್ನು ಕಟ್ಟಿಸಿದ್ದಾಳೆಂದು ಹೇಳಬಹುದಾಗಿದೆ. ಹಾಗಾಗಿಯೇ ಈ ಗ್ರಾಮಕ್ಕೆ ಮಲ್ಲಿಗೆರೆ ಎಂದು ಹೆಸರಿರಬಹುದೆಂದು ಸ್ಥಳೀಯ ಜನರ ಅಭಿಪ್ರಾಯವಾಗಿದೆ. ಇದಕ್ಕೆ ಪೂರಕವೆಂಬಂತೆ ಈಗಲೂ ಈ ಕೆರೆಯಿದೆ. ಭೌಗೋಳಿಕ ವಿಸ್ತೀರ್ಣ ಸುಮಾರು ೬೦೦ ಎಕರೆಯಿದ್ದು ಈ ಭೂಮಿಯು ಮರಳು ಮಿಶ್ರಿತ ಕಪ್ಪು ಮಣ್ಣಿನಿಂದ ಕೂಡಿದ್ದು ೪೫೦ ಎಕರೆ ಕೃಷಿ ಭೂಮಿಯನ್ನು ಹೊಂದಿದೆ. ಇಲ್ಲಿನ ರೈತರ ಮುಖ್ಯ ವೃತ್ತಿ ಕೃಷಿಯಾಗಿದ್ದು ಉಪಕಸುಬಾಗಿ ಮೇಯಿಸುತ್ತಾರೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ.

ಲಿಂಗಾಯಿತರು ದೊಡ್ಡ ಸಮುದಾಯದಲ್ಲಿದ್ದರೆ ನಾಯಕರು, ಬೆಸ್ತರು, ಆದಿದ್ರಾವಿಡ, ಮಡಿವಾಳ, ಬೋವಿ ಸಮುದಾಯ ನಂತರದಲ್ಲಿದೆ. ಕನ್ನಡ ಪ್ರಮುಖ ಭಾಷೆಯಾಗಿದ್ದು ತೆಲುಗು ಬೋವಿಗಳ ಭಾಷೆಯಾಗಿದೆ. ೨೦೦ ಹೆಂಚಿನ ಮನೆಗಳು, ೬ ಕಾಂಕ್ರೀಟ್ ಮನೆಗಳಿವೆ. ಕೃಷಿ ಕೂಲಿಗಾರರು, ಇತರೆ ಕೂಲಿಗಾರರು ಇದ್ದಾರೆ. ಎರಡು ಹಿಟ್ಟಿನ ಗಿರಣಿಗಳಿವೆ. ೬ ಚಿಕ್ಕ ಅಂಗಡಿಗಳು ಹಾಗೂ ೨ ಹೋಟೆಲ್‌ಗಳಿವೆ. ೨೦ ಜನ ಸರ್ಕಾರಿ ನೌಕರರಿದ್ದಾರೆ.

ಗ್ರಾಮದೇವತೆಯು ಕರಿಯಮ್ಮ ದೇವಿಯಾಗಿದ್ದು ಪ್ರತಿ ವರ್ಷ ಮಾರ್ಚಿ ತಿಂಗಳಲ್ಲಿ ವಿಜೃಂಭಣೆಯಿಂದ ಜಾತ್ರೆಯನ್ನು ಮಾಡುತ್ತಾರೆ.

ಹಂದನಕೆರೆ ಹೋಬಳಿ ತುಮಕೂರು ಲೋಕಸಭಾ ಕ್ಷೇತ್ರ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತಕ್ಕೂ ಹಂದನಕೆರೆ ಜಿಲ್ಲಾ ಪಂಚಾಯತ್ ಕ್ಷೇತ್ರಕ್ಕೂ ಮತ್ತಿಘಟ್ಟ ತಾಲ್ಲೂಕು ಪಂಚಾಯತ್ ಕ್ಷೇತ್ರಕ್ಕೂ ಸೇರಿರುವ ೩ ಮಂದಿ ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತೆರೆದ ಚರಂಡಿಗಳಿವೆ. ಕುಡಿಯುವ ನೀರಿಗೆ ಮಿನಿ ವಾಟರ್‌ಟ್ಯಾಂಕನ್ನು ಅವಲಂಬಿಸಿದ್ದಾರೆ. ಸ್ತ್ರೀಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಗ್ರಾಮೀಣ ಉದ್ಯೋಗ ಸಂಘಗಳಿವೆ. ೨೦೧೧ ರ ಜನಗಣತಿಯಂತೆ ೪೮೪ ಗಂಡಸರು, ೪೦೩ ಹೆಂಗಸರು, ೫೬ ಮಕ್ಕಳಿದ್ದಾರೆ. ಸಾಕ್ಷರತೆ ಶೇ.೭೫ ರಷ್ಟಿದೆ.

ಒಂದು ಅಂಗನವಾಡಿ ಕೇಂದ್ರ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಅಕ್ಷರದಾಸೋಹ

ಹಾಗೂ ಕ್ಷೀರಭಾಧ್ಯ ಯೋಜನೆ ಜಾರಿಯಲ್ಲಿದೆ. ಸಣ್ಣಪುಟ್ಟ ವಸ್ತುಗಳ ಖರೀದಿಗೂ ೨ ಕಿಮೀ ದೂರದ ಮತ್ತಿಘಟ್ಟ ಇಲ್ಲವೇ ೧೭ ಕಿಮೀ ದೂರದ ಹುಳಿಯಾರಿಗೆ ಹೋಗುತ್ತಾರೆ. ಹುಳಿಯಾರು, ತಿಪಟೂರು ಹಾಗೂ ಚಿಕ್ಕನಾಯಕನಹಳ್ಳಿ ಕುಪ್ಪೂರು ಮಾರ್ಗವಾಗಿ ಬಸ್ ಸಂಚಾರವಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೩೬ ಫಲಾನುಭವಿಗಳಿದ್ದಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮಲ್ಲಿಗೆರೆಯ ರೇಣುಕಯ್ಯ ತಮ್ಮ ಚಿತ್ರಕಲೆಯಲ್ಲಿ ಪ್ರಸಿದ್ಧಿ ಪಡೆದು ರಾಜ್ಯ ಕರಕುಶಲ ಇಲಾಖೆಯಿಂದ ಪ್ರಶಸ್ತಿ ಪಡೆದಿದ್ದಾರೆ.

## ಮಲ್ಲಿಗೆರೆ ಎ.ಕೆ. ಕಾಲೋನಿ

ಮಲ್ಲಿಗೆರೆಗೆ ಹೊಂದಿಕೊಂಡಂತೆ ಗ್ರಾಮದ ಹೊರವಲಯದಲ್ಲಿ ಜನವಸತಿ ನಿರ್ಮಿಸಿಕೊಂಡು ವಾಸಿಸುತ್ತಿರುವ ಆದಿಕರ್ನಾಟಕ ಜನಾಂಗದ ಪ್ರತ್ಯೇಕ ಬಡಾವಣೆ ಮಾಡಿಕೊಂಡು ಮಾದಿಗರಹಟ್ಟಿ ಎಂದೇ ಕರೆಯುತ್ತಾರೆ. ಎ.ಕೆ. ಕಾಲೋನಿ ಎಂಬುದು ದಾಖಲೆಯ ಹೆಸರಾಗಿದೆ. ಹೆಂಚಿನ, ಶೀಟಿನ ಗುಡಿಸಲು ಸ್ವರೂಪದ ಒಟ್ಟು ೯೩ ಮನೆಗಳಿವೆ. ೩೧೨ ಜನಸಂಖ್ಯೆಯಿದೆ. ಸರ್ಕಾರದ ವಸತಿ ಯೋಜನೆಯಾದ ಆಶ್ರಯ, ಜನತಾ, ಇಂದಿರಾ ಹಾಗೂ ಅಂಬೇಡ್ಕರ್ ಆವಾಸ್ ಯೋಜನೆಯ ೧೬ ಫಲಾನುಭವಿಗಳಿದ್ದಾರೆ. ಕುಡಿಯಲು ಮುಖ್ಯಗ್ರಾಮ ಮಲ್ಲಿಗೆರೆಯ ಕೊಳವೆ ಬಾವಿಗಳ ಮೂಲಕ ಕೊಳಾಯಿಗಳಿಂದ ನೀರು ಪೂರೈಸಲಾಗುತ್ತದೆ. ಒಟ್ಟು ೭ ನಲ್ಲಿ ಸಂಪರ್ಕವಿದೆ. ಒಂದು ದೊಡ್ಡ ಕೆರೆಯಿದ್ದು ಮಳೆ ಆಶ್ರಯದಲ್ಲಿ ತುಂಬುತ್ತದೆ. ಬೇಸಿಗೆಯಲ್ಲಿ ಒಣಗಿದರೂ ಪ್ರಾಣಿ–ಪಕ್ಷಿಗಳಿಗೆ ಸಹಕಾರಿಯಾಗಿದೆ. ರೈತಾಪಿ ಹಾಗೂ ರೈತ ಕಾರ್ಮಿಕರು ಅಧಿಕವಾಗಿದ್ದಾರೆ. ರೈತರು ರಾಗಿ, ಹೆಸರು, ಜೋಳ, ಅವರೆ, ಹುರುಳಿ ಬೆಳೆಯುತ್ತಾರೆ. ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗರಿಕಡ್ಡಿ ವ್ಯಾಪಾರ, ತೆಂಗಿನಕಾಯಿ, ಮೊಟ್ಟೆ, ಚಿಪ್ಪಿನ ವ್ಯಾಪಾರವೂ ಇರುತ್ತದೆ. ಹಾಲಿನ ಡೈರಿಗೆ ಕಾಲೋನಿಯಿಂದ ಹಾಲು ತೆಗೆದುಕೊಂಡು ಹೋಗುತ್ತಾರೆ. ಸರ್ಕಾರಿ ನೌಕರಿಯಲ್ಲಿ ಶಿಕ್ಷಕರು ಸಾರಿಗೆ, ಕಂದಾಯ, ಅರಣ್ಯ ಇಲಾಖೆಯ ಒಟ್ಟು ೯ ಜನ ಇದ್ದಾರೆ. ಟ್ರ್ಯಾಕ್ಟರ್, ಲಾರಿ, ಖಾಸಗಿ ಡ್ರೈವರ್‌ಗಳಿದ್ದಾರೆ. ಖಾಸಗಿ ವಕೀಲರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯ ವೇತನ ಹಾಗೂ ಅಂಗವಿಕಲ ವೇತನದ ಫಲಾನುಭವಿಗಳಿದ್ದಾರೆ. ಮಲ್ಲಿಗಮ್ಮ, ಹುತ್ತಮ್ಮ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿದ್ದು ಒಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘವಿದೆ. ಮಲ್ಲಿಗೆಮ್ಮ, ಕರಿಯಮ್ಮ ದೇವಾಲಯಗಳಿದ್ದು ಈ ಬಡಾವಣೆಯ ಜನರು ಕರಿಯಮ್ಮ ದೇವಿಯ ಉತ್ಸವ, ಜಾತ್ರೆಯಲ್ಲಿ ಬಾಯಿಬೀಗ, ಆರತಿ, ಅಗ್ನಿಕೊಂಡ, ಬಾನ, ಬಲಿ, ಹರಕೆ ಸಂಪ್ರದಾಯದಲ್ಲಿ ಭಾಗಿಯಾಗುತ್ತಿದ್ದಾರೆ. ಕುಳವಾಡಿ ಸಂಪ್ರದಾಯದ ಪ್ರಕಾರ ಆಚಾರ–ವಿಚಾರಗಳು ಜರುಗುತ್ತವೆ. ಈ ಬಡಾವಣೆಯಲ್ಲಿ ೨ ಗೂಡಂಗಡಿ, ಎರಡು ಟೀ ಅಂಗಡಿಗಳಿವೆ. ಒಂದು ಅಂಗನವಾಡಿ ಕೇಂದ್ರವಿದೆ. ನ್ಯಾಯಬೆಲೆ ಅಂಗಡಿಯ ಸೌಕರ್ಯ ಮುಖ್ಯ ಗ್ರಾಮದಿಂದ ಪಡೆದುಕೊಳ್ಳುತ್ತಾರೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಮಲ್ಲಿಗೆರೆ ಗೊಲ್ಲರಹಟ್ಟಿ

ಮಲ್ಲಿಗೆರೆ ಗೊಲ್ಲರಹಟ್ಟಿ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿಯಲ್ಲಿದ್ದು ಮಲ್ಲಿಗೆರೆ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸೇರಿದ ಮಜರೆ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೪ ಕಿಮೀ ಅಂತರದಲ್ಲಿದೆ.

ಭೌಗೋಳಿಕ ವಿಸ್ತೀರ್ಣ ೨೩೦.೯೧ ಹೆಕ್ಟೇರ್ ಕೆಂಪು ಮಿಶ್ರಿತ ಬಿಳಿ ಮಣ್ಣನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಮೂಡಗಡೆ ಹಳ್ಳ ಇದೆ. ಗೊಲ್ಲ ಸಮುದಾಯದವರೇ ಇದ್ದು ಬುಡಕಟ್ಟು ಗ್ರಾಮವಾಗಿದೆ. ಕನ್ನಡವನ್ನು ಮಾತನಾಡುತ್ತಾರೆ. ಗ್ರಾಮದಲ್ಲಿ ೪೦ ಮನೆಗಳಿದ್ದು ಹೆಂಚಿನ, ಮಣ್ಣಿನ ಹಾಗೂ ಕಲ್ಲಿನ ಮನೆಗಳಿವೆ. ಒಂದು ಮನೆಯಲ್ಲಿ ಶೌಚಾಲಯ ವ್ಯವಸ್ಥೆಯಿದೆ. ಆಶ್ರಯ, ಜನತಾ ಮನೆಗಳಿವೆ. ಭಾಗ್ಯಜ್ಯೋತಿ ವಿದ್ಯುತ್ ವ್ಯವಸ್ಥೆಯನ್ನು ಹೊಂದಿದೆ. ೧ ಕುಟುಂಬವು ವಸತಿರಹಿತ ಹಾಗೂ ೧ ಕುಟುಂಬವು ನಿವೇಶನ ರಹಿತವಾಗಿದೆ. ೧೫ ವಿದ್ಯುಚ್ಛಕ್ತಿ ಕಂಬಗಳಿವೆ. ೩ ಕೊಳವೆ ಬಾವಿಗಳಿರೆ. ೩ ಕಿರುನೀರು ಸರಬರಾಜು ಮಾಡುವ ಮಿನಿ ಟ್ಯಾಂಕ್ ಗಳಿವೆ.

೨೦೧೧ ರ ಜನಗಣತಿಯಂತೆ ಒಟ್ಟು ಜನಸಂಖ್ಯೆ ೧೭೭೮. ಒಟ್ಟು ಸಾಕ್ಷರರ ಪ್ರಮಾಣ ೫೮% ಇದೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಕ್ಷೀರಭಾಗ್ಯ, ಅಕ್ಷರ ದಾಸೋಹ ಇದೆ.

ಹಂದನಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೂ ತುಮಕೂರು ಲೋಕಸಭಾ ಕ್ಷೇತ್ರ ಹಂದನಕೆರೆ ಜಿಲ್ಲಾ ಪಂಚಾಯತ್ ಮತ್ತಿಘಟ್ಟ ತಾಲ್ಲೂಕು ಪಂಚಾಯತ್ ಮಲ್ಲಿಗೆರೆ ಗ್ರಾಮ ಪಂಚಾಯತ್ ಕ್ಷೇತ್ರಕ್ಕೆ ಸೇರಿದೆ. ಒಬ್ಬರು ಗ್ರಾಮಪಂಚಾಯ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕಚ್ಚಾರಸ್ತೆಯಿಂದ ದವಣದ ಹೊಸಳ್ಳಿಗೆ, ಮಲ್ಲಿಗೆರೆಗೆ ಸಂಪರ್ಕ ಸಾಧಿಸಬಹುದು. ಭುವನೇಶ್ವರಿ ಮಹಿಳಾ ಸಂಘಗಳಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಮುದಾಯ ಸೌಲಭ್ಯಗಳಾದ ೫ ವಿಧವಾ ವೇತನ, ಒಬ್ಬರು ವಿಕಲ ಚೇತನದ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಕಾಟಲಿಂಗೇಶ್ವರ, ಮಲ್ಲಿಕಾರ್ಜುನ ದೇವಾಲಯಗಳಿವೆ. ಮಾರ್ಚ್ ತಿಂಗಳಿನಲ್ಲಿ ಮಲ್ಲಿಗೆರೆಯಲ್ಲಿ ಕರಿಯಮ್ಮ ದೇವಿಯ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕಾಡುಗೊಲ್ಲರು ಸಾಂದರ್ಭಿಕವಾಗಿ ಕೋಲಾಟ ನಡೆಸುವುದು ವಾಡಿಕೆಯಲ್ಲಿದೆ. ಗ್ರಾಮದಲ್ಲಿ ಮಾತ್ರ ಪ್ರದರ್ಶನ ನೀಡುತ್ತಾರೆ.

## ಮುದ್ದೇನಹಳ್ಳಿ

ಮುದ್ದೇನಹಳ್ಳಿ ಒಂದು ಗ್ರಾಮಪಂಚಾಯ್ತಿ ಕೇಂದ್ರಸ್ಥಾನವಿರುವ ಜನವಸತಿ ಗ್ರಾಮ. ತಾಲ್ಲೂಕು ಕೇಂದ್ರದಿಂದ ಆಗ್ನೇಯ ದಿಕ್ಕಿಗೆ ೮ ಕಿಮೀ ದೂರದಲ್ಲಿದೆ. ಗ್ರಾಮನಾಮದ ನಿಷ್ಪತ್ತಿ ಬಗ್ಗೆ ಯಾವುದೇ ಆಧಾರಗಳು ಸಿಗುವುದಿಲ್ಲವಾದರೂ ಮುದ್ದೆಯನ್ನು ಊಟ ಮಾಡುವುದು ಈ ಸುತ್ತಲ ಜನ ಬಹು ಅಪೇಕ್ಷೆಯಾದ್ದರಿಂದ ಈ ಹೆಸರು ಬಂದಿರಬಹುದೆಂದು ಊಹಿಸಬಹುದಾಗಿದೆ. ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೨೨೩೮.೨೦ ಚ.ಕಿ.ಮೀ. ಕ್ಯಾತನಾಯಕನಹಳ್ಳಿ, ಬಿದರಕಟ್ಟೆ, ಬೈಲಪ್ಪನಮಠ, ಮುನಿಯಮ್ಮನಪಾಳ್ಯ ಎಂಬ ಗ್ರಾಮಗಳು ಈ ಗ್ರಾಮದ ಭೌಗೋಳಿಕ ವಿಸ್ತೀರ್ಣದಲ್ಲೇ ಸೇರಿವೆ.

ಬಯಲುನಾಡಿಗೆ ಸೇರಿದ್ದು ಬಿಳಿಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ನಿಂಗಯ್ಯನಕಟ್ಟೆ ಹಳ್ಳ, ಬಳೆಗಾರಯ್ಯನಕಟ್ಟೆ ಹಳ್ಳಗಳು ಹರಿಯುತ್ತವೆ. ಎರಡು ತೆರೆದ ಬಾವಿಗಳಿವೆ. ೨೭೦ ಕ್ಕೂ ಹೆಚ್ಚು ಕೊಳವೆ ಬಾವಿಗಳಿವೆ. ೨ ಕೆರೆಗಳಿವೆ. ಮುದ್ದೇನಹಳ್ಳಿ ಕೆರೆ, ಮೇಗಲಕೆರೆ, ಉಂಬಳಕಟ್ಟೆ ಎಂಬ ಒಂದು ಕಟ್ಟೆ ಇದೆ.

ಸರ್ಪಒಕ್ಕಲಿಗರು ಹಾಗೂ ಲಿಂಗಾಯಿತರು ಸಮಸಂಖ್ಯೆಯ ಪ್ರಧಾನ ಸಮುದಾಯವಾಗಿದ್ದು ಉಳಿದಂತೆ ಮುಸ್ಲಿಮರು, ಆದಿಕರ್ನಾಟಕ, ನಾಯಕ, ಮಡಿವಾಳ, ಕುರುಬರು, ಆಚಾರ್ರು ಇದ್ದಾರೆ. ೨೦೧೧ ರ ಜನಗಣತಿ ಪ್ರಕಾರ ೨೨೮೬ ಜನಸಂಖ್ಯೆಯಿದೆ. ಎಲ್ಲರೂ ಕನ್ನಡ ಬಳಸುತ್ತಾರೆ. ಮುಸ್ಲಿಮರು ಉರ್ದು ಮಾತನಾಡುತ್ತಾರೆ. ತೋಟದ ಓಣಿ, ದನಿನ ಓಣಿ, ಕೆರೆ ಓಣಿ ಎಂಬ ಓಣಿಗಳಿವೆ. ಒಟ್ಟು ೨೨೨ ಮನೆಗಳಲ್ಲಿ ೨ ಕಾಂಕ್ರೀಟ್ ಮನೆಗಳು ಉಳಿದಂತೆ ಕಲ್ಲು ಹಾಗೂ ಮಣ್ಣಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಹಾಗೂ ಕೆಲವರು ಮಂಗಳೂರು ಕೆಂಪು ಹೆಂಚನ್ನು ಹೊದಿಸಿದ್ದಾರೆ. ಆಶ್ರಯ, ಜನತಾ, ಇಂದಿರಾ ಆವಾಸ್ ಸರ್ಕಾರಿ ಅನುದಾನದ ೩೫ ಮನೆಗಳಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಎಳ್ಳು, ಹುಚ್ಚೆಳ್ಳು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಸಿಕಲ್‌ಗಳು, ಕಾರುಗಳು, ಆಟೋಗಳು, ಬೈಕ್ ಇವೆ. ಕಾಂಕ್ರೀಟ್ ರಸ್ತೆ

ನಿರ್ಮಿಸಲಾಗಿದೆ. ಚಪ್ಪಡಿ ಕಲ್ಲಿನ ಚರಂಡಿ ವ್ಯವಸ್ಥೆ ಇದೆ. ಗ್ರಾಮದ ಬಹುತೇಕರು ಶೌಚಾಲಯ ವ್ಯವಸ್ಥೆ ಹೊಂದಿದ್ದಾರೆ. ಕೆಎಂಎಫ್‍ನ ನಂದಿನಿ ಡೈರಿಯಿದೆ. ಕೆರೆಗೆ ನೀರು ತುಂಬಿದಾಗ ಮೀನು ಕೃಷಿ ಮಾಡಲಾಗುತ್ತದೆ. ಕೊಬ್ಬರಿ, ತೆಂಗಿನಕಾಯಿ, ಅಡಿಕೆ, ಹುಣಸೆ ಹಣ್ಣು ಇಲ್ಲಿನ ಮುಖ್ಯ ವ್ಯಾಪಾರಿ ಸರಕಾಗಿದೆ. ಶಿಕ್ಷಣ ಇಲಾಖೆಯಲ್ಲಿ ೧೮ ಕ್ಕೂ ಹೆಚ್ಚು ಜನ ಕೆಲಸ ನಿರ್ವಹಿಸುತ್ತಿದ್ದಾರೆ. ಒಬ್ಬರು ಪಿಡಿಓ ಆಗಿ, ಇನ್ನೊಬ್ಬರು ಬಿಇಓ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ೫ ಜನ ಉಪನ್ಯಾಸಕರಿದ್ದಾರೆ. ೪ ಜನ ವಕೀಲರು, ಇಬ್ಬರು ಮಾಜಿ ಸೈನಿಕರಿದ್ದಾರೆ. ೨ ಇಟ್ಟಿಗೆ ಕಾರ್ಖಾನೆಗಳು, ಒಂದು ಕೋಳಿ ಫಾರಂ ಇದೆ. ಬಡಗಿತನ ಮಾಡುವ ೩ ಕುಟುಂಬಗಳು, ೫ ಜನ ಗಾರೆ ಕೆಲಸ ಮಾಡುವವರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮಾಳಿಗೆಹಳ್ಳಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದೆ. ಇದೇ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕೇಂದ್ರಸ್ಥಾನವಿದೆ. ಗ್ರಾಮದ ನಾಲ್ವರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ೪ ಜನ ಗ್ರಾಮಪಂಚಾಯ್ತಿ ನೌಕರರಿದ್ದಾರೆ. ಪೊಲೀಸ್, ಲೋಕೋಪಯೋಗಿ, ಬೆಸ್ಕಾಂ ಇತ್ಯಾದಿ ಕಛೇರಿಗಳಿಗೆ ಸಮೀಪದ ಚಿಕ್ಕನಾಯಕನಹಳ್ಳಿಗೆ ಹೋಗುತ್ತಾರೆ. ಚಿಕ್ಕನಾಯಕನಹಳ್ಳಿ ಸಾಲ್ಕಟ್ಟೆ ಕ್ರಾಸ್ ಮಾರ್ಗವಾಗಿ ಈ ಗ್ರಾಮವನ್ನು ಹಾಯ್ದು ಮತಿಘಟ್ಟಕ್ಕೆ ಹೋಗುವ ಜಿಲ್ಲಾ ರಸ್ತೆಯಿದೆ. ಗ್ರಾಮದಲ್ಲಿ ಅಂಚೆ ಕಛೇರಿಯಿದೆ ಪ್ರತಿ ಮನೆಯಲ್ಲೂ ಸಂಚಾರಿ ದೂರವಾಣಿಗಳಿವೆ. ಹಾಲು ಉತ್ಪಾದಕರ ಸಹಕಾರಿ ಸಂಘವಿದೆ. ಧನಲಕ್ಷ್ಮಿ, ಸೌಭಾಗ್ಯಲಕ್ಷ್ಮಿ, ಸ್ತ್ರೀಶಕ್ತಿ ಸಂಘ ಹಾಗೂ ಮಹಿಳಾ ಸ್ವಸಹಾಯ ಸಂಘಗಳಿವೆ. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘ ಅಸ್ತಿತ್ವದಲ್ಲಿದೆ. ಶೇ.೭೨ ರಷ್ಟು ಸಾಕ್ಷರತೆ ಹೊಂದಿರುವ ಈ ಗ್ರಾಮದಲ್ಲಿ ೨ ಅಂಗನವಾಡಿ ಕೇಂದ್ರಗಳು, ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಚಿಕ್ಕ ಕಿರಾಣಿ ಅಂಗಡಿಗಳಿವೆ.

ವೀರಭದ್ರಸ್ವಾಮಿ, ಈಶ್ವರ, ರಾಮದೇವರ ಗುಡಿ, ಚನ್ನವೀರಯ್ಯನ ಗುಡಿ, ಬಸವಣ್ಣನ, ಓಬಳದೇವರ, ಮುನಿಯಮ್ಮದೇವರ, ಸೋಮೇಶ್ವರ ಗುಡಿಗಳಿವೆ. ಯುಗಾದಿ ಹಬ್ಬದ ನಂತರ ಓಬಳದೇವರ ಜಾತ್ರೆ ಮಾಡುತ್ತಾರೆ. ಬಾಬಯ್ಯನ ಉರುಸ್ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ, ಬಕ್ರೀದ್, ರಂಜಾನ್ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸರ್ಪ ಒಕ್ಕಲಿಗ ಸಮುದಾಯದ ಲಕ್ಷ್ಮೀದೇವಮ್ಮ, ತಿಮ್ಮಕ್ಕ ಎಂಬುವವರು ಜನಪದ ಗೀತೆ ಹಾಗೂ ಸೋಬಾನೆ ಹಾಡುಗಳನ್ನು ಹಾಡುತ್ತಾರೆ.

## ಮುನಿಶ್ಯಾಮಯ್ಯನತಾಂಡ್ಯ

ಮುನಿಶ್ಯಾಮಯ್ಯನತಾಂಡ್ಯ ಲಂಬಾಣಿ ಜನಾಂಗದ ಒಂದು ಬುಡಕಟ್ಟು ಗ್ರಾಮ. ಇದು ಮುದ್ದೇನಹಳ್ಳಿ ಗ್ರಾಮಪಂಚಾಯ್ತಿಯ ಮರಳುಹಳ್ಳದ ಕಾವಲು ಗ್ರಾಮದ ಮಜರೆಯಾಗಿದ್ದು ಭೌಗೋಳಿಕ ವ್ಯಾಪ್ತಿ ೪೪೯೮.೨೫ ಹೆಕ್ಟೇರ್ ಮುಖ್ಯ ಗ್ರಾಮದೊಂದಿಗೆ ಹಂಚಿಕೆಯಾಗಿದೆ. ಬಯಲು ಮಿಶ್ರಿತ ಕಾಡಿನ ಪರಿಸರ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಕೆ ಮಾಡಲಾಗಿದೆ. ಲಂಬಾಣಿ ಜನಾಂಗದ ೨೩ ಮನೆಗಳಿದ್ದು ೧೦೮ ಜನಸಂಖ್ಯೆ ಇದೆ. ಎಲ್ಲರೂ ಕನ್ನಡ, ಲಂಬಾಣಿ ಮಾತನಾಡುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ದ್ವಿಚಕ್ರ ವಾಹನಗಳ ಬಳಕೆಯಿದೆ. ರಾಗಿಮುದ್ದೆ, ಅನ್ನ, ರೊಟ್ಟಿ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ, ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು ತುಮಕೂರು ಲೋಕಸಭೆಗೆ ಸೇರಿದೆ. ಮುದ್ದೇನಹಳ್ಳಿಯಿಂದ ಅಂಚೆ ಸಂಪರ್ಕವಿದೆ.

ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ.

ಭೀಮಸತಿ ಹಾಗೂ ದೀಪಾವಳಿ ದೊಡ್ಡ ಆಚರಣೆ. ಹೋಮ, ಹಿರಿ ಯರ ಆಚರಣೆ, ಲಂಬಾಣಿ ಸಂಪ್ರದಾಯದ ಆಚರಣೆಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಶಿಕ್ಷಣ ಪಡೆತರ ವಿಷಯಗಳಿಗೆ ಮರಳಹಳ್ಳದ ಕಾವಲು ಹಾಗೂ ಮುದ್ದೇನಹಳ್ಳಿಗೆ ಹೋಗುತ್ತಾರೆ. ಸಾಕ್ಷರತೆ ೬೨% ರಷ್ಟಿದೆ. ಮುದ್ದೇನಹಳ್ಳಿ ಮಾರ್ಗವಾಗಿ ಬಸ್ ಸೌಕರ್ಯವಿದೆ.

## ಮರಳುಹಳ್ಳದ ಕಾವಲ್

ಮರಳುಹಳ್ಳದ ಕಾವಲ್ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೦ ಕಿಮೀ ದೂರದಲ್ಲಿದೆ. ಮರಳು ಹಳ್ಳ ಹರಿಯುವುದರಿಂದ ಇಲ್ಲಿನ ಸಮೀಪದಲ್ಲಿರುವ ಜನವಸತಿಗೆ ಈ ಹೆಸರು ಬಂದಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೪೯೮.೨೫ ಚ.ಕಿ.ಮೀ. ಹೊಂದಿದೆ. ಬಯಲು ನಾಡಾಗಿದ್ದು ಬಿಳಿ ಕಲ್ಲು ಹಾಗೂ ಬಿಳಿ ಮಣ್ಣು, ಕೆಂಪು ಮಣ್ಣನ್ನು ಹೊಂದಿದೆ. ಈ ಗ್ರಾಮದಲ್ಲಿ ಬೇಬಿಜಲ್ಲಿ ಮಾಡಲಾಗುತ್ತದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕಿರುನೀರು ಸರಬರಾಜು ಯೋಜನೆಯಿದೆ. ಉಪಲೀಕನಹಳ್ಳ ಮತ್ತು ಮರಳುಹಳ್ಳ ಎಂಬ ಎರಡು ಹಳ್ಳಗಳಿವೆ. ಎರಡು ಸೇದೋಬಾವಿ ಮತ್ತು ೧೫ ಕೊಳವೆ ಬಾವಿಗಳಿವೆ.

ಲಂಬಾಣಿ ದೊಡ್ಡ ಸಮುದಾಯ, ಆದಿಕರ್ನಾಟಕ ಸಣ್ಣ ಸಮುದಾಯವಾಗಿದೆ. ಜನರು ಲಂಬಾಣಿ ಮತ್ತು ಕನ್ನಡವನ್ನು ಮಾತನಾಡುತ್ತಾರೆ. ಒಟ್ಟು ಜನಸಂಖ್ಯೆ ೬೦೬ ಆಗಿದೆ. ಒಟ್ಟು ೧೨೨ ಮನೆಗಳಿದ್ದು ಕಲ್ಲಿನ ಮತ್ತು ಮಣ್ಣಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪುಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ಒಂದಷ್ಟು ಜನ ಶೌಚಾಲಯ ವ್ಯವಸ್ಥೆಯನ್ನು ಹೊಂದಿದ್ದಾರೆ. ಜನತಾ, ಆಶ್ರಯ, ಇಂದಿರಾ ಆವಾಸ್ ಯೋಜನೆಯ ೨೭ ಫಲಾನುಭವಿಗಳಿದ್ದಾರೆ. ೧೪ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ೨೦೧೧ರ ಜನಗಣತಿ ಪ್ರಕಾರ ೬೨೩ ಜನಸಂಖ್ಯೆ ಹೊಂದಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್‌ಗಳಿವೆ. ಕೆರೆಯಲ್ಲಿ ನೀರಿದ್ದಾಗ ಮೀನುಕೃಷಿಯನ್ನು ಮಾಡುತ್ತಾರೆ. ನಾರಿನ ಫ್ಯಾಕ್ಟರಿಯಿದೆ. ಶಿಕ್ಷಕರು, ಲಾಯರ್, ಇಂಜಿನಿಯರ್, ಬೆಸ್ಕಾಂ, ರೈಲ್ವೇಯಲ್ಲಿ ಕೆಲಸ ಮಾಡುವವರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮುದ್ದೇನಹಳ್ಳಿ ತಾಲ್ಲೂಕು ಮತ್ತು ಗ್ರಾಮಪಂಚಾಯ್ತಿ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ನ್ಯಾಯಬೆಲೆ ಅಂಗಡಿಯಿದೆ. ರಸ್ತೆ ಮಾರ್ಗವಿದೆ. ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೭೦% ಸಾಕ್ಷರರಿದ್ದಾರೆ. ಒಂದು ಅಂಗನವಾಡಿ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಬಿಸಿಯೂಟ, ಕ್ಷೀರಭಾಗ್ಯದ ಸೌಲಭ್ಯಗಳಿವೆ. ೨ ಚಿಕ್ಕ ಅಂಗಡಿಗಳಿವೆ. ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳಿದ್ದಾರೆ. ಲಿಂಗಮುದ್ರೆ ಕಲ್ಲುಗಳು ಮುನಿಯನಾಯ್ಕ ಮತ್ತು ಭೀಮನಾಯ್ಕ ಅವರ ಜಮೀನಿನಲ್ಲಿ ಕಂಡುಬರುತ್ತವೆ.

ದುರ್ಗಮ್ಮದೇವಿ, ಕರಿಯಮ್ಮದೇವಿ ಸ್ತ್ರೀಶಕ್ತಿ ಸಂಘ, ಸ್ವಸಹಾಯ ಸಂಘಗಳಿವೆ. ಕರಿಯಮ್ಮದೇವರ ದೇವಸ್ಥಾನ ಹಾಗೂ ಸೇವಾಲಾಲ್ ದೇವಾಲಯಗಳಿವೆ. ಮಾರ್ಚ್ ತಿಂಗಳಲ್ಲಿ ಜಾತ್ರೆ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕರಿಯಮ್ಮ, ಸುಶೀಲಮ್ಮ ಮತ್ತು ಮಂಗಳಮ್ಮ ಎಂಬ ಲಂಬಾಣಿ ಸ್ತ್ರೀಯರು ಸೋಬಾನೆ, ಜಾನಪದ ಕೋಲಾಟ ಗೀತೆಗಳನ್ನು ಹಾಡುತ್ತಾರೆ.

## ಮಾಳಿಗೆಹಳ್ಳಿ

ಮಾಳಿಗೆಹಳ್ಳಿ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩ ಕಿಮೀ ದೂರದಲ್ಲಿದೆ. ಬೌಗೋಳಿಕ ವಿಸ್ತೀರ್ಣ ೧೪೪.೦೩ ಚ.ಕಿ.ಮೀ. ಮೊದಲು ಮಾಳಿಗೆ ಮನೆಗಳು ಹೆಚ್ಚಾಗಿದ್ದ ಕಾರಣದಿಂದ ಗ್ರಾಮಕ್ಕೆ ಈ ಹೆಸರು ಬಂದಿದೆ. ಇಲ್ಲಿ ಬಿಳಿಯ ಕಲ್ಲು, ಬಿಳಿಯ ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು  ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕಿರುನೀರು ಸರಬರಾಜು ಯೋಜನೆಯಿದೆ. ಕೊಳವೆ ಬಾವಿಗಳು ಮತ್ತು ಸೇದೋ ಬಾವಿಗಳಿವೆ. ತಿಮ್ಮಯ್ಯನ ಕಟ್ಟೆಯಿದೆ. ವೀರಶೈವರು ದೊಡ್ಡ ಸಮುದಾಯವಾಗಿದ್ದು ಆಚಾರ್ರು, ಕುರುಬರು ಸಣ್ಣ ಸಮುದಾಯದವರಾಗಿದ್ದಾರೆ. ಎಲ್ಲರೂ ಕನ್ನಡವನ್ನೇ ಮಾತನಾಡುತ್ತಾರೆ. ೯೪ ಮನೆಗಳಿದ್ದು ೨ ಕಾಂಕ್ರೀಟ್ ಮನೆಗಳು ಹಾಗೂ ಉಳಿದವು ಕಲ್ಲು ಮತ್ತು ಮಣ್ಣಿನವು. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪುಹೆಂಚನ್ನು ಹೊದಿಸಿದ್ದಾರೆ.  ಗ್ರಾಮದ ಒಂದಷ್ಟು ಜನ ಶೌಚಾಲಯ ವ್ಯವಸ್ಥೆಯನ್ನು ಹೊಂದಿದ್ದಾರೆ. ಜನತಾ, ಆಶ್ರಯ ವಸತಿ ಯೋಜನೆಯ ೨೭ ಮನೆಗಳಿವೆ. ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಲಾರಿ, ಬೈಕ್, ಆಟೋಗಳಿವೆ. ರಾಜ್ಯಹೆದ್ದಾರಿ ಮತ್ತು ಕಚ್ಚಾ ರಸ್ತೆಗಳಿವೆ. ನಂದಿನಿ ಡೈರಿಯಿದೆ. ಉಪನ್ಯಾಸಕರು, ಗ್ರಾ.ಪಂ. ಕಾರ್ಯದರ್ಶಿ, ಶಿಕ್ಷಕರು ಆಗಿದ್ದಾರೆ. ಗ್ರಾಮದಲ್ಲಿ ನಾರಿನ ಕಾರ್ಖಾನೆ ಮತ್ತು ಸಾಮಿಲ್ ಇದೆ.

ಕಂದಿಕೆರೆ ಹೋಬಳಿ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮಾಳಿಗೆಹಳ್ಳಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರ, ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಸಂಚಾರಿ ದೂರವಾಣಿ ಬಳಸುತ್ತಾರೆ. ನ್ಯಾಯಬೆಲೆ ಅಂಗಡಿಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕೃಷಿ ಮತ್ತು ಭೂ ಅಭಿವೃದ್ಧಿ ಬ್ಯಾಂಕ್ ಇದೆ. ಕೆಂಪಮ್ಮದೇವಿ ಮತ್ತು ಭಾರತಾಂಬೆ ಸ್ತ್ರೀಶಕ್ತಿ ಸಂಘಗಳು, ಸ್ವಸಹಾಯ ಸಂಘಗಲು ಮತ್ತು ಧರ್ಮಸ್ಥಳ ಸಂಘಗಳಿವೆ.  ಶೇ. ೭೮ ರಷ್ಟು ಸಾಕ್ಷರರಿದ್ದು ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಪಾಠಶಾಲೆಯಿದೆ.  ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆಗಳಿವೆ. ಸಾರ್ವಜನಿಕ ಗ್ರಂಥಾಲಯವಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೬ ಫಲಾನುಭವಿಗಳಿದ್ದಾರೆ. ೨ ಚಿಕ್ಕ ಅಂಗಡಿಗಳಿವೆ.

ಮಹಲಿಂಗೇಶ್ವರ ಮತ್ತು ನಾಗೇಶ್ವರ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮೇಲನಹಳ್ಳಿ

ಮೇಲನಹಳ್ಳಿಯು ಕಂದಾಯ ಗ್ರಾಮ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧.೫ ಕಿಮೀ ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೭೯೦.೦೮ ಚ.ಕಿ.ಮೀ. ಮಸಾಲಿ ಗುಡ್ಡು ಸೇರ್ಪಡೆಯಾಗಿರುವ ಊರು. ಬಯಲುನಾಡಾಗಿರುವ ಇಲ್ಲಿ ಬಿಳಿಕಲ್ಲು, ಕೆಂಪು ಮಣ್ಣು ಕಂಡುಬರುತ್ತದೆ. ಕಂಚೀರಾಯಸ್ವಾಮಿ ತೋಪು ಎಂಬ ಎರಡು ತೋಪುಗಳಿವೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು  ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮದ ಸುತ್ತ ಅನೇಕ ಹಳ್ಳಗಳು ಹರಿಯುತ್ತವೆ. ದಬ್ಬೇಘಟ್ಟದ ಹಳ್ಳ, ಸಾಯಿನಕಟ್ಟೆ ಹಳ್ಳ, ಹೊಸಕಟ್ಟೆ ಹಳ್ಳ, ಕೋವಿನಹಳ್ಳ, ಕೆರೆಕೋಡಿ ಹಳ್ಳ ಇತ್ಯಾದಿ. ಮೇಲನಹಳ್ಳಿ ಕೆರೆಯಿದೆ. ೨ ತೆರೆದ ಬಾವಿಗಳು ಹಾಗೂ ೩೦ ಕ್ಕೂ ಹೆಚ್ಚು ಕೊಳವೆ ಬಾವಿಗಳಿವೆ. ಕುಡಿಯುವ ನೀರಿಗಾಗಿ ೭ ಸಿಸ್ಟನ್‌ಗಳಿವೆ. ನಲ್ಲಿಗಳ ಮೂಲಕ ಮನೆಗಳಿಗೆ ಕಿರುನೀರು

ಸರಬರಾಜು ಯೋಜನೆ ಮೂಲಕ ನೀರು ಒದಗಿಸಲಾಗುತ್ತದೆ. ಅಲ್ಲಜ್ಜಯ್ಯನಕಟ್ಟೆ, ವಡಗಟ್ಟ, ಕರಿಬಸವನಕಟ್ಟೆ ಇತ್ಯಾದಿ ಅನೇಕ ಕಟ್ಟೆಗಳಿವೆ.

೬೬೮ ಜನಸಂಖ್ಯೆ ಹೊಂದಿರುವ ಗ್ರಾಮದಲ್ಲಿ ವೀರಶೈವ ಜನಾಂಗವು ದೊಡ್ಡ ಸಮುದಾಯವಾಗಿದ್ದು ಕುರುಬರು, ಬೋವಿಗಳು ಸಣ್ಣ ಸಮುದಾಯವಾಗಿದೆ. ಎಲ್ಲರೂ ಕನ್ನಡ ಮಾತನಾಡುತ್ತಾರೆ. ಒಟ್ಟು ೧೬೫ ಮನೆಗಳಿರುವ ಈ ಗ್ರಾಮದಲ್ಲಿ ೬ ಕಾಂಕ್ರೀಟ್ ಮನೆಗಳು, ೧೫೯ ಮಣ್ಣು ಹಾಗೂ ಕಲ್ಲಿನಿಂದ ಕಟ್ಟಲ್ಪಟ್ಟ ಮನೆಗಳಿವೆ. ಮನೆಗಳಿಗೆ ಕಪ್ಪು ಹಾಗೂ ಕೆಂಪು ಹೆಂಚುಗಳನ್ನು ಹೊದಿಸಲಾಗಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಎಳ್ಳು, ಹುಚ್ಚೆಳ್ಳು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಆಟೋ, ಬೈಕ್‌ಗಳಿವೆ. ಗ್ರಾಮದಲ್ಲಿ ರಸ್ತೆ ಹಾಗೂ ಚರಂಡಿ ಇದೆ. ಕೆಎಂಎಫ್ ಡೈರಿಯಿದೆ. ಕೆರೆ ತುಂಬಿದಾಗ ಮಾತ್ರ ಮೀನು ಕೃಷಿ ಮಾಡಲಾಗುತ್ತದೆ. ಶಿಕ್ಷಕರು, ವಕೀಲರು ಇದ್ದಾರೆ. ಒಂದು ಕೋಳಿ ಫಾರಂ ಇದೆ.

ಚಿಕ್ಕನಾಯಕನಹಳ್ಳಿ ಕಸಬಾ ಹೋಬಳಿ ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ಗ್ರಾಮಪಂಚಾಯ್ತಿ ಕ್ಷೇತ್ರಕ್ಕೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಉತ್ತಮ ರಸ್ತೆ ಸಂಪರ್ಕ ಇದ್ದು ಎಲ್ಲರೂ ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ತುಳಸಿ, ಭಾರತಮಾತಾ, ಚೌಡೇಶ್ವರಿ, ದುರ್ಗಾಶಕ್ತಿ, ಶ್ರೀಗೌರಿ, ಶ್ರೀಲಕ್ಷ್ಮಿ, ಚೌಡಮ್ಮ ಮುಂತಾದ ಸ್ತ್ರೀಶಕ್ತಿ ಸಂಘಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೇ.೭೨ ರಷ್ಟು ಸಾಕ್ಷರರು ಇದ್ದಾರೆ. ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಇವೆ. ಶಾಲೆಯಲ್ಲಿ ಕುಡಿಯುವ ನೀರು, ಶೌಚಾಲಯ ಸೌಲಭ್ಯ, ಕ್ಷೀರಭಾಗ್ಯ, ಬಿಸಿಯೂಟ ಯೋಜನೆಗಳು ಜಾರಿಯಲ್ಲಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಚಿಕ್ಕ ಅಂಗಡಿಗಳಿವೆ. ಸ್ಮಶಾನವಿದೆ.

ವೇಣುಗೋಪಾಲಸ್ವಾಮಿ (ಕಂಚೀರಾಯಸ್ವಾಮಿ), ಈಶ್ವರ (ಪ್ರಸನ್ನ ಮಲ್ಲೇಶ್ವರಸ್ವಾಮಿ), ರಾಮ, ತಿಮ್ಮಪ್ಪನ ದೇವಸ್ಥಾನಗಳಿವೆ. ಯುಗಾದಿ ಹಬ್ಬದ ನಂತರ ಜಾತ್ರೆ ಮಾಡುತ್ತಾರೆ. ರಥೋತ್ಸವ ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಾರಸಂದ್ರ

ಹೊನ್ನೇಬಾಗಿ ಗ್ರಾಮಪಂಚಾಯ್ತಿಗೆ ಸೇರಿ ಚಿಕ್ಕನಾಯಕನಹಳ್ಳಿ ಕಸಬಾ ಹೋಬಳಿಯಲ್ಲಿರುವ ಜನವಸತಿ ಗ್ರಾಮವಾಗಿದ್ದು ಕಂದಾಯ ಗ್ರಾಮ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೩.೫ ಕಿ.ಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೫೧.೩೫ ಚ.ಕಿ.ಮೀ ಆಗಿದೆ. ಮಾರ ಎಂಬ ವ್ಯಕ್ತಿಯ ನಾಮಸೂಚಿ ಪದ ಹಾಗೂ ಸಮುದ್ರ> ಸಂದ್ರ (ಕೆರೆ) ಎಂಬ ಎರಡು ಪದಗಳು ಸೇರಿ ಮಾರಸಂದ್ರ ಎಂಬ ಹೆಸರು ಬಂದಿದೆ.

ಬಯಲುನಾಡಿಗೆ ಸೇರಿರುವ ಗ್ರಾಮದಲ್ಲಿ ಬಿಳಿ ಕಲ್ಲು, ಬಿಳಿಮಣ್ಣು ಕಂಡುಬರುತ್ತದೆ. ಸಿದ್ಧರಾಮೇಶ್ವರ ಬೆಟ್ಟ ಗ್ರಾಮದ ಎಲ್ಲೆಯಲ್ಲಿದೆ. ಮೇಲನಹಳ್ಳಿ ತೋಪು ಇದ್ದು ಇದನ್ನು ಕಂಚೀರಾಯನತೋಪು ಎಂದೂ ಕರೆಯುತ್ತಾರೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ৬೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಪಕ್ಕದ ಊರಿನ ನವಿಲೆಕೆರೆಯ ಅರ್ಧಭಾಗ ಈ ಗ್ರಾಮದ ವ್ಯಾಪ್ತಿಗೂ ಸೇರುತ್ತದೆ. ಕುರುಬನಕಟ್ಟೆಹಳ್ಳ, ಮಲನಹಳ್ಳಿ ಕೆರೆಕೋಡಿಹಳ್ಳ, ಜಾಲದಕೆರೆಹಳ್ಳ ಎಂಬ ಹಳ್ಳಗಳು ಹರಿಯುತ್ತವೆ. ೩ ಸೇದೋಬಾವಿಗಳಿವೆ ಆದರೆ ನೀರಿಲ್ಲ. ೨ ಕೈಪಂಪುಗಳಿವೆ ಅವುಗಳಲ್ಲೂ ನೀರಿಲ್ಲ. ಕೃಷಿ ಬಳಕೆಗಾಗಿ ೮೫ ಕೊಳವೆ ಬಾವಿಗಳನ್ನು ಕೊರೆಸಿದ್ದಾರೆ. ಕುಡಿಯುವ ನೀರಿಗಾಗಿ ೬ ಸಿಸ್ಟನ್‌ಗಳು, ೨೪ ನಲ್ಲಿಗಳಿವೆ.

ವೀರಶೈವ ಸಮುದಾಯದವರು ಪ್ರಧಾನ ಸಮುದಾಯ. ಕುರುಬರು, ಕುಂಬಾರರು, ಮಡಿವಾಳರು ಸಣ್ಣ ಸಮುದಾಯ. ಎಲ್ಲರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ತೋಟದ ಓಣಿ ಎಂಬ ಒಂದು ಓಣಿಯಿದೆ. ೨೦೧೧ರ ಜನಗಣತಿ ಪ್ರಕಾರ ಒಟ್ಟು

ಜನಸಂಖ್ಯೆ ೪೫೭ ಇದೆ. ೮೪ ಮನೆಗಳಿದ್ದು ೪ ಕಾಂಕ್ರೀಟ್ ಮನೆಗಳು, ಕಲ್ಲು-ಮಣ್ಣಿನ ಮನೆಗಳಿವೆ. ಮೇಲ್ಛಾವಣಿಗೆ ಕಪ್ಪು ಹೆಂಚು ಹಾಗೂ ಕೆಂಪು ಹೆಂಚನ್ನು ಹೊದಿಸಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್‌ಗಳು, ಟೆಂಪೋಗಳಿವೆ. ಗ್ರಾಮ ಸಡಕ್ ರಸ್ತೆ ಹಾಗೂ ಚರಂಡಿ ವ್ಯವಸ್ಥೆ ಇದೆ. ನಂದಿನಿ ಡೈರಿಯಿದೆ. ತೆಂಗಿನ ಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕಾಗಿದೆ. ಶಿಕ್ಷಣ, ಪೊಲೀಸ್ ಮತ್ತು ರಕ್ಷಣಾ ಇಲಾಖೆಯಲ್ಲಿ ೬ ಕ್ಕೂ ಹೆಚ್ಚು ಜನ ಕೆಲಸದಲ್ಲಿದ್ದಾರೆ. ಬೆಂಗಳೂರಿನ ವಿವಿಧ ಫ್ಯಾಕ್ಟರಿಗಳಲ್ಲಿ ೧೫ಕ್ಕೂ ಹೆಚ್ಚು ಜನ ಕೆಲಸ ನಿರ್ವಹಿಸುತ್ತಿದ್ದಾರೆ. ೨ ಇದ್ದಲಿನ ಫ್ಯಾಕ್ಟರಿಗಳಿವೆ. ಕುಂಬಾರರು ಹಾಗೂ ಬಡಗಿಗಳು ಇದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಚಿಕ್ಕನಾಯಕನಹಳ್ಳಿ ಕಸಬಾ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ಗ್ರಾಮಪಂಚಾಯ್ತಿ ಕ್ಷೇತ್ರಕ್ಕೆ ಸೇರಿದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಒಬ್ಬರು ಗ್ರಾಮಪಂಚಾಯ್ತಿ ನೌಕರರಿದ್ದಾರೆ. ಗ್ರಾಮಕ್ಕೆ ರಸ್ತೆ ಮಾರ್ಗವಿದೆ. ಎಲ್ಲರೂ ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಹತ್ತಿಮರದಮ್ಮ, ಅಕ್ಕಮಹಾದೇವಿ, ಶ್ರೀಲಕ್ಷ್ಮಿ ಮುಂತಾದ ಸ್ತ್ರೀಶಕ್ತಿ ಸಂಘಗಳು, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘವಿದೆ. ಶೇ.೮೦ ರಷ್ಟು ಸಾಕ್ಷರತೆಯಿದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದೆ. ಶಾಲೆಯಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ, ಕ್ಷೀರಭಾಗ್ಯ ಹಾಗೂ ಬಿಸಿಯೂಟದ ಯೋಜನೆಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವಿಕಲಚೇತನ ವೇತನ, ವೃದ್ಧಾಪ್ಯವೇತನದ ೧೮ ಫಲಾನುಭವಿಗಳಿದ್ದಾರೆ.

ನವಿಲೆಕೆರೆ ಏರಿ ಮೇಲೆ ವೀರಗಲ್ಲು ಇದೆ. ಕನ್ನಿಕೆರೆ ಅಮ್ಮ ಎಂದು ಕರೆಯುತ್ತಾರೆ. ಬಸವೇಶ್ವರ, ಹತ್ತಿಮರದಮ್ಮ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕುಮಾರಸ್ವಾಮಿ, ಮಧು, ಕಮಲಮ್ಮ, ನಾಗರತ್ನ, ರಂಗಮ್ಮ, ಶಿವಮ್ಮ ಎಂಬುವವರು ಸೋಬಾನೆ, ಜನಪದ ಗೀತೆಗಳು ಹಾಗೂ ಭಕ್ತಿ ಗೀತೆಗಳನ್ನು ಹಾಡುತ್ತಾರೆ.

## ಮಾರಸಂದ್ರಪಾಳ್ಯ

ಮಾರಸಂದ್ರ ಪಾಳ್ಯವು ಚಿಕ್ಕನಾಯಕನಹಳ್ಳಿಯ ಕಸಬಾ ಹೋಬಳಿಯಲ್ಲಿ ಬರುವ ಮಾರಸಂದ್ರ ಎಂಬ ಗ್ರಾಮದ ಮಜರೆ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೫ ಕಿಮೀ ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೬೦೮.೧೭ ಚ.ಕಿ.ಮೀ. ಮಾರಸಂದ್ರದ ವಿಸ್ತೀರ್ಣದಲ್ಲಿ ಸೇರಿದೆ. ಬಯಲುನಾಡಿನ ಗ್ರಾಮದ ಸುತ್ತ ಬಿಳಿ ಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು  ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ೧೨ ಕ್ಕೂ ಹೆಚ್ಚು ಕೊಳವೆ ಬಾವಿಗಳಿವೆ.  ಒಟ್ಟು ೨೫೯ ಜನಸಂಖ್ಯೆ ಇದೆ. ಲಿಂಗಾಯಿತರು ದೊಡ್ಡ ಸಮುದಾಯ, ಆದಿಕರ್ನಾಟಕ, ಆದಿದ್ರಾವಿಡ ಸಣ್ಣ ಸಮುದಾಯವಾಗಿದೆ. ಕನ್ನಡ ಭಾಷೆಯನ್ನು ಬಳಸುತ್ತಾರೆ.  ಕಲ್ಲು ಹಾಗೂ ಮಣ್ಣಿನ ಮನೆಗಳಿವೆ. ಮೇಲ್ಛಾವಣಿಗೆ ಕಪ್ಪು ಹಾಗೂ ಕೆಂಪು ಹೆಂಚನ್ನು ಬಳಸಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕೊಬ್ಬರಿ ವ್ಯಾಪಾರಿ ಸರಕು. ಕೆಎಸ್‌ಆರ್‌ಟಿಸಿಯಲ್ಲಿ, ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವವರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ರಸ್ತೆ ಸಂಪರ್ಕ ಇದೆ. ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಶ್ರೀ ಭುವನೇಶ್ವರಿ, ಶ್ರೀಲಕ್ಷ್ಮಿ, ಶ್ರೀಮಾತಾ, ಜೈ ಭಾರತ್‌ಮಾತಾ, ಭಾರತಾಂಬೆ ಸ್ತ್ರೀಶಕ್ತಿ ಸಂಘಗಳಿವೆ. ಶೇ.೭೦ ರಷ್ಟು ಸಾಕ್ಷರರಿದ್ದಾರೆ. ಅಂಗನವಾಡಿ ಕೇಂದ್ರವಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಬಸವೇಶ್ವರ ದೇವಸ್ಥಾನವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಸಾಲ್ತಿಗುಡ್ಲು

ಮಸಾಲ್ತಿಗುಡ್ಲು ಹೊನ್ನೇಬಾಗಿ ಪಂಚಾಯ್ತಿ ವ್ಯಾಪ್ತಿಯಲ್ಲಿ ಮೇಲನಹಳ್ಳಿಯ ಮಜರೆ ಗ್ರಾಮವಾಗಿದೆ. ಇಲ್ಲಿನ ಜನರು ಬಹುತೇಕರು ಮಾಂಸಾಹಾರಿಗಳು. ಮಾಂಸದಡುಗೆ ಮಾಡಲು ಮಸಾಲೆ ಬಳಸುತ್ತಿದ್ದರು. ಆದುದರಿಂದ ಮಸಾಲೆ ಹಾಗೂ ಸ್ತ್ರೀ ಮೂಲದಿಂದ ಗ್ರಾಮಕ್ಕೆ ಈ ಹೆಸರು ಬಂದಿದೆ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ಮೇಲನಹಳ್ಳಿಯ ೭೯೦.೦೮ ಚ.ಕಿ.ಮೀ ನಲ್ಲಿ ವಿಲೀನವಾಗಿದೆ.

ಬಯಲುನಾಡಿಗೆ ಸೇರಿದ್ದು ಬಿಳಿಕಲ್ಲು, ಬಿಳಿ ಮಣ್ಣುಗಳಿಂದ ಕೂಡಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಪೂರ್ಣಪ್ರಮಾಣದಲ್ಲಿ ಕುರುಬರು ವಾಸಿಸುತ್ತಾರೆ. ಮಣ್ಣು ಹಾಗೂ ಕಲ್ಲಿನ ೨೫ ಮನೆಗಳಿದ್ದು ೭೮ ಜನರಿದ್ದಾರೆ. ಎಲ್ಲರೂ ಕನ್ನಡ ಮಾತನಾಡುತ್ತಾರೆ. ೬ ಜನತಾ, ಅಂಬೇಡ್ಕರ್ ವಸತಿ ಇತ್ಯಾದಿ ಮನೆಗಳಿವೆ. ಮನೆಗಳಿಗೆ ಕುಂಬಾರರ ಕಪ್ಪು ಹೆಂಚು ಹಾಗೂ ಮಂಗಳೂರಿನ ಕೆಂಪುಹೆಂಚನ್ನು ಬಳಸಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಉತ್ತಮ ಗ್ರಾಮ ಸಡಕ್ ರಸ್ತೆ ಮಾರ್ಗವಿದೆ. ಎಲ್ಲರೂ ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಶೇ.೫೦ ರಷ್ಟು ಜನರು ಸಾಕ್ಷರರಾಗಿದ್ದು ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಶ್ರೀರಾಮ ಮಂದಿರವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಾಸ್ತಯ್ಯನಪಾಳ್ಯ

ಮಾಸ್ತಯ್ಯ ಎಂಬ ವ್ಯಕ್ತಿಮೂಲದಿಂದಾಗಿ ಈ ಹೆಸರು ಬಂದಿದ್ದು ಇದು ಸಾಸಲು ಗ್ರಾಮದ ಮಜರೆ ಗ್ರಾಮ. ಬಯಲು ಪ್ರದೇಶ. ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ೧೨ ಕಿಮೀ ದೂರದಲ್ಲಿದೆ. ರೈತಾಪಿ ಜನವರ್ಗ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕುಡಿಯಲು ಜೆ.ಸಿ.ಪುರ ಗ್ರಾಮಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ಒಂದು ಕೊಳವೆಬಾವಿ, ಒಂದು ಕಿರುಟ್ಯಾಂಕ್ ಇದೆ. ಸ್ಥಳೀಯ ಬಡಗಿ ರೈತಾಪಿ ಕುಟುಂಬಗಳಿಗೆ ನೇಗಿಲು ಹಾಕುತ್ತಾರೆ.

ಸಾಮಾಜಿಕ ರಚನೆಯಲ್ಲಿ ಕುರುಬರು ದೊಡ್ಡ ಸಮುದಾಯವಾಗಿದೆ. ನಾಯಕ, ಅಗಸರು ಕಿರು ಸಮುದಾಯವಾಗಿದೆ. ವಿವಿಧ ಸ್ವರೂಪಗಳಾದ ಹೆಂಚಿನ,

ಶೀಟಿನ ೩೬ ಮನೆಗಳಿವೆ. ಸರ್ಕಾರದ ಜನತಾ, ಆಶ್ರಯ ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ೧೨ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ೧೭೬ ಜನಸಂಖ್ಯೆ ಇದೆ. ಮಹಿಳೆಯರು ಗರಿಕಡ್ಡಿ ಸಿಗಿಯುವ ಕೆಲಸ ಮಾಡುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಶಿಕ್ಷಣ, ಸಾರಿಗೆ ಇಲಾಖೆಯಲ್ಲಿ ೩ ಜನ ಕೆಲಸ ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಜೆ.ಸಿ. ಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಒಂದು ಪ್ರಾಥಮಿಕ ಪಾಠಶಾಲೆ ಹಾಗೂ ಅಂಗನವಾಡಿ ಕೇಂದ್ರವಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯದ ಬಳಕೆಯಿದೆ. ಸಾಕ್ಷರತೆ ೭೧% ರಷ್ಟಿದೆ. ಕನ್ನಡ ಮಾತೃಭಾಷೆಯಾಗಿದೆ. ಮೊಬೈಲ್ ಬಳಕೆಯಿದೆ. ಕಾಲರ, ಜ್ವರ, ಕೆಮ್ಮು, ಅಸಿಡಿಟಿ ಮುಂತಾದ ಕಾಯಿಲೆಗಳಿಗೆ ಶೆಟ್ಟಿಕೆರೆಗೆ ಹೋಗುತ್ತಾರೆ. ಆಶಾ ಕಾರ್ಯಕರ್ತೆ ಗ್ರಾಮ ಮಟ್ಟದಲ್ಲಿಯೇ ಬಸುರಿ ಹಾಗೂ ಬಾಣಂತಿ, ಮಕ್ಕಳಿಗೆ ಔಷಧಿ ವಿತರಿಸುತ್ತಾರೆ. ಕರಿಯಮ್ಮ ಸ್ತ್ರೀಶಕ್ತಿ ಸಂಘವಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಕರಿಯಮ್ಮ, ಬೀರದೇವರ ಪೌಳಿಗಳಿವೆ. ಸಾಸಲು ಬನಶಂಕರಮ್ಮ ದೇವರಿಗೆ ನಡೆದುಕೊಳ್ಳುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಲಗೊಂಡನಹಳ್ಳಿ

ಮಲಗೊಂಡನಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದ ದಕ್ಷಿಣ ದಿಕ್ಕಿನಲ್ಲಿ ತಾಲ್ಲೂಕು ಕೇಂದ್ರದಿಂದ ೧೨ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೧ ಹೆಕ್ಟೇರ್. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಕೃಷಿ ಕಾರ್ಮಿಕರು, ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ೧ ಕುಟುಂಬ ಮರಗೆಲಸದವರು ಇದ್ದಾರೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೫೦೦–೬೦೦ ಅಡಿ ಆಳದ ೧೦೦ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಿಗೆ ನೀರೊದಗಿಸುತ್ತಿವೆ. ೮ ತೆರೆದ ಬಾವಿಗಳಿದ್ದು ಬತ್ತಿಹೋಗಿವೆ. ೨೦೦ ವರ್ಷ ಹಳೆಯ ೩ ಕಲ್ಲಿನ ಸೇದುವ ಬಾವಿಗಳಿದ್ದು ಬತ್ತಿಹೋಗಿವೆ. ಕುಡಿಯುವ ನೀರಿಗೆ ೧ ಲಕ್ಷ ಲೀ. ಸಾಮರ್ಥ್ಯದ ನೀರಿನ ಮೇಲ್ಟಾಟು ಇದ್ದು ಗ್ರಾಮದ ೭೦ ಮನೆಗಳು ಕೊಳಾಯಿ ಸಂಪರ್ಕ ಹೊಂದಿವೆ. ೬ ಮಿನಿ ಟ್ಯಾಂಕುಗಳಿದ್ದು ಕುಡಿಯುವ ನೀರಿನ ಸೌಲಭ್ಯವಿದೆ. ಬಳಸಕಟ್ಟೆ, ಉಣ್ಣೆದೇವರ ಕಟ್ಟೆ, ಬೊಬ್ಬನಕಟ್ಟೆ, ಕದರಯ್ಯನಕಟ್ಟೆ ಎಂಬ ನಾಲ್ಕು ಕಟ್ಟೆಗಳಿವೆ.

ಲಿಂಗಾಯಿತರೇ ಪ್ರಧಾನವಾಗಿದ್ದು ಕುರುಬರು, ಮಡಿವಾಳರು, ಆದಿಕರ್ನಾಟಕ, ಆದಿದ್ರಾವಿಡ, ದರ್ಜಿಗರು ಕಿರುಸಮುದಾಯಗಳಾಗಿವೆ. ಪ್ರಮುಖ ಭಾಷೆ ಕನ್ನಡವಾಗಿದೆ. ೧೭೫ ಮನೆಗಳನ್ನು ಹೊಂದಿದ್ದು ೨೦೧೧ ರ ಜನಗಣತಿಯ ಪ್ರಕಾರ ೫೫೨ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಒಟ್ಟು ಸಾಕ್ಷರತೆಯ ಪ್ರಮಾಣ ೭೫.೯ ರಷ್ಟಿದೆ. ಕಾಂಕ್ರೀಟ್, ಮಣ್ಣಿನ, ಸೀಮೆ ಹೆಂಚಿನ ಮನೆಗಳು ಮತ್ತು ಗುಡಿಸಲುಗಳಿವೆ. ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯ ೩೮ ಮನೆಗಳು ನಿರ್ಮಾಣವಾಗಿವೆ.

ಕೃಷಿ ಪ್ರಧಾನವಾದ ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕಾರ್, ದ್ವಿಚಕ್ರ ವಾಹನಗಳಿವೆ. ಸಾಂಪ್ರದಾಯಿಕ ಹೈನುಗಾರಿಕೆ ಅಲ್ಪಪ್ರಮಾಣದಲ್ಲಿದ್ದು ಆಧುನಿಕ ಡೈರಿ ವ್ಯವಸ್ಥೆಯಿದೆ. ಹಾಲು ಉತ್ಪಾದಕರ ಸಹಕಾರ ಸಂಘವು ಪ್ರತಿದಿನ ೪೦೦ ಲೀ. ಹಾಲು ಸಂಗ್ರಹಿಸುತ್ತಿದ್ದು ಆರ್ಥಿಕ ಚೇತರಿಕೆಗೆ ಕಾರಣವಾಗಿದೆ. ೧೨ ಮಂದಿ ಶಿಕ್ಷಣ ಇಲಾಖೆ ನೌಕರರು, ೨೦ ಮಂದಿ ಖಾಸಗಿ ಒಡೆತನದ

ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಜೆ.ಸಿ. ಪುರ ತಾಲ್ಲೂಕು ಪಂಚಾಯ್ತಿ ಮತ್ತು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಚಿಕ್ಕನಾಯಕನಹಳ್ಳಿ ಗ್ರಾಮಾಂತರ ಪೊಲೀಸ್ ಠಾಣೆ ಸರಹದ್ದಿಗೆ ಸೇರಿದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಾಲ್ಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಲ್ಲಿ ತಹಸೀಲ್ದಾರ್ ಕಛೇರಿಯಿದೆ. ಸಂಚಾರಿ ದೂರವಾಣಿಗಳಿವೆ.

ಒಂದು ಅಂಗನವಾಡಿ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ದೇವರಾಜ ಅರಸ್ ಅನುದಾನಿತ ಗ್ರಾಮಾಂತರ ಪ್ರೌಢಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆಗಳು ಹಾಗೂ ಕುಡಿಯುವ ನೀರು, ಶೌಚಾಲಯ ಸೌಲಭ್ಯಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೩೭ ಫಲಾನುಭವಿಗಳಿದ್ದಾರೆ. ಜೆ.ಸಿ. ಪುರ ಗ್ರಾಮ ಪಂಚಾಯ್ತಿ ಆಡಳಿತಕ್ಕೊಳಪಟ್ಟ ಗ್ರಂಥಾಲಯವಿದ್ದು ೩೨೦ ಪುಸ್ತಕಗಳ ಸಂಗ್ರಹವಿದೆ. ೪ ಸಣ್ಣ ಅಂಗಡಿಗಳಿವೆ. ೧ ಫ್ಲೋರ್‌ಮಿಲ್ ಇದೆ. ೩ ಸ್ತ್ರೀಶಕ್ತಿ ಸಂಘಗಳು, ೧ ರೈತಶಕ್ತಿ ಗುಂಪು ಇದೆ.

ಬಸವೇಶ್ವರ ಮತ್ತು ಕಲ್ಲೇಶ್ವರ ದೇವಾಲಯಗಳಿವೆ. ಪ್ರತಿವರ್ಷ ಕಲ್ಲೇಶ್ವರ ಸ್ವಾಮಿ ಜಾತ್ರೆ ಜರುಗುತ್ತದೆ. ಕೊಂಡ ಮತ್ತು ಪಲ್ಲಕ್ಕಿ ಉತ್ಸವ ಜಾತ್ರೆಯ ಪ್ರಮುಖ ವಿಶೇಷವಾಗಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಲಗೊಂಡನಹಳ್ಳಿ ಎ.ಕೆ. ಕಾಲೋನಿ

ಮಲಗೊಂಡನಹಳ್ಳಿ ಎ.ಕೆ. ಕಾಲೋನಿಯು ಮಲಗೊಂಡನಹಳ್ಳಿ ಮುಖ್ಯ ಗ್ರಾಮಕ್ಕೆ ಹೊಂದಿಕೊಂಡಂತೆ ಮಾದಿಗರಹಟ್ಟಿ ಎಂದು ಪ್ರತ್ಯೇಕವಾಗಿದೆ. ಇದನ್ನು ಎ.ಕೆ. ಕಾಲೋನಿ ಎಂದೂ ಕರೆಯಲಾಗುತ್ತದೆ. ಇದು ಚಿ.ನಾ. ಹಳ್ಳಿ ತಾಲ್ಲೂಕು ಕೇಂದ್ರದಿಂದ ೧೨ ಕಿಮೀ ದೂರದಲ್ಲಿದ್ದು ಜೆ.ಸಿ. ಪುರ ಗ್ರಾಮಪಂಚಾಯ್ತಿಗೆ ಸೇರಿದೆ. ಆದಿಕರ್ನಾಟಕ ಜನಾಂಗಕ್ಕೆ ಸೇರಿದ ಒಟ್ಟು ೩೭ ಮನೆಗಳಿದ್ದು ಒಟ್ಟು ೧೮೪ ಜನಸಂಖ್ಯೆ ಇದೆ. ಈ ಮನೆಗಳು ಮಾಳಿಗೆ, ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಇವು ಸರ್ಕಾರದ ವಸತಿ ಯೋಜನೆಗಳಾದ ಜನತಾ, ಆಶ್ರಯ, ಇಂದಿರಾ ಆವಾಸ್ ಹಾಗೂ ಅಂಬೇಡ್ಕರ್ ವಸತಿ ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ಕೃಷಿ ಇಲ್ಲಿನ ಮುಖ್ಯ ಕಸುಬು. ರಾಗಿ, ಹೆಸರು, ಅವರೆ, ಹುರುಳಿ ಬೆಳೆಯುತ್ತಾರೆ. ತೋಟ ಇರುವವರು ತೆಂಗಿನಕಾಯಿ ಮಾರಾಟ ಕೊಬ್ಬರಿಯೂ ವ್ಯಾಪಾರಿ ಸರಕಾಗಿದೆ. ಕುರಿ, ಮೇಕೆ, ಹಸು ಸಾಕುಪ್ರಾಣಿಗಳಾಗಿವೆ. ಶಿಕ್ಷಣ, ಸಾರಿಗೆ, ಅರಣ್ಯ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಿದ್ದಾರೆ. ಕನ್ನಡ ಇಲ್ಲಿನ ಪ್ರಮುಖ ಭಾಷೆ. ಒಂದು ಅಂಗನವಾಡಿ ಕೇಂದ್ರವಿದ್ದು ಮಕ್ಕಳಿಗೆ ಪೌಷ್ಠಿಕ ಆಹಾರ ಪೂರೈಸುತ್ತಿದ್ದಾರೆ. ಹೆಚ್ಚಿನ ಶಿಕ್ಷಣಕ್ಕೆ ಮುಖ್ಯ ಗ್ರಾಮದ ಮಾಧ್ಯಮಿಕ ಶಾಲೆ ಇದೆ. ಪಡಿತರ ಸೌಲಭ್ಯ ಮುಖ್ಯಗ್ರಾಮದಿಂದ ಪಡೆದುಕೊಳ್ಳುತ್ತಿದ್ದಾರೆ. ಗ್ರಾಮದಲ್ಲಿ ಕದಿರ ನರಸಿಂಹಸ್ವಾಮಿ ಪೌಳಿಯಿದೆ. ಲಕ್ಕಮ್ಮ ದೇವರಿಗೆ ಆರತಿ, ಬಾನದ ಹರಕೆ ಸಂಪ್ರದಾಯವಿದೆ. ೨ ಸ್ತ್ರೀಶಕ್ತಿ ಸಂಘಗಳಿವೆ. ವೃದ್ಧಾಪ್ಯ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಅಂಚೆ ಸಂಪರ್ಕ ಜೆ.ಸಿ. ಪುರದಿಂದ ಪಡೆಯುತ್ತಾರೆ. ಜೆ.ಸಿ. ಪುರ ಗ್ರಾಮಪಂಚಾಯ್ತಿಯ ಒಬ್ಬರು ಪ್ರತಿನಿಧಿಯಿದ್ದಾರೆ. ಜೆ.ಸಿ. ಪುರ ಗ್ರಾಮದಿಂದ ಚಿಕ್ಕನಾಯಕನಹಳ್ಳಿ–ಕೆ.ಬಿ. ಕ್ರಾಸ್‌ಗೆ ಬಸ್ ಸಂಪರ್ಕವಿದೆ. ಯುಗಾದಿ, ದಸರಾ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ.

## ಮತ್ತಿಘಟ್ಟ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿಯ ಗ್ರಾಮಪಂಚಾಯ್ತಿ ಹೊಂದಿರುವ ಗ್ರಾಮವೇ ಮತ್ತಿಘಟ್ಟ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೦ ಕಿಮೀ ದೂರದಲ್ಲಿದೆ. ಗ್ರಾಮದವರು ಹೇಳುವ ಪ್ರಕಾರ ಮತ್ತಿ ಜಾತಿಯ ಮರಗಳು ಹೆಚ್ಚು ಬೆಳೆಯುತ್ತಿದ್ದ ಕಾರಣ ಈ ಪರಿಸರದಲ್ಲಿ ಮನೆಗಳು ರಚನೆಯಾದವು. ಸಸ್ಯ ಮೂಲದಿಂದ ಈ ಗ್ರಾಮಕ್ಕೆ ಮತ್ತಿಘಟ್ಟ ಎಂದು ಕರೆಯಲಾಗಿದೆ.

ಮತ್ತಿಘಟ್ಟ ಗ್ರಾಮದ ಭೌಗೋಳಿಕ ವಿಸ್ತೀರ್ಣವು ೬೮೪.೮೬ ಹೆಕ್ಟೇರ್ ಆಗಿದ್ದು ಕೆಂಪು ಮಿಶ್ರಿತ ಕರಿಮಣ್ಣನ್ನು ಹೊಂದಿ ಕೃಷಿಗೆ ಯೋಗ್ಯವಾದ ಭೂಮಿಯಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೩ ತೆರೆದ ಬಾವಿ, ೧೦೦ ಕೊಳವೆ ಬಾವಿಗಳಿವೆ. ಗ್ರಾಮಕ್ಕೆ

ನೀರುಣಿಸಲು ೨ ಓವರ್‌ಹೆಡ್ ಟ್ಯಾಂಕ್‌ಗಳು, ೬ ಕಿರು ಟ್ಯಾಂಕ್‌ಗಳಿವೆ.

ಕೃಷಿ ಪ್ರಧಾನವಾದ ಕೆಂಪು ಮಿಶ್ರಿತ ಕರಿ ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ದಾಳಿಂಬೆ, ತರಕಾರಿ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಹೊಲ ಕೊಯ್ಯುವ ಯಂತ್ರಗಳನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಲಿಂಗಾಯಿತರು ದೊಡ್ಡ ಸಮುದಾಯವಾಗಿದ್ದು ಕುಂಬಾರರು, ಕೊರಮರು, ಮುಸ್ಲಿಂ, ನಾಯಕರು, ಮುಸ್ಲಿಂ ಕಿರು ಸಮುದಾಯಗಳಾಗಿವೆ. ಕನ್ನಡ, ಉರ್ದು ಭಾಷೆಗಳನ್ನು ಬಳಸುತ್ತಾರೆ. ಸುಮಾರು ೨೮೩ ಮನೆಗಳಿದ್ದು ೪೦ ಮನೆಗಳಲ್ಲಿ ಶೌಚಾಲಯ ಬಳಕೆಯಿದೆ. ೨೦೦ ಹೆಂಚಿನ, ೧೩ ಮಣ್ಣಿನ, ೬೦ ಕಲ್ಲಿನ, ೧೦ ಕಾಂಕ್ರೀಟ್ ಮನೆಗಳಿವೆ. ೪೦ ಆಶ್ರಯ, ೩೦ ಜನತಾ, ೨೦ ಅಂಬೇಡ್ಕರ್ ವಸತಿ ನಿಲಯಗಳು, ೪೦ ಇಂದಿರಾ ಆವಾಸ್ ಮನೆಗಳಿವೆ. ೬೦ ಕುಟುಂಬಗಳು ಭಾಗ್ಯಜ್ಯೋತಿ ವಿದ್ಯುತ್ ವ್ಯವಸ್ಥೆಯನ್ನು ಹೊಂದಿವೆ. ೭೦ ವಿದ್ಯುತ್ ಕಂಬಗಳಿಗೆ ವಿದ್ಯುತ್ ಬೀದಿ ದೀಪಗಳನ್ನು ಅಳವಡಿಸಲಾಗಿದೆ. ೨೦೧೧ ರ ಜನಗಣತಿಯಂತೆ ೯೮೪ ಜನಸಂಖ್ಯೆಯಿದ್ದು ಸಾಕ್ಷರರ ಪ್ರಮಾಣ ೬೮% ರಷ್ಟಿದೆ. ಆಧುನಿಕ ಡೈರಿ ವ್ಯವಸ್ಥೆಯಿದೆ. ತಳ್ಳುವ ಗಾಡಿ ವ್ಯಾಪಾರ ಬೀದಿಬದಿ ವ್ಯಾಪಾರಗಳಿವೆ. ೪೦ ಮಂದಿ ಸರ್ಕಾರಿ ನೌಕರರಲ್ಲಿ ೨೦ ಶಿಕ್ಷಕರು, ೬ ಕಂಡಕ್ಟರ್, ೪ ಜನ ಜವಾನರು, ೪ ಜನ ಉಪನ್ಯಾಸಕರು, ಇಬ್ಬರು ಕೆಇಬಿ ನೌಕರರು, ೪ ಮಂದಿ ಕೃಷಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಮ್ಮಾರಿಕೆ, ಕುಂಬಾರಿಕೆ, ಬಡಿಗತನ ಮಾಡುವ ಜನರು ಹಾಗೂ ೩ ಹಿಟ್ಟಿನ ಗಿರಣಿಗಳು, ೮ ಟೈಲರ್‌ಗಳು ಇದ್ದಾರೆ. ೧೬೦ ಕುಟುಂಬಗಳು ಶೌಚಾಲಯ ಬಳಸುತ್ತಾರೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮತ್ತಿಘಟ್ಟ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮ ಪಂಚಾಯ್ತಿ ಸದಸ್ಯರು, ೩ ಜನ ಗ್ರಾಮ ಪಂಚಾಯ್ತಿ ನೌಕರರನ್ನು ಹೊಂದಿದೆ. ತಹಸೀಲ್ದಾರ್ ಕಛೇರಿ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿಯನ್ನು ಚಿಕ್ಕನಾಯಕನಹಳ್ಳಿಯಲ್ಲಿ ಕಾಣಬಹುದು. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಜಿಲ್ಲಾ ಮುಖ್ಯ ರಸ್ತೆಯಿದೆ. ಹುಳಿಯಾರು, ಮತ್ತಿಘಟ್ಟ, ತಿಪಟೂರು, ಚಿ.ನಾ ಹಳ್ಳಿ, ಹಂದನಕೆರೆ, ಹೊಸದುರ್ಗ ಸಂಪರ್ಕ ಕಲ್ಪಿಸುತ್ತದೆ. ೨ ಕಚ್ಚಾ ರಸ್ತೆಗಳಿವೆ. ೧ ಬಿಳಿಗೆಹಳ್ಳಿ ಕಡೆಗೆ ಇನ್ನೊಂದು ಮಲ್ಲಿಗೆರೆ–ಬರಗೂರು ಕಡೆಗಳಿಗೂ ಇವೆ. ಅಂಚೆಕಛೇರಿ, ದೂರವಾಣಿ, ತಂತಿ ಮತ್ತು ಈಮೇಲ್ ಸೌಲಭ್ಯವಿದೆ.

ರಾಜ್ಯಸರ್ಕಾರದ ಕರ್ನಾಟಕ ಬ್ಯಾಂಕ್, ಕಾವೇರಿ ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳಿವೆ. ಕೇಂದ್ರ ಸರ್ಕಾರದ ಕೆನರಾ ಬ್ಯಾಂಕ್ ಇದೆ. ಕಲ್ಪತರು ಗ್ರಾಮೀಣ ಬ್ಯಾಂಕ್ ಇದೆ. ಪಾರ್ವತಿ, ಈಶ್ವರಿ, ಕಾವೇರಿ, ತುಂಗಾ, ಜಾಗೃತಿ ಸ್ತ್ರೀಶಕ್ತಿ ಸಂಘಗಳಿದ್ದು ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಹಕಾರ ಸಂಘಗಳಿವೆ. ಪ್ರತಿ ಶುಕ್ರವಾರ ಸಂತೆ ಜರುಗುತ್ತದೆ. ತರಕಾರಿ, ದವಸ, ಬಟ್ಟೆ, ಹಣ್ಣು, ಕೃಷಿ ಉಪಕರಣ ಸಂತೆಯಲ್ಲಿ ದೊರೆಯುತ್ತದೆ. ಒಂದು ಅಂಗನವಾಡಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಎಸ್.ಜೆ.ಬಿ.ವಿ.ಪಿ. ಪ್ರೌಢಶಾಲೆ, ಪಿ.ಯು ಕಾಲೇಜು ಮತ್ತು ಪ್ರಥಮ ದರ್ಜೆ ಕಾಲೇಜಿ ಇದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ವ್ಯವಸ್ಥೆಯಿದೆ. ಶೌಚಾಲಯ ಮತ್ತು ವಿಶಾಲವಾದ ಆಟದ ಮೈದಾನವಿದೆ. ಶಾಲೆಗಳಲ್ಲಿ ಕ್ರೀಡೆಗೆ ಸಂಬಂಧಿಸಿದ ಆಟೋಪಕರಣಗಳು, ಪಾಠಕ್ಕೆ ಸಂಬಂಧಿಸಿದ ಪಾಠೋಪಕರಣಗಳಿವೆ. ಪ್ರತಿವರ್ಷ ಉತ್ತಮವಾದ ಫಲಿತಾಂಶ ಬರುತ್ತದೆ. ಒಂದು ಗ್ರಂಥಾಲಯವಿದ್ದು ೨ ಸಾವಿರ ಪುಸ್ತಕಗಳಿವೆ. ಸಾರ್ವಜನಿಕ ಆಸ್ಪತ್ರೆ ಹಾಗೂ ಪಶುವೈದ್ಯಕೀಯ ಆಸ್ಪತ್ರೆ ಇದೆ. ಕುಟುಂಬ ಕಲ್ಯಾಣ ಯೋಜನೆ ವ್ಯವಸ್ಥೆಯಿದೆ. ಶೇ.೭೦ ಸಾಕ್ಷರತೆಯಿದೆ.

ಪಾರ್ವತಮ್ಮ, ಬಸವೇಶ್ವರ, ಕಲ್ಲೇಶ್ವರ, ಗಣಪತಿ ದೇವಾಲಯಗಳಿವೆ. ಒಂದು ಮಸೀದಿ ಇದೆ. ಪಾರ್ವತಮ್ಮ ದೇವರಿಯವರ ಜಾತ್ರೆಯನ್ನು ಬಹಳ ವಿಜೃಂಭಣೆಯಿಂದ ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮತಿಘಟ್ಟ ಎ.ಡಿ. ಕಾಲೋನಿ

ಮತಿಘಟ್ಟ ಆದಿದ್ರಾವಿಡರ ಕಾಲೋನಿಯು ಮತಿಘಟ್ಟಕ್ಕೆ ಸೇರಿದ್ದು ಗ್ರಾಮದ ಬದಿಯಲ್ಲಿದೆ. ಆದಿದ್ರಾವಿಡ ಜನಾಂಗ ಪ್ರತ್ಯೇಕವಾಗಿ ವಸತಿ

ನಿರ್ಮಿಸಿಕೊಂಡು ವಾಸಿಸುತ್ತಿರುವುದರಿಂದ ಹೊಲೆಯರ ಹಟ್ಟಿ ಎಂದು ಕರೆಯುತ್ತಾರೆ. ಇಲ್ಲಿ ಒಟ್ಟು ೪೧ ಮನೆಗಳಿದ್ದು ೧೯೭ ಜನಸಂಖ್ಯೆಯನ್ನು ಹೊಂದಿದೆ. ಇಲ್ಲಿನ ಮನೆಗಳು ಹೆಂಚಿನ, ಶೀಟಿನ ಸ್ವರೂಪದಲ್ಲಿದ್ದು ಅವು ಸರ್ಕಾರದ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಕುಡಿಯಲು ಮತಿಘಟ್ಟ ಗ್ರಾಮ ಪಂಚಾಯ್ತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸುತ್ತಿದ್ದು ೨ ಸಿಸ್ಟರ್ನ್‌ಗಳಿವೆ. ಕೃಷಿಕರು ಹಾಗೂ ಕೃಷಿ ಕಾರ್ಮಿಕರು ಅಧಿಕವಾಗಿದ್ದು ರಾಗಿ, ಹೆಸರು, ಅವರೆ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ದಾಳಿಂಬೆ ಬೆಳೆಯುತ್ತಾರೆ. ಕೊಬ್ಬರಿ ವ್ಯಾಪಾರಿ ಸರಕಾಗಿದೆ. ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳು. ಎತ್ತಿನ ಗಾಡಿಗಳಿದ್ದು ದ್ವಿಚಕ್ರವಾಹನ ಬಳಸುತ್ತಾರೆ. ಸಾರಿಗೆ, ಶಿಕ್ಷಣ, ಕೆಇಬಿ ಹಾಗೂ ಅರಣ್ಯ ಇಲಾಖೆಗೆ ಸೇರಿದ ೭ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಆಟೋ ಡ್ರೈವರ್, ಟ್ರ್ಯಾಕ್ಟರ್ ಡ್ರೈವರ್‌ಗಳಿದ್ದಾರೆ. ರಾಗಿಮುದ್ದೆ ಇವರ ಮುಖ್ಯ ಆಹಾರವಾಗಿದ್ದು ಅನ್ನ, ರೊಟ್ಟಿ ಬಳಸುತ್ತಾರೆ. ಸಾಂದರ್ಭಿಕವಾಗಿ ಬಾಡೂಟ, ಪಾಯಸ, ಹೋಳಿಗೆ ಬಳಸುತ್ತಾರೆ. ಮತಿಘಟ್ಟ ಗ್ರಾಮ ಪಂಚಾಯ್ತಿ, ಹಂದನಕೆರೆ ಹೋಬಳಿಗೆ ಸೇರಿದ್ದು ಪಂಚಾಯ್ತಿ ಸದಸ್ಯರಾಗಿ ಒಬ್ಬರು ಇದ್ದಾರೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ಪ್ರಾಥಮಿಕ ಹಾಗೂ ಪ್ರೌಢಶಾಲೆಗೆ ಮುಖ್ಯ ಗ್ರಾಮಕ್ಕೆ ಹೋಗುತ್ತಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾವೇತನದ ೧೮ ಫಲಾನುಭವಿಗಳಿದ್ದಾರೆ. ಅಂತರಘಟ್ಟಮ್ಮನ ಬೃಹತ್ ಜಾತ್ರೆ ಸೇರುತ್ತದೆ. ಬಾಯಿಬೀಗ, ಮಡೆ, ಬಾನ, ಬ್ಯಾಟೆ, ಹರಕೆ ಸಂಪ್ರದಾಯಗಳಿದ್ದು ಹಗಲು ಪರಿಸೆ, ರಾತ್ರಿಪರಿಸೆ, ಅಗ್ನಿಕೊಂಡ ಆಚರಣೆಗಳಿವೆ. ಚಿಕ್ಕನಾಯಕನಹಳ್ಳಿ ಹುಳಿಯಾರು, ತಿಪಟೂರಿಗೆ ರಸ್ತೆ ಸಂಪರ್ಕವಿದ್ದು ಬಸ್ ಓಡಾಡುತ್ತವೆ. ಯುಗಾದಿ, ದೀಪಾವಳಿ, ದಸರಾ, ಗೌರಿ–ಗಣೇಶ ಹಬ್ಬಗಳನ್ನು ಆಚರಿಸುತ್ತಾರೆ. ೨ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿದ್ದು ೬೯% ಸಾಕ್ಷರತೆ ಇದೆ.

## ಮತಿಘಟ್ಟ ಗೊಲ್ಲರಹಟ್ಟಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿಯಲ್ಲಿನ ಮತಿಘಟ್ಟ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಕಂದಾಯ ಗ್ರಾಮ ಗೊಲ್ಲರಹಟ್ಟಿ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೪ ಕಿಮೀ ಅಂತರದಲ್ಲಿದೆ. ಗೊಲ್ಲ ಜನಾಂಗದ ಬುಡಕಟ್ಟು ಗ್ರಾಮವಾಗಿರುವುದರಿಂದ ಜನಾಂಗಿಕ ಹೆಸರಿನಲ್ಲಿಯೇ ಗ್ರಾಮ ರಚನೆಯಾಗಿದೆ.

ಭೌಗೋಳಿಕ ವಿಸ್ತೀರ್ಣ ೯೦.೮೬ ಹೆಕ್ಟೇರ್ ಇದೆ. ಕೆಂಪು ಮಿಶ್ರಿತ ಕಪ್ಪು ಮಣ್ಣನ್ನು ಹೊಂದಿ ಕೃಷಿಗೆ ಯೋಗ್ಯವಾದ ಭೂಮಿಯಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಒಂದು ಕುಂಟೆ, ಕೆರೆ, ೧೦ ಕೊಳವೆ ಬಾವಿ ಹಾಗೂ ೨ ತೆರೆದ ಬಾವಿಗಳಿವೆ. ೩ ಮಿನಿ ವಾಟರ್ ಟ್ಯಾಂಕ್‌ಗಳಿಂದ ಈ ಗ್ರಾಮಕ್ಕೆ ನೀರು ಒದಗಿಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಗೊಲ್ಲರು ದೊಡ್ಡ ಸಮುದಾಯವಾಗಿದ್ದಾರೆ. ಬೇರೆ ಯಾವುದೇ ಜಾತಿಯವರು ಇರುವುದಿಲ್ಲ. ಕನ್ನಡ ಭಾಷೆ ಮಾತನಾಡುತ್ತಾರೆ. ೪೩ ಮನೆಗಳಿದ್ದು ೩ ಮನೆಗಳಲ್ಲಿ ಮಾತ್ರ ಶೌಚಾಲಯದ ಬಳಕೆಯಿದೆ. ೨೦ ಹೆಂಚಿನ ಮನೆಗಳು, ೨ ಗುಡಿಸಲು, ೨೦ ಕಲ್ಲಿನ ಮನೆಗಳು, ೧ ಕಾಂಕ್ರೀಟ್ ಮನೆಗಳಿವೆ. ೧ ವಸತಿ ರಹಿತ ಕುಟುಂಬ ಹಾಗೂ ೬ ನಿವೇಶನ ರಹಿತ ಕುಟುಂಬಗಳಿದ್ದು ಈ ಮನೆಗಳಲ್ಲಿ ೧೩ ಆಶ್ರಯ, ೬ ಜನತಾ, ೧ ಇಂದಿರಾ ಆವಾಸ್ ಮನೆಗಳಾಗಿವೆ. ೨೦ ಕುಟುಂಬಗಳು ಭಾಗ್ಯಜ್ಯೋತಿ ವಿದ್ಯುತ್ ವ್ಯವಸ್ಥೆಯನ್ನು ಪಡೆದಿವೆ.

೨೦೧೧ ರ ಜನಗಣತಿಯಂತೆ ಒಟ್ಟು ಜನಸಂಖ್ಯೆ ೧೮೫. ಸಾಕ್ಷರತೆಯ ಪ್ರಮಾಣ ೬೦% ಇದೆ. ಆಧುನಿಕ ಡೈರಿ ವ್ಯವಸ್ಥೆ ಇದೆ. ಇಬ್ಬರು ಶಿಕ್ಷಕರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮತ್ತಿಘಟ್ಟ ತಾಲ್ಲೂಕು ಮತ್ತು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ,

ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಜಿಲ್ಲಾ ರಸ್ತೆ ಮತ್ತು ರಾಜ್ಯ ರಸ್ತೆಯಿದೆ. ರಕ್ಷಣೆ, ನ್ಯಾಯಾಂಗ ವ್ಯವಸ್ಥೆಗೆ ಚಿಕ್ಕನಾಯಕನಹಳ್ಳಿಗೆ ಹೋಗಬೇಕಿದೆ. ಸ್ತ್ರೀಶಕ್ತಿ ಸಂಘಗಳು ಮತ್ತು ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘಗಳಿವೆ. ಆಸ್ಪತ್ರೆ, ಪಡಿತರ, ಶಿಕ್ಷಣಕ್ಕೆ ಮತಿಘಟ್ಟ ಗ್ರಾಮಕ್ಕೆ ಹೋಗುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೧ ಅಂಗಡಿ ಇದೆ.

ರಂಗನಾಥಸ್ವಾಮಿ, ಭೂತಪ್ಪ ದೇವಾಲಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ದೀಪಾವಳಿ ಈ ಗ್ರಾಮದ ಮಹತ್ವದ ಹಬ್ಬ. ಹಿರಿಯರ ಹಬ್ಬ, ಹಾಲು ಮೀಸಲು ಹಬ್ಬ ಹಾಗೂ ದೀಪ ಏರಿಸುವ ಹಬ್ಬವಾಗಿ ಆಚರಿಸುತ್ತಾರೆ. ಏಳು ದಿನಗಳ ಕಾಲ ಗ್ರಾಮದಲ್ಲಿ ಸಂಭ್ರಮವಿರುತ್ತದೆ.

## ಮಾದಾಪುರ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿಯ ಮತಿಘಟ್ಟ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೬ ಕಿ.ಮೀ. ಅಂತರದಲ್ಲಿದೆ. ಮಾದಾಪುರ ತಾಂಡ ಎಂಬ ಮಜರೆ ಗ್ರಾಮವನ್ನು ಒಳಗೊಂಡಿದೆ. ಮಾದಯ್ಯ ಮೂಲದಿಂದಾಗಿ ಮಾದಾಪುರ ಎಂಬ ಹೆಸರು ಬಂದಿದೆ. ಭೌಗೋಳಿಕ ವಿಸ್ತೀರ್ಣವು ೧೫೦.೮೬ ಹೆಕ್ಟೇರ್. ಕೆಂಪು ಮಿಶ್ರಿತ ಕಪ್ಪು ಮಣ್ಣನ್ನು ಹೊಂದಿದೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಒಂದು ಕೆರೆ, ಕುಂಟೆ, ೨ ತೆರೆದ ಬಾವಿ, ೪೦ ಕೊಳವೆ ಬಾವಿಗಳಿವೆ.

ಲಿಂಗಾಯಿತರು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಗೊಲ್ಲರು, ನಾಯಕರು ವಾಸವಾಗಿದ್ದಾರೆ. ಕನ್ನಡ ಭಾಷೆಯನ್ನು ಬಳಸುತ್ತಾರೆ. ೧೦೦ ಮನೆಗಳಿದ್ದು ೨೦ ಮನೆಗಳು ಮಾತ್ರ ಶೌಚಾಲಯ ಹೊಂದಿವೆ. ವಸತಿ ರಹಿತ ೨ ಕುಟುಂಬಗಳಿವೆ. ೨ ಆಶ್ರಯ, ೨೦ ಜನತಾ, ೧೦ ಅಂಬೇಡ್ಕರ್ ವಸತಿ, ೨ ಇಂದಿರಾ ಆವಾಸ್ ಮನೆಗಳಿವೆ. ೫೦ ಹೆಂಚಿನ, ೧೦ ಮಣ್ಣಿನ, ೩೦ ಕಲ್ಲಿನ, ೨೦ ಕಾಂಕ್ರೀಟ್ ಮನೆಗಳಿವೆ. ೩೦ ಕುಟುಂಬಗಳು ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯನ್ನು ಅಳವಡಿಸಿಕೊಂಡಿವೆ. ೨೦ ಕಂಬಗಳಲ್ಲಿ ವಿದ್ಯುತ್ ಬೀದಿದೀಪಗಳಿವೆ. ೨೦೧೧ ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೫೧೦. ಒಟ್ಟು ಸಾಕ್ಷರತೆ ೫೯% ಇದೆ. ಆಧುನಿಕ ಡೈರಿಯಿದೆ. ೬ ಜನ ಸರ್ಕಾರಿ ನೌಕರರು ಇದ್ದಾರೆ. ೧ ಹಿಟ್ಟಿನ ಗಿರಣಿಯಿದೆ.

ಕೃಷಿ ಪ್ರಧಾನವಾದ ಕೆಂಪು ಮಿಶ್ರಿತ ಕಪ್ಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ದಾಳಿಂಬೆ, ತರಕಾರಿ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮತಿಘಟ್ಟ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಜಿಲ್ಲಾ ಪಂಚಾಯ್ತಿ ರಸ್ತೆ ವ್ಯವಸ್ಥೆ ಇದೆ. ಚಿ.ನಾ. ಹಳ್ಳಿ – ಮತಿಘಟ್ಟ – ಹಂದನಕೆರೆ – ಹುಳಿಯಾರಿಗೆ ಸಂಪರ್ಕ ಕಲ್ಪಿಸುತ್ತದೆ. ಸ್ತ್ರೀಶಕ್ತಿ ಸಂಘಗಳು ಹಾಗೂ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಹಕಾರ ಸಂಘಗಳಿವೆ. ಒಂದು ಅಂಗನವಾಡಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಿವೆ. ಶಾಲೆಯಲ್ಲಿ ಕ್ಷೀರಭಾಗ್ಯ, ಬಿಸಿಯೂಟ, ಶೌಚಾಲಯ, ಆಟದ ಮೈದಾನದ ವ್ಯವಸ್ಥೆಯಿದೆ. ಸಮುದಾಯ ಸೌಲಭ್ಯಗಳಾದ ವಿಕಲಚೇತನ, ವಿಧವಾ ವೇತನ, ವೃದ್ಧಾಪ್ಯವೇತನದ ೨೩ ಫಲಾನುಭವಿಗಳಿದ್ದಾರೆ. ೨ ಚಿಲ್ಲರೆ ಅಂಗಡಿಗಳಿವೆ.

ಅಂತರಗಟ್ಟಮ್ಮ, ಕಾಟಮ್ಮ, ಕರಿಯಮ್ಮ ದೇವಾಲಯಗಳಿವೆ. ಬಾನಗಳನ್ನು ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಶಿವಯ್ಯ

ಎಂಬ ಹಾರ್ಮೋನಿಯಂ ನುಡಿಸುವ ರಂಗಕಲಾವಿದರಿದ್ದಾರೆ.

## ಮಾದಾಪುರ ತಾಂಡ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆಯ ಹೋಬಳಿ ವ್ಯಾಪ್ತಿಯಲ್ಲಿನ ಮತಿಘಟ್ಟ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಮಜರೆ ಮಾದಾಪುರ ತಾಂಡ್ಯ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೬ ಕಿ.ಮೀ ಅಂತರದಲ್ಲಿದೆ. ಮಾದ ಎಂಬ ವ್ಯಕ್ತಿಯ ಮೂಲನೆಲೆ ಅಥವಾ ಈ ಗ್ರಾಮದ ರಚನೆಗೆ ಆತನು ಪ್ರೇರಕನಾದ ಕಾರಣದಿಂದ ಗ್ರಾಮ ಮಾದಾಪುರವಾಗಿ ರೂಪುಗೊಂಡಿದೆ.

೨೦೦.೦೬ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದ್ದು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಒಂದು ಕುಂಟೆ, ೧ ತೆರೆದ ಬಾವಿ, ೧೦ ಕೊಳವೆ ಬಾವಿಗಳಿವೆ. ೬ ಕಿರು ನೀರು ಸರಬರಾಜು ಘಟಕಗಳಿವೆ.

ಕೃಷಿ ಪ್ರಧಾನವಾದ ಕೆಂಪು ಮಿಶ್ರಿತ ಕಪ್ಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಬಂಜಾರ ಸಮುದಾಯವೇ ಅಧಿಕ ಸಂಖ್ಯೆಯಲ್ಲಿದ್ದು ಬೇರೆ ಯಾವುದೇ ಜನಾಂಗವು ಕಂಡುಬರುವುದಿಲ್ಲ. ಕನ್ನಡ ಹಾಗೂ ಲಂಬಾಣಿ ಭಾಷೆಗಳನ್ನು ಮಾತನಾಡುತ್ತಾರೆ. ೬೦ ಮನೆಗಳಿದ್ದು ೫ ಮನೆಗಳಲ್ಲಿ ಶೌಚಾಲಯ ಹೊಂದಿವೆ. ೪ ವಸತಿರಹಿತ ಕುಟುಂಬಗಳಿವೆ. ೪೦ ಹೆಂಚಿನ, ೩ ಮಣ್ಣಿನ, ೧೦ ಕಲ್ಲಿನ, ೫ ಕಾಂಕ್ರೀಟ್ ಮನೆಗಳಿದ್ದು ೨ ಗುಡಿಸಲುಗಳಿವೆ. ಇವುಗಳಲ್ಲಿ ೧೨ ಆಶ್ರಯ, ೧೪ ಜನತಾ, ೪ ಇಂದಿರಾ ಆವಾಸ್ ಮನೆಗಳಿವೆ. ೨೦ ಮನೆಗಳು ಭಾಗ್ಯಜ್ಯೋತಿ ವಿದ್ಯುತ್ ವ್ಯವಸ್ಥೆಯನ್ನು ಹೊಂದಿವೆ. ೧೫ ಕಂಬಗಳಲ್ಲಿ ವಿದ್ಯುತ್ ಬೀದೀದೀಪಗಳಿವೆ. ೨೦೧೧ ರ ಜನಗಣತಿಯಂತೆ ೧೮೦ ಜನಸಂಖ್ಯೆಯಿದ್ದು ಸಾಕ್ಷರರ ಪ್ರಮಾಣ ೫೬% ಇದೆ. ಇಬ್ಬರು ಶಿಕ್ಷಕರು, ಒಬ್ಬರು ಬಸ್ ಕಂಡಕ್ಟರ್, ಒಬ್ಬರು ಜವಾನರಿದ್ದಾರೆ. ೧ ಹಿಟ್ಟಿನ ಗಿರಣಿಯಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಕಚ್ಚಾರಸ್ತೆಯನ್ನು ಹೊಂದಿದ್ದು ಮಾದಾಪುರ-ತಮ್ಮಡಿಹಳ್ಳಿಗೆ ಸಂಪರ್ಕ ಕಲ್ಪಿಸುತ್ತದೆ. ಕರಿಯಮ್ಮ, ದುರ್ಗಮ್ಮ, ಭುವನೇಶ್ವರಿ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ೨ ಚಿಲ್ಲರೆ ಅಂಗಡಿಗಳಿವೆ. ಲಕ್ಕಮ್ಮ, ಭೂತಪ್ಪ ದೇವಾಲಯವಿದೆ. ಬಾನಗಳಿದ್ದು ಬಾಡೂಟವೇ ವಿಶೇಷ ಅಡಿಗೆಯಾಗಿದೆ. ಪ್ರತಿ ವರ್ಷ ದೊಡ್ಡ ಎಣ್ಣೆಗೆರೆಯಲ್ಲಿ ನಡೆಯುವ ಭೀಮಸತಿ ಜಾತ್ರೆಯಲ್ಲಿ ೪ ದಿನ ಭಾಗವಹಿಸುತ್ತಾರೆ. ಇವರ ಆರಾಧ್ಯ ದೇವರು ಸೇವಾಲಾಲ್. ಪ್ರತಿ ವರ್ಷ ಸುಗ್ಗಿಯಲ್ಲಿ ಮನೆಮನೆಗೆ ನೃತ್ಯ ಹಾಡುಗಳೊಂದಿಗೆ ಹೋಗಿ ದಿನಸಿ ಧಾನ್ಯಗಳನ್ನು ಸಂಗ್ರಹಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಲ್ಲೇನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಮತ್ತಿಘಟ್ಟ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೭ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೨೬೦.೮೬ ಹೆಕ್ಟೇರ್. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ರಾಮಯ್ಯನಕೆರೆ, ಮಲ್ಲೇನಹಳ್ಳಿ ಕೆರೆಯಿದೆ. ೪ ಮಿನಿ ವಾಟರ್ ಟ್ಯಾಂಕ್ ಗಳಿವೆ. ಲಂಬಾಣಿ ಸಮುದಾಯದವರೇ ಅಧಿಕ ಸಂಖ್ಯೆಯಲ್ಲಿದ್ದು ಬೋವಿ ಜನಾಂಗದವರೂ ಇದ್ದಾರೆ. ಕನ್ನಡ ಹಾಗೂ ತೆಲುಗು ಭಾಷೆಗಳನ್ನು ಮಾತನಾಡುತ್ತಾರೆ. ೧೪೦ ಮನೆಗಳಿದ್ದು ೪೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೪ ವಸತಿ ರಹಿತ ಕುಟುಂಬಗಳು, ೧ ನಿವೇಶನ ರಹಿತ ಕುಟುಂಬವಿದೆ. ೨೦ ಆಶ್ರಯ ಮನೆಗಳು, ೨೦ ಜನತಾ ಮನೆಗಳು, ೨೦ ಇಂದಿರಾ ಆವಾಸ್ ಮನೆಗಳು ಹಾಗೂ ೪೦ ಮನೆಗಳಲ್ಲಿ ಭಾಗ್ಯಜ್ಯೋತಿ ವಿದ್ಯುತ್ ವ್ಯವಸ್ಥೆಹೊಂದಿವೆ. ೪೦ ವಿದ್ಯುತ್ ಕಂಬಗಳಿದ್ದು ೩೬ ಕಂಬಗಳಿಗೆ ದೀಪ ಅಳವಡಿಸಿದ್ದಾರೆ. ೧೦೮ ಹೆಂಚಿನ ಮನೆಗಳು, ೩೫ ಕಲ್ಲಿನ ಮನೆಗಳು, ೨ ಕಾಂಕ್ರೀಟ್ ಮನೆಗಳಿವೆ. ೨೦೧೧ರ ಜನಗಣತಿಯ ಪ್ರಕಾರ ಜನಸಂಖ್ಯೆ ೪೦೦. ಒಟ್ಟು ಸಾಕ್ಷರರ ಪ್ರಮಾಣ ೬೨% ಆಗಿದೆ. ಆಧುನಿಕ ಡೈರಿ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಿಶ್ರಿತ ಕಪ್ಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ತೆಂಗು ಮುಖ್ಯ ವ್ಯಾಪಾರಿ ಸರಕು. ೫ ಜನ ಸರ್ಕಾರಿ ನೌಕರರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮತ್ತಿಘಟ್ಟ ತಾಲ್ಲೂಕು ಪಂಚಾಯ್ತಿ ಮತ್ತು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಮತ್ತು ಒಬ್ಬರು ಗ್ರಾಮಪಂಚಾಯ್ತಿ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಒಂದು ಕಚ್ಚಾರಸ್ತೆ ಮಾತ್ರ ಇದೆ. ಸ್ತ್ರೀಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳು ಹಣಕಾಸಿನ ನೆರವು ನೀಡುತ್ತಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಕುಡಿಯುವ ನೀರಿನ ಯೋಜನೆ ಜಾರಿಯಲ್ಲಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೩೬ ಫಲಾನುಭವಿಗಳಿದ್ದಾರೆ. ೨ ಚಿಲ್ಲರೆ ಅಂಗಡಿಗಳಿವೆ.

ಶನಿಮಹಾದೇವರು, ಆಂಜನೇಯಸ್ವಾಮಿ, ಹುಲಿಕಲ್ಲಮ್ಮ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಶಿವರಾತ್ರಿಯಲ್ಲಿ ಭಜನಾ ಕಾರ್ಯಕ್ರಮಗಳನ್ನು, ದೀಪಾವಳಿಯಲ್ಲಿ ಲಂಬಾಣಿ ಯುವಕ-ಯುವತಿಯರು ನೃತ್ಯ, ಹಾಡಿನೊಂದಿಗೆ ಆಚರಿಸುತ್ತಾರೆ. ದೊಡ್ಡ ಎಣ್ಣೆಗೆರೆಯ ಭೀಮಸತಿ ಜಾತ್ರೆಯಲ್ಲಿ ೭ ದಿನಗಳು ಬಿಡಾರ ಹೂಡಿ ವಿಜೃಂಭಣೆಯಿಂದ ಆಚರಿಸುತ್ತಾರೆ. ತುಮಕೂರು ಜಿಲ್ಲೆಯ ಲಂಬಾಣಿ ಜನಾಂಗದ ಬಹುದೊಡ್ಡ ಧಾರ್ಮಿಕ ಜಾತ್ರೆ ಭೀಮಸತಿ ಜಾತ್ರೆಯಾಗಿದ್ದು ಚಿತ್ರದುರ್ಗ, ಹಿಂದೂಪುರ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ಭಕ್ತರು ವ್ಯಾಪಕವಾಗಿ ಕಲೆಯುತ್ತಾರೆ. ನಿತ್ಯವೂ ಅನ್ನಸಂತರ್ಪಣೆ ನಡೆಯುತ್ತದೆ.

## ಮರೆನಡು

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೨ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೫೧೮.೩೬ ಹೆಕ್ಟೇರ್. ಕರೆಬಾಲಯ್ಯನಪಾಳ್ಯ, ದಾಸಪ್ಪನಹಟ್ಟಿ, ಎಳೆಗೊಲ್ಲರಹಟ್ಟಿ ಮತ್ತು ಮರೆನಡು ಪಾಳ್ಯ ಗ್ರಾಮಗಳು ಸೇರ್ಪಡೆಯಾಗಿವೆ. ಬಯಲು ನಾಡು. ಹಲವು ಗ್ರಾಮಗಳಿಂದ ಹೊರಗೆ ಎತ್ತರದ ದಿಬ್ಬದಾಚೆ ಗ್ರಾಮ ಆ ಕಾಲಕ್ಕೆ ಇದ್ದುದರಿಂದ ಮರಗಳ ನಡುವಿನ ಗ್ರಾಮ ಎಂಬ ಅರ್ಥದಲ್ಲಿ ಈ ಹೆಸರು ಬಂದಿದೆ. ಕೆಂಪು ಮಿಶ್ರಿತ ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಪೂರ್ವಕ್ಕೆ ಬಸವನಗುಡ್ಡ ಸಾಲು ಇದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ

ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಕ್ಕೆ ಹೊಂದಿಕೊಂಡಂತೆ ಬೋರನಕಣಿವೆ ಕೋಡಿಹಳ್ಳವಿದ್ದು ಮಳೆ ಬಂದರೆ ಮಾತ್ರ ತುಂಬಿ ಹರಿಯುತ್ತದೆ. ಕೊಳವೆ ಬಾವಿಗಳಿವೆ. ಕುಡಿಯುವ ನೀರಿಗಾಗಿ ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್ ಮೂಲಕ ನೀರು ಒದಗಿಸಲಾಗುತ್ತಿದೆ. ಆದಿಕರ್ನಾಟಕ ದೊಡ್ಡ ಸಮುದಾಯವಾಗಿದ್ದು ಮುಸ್ಲಿಮರು ಸಣ್ಣ ಸಮುದಾಯವಾಗಿದೆ. ಕನ್ನಡ ಮತ್ತು ಉರ್ದು ಮಾತನಾಡುತ್ತಾರೆ.

೨೦೧೧ ರ ಜನಗಣತಿಯ ಪ್ರಕಾರ ೪೮೬ ಜನಸಂಖ್ಯೆಯಿದ್ದು ೧೦೨ ಮನೆಗಳಿವೆ. ಇವುಗಳಲ್ಲಿ ಗುಡಿಸಲು, ಹೆಂಚು ಮತ್ತು ಕಲ್ಲು-ಮಣ್ಣಿನ ಮನೆಗಳನ್ನು ಕಾಣಬಹುದು. ೧೭ ಮನೆಗಳಲ್ಲಿ ಶೌಚಾಲಯವಿದೆ. ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಜನತಾ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಯ ೨೩ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಟೆಂಪೋ, ಕಾರು ಮತ್ತು ದ್ವಿಚಕ್ರ ವಾಹನಗಳಿವೆ. ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದಸೂಡಿ ತಾಲ್ಲೂಕು ಪಂಚಾಯತ್ ಮತ್ತು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಖಾಸಗಿ ಬಸ್ಸು, ಆಟೋರಿಕ್ಷಾ, ಸ್ವಂತ ವಾಹನಗಳಿವೆ. ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದಾಗಿದೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳು, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಮತ್ತು ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೇ.೭೦ ಸಾಕ್ಷರತೆ ಇದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಈಶ್ವರ, ರಂಗನಾಥ, ಕೊಲ್ಲಾಪುರದಮ್ಮ ಮತ್ತು ಪೆದ್ದಮ್ಮ ದೇವಿಯ ದೇವಾಲಯಗಳಿದ್ದು ತೇರು, ತೆಪ್ಪ ಮತ್ತು ಪಲ್ಲಕ್ಕಿ ಉತ್ಸವಗಳು ನಡೆಯುತ್ತವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಚೋಳರ ಆಳ್ವಿಕೆಗೆ ಒಳಪಟ್ಟಿದ್ದ ಕುರುಹುಗಳಿವೆ. ಅವರ ಕಾಲದ ಈಶ್ವರ ದೇವಾಲಯವಿದೆ. ಹನುಮಕ್ಕ ಮತ್ತು ಲಕ್ಷ್ಮಕ್ಕ ಸೋಬಾನೆ, ಲಕ್ಷ್ಮಯ್ಯ ನಾಟಕ, ಹನುಮಂತರಾಯಪ್ಪ ಮತ್ತು ಶಾಂತಪ್ಪ ಭಜನೆ ಕಲಾವಿದರು. ಜಿಲ್ಲಾ ಮುಖ್ಯ ರಸ್ತೆ ಮತ್ತು ಕಚ್ಚಾ ರಸ್ತೆಯ ಸಾರಿಗೆ ಸಂಪರ್ಕವಿದೆ.

## ಮರೆನಡುಪಾಳ್ಯ

ಮರೆನಡುಪಾಳ್ಯವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೪೩ ಕಿಮೀ ದೂರದಲ್ಲಿದೆ. ಇದೊಂದು ಮರೆನಡು ಕಂದಾಯ ಗ್ರಾಮದ ಮಜರೆ ಗ್ರಾಮ. ಇದರ ಭೌಗೋಳಿಕ ವ್ಯಾಪ್ತಿ ಮುಖ್ಯ ಗ್ರಾಮ ಮರೆನಡುವಿನಲ್ಲಿ ಹಂಚಿಕೆಯಾಗಿದ್ದು ೧೬೨ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಬೋರನ ಕಣಿವೆಯ ಕೆರೆಯ ಕೋಡಿಯ ಬದಿಗಿದ್ದು ಹಳ್ಳದ ನೀರು ಸಮೀಪದ ಬಾವಿಗಳ ಜಲಸಂವರ್ಧನೆಗೆ ಸಹಾಯಕವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ. ೧೨ ಕೊಳವೆ ಬಾವಿಗಳಿದ್ದು ರೈತರು ಕೃಷಿಗೆ ಗಂಗಾಕಲ್ಯಾಣ ಮತ್ತಿತರ ಮೂಲಗಳಿಂದ ಕೊರೆಸಿಕೊಂಡಿದ್ದಾರೆ.

ಬೋವಿ, ನಾಯಕ, ಆದಿಕರ್ನಾಟಕ ದೊಡ್ಡ ಸಮುದಾಯ. ಮಡಿವಾಳ, ಕ್ಷೌರಿಕರೂ ಇದ್ದಾರೆ. ಒಟ್ಟು ೩೨ ಮನೆಗಳನ್ನು ಹೊಂದಿದೆ. ಇವರೆಲ್ಲರೂ ಕೃಷಿಕರು. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಕೊರಲೆ, ಕಂಬ, ನವಣೆ ವಿರಳ ಬೆಳೆಗಳಾಗಿವೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು, ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ. ತೆಂಗು, ಹುಣಸೆಹಣ್ಣು ವ್ಯಾಪಾರಿ ಬೆಳೆಗಳು. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದಸೂಡಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ದಸೂಡಿ, ಹಿರಿಯೂರು, ಬುಕ್ಕಾಪಟ್ಟಣ ಬಸ್ ಸಂಚಾರವಿದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶಿಕ್ಷಣ, ಪಡಿತರವನ್ನನು ದಸೂಡಿಯಿಂದ ಪಡೆದುಕೊಳ್ಳುತ್ತಾರೆ. ಮರೆನಡುವಿಗೆ ಶಾಲೆಗೆ ಹೋಗುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ. ಸಾಕ್ಷರತೆ ೬೧% ರಷ್ಟಿದೆ. ಇಬ್ಬರು ಸರ್ಕಾರಿ ನೌಕರರಿದ್ದಾರೆ.

ಪೆದ್ದಮ್ಮ, ಕರಿಯಮ್ಮ ದೇವರ ಪೌಳಿಗಳಿದ್ದು ಊರಹಬ್ಬ ಆಚರಿಸುತ್ತಾರೆ. ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮರಾಠಿಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೦ ಕಿಮೀ ಅಂತರದಲ್ಲಿದೆ. ಭಟ್ಟರಹಳ್ಳಿ ಗ್ರಾಮದ ಮಜರೆ ಗ್ರಾಮ. ಬಯಲುನಾಡಾಗಿದೆ. ಮರಾಠಿ ಜನಾಂಗದ ಮೂಲ ಗ್ರಾಮವಾಗಿದ್ದು ಆ ಹೆಸರಿನಿಂದಲೇ ಗ್ರಾಮ ರಚನೆಯಾಗಿದೆ. ಬಿಳಿ ಮಿಶ್ರಿತ ಕೆಂಪು ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಸೋಮಯ್ಯನಕಟ್ಟೆಯಿದೆ ಮಳೆ ಬಂದರೆ ಮಾತ್ರ ತುಂಬಿ ಹರಿಯುತ್ತದೆ. ೨ ತೆರೆದ ಬಾವಿಗಳಿದ್ದು ಬತ್ತಿಹೋಗಿವೆ. ಕೊಳವೆ ಬಾವಿಗಳು ಕೃಷಿ ಚಟುವಟಿಕೆಗೆ ಮೂಲಗಳಾಗಿವೆ. ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್ ಮತ್ತು ಕೊಳಾಯಿಗಳ ಮೂಲಕ ಕುಡಿಯುವ ನೀರು ಒದಗಿಸಲಾಗುತ್ತಿದೆ.

ಆದಿಕರ್ನಾಟಕ ಸಮುದಾಯವೇ ಪ್ರಧಾನವಾಗಿದ್ದು ಲಿಂಗಾಯಿತ ಮತ್ತು ಮುಸ್ಲಿಂ ಕಿರು ಸಮುದಾಯಗಳು. ಕನ್ನಡ ಮತ್ತು ಉರ್ದು ಮಾತನಾಡುತ್ತಾರೆ. ೨೦೧೧ ರ ಜನಗಣತಿ ಪ್ರಕಾರ ೮೧೦ ಜನಸಂಖ್ಯೆಯಿದೆ. ಒಟ್ಟು ೧೮೦ ಮನೆಗಳಿದ್ದು ಗುಡಿಸಲು, ಹೆಂಚು, ಶೀಟು, ಕಲ್ಲು–ಮಣ್ಣು ಮತ್ತು ಕಾಂಕ್ರೀಟ್ ಮನೆಗಳನ್ನು ಕಾಣಬಹುದು. ಸರ್ಕಾರದ ವಸತಿ ಯೋಜನೆಯಡಿಯಲ್ಲಿ ಆಶ್ರಯ, ಜನತಾ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಯ ೭೧ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೫೦ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ದಪ್ಪ ಮೆಣಸಿನಕಾಯಿ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಟೆಂಪೋ

ಮತ್ತು ದ್ವಿಚಕ್ರ ವಾಹನಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಯಳನಡು ತಾಲ್ಲೂಕು ಪಂಚಾಯ್ತಿ ಮತ್ತು ಕೊರಗೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ೩ ಸ್ತ್ರೀಶಕ್ತಿ ಸಂಘಗಳು ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೇ.೭೩ ಸಾಕ್ಷರತೆ ಇದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಬಸವೇಶ್ವರ, ಬೇವಿನಹಳ್ಳಿ ಅಮ್ಮನವರ ದೇವಾಲಯಗಳಿದ್ದು ಯಳನಡು ಸಿದ್ಧರಾಮೇಶ್ವರ ಜಾತ್ರೆ ಹಾಗೂ ಕರಿಯಮ್ಮನವರ ಜಾತ್ರೆಗಳನ್ನು ಆಚರಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಪರಮೇಶ್ ಮತ್ತು ಪುಟ್ಟಯ್ಯ ಜಾನಪದ ಕೋಲಾಟ ಕಲಾವಿದರಾಗಿದ್ದಾರೆ.

## ಮದನಮಡು

ಮದನಮಡು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೮ ಕಿಮೀ ಅಂತರದಲ್ಲಿ ಚೇಳೂರು, ಹಾಗಲವಾಡಿ, ಚಿಕ್ಕನಾಯಕನಹಳ್ಳಿ ರಸ್ತೆಯಲ್ಲಿದೆ. ಮದುವೆಯಾದ ಹೊಸದರಲ್ಲಿ ಯುವಕನೊಬ್ಬ ತನ್ನ ನಾದಿನಿಯೊಂದಿಗೆ ಕಣಿವೆಯನ್ನು ಹಿಂದುಮುಂದಾಗಿ ಏರುವುದಾಗಿ ಪಣತೊಟ್ಟು ಮಡಿದ ದಾರುಣ ಕಥೆಯು ಐತಿಹ್ಯವಾಗಿ ಈ ಗ್ರಾಮಕ್ಕಿದೆ. ಹಾಗಾಗಿ ಮದನಮಡು ಎಂದು ಕರೆದಿದ್ದಾರೆ. ಇದರ ಬಗ್ಗೆ ಮಾಸ್ತಿಯವರು 'ಮದಲಿಂಗನ ಕಣಿವೆ' ಎಂಬ ಕಥನ ಕವನವನ್ನು ರಚಿಸಿದ್ದಾರೆ.

ಭೌಗೋಳಿಕ ವಿಸ್ತೀರ್ಣ ೬೯೪ ಹೆಕ್ಟೇರ್. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕುಡಿಯಲು ರಾಮನಹಳ್ಳಿ ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸುತ್ತಾರೆ. ೨ ಬೋರ್‌ವೆಲ್ ಗಲಿದ್ದು ೫ ಸಿಸ್ಟನ್‌ಗಳಿವೆ. ನಾಯಕ ಜನಾಂಗ ದೊಡ್ಡ ಸಮುದಾಯವಾಗಿದೆ. ಅಕ್ಕಸಾಲಿ, ಕುಂಬಾರ ಜನಾಂಗದವರೊಂದಿಗೆ ಆದಿಕರ್ನಾಟಕ ಕಿರು ಸಮುದಾಯವಾಗಿವೆ. ಕಲ್ಲಿನ, ಮಣ್ಣಿನ, ಕುಂಬಾರ ಹೆಂಚಿನ ಸ್ವರೂಪದ ೧೦೩ ಮನೆಗಳಿದ್ದು ಇವು ಜನತಾ, ಆಶ್ರಯ, ಅಂಬೇಡ್ಕರ್ ಆವಾಸ್ ವಸತಿ ಯೋಜನೆಯಲ್ಲಿ ರಚನೆಯಾಗಿವೆ. ೧೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕೃಷಿ ಕಾರ್ಮಿಕರಿದ್ದಾರೆ. ಶಿಕ್ಷಣ, ಸಾರಿಗೆ, ಕಂದಾಯ ಹಾಗೂ ಆರೋಗ್ಯ ಇಲಾಖೆಯ ೧೩ ಜನ ಸರ್ಕಾರಿ ನೌಕರರಿದ್ದಾರೆ. ಸಾಮಾನ್ಯ ಕಾಯಿಲೆಗಳಿಗೆ ತೀರ್ಥಪುರ ಹಾಗೂ ಸ್ಥಳೀಯವಾಗಿ ದೊರೆಯುವ ಆರೋಗ್ಯ ಕಾರ್ಯಕರ್ತರಿಂದ ಚಿಕಿತ್ಸೆ ಪಡೆಯುತ್ತಾರೆ. ಹೆಚ್ಚಿನ ಚಿಕಿತ್ಸೆಗೆ ಚಿಕ್ಕನಾಯಕನಹಳ್ಳಿಗೆ ಹೋಗುತ್ತಾರೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತೀರ್ಥಪುರ ತಾಲ್ಲೂಕು ಪಂಚಾಯ್ತಿ ಹಾಗೂ ರಾಮನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಗ್ರಾಮದಲ್ಲಿ ಇಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ.

ತೀರ್ಥಪುರದಿಂದ ಅಂಚೆ ಸಂಪರ್ಕ ಹೊಂದಿದೆ. ೬ ಸ್ತ್ರೀಶಕ್ತಿ ಸಂಘಗಳಿವೆ. ವಾಲ್ಮೀಕಿ ಯುವಕ ಸಂಘವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಕರಿಯಮ್ಮ ದೇವರು, ರಂಗನಾಥನ ಪೌಳಿಗಳಿವೆ. ಮಾರಮ್ಮನಿಗೆ ಎದುರೆತ್ತಿ, ಆರತಿ, ಬಾನ, ಬ್ಯಾಟೆ ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ವಾಲ್ಮೀಕಿ ಯುವಕ ಸಂಘದ ಯುವಕರು ವಾಲ್ಮೀಕಿ ಜಯಂತಿಯ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡುತ್ತಾರೆ.

## ಮಾಕುವಳ್ಳಿ ಪಾಳ್ಯ

ಮಾಕುವಳ್ಳಿಪಾಳ್ಯವು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೧೪ ಕಿಮೀ ಅಂತರದಲ್ಲಿದೆ. ಇದು ಮಾಕುವಳ್ಳಿ ಅಲಕೂರು ಲಿಂಗಪ್ಪನಪಾಳ್ಯ ಹಾಗೂ ಮಾಕುವಳ್ಳಿ ಗೊಲ್ಲರಹಟ್ಟಿಯ ನಡುವೆ ಬರುವ ಮಜರೆ ಗ್ರಾಮವಾಗಿದೆ. ಮಾಕುವಳ್ಳಿಗೆ ಸೇರಿದ್ದು ಇದರ ಕೃಷಿ ಭೂಮಿ ೨೮ ಹೆಕ್ಟೇರ್ ಇದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಕುಡಿಯಲು ಶೆಟ್ಟಿಕೆರೆ ಗ್ರಾಮಪಂಚಾಯ್ತಿಯಿಂದ ನೀರು ಪೂರೈಸುತ್ತಾರೆ. ಒಂದು ಸಿಸ್ಟನ್ ಇದೆ. ಎಲ್ಲರೂ ಕನ್ನಡ ಮಾತನಾಡುತ್ತಾರೆ.

ನಾಯಕ, ಉಪ್ಪಾರ, ಮಡಿವಾಳ ಜನಾಂಗದ ಒಟ್ಟು ೧೪ ಮನೆಗಳು ಮಾತ್ರ ಇವೆ. ಮಾಕುವಳ್ಳಿಯಿಂದ ಪ್ರತ್ಯೇಕಗೊಂಡು ಜನವಸತಿ ನಿರ್ಮಿಸಿಕೊಂಡಾಗ ಮಾಕುವಳ್ಳಿಪಾಳ್ಯ ಎಂದು ಕರೆದರು. ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಮಣ್ಣಿನ, ಹೆಂಚಿನ ಸ್ವರೂಪದಲ್ಲಿ ಇಲ್ಲಿನ ಮನೆಗಳು ರಚನೆಯಾಗಿದ್ದು ಜನತಾ, ಆಶ್ರಯ ವಸತಿ ಯೋಜನೆಯ ೬ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಪಡಿತರಕ್ಕೆ ಅಜ್ಜೇನಹಳ್ಳಿಗೆ, ಶಿಕ್ಷಣಕ್ಕೆ ಪಕ್ಕದ ಗೊಲ್ಲರಹಟ್ಟಿಗೆ ಹೋಗುತ್ತಾರೆ. ಸಾಕ್ಷರತೆ ೫೯% ರಷ್ಟಿದೆ. ಅಂಚೆ ಶೆಟ್ಟಿಕೆರೆಯಿಂದ ಸಂಪರ್ಕ ಕಲ್ಪಿಸಲಾಗಿದೆ. ಶೆಟ್ಟಿಕೆರೆ–ತಿಪಟೂರು ಮಾರ್ಗವಾಗಿ ಜಿಲ್ಲಾ ಪಂಚಾಯ್ತಿ ರಸ್ತೆ ಮಾರ್ಗದಲ್ಲಿ ಬಸ್ ಸಂಚಾರವಿದೆ. ಕುರಿ–ಮೇಕೆ ವ್ಯಾಪಾರ, ಗರಿಕಡ್ಡಿ ವ್ಯಾಪಾರವಿದೆ. ೨ ಸ್ತ್ರೀಶಕ್ತಿ ಸ್ವಸಹಾಯ ಸಂಘವಿದೆ. ಮೊಬೈಲ್ ಬಳಸುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಗ್ರಾಮದ ಸಮೀಪದಲ್ಲಿ ಬೀರಲಿಂಗೇಶ್ವರನ ದೇವಾಲಯವಿದ್ದು ಅದಕ್ಕೆ ನಡೆದುಕೊಳ್ಳುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಾಕುವಳ್ಳಿ ಗೊಲ್ಲರಹಟ್ಟಿ

ಮಾಕುವಳ್ಳಿ ಗೊಲ್ಲರಹಟ್ಟಿ ಒಂದು ಬುಡಕಟ್ಟು ಗ್ರಾಮ. ಇದು ಮಾಕುವಳ್ಳಿಗೆ ಸಮೀಪದಲ್ಲಿರುವ ಮಜರೆ ಗ್ರಾಮವಾಗಿದೆ. ಇದು ೯೩ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಬಯಲು ಭೂಪ್ರದೇಶ, ತೋಟಸಾಲು. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಕುಡಿಯಲು ಶೆಟ್ಟಿಕೆರೆ ಗ್ರಾಮಪಂಚಾಯ್ತಿಯಿಂದ

ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ಒಂದು ಕಿರು ಸಿಸ್ಟನ್ ಹಾಗೂ ಒಂದು ಕೊಳವೆ ಬಾವಿಯಿದೆ.

ಕಾಡುಗೊಲ್ಲರ ೩೦ ಮನೆಗಳಿದ್ದು ೧೮೪ ಜನಸಂಖ್ಯೆ ಹೊಂದಿದೆ. ಇಲ್ಲಿನ ಮನೆಗಳು ಹೆಂಚಿನ, ಶೀಟಿನ, ಗುಡಿಸಲು ಸ್ವರೂಪದಲ್ಲಿವೆ. ಇಲ್ಲಿನ ಮನೆಗಳಿಗೆ ವಸತಿ ಯೋಜನೆಯಾದ ಜನತಾ, ಆಶ್ರಯ ಯೋಜನೆಯ ೧೩ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕೊಬ್ಬರಿ ಹಾಗೂ ಕುರಿ-ಮೇಕೆಗಳು ಪ್ರಮುಖ ವ್ಯಾಪಾರಿ ಸರಕಾಗಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರುತ್ತದೆ. ಈ ಗ್ರಾಮದ ಒಬ್ಬರು ಪಂಚಾಯಿತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೇ.೫೯% ರಷ್ಟು ಸಾಕ್ಷರತೆಯಿದೆ.

ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಶೆಟ್ಟಿಕೆರೆಯಿಂದ ಅಂಚೆ ಸಂಪರ್ಕವಿದೆ.

ಗ್ರಾಮದ ಪಕ್ಕದಲ್ಲಿ ಬೀರಲಿಂಗೇಶ್ವರನ ಬೃಹತ್ ದೇವಾಲಯವಿದೆ. ದೀಪಾವಳಿಯನ್ನು ಹಿರಿಯರ ಹಬ್ಬ, ಹಾಲು ಮೀಸಲು ಹಬ್ಬವಾಗಿ ಆಚರಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಂಚಸಂದ್ರ

ಮಂಚಸಂದ್ರ ಒಂದು ಕಂದಾಯ ಗ್ರಾಮವಾಗಿದ್ದು ಕುಪ್ಪೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತದೆ. ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೨ ಕಿಮೀ ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೫೭೪.೩೩ ಹೆಕ್ಟೇರ್. ಗ್ರಾಮಕ್ಕೆ ಗುಡ್ಡದಹಟ್ಟಿಯು ಸೇರಲ್ಪಟ್ಟಿದೆ. ಬಯಲುನಾಡು. ಬಿಳಿ ಕಲ್ಲು, ಬಿಳಿ ಹಾಗೂ ಅಲ್ಪ ಕೆಂಪು ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಮಾದಿಹಳ್ಳಿ ಕೆರೆ ಹಳ್ಳ, ಕೆಂಗಾಡು ಹಳ್ಳ, ಪಾಳ್ಯದಕಟ್ಟೆ ಹಳ್ಳ, ಮಾಸ್ತಯ್ಯನ ಕಟ್ಟೆ ಹಳ್ಳ ಹಾಗೂ ಕೆರೆಕೋಡಿ ಹಳ್ಳ, ಪಾಳ್ಯದ ಕಟ್ಟೆ ಹಾಗೂ ಮಾಸ್ತಯ್ಯನ ಕಟ್ಟೆ ಎಂಬ ಕಟ್ಟೆಗಳಿವೆ. ಕುಡಿಯುವ ನೀರಿಗಾಗಿ ೩ ಕೈಪಂಪುಗಳಿವೆ. ೩ ಸಿಸ್ಟನ್‌ಗಳಿದ್ದು ೧೨ ನಲ್ಲಿಗಳ ಮೂಲಕ ಕುಡಿಯುವ ನೀರು ಒದಗಿಸಲಾಗುತ್ತಿದೆ. ಕೃಷಿಗಾಗಿ ತಮ್ಮ ತೋಟ ಹಾಗೂ ಹೊಲಗಳಲ್ಲಿ ೪೨ ಕ್ಕೂ ಹೆಚ್ಚು ಕೊಳವೆ ಬಾವಿಗಳನ್ನು ತೋಡಿಸಿದ್ದಾರೆ.

ಸರ್ಪ ಒಕ್ಕಲಿಗರು ಹಾಗೂ ಲಿಂಗಾಯಿತರು ಸಮಪ್ರಮಾಣದಲ್ಲಿದ್ದು ೨೦೧೧ರ ಜನಗಣತಿ ಪ್ರಕಾರ ೩೩೭ ಜನಸಂಖ್ಯೆಯನ್ನು ಹೊಂದಿದೆ. ಕನ್ನಡ ಭಾಷೆಯನ್ನು ಬಳಸುತ್ತಾರೆ. ಕೆಂಚರಾಯನ ಓಣಿಯಿದೆ. ೭೩ ಮನೆಗಳಿವೆ. ಮಣ್ಣು ಹಾಗೂ ಕಲ್ಲುಗಳನ್ನು ಬಳಸಿ ಮನೆಗಳನ್ನು ಕಟ್ಟಿದ್ದಾರೆ. ಕುಂಬಾರರ ಕಪ್ಪು ಹೆಂಚನ್ನು, ಮಂಗಳೂರಿನ ಕೆಂಪು ಹೆಂಚನ್ನು ಮೇಲ್ಛಾವಣಿಗೆ ಹೊದಿಸಿದ್ದಾರೆ. ಕೆಲ ಮನೆಗಳಿಗೆ ಸಿಮೆಂಟ್ ಅಥವಾ ತಗಡಿನ ಶೀಟ್‌ಗಳನ್ನು ಹಾಕಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಸಾವೆ, ಮೆಣಸಿನಕಾಯಿ, ತರಕಾರಿಗಳು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ

ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಲಗೇಜ್ ಆಟೋ, ಬೈಕ್‌ಗಳಿವೆ. ರಸ್ತೆ ಹಾಗೂ ಚರಂಡಿ ವ್ಯವಸ್ಥೆಯಿದೆ. ಆರೋಗ್ಯ ಎಂಬ ಖಾಸಗಿ ಡೈರಿಯಿದೆ. ಹೆಚ್‌ಎಫ್, ಸಿಂದಿ, ಜೆರ್ಸಿ ಮುಂತಾದ ಸೀಮೆಹಸುಗಳ ಹಾಲನ್ನು ಈ ಡೈರಿ ಹಾಗೂ ಕುಪ್ಪೂರಿನಲ್ಲಿರುವ ಕೆಎಂಎಫ್‌ನ ನಂದಿನಿ ಡೈರಿಗೆ ಮಾರುತ್ತಾರೆ. ಕೆರೆಯಲ್ಲಿ ನೀರು ತುಂಬಿಗಾ ಮೀನಿನ ಕೃಷಿ ಮಾಡಲಾಗುತ್ತದೆ. ರಾಗಿ, ಕೊಬ್ಬರಿ ಇಲ್ಲಿನ ಮುಖ್ಯ ವ್ಯಾಪಾರಿ ಸರಕು. ಅರಣ್ಯ, ಶಿಕ್ಷಣ, ಆರೋಗ್ಯ ಇಲಾಖೆಗಳಲ್ಲಿ ಕೆಲಸ ಮಾಡುವವರಿದ್ದಾರೆ. ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ದುಡಿಮೆ ಮಾಡುವವರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಕುಪ್ಪೂರು ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಉತ್ತಮ ರಸ್ತೆ ಸಂಪರ್ಕವಿದೆ. ಬಹುತೇಕರು ಸಂಚಾರಿ ದೂರವಾಣಿಗಳನ್ನು ಬಳಸುತ್ತಿದ್ದಾರೆ. ಶ್ರೀಲಕ್ಷ್ಮೀದೇವಿ ಮುಂತಾದ ಸ್ತ್ರೀಶಕ್ತಿ ಸಂಘಗಳು, ಸ್ವಸಹಾಯ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೇ.೭೫ ರಷ್ಟು ಮಂದಿ ಸಾಕ್ಷರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೬ ಫಲಾನುಭವಿಗಳಿದ್ದಾರೆ. ೨ ಕಿರಾಣಿ ಅಂಗಡಿಗಳಿವೆ. ಸ್ಮಶಾನ ಭೂಮಿಯಿದೆ. ಇದನ್ನು ಕುರುಂಬಳು ಎಂದು ಕರೆಯಲಾಗುತ್ತದೆ.

ಮಂಚಲಸಂದ್ರ ಕಂಬದ ನರಸಿಂಹಸ್ವಾಮಿ, ಲಕ್ಷ್ಮೀ, ಕೆಂಚರಾಯನ ಗುಡಿಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರಾಜಮ್ಮ ಎಂಬುವರು ಜನಪದ, ಸೋಬಾನೆ ಗೀತೆಗಳನ್ನು ಹಾಡುತ್ತಾರೆ. ಕೃಷ್ಣಯ್ಯ ಎಂಬುವರು ಭಜನೆ ಮಾಡುತ್ತಾರೆ.

## ಮಂಚಸಂದ್ರ ಗೊಲ್ಲರಹಟ್ಟಿ

ಮಂಚಸಂದ್ರ ಗೊಲ್ಲರಹಟ್ಟಿಯು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೧೨ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೨೦ ಹೆಕ್ಟೇರ್. ಮಜರೆ ಗ್ರಾಮವು ಮಂಚಸಂದ್ರ ಗ್ರಾಮಕ್ಕೆ ಒಳಪಡುವುದರಿಂದ, ಗೊಲ್ಲ ಸಮುದಾಯದವರು ಮಾತ್ರ ಕಂಡುಬರುವುದರಿಂದ ಮಂಚಸಂದ್ರ ಗೊಲ್ಲರಹಟ್ಟಿ ಎಂಬ ಹೆಸರು ಬಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಬೆನಕನಕಟ್ಟೆ ಗೊಲ್ಲರಹಟ್ಟಿ ಗ್ರಾಮಕ್ಕೆ ಸೇರುವ ಪೂಜಾರಿಕಟ್ಟೆ, ರಾಮೇಗೌಡನ ಕಟ್ಟೆ, ಕಾಚಾಪುರ ಕಟ್ಟೆಗಳೇ ಈ ಗ್ರಾಮಕ್ಕೂ ಸೇರಿವೆ. ಏಕೆಂದರೆ ಒಟ್ಟು ೩೫ ಮನೆಗಳಿರುವ ಗೊಲ್ಲರಹಟ್ಟಿಯ ಅರ್ಧಭಾಗ ಬೆನಕನಕಟ್ಟೆ ಗ್ರಾಮಕ್ಕೆ ಒಳಪಟ್ಟರೆ ಉಳಿದರ್ಧ ಭಾಗ ಮಂಚಸಂದ್ರ ಗ್ರಾಮಕ್ಕೆ ಸೇರುತ್ತದೆ. ೪೦೦-೫೦೦ ಅಡಿ ಆಳದ ೨ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಿಗೆ ನೀರೊದಗಿಸುತ್ತಿವೆ. ೧ ಕೈಪಂಪು, ೧ ಮಿನಿ ಟ್ಯಾಂಕು ಇದ್ದು ಕುಡಿಯುವ ನೀರಿನ ಸೌಲಭ್ಯವಿದೆ.

ಗೊಲ್ಲ ಸಮುದಾಯದವರನ್ನು ಮಾತ್ರ ಕಾಣಬಹುದು. ಇವರ ಭಾಷೆ ಕನ್ನಡ. ೨೦೧೧ ರ ಜನಗಣತಿಯ ಪ್ರಕಾರ ೭೬ ಜನಸಂಖ್ಯೆಯನ್ನು ಹೊಂದಿದೆ. ೧೭ ಮನೆಗಳಿದ್ದು ಅವು ಮಣ್ಣಿನ, ಕುಂಬಾರ ಹೆಂಚಿನ ಮನೆಗಳು ಹಾಗೂ ಗುಡಿಸಲುಗಳಾಗಿವೆ. ಕಚ್ಚಾ ರಸ್ತೆಯಿದೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕಪ್ಪು ಹಾಗೂ ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ.

ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಕುಪ್ಪೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಸಂಚಾರಿ ದೂರವಾಣಿಗಳಿವೆ. ಒಂದು ಸ್ತ್ರೀಶಕ್ತಿ ಸಂಘವಿದೆ. ದ್ವಿಚಕ್ರ ವಾಹನಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಾದೇನಹಳ್ಳಿ

ಮಾದೇನಹಳ್ಳಿಯನ್ನು ಇಂದು ಮಾದನಹಳ್ಳಿ ಎಂದು ಕರೆಯುತ್ತಾರೆ. ಬೇಚರಕ್ ಗ್ರಾಮವಾಗಿದ್ದು ರಾಮನಹಳ್ಳಿಗೆ ಸೇರಿಕೊಂಡಿರುವ ಹೊಲಮಾಳದಲ್ಲಿದೆ. ಇಲ್ಲಿ ಜನವಸತಿಇರುವುದಿಲ್ಲ. ಹಿಂದೆ ಇಲ್ಲಿ ವಸತಿ ಇದ್ದು ಇಂದು ಬೇರೆ ಬೇರೆ ಕಾರಣಗಳಿಂದ ಅಲ್ಲಿಂದ ವಲಸೆ ಹೋಗಿರುವಂತೆ ಕಂಡುಬರುತ್ತದೆ. ಇಲ್ಲೊಂದು ಆಂಜನೇಯನ ದೇವಾಲಯವಿದ್ದು ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ, ಹರಿಸೇವೆ, ಪರೇವು ನಡೆಯುತ್ತದೆ. ರಾಮನಹಳ್ಳಿ ಪಂಚಾಯ್ತಿ, ಕಂದಿಕೆರೆ ಜಿಲ್ಲಾ ಪಂಚಾಯ್ತಿಗೆ ಸೇರಿದ್ದು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರಕ್ಕೆ ೨೩ ಕಿ.ಮೀ. ದೂರದಲ್ಲಿದೆ.

## ಮಾಳಮ್ಮನಹಟ್ಟಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೨ ಕಿಮೀ ಅಂತರದಲ್ಲಿದೆ. ಚಿಕ್ಕನಾಯಕನಹಳ್ಳಿ-ಹಿರಿಯೂರು ಗಡಿ ಗ್ರಾಮವಾಗಿದೆ. ಕಿರು ಗಿಡ ಹಳ್ಳ ಕೊರಲು ಭೂಪ್ರದೇಶ. ಭೌಗೋಳಿಕ ವಿಸ್ತೀರ್ಣ ಮುಖ್ಯ ಗ್ರಾಮ ನೂಲೇನೂರಿನೊಂದಿಗೆ ಹಂಚಿಕೆಯಾಗಿದ್ದು ೧೮೩ ಹೆಕ್ಟೇರ್ ಕೃಷಿಭೂಮಿಯನ್ನು ಹೊಂದಿದೆ. ಚಿತ್ರದೇವರ ಒಕ್ಕಲಾದ ಕಾಡುಗೊಲ್ಲರು ಚಿತ್ರದೇವರ ಮಡದಿ ಮಾಳಮ್ಮನ ಒಕ್ಕಲಾದುದರಿಂದಾಗಿ ಆ ದೇವರ ಹೆಸರನ್ನೇ ಇಟ್ಟುಕೊಂಡು ಜನವಸತಿಯನ್ನು ಪ್ರಾರಂಭಿಸಿದ್ದಾರೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕಾಡುಗೊಲ್ಲ ಜನಾಂಗ ದೊಡ್ಡ ಸಮುದಾಯವಾಗಿದ್ದು ಉಪ್ಪಾರರು, ಮಡಿವಾಳರು ಕಿರು ಸಮುದಾಯವಾಗಿದೆ. ಹುಣಸೆಹಣ್ಣು, ಕುರಿ ವ್ಯಾಪಾರವಿದೆ. ಒಟ್ಟು ೩೭ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೬೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೬ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಬಯಲು ಶೌಚಾಲಯಗಳನ್ನು ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಶೇಂಗಾ, ಅವರೆ, ಹುರುಳಿ, ಈರುಳ್ಳಿ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕರಿಯಮ್ಮ, ಮಾಳಮ್ಮ ಸ್ತ್ರೀಶಕ್ತಿ ಸಂಘಗಳಿವೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಒಬ್ಬರು ಗ್ರಾಮಪಂಚಾಯ್ತಿ ಪ್ರತಿನಿಧಿಯಿದ್ದಾರೆ.

ಒಂದು ಅಂಗನವಾಡಿ ಕೇಂದ್ರವಿದೆ. ಸಾಕ್ಷರತೆ ೫೭% ಇದೆ. ಶಿಕ್ಷಣ, ಪಡಿತರ, ಅಂಚೆಗೆ ಗಾಣದಾಳು ಗ್ರಾಮದೊಂದಿಗೆ ಸಂಪರ್ಕ ಹೊಂದಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೨ ಫಲಾನುಭವಿಗಳಿದ್ದಾರೆ.

ಮಾಳಮ್ಮ, ಚಿತ್ರದೇವರ ಪೌಳಿಗಳಿದ್ದು ದೀಪಾವಳಿಯಂದು ಬೃಹತ್ ಜನಗಳ ಜಾತ್ರೆ, ಹಾಲು ಮೀಸಲು, ದೇವರ ಹೊಳೆ ತೆಗೆಯುವ ಉತ್ಸವಗಳಿರುತ್ತವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಾರನವಮಿ ಮಂಟಪ

ಮಹಾನವಮಿ ಮಂಟಪ, ಬಾಚಿಹಳ್ಳಿ ಗ್ರಾಮಕ್ಕೆ ಸೇರಿದ ಹೊರಾಂಗಣ ಪ್ರದೇಶ. ಇದು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೭ ಕಿಮೀ ನೈಋತ್ಯಕ್ಕಿದೆ. ಮೊದಲಿಗೆ ಇಲ್ಲೊಂದು ಬನ್ನಿ ಮರವಿದ್ದು ಬಯಲಿನಿಂದ ಕೂಡಿತ್ತು. ಬಾಚಿಹಳ್ಳಿಯ ಸಿದ್ಧರಾಮೇಶ್ವರ, ತಿಮ್ಮಪ್ಪ, ಸಿದ್ದಪ್ಪ, ಯಂಜಾರೆ ಭೈರವ ದೇವರುಗಳನ್ನು ದಸರಾ ಹಬ್ಬದಂದು ಅಂಬು ಹಾಯಿಸಲು ಮೆರವಣಿಗೆಯಲ್ಲಿ ಕರೆತಂದು ಈಗಿನ ಮಹಾನವಮಿ ದಿಬ್ಬದ ಬಳಿ ಗದ್ದುಗೆ ಮಾಡುತ್ತಿದ್ದರು. ಈ ಕಾರಣದಿಂದಾಗಿಯೇ ಮಹಾನವಮಿ ಮಂಟಪ ಎಂದು ಕರೆಯುತ್ತಾರೆ. ನಂತರ ವೀರಶೈವರು, ಗಾಣಿಗ ಸಮುದಾಯದವರು ಈ ಸಮೀಪದಲ್ಲಿ ಜನವಸತಿ ಮಾಡಿಕೊಂಡರು. ಹಾಗಾಗಿ ಗ್ರಾಮ ಬೆಳೆದು ಈಗ ೧೨ ಮನೆಗಳಿವೆ. ಇಲ್ಲಿನ ಮನೆಗಳು ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಬಯಲು ಶೌಚಾಲಯ ಬಳಕೆಯಲ್ಲಿದೆ. ರಾಗಿಮುದ್ದೆ, ಅನ್ನ ಈ ಭಾಗದ ಮುಖ್ಯ ಆಹಾರ. ಹೋಳಿಗೆ, ಪಾಯಸ ಬಳಸುತ್ತಾರೆ. ಸಾಂಪ್ರದಾಯಿಕ ಎತ್ತಿನ ಗಾಡಿಗಳಿವೆ. ಆಧುನಿಕ ವಾಹನಗಳಾಗಿ ಟ್ರ್ಯಾಕ್ಟರ್, ಸ್ಕೂಟರ್ ಬಳಸುತ್ತಾರೆ. ಕುಡಿಯಲು ಗ್ರಾಮ ಪಂಚಾಯ್ತಿ ವತಿಯಿಂದ ಕೊಳವೆ ಬಾವಿ ಕೊರೆಸಿಕೊಂಡು ನೀರು ಪೂರೈಸುತ್ತಿದ್ದಾರೆ. ಒಂದು ಜಗ್ಗುವ ಬಾವಿ, ಸಿಸ್ಟನ್ ಇದೆ.

ತೋಟಗಾರಿಕೆಯ ಕಾರಣದಿಂದ ಕೆಲವರು ಖಾಸಗಿಯಾಗಿ ಕೊಳವೆ ಬಾವಿ ತೆಗೆಸಿಕೊಂಡಿದ್ದಾರೆ. ತೆಂಗು, ಅಡಿಕೆ ತೋಟಗಳಿವೆ. ಕೊಬ್ಬರಿ ವ್ಯಾಪಾರಿ ಸರಕಾಗಿದೆ. ರಾಗಿ, ಭತ್ತ, ಹೆಸರು, ಅವರೆ ಬೆಳೆಯುತ್ತಾರೆ. ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದುಗುಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ದುಡುಗಿಹಳ್ಳಿಯಿಂದ ಅಂಚೆ ಸಂಪರ್ಕ ಹೊಂದಿದೆ. ದಸರಾ ಹಬ್ಬ ದೊಡ್ಡಹಬ್ಬ. ಬಾಚಿಹಳ್ಳಿಯ ಸಿದ್ಧರಾಮೇಶ್ವರ, ಸಿದ್ದಪ್ಪ,ತಿಮ್ಮಪ್ಪ, ಆಲದಮರದಮ್ಮ, ಹತ್ತಿಮರದಮ್ಮ ದೇವರುಗಳ ಉತ್ಸವ ಇಲ್ಲಿ ಬಂದು ಪೀಠ ಮಾಡಲಾಗುತ್ತದೆ. ಬನ್ನಿ ಕಡಿದು ನಂತರ ಜನಪದ ಕಲೆಗಳೊಂದಿಗೆ ಹಿಂತಿರುಗುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ, ಸಂಧ್ಯಾ ಸುರಕ್ಷೆ ಫಲಾನುಭವಿಗಳಿದ್ದು ದೀಪಾವಳಿ, ದಸರಾ, ಯುಗಾದಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ಬಾಚಿಹಳ್ಳಿ ಮೂಲಕ ಸಾರಿಗೆ ಸಂಪರ್ಕವಿದೆ.

## ಮುನಿಯಮ್ಮನಪಾಳ್ಯ

ಮುನಿಯಮ್ಮನಪಾಳ್ಯ ಒಂದು ಮಜರೆ ಗ್ರಾಮ. ತಾಲ್ಲೂಕು ಕೇಂದ್ರದಿಂದ ವಾಯವ್ಯಕ್ಕೆ ೧೦ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ಮುದ್ದೇನಹಳ್ಳಿಯ ಒಟ್ಟು ೨೨೩೮.೨೦ ಚ.ಕಿಮೀ ವಿಸ್ತೀರ್ಣದ ವ್ಯಾಪ್ತಿಯಲ್ಲೇ ಸೇರಿದೆ. ಈ ಗ್ರಾಮವು ಬಯಲುನಾಡಾಗಿದ್ದು ಬಿಳಿಕಲ್ಲು ಹಾಗೂ ಬಿಳಿ ಮಣ್ಣನ್ನು ಹೊಂದಿದೆ. ಮುನಿಯಮ್ಮ ಎಂಬ ದೇವಾಲಯ ಈ ಭಾಗದಲ್ಲಿ ಇದ್ದುದರಿಂದ ಇಲ್ಲಿ ಗೃಹ ರಚನೆಯಾದ ಕಾರಣ ಮುನಿಯಮ್ಮನಪಾಳ್ಯ ಎಂದು ಕರೆಯುತ್ತಾರೆ.

ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಮುನಿಯಮ್ಮನಪಾಳ್ಯದ ಹಳ್ಳವಿದೆ. ಈರಣ್ಣನ ಕಟ್ಟೆಯಿದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಆದಿಕರ್ನಾಟಕದವರು ದೊಡ್ಡ ಸಮುದಾಯ ದವರಾಗಿದ್ದಾರೆ. ಕನ್ನಡವನ್ನು ಮಾತನಾಡುತ್ತಾರೆ. ಒಟ್ಟು ೩೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೦೪೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ-ಮಣ್ಣಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೩

ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಶೌಚಾಲಯಗಳನ್ನು ಹೊಂದಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕುಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ವ್ಯಾಪಾರಿ ಸರಕು ತೆಂಗಿನಕಾಯಿ, ಕೊಬ್ಬರಿ ಆಗಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕೆಲವರು ಶಿಕ್ಷಕರು, ಕಂದಾಯ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮುದ್ದೇನಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಮುನಿಯಮ್ಮದೇವಿ ಸ್ತ್ರೀಶಕ್ತಿ ಸಂಘವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೦ ರಷ್ಟು ಸಾಕ್ಷರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೬ ಫಲಾನುಭವಿಗಳಿದ್ದಾರೆ.

ಮುನಿಯಮ್ಮದೇವಿ ದೇವಸ್ಥಾನವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮೂಡ್ಲಪ್ಪನಪಾಳ್ಯ

ಮೂಡ್ಲಪ್ಪನಪಾಳ್ಯ ತಿಮ್ಮನಹಳ್ಳಿಯ ಮಜರೆ ಗ್ರಾಮ. ಮೂಡ್ಲಪ್ಪ ಎಂಬ ವ್ಯಕ್ತಿ ಮೂಲದಿಂದಾಗಿ ಈ ಗ್ರಾಮಕ್ಕೆ ಮೂಡ್ಲಪ್ಪನ ಹೆಸರಿನಲ್ಲಿಯೇ ಗ್ರಾಮ ಬೆಳೆದಿದೆ. ಕಂದಿಕೆರೆ–ತಿಮ್ಮನಹಳ್ಳಿ ರಸ್ತೆಯಲ್ಲಿ ತಿಮ್ಮನಹಳ್ಳಿಗೆ ಹೊಂದಿಕೊಂಡಂತೆ ಈ ಗ್ರಾಮವಿದ್ದು ಇದರ ಭೌಗೋಳಿಕ ವ್ಯಾಪ್ತಿ ತಿಮ್ಮನಹಳ್ಳಿಯ ೧೯೨೩.೨೬ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಕೃಷಿ ಬದುಕು ಪೂರ್ಣವಾಗಿ ಅವಲಂಬಿಸಿದ್ದಾರೆ. ಪಶುಪಾಲನೆಯೂ ಇದೆ. ರಾಗಿ, ಭತ್ತ, ಹೆಸರು, ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು, ಅಡಿಕೆ, ಹೂ, ತರಕಾರಿ ಬೆಳೆಯುತ್ತಾರೆ. ಕೊಬ್ಬರಿ, ಗರಿಕಡ್ಡಿ, ತೆಂಗಿನ ಚಿಪ್ಪು ಹಾಗೂ ಮಟ್ಟೆ ವ್ಯಾಪಾರಿ ಸರಕಾಗಿವೆ. ಪಶುಪಾಲನೆಯಲ್ಲಿ ಹಸು, ಎಮ್ಮೆ, ಕುರಿ, ಮೇಕೆ ಸಾಕಿದ್ದಾರೆ. ಹಾಲಿನ ಸಂಗ್ರಹ ಹಾಗೂ ತಿಮ್ಮನಹಳ್ಳಿ ಡೈರಿಗೆ ಸರಬರಾಜು ಮಾಡಲಾಗುತ್ತದೆ. ಹೆಂಚಿನ, ಶೀಟಿನ, ಕಾಂಕ್ರೀಟ್ ಸ್ವರೂಪದ ಒಟ್ಟು ೫೩ ಮನೆಗಳಿದ್ದು ಒಕ್ಕಲಿಗರು, ತಿಗಳರು, ನಾಯಕರು ವಾಸವಾಗಿದ್ದಾರೆ. ಇವು ಜನತಾ, ಆಶ್ರಯ ಯೋಜನೆಯ ಮನೆಗಳಾಗಿವೆ. ೧೨ ಮನೆಯಲ್ಲಿ ಶೌಚಾಲಯದ ಬಳಕೆಯಿದೆ. ಒಂದು ಅಂಗನವಾಡಿ ಕೇಂದ್ರವಿದೆ. ಶಿಕ್ಷಣ, ಪಡಿತರ, ಇತರೆ ಸಂಗತಿಗಳಿಗಾಗಿ ನಾಗರಿಕ ಸೌಲಭ್ಯಕ್ಕಾಗಿ ತಿಮ್ಮನಹಳ್ಳಿಗೆ ಬರುತ್ತಾರೆ. ಗ್ರಾಮದ ಸಾಕ್ಷರತೆ ೬೨% ರಷ್ಟಿದೆ. ಎಲ್ಲರೂ ಕನ್ನಡ ಮಾತನಾಡುತ್ತಾರೆ. ೧೧೨ ಜನಸಂಖ್ಯೆ ಇದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯ ವೇತನದ ಫಲಾನುಭವಿಗಳಿದ್ದಾರೆ. ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ, ತುಮಕೂರು ಲೋಕಸಭೆ ಹಾಗೂ ಕಂದಿಕೆರೆ ತಾಲ್ಲೂಕು, ಗ್ರಾಮ ಪಂಚಾಯ್ತಿ ಕೇಂದ್ರವಾಗಿದ್ದು ಈ ಗ್ರಾಮದ ಒಬ್ಬರು ಪಂಚಾಯ್ತಿ ಪ್ರತಿನಿಧಿ ಇದ್ದಾರೆ. ಕುಡಿಯಲು ತಿಮ್ಮನಹಳ್ಳಿ ಗ್ರಾಮಪಂಚಾಯ್ತಿಯಿಂದ ಕೊಳವೆಬಾವಿ ಮೂಲಕ ನೀರು ಪೂರೈಸಲಾಗುತ್ತದೆ. ಒಂದು ಸಿಸ್ಟನ್ ಇದೆ. ತಿಮ್ಮನಹಳ್ಳಿಯ ರಾಮದೇವರು, ಭೈರವೇಶ್ವರ, ಕೆಂಚಮ್ಮ ದೇವರ ಉತ್ಸವದಲ್ಲಿ ಮೂಡ್ಲಪ್ಪನಪಾಳ್ಯದ ಜನಗಳು ಕುಳವಾಡಿ ಸೇವೆ ಹಂಚಿಕೊಂಡು ಸೇವೆ ಸಲ್ಲಿಸುತ್ತಾರೆ. ಆರತಿ ಸೇವೆ ಮಾಡುತ್ತಾರೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮೋಟಿಹಳ್ಳಿ

ಮೋಟಿಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೩೪ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೩೦೫.೨೪ ಹೆಕ್ಟೇರ್ ಇದ್ದು ಕಂದಾಯ ಗ್ರಾಮ ಬಯಲು ನಾಡಾಗಿದೆ. ಇದೊಂದು ಪ್ರಾಕೃತಿಕ ಸಹಜ ವ್ಯಕ್ತಿ ಲಕ್ಷಣ ಆದರಿಸಿ ಹೇಳುವ ಹಳ್ಳಿ ಕೆಂಪು–ಬಿಳಿ ಮಿಶ್ರಿತ ಎರೆ ಮತ್ತು ಚೌಳು ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ೧೨೧೨ ಹೆಕ್ಟೇರ್ ಕೃಷಿ

ಭೂಮಿಯನ್ನು ಹೊಂದಿದೆ. ಮೋಟಿಹಳ್ಳಿ ವಡ್ಡರಹಟ್ಟಿ ಹನುಮಂತಪುರ ಮಜರೆ ಗ್ರಾಮಗಳಾಗಿವೆ.

ಕಾಡು ಪ್ರಾಣಿಗಳಾದ ಕರಡಿ, ತೋಳ ಮತ್ತು ಹಂದಿಗಳು ಕಂಡು ಬರುತ್ತವೆ. ಕಾಡು ಪಕ್ಷಿಗಳಾಗಿ ನವಿಲು ಪಾರಿವಾಳ, ಗಿಳಿ ಮತ್ತು ಗೌಜಿಗಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ.

ಸಾಕು ಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ ಮತ್ತು ನಾಯಿಗಳನ್ನು ಗ್ರಾಮಸ್ಥರು ಸಾಕುತ್ತಾರೆ. ಹಸುಗಳಲ್ಲಿ ಮಿಶ್ರತಳಿಗಳಾದ ಹೆಚ್. ಎಫ್. ಮತ್ತು ಜೆರ್ಸಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಾಕುತ್ತಾರೆ. ಸಾಕು ಪಕ್ಷಿಗಳಾದ ನಾಟಿಕೋಳಿ ಮತ್ತು ಗಿರಿರಾಜಗಳನ್ನು ಸಾಕುತ್ತಾರೆ.

ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆಯಾಗುತ್ತಿದ್ದು, ಬೇಸಿಗೆಯಲ್ಲಿ ೩೪–೩೬ ಡಿ.ಸೆಂ. ತಾಪಮಾನವಿದ್ದು ಚಳಿಗಾಲದಲ್ಲಿ ೧೦–೧೨ ಡಿ.ಸೆಂ. ಚಳಿ ಇರುತ್ತದೆ. ೨ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗೆ ಅಲ್ಪ ನೀರಿನ ಮೂಲಗಳಾಗಿವೆ. ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯ್ತಿ ವತಿಯಿಂದ ಕಿರಿ–ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಮಿನಿಟ್ಯಾಂಕ್ ಮತ್ತು ಕೋಳಾಯಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕುರುಬ ಸಮುದಾಯವೇ ಪ್ರದಾನವಾಗಿದ್ದು, ಕಮ್ಮಾರ ಎಂಬ ಚಿಕ್ಕ ಸಮುದಾಯವಿದ್ದು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಸಾಂಪ್ರದಾಯಿಕ ವಾಹನಗಳಾದ ಎತ್ತಿನಗಾಡಿಯ ಜೊತೆಗೆ ಆಧುನಿಕ ವಾಹನಗಳಾದ ಟ್ರಾಕ್ಟರ್, ಟೆಂಪೋ ಮತ್ತು ದ್ವಿಚಕ್ರವಾಹನಗಳನ್ನು ಕಾಣಬಹುದಾಗಿದೆ.

ಒಟ್ಟು ೧೦೦ ಮನೆಗಳನ್ನು ವಿವಿಧ ರೀತಿಯ ಮನೆಗಳಿದ್ದು ಗುಡಿಸಲು ಕಲ್ಲು–ಮಣ್ಣು, ಹೆಂಚು ಮತ್ತು ಕಾಂಕ್ರೀಟ್ ಮನೆಗಳನ್ನು ಕಾಣಬಹುದಾಗಿದೆ. ಸರ್ಕಾರದ ಸತಿ ಯೋಜನೆಗಳಾದ ಆಶ್ರಯ ಜನತಾ ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಯ ೨೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು ಪ್ರಮುಖ ಆಹಾರ ಪದ್ಧತಿಯಾಗಿ ರಾಗಿಮುದ್ದೆ ಅನ್ನ, ರೊಟ್ಟಿ, ಚಪಾತಿ, ಪಾಯಸ, ಬಾಡೂಟ ಮತ್ತು ಹೋಳಿಗೆ ವಿಶೇಷವಾಗಿವೆ. ಬಯಲು ಶೌಚಾಲಯ ಬಳಸುತ್ತಾರೆ.

ಬೇಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಗ್ರಾಮದಲ್ಲಿ ಕೃಷಿ ಕೂಲಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಹಾಗೆಯೇ ರಂಗನಾಥ (ಶಿಕ್ಷಕರು) ನಟರಾಜು, ಡಾ॥ ಕಾಂತರಾಜು (ವಕೀಲರು) ಬಡಗಿಗಳು, ಕಮ್ಮಾರ ನೌಕರರು ವಾಸವಾಗಿದ್ದಾರೆ. ಸಾಂಪ್ರದಾಯಿಕ ಹೈನುಗಾರಿಕೆ ಪ್ರಸ್ತುತದಲ್ಲಿದೆ.

ಹುಳಿಯಾರು ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುತ್ತದೆ. ಹುಳಿಯಾರು ಜಿಲ್ಲಾ ಪಂಚಾಯಿತಿ ಕ್ಷೇತ್ರ, ಯಳನಡು ತಾಲ್ಲೂಕು ಪಂಚಾಯಿತಿ ಕ್ಷೇತ್ರ ಹಾಗೂ ಕೋರಗೆರೆ ಗ್ರಾಮ ಪಂಚಾಯಿತಿ ಕಛೇರಿಯನ್ನು ಹೊಂದಿದ್ದು, ೩ ಮಂದಿ ಗ್ರಾಮ ಪಂಚಾಯಿತಿ ಸದಸ್ಯರನ್ನು ಒಳಗೊಂಡಿದೆ.

ಗ್ರಾಮದಲ್ಲಿ ೭ ಸ್ತ್ರೀಶಕ್ತಿ ಸಂಘಗಳಿದ್ದು ಸಣ್ಣ ಉಳಿತಾಯ ಮತ್ತು ಸಾಲ ಸೌಲಭ್ಯ ಪಡೆಯುತ್ತಿದ್ದಾರೆ. ಒಂದು ಅಂಗನವಾಡಿ ಕೇಂದ್ರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು ಬಿಸಿಯೂಟ, ಕ್ಷೀರಭಾಗ್ಯ ಹಾಗೂ ಶೌಚಾಲಯದ ಸೌಲಭ್ಯವಿದೆ. ಶೇ. ೭೩% ರಷ್ಟು ಸಾಕ್ಷರತೆ ಪ್ರಮಾಣವಿದೆ. ಗ್ರಾಮದಲ್ಲಿ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ ವಿಕಲಚೇತನ ಮತ್ತು ವಿಧವಾವೇತನದ ೧೨ ಫಲಾನುಭವಿಗಳಿದ್ದಾರೆ.

ಚೋಳಕಾಲದ ಕಲ್ಲೇಶ್ವರ, ಕರಿಯಮ್ಮ, ಬಸವೇಶ್ವರ ಮತ್ತು ಲಕ್ಷ್ಮೀ ದೇವರ ದೇವಾಲಯಗಳಿವೆ. ಯುಗಾದಿ, ದೀಪಾವಳಿ, ಮಹಾನವಮಿ, ಶಿವರಾತ್ರಿ ಮತ್ತು ಗೌರಿ–ಗಣೇಶ ಹಬ್ಬಗಳನ್ನು ಆಚರಿಸುತ್ತಾರೆ. ಕೋಲಾಟ ಜನಪದ ಸಂಗೀತ ಕಲಾವಿದರಾದ ಗವಿರಂಗಪ್ಪ ರಂಗಭೂಮಿ ಕಲಾವಿದ ರಾಗಿಯೂ ಹೆಸರುವಾಸಿ.

ಗ್ರಾಮದಲ್ಲಿ ಕಚ್ಚಾರಸ್ತೆಯ ಸೌಲಭ್ಯವಿದ್ದು, ಖಾಸಗಿ ಬಸ್ಸು ಆಟೋರಿಕ್ಷಾ ಮತ್ತು ಸ್ವಂತ ವಾಹನಗಳ ಸಾರಿಗೆ ವ್ಯವಸ್ಥೆಯಿದೆ. ಬಹುಪಾಲು ಮನೆಗಳಲ್ಲಿ ಸಂಚಾರಿ ದೂರವಾಣಿ ಹಾಗೂ ಡಿ.ಟಿ. ಹೆಚ್. ಸಂಪರ್ಕವನ್ನು ಕಾಣಬಹುದಾಗಿದೆ.

## ಮೋಟಿಹಳ್ಳಿ ವಡ್ಡರಹಟ್ಟಿ

ಮೋಟಿಹಳ್ಳಿ ವಡ್ಡರಹಟ್ಟಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿನಿಂದ ೩೬ ಕಿ.ಮೀ. ದೂರದಲ್ಲಿದೆ. ಮೋಟಿಹಳ್ಳಿ ಮಜರೆ ಗ್ರಾಮವಾಗಿದ್ದು, ಬಯಲು ನಾಡಾಗಿದೆ. ಮರಳು ಮಿಶ್ರಿತ ಬಿಳಿ ಭೂಮಿಯನ್ನು ಹೊಂದಿದ್ದು, ವ್ಯವಸಾಯಕ್ಕೆ ಯೋಗ್ಯವಾಗಿದೆ. ಕಾಡು ಪ್ರಾಣಿಗಳಾದ ಕರಡಿ, ತೋಳ, ಹಂದಿ ಮತ್ತು ನರಿಗಳು ಕಂಡುಬರುತ್ತವೆ. ಕಾಡು ಪಕ್ಷಿಗಳಾದ ಗಿಳಿ, ನವಿಲು, ಹದ್ದು ಮತ್ತು ಗೌಜಿಗಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ.

ಸಾಕು ಪ್ರಾಣಿಗಳಾದ ಹಸು ಎಮ್ಮೆ, ಕುರಿ ಮತ್ತು ನಾಯಿಗಳನ್ನು ಗ್ರಾಮಸ್ಥರು ಸಾಕುತ್ತಾರೆ. ಹಸುಗಳಲ್ಲಿ ಹಳ್ಳಿಕಾರ್ ಮಿಶ್ರತಳಿಗಳಾದ ಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿ ಸಾಕುತ್ತಾರೆ. ಸಾಕು ಪಕ್ಷಿಗಳಾದ ನಾಟಿಕೋಳಿ ಮತ್ತು ಗಿರಿರಾಜಗಳನ್ನು ಸಾಕುತ್ತಾರೆ. ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆ ಕಾಲದಲ್ಲಿ ೩೪.೩೬ ಡಿ.ಸೆಂ. ಬಿಸಿಲಿನ ತಾಪವಿದ್ದು, ಚಳಿಗಾಲದಲ್ಲಿ ೧೦-೧೨ ಡಿ.ಸೆಂ. ಚಳಿ ಇರುತ್ತದೆ. ಬೆರಳೆಣಿಕೆಯಷ್ಟು ತೆರೆದ ಬಾವಿಗಳಿದ್ದು, ಕೆಲವು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗೆ ಅಲ್ಪನೀರಿನ ಮೂಲಗಳಾಗಿವೆ. ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯ್ತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಮಿನಿಟ್ಯಾಂಕ್ ಮತ್ತು ಕೊಳಾಯಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತಿದೆ.

ನಾಯಕ ಜನಾಂಗವೇ ಪ್ರಧಾನವಾಗಿದ್ದು, ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಒಟ್ಟು ೧೨೪ ಮನೆಗಳಿದ್ದು, ೪೮೯ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಹೆಂಚಿನ ಮನೆಗಳೇ ಇರುವ ೬ ಮನೆಗಳಲ್ಲಿ ಮಾತ್ರ ಶೌಚಾಲಯಗಳಿವೆ. ಇಂದಿರಾ ಆವಾಸ್, ವಸತಿ ಯೋಜನೆಯ ೪೨ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ.

ಸಾಂಪ್ರದಾಯಿಕ ವಾಹನವಾದ ಎತ್ತಿನಗಾಡಿ ಜೊತೆಗೆ ಆಧುನಿಕ ವಾಹನಗಳಾದ ಟೆಂಪೋ ಟ್ರಾಕ್ಟರ್ ಮತ್ತು ದ್ವಿಚಕ್ರವಾಹನಗಳನ್ನು ಕಾಣಬಹುದು ಪ್ರಮುಖ ಆಹಾರ ಪದ್ಧತಿಯಾಗಿ ರಾಗಿಮುದ್ದೆ, ಅನ್ನ, ಚಪಾತಿ, ಚಿತ್ರಾನ್ನ, ರೊಟ್ಟಿ, ಬಾಡೂಟ, ಹೋಳಿಗೆ ಮತ್ತು ಪಾಯಸ, ವಿಶೇಷವಾಗಿದೆ.

ಖಾಸಗಿ ಬಸ್ಸು, ಆಟೋರಿಕ್ಷಾ, ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಬಹುಪಾಲು ಮನೆಗಳಲ್ಲಿ ಸಂಚಾರಿ ದೂರವಾಣಿ ಹಾಗೂ ಡಿ.ಟಿ.ಹೆಚ್. ಸಂಪರ್ಕವನ್ನು ಕಾಣಬಹುದಾಗಿದೆ.

ಬೇಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು, ಗ್ರಾಮದಲ್ಲಿ ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಸಾಕ್ಷರತೆ ೫೩% ರಷ್ಟಿದೆ.

ಹುಳಿಯಾರು ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಡುತ್ತದೆ. ಹುಳಿಯಾರು ಜಿಲ್ಲಾ ಪಂಚಾಯಿತಿ ಕ್ಷೇತ್ರ, ಯಳನ್ನಾಡು ತಾಲ್ಲೂಕು ಪಂಚಾಯಿತಿ ಕ್ಷೇತ್ರ ಹಾಗೂ ಕೋರಗೆರೆ ಗ್ರಾಮ ಪಂಚಾಯಿತಿ ಕಛೇರಿಯನ್ನಾಗಿ ಹೊಂದಿದೆ. ಒಬ್ಬರು ಗ್ರಾಮ ಪಂಚಾಯಿತಿ ಸದಸ್ಯರನ್ನು ಹೊಂದಿದೆ.

ಎರಡು ಸ್ತ್ರೀಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿದ್ದು ಸಣ್ಣ ಉಳಿತಾಯ ಮತ್ತು ಸಾಲ ಸೌಲಭ್ಯ ಪಡೆಯುತ್ತಿದ್ದಾರೆ.

ಒಂದು ಅಂಗನವಾಡಿ ಕೇಂದ್ರ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಯಿದ್ದು ಬಿಸಿಯೂಟ, ಕ್ಷೀರಭಾಗ್ಯ ಮತ್ತು ಶೌಚಾಲಯದ ಸೌಲಭ್ಯವಿದೆ. ಬಸವೇಶ್ವರ ಮತ್ತು ಆಂಜನೇಯ ದೇವಾಲಯಗಳಿವೆ. ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ಗೌರಿ-ಗಣೇಶ ಮತ್ತು ಮಹಾನವಮಿ ಹಬ್ಬಗಳನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಕಚ್ಚಾರಸ್ತೆ ಇದೆ.

## ಮಾರುಹೊಳೆ

ಮಾರುಹೊಳೆ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೫೦ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೦೭೩.೦೨ ಹೆಕ್ಟೇರ್ ಇದೆ. ಕಂದಾಯ ಖಾಸಿಂ ಸಾಬರ ಪಾಳ್ಯ ಈ ಗ್ರಾಮಕ್ಕೆ ಸೇರಿರುವ ಮಜರೆ ಗ್ರಾಮವಾಗಿದೆ. ೯೬೨ ಹೆಕ್ಟೇರ್ ಕೃಷಿ ಭೂಮಿಯಾಗಿದೆ.

ಮಾರುಹೊಳೆ ಗ್ರಾಮವು ಗುಡ್ಡಗಳಿಂದ ಮತ್ತು ಬೋರನ ಕಣಿವೆ ಜಲಾಶಯದಿಂದ ಸುತ್ತುವರೆದಿದೆ. ಬೋರನ ಕಣಿವೆಯ ಮುಖಜ ಭೂಮಿಯಾಗಿದ್ದು ಹೊಳೆಯ ಹೊರಭಾಗದಲ್ಲಿ ಮಾರು ಹಾಕಿದಂತೆ ಹರಿಯುವುದರಿಂದ ಬಯಲು ನಾಡಾಗಿದ್ದು, ಎರೆ ಹಾಗೂ ಕೆಂಪು ಮಿಶ್ರಿತ ಮಣ್ಣಿನ ಗ್ರಾಮಕ್ಕೂ ಮಾರು ಹೊಳೆ ಎಂದು ಕರೆಯಲಾಗಿದೆ.

ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ಪೂರ್ವದಿಕ್ಕಿಗೆ ಬೋರನಗುಡ್ಡ ಹಾಗೂ ಅಗಲು ಗುಡ್ಡಗಳನ್ನು ಕಾಣಬಹುದು ಕಾಡುಪ್ರಾಣಿಗಳಿಗೆ ಆಶ್ರಯವಾಗಿದೆ. ಕಾಡು ಪ್ರಾಣಿಗಳಾದ ಕರಡಿ, ಹಂದಿ, ನರಿ, ತೋಳ ಜಿಂಕೆ ಹಾಗೂ ಕಾಡುಪಕ್ಷಿಗಳಾದ ನವಿಲು, ಕೋಗಿಲೆ, ರಾಗಿ ಹದ್ದುಗಳನ್ನು ಕಾಣಬಹುದು ಸಾಕು ಪ್ರಾಣಿಗಳಾದ ಹಸು,ಎಮ್ಮೆ, ಎತ್ತು, ಕುರಿ ಹಾಗೂ ಸಾಕು ಪಕ್ಷಿಗಳಾದ ಕೋಳಿ ಪಾರಿವಾಳಗಳನ್ನು ಸಾಕುತ್ತಾರೆ.

ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆ ಕಾಲದಲ್ಲಿ ಸುಮಾರು ೩೪ ಡಿ.ಸೆಂ. ತಾಪದ ಬಿಸಿಲಿರುತ್ತದೆ. ಹಾಗೂ ಚಳಿಗಾಲದಲ್ಲಿ ಸುಮಾರು ೧೦-೧೧ ಡಿ.ಸೆಂ. ಚಳಿಯಿರುವ ಹವಾಮಾನವಿರುತ್ತದೆ.

ನೀರಿಗಾಗಿ ಹಳ್ಳ ಹಾಗೂ ತೆರೆದ/ ಕೊಳವೆ ಬಾವಿಗಳಿವೆ. ಈ ಗ್ರಾಮದಲ್ಲಿ ಬೋರನಕಣಿವೆ ಜಲಾಶಯವಿದ್ದು, ನೀರಿನ ಅಭಾವವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿದೆ.

ಕುಡಿಯುವ ನೀರಿಗಾಗಿ ಗ್ರಾಮಪಂಚಾಯ್ತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್ ಮಿನಿ ಟ್ಯಾಂಕ್ ಮತ್ತು ಕೊಳಾಯಿ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತಿದೆ. ೨ ಕೈ ಪಂಪುಗಳ ವ್ಯವಸ್ಥೆಯಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಹೊರತೆಗಳಾಗಿವೆ.

ಆದಿ ಕರ್ನಾಟಕ ಸಮುದಾಯವೇ ದೊಡ್ಡ ಸಮುದಾಯವಾಗಿದ್ದು, ನಾಯಕರು, ಮಡಿವಾಳರು ಸಣ್ಣ ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡವನ್ನು ಬಳಸುತ್ತಾರೆ.

ಮಾರುಹೊಳೆ ಒಟ್ಟು ೧೦೩ ಮನೆಗಳಿದ್ದು, ೨೦೧೧ ರ ಜನಗಣತಿಯ ಪ್ರಕಾರ ೪೦೨ ಜನಸಂಖ್ಯೆಯನ್ನು ಹೊಂದಿದೆ. ವಿವಿಧ ಮನೆಯ ಪ್ರಕಾರದ ಮನೆಗಳಿದ್ದು, ಅವುಗಳಲ್ಲಿ ಕಾಂಕ್ರೀಟ್ ಮನೆಗಳು ಕಲ್ಲಿನ ಮನೆಗಳು ಹಾಗೂ ಹೆಂಚಿನ ಮನೆಗಳಿವೆ. ಹಾಗೆಯೇ ಗುಡಿಸಲಿನಲ್ಲಿ ನೆಲೆಸಿರುವ ೬ ಕುಟುಂಬಗಳಿವೆ.

ಮುಖ್ಯ ಜಿಲ್ಲಾ ಪಂಚಾಯಿತಿ ರಸ್ತೆಯನ್ನು ಡಾಂಬರಿನಿಂದ ನಿರ್ಮಿಸಲಾಗಿದೆ. ಸ್ವಚ್ಛತೆಯನ್ನು ಕಾಪಾಡಲು ೩ ಮನೆಗಳಲ್ಲಿ ಶೌಚಾಲಯವನ್ನು ನಿರ್ಮಿಸಿಕೊಂಡಿದ್ದಾರೆ. ಪ್ರಮುಖ ಆಹಾರವಾಗಿ ರಾಗಿಮುದ್ದೆ, ಅನ್ನವನ್ನು ಉಪಯೋಗಿಸುತ್ತಾರೆ. ಹಬ್ಬಗಳಲ್ಲಿ ಹೋಳಿಗೆ, ಪಾಯಸ, ಬಾಡೂಟ, ಇತ್ಯಾದಿಗಳನ್ನು ತಯಾರಿಸುತ್ತಾರೆ.

ಕೃಷಿ ಇಲ್ಲಿನ ಮುಖ್ಯ ಕಸುಬಾಗಿದ್ದು, ಪ್ರಮುಖ ಆಹಾರ ಬೆಳೆಯಾಗಿ ರಾಗಿ, ಭತ್ತ,ವನ್ನು ಬೆಳೆಯುತ್ತಾರೆ. ಉಪಬೆಳೆಯಾಗಿ ಶೇಂಗಾ ಹಾಗೂ ಜೋಳ, ಸೂರ್ಯಕಾಂತಿ, ದ್ವಿದಳಧಾನ್ಯಗಳನ್ನು ಸಹ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗನ್ನು ಬೆಳೆಯುತ್ತಾರೆ.

ಹೈನುಗಾರಿಕೆಯಾಗಿ ಕುರಿಸಾಕಾಣಿ ಮಾಡುತ್ತಾರೆ. ಮೀನುಗಾರಿಕೆಗೆ ಕೆರೆಯಿದೆ. ತೆಂಗು, ಹುಣಸೆ ಇಲ್ಲಿನ ಜನರ ವ್ಯಾಪಾರವಾಗಿದೆ. ಸರ್ಕಾರಿ ಉದ್ಯಮದಲ್ಲಿದ್ದಾರೆ. ಹುಳಿಯಾರು ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಮತಕ್ಷೇತ್ರ ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ. ಹೋಯ್ಸಳ ಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದ್ದು, ಗಾಣದಾಳು ತಾಲ್ಲೂಕು ಪಂಚಾಯ್ತಿ ಕ್ಷೇತ್ರವಾಗಿದೆ. ಗಾಣದಾಳ್ ಗ್ರಾಮ ಪಂಚಾಯ್ತಿಗೆ ಒಳಪಟ್ಟಿದೆ. ಖಾಸಗಿ ಆಟೋರಿಕ್ಷಾ ಮತ್ತು ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಬಹುಪಾಲು ಮನೆಗಳಲ್ಲಿ ದೂರವಾಣಿ ವ್ಯವಸ್ಥೆಯನ್ನು ಕಾಣಬಹುದು.

ಮೂರು ಸ್ತ್ರೀಶಕ್ತಿ ಸಂಘಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ ಹಾಗೂ ಶ್ರೀ ರಂಗನಾಥ ಸ್ವಾಮಿ ಮಹಿಳಾ ಸ್ವಸಹಾಯ ಸಂಘಗಳಿದ್ದು ಗ್ರಾಮಸ್ಥರು ಉಳಿತಾಯ ಸಾಲ ಸೌಲಭ್ಯ ಪಡೆದಿರುತ್ತಾರೆ. ಅಂಗನವಾಡಿ ಕೇಂದ್ರವಿದೆ ಹಾಗೂ ಕಿರಿಯ ಪ್ರಾಥಮಿಕ ಶಾಲೆಯಿದ್ದು, ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಹಾಗೂ ಶೌಚಾಲಯದ ವ್ಯವಸ್ಥೆಯಿದೆ. ೬೪% ಸಾಕ್ಷರತೆ ಇದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ಹಾಗೂ ವಿಧವಾವೇತನ ೧೬ ಫಲಾನುಭವಿಗಳಿದ್ದಾರೆ. ಧಾರ್ಮಿಕತೆಯ ಪ್ರತೀಕವಾಗಿ ಭೂತರಾಯ ಹಾಗೂ ರಂಗನಾಥ ಸ್ವಾಮಿ ದೇವಸ್ಥಾನಗಳಿವೆ. ಹಬ್ಬಗಳಾದ ಯುಗಾದಿ, ದೀಪಾವಳಿ, ರಾಮನವಮಿ, ಶಿವರಾತ್ರಿಯನ್ನು ಸಂಭ್ರಮದಿಂದ ಆಚರಿಸುತ್ತಾರೆ.

## ಮೇಲನಹಳ್ಳಿ

ಮೇಲನಹಳ್ಳಿ ಗ್ರಾಮವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿನಲ್ಲಿದೆ. ೪೫ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೨೧೩೬.೦೫ ಹೆಕ್ಟೇರ್ ಇದೆ. ಹುಳಿಯಾರು ಸಮೀಪದ ಕಾರಣದಿಂದ ಹೆಚ್. ಮೇಲನಹಳ್ಳಿ (ಹುಳಿಯಾರು, ಮೇಲನಹಳ್ಳಿ) ಎಂಬ ಹೆಸರೂ ಇದೆ. ಇದೊಂದು ಕಂದಾಯ ಗ್ರಾಮ ಬಯಲು ನಾಡಾಗಿದೆ. ಹೊರಭಾಗದ ಎತ್ತರದ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸಿಕೊಂಡು ವಾಸ ಮಾಡುವ ಗ್ರಾಮ ರಚನೆಯಾದುದರಿಂದ ಮೇಲನಹಳ್ಳಿ ಎಂದು ಹೆಸರು ಬಂದಿದೆ.

ಗ್ರಾಮದ ಪೂರ್ವ ದಿಕ್ಕಿಗೆ ನಾಮದಗುಡ್ಡ, ಪಶ್ಚಿಮಕ್ಕೆ ಕುದರೆ ಕಣಿವೆ ಬೆಟ್ಟಗಳ ಸಾಲು ಹೊಂದಿದ್ದು, ಮ್ಯಾಂಗನೀಸ್ ಅದಿರು ಗಣಿಗಾರಿಕೆ ನಡೆದ ಪುರಾವೆಗಳಿವೆ. ಕೆಂಪು–ಮಿಶ್ರಿತ ಮರಳು ಮತ್ತು ಎರೆ ಭೂಮಿಯು ವ್ಯವಸಾಯಕ್ಕೆ ಯೋಗ್ಯವಾಗಿದೆ. ೧೬೧೦ ಹೆಕ್ಟೇರ್ ಕೃಷಿ ಭೂಮಿಯಾಗಿದೆ.

ಸಾಮಾಜಿಕ ಮತ್ತು ರಕ್ಷಿಕಾರಣ್ಯದಲ್ಲಿ ಬಿದಿರು ನೀಲಗಿರಿ, ತಾರೆ, ತುಗ್ಗಲಿ, ಬೇಲ, ಜಾಲಿ, ಹೊಂಗೇ,

ಬೇವು, ಹುಣಸೇ ಕಾಡಹಲಸು ಮರಗಳು ಪ್ರಮುಖವಾಗಿವೆ.

ಕಾಡು ಪ್ರಾಣಿಗಳಾದ ಕರಡಿ, ನರಿ, ಕತ್ತೆಕಿರುಬ, ಮೊಲ, ಜಿಂಕೆ, ಹಾಗೂ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಕಾಡು ಪಕ್ಷಿಗಳಾದ ನವಿಲು, ಗಿಳಿ, ಗೌಜಗ, ಗೂಬೆ, ಬುಲ್ ಬುಲ್, ಬಾವಲಿ ಮತ್ತು ಮರಕುಟಿಗ ಹಾಗೂ ಇನ್ನಿತರೆ ಪಕ್ಷಿಗಳನ್ನು ಕಾಣಬಹುದು.

ಹಳ್ಳಿಕಾರ್ ತಳಿಯ ಎತ್ತುಗಳನ್ನು ಸಾಕುತ್ತಾರೆ. ಇದೇ ತಳಿಯ ಹಸುಗಳು, ಮಿಶ್ರ ತಳಿಗಳಾದ ಜೆರ್ಸಿ, ಹೆಚ್.ಎಫ್. ಹೆಚ್ಚಿನ ಸಂಖ್ಯೆಯಲ್ಲಿವೆ. ನಾಟಿತಳಿಯ ಎಮ್ಮೆಗಳ ಸಾಕಾಣಿ, ಕುರಿ ಆಡುಗಳ ಸಾಕಾಣಿ ಇದೆ. ಹಾಗೆಯೇ ಸಾಕು ಪಕ್ಷಿಗಳಾದ ನಾಟಿಕೋಳಿ ಗಿರಿರಾಜ ಮತ್ತು ಪಾರಿವಾಳಗಳನ್ನು ಸಾಕಲಾಗಿದೆ.

ವಾರ್ಷಿಕ ಸರಾಸರಿ ೨೨೦ ಮಿ.ಮೀ. ಮಳೆ ಬೀಳುತ್ತದೆ. ಹವಾಮಾನ ವೈಪರಿತ್ಯದಿಂದ ಬಿಸಿಲು ೩೨ ಡಿ.ಸೆಂ. ಮತ್ತು ಚಳಿ ೯ ಡಿ.ಸೆಂ. ಹೆಚ್ಚಾಗಿದೆ. ಕಳೆದ ೧೦ ವರ್ಷಗಳಿಂದ ಜಲಕ್ಷಾಮ ಎದುರಿಸುತ್ತಿದ್ದು, ಬರಗಾಲದ ಹೊಸ್ತಿಲಲ್ಲಿದೆ. ಭೂತಪ್ಪನ ವಜ್ರ ಹಳ್ಳ ಪೂರ್ವದಿಂದ ಪಶ್ಚಿಮಕ್ಕೆ ಮಳೆಗಾಲದಲ್ಲಿ ಹೆಚ್ಚು ಮಳೆ ಬಂದರೆ ಮಾತ್ರ ತುಂಬಿ ಹರಿಯುತ್ತದೆ. ಪ್ರಾಚೀನ ಕಾಲದ ಬಾವಿಗಳು ಬತ್ತಿಹೋಗಿ, ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ.

ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿಯ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ೫೦೦೦೦ ಲೀಟರ್ ಸಾಮರ್ಥ್ಯದ ಟ್ಯಾಂಕ್ ಮತ್ತು ಕಿರುನೀರು ಸರಬರಾಜು ಯೋಜನೆಯ ಮಿನಿ ಟ್ಯಾಂಕ್‌ಗಳ ಮೂಲಕ ಸಾರ್ವಜನಿಕವಾಗಿ ಕೋಳಾಯಿಗಳ ಮೂಲಕ ನೀರು ಒದಗಿಸಲಾಗುತ್ತಿದೆ. ಹಾಗೂ ೪ ಕೈ ಪಂಪುಗಳಿದ್ದು ವಿದ್ಯುತ್ ಅನಿವಾರ್ಯತೆಯ ಸಂದರ್ಭಗಳಲ್ಲಿ ನೀರಿನ ಹೊರತೆಗಳಾಗಿವೆ.

ಸರ್ಪಒಕ್ಕಲಿಗ ಸಮುದಾಯವೇ ಪ್ರಧಾನವಾಗಿದ್ದು ಲಂಬಾಣಿ, ಮಡಿವಾಳ ಮತ್ತು ನಾಯಕ ಕಿರು ಸಮುದಾಯಗಳಾಗಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮತ್ತು ಲಂಬಾಣಿ ಮಾತನಾಡುತ್ತಾರೆ.

ಒಟ್ಟು ೨೩೬ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ ರಜನಗಣತಿ ಪ್ರಕಾರ ೧೪೭೭ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಕಾಂಕ್ರೀಟ್ ಮನೆಗಳು, ಕಲ್ಲಿನ ಮತ್ತು ಮಣ್ಣಿನ, ಹೆಂಚಿನ ಮನೆಗಳಿವೆ ಹಾಗೆಯೇ ಗುಡಿಸಲಿನಲ್ಲಿ ನೆಲೆಸಿರುವ ಕೆಲವು ಕುಟುಂಬಗಳೂ ಕಾಣಸಿಗುತ್ತವೆ. ವಸತಿ ಯೋಜನೆಯ ಜನತಾ, ಆಶ್ರಯ, ಅಂಬೇಡ್ಕರ್ ಯೋಜನೆಯ ೯೮ ಫಲಾನುಭವಿಗಳಿದ್ದಾರೆ. ಪ್ರಮುಖ ಆಹಾರ ಪದ್ಧತಿ ರಾಗಿ ಮುದ್ದೆ ಅನ್ನ, ರೊಟ್ಟಿ, ಉಪ್ಪಿಟ್ಟು, ಚಿತ್ರಾನ್ನ, ದೋಸೆ ಹಾಗೂ ಸಿಹಿ ಕಡುಬು, ಹೋಳಿಗೆ ಮತ್ತು ಬಾಡೂಟ ವಿಶೇಷವಾಗಿದೆ.

ಸಾಂಪ್ರದಾಯಿತ ವಾಹನಗಳಾದ ಎತ್ತಿನ ಗಾಡಿಗಳ ಜೊತೆಗೆ ಆಧುನಿಕ ವಾಹನಗಳಾದ ಕಾರು, ಟ್ರಾಕ್ಟರ್ ಹಾಗೂ ದ್ವಿಚಕ್ರವಾಹನಗಳನ್ನು ಕಾಣಬಹುದು. ಗ್ರಾಮದಲ್ಲಿರುವ ಮುಖ್ಯ ರಸ್ತೆಯನ್ನು ಡಾಂಬರಿನಿಂದ ನಿರ್ಮಿಸಿದ್ದಾರೆ. ಒಳಚರಂಡಿ ವ್ಯವಸ್ಥೆ ಪ್ರಗತಿಯಲ್ಲಿದೆ ಹಾಗೂ ೧೧೩ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ.

ಬೇಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದರೂ ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿ ಪ್ರಮುಖ ಬೆಳೆಯಾಗಿದ್ದು, ಜೋಳ, ಭತ್ತ, ತೆಂಗು, ಅಡಿಕೆ, ರೇಷ್ಮೆ, ಮಾವು, ಹುಣಸೇಹಣ್ಣು ಕೆಲಭಾಗದಲ್ಲಿ ತರಕಾರಿ ಮತ್ತು ಸೊಪ್ಪು ಬೆಳೆಯುತ್ತಾರೆ.

ಸಾಂಪ್ರದಾಯಿಕ ಹೈನುಗಾರಿಕೆಯ ಜೊತೆಗೆ ಆಧುನಿಕ ಡೈರಿ ವ್ಯವಸ್ಥೆಯೂ ಇದೆ. ಪಶುಪಾಲನೆ ಹೈನುಗಾರಿಕೆಯಿಂದ ಗ್ರಾಮದ ಆರ್ಥಿಕ ಸ್ಥಿತಿ ಚೇತರಿಕೆ ಕಾಣುತ್ತಿದೆ. ಶಿಕ್ಷಣ ಇಲಾಖೆ, ಪಶುವೈದ್ಯರು, ವಕೀಲರು ಹಾಗೂ ಉಚ್ಚ ನ್ಯಾಯಾಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ರಾಮಚಂದ್ರಯ್ಯ ಊರಿನ ಪ್ರಮುಖರು, ಹುಳಿಯಾರು ಹೋಬಳಿ ಚಿ.ನಾ.ಹಳ್ಳಿ ವಿಧಾನ ಸಭಾ ಮತಕ್ಷೇತ್ರಕ್ಕೆ ಮತ್ತು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಡುತ್ತದೆ.

ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯಿತಿ ಕ್ಷೇತ್ರ, ಗಾಣಧಾಳು ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಮತ್ತು ಗ್ರಾಮ ಪಂಚಾಯಿತಿಯಾಗಿ ಹೊಂದಿದ್ದು, ಮೂರು ಮಂದಿ ಗ್ರಾಮ ಪಂಚಾಯಿತಿ ಸದಸ್ಯರಿದ್ದರೆ.

ಜಿಲ್ಲಾ ರಸ್ತೆ ಹೊಂದಿದ್ದು ಖಾಸಗಿ ಬಸ್ಸುಗಳು ಆಟೋರಿಕ್ಷಾ ಮತ್ತು ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆ ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಹೆಚ್ ಸಂಪರ್ಕಗಳಿವೆ.

ಹಾಲು ಉತ್ಪಾದಕರ ಸಹಕಾರಿ ಸಂಘ ೭ ಸ್ತ್ರೀಶಕ್ತಿ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ. ಎರಡು ಅಂಗನವಾಡಿ ಕೇಂದ್ರಗಳಿದ್ದು ನಾಲ್ವರು ಕಾರ್ಯಕರ್ತೆಯರಿದ್ದಾರೆ. ೧ ರಿಂದ ೭ ನೇ

ತರಗತಿವರೆಗಿನ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆ ಇದ್ದು ೧೦೧ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿ ಊಟ ಕ್ಷೀರಭಾಗ್ಯ ಶೌಚಾಲಯದ ಸೌಲಭ್ಯವಿದೆ. ಶೇ. ೬೮೭ ರಷ್ಟು ಸಾಕ್ಷರತೆ ಇದೆ.

ಗಾಣಧಾಳ್ ಪಂಚಾಯಿತಿ ಆಡಳಿತಕ್ಕೊಳಪಟ್ಟ ಗ್ರಂಥಾಲಯವಿದ್ದರೂ ಕಾರ್ಯ ನಿರ್ವಹಿಸುತ್ತಿಲ್ಲ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ಮತ್ತು ವಿಧವಾ ವೇತನದ ೧೬ ಫಲಾನುಭವಿಗಳಿದ್ದು ಆಸ್ಪತ್ರೆ / ಪಶು ವೈದ್ಯಶಾಲೆಯ ವ್ಯವಸ್ಥೆ ಇರುವುದಿಲ್ಲ.

ಕರಿಯಮ್ಮದೇವಿ, ಆಂಜನೇಯ ಸ್ವಾಮಿ, ತಾತಯ್ಯ, ದುರ್ಗಾಪರಮೇಶ್ವರಿ ಇಲ್ಲಿನ ಪ್ರಮುಖ ದೇವಾಲಯಗಳಾಗಿವೆ. ಯುಗಾದಿ, ದೀಪಾವಳಿ, ಶಿವರಾತ್ರಿ ಮಹಾನವಮಿ ಹಬ್ಬಗಳು ವಿಶೇಷವಾಗಿ ಆಚರಿಸಲ್ಪಡುತ್ತವೆ. ಶ್ರೀದುರ್ಗಮ್ಮ ದೇವಿಯವರ ತೇರು–ಉತ್ಸವ ಇಲ್ಲಿಯ ವಿಶೇಷ ಆಕರ್ಷಣೆ.

ಜಾನಪದ ಕಲಾವಿದರುಗಳಾದ ಸರ್ಪಒಕ್ಕಲಿಗ ಜನಾಂಗಕ್ಕೆ ಸೇರಿದ ಶೈಲೇಂದ್ರ ವೀರಗಾಸೆಗೆ, ಮಡಿವಾಳ ಸಮುದಾಯದ ಮಡಿವಾಳಯ್ಯ ರಂಗ ಕಲಾವಿದ ಕರೆರಂಗಯ್ಯ ಭಾಗವತರು, ಹಾಗೂ ನರಸಿಂಹಯ್ಯ ಚಮ್ಮಾಳೆ ಪ್ರಮುಖರು ಅಲ್ಲದೆ ಪ್ರತಿ ವರ್ಷ ಪೌರಾಣಿಕ ಮತ್ತು ಸಾಮಾಜಿಕ ನಾಟಕಗಳನ್ನು ಕಲೆತು ಅಭಿನಯಿಸುತ್ತಾರೆ. ಶಿಕ್ಷಕ, ರಂಗಕರ್ಮಿ ಎಸ್. ಸಿದ್ದಯ್ಯ ಲೇಖಕರೂ ಆಗಿದ್ದು ತಾತಯ್ಯನವರ ಜೀವನ ಚರಿತ್ರೆಯನ್ನೂ ರಚಿಸಿದ್ದಾರೆ.

## ಮಲ್ಲೇನಹಳ್ಳಿ

ಮಲ್ಲೇನಹಳ್ಳಿ ಒಂದು ಕಂದಾಯ ಗ್ರಾಮ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೮೩.೨೫ ಚ.ಕಿ.ಮೀ. ಗೆಂಡೇಬಾಲನಹಳ್ಳಿ ಎಂಬ ಮಜರೆ ಗ್ರಾಮವು ಸೇರಿದೆ. ಬಯಲುನಾಡಾಗಿದ್ದು ಬಿಳಿ ಕಲ್ಲು ಹಾಗೂ ಬಿಳಿ ಮಣ್ಣನ್ನು ಹೊಂದಿದೆ.

ತೋಳ, ಮೊಲ, ಕಂಕನರಿ ಇತ್ಯಾದಿ ಕಾಡು ಪ್ರಾಣಿಗಳು ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಮೇಕೆ ಇತ್ಯಾದಿ ಪ್ರಾಣಿಗಳನ್ನು ಇಲ್ಲಿಯ ಜನ ಸಾಕುತ್ತಾರೆ. ಈ ಸುತ್ತಾ ಕಾಗೆ, ಗಿಳಿ, ಮರಕುಟಿಗ, ಸಾಂಬಾರುಕಾಗೆ, ಇತ್ಯಾದಿ ಪಕ್ಷಿಗಳು ಇವೆ. ಕೆಲವು ಸಮುದಾಯದವರು ಅವರ ಉಪಯೋಗಕ್ಕಾಗಿ ಕೋಳಿಯನ್ನು ಸಾಕುತ್ತಾರೆ.

೫೦೩.೦೮ ಮಿ.ಮೀ. ನಷ್ಟು ಮಳೆ ಬಿದ್ದ ದಾಖಲೆ ಇದೆ. ಚಳಿಯ ೯ ಡಿ.ಸೆಂ. ನಷ್ಟಿದ್ದು ಬಿಸಿಲು ೨೬–೩೬ ಡಿ.ಸೆಂ. ನಷ್ಟಿದೆ. ಈ ಗ್ರಾಮದಲ್ಲಿ ಕೊಳವೆ ಬಾವಿಗಳಿವೆ. ಹಾಗೂ ಕಟ್ಟೆ ಇದೆ. ಈ ಗ್ರಾಮದಲ್ಲಿ ಕಿರು ನೀರು ಸರಬರಾಜು ಯೋಜನೆ ಇದೆ.

ಸಾಮಾಜಿಕ ರಚನೆಯನ್ನು ಗಮನಿಸಿದಾಗ ಬಾವಿ ಜನಾಂಗದವರು ದೊಡ್ಡ ಸಮುದಾಯದವರಾಗಿದ್ದು ಲಿಂಗಾಯಿತರು ಸಣ್ಣ ಸಮುದಾಯದವರಾಗಿದ್ದರೆ, ಜನರು ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಈ ಗ್ರಾಮದಲ್ಲಿ ೧೦೩ ಜನಸಂಖ್ಯೆ ಇದೆ. ಈ ೪೮ ಮನೆಗಳಿದ್ದು ಅವುಗಳನ್ನು ಕಲ್ಲು ಹಾಗೂ ಮಣ್ಣಿನಿಂದ ಕಟ್ಟಲಾಗಿದೆ. ಈ ಮನೆಗಳ ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಹಾಗೂ ಮಂಗಳೂರಿನ ಕೆಂಪು ಹೆಂಚನು ಹೊದಿಸಿದ್ದಾರೆ. ಈ ಗ್ರಾಮದಿ ಜನರು ಶೌಚಾಲಯ ಸೌಲಭ್ಯಗಳನ್ನು ಹೊಂದಿದ್ದಾರೆ.

ಜನರ ಮುಖ್ಯ ಆಹಾರ ರಾಗಿ ಮುದ್ದೆ ಆಗಿದೆ. ಅನ್ನ, ಇಡ್ಲಿ, ದೋಸೆ, ಉಪ್ಪಿಟ್ಟು, ಇತ್ಯಾದಿಗಳು ಅಮುಖ್ಯ ಆಹಾರವಾಗಿದೆ. ಪಾಯಸ–ಹೊಬ್ಬಟ್ಟುಗಳು ವಿಶೇಷ ಆಹಾರವಾಗಿದೆ. ಜನರ ಸಂಪ್ರದಾಯಿಕ ವಾಹನ ಎತ್ತಿನ ಗಾಡಿಯಾಗಿದೆ. ಆಧುನಿಕ ವಾಹನಗಳು ಟ್ರಾಕ್ಟರ್, ಬೈಕುಗಳು ಆಗಿವೆ.

ಜನರ ವೃತ್ತಿಯು ಕೃಷಿಯೇ ಆಗಿದ್ದು, ರಾಗಿಯನ್ನು ಉಪಬೆಳೆಯಾಗಿ ಬೆಳೆಯುತ್ತಾರೆ. ಆಹಾರ ಬೆಳೆಯೂ ಕೂಡ ರಾಗಿಯೇ ಆಗಿದೆ. ಹುರುಳಿ, ಹೆಸರು, ಉದ್ದು, ತೊಗರೆ, ಅಲಸಂಡೆ ಇತ್ಯಾದಿಗಳು ಉಪಬೆಳೆಯಾಗಿದೆ. ತೆಂಗನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ. ಈ ಜನರು ಎಮ್ಮೆ, ಹಸು, ಸೀಮೆ ಹಸುಗಳನ್ನು ಸಾಕಿದ್ದಾರೆ. ಇಲ್ಲಿಯ ಜನರು ಹಾಲನ್ನು ಕಂದಿಕೆರೆ ಡೈರಿಗೆ ಮಾರುತ್ತಾರೆ. ಜನರ ಹಾಲನ್ನು ಕಂದಿಕೆರೆ ಡೈರಿಗೆ ಮಾರುತ್ತಾರೆ. ಜನರ ಮುಖ್ಯ ವ್ಯಾಪಾರಿ ಸರಕು ತೆಂಗಿನಕಾಯಿ ಮತ್ತು ಕೊಬ್ಬರಿ ಆಗಿದೆ.

ಹುಟ್ಟಿದ ಕೆಲವರು ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.ಆಡಳಿತಾತ್ಮಕವಾಗಿ ಈ ಗ್ರಾಮವು ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೂ ಕಂದಿಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೂ, ತುಮಕೂರು ಲೋಕಸಭಾ ಕ್ಷೇತ್ರವಾಗಿದೆ. ಈ ಗ್ರಾಮದ ಜನರು ಸಂಪರ್ಕಕ್ಕಾಗಿ ಮೊಬೈಲ್ ಪೋನ್‌ಗಳನ್ನು ಬಳಸುತ್ತಾರೆ.

ಶೇ. ೭೦ ರಷ್ಟು ಸಾಕ್ಷರತೆ ಹೊಂದಿರುವ ಅಂಗನವಾಡಿ ಕೇಂದ್ರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇವೆ. ಈ ಗ್ರಾಮದ ಜನರು ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನ ಪಡೆಯುವ

೧೦ ಫಲಾನುಭವಿಗಳಿದ್ದಾರೆ. ತಿಮ್ಮಪ್ಪ, ಸ್ವಾಮಿ ದೇವಸ್ಥಾನ ಹಾಗೂ ಬಸವೇಶ್ವರ ದೇವಸ್ಥಾನ ಇದೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುಲಾಗಿದೆ.

## ಮುತ್ತುಗದಹಳ್ಳಿ

ಮುತ್ತುಗದಹಳ್ಳಿ ಗ್ರಾಮವು ಚಿಕ್ಕನಹಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಸುಮಾರು ೩೯ ಕಿ.ಮೀ. ದೂರದಲ್ಲಿದೆ. ಸಸ್ಯ ಮೂಲಾಂಗದ ಮುತ್ತುಗದ ಮನೆಗಳ ದಟ್ಟನೆಯ ಪ್ರದೇಶವಾಗಿ ಮುತ್ತುಗದ ಹಳ್ಳಿ ಆಗಿದೆ.

ಇದೊಂದು ಕಂದಾಯ ಗ್ರಾಮ, ಬಯಲುನಾಡಾಗಿದೆ. ಒಟ್ಟು ೨೧೧೪.೧೬ ಹೆಕ್ಟೇರ್ ವಿಸ್ತೀರ್ಣವಿರುವ ಗ್ರಾಮವು ಕುಟುಂಬ ವಾಸಸ್ಥಾನ (ಮನೆಗಳು) ಚದುರಿದಂತಿವೆ.೧೨೯೮ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಸುಮಾರು ೬೪೫ ಹೆಕ್ಟೇರ್ ನಷ್ಟು ರಕ್ಷಿತಾರಣ್ಯ ಪ್ರದೇಶವನ್ನು ಹೊಂದಿದೆ.ಕಾಡು ಪ್ರಾಣಿಗಳಾದ ಕರಡಿ, ಚಿರಂಚಿತಜ, ಹಂದಿ, ಮೊಲ, ಕಿರುಬ, ತೋಳ, ಹಾಗೂ ಕಾಡುಪಕ್ಷಿಗಳಾದ ನವಿಲು, ಗೌಜ, ಗಿಳಿ, ಹದ್ದು, ಮರಕುಟಿಕ ಕಂಡುಬರುತ್ತವೆ. ಸಾಕುಪ್ರಾಣಿಗಳಾದ ಹಸು, ಎಮ್ಮೆ, ಕುರಿ, ಮೇಕೆ, ನಾಯಿ, ಬೆಕ್ಕು, ಸಾಕುತ್ತಾರೆ. ಸಾಕು ಪಕ್ಷಿಗಳಾದ ನಾಟಿಕೋಳಿ ಸಕಾಣಿಯೂ ಇದೆ.

ವಾರ್ಷಿಕ ಸರಾಸರಿ ೪೫೦ ಮಿ.ಮೀ. ಮಳೆ ಬೀಳುತ್ತದೆ. ಬೇಸಿಗೆಯಲ್ಲಿ ಸುಮಾರು ೩೪-೩೬ ಡಿ.ಸೆಂ. ಬಿಸಿಲಿನ ತಾಪಮಾನವಿದ್ದು, ಚಳಿ ೧೦ಡಿ.ಸೆಂ.-೧೨ ಡಿ.ಸೆಂ. ಇರುತ್ತದೆ. ಮುತ್ತುಗದ ಹಳ್ಳಿಗೆ ಹೊಂದಿಕೊಂಡಂತೆ ಬೋರನಕಣಿವೆ ಕೋಡಿಹಳ್ಳ ಹರಿಯುತ್ತದೆ.

ಈಡಿಗ ದೊಡ್ಡ ಸಮುದಾಯವಾಗಿದ್ದು, ಒಕ್ಕಲಿಗ ಸಣ್ಣ ಸಮುದಾಯವಾಗಿದೆ. ಕನ್ನಡ ಮುಖ್ಯ ಭಾಷೆಯಾಗಿ ಬಳಕೆಯಲ್ಲಿದೆ. ಒಟ್ಟು ೧೮ ಮನೆಗಳಿದ್ದು, ಕಲ್ಲಿನ, ಮಣ್ಣಿನ, ಹೆಂಚಿನ, ಸೀಟಿನ ಮನೆಗಳನ್ನು ಇಲ್ಲಿ ಕಾಣಬಹುದು. ಇತ್ತೀಚಿನ ಜನಗಣತಿಯ ಪ್ರಕಾರ ೫೧ ಜನಸಂಖ್ಯೆ ಹೊಂದಿರುವ ಗ್ರಾಮದ ೩ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ. ಗ್ರಾಮದ ಸಾಕ್ಷರತೆ ೬೧.೪% ಪ್ರಮುಖವಾಗಿ ರಾಗಿಮುದ್ದೆ ಅನ್ನ, ಅಪ್ರಮುಖವಾಗಿ ಚಪಾತಿ, ರೊಟ್ಟಿ, ಚಿತ್ರಾನ್ನ ದೋಸೆ ಹಾಗೂ ಹಬ್ಬಗಳಲ್ಲಿ ಹೋಳಿಗೆ ಪಾಯಸ ಸಿಹಿಕಡುಬು ಮತ್ತು ಬಾಡೂಟ ತಯಾರಿಸುತ್ತಾರೆ.

ರಾಗಿ ಮುಖ್ಯ ಆಹಾರ ಬೆಳೆಯಾಗಿದ್ದು, ಉಪಬೆಳೆಯಾಗಿ ದಾಳಿಂಬೆ ಜೋಳ, ದ್ವಿದಳಧಾನ್ಯವನ್ನು ಬೆಳೆಯುತ್ತಾರೆ. ತೋಟಗಾರಿಕಾ ಬೆಳೆಯಾದ ತೆಂಗು ಅಡಿಕೆಯನ್ನು ಬೆಳೆಯಲಾಗುತ್ತದೆ. ಕೂಲಿ ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದೆ.

ಹುಳಿಯಾರು ಹೋಬಳಿ ಚಿ.ನಾ.ಹಳ್ಳಿ ವಿಧಾನಸಭಾ ಕ್ಷೇತ್ರದ, ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ.

ಹೊಯ್ಸಳಕಟ್ಟೆ ಜಿಲ್ಲಾಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ಕಾರ್ಯವ್ಯಾಪ್ತಿಗೆ ಬರುವ ಸರಿಯಾದ ರಸ್ತೆ ಸಂಪರ್ಕ ಕಾಣದದ ಅತೀ ವಿರಳ ಜನ ಸಾಂದ್ರತೆಯ ಗ್ರಾಮವಾಗಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ಹಾಗೂ ವಿಧವಾವೇತನ ೧೪ ಫಲಾನುಭವಿಗಳಿದ್ದಾರೆ. ಯುಗಾದಿ, ದೀಪಾವಳಿ, ಶಿವರಾತ್ರಿ, ಗೌರಿ-ಗಣೇಶ ಮತ್ತು ಸಂಕ್ರಾಂತಿ ಹಬ್ಬವನ್ನು ಸಡಗರದಿಂದ ಗ್ರಾಮಸ್ಥರೆಲ್ಲರೂ ಸೇರಿ ಆಚರಿಸುತ್ತಾರೆ.

## ಮಾದಿಹಳ್ಳಿ

ಮಾದಿಹಳ್ಳಿ ಶೆಟ್ಟಿಕೆರೆ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಒಂದು ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ನೈರುತ್ಯ ದಿಕ್ಕಿನ ೧೩ ನೇ ಕಿ.ಮೀ. ನಲ್ಲಿ ಈ ಗ್ರಾಮವಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೪೧.೨೭ ಚ.ಕಿ.ಮೀ. ಗಳು ಈ ಗ್ರಾಮಕ್ಕೆ ಹೊಸೂರಿನ ೧೨ ಮನೆ ಹಾಗೂ ಎ.ಕೆ. ಕಾಲೋನಿ ಸೇರುತ್ತದೆ. ಮಾದಮ್ಮ ಎಂಬ ಮಹಿಳೆಯ ಹೆಸರಲ್ಲಿ ಗ್ರಾಮ ರಚನೆಯಾಗಿದೆ.

ಬಯಲುನಾಡಿಗೆ ಸೇರಿರುವ ಈ ಗ್ರಾಮದ ಸುತ್ತ ಕಪ್ಪು ಬಿಳಿ ಕಲ್ಲು, ಬಿಳಿ ಕೆಂಪು ಮಣ್ಣು ಕಂಡುಬರುತ್ತದೆ. ಗ್ರಾಮದ ಪಕ್ಕ ಸಾಮಾಜಿಕ ಅರಣ್ಯವಿದೆ. ಊರಲ್ಲಿ ದೇವಸ್ಥಾನದ ತೋಪು ಎಂದು ಕರೆಯುವ ತೋಪು ಇದೆ. ಈ ಭಾಗದಲ್ಲಿ ಕಾಡುಹಂದಿ, ಮೊಲ, ಜಿಂಕೆ, ತೋಳ ಇತ್ಯಾದಿ ಪ್ರಾಣಿಗಳು, ಹಸು, ಎಮ್ಮೆ, ಎತ್ತು, ಕುರಿ, ಮೇಕೆ ಮುಂತಾದ ಸಾಕುಪ್ರಾಣಿಗಳು ಕಂಡುಬರುತ್ತವೆ. ನವಿಲು, ಗಿಳಿ, ಪಾರಿವಾಳ, ಕಾಗೆ, ಗುಬ್ಬಚ್ಚಿ, ಬೆಳವನಹಕ್ಕಿ, ಪೊಡರೆಹಕ್ಕಿ, ಉಣ್ಣೆಗೊರವ, ಸೋಬಾನದಹಕ್ಕಿ, ನೀರುಗೋಳಿ ಮರಕುಟಿಗ, ಗೀಜಗ ಪಕ್ಷಿಗಳು ಕೋಳಿಗಳನ್ನು ಸ್ವಯಂ ಆಹಾರಕ್ಕಾಗಿ ಸಾಕುತ್ತಾರೆ.

೫೩೧.೨ ಮಿ.ಮೀ. ಮಳೆ ಬಿದ್ದ ದಾಖಲೆ ಇದೆ. ೨೦.೨೨ ಡಿ.ಸೆಂ. ಚಳಿಯೂ, ೨೭ ರಿಂದ ೩೪ ಡಿ.ಸೆಂ. ಬಿಸಿಲೂ ಇರುತ್ತದೆ. ಈ ಗ್ರಾಮದ ಪಕ್ಕದಲ್ಲಿ

ದೊಡ್ಡಕೆರೆ ಹಳ್ಳ ಹರಿಯುತ್ತದೆ. ಇದು ಮಾದಿಹಳ್ಳಿಯ ದೊಡ್ಡಕೆರೆಯಿಂದ ಮಂಚಸಂದ್ರ ಕೆರೆಗೆ ನೀರು ಹರಿಯಲು ಇರುವ ಸಹಜ ಸಹಜವಾಗಿದೆ. ದೊಡ್ಡಕೆರೆ ಹಾಗೂ ನೆಲ್ಲದ ಕೆರೆ ಎಂಬ ಎರಡು ಕೆರೆಗಳಿವೆ.

ವೀರಶೈವ ಸಮುದಾಯವೇ ಪ್ರಧಾನವಾಗಿದ್ದು, ಆದಿಕರ್ನಾಟಕ, ವಿಶ್ವಕರ್ಮ, ನಾಯಕರು ಸಣ್ಣ ಸಮುದಾಯದವರಾಗಿದ್ದಾರೆ. ಒಟ್ಟು ೭೬೧ ಜನಸಂಖ್ಯೆಯನ್ನು ಈ ಗ್ರಾಮ ಹೊಂದಿದೆ. ಇಲ್ಲಿರುವ ೧೭೪ ಮನೆಗಳಲ್ಲಿ ೩ ಕಾಂಕ್ರೀಟ್ ಮನೆಗಳೂ೧ ಗುಡಿಸಲು ಉಳಿದವುಗಳನ್ನು ಮಣ್ಣು ಹಾಗೂ ಕಲ್ಲನ್ನು ಬಳಸಿ ಕಟ್ಟಲಾಗಿದೆ. ಮೇಲ್ಛಾವಣಿಗೆ ಕುಂಬಾರ ಹಾಗೂ ಮಂಗಳೂರಿನ ಹೆಂಚನ್ನು ಬಳಸಿದ್ದಾರೆ.

ಇಲ್ಲಿಯ ಜನರ ಮುಖ್ಯ ಆಹಾರ ರಾಗಿಮುದ್ದೆ, ಅಮುಖ್ಯ ಆಹಾರವಾಗಿ ಇಡ್ಲಿ, ದೋಸೆ, ಉಪ್ಪಿಟ್ಟು, ಚಿತ್ರಾನ್ನ ಇತ್ಯಾದಿ ಬಳಸುತ್ತಾರೆ. ವಿಶೇಷವಾಗಿ ಪಾಯಸ ಒಬ್ಬಟ್ಟು ಮಾಡುತ್ತಾರೆ. ಕೆಲವು ಸಮುದಾಯದವರು ಮಾಂಸಾಹಾರ ಸೇವಿಸುತ್ತಾರೆ. ಸಾಂಪ್ರದಾಯಿಕ ಎತ್ತಿನ ಗಾಡಿ ಜೊತೆಗೆ ಕಾರುಗಳು, ಬೈಕ್‌ಗಳು, ಟ್ರಾಕ್ಟರ್‌ಗಳು, ಆಟೋಗಳು ಇವೆ. ಚರಂಡಿ ವ್ಯವಸ್ಥೆ ಮಾಡಲಾಗಿದೆ. ರಸ್ತೆಯೂ ಇದೆ.

ಇಲ್ಲಿನ ಜನ ಬಹುತೇಕ ಕೃಷಿಯನ್ನು ಅವಲಂಬಿಸಿದ್ದಾರೆ. ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಆಹಾರ ಬೆಳೆಯೂ ಇದೇ ಆಗಿದೆ. ಉಪಬೆಳೆಯಾಗಿ ಹುರಳಿ, ಅವರೆ, ಹೆಸರು, ಅಲಸಂಡೆ, ತರಣಿ, ಎಳ್ಳು, ಹುಚ್ಚೆಳ್ಳು, ಇತ್ಯಾದಿಗಳನ್ನು ಬೆಳೆಯುತ್ತಾರೆ. ತೆಂಗು, ಅಡಿಕೆ, ಬಾಳೆ ಇಲ್ಲಿನ ವಾಣಿಜ್ಯ ಬೆಳೆಗಳು ಗ್ರಾಮದಲ್ಲಿ ಜೆರ್ಸಿ, ಹೆಚ್.ಎಫ್ ತಳಿ ಹಸುಗಳನ್ನು ಸಾಕಿ ಹಾಲನ್ನು ಗ್ರಾಮದಲ್ಲಿರುವ ನಂದಿನಿ ಡೈರಿಗೆ ಮಾರುತ್ತಾರೆ. ಮಳೆ ಜೋರಾಗಿ ಬಂದು ಕೆರೆ ತುಂಬಿದಾಗ ಮಾತ್ರ ಮೀನು ಕೃಷಿ ಮಾಡಲಾಗುತ್ತದೆ. ಗ್ರಾಮದ ಕೆಲವರು ಶಿಕ್ಷಕ ವೃತ್ತಿ, ವಕೀಲ ವೃತ್ತಿ, ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ವೃತ್ತಿ ಆರಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇಲ್ಲಿ ಒಂದು ಇಟ್ಟಿಗೆ ಫ್ಯಾಕ್ಟರಿಯಿದೆ.

ಶೆಟ್ಟಿಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರಕ್ಕೂ ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೂ, ತುಮಕೂರು ಲೋಕಸಭಾ ಕ್ಷೇತ್ರಕ್ಕೂ ಸೇರುತ್ತದೆ. ಗ್ರಾಮದವರು ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಾಗಿದ್ದಾರೆ. ಒಬ್ಬರು ಗ್ರಾಮಪಂಚಾಯಿತಿ ನೌಕರರಾಗಿದ್ದಾರೆ. ಗ್ರಾಮಕ್ಕೆ ರಸ್ತೆ ಮಾರ್ಗವಿದೆ. ಇಲ್ಲಿಯ ಬಹುತೇಕ ಜನರು ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಇಲ್ಲಿ ಮಾಸ್ತಮದೇವಿ, ಶ್ರೀದೇವಿ, ವೈಭವಲಕ್ಷ್ಮೀ ಶ್ರೀಲಕ್ಷ್ಮಿ ಮುಂತಾದ ಸ್ತ್ರೀಶಕ್ತಿ ಸಂಘಗಳಿವೆ. ಕಿತ್ತೂರೂರಾಣಿ ಚೆನ್ನಮ್ಮ ಶಾರದಾಂಬಾ ಶ್ರೀಲಕ್ಷ್ಮೀ ಮಂಜುನಾಥಸ್ವಾಮಿ ಸ್ವಸಹಾಯ ಸಂಘಗಳಿವೆ.

ಜನಸಂಖ್ಯೆಯಲ್ಲಿ ಶೇ. ೭೨ ರಷ್ಟು ಜನ ಸಾಕ್ಷರರಾಗಿದ್ದಾರೆ. ಇಲ್ಲಿ ಅಂಗನವಾಡಿ ಕೇಂದ್ರ ಹಾಗೂ ಕಿರಿಯ ಹಾಗೂ ಮಾಧ್ಯಮಿಕ ಸರ್ಕಾರಿ ಪಾಠಶಾಲೆ ಇದೆ. ಒಟ್ಟು ೫೯ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಇದೆ. ಅನ್ನಭಾಗ್ಯ ಕ್ಷೀರಭಾಗ್ಯ ಯೋಜನೆಗಳು ಜಾರಿಯಲ್ಲಿವೆ.

೬೦ ವರ್ಷ ವಯಸ್ಸಿನ ಈಶ್ವರಪ್ಪ ಎಂಬ ಲಿಂಗಾಯಿತ ಸಮುದಾಯದ ವ್ಯಕ್ತಿ ದನಗಳ ಕಾಯಿಲೆಗೆ ನಾಟಿ ಔಷಧಿ ಮಾಡಿ ಗುಣಪಡಿಸುತ್ತಾರೆ. ಶಿವಮ್ಮ ಎಂಬುವವರು ಇತ್ಯಾದಿಗಳಿಗೆ ಮದ್ದನ್ನು ನೀಡುತ್ತಾರೆ.

ಸಮುದಾಯ ಸೌಲಭ್ಯಗಳಾದ ವೃದ್ದಾಪ್ಯ, ವಿಕಲಚೇತನ, ವಿಧವಾವೇತನ ೧೦ ಫಲಾನುಭವಿಗಳು ಗ್ರಾಮದಲ್ಲಿದ್ದಾರೆ. ಐದು ಪುಟ್ಟ ಅಂಗಡಿಗಳು ಗ್ರಾಮದಲ್ಲಿವೆ. ಮಾಸ್ತಿಕಲ್ಲು ಎಂದು ಕರೆಯಬಹುದಾದ ಕಲ್ಲು ರಂಗನಾಥ ಸ್ವಾಮಿದೇವರ ಗುಡಿ ಹಿಂದೆ ಇದೆ. ಕೋಟೆ ಈಗ ಶಿಥಿಲವಾಗಿದೆ. ರಂಗನಾಥಸ್ವಾಮಿ ದೇವಾಲಯ, ಬಸವೇಶ್ವರ ದೇವಾಲಯ, ಸಿದ್ದೇಶ್ವರ ದೇವಾಲಯ, ಮಾಸ್ತಮ್ಮದೇವಿ, ಹತ್ತಿಮರದಮ್ಮದೇವಿ ದೇವಾಲಯಗಳಿವೆ. ಮಠವೂ ಒಂದಿದೆ. ಅದನ್ನೂ ಹಿರೇಮಠ ಎನ್ನಲಾಗುತ್ತದೆ. ಗ್ರಾಮದಲ್ಲಿ ಸಿದ್ದಪ್ಪಾದೇವರ ಜಾತ್ರೆ ಮೇ ತಿಂಗಳಿನಲ್ಲಿ ಆಗುತ್ತದೆ. ತೇರು, ಕೆಂಡ, ಪರೇವು ಜಾತ್ರೆಯಲ್ಲಿ ಜರುಗುತ್ತದೆ.

ಗೌರಮ್ಮ ಎಂಬ ಐವತ್ತು ವರ್ಷದ ಲಿಂಗಾಯಿತ ಸಮುದಾಯದ ಮಹಿಳೆ, ಚನ್ನಮ್ಮ ಎಂಬ ಐವತ್ತೈದು ವರ್ಷವಯಸ್ಸಿನ ಆದಿಕರ್ನಾಟಕ ಸಮುದಾಯದ ಮಹಿಳೆ ಸೋಬಾನೆ ಹಾಡುಗಳನ್ನು ಹಾಡುತ್ತಾರೆ. ಚಿಕ್ಕನಾಯಕನಹಳ್ಳಿ ತಿಪಟೂರಿಗೆ ಸಂಪರ್ಕನ ರಸ್ತೆ ಬಸ್ ಸಂಚಾರವಿದೆ.

## ಮೈಲುಕಟ್ಟೆ

ಮೈಲುಕಬ್ಬೆ ಗ್ರಾಮವು ಒಂದು ಕಂದಾಯ ಗ್ರಾಮ ಇದು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದೀಕೆರೆ ಹೋಬಳಿಯ ತಿಮ್ಮನಹಳ್ಳಿ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತದೆ. ಕಪ್ಪು ಹಾಗೂ ಕೆಂಪು ಮಣ್ಣುವುಳ್ಳ ಪ್ರದೇಶ ಇದಾದ್ದರಿಂದ ಜನಭಾಷೆಯಲ್ಲಿ ಕೆಬ್ಬೆಮಣ್ಣು ಎಂದು ಕರೆಯಲ್ಪಟ್ಟು, ಇಲ್ಲಿ ವಾಸಿಸುವ ಗ್ರಾಮ ಸಮುದಾಯಕ್ಕೆ ಕೆಬ್ಬೆ ವಾಸಿಗರು ಎಂದಾಗಿ ನಂತರ ಮೈಲು ಕಬ್ಬೆ

ಎಂದಾಗಿರಬಹುದೆಂದು ಊರಿನ ಜನ ಹೇಳುತ್ತಾರೆ. ತಾಲ್ಲೂಕು ಕೇಂದ್ರದ ಈಶಾನ್ಯ ದಿಕ್ಕಿನಲ್ಲಿ ೨೦ ಕಿ.ಮೀ. ದೂರದಲ್ಲಿ ಈ ಗ್ರಾಮ ಬರುತ್ತದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ೩೦೬೩.೮೯ ಹೆಕ್ಟೇರ್ ವಡ್ಡರಹಟ್ಟಿ ಗೊಲ್ಲರಹಟ್ಟಿ ಇದಕ್ಕೆ ಮಜರೆ ಗ್ರಾಮ ಹುಲ್ಲೇನಹಳ್ಳಿ ಎಂಬ ಬೇಚರಾಕ್ ಗ್ರಾಮವು ಇದರ ಭೌಗೋಳಿಕ ವಿಸ್ತೀರ್ಣದಲ್ಲೇ ಬರುತ್ತದೆ. ಆದರೆ ಹುಲ್ಲೇನಹಳ್ಳಿಯ ಮೂಲ ನಿವಾಸಿಗಳು ಬಡಕೆಗುಡ್ಲು ಎಂಬ ಕಂದಾಯಗ್ರಾಮಕ್ಕೆ ವಲಸೆ ಹೋಗಿದ್ದಾರೆ. ಬಯಲು ನಾಡಾದ ಇಲ್ಲಿ ಕಪ್ಪು ಕಲ್ಲು, ಕಪ್ಪು, ಕೆಂಪು (ಕೆಬ್ಬೆ) ಮಣ್ಣು ಕಂಡುಬರುತ್ತದೆ.

ಆಜು ಬಾಜು ತಿಮ್ಮಪ್ಪನ ಗುಡ್ಡ, ಬಸವನಗುಡ್ಡ, ಹುಲ್ಲುಗುಡ್ಡ, ಬೂದ್‌ಗುಡ್ಡ, ಕರೇಗುಡ್ಡ, ಸೂಸಕಲ್ಲುಗುಡ್ಡ, ಇತ್ಯಾದಿ ಗುಡ್ಡಗಳು ಕಂಡುಬರುತ್ತವೆ. ಸಾಮಾಜಿಕ ಅರಣ್ಯವೂ ಇಲ್ಲ ಕಂಡುಬರುತ್ತದೆ. ಈ ಪ್ರದೇಶದಲ್ಲಿ ನರಿ, ಕಾಡುಕುರಿ, ತೋಳ, ಕರಡಿ, ಚಿರತೆ, ಕಾಡುಹಂದಿ, ಮೊಲ, ಜಿಂಕೆ ಇತ್ಯಾದಿ ಕಾಡುಪ್ರಾಣಿಗಳು ಕಂಡುಬರುತ್ತವೆ. ನವಿಲು, ಕಾಗೆ, ಗುಬ್ಬಚ್ಚಿ, ಪಾರಿವಾಳ, ಗೀಜಗ, ಇತ್ಯಾದಿ ಪಕ್ಷಿಗಳು ಕಾಣಸಿಗುತ್ತದೆ. ಇಲ್ಲಿಯ ಜನ ಹಸು, ಎಮ್ಮೆ, ಎತ್ತುಗಳು ಕುರಿ, ಮೇಕೆಗಳನ್ನು ಸಾಕುತ್ತಾರೆ. ಕೋಳಿಗಳನ್ನು ಸಾಕುತ್ತಾರೆ.

ಇಲ್ಲಿ ಸರಾಸರಿ ೩೮೧.೩ ಮೀ.ಮೀ. ಮಳೆಯಾಗಿದೆ. ಸಾಧಾರಣ ಚಳಿ ಬಿಸಿಲು ೩೦ ರಿಂದ ೩೫ ಸೆಲ್ಸಿಯಸ್ ಇರುತ್ತದೆ. ಪಕ್ಕ ಗಂಟೆಹಳ್ಳಿಕೆರೆ ತೊರೆಹಳ್ಳಿ ಹರಿಯುತ್ತದೆ. ಇದನ್ನು ಮೈಲುಕಬ್ಬೆ ತೊರೆಹಳ್ಳಿ ಎಂತಲೂ ಕರೆಯುತ್ತಾರೆ. ಗ್ರಾಮದಲ್ಲಿ ೮ ತೆರೆದ ಭಾವಿಗಳಿವೆ. ನಾಲ್ಕು ಬೋರ್‌ವೆಲ್‌ಗಳಿವೆ. ನೀರು (ಅಂತರ್ಜಲ) ಕಡಿಮೆ ಇದೆ. ಕುಡಿಯುವ ನೀರಿಗಾಗಿ ನಾಲ್ಕು ಸಿಸ್ಟಾನ್‌ಗಳನ್ನು ಅಳವಡಿಸಲಾಗಿದೆ. ಇವಕ್ಕೆ ೧೬ ನಲ್ಲಿಗಳನ್ನು ಹಾಕಲಾಗಿದೆ. ೧೧೨ ಮನೆಗಳಿವೆ. ೫೨೦ ಜನಸಂಖ್ಯೆ ಹೊಂದಿದ್ದಾರೆ.

ನಾಯಕ ಜನಾಂಗ ದೊಡ್ಡ ಸಮುದಾಯವಾಗಿದ್ದು, ಕುಂಚಿಟಿಗ ಒಕ್ಕಲಿಗರು, ಆದಿಕರ್ನಾಟಕ ಜನಾಂಗದವರು ಸಣ್ಣ ಸಮುದಾಯವಾಗಿದೆ. ಇಲ್ಲಿಯು ಜನ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಕಲ್ಲು ಹಾಗೂ ಮಣ್ಣನ್ನು ಸೇರಿಸಿ ಮನೆ ಕಟ್ಟಿದ್ದಾರೆ. ಮೇಲ್ಛಾವಣಿಗೆ ಕುಂಬಾರರ ಹೆಂಚು ಹಾಗೂ ಕೆಂಪು ಹೆಂಚನ್ನು ಬಳಸಿದ್ದಾರೆ. ಕೆಲವರು ಸಿಮೆಂಟ್ ಹಾಗೂ ತಗಡು ಸೀಟ್ ಹಾಕಿದ್ದಾರೆ. ಇಲ್ಲಿಯ ಜನರ ಬಹುಮುಖ್ಯ ಆಹಾರ ರಾಗಿಮುದ್ದೆ, ಅನ್ನ ಅಮುಖ್ಯ ಆಹಾರ, ವಿಶೇಷ ಊಟವಾಗಿ ಪಾಯಸ ಒಬ್ಬಟ್ಟು, ತಂಬಿಟ್ಟು ಇತ್ಯಾದಿ ಬಳಸುತ್ತಾರೆ. ಬಹುತೇಕರು ವಿಶೇಷ ಊಟವಾಗಿ ಮಾಂಸಾಹಾರ ಸೇವಿಸುತ್ತಾರೆ. ಸಾಂಪ್ರದಾಯಿಕ ಎತ್ತಿನಗಾಡಿಗಳು ಹಾಗೂ ದ್ವಿಚಕ್ರವಾಹನಗಳು ಕಂಡುಬರುತ್ತವೆ.

ಇಲ್ಲಿನ ಮುಖ್ಯ ಬೆಳೆರಾಗಿ ಉಪಬೆಳೆಗಳಾಗಿ ಹೆಸರುಕಾಳು, ಅವರೆ, ಅಲಸಂಡೆ, ಎಳ್ಳು, ಉಚ್ಚೆಳ್ಳು, ಹುರುಳಿಕಾಳು, ತರಣಿಕಾಳು ಇತ್ಯಾದಿ ಬೆಳೆ ಬೆಳೆಯುತ್ತಾರೆ. ಇವರ ಆಹಾರಬೇಳೆ ಪ್ರಧಾನವಾಗಿ ರಾಗಿಯೇ ಆಗಿದೆ. ತೆಂಗು ಅಡಿಕೆಗಳು ಇಲ್ಲಿಯ ವಾಣಿಜ್ಯ ಬೆಳೆಗಳು ಗ್ರಾಮದಲ್ಲಿ ಬಡಗಿತನ ಮಾಡುವ ಒಂದೆರಡು ಕುಟುಂಬಗಳು ಕಂಡುಬರುತ್ತವೆ.

ಕಂದಿಕೆರೆ ಹೋಬಳಿ, ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರಕ್ಕೂ, ಕಂದಿಕೆರೆ ಜಿಲ್ಲಾ ಪಂಚಾಯತ್ ಕ್ಷೇತ್ರಕ್ಕೂ ತಿಮ್ಮನಹಳ್ಳಿ ತಾಲ್ಲೂಕು ಪಂಚಾಯಿತಿ ಕ್ಷೇತ್ರಕ್ಕೂಕ ಸೇರುತ್ತದೆ. ಇದು ತಿಮ್ಮನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತದೆ. ಈ ಊರಿನ ಇಬ್ಬರು ಗ್ರಾಮ ಪಂಚಾಯ್ತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಗ್ರಾಮದವರು ಒಬ್ಬರು ಗ್ರಾಮ ಪಂಚಾಯ್ತಿಯಲ್ಲಿ ನೌಕರರಿದ್ದಾರೆ.

ಈ ಗ್ರಾಮ ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರುತ್ತದೆ. ಊರಿಗೆ ತಾಲ್ಲೂಕು ಕೇಂದ್ರದಿಂದ ರಸ್ತೆ ಮಾರ್ಗವಿದೆ. ತಿಮ್ಮನಹಳ್ಳಿಯು ಇದಕ್ಕೆ ಅಂಚೆಯಾಗಿದ್ದು, ಗ್ರಾಮದಲ್ಲಿ ಬಹುತೇಕರು ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಕರಿಯಮ್ಮದೇವಿ ಸ್ತ್ರೀಶಕ್ತಿ ಸಂಘ, ಧರ್ಮಸ್ಥಳ ಮಂಜುನಾಥಸ್ವಾಮಿ ಗ್ರಾಮಾಭಿವೃದ್ಧಿ ಸಂಘ ಇತ್ಯಾದಿ ಅನೇಕ ಸಂಘಗಳಿವೆ.

ಅಂಗನವಾಡಿ ಕೇಂದ್ರ, ಕಿರಿಯ ಸರ್ಕಾರಿ ಪ್ರಾಥಮಿಕ ಶಾಲೆ ಇದ್ದು ಮಕ್ಕಳ ಶಿಕ್ಷಣಕ್ಕೆ ಅನುವಾಗಿದೆ. ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಸಾಕ್ಷರ ಭಾರತೀಯ ಕಾರ್ಯಕರ್ತೆರಿದ್ದು, ಅನಕ್ಷರ ಸಾರಿಗೆ ಅಕ್ಷರ ಕಲಿಕೆಗೆ ನೆರವಾಗುತ್ತಿದ್ದಾರೆ. ಹಾಗಾಗಿ ಗ್ರಾಮದಲ್ಲಿ ಸಾಕ್ಷರತೆ ಪ್ರಮಾಣ ಶೇ. ೮೯.೯೨ ರಷ್ಟಿದೆ.

ಶಾಲೆಯಲ್ಲಿ ಬಿಸಿಯೂಟ, ಶೌಚಾಲಯ, ಕ್ಷೀರಭಾಗ್ಯ, ಸಮವಸ್ತ್ರ, ಉಚಿತ ಪಠ್ಯ ಪುಸ್ತಕಗಳ ಸೌಲಭ್ಯವಿದೆ. ಶಿಕ್ಷಣ ಸಾರಿಗೆ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರಿದ್ದು, ಕೆಲವರು ಖಾಸಗಿ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದಾರೆ. ನಾಲ್ಕು ಜನ ವಿಕಲಚೇತನರು, ಆರು ಜನ ವಿಧವೆಯರು ಸರ್ಕಾರದಿಂದ ಸಹಾಯಧನ ಪಡೆಯುತ್ತಿದ್ದಾರೆ. ಈ ಭಾಗದಲ್ಲಿ ಲಿಂಗಮುದ್ರೆ ಕಲ್ಲುಗಳು ನಾಗರ ಕಲ್ಲುಗಳು ಕಂಡುಬರುತ್ತವೆ.

ಗ್ರಾಮಕ್ಕೆ ಸೇರಿದ ಕರಿಯಮ್ಮದೇವಿ ದೇವಸ್ಥಾನ ತಿಮ್ಮಪ್ಪನ ದೇವಸ್ಥಾನ ಬೇವಿನಹಳ್ಳಿ ಅಮ್ಮನ ದೇವಾಲಯಗಳು ಇವೆ. ಯುಗಾದಿ ಹಬ್ಬದ ತರುವಾಯ ಕರಿಯಮ್ಮದೇವಿ ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ಬಾನ, ಓಕುಳಿ ಕೆಂಡ ಮಾಡುತ್ತಾರೆ. ಬೇಸಿಗೆಯಲ್ಲಿ ದೇವಿಮಹಾತ್ಮೆ ನಾಟಕ ಆಡುತ್ತಾರೆ.

## ಮೈಲುಕಟ್ಟೆ ಗೊಲ್ಲರಹಟ್ಟಿ

ಮೈಲುಕಟ್ಟೆ ಗೊಲ್ಲರ ಹಟ್ಟಿಯು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದೆ. ಇದು ಮೈಲು ಕಟ್ಟೆ ಕಂದಾಯ ಗ್ರಾಮದ ಉಪಗ್ರಾಮವಾಗಿದ್ದು, ಮೈಲು ಕಟ್ಟೆ ಗ್ರಾಮದೊಂದಿಗೆ ಇದರ ಇರುವಿಕೆಯನ್ನು ಗುರುತಿಸಿಕೊಂಡಿದೆ. ಇಲ್ಲಿ ಕಾಡುಗೊಲ್ಲ ಸಮುದಾಯಕ್ಕೆ ಸೇರಿದ ೪೨ ಮನೆಗಳಿದ್ದು ೧೯೩ ಜನ ಸಂಖ್ಯೆ ಹೊಂದಿದ್ದಾರೆ. ಇವು ಹೆಂಚಿನ, ಸೀಟಿನ, ಹುಲ್ಲಿನ ಸ್ವರೂಪದಲ್ಲಿವೆ.

ಇವು ಸರ್ಕಾರದ ವಸತಿಯೋಜನೆಯ ಫಲಾನುಭವಿಗಳು ಇದ್ದಾರೆ. ಇಂದಿರಾ ಆವಾಸ್, ಜನತಾ, ಹಾಗೂ ಭಾಗ್ಯ ಜ್ಯೋತಿ ವಿದ್ಯುತ್ ಯೋಜನೆಯ ಫಲಾನುಭವಿಗಳಿದ್ದಾರೆ. ಇಲ್ಲಿ ರೈತಾಪಿ ಹಾಗೂ ಪಶುಪಾಲನೆ ಮುಖ್ಯ ಕಸುಬಾಗಿದೆ. ರಾಗಿ, ಶೇಂಗಾ, ತೊಗರಿ, ಹೆಸರು, ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗು ಬೆಳೆಯುತ್ತಾರೆ. ಕುಡಿಯಲು ತಿಮ್ಮನಹಳ್ಳಿ ಗ್ರಾಮ ಪಂಚಾಯಿತಿಯಿಂದ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತಿದೆ.

ಒಂದು ಸಿಸ್ಟರ್ ಇದೆ. ಒಂದು ಕೊಳವೆ ಬಾವಿಯಿದೆ. ಇದರ ಸಮೀಪ ತಿಮ್ಮನಗುಡ್ಡ, ಕರೇಗುಡ್ಡ, ಬಸವನ ಗುಡ್ಡ ಎಂಬ ಗುಡ್ಡಗಳಿವೆ. ಹಸು, ಎಮ್ಮೆ, ಕುರಿ, ಮೇಕೆ ಸಾಕುತ್ತಾರೆ. ಕಾಡುಗೊಲ್ಲರು ಮಾತ್ರ ತಿಳಿಸಿದ್ದು, ಇದೊಂದು ಶೌಚಾಲಯದ ಮುಕ್ತ ಗ್ರಾಮವಾಗಿದೆ. ಮೈಲುಕಟ್ಟೆಹಳ್ಳ ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ. ಕೊಬ್ಬರಿ, ಕೊಬ್ಬರಿಚಿಪ್ಪು, ತೆಂಗಿನ ಮಟ್ಟೆ ವ್ಯಾಪಾರಿ ಸರಕಾಗಿದೆ.

ಕುರಿಗಾರರು ಹೆಚ್ಚಿದ್ದು, ಜನವರಿಯಿಂದ ಮೇ ತಿಂಗಳಲ್ಲಿ ಕುರಿಗಳು ಹುಲ್ಲು ನೀರಿಗಾಗಿ ವಲಸೆಹೋಗುತ್ತವೆ. ಕಂದಿಕೆರೆ ಜಿಲ್ಲಾಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಈ ಗ್ರಾಮವು ಗ್ರಾಮ ಪಂಚಾಯ್ತಿಯ ಒಬ್ಬರು ಸದಸ್ಯರಿದ್ದಾರೆ. ಗ್ರಾಮದಲ್ಲಿ ಭೂತಪ್ಪ, ಕರಿಯಮ್ಮ ದೇವರ ಪೌಳಿಗಳಿವೆ. ಒಂದು ಅಂಗನವಾಡಿ ಕೇಂದ್ರವಿದೆ. ಪಡಿತರ ಪಡೆಯಲು ತಿಮ್ಮನಹಳ್ಳಿಗೆ ಹೋಗುತ್ತಾರೆ. ಶಿಕ್ಷಣ, ಸಾರಿಗೆ ಇಲಾಖೆಗೆ ಸೇರಿದ ನೌಕರರಿದ್ದಾರೆ. ಗ್ರಾಮದ ಎರಳಯ್ಯ (೫೮) ಕೃಷ್ಣಯ್ಯ ೬೫ ವರ್ಷ ಇವರು ವಿಷಜಂತು ಸಂಬಂಧಿ ಚಿಕಿತ್ಸೆ ನೀಡುತ್ತಾ ಸ್ಥಳೀಯವಾಗಿ ಹೆಸರಾಗಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಕಲ ಚೇತನ, ವಿಧವಾ ಹಾಗೂ ವೃದ್ಧಪ್ಯ ವೇತನದ ೨೨ ಫಲಾನುಭವಿಗಳಿದ್ದಾರೆ.

ಯುಗಾದಿ, ದೀಪಾವಳಿ, ದಸರಾ, ಹಾಗೂ ಗೌರಿ ಗಣೇಶ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ. ದೀಪಾವಳಿಯನ್ನು ಹಿರಿಯರ ಹಬ್ಬ ವನ್ನಾಗಿ ಆಚರಿಸುವುದು ರೂಢಿಯಲ್ಲಿದೆ. ದೀಪಾರಿಸುವ ದೀಪ ಇಳಿಸುವ ಆಚರಣೆಯು ರೂಢಿಯಲ್ಲಿದೆ. ಶಿವಮ್ಮ ೫೦ ಶಿವಗಂಗಯ್ಯ ೫೪ ಚಿಕ್ಕಮ್ಮ ೬೦ ಚಿಕ್ಕಮ್ಮ ಎಂಬುವರು ಚಿತ್ರದೇವರ ಪದ, ಸೋಬಾನೆ ಪದಗಳನ್ನು ಹಾಡುವ ಮೂಲಕ ಸ್ಥಳೀಯವಾಗಿ ಗುರುತಿಸಿ ಕೊಂಡಿದ್ದಾರೆ. ತೊಡಗುತ್ತಾರೆ.

## ಮೈಲುಕಟ್ಟೆ ಬೋವಿ ಕಾಲೋನಿ

ಮೈಲುಕಟ್ಟೆ ಬೋವಿ ಕಾಲೋನಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದ್ದು, ಮೈಲು ಕಟ್ಟೆಯ ಉಪ ಗ್ರಾಮವಾಗಿರುವುದರಿಂದ ಬೈಲುಕಟ್ಟೆ ವಡ್ಡರಹಟ್ಟಿ ಎಂದು ಕರೆಯುತ್ತಾರೆ.

ಇದೊಂದು ಬುಡಕಟ್ಟೆ ಗ್ರಾಮವಾಗಿದ್ದು, ಬೋವಿಜನಾಂಗಕ್ಕೆ ಸೇರಿದ ಒಟ್ಟು ೨೨ ಮನೆಗಳಿದ್ದು, ೯೩ ಜನಸಂಖ್ಯೆ ಹೊಂದಿದೆ. ಇಲ್ಲಿನ ಮನೆಗಳು ಹೆಂಚಿನ ಸೀಟಿನ ಸ್ವರೂಪದಲ್ಲಿದೆ. ಇವು ಸರ್ಕಾರದ ವಸತಿ ಯೋಜನೆಯಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯಲ್ಲಿ ನಿರ್ಮಾಣವಾದವುಗಳಿವೆ. ಕುಡಿಯಲು ತಿಮ್ಮನಹಳ್ಳಿ ಗ್ರಾಮ ಪಂಚಾಯಿಂದ ಕೊಳವೆ ಬಾವಿ ಮೂಲಕ ಪೂರೈಸಲಾಗುತ್ತದೆ. ಸಿಸ್ಟನ್ ಇದೆ. ಕೃಷಿ ಹಾಗೂ ಕೃಷಿ ಕಾರ್ಮಿಕರು ಹೆಚ್ಚಾಗಿದ್ದು, ಕೆಲವರು ಬಂಡೆಸೀಳುವ, ಜೆಲ್ಲಿ ಕಲ್ಲು ಕುಟ್ಟುವ ಕೆಲಸ ಮಾಡುತ್ತಿದ್ದಾರೆ. ರಾಗಿ, ಭತ್ತ, ಹೆಸರು, ಹುರುಳಿ, ಮುಖ್ಯ ಬೆಳೆಗಳು ತೋಟಗಾರಿಕೆ ಬೆಳೆಯಾಗಿ ತೆಂಗನ್ನು ಬೆಳೆಯುತ್ತಾರೆ. ಹಸು, ಎಮ್ಮೆ, ಸಾಕಿದ್ದಾರೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದೆ. ಹೆಚ್ಚಿನ ಶಿಕ್ಷಣಕ್ಕೆ ಮೈಲುಕಟ್ಟೆಗೆ ಹೋಗುತ್ತಾರೆ. ಪಡಿತರಕ್ಕೆ ಮೈಲು ಕಟ್ಟೆಗೆ ಹೋಗಬೇಕಾಗಿದೆ. ಕಂದೀಕೆರೆ ಜಿಲ್ಲಾಪಂಚಾಯಿತಿ ತಿಮ್ಮನಹಳ್ಳಿ ಗ್ರಾಮ ಪಂಚಾಯಿತಿ ಸೇರಿದ್ದು, ಗ್ರಾಮದ ಒಬ್ಬ ಪಂಚಾಯಿತಿ ಪ್ರತಿನಿಧಿ ಇದ್ದಾರೆ. ತಿಮ್ಮನಹಳ್ಳಿಯಿಂದ ಅಂಚೆ ಸಂಪರ್ಕವಿದೆ.

ಕರಿಯಮ್ಮ ದೇವಿಯ ಒಂದು ಪೌಳಿಇದೆ. ಆರತಿ, ಬಾನ, ಬ್ಯಾಟೆ ಹರಕೆ ಸಂಪ್ರದಾಯವಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವಿಧವಾ ವೇತನದ ೬ ಫಲಾನುಭವಿಗಳಿದ್ದು, ಗ್ರಾಮವ ಸಾಕ್ಷರತೆ ೫೭% ರಷ್ಟದೆ. ಬಯಲು ಶೌಚಾಲಯ ಹೊಂದಿದ್ದಾರೆ. ತಿಮ್ಮನಹಳ್ಳಿ ಕಂದಿಕೆರೆ ಚಿಕ್ಕನಾಯಕನಹಳ್ಳಿಗೆ ರಸ್ತೆ ಸಂಪರ್ಕವಿದ್ದು ಖಾಸಗಿ ಬಸ್ ಸಂಚಾರವಿದೆ. ತಿಮ್ಮಪ್ಪ, ಹಾಗೂ ಬೇವಿನಮ್ಮ ಸ್ತ್ರೀಶಕ್ತಿ ಸಂಘವಿದೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘವಿದ್ದು, ಮಹಿಳೆಯರ ಆರ್ಥಿಕ ಸ್ವಾವಲಂಭನೆಗೆ ಸಹಕಾರಿಯಾಗಿದೆ. ಅದಲ್ಲದೆ ಗಂಗಾಕಲ್ಯಾಣ ಯೋಜನೆಯಲ್ಲಿ ಬೋರ್‌ವೆಲ್ ಕೊರೆಸಿ, ಕೃಷಿ ಬೆಳೆಗೆ ಅನುಕೂಲವಾಗಿದೆ.

## ಯಲಿಯಪ್ಪನಪಾಳ್ಯ

ಯಲಿಯಪ್ಪನಪಾಳ್ಯ, ಎಲಿಯಪ್ಪನಪಾಳ್ಯ ಎಂದೆಲ್ಲಾ ಕರೆಯಲ್ಪಡುವ ಈ ಹಳ್ಳಿ ತಿಮ್ಮನಹಳ್ಳಿಗೆ ಸೇರಿದ ಒಂದು ಮಜರೆ ಗ್ರಾಮ. ಕಂದಿಕೆರೆ ಹೋಬಳಿಗೆ ಸೇರಿದೆ. ಇಲ್ಲಿ ಕುಂಚಿಟಿಗ ಜನಾಂಗದ ೫೨ ಮನೆಗಳಿದ್ದು ೨೧೦ ಜನಸಂಖ್ಯೆ ಇದೆ. ಎಲ್ಲರೂ ಕೃಷಿಕರು. ಹಸು, ಎಮ್ಮೆ, ಕುರಿ ಸಾಕುಪ್ರಾಣಿಗಳು. ರಾಗಿ, ಶೇಂಗಾ, ತೊಗರಿ, ಹೆಸರು, ಹುರುಳಿ ಬೆಳೆಯುತ್ತಾರೆ. ಕುಡಿಯಲು ತಿಮ್ಮನಹಳ್ಳಿ ಗ್ರಾಮ ಪಂಚಾಯ್ತಿಯಿಂದ ನೀರು ಪೂರೈಸಲಾಗುತ್ತದೆ. ಒಂದು ಬೋರ್‌ವೆಲ್ ಇದ್ದು ೨ ಸಿಸ್ಟರ್ನ್‌ಗಳಿವೆ. ಕೊಬ್ಬರಿ, ಗರಿಕಡ್ಡಿ, ಹುಣಸೆಹಣ್ಣು ಪ್ರಮುಖ ವ್ಯಾಪಾರಿ ಸರಕಾಗಿದೆ. ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ. ಒಂದು ಅಂಗನವಾಡಿ ಕೇಂದ್ರವಿದೆ. ಶಿಕ್ಷಣ, ಪಡಿತರ ವಿಷಯಗಳಿಗೆ ತಿಮ್ಮನಹಳ್ಳಿ ಮುಖ್ಯ ಗ್ರಾಮಕ್ಕೆ ಬರಬೇಕಿದೆ. ಸಾಕ್ಷರತೆ ಪ್ರಮಾಣ ೬೮% ರಷ್ಟಿದೆ. ಇಲ್ಲಿನ ದೊಡ್ಡ ಸಮುದಾಯ ಕುಂಚಿಟಿಗರು. ಕಲ್ಲಿನ, ಹೆಂಚಿನ, ಶೀಟಿನ, ಕಾಂಕ್ರೀಟ್ ಸ್ವರೂಪದ ಒಟ್ಟು ೫೦ ಮನೆಗಳಿವೆ. ಕೆಲವು ಮನೆಗಳು ಜನತಾ, ಆಶ್ರಯ ಯೋಜನೆಯ ಫಲಾನುಭವಿಗಳಿದ್ದಾರೆ. ೨೨ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ, ಕಂದಿಕೆರೆ ಜಿಲ್ಲಾ ಹಾಗೂ ತಿಮ್ಮನಹಳ್ಳಿ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು ಈ ಗ್ರಾಮದಲ್ಲಿ ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಿಮ್ಮನಹಳ್ಳಿಯ ಭೈರವೇಶ್ವರ, ಶ್ರೀರಾಮ ದೇವರ ಉತ್ಸವದಲ್ಲಿ ವಿಶೇಷವಾಗಿ ಭಾಗವಹಿಸುತ್ತಾರೆ. ಕೆಂಚಮ್ಮನ ಆರಾಧನೆ, ಉತ್ಸವ ಜಾತ್ರೆಯಲ್ಲಿ ಈ ಗ್ರಾಮದಿಂದ ಆರತಿ, ಮಡೆ ಬರುತ್ತದೆ. ತಿಮ್ಮನಹಳ್ಳಿ–ಕಂದಿಕೆರೆ ಮಾರ್ಗವಾಗಿ ಚಿಕ್ಕನಾಯಕನಹಳ್ಳಿಗೆ ರಸ್ತೆ, ಬಸ್ ಸಂಚಾರ ಇರುತ್ತದೆ. ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಯಳನಡು

ಯಳನಡು ಗ್ರಾಮವು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೨ ಕಿಮೀ ಅಂತರದಲ್ಲಿದೆ. ಎಳ್ಳು ಬೆಳೆಯುವ ನಾಡು ಯಳನಾಡು ಎಂದಾಗಿದೆ. ಇದೊಂದು ಕಂದಾಯ ಗ್ರಾಮ ಬಯಲು ನಾಡಾಗಿದೆ. ೨೦೩೫.೨೭ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣವಿದೆ. ೧೯೧೩ ಹೆಕ್ಟೇರ್ ಕೃಷಿಭೂಮಿಯಾಗಿದೆ. ೧೨ನೇ ಶತಮಾನದ ಕರ್ಮಯೋಗಿ ಶ್ರೀ ಸಿದ್ಧರಾಮೇಶ್ವರರ ಪ್ರಸಿದ್ಧ ದೇವಸ್ಥಾನ ಇದ್ದು ಈಗಲೂ ಎಳ್ಳು ಹೋಳಿಗೆಯ ನೈವೇದ್ಯ ಮಾಡುತ್ತಾರೆ. ಇದರ ಕೈಂಕರ್ಯದಲ್ಲಿ ಸ್ಥಾನೀಕರ ವಂಶಸ್ಥರು, ಗೌಡ ವಂಶಸ್ಥರು, ಉಗ್ರಾಣಿ ವಂಶಸ್ಥರು ಇರುವುದನ್ನು ಕಾಣಬಹುದು. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ನವಿಲು, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಮಳೆಗಾಲದಲ್ಲಿ ಮಾತ್ರ ತುಂಬುವ ಕೆರೆಯಿದೆ. ೭ ತೆರೆದ ಬಾವಿಗಳಿದ್ದು ಬತ್ತಿಹೋಗಿ ಕೊಳವೆ ಬಾವಿಗಳೇ ಕುಡಿಯುವ ನೀರಿನ ಮತ್ತು ಕೃಷಿ ಚಟುವಟಿಕೆಯ ಅಲ್ಪ ನೀರಿನ ಮೂಲಗಳಾಗಿವೆ. ಕುಡಿಯುವ ನೀರಿಗಾಗಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕು, ಮಿನಿ ಟ್ಯಾಂಕು, ಕೊಳಾಯಿಗಳ ಮೂಲಕ ಸಾರ್ವಜನಿಕವಾಗಿ ನೀರನ್ನು ಒದಗಿಸಲಾಗುತ್ತಿದೆ.

ಲಿಂಗಾಯಿತರು ದೊಡ್ಡ ಸಮುದಾಯವಾಗಿದ್ದಾರೆ. ಆದಿಕರ್ನಾಟಕ, ಕುರುಬರು, ಬೋವಿ, ಮುಸ್ಲಿಂ, ಕ್ಷೌರಿಕ, ಮಡಿವಾಳ, ವೈಶ್ಯರು ವಾಸವಾಗಿದ್ದಾರೆ. ಕನ್ನಡ ಭಾಷೆ ಪ್ರಧಾನವಾಗಿದ್ದು ಉರ್ದು ಭಾಷಿಕರಿದ್ದಾರೆ. ೨೦೧೧ರ ಜನಗಣತಿಯ ಪ್ರಕಾರ ೨೪೭೪ ಜನಸಂಖ್ಯಾ ಪ್ರಮಾಣವಿದೆ. ಒಟ್ಟು ೫೬೫ ಮನೆಗಳಿವೆ. ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಶೀಟಿನ ಮನೆಗಳು ಹಾಗೂ ಗುಡಿಸಲುಗಳಿವೆ. ಇವು ಜನತಾ, ಆಶ್ರಯ ಯೋಜನೆಯ ಅಡಿಯಲ್ಲಿ ೧೬೮ ಮನೆ ನಿರ್ಮಾಣವಾಗಿದೆ. ೪೦೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಸೊಪ್ಪು, ತರಕಾರಿ ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್, ಟೆಂಪೋ, ಲಾರಿ ಮತ್ತು ಆಟೋಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಡೈರಿ ವ್ಯವಸ್ಥೆಯಿದೆ. ಕೃಷಿ, ಕೂಲಿ ಕಾರ್ಮಿಕರಿದ್ದಾರೆ. ಇಟ್ಟಿಗೆ ಕಾರ್ಖಾನೆ, ಸಣ್ಣ ಕಲ್ಲು ಕಾರ್ಖಾನೆಗಳಿವೆ. ಬೀಡಿ ಸುತ್ತುವ, ತೆಂಗಿನ ಕಡ್ಡಿ ಸಿಗಿಯುವ ಜನರಿದ್ದಾರೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಯಳನಡು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ನಾಲ್ವರು ಗ್ರಾಮಪಂಚಾಯ್ತಿ ಸದಸ್ಯರು ಮತ್ತು ೯ ಜನ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಅಂಚೆ ಕಛೇರಿಯಿದ್ದು ಸ್ಥಿರ / ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವಿರುತ್ತದೆ. ಹಾಲು ಉತ್ಪಾದಕರ ಸಹಕಾರಿ ಸಂಘ, ಕಾವೇರಿ ಗ್ರಾಮೀಣ ಬ್ಯಾಂಕು, ಸ್ವಸಹಾಯ ಹಾಗೂ ಸ್ತ್ರೀಶಕ್ತಿ ಸಂಘಗಳಿದ್ದು ಸಣ್ಣ ಉಳಿತಾಯ, ಸಾಲ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ಸಂಧ್ಯಾ ಸುರಕ್ಷೆ ಹಾಗೂ ಅಂಗವಿಕಲ ವೇತನಗಳ ೧೩೦ ಫಲಾನುಭವಿಗಳಿದ್ದಾರೆ.

ಎರಡು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ, ಹಿರಿಯ ಪ್ರಾಥಮಿಕ ಪಾಠಶಾಲೆ, ಪ್ರೌಢಶಾಲೆ ಮತ್ತು ಅನುದಾನಿತ ಶಾಲೆಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಗ್ರಾಮದ ಸಾಕ್ಷರತೆ ೮೧% ರಷ್ಟಿದೆ. ಗ್ರಾಮ ಪಂಚಾಯ್ತಿ ಉಸ್ತುವಾರಿಯ ಸಾರ್ವಜನಿಕ ಗ್ರಂಥಾಲಯವಿದ್ದು ಸುಮಾರು ೧೦೦೦ ಪುಸ್ತಕಗಳಿವೆ. ಪ್ರಾಥಮಿಕ ಆರೋಗ್ಯ ಘಟಕ ಮತ್ತು ಪಶುವೈದ್ಯಶಾಲೆಯಿದೆ. ಪಟ್ಟು ತೆಗೆಯುವ ನಾಟಿ ವೈದ್ಯ ಪದ್ಧತಿಯೂ ರೂಢಿಯಲ್ಲಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಪ್ರಾಚೀನ ಕಾಲದ ವೀರಗಲ್ಲು, ಮಾಸ್ತಿಗಲ್ಲು ಹಾಗೂ ಕರುಗಲ್ಲು ದೊರೆತಿವೆ. ಮದಕರಿ ನಾಯ್ಕನ ಆಳ್ವಿಕೆಗೆ ಒಳಪಟ್ಟಿರುವ ಕುರುಹಾಗಿ ರೇವಣಸಿದ್ದೇಶ್ವರ ದೇವಸ್ಥಾನಕ್ಕೆ ಹೊಂದಿಕೊಂಡಂತೆ ಕೋಟೆಗೋಡೆ ಉಳಿದಿದೆ ಹಾಗೂ ಸುತ್ತಲಿನ ಕಂದಕದ ಕುರುಹುಗಳನ್ನು ಕಾಣಬಹುದು. ೨೦ ನೇ ಶತಮಾನದ ಕರ್ಮಯೋಗಿ ಶ್ರೀ ಸಿದ್ದರಾಮೇಶ್ವರರ ದೇವಸ್ಥಾನವಿದ್ದು ಪ್ರತಿವರ್ಷ ವಿಜಯದಶಮಿ ಸಂದರ್ಭದಲ್ಲಿ ಜಾತ್ರೆ ನಡೆಯುತ್ತದೆ. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಕಡೆಯಿಂದ ಭಕ್ತರು ಆಗಮಿಸುತ್ತಾರೆ. ಆರತಿ ಉತ್ಸವ, ಬಂಗಾರದ ಅಡ್ಡಪಲ್ಲಕ್ಕಿ, ಬೆಳ್ಳಿಬಸವನ ಉತ್ಸವ, ಬಿಲ್ವಪತ್ರೆ ವಾಹನೋತ್ಸವ, ಉಯ್ಯಾಲೋತ್ಸವ, ನಡೆಮುಡಿ ಕಾರ್ಯಕ್ರಮಗಳು ವಿಜೃಂಭಣೆಯಿಂದ ನಡೆಯುತ್ತವೆ. ಕರಿಯಮ್ಮನ ಗುಡಿ, ರೇವಣಸಿದ್ದೇಶ್ವರ, ಅಜ್ಜಪ್ಪನ ಗುಡಿ, ಆಂಜನೇಯ, ಲಕ್ಷ್ಮಿ, ರಾಯಚೂರಪ್ಪನ ಗುಡಿ, ವೀರಭದ್ರ ದೇವಸ್ಥಾನ, ನವಗ್ರಹ, ಬಸವಣ್ಣನ ಗುಡಿ ಮತ್ತಿತರ ದೇವಾಲಯಗಳು ಹಾಗೂ ಮಸೀದಿಗಳಿವೆ. ಸಿಡಿ, ಓಕುಳಿ, ಬಲಿ, ಪೂಜೆಗಳು ಚಾಲ್ತಿಯಲ್ಲಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಕಲಾ ತರಬೇತಿ ಸಂಸ್ಥೆ, ಬಯಲು ರಂಗಮಂದಿರವಿದ್ದು ಕಲಾಸಕ್ತರಿಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯರಸ್ತೆ ಹಾಗೂ ಕಚ್ಚಾ ರಸ್ತೆ ಸಂಪರ್ಕವಿದ್ದು ಸರ್ಕಾರಿ, ಖಾಸಗಿ ಬಸ್ಸುಗಳ ಸೌಕರ್ಯವಿದೆ. ಜಿ.ಎಸ್. ರೇಣುಕಾನಂದ ವೃತ್ತಿಯಲ್ಲಿ ಶಿಕ್ಷಕರಾಗಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದಾರೆ. ಕವಿತೆಗಳು ಪ್ರಕಟವಾಗಿವೆ.

## ಯಗಚೀಹಳ್ಳಿ

ಯಗಚೀಹಳ್ಳಿ ಗ್ರಾಮವು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೫ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೮೧೯.೦೯ ಹೆಕ್ಟೇರ್. ಇದೊಂದು ಕಂದಾಯ ಗ್ರಾಮವಾಗಿದ್ದು ಮಲ್ಲೇಶ್ವರ ಬಡಾವಣೆ ಈ ಗ್ರಾಮಕ್ಕೆ ಸೇರಿದ ಮತ್ತೊಂದು ಗ್ರಾಮವಾಗಿದೆ. ಯಲಚಿ > ಯಗಚೀ ಮರಗಳಿಂದ ಗ್ರಾಮಕ್ಕೆ ಯಗಚಿಹಳ್ಳಿ ಎಂದಾಗಿದೆ. ಬಯಲುನಾಡು ಎರೆ / ಕೆಂಪು ಮಿಶ್ರಿತ ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ೮೦೦ ಹೆಕ್ಟೇರ್ ಕೃಷಿ ಭೂಮಿಯಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ

ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಚಿಕ್ಕ ಹಳ್ಳವಿದ್ದು ಮಳೆಗಾಲದಲ್ಲಿ ಹೆಚ್ಚು ಮಳೆ ಬಂದರೆ ಮಾತ್ರ ತುಂಬಿ ಹರಿಯುತ್ತದೆ. ಕುಡಿಯುವ ನೀರಿಗಾಗಿ ಗ್ರಾಮಪಂಚಾಯಿತ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್ ಮತ್ತು ಕೊಳಾಯಿ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೪ ಕೈಪಂಪುಗಳ ವ್ಯವಸ್ಥೆಯಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಸರ್ಪ ಒಕ್ಕಲಿಗ ಸಮುದಾಯವು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ ಹಾಗೂ ಕುಂಬಾರ ಸಣ್ಣ ಸಮುದಾಯಗಳಾಗಿವೆ. ಕನ್ನಡ ಇಲ್ಲಿನ ಭಾಷಾ ಮಾಧ್ಯಮವಾಗಿದೆ. ೨೦೧೧ ರ ಜನಗಣತಿಯ ಪ್ರಕಾರ ೩೭೮ ಜನಸಂಖ್ಯೆಯನ್ನು ಹೊಂದಿದೆ. ೭೦ ಮನೆಗಳಿದ್ದು ಕಾಂಕ್ರೀಟ್, ಕಲ್ಲಿನ ಹಾಗೂ ಹೆಂಚಿನ ಮನೆಗಳು ಹಾಗೂ ಗುಡಿಸಲುಗಳಿವೆ. ಒಳಚರಂಡಿ ವ್ಯವಸ್ಥೆಯು ಪ್ರಗತಿಯಲ್ಲಿದೆ. ೬೦ ಮನೆಗಳಲ್ಲಿ ಶೌಚಾಲಯ ನಿರ್ಮಿಸಿಕೊಂಡಿದ್ದಾರೆ. ೧೬ ವಿದ್ಯುತ್ ಕಂಬಗಳಿವೆ. ಉಚಿತ ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಸಾವೆ ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಆಧುನಿಕ ಡೈರಿಯಿದೆ. ತೆಂಗು-ಹುಣಸೆ ಇಲ್ಲಿನ ಜನರ ವ್ಯಾಪಾರವಾಗಿದೆ. ಇಟ್ಟಿಗೆ ಕೈಗಾರಿಕೆಯಿದೆ. ಮುಖ್ಯ ಉದ್ಯೋಗವಾಗಿ ವ್ಯವಸಾಯ ಹಾಗೂ ಕುಂಬಾರಿಕೆಯನ್ನು ಮಾಡುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯಿತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯಿತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಸಂಚಾರಕ್ಕೆ ರಸ್ತೆ ಮಾರ್ಗವಿದ್ದು ಖಾಸಗಿ ಬಸ್ಸುಗಳು, ಆಟೋರಿಕ್ಷಾ ಮತ್ತು ಸ್ವಂತ ವಾಹನಗಳಿವೆ. ಸಂಚಾರಿ ದೂರವಾಣಿಗಳಿವೆ. ಹಾಲು ಉತ್ಪಾದಕರ ಸಹಕಾರಿ ಸಂಘವಿದೆ. ೪ ಸ್ತ್ರೀಶಕ್ತಿ ಸಂಘಗಲು, ಲಕ್ಷ್ಮೀದೇವಿ ಸ್ವಸಹಾಯ ಮಹಿಳಾ ಸಂಘ, ಜ್ಞಾನಜ್ಯೋತಿ ಮಹಿಳಾ ಸಂಘ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೇ.೭೦ ರಷ್ಟು ಸಾಕ್ಷರತೆ ಪ್ರಮಾಣವಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೦ ಫಲಾನುಭವಿಗಳಿದ್ದಾರೆ.

ಆಂಜನೇಯಸ್ವಾಮಿ, ಸೋಮನಾಥೇಶ್ವರ ದೇವಾಲಯಗಳಿವೆ. ೩ ವರ್ಷಕ್ಕೊಮ್ಮೆ ಆಂಜನೇಯಸ್ವಾಮಿ ರಥೋತ್ಸವವನ್ನು ನಡೆಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಯಗಚೀಹಳ್ಳಿ ಮಲ್ಲೇಶ್ವರ ಬಡಾವಣೆ

ಮಲ್ಲೇಶ್ವರ ಬಡಾವಣೆ ಯಗಚೀಹಳ್ಳಿಯ ಹೊರಭಾಗದಲ್ಲಿ ರಚನೆಯಾಗಿರುವ ಜನವಸತಿ ಪ್ರದೇಶವಾಗಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ೩೬ ಕಿಮೀ ದೂರದಲ್ಲಿದೆ. ಯಗಚಿಹಳ್ಳಿ, ಬೋರನಕಣಿವೆ ಹಾಗೂ ಹೊಯ್ಸಳಕಟ್ಟೆ ಪರಿಸರದ ಜನರು ಹೊಸದಾಗಿ ಮನೆ ಕಟ್ಟಿಕೊಂಡ ಕಾರಣ ಮಲ್ಲೇಶ್ವರ ಬಡಾವಣೆ ಎಂದು ಕರೆಯುತ್ತಾರೆ. ಒಟ್ಟು ೩೨ ಮನೆಗಳಿದ್ದು ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಜನತಾ ಯೋಜನೆ ಹಾಗೂ ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ನಾಯಕ, ಮಡಿವಾಳ, ಆದಿಕರ್ನಾಟಕ, ಒಕ್ಕಲಿಗ, ಕ್ಷೌರಿಕ ಸಮುದಾಯದವರಿದ್ದಾರೆ. ೨೦೧೧ ರ ಜನಗಣತಿ ಪ್ರಕಾರ ೧೧೦ ಜನಸಂಖ್ಯೆ ಇದೆ. ಕುಡಿಯಲು ಬೋರನಕಣಿವೆ ಜಲಾಶಯದಿಂದ ಹಾಗೂ ಕೊಳವೆ ಬಾವಿಯ ಮೂಲಕ ಹೊಯ್ಸಳಕಟ್ಟೆ ಗ್ರಾಮಪಂಚಾಯಿತ್ತಿಯಿಂದ ನೀರು ಪೂರೈಸಲಾಗುತ್ತಿದೆ.

ಎರಡು ಸಿಸ್ಟನ್‌ಗಳಿವೆ. ರೈತಾಪಿ ಬದುಕು ಮುಖ್ಯವಾಗಿದ್ದು ಶೇಂಗಾ, ರಾಗಿ ಬೆಳೆಯುತ್ತಾರೆ. ಹುಣಸೆ, ಹೊಂಗೆ ವಾಣಿಜ್ಯ ಸರಕಾಗಿದೆ. ಹಸು, ಎಮ್ಮೆ ಕುರಿ ಮೇಕೆ ಸಾಕುಪ್ರಾಣಿಗಳಾಗಿದ್ದು ಸಾಮಾಜಿಕ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಶಿಕ್ಷಣ, ಅರಣ್ಯ, ನೀರಾವರಿ ಇಲಾಖೆಗಳಲ್ಲಿ ೪ ಜನ ಸರ್ಕಾರಿ ನೌಕರರಿದ್ದಾರೆ. ಶಿಕ್ಷಣ, ಪಡಿತರವನ್ನು ಯಗಚಿಹಳ್ಳಿಯಿಂದ ಪೂರೈಸಲಾಗುವುದು. ಕನ್ನಡ ಇಲ್ಲಿನ ಮಾತೃಭಾಷೆಯಾಗಿದ್ದು ಚಿಕ್ಕನಾಯಕನಹಳ್ಳಿ-ಸಿರಾ ಮಾರ್ಗವಾಗಿ ಬಸ್ ರಸ್ತೆ ಸಂಪರ್ಕವಿದೆ. ಹೊಯ್ಸಳಕಟ್ಟೆಯಿಂದ ಅಂಚೆ ಸಂಪರ್ಕ ಹೊಂದಿದೆ. ಹೊಯ್ಸಳಕಟ್ಟೆ ಜಿಲ್ಲಾಪಂಚಾಯ್ತಿ, ಗಾಣದಾಳು ಗ್ರಾಮಪಂಚಾಯ್ತಿಗೆ ಸೇರಿದೆ. ೨ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಒಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘವಿದೆ. ಮಲ್ಲೇಶ್ವರನ ಪುಟ್ಟ ಗುಡಿಯಿದ್ದು ಕರಿಯಮ್ಮನ ಊರಹಬ್ಬ ಆಚರಿಸುತ್ತಾರೆ. ಯಗಚಿಹಳ್ಳಿಯ ಆಂಜನೇಯ ದೇವರ ರಥೋತ್ಸವದಲ್ಲಿ ಈ ಗ್ರಾಮದವರ ಸೇವೆ ಮುಖ್ಯವಾಗಿರುತ್ತದೆ. ಬೋರನಕಣಿವೆಯಲ್ಲಿ ಮೀನಿನ ಪಚ್ಚಮಾರು ಮೂಲಕ ಮೀನು ಹಿಡಿಯುವುದು ಇಲ್ಲಿನ ಹಲವರ ಉದ್ಯೋಗವಾಗಿದೆ.

## ಯಾಕೂಬ್‌ಸಾಬ್ ಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೮ ಕಿಮೀ ಅಂತರದಲ್ಲಿದೆ. ಮಜರೆ ಗ್ರಾಮ ಹುಳಿಯಾರು ಕಂದಾಯ ಗ್ರಾಮಕ್ಕೆ ಸೇರ್ಪಡೆಯಾಗಿರುವ ಬಯಲುನಾಡಾಗಿದೆ. ಮುಸ್ಲಿಂ ಜನಾಂಗದ ಯಾಕೂಬ್‌ಸಾಬ್ ಎಂಬುವವನ ಹೆಸರಿನಲ್ಲಿ ಗ್ರಾಮಕ್ಕೆ ಹೆಸರು ಬಂದಿದೆ. ೧೧೨ ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ. ಕಪ್ಪು ಮಿಶ್ರಿತ ಕೆಂಪು-ಬಿಳಿ ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಹುಳಿಯಾರು ಕೋಡಿಹಳ್ಳ ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ. ತೆರೆದ ಬಾವಿಗಳು ಬತ್ತಿಹೋಗಿ ಕೊಳವೆ ಬಾವಿಗಳು ಕೃಷಿ ಚಟುವಟಿಕೆಗೆ ನೀರಿನ ಮೂಲಗಳಾಗಿವೆ. ಕುಡಿಯುವ ನೀರಿಗಾಗಿ ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್‌ಗಳ ಮೂಲಕ ನೀರು ಒದಗಿಸಲಾಗುತ್ತಿದೆ.

ಮುಸ್ಲಿಂ ಸಮುದಾಯ ಪ್ರಧಾನವಾಗಿದ್ದು ಕನ್ನಡ ಮತ್ತು ಉರ್ದು ಮಾತನಾಡುತ್ತಾರೆ. ಟ್ರ್ಯಾಕ್ಟರ್, ಟೆಂಪೋ ಮತ್ತು ದ್ವಿಚಕ್ರ ವಾಹನಗಳಿವೆ. ೨೦೧೧ ರ ಜನಗಣತಿಯ ಪ್ರಕಾರ ೭೩೦ ಜನಸಂಖ್ಯಾ ಪ್ರಮಾಣವಿದೆ. ಒಟ್ಟು ೧೩೦ ಮನೆಗಳಿದ್ದು ಹೆಂಚಿನ, ಮಣ್ಣು-ಕಲ್ಲಿನ ಮತ್ತು ಕಾಂಕ್ರೀಟ್ ಮನೆಗಳಿವೆ. ೬೨ ಮನೆಗಳಲ್ಲಿ ಶೌಚಾಲಯ ಸೌಲಭ್ಯವಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕುರಿ-ಹಸು ಸಾಕುತ್ತಾರೆ. ರಾಗಿಮುದ್ದೆ, ಅನ್ನ, ರೊಟ್ಟಿ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಖಾಸಗಿ ಬಸ್ಸು, ಆಟೋರಿಕ್ಷಾ, ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಬಹುಪಾಲು ಮನೆಗಳಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರನ್ನು ಹೊಂದಿದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ೩ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೇ.೬೩ ರಷ್ಟು ಸಾಕ್ಷರತೆ ಹೊಂದಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಉರುಸ್ ನಡೆಯುತ್ತದೆ. ಮಸೀದಿ, ದರ್ಗಾ, ಮದರಸಗಳನ್ನು ಕಾಣಬಹುದು. ಇವರು ಸಂಕ್ರಾಂತಿ,

ರಂಜಾನ್, ಬಕ್ರೀದ್, ಈದ್‌ಮಿಲಾಲ್, ಮೊಹರಂ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಯರೇಕಟ್ಟೆ

ಯರೇಕಟ್ಟೆ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ತೀರ್ಥಪುರ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೨೦ ಕಿಮೀ ಅಂತರದಲ್ಲಿದೆ. ಹೆಸರಿನ ನಿಷ್ಪತ್ತಿಗೆ ದೊಡ್ಡಕಟ್ಟೆ ಎಂಬುದು ಕಾರಣವಾಗಿದೆ. ದೊಡ್ಡ ಕಟ್ಟೆ > ಹಿರೇಕಟ್ಟೆ > ಯರೇಕಟ್ಟೆ (ಎರೇಕಟ್ಟೆ) ಆಗಿದೆ. ಭೌಗೋಳಿಕ ವಿಸ್ತೀರ್ಣ ೨೦೭೪.೧೫ ಹೆಕ್ಟೇರ್. ಬಯಲುನಾಡಿನ ಕಪ್ಪುಕಲ್ಲು, ಸಿಮೆಂಟ್ ಕಲ್ಲು, ಕೆಂಪು–ಕಪ್ಪು ಮಣ್ಣು ಕಂಡುಬರುತ್ತದೆ. ಸಮೀಪ ಅಬ್ಬಿಗೆಗುಡ್ಡ ಎಂಬ ಗುಡ್ಡವಿದೆ. ಸಾಮಾಜಿಕ ಅರಣ್ಯವಿದೆ. ರಾಮೇಶ್ವರ ತಪೋವನ ಇದೆ. ಯರೇಕೆರೆ ಎ.ಕೆ. ಕಾಲೋನಿ ಉಪಗ್ರಾಮವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ವಜ್ರದಹಳ್ಳ (ದೊಡ್ಡಹಳ್ಳ) ಹರಿಯುತ್ತದೆ. ಇದು ಅಬ್ಬಿಗೆಗುಡ್ಡದಿಂದ ಮದನಮಡು ಕೆರೆಗೆ ಹೋಗುತ್ತದೆ. ಕರೆಹಳ್ಳ ಎಂಬುದು ಕಟ್ಟೆಗುಡ್ಡದಿಂದ ಮದನಮಡು ಕೆರೆಗೆ ಹೋಗುತ್ತದೆ. ೬ ತೆರೆದ ಬಾವಿಗಳು, ೩೪ ಕೊಳವೆ ಬಾವಿಗಳು ಇವೆ. ೨೦೧೧ ರ ಜನಗಣತಿ ಪ್ರಕಾರ ೩೮೫ ಜನಸಂಖ್ಯೆಯಿದೆ. ೮೬ ಮನೆಗಳಿವೆ. ಕಪ್ಪು ಹಾಗೂ ಕೆಂಪು ಹೆಂಚಿನ ಮನೆಗಳಿವೆ. ನಾಯಕರು ದೊಡ್ಡ ಸಮುದಾಯವಾಗಿದ್ದು ಲಿಂಗಾಯಿತ, ಮಡಿವಾಳ, ದಾಸರು (ದಾಸಯ್ಯಗಳು) ಸಣ್ಣ ಸಮುದಾಯದವರಾಗಿದ್ದಾರೆ. ಎಲ್ಲರೂ ಕನ್ನಡ ಭಾಷೆ ಮಾತನಾಡುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಮಾವು, ಪತ್ರೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಸಿಕಲ್, ಕಾರುಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಒಬ್ಬರು ಹೆಚ್‌ಎಎಲ್‌ನಲ್ಲಿ, ಬೆಂಗಳೂರು ಮ.ನ.ಸಾ.ಸಂಸ್ಥೆಯಲ್ಲಿ, ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವವರಿದ್ದಾರೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತೀರ್ಥಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಮತ್ತು ಒಬ್ಬರು ಗ್ರಾಮಪಂಚಾಯ್ತಿ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ರಸ್ತೆ ಮಾರ್ಗವಿದೆ. ಚಿ.ನಾ.ಹಳ್ಳಿಯಿಂದ ಕೊಂಡ್ಲಿ ಕ್ರಾಸ್‌ಗೆ ಹೋಗುವ ಜಿಲ್ಲಾ ಮುಖ್ಯರಸ್ತೆಯಿದೆ. ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಸರಸ್ವತಿ, ದುರ್ಗಾ, ಲಕ್ಷ್ಮಿ ಎಂಬ ಮೂರು ಸ್ತ್ರೀಶಕ್ತಿ ಸಂಘಗಳಿವೆ. ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯ ೨೩ ಫಲಾನುಭವಿಗಳಿದ್ದಾರೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೇ.೬೮ ರಷ್ಟು ಸಾಕ್ಷರತೆಯಿದೆ. ದೊಡ್ಡರಂಗಯ್ಯ ಎಂಬ ನಾಟಿ ವೈದ್ಯರು ದನಗಳ ರೋಗಕ್ಕೆ ಔಷಧಿ ನೀಡುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೩ ಫಲಾನುಭವಿಗಳಿದ್ದಾರೆ. ಮೂರು ಕಿರಾಣಿ ಅಂಗಡಿಗಳಿವೆ. ತೀರ್ಥರಾಮೇಶ್ವರಸ್ವಾಮಿ ದೇವಸ್ಥಾನದಲ್ಲಿ ಶಿಲಾಶಾಸನವಿದೆ. ಕೋಟೆ ಇದೆ. ಹಳೆಯ ರಾಜಮನೆತನದ ಮನೆ ಕೂಡ ಇದೆ.

ತೀರ್ಥರಾಮೇಶ್ವರ ವಜ್ರ ಎಂಬ ಧಾರ್ಮಿಕ ಸ್ಥಳ, ಆಂಜನೇಯನ ದೇವಸ್ಥಾನ ಇದೆ. ಏಪ್ರಿಲ್–ಮೇ ತಿಂಗಳಲ್ಲಿ ಜಾತ್ರೆ ಮಾಡುತ್ತಾರೆ. ಜಾತ್ರೆಯಲ್ಲಿ ಅನ್ನ ಸಂತರ್ಪಣೆ, ರಥೋತ್ಸವಗಳು ಜರುಗುತ್ತವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರಾಮಯ್ಯ ಎಂಬುವರು ಭಜನಾ ತಂಡ ಮಾಡಿಕೊಂಡು ಹಾಡುತ್ತಾರೆ.

## ಯರೇಕಟ್ಟೆ ಎ.ಕೆ. ಕಾಲೋನಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೨೦ ಕಿಮೀ ಅಂತರದಲ್ಲಿದೆ. ಆದಿಕರ್ನಾಟಕ ಜನಾಂಗದ ೧೪

ಮನೆಗಳಿವೆ. ಇದನ್ನು ಮಾದಿಗರಹಟ್ಟಿ ಎಂದೇ ಕರೆಯುತ್ತಾರೆ. ೬೩ ಜನಸಂಖ್ಯೆ ಇದೆ. ಮನೆಗಳು ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಸರ್ಕಾರದ ವಸತಿ ಯೋಜನೆಗಳಾದ ಜನತಾ, ಆಶ್ರಯ, ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳಿದ್ದಾರೆ. ಉಚಿತ ವಿದ್ಯುತ್ ಸೌಲಭ್ಯ ಪಡೆದಿದ್ದಾರೆ. ಕುಡಿಯಲು ತೀರ್ಥಪುರ ಗ್ರಾಮಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗುತ್ತದೆ. ಒಂದು ಸಿಸ್ಟನ್ ಇದ್ದು ಗ್ರಾಮಸ್ಥರು ಇದರ ಮೂಲಕ ನೀರು ಬಳಸುತ್ತಾರೆ. ಇಲ್ಲಿಗೆ ಸಮೀಪದ ವಜ್ರದಹಳ್ಳದಿಂದ ಮಳೆಗಾಲದಲ್ಲಿ ನೀರನ್ನು ಬಳಸಿಕೊಳ್ಳುತ್ತಾರೆ. ವ್ಯವಸಾಯ ಮುಖ್ಯ ಕಸುಬಾಗಿದೆ. ಕಾಡು, ಕಲ್ಲು-ಮಣ್ಣಿನ ಪ್ರದೇಶವಾಗಿದ್ದು ರಾಗಿ, ಜೋಳ, ಹೆಸರು ಬೆಳೆಯುತ್ತಾರೆ. ಹಸು, ಕುರಿ, ಮೇಕೆ ಸಾಕುತ್ತಾರೆ. ಶಿಕ್ಷಣ, ಪಡಿತರ, ಆಸ್ಪತ್ರೆಗೆ ತೀರ್ಥಪುರಕ್ಕೆ ಹೋಗಬೇಕಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಚಿಕ್ಕನಾಯಕನಹಳ್ಳಿ-ಕೊಂಡ್ಲಿ ಕ್ರಾಸ್‌ಗೆ ರಸ್ತೆ ಸಂಪರ್ಕವಿದೆ. ಬಯಲು ಶೌಚಾಲಯ ಬಳಸುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೭ ಫಲಾನುಭವಿಗಳಿದ್ದಾರೆ.

ಯರೇಕಟ್ಟೆ ರಾಂಪುರದಮ್ಮನ ಜಾತ್ರೆಯಲ್ಲಿ ಈ ಗ್ರಾಮದವರ ಪಾತ್ರ ಅತಿ ಮುಖ್ಯವಾಗಿದೆ. ತೋಟಿಯ ಜವಾಬ್ದಾರಿ, ಸಾಂಪ್ರದಾಯಿಕ ಆಚರಣೆ ಇದೆ. ಯರೇಕಟ್ಟೆ ರಾಂಪುರದಮ್ಮನ ಜಾತ್ರೆ ೨ ದಿನಗಳ ಕಾಲ ವಿಜೃಂಭಣೆಯಿಂದ ನಡೆಯುತ್ತದೆ. ಬಲಿ, ಆರತಿ, ವಿಶೇಷ ಹರಕೆ ಸಂಪ್ರದಾಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಯಳ್ಳೇನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಮತ್ತಿಘಟ್ಟ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೮ ಕಿಮೀ ಅಂತರದಲ್ಲಿದೆ. ಯಳೆಯಪ್ಪ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ಈ ಹೆಸರು ಬಂದಿದೆ. ಆರಂಭದಲ್ಲಿ ಕಂಬಳಿ ತಯಾರಿಕೆಯಲ್ಲಿನ ದಾರದ ಎಳೆಗಳನ್ನು ನೂಲುವ ಕಾರಣದಿಂದಾಗಿ ಎಳೆಯಪ್ಪ > ಯಳೆಯಪ್ಪ ಎಂದಾಗಿ ಯಳ್ಳೇನಹಳ್ಳಿ ಎಂದಾಗಿದೆ.

ಭೌಗೋಳಿಕ ವಿಸ್ತೀರ್ಣ ೫೦೨.೮೬ ಹೆಕ್ಟೇರ್. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಒಂದು ಕುಂಟೆ ಇದೆ. ಗ್ರಾಮಕ್ಕೆ ನೀರೊದಗಿಸಲು ಕಿರುನೀರು ಸರಬರಾಜು ಮಾಡುವ ಮಿನಿ ಟ್ಯಾಂಕ್‌ಗಳಿವೆ. ೧ ತೆರೆದ ಬಾವಿ, ೭೦ ಕೊಳವೆ ಬಾವಿಗಳಿವೆ.

ಲಿಂಗಾಯಿತರು ಹೆಚ್ಚಿನ ಸಂಖ್ಯೆಯಲ್ಲಿದ್ದು ಆದಿಕರ್ನಾಟಕ, ನಾಯಕರು, ಆಚಾರಿ ಜನಾಂಗದವರು ವಾಸವಾಗಿದ್ದಾರೆ. ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ೧೩೦ ಮನೆಗಳಿದ್ದು ೩೦ ಮನೆಗಳಲ್ಲಿ ಶೌಚಾಲಯವಿದೆ. ೧ ವಸತಿ ರಹಿತ ಕುಟುಂಬ, ೨ ನಿವೇಶನ ರಹಿತ ಕುಟುಂಬಗಳಿವೆ. ೩೦ ಆಶ್ರಯ ಮನೆಗಳ, ೩೦ ಜನತಾ ಮನೆಗಳು, ೧೨ ಅಂಬೇಡ್ಕರ್ ವಸತಿ ನಿಲಯಗಳು, ೧೦ ಇಂದಿರಾ ಆವಾಸ್ ಮನೆಗಳಿದ್ದು ಇವುಗಳಲ್ಲಿ ಬಹುತೇಕ ಹೆಂಚಿನ ಮನೆಗಳಾಗಿವೆ. ೬ ಕಾಂಕ್ರೀಟ್ ಮನೆ, ೬೦ ಕಲ್ಲಿನ ಮನೆಗಳಿವೆ. ೬೦ ಮನೆಗಳು ಭಾಗ್ಯಜ್ಯೋತಿ ವ್ಯವಸ್ಥೆಯನ್ನು ಪಡೆದಿವೆ. ೪೦ ವಿದ್ಯುಚ್ಛಕ್ತಿ ಕಂಬಗಳಿದ್ದು ೩೬ ಕಂಬಗಳಲ್ಲಿ ದೀಪವಿದೆ.

೨೦೧೧ ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೫೫೦. ಒಟ್ಟು ಸಾಕ್ಷರರ ಪ್ರಮಾಣ ೬೬% ರಷ್ಟಿದೆ. ಆಧುನಿಕ ಡೈರಿ ವ್ಯವಸ್ಥೆಯಿದೆ. ೧೦ ಜನ ಶಿಕ್ಷಕರಿದ್ದಾರೆ. ೨ ಹಿಟ್ಟಿನ ಗಿರಣಿಗಳಿವೆ.

ಕೃಷಿ ಪ್ರಧಾನವಾದ ಕೆಂಪು ಮಿಶ್ರಿತ ಕಪ್ಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಕಡಲೆಕಾಯಿ ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ, ದಾಳಿಂಬೆ, ತರಕಾರಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ

ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಒಂದು ಜಿಲ್ಲಾ ಮುಖ್ಯರಸ್ತೆ, ೧ ಕಚ್ಚಾ ರಸ್ತೆಯನ್ನು ಹೊಂದಿದೆ. ಚಿ.ನಾ. ಹಳ್ಳಿ – ತಿಪಟೂರು ಕಡೆಗೆ ಸಂಪರ್ಕ ಕಲ್ಪಿಸುತ್ತದೆ. ೬ ಸ್ತ್ರೀಶಕ್ತಿ ಸಂಘಗಳು, ೧೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ. ೩ ಚಿಲ್ಲರೆ ಅಂಗಡಿಗಳಿವೆ.

ಬಸವೇಶ್ವರ, ಭೈರೇಶ್ವರ, ಭೂತನ ಗುಡಿಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಯಳ್ಳೇನಹಳ್ಳಿ ರಾಜ ಎಂಬ ಹಾರ್ಮೋನಿಯಂ ಮಾಸ್ಟರ್ ಇದ್ದು ನೂರಾರು ನಾಟಕಗಳನ್ನು ಇಂದಿಗೂ ಕಲಿಸುತ್ತಿದ್ದಾರೆ.

## ಯರೇಕಟ್ಟೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬರಗೂರು ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ೨೪ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೨೪೩ ಹೆಕ್ಟೇರ್. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಕುಡಿಯಲು ಬರಗೂರು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತಿದೆ. ೨ ಕೊಳವೆ ಬಾವಿಗಳಿದ್ದು ೧ ವಾಟರ್ ಟ್ಯಾಂಕ್ ಇದೆ. ನಲ್ಲಿ ಸೌಕರ್ಯವಿದೆ.

ಶೆಟ್ಟಿ ಬಣಜಿಗ ದೊಡ್ಡ ಸಮುದಾಯವಾಗಿದ್ದು ಕುರುಬರು, ಲಿಂಗಾಯಿತರು, ಆದಿಕರ್ನಾಟಕ, ನಾಯಕ ಜನಾಂಗ ಕಿರು ಸಮುದಾಯವಾಗಿದೆ. ೨೦೧೧ ರ ಜನಗಣತಿ ಪ್ರಕಾರ ೧೬೩ ಜನಸಂಖ್ಯೆಯಿದೆ. ೪೪ ಮನೆಗಳಿದ್ದು ಹೆಂಚಿನ, ಕಾಂಕ್ರೀಟ್ ಹಾಗೂ ಮಣ್ಣಿನ ಮನೆಗಳಿದ್ದು ಜನತಾ, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ೨೨ ಫಲಾನುಭವಿಗಳಿದ್ದಾರೆ. ೧೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಮರಳು ಮಿಶ್ರಿತ ಕರಿ ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಆಟೋ, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ. ಸಾರಿಗೆ, ಶಿಕ್ಷಣ, ಕಂದಾಯ ಇಲಾಖೆಗಳಲ್ಲಿ ೭ ಜನ ಸರ್ಕಾರಿ ನೌಕರರಿದ್ದಾರೆ. ಟ್ರ್ಯಾಕ್ಟರ್ ಡ್ರೈವರ್‌ಗಳಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಬರಗೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬರಗೂರಿನಿಂದ ಅಂಚೆ ಸಂಪರ್ಕವಿದೆ. ಬರಗೂರು, ಹಂದನಕೆರೆ, ಮತಿಘಟ್ಟ ಮಾರ್ಗವಾಗಿ ರಸ್ತೆ, ಬಸ್ ಸಂಚಾರವಿದೆ. ಆಸ್ಪತ್ರೆ, ಪಡಿತರ ವಿಚಾರಗಳಿಗೆ ಬರಗೂರಿಗೆ ಹೋಗುತ್ತಾರೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೇ.೬೯ ರಷ್ಟು ಸಾಕ್ಷರತೆ ಇದೆ. ೨ ಸ್ತ್ರೀಶಕ್ತಿ ಸಂಘ, ಧರ್ಮಸ್ಥಳ

ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಕರಿಯಮ್ಮ ದೇವರಿಗೆ ಆರತಿ ಉತ್ಸವ ಏರ್ಪಡುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಯರೇಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೮ ಕಿಮೀ ಅಂತರದಲ್ಲಿದೆ. ಕಪ್ಪು ನೆಲ ಇರುವುದರಿಂದ ಈ ಹೆಸರು ಬಂದಿದೆ. ಯರೆ > ಎರೆ > ಕಪ್ಪು ನೆಲ. ಭೌಗೋಳಿಕ ವಿಸ್ತೀರ್ಣವು ೩೮೨.೨೬ ಹೆಕ್ಟೇರ್. ಬಯಲು ನಾಡಾಗಿದ್ದು ಬಿಳಿಕಲ್ಲು ಮತ್ತು ಬಿಳಿ ಮಣ್ಣನ್ನು ಹೊಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕೊಳವೆ ಬಾವಿಗಳಿವೆ. ಕಿರುನೀರು ಸರಬರಾಜು ಯೋಜನೆಯಿದೆ.

ವೀರಶೈವರು ದೊಡ್ಡ ಸಮುದಾಯದವರಾಗಿದ್ದು ಮುಸ್ಲಿಮರು ಸಣ್ಣ ಸಮುದಾಯದವರಾಗಿದ್ದಾರೆ. ಕನ್ನಡ ಮತ್ತು ಉರ್ದು ಭಾಷೆ ಬಳಕೆಯಲ್ಲಿದೆ. ೬ ಮನೆಗಳಿದ್ದು ಅವುಗಳನ್ನು ಕಲ್ಲು, ಮಣ್ಣಿನಿಂದ ಕಟ್ಟಿದ್ದಾರೆ. ಒಟ್ಟು ಜನಸಂಖ್ಯೆ ೩೯ ಆಗಿದೆ. ಮನೆಗಳ ಮೇಲ್ಭಾವಣಿಗೆ ಕುಂಬಾರರ ಕಪ್ಪು ಹೆಂಚು ಮತ್ತು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್‌ಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಕುಪ್ಪೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಮೊಬೈಲ್ ದೂರವಾಣಿಗಳನ್ನು ಬಳಸುತ್ತಾರೆ. ಬಸವೇಶ್ವರ ಸ್ತ್ರೀಶಕ್ತಿ ಸಂಘವಿದೆ. ಶೇ.೭೦ ರಷ್ಟು ಸಾಕ್ಷರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೩ ಫಲಾನುಭವಿಗಳಿದ್ದಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಯರೇಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೧೯ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೮೧೨.೩೨ ಹೆಕ್ಟೇರ್. ಕಂದಾಯ ಗ್ರಾಮ. ದೊಡ್ಡನಹಳ್ಳಿ ಸೇರ್ಪಡೆ ಗ್ರಾಮ. ಬಯಲು ನಾಡಾಗಿದೆ. ಯರೇಮಣ್ಣಿನ ಪ್ರದೇಶವಾಗಿರುವ ಕಾರಣ ಯರೇಹಳ್ಳಿ ಎಂದು ಕರೆದಿದ್ದಾರೆ ಎಂದು ಹೇಳುತ್ತಾರೆ. ಬಿಳಿ-ಕೆಂಪು ಮಿಶ್ರಿತ ಚೌಳು ಭೂ ಪ್ರದೇಶವನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ೭೯೮ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ೨ ತೆರೆದ ಬಾವಿಗಳಿದ್ದು ಕೆಲವು ಬತ್ತಿಹೋಗಿ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್

ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಉಪ್ಪಾರ ಜನಾಂಗ ದೊಡ್ಡ ಸಮುದಾಯ, ನಾಯಕ, ಅಕ್ಕಸಾಲಿ ಜನಾಂಗವು ಚಿಕ್ಕ ಸಮುದಾಯವಾಗಿದೆ. ಪ್ರಮುಖವಾಗಿ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಒಟ್ಟು ೧೯೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೫೦೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ, ಗುಡಿಸಲು ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೬೨ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೨೦ ಮನೆಗಳಲ್ಲಿ ಶೌಚಾಲಯವಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಟೆಂಪೋ, ಕಾರು, ದ್ವಿಚಕ್ರ ವಾಹನಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಖಾಸಗಿ ಬಸ್ಸು, ಆಟೋರಿಕ್ಷಾ, ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ಬರಕನಾಳ್ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೩ ಸ್ತ್ರೀಶಕ್ತಿ ಸಂಘಗಳು ಮತ್ತು ಶ್ರೀಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಸಂಘಗಳಿವೆ. ಶಿಕ್ಷಣ, ಸಾರಿಗೆ, ಆರೋಗ್ಯ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೨ ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಯೋಗಮಾಧವನಗರ

ಯೋಗಮಾಧವನಗರ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೮ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೭ ಹೆಕ್ಟೇರ್. ಇದೊಂದು ಮಜರೆ ಗ್ರಾಮವಾಗಿದ್ದು ಶೆಟ್ಟಿಕೆರೆ ಗ್ರಾಮಕ್ಕೆ ಸೇರ್ಪಡೆಯಾಗಿದೆ. ಶೆಟ್ಟಿಕೆರೆ ಗ್ರಾಮದಲ್ಲಿ ವಾಸವಾಗಿದ್ದ ಬಡತನ ರೇಖೆಗಿಂತ ಕೆಳಗಿದ್ದವರಿಗೆ ಶೆಟ್ಟಿಕೆರೆ ಸೇರುವ ಯೋಗಮಾಧವನಗರ ದೇವರ ಜಮೀನಿನಲ್ಲಿ ಸರ್ಕಾರವು ಗ್ರಾಂಟನ್ನು ನೀಡಿ ಮನೆಯನ್ನು ಕಟ್ಟಿಸಿಕೊಟ್ಟಿದ್ದು ಈ ಗ್ರಾಮಕ್ಕೆ ಯೋಗಮಾಧವನಗರವೆಂಬ ಹೆಸರಿಡಲಾಗಿದೆ. ಇದು ೧೧ ವರ್ಷಗಳ ಹಿಂದೆ ಉದಯವಾಗಿರುವಂತಹ ಚಿಕ್ಕ ಗ್ರಾಮ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೭ ಡಿಗ್ರಿ ಸರಾಸರಿ ಇದೆ. ೧ ಕೊಳವೆ ಬಾವಿ ಸೌಲಭ್ಯವಿದ್ದು ೩ ಮಿನಿ ಟ್ಯಾಂಕುಗಳಿವೆ. ೨ ಸಣ್ಣ ಚಿಲ್ಲರೆ ಅಂಗಡಿಗಳಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಸೊಪ್ಪು, ವೀಳ್ಯದೆಲೆ, ಹೂಗಳ ವ್ಯಾಪಾರ ಮಾಡುವುದರ ಮೂಲಕ ಜೀವನ ಸಾಗಿಸುತ್ತಿದ್ದಾರೆ. ೨೦೧೧ ರ ಜನಗಣತಿಯ ಪ್ರಕಾರ ೧೩೩ ಜನಸಂಖ್ಯೆ ಹೊಂದಿದೆ. ಒಟ್ಟು ೪೪ ಮನೆಗಳನ್ನು ಹೊಂದಿದ್ದು ಎಲ್ಲ ಮನೆಗಳೂ ಕಾಂಕ್ರೀಟ್ ಮನೆಗಳಾಗಿದ್ದು ಸೀಮೆಹೆಂಚಿನ ಮನೆಗಳಾಗಿವೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು,

ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ದ್ವಿಚಕ್ರವಾಹನಗಳಿವೆ. ಜನತಾ, ಆಶ್ರಯ ವಸತಿ ಯೋಜನೆಯ ೧೩ ಫಲಾನುಭವಿಗಳಿದ್ದು ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ತಿಗಳ ಸಮುದಾಯದವರೇ ಪ್ರಧಾನವಾಗಿದ್ದು ಬೆಸ್ತರು, ಲಿಂಗಾಯಿತ, ಸಿಳ್ಳೇಕ್ಯಾತ ಸಮುದಾಯದವರು ಕಿರುಸಮುದಾಯಗಳಾಗಿವೆ. ಪ್ರಮುಖ ಭಾಷೆ ಕನ್ನಡವಾಗಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯಿತ್ತಿ ಕ್ಷೇತ್ರ, ತಾಲ್ಲೂಕು ಪಂಚಾಯಿತ್ತಿ ಹಾಗೂ ಗ್ರಾಮಪಂಚಾಯಿತ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ರಸ್ತೆ ಸಂಚಾರಕ್ಕೆ ಖಾಸಗಿ ಮತ್ತು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಸಂಚಾರಿ ದೂರವಾಣಿಗಳಿವೆ.

ಒಂದು ಅಂಗನವಾಡಿ ಕೇಂದ್ರವಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೨ ಫಲಾನುಭವಿಗಳಿದ್ದಾರೆ. ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘಗಳಿವೆ.

ಇಲ್ಲಿ ಚಾರಿತ್ರಿಕವಾಗಿ ಪ್ರಸಿದ್ಧವಾದ ಯೋಗಮಾಧವ ಅಥವಾ ಚನ್ನಕೇಶವ ದೇವಾಲಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ರಾಮನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಿಕೆರೆ ಹೋಬಳಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೨೨ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೦೬೦.೩೩ ಹೆಕ್ಟೇರ್. ಬಿಳಿಕಲ್ಲು, ಗೋರಿಕಲ್ಲು, ಬಿಳಿಮಣ್ಣು ಹೊಂದಿದೆ. ಮೂಡಲಗುಡ್ಡ ಎಂದು ಕರೆಯುವ ಗುಡ್ಡಶ್ರೇಣಿ ಪೂರ್ವದಲ್ಲಿದೆ. ಸಾಮಾಜಿಕ ಅರಣ್ಯವಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಜಾಣೆಹಾರ್ ಕಡೆಯಿಂದ ಬರುವ ಹಳ್ಳವನ್ನು ಜಾಣೆಹಾರ್ ಹಳ್ಳ ಎಂತಲೇ ಕರೆಯುತ್ತಾರೆ.

ಲಿಂಗಾಯಿತರು ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗ ಒಕ್ಕಲಿಗರು, ಅಕ್ಕಸಾಲಿಗರು, ನಾಯಕರು, ಹಕ್ಕಿಪಿಕ್ಕಿ ಹಾಗೂ ಮುಸ್ಲಿಂ ಸಣ್ಣ ಸಮುದಾಯವಾಗಿದೆ. ಕನ್ನಡ ಮತ್ತು ಉರ್ದು ಭಾಷೆ ಬಳಕೆಯಲ್ಲಿದೆ. ೨೨೦ ಮನೆಗಳಿರುವ ಈ ಗ್ರಾಮದಲ್ಲಿ ೫ ಕಾಂಕ್ರೀಟ್ ಮನೆಗಳನ್ನು ಬಿಟ್ಟರೆ ಉಳಿದವುಗಳನ್ನು ಮಣ್ಣು ಹಾಗೂ ಕಲ್ಲಿನಿಂದ ಕಟ್ಟಲಾಗಿದೆ. ಮೂರು ಗುಡಿಸಲುಗಳಿವೆ. ಮೇಲ್ಛಾವಣಿಗೆ ಕಪ್ಪು ಹೆಂಚು ಹಾಗೂ ಕೆಂಪು ಹೆಂಚು, ತಗಡು ಇಲ್ಲವೇ ಸಿಮೆಂಟ್ ಶೀಟ್ ಬಳಸಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ಡೈರಿಯಿದೆ. ೬ ಜನ ಶಿಕ್ಷಕರಿದ್ದಾರೆ. ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವವರಿದ್ದಾರೆ. ೨ ಕುಟುಂಬಗಳು ಬಡಗಿಗಳಿದ್ದಾರೆ. ಪ್ರೊ॥ ಎಸ್.ಜೆ. ನಾಗರಾಜ್ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಪ್ರಾಧ್ಯಾಪಕರಾಗಿದ್ದು ಪೊಲೀಸ್, ಅಂಚೆ, ಪಂಚಾಯತ್ ರಾಜ್ ಇಲಾಖೆಯಲ್ಲಿ ಕೆಲಸ ಮಾಡುವ ೬ ಜನರಿದ್ದಾರೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯಿತ್ತಿ ಕ್ಷೇತ್ರ, ತೀರ್ಥಪುರ ತಾಲ್ಲೂಕು ಪಂಚಾಯಿತ್ತಿ ಹಾಗೂ ಗ್ರಾಮಪಂಚಾಯಿತ್ತಿ ವ್ಯಾಪ್ತಿಗೆ ಸೇರುತ್ತದೆ. ೩ ಜನ ಗ್ರಾಮಪಂಚಾಯಿತ್ತಿ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ತಾಲ್ಲೂಕು ಕೇಂದ್ರದಿಂದ ರಸ್ತೆ ಮಾರ್ಗವನ್ನು ಹೊಂದಿದೆ. ಅಂಚೆ ಕಛೇರಿ ಇದೆ. ಸಂಚಾರಿ ದೂರವಾಣಿಗಳಿವೆ. ಹಾಲು ಉತ್ಪಾದಕರ

ಸಂಘ, ಆಸ್ಪತ್ರೆ ಇದೆ. ರೈತರ ಸಹಕಾರಿ ಸಂಘವಿದ್ದು ಶ್ರೀ ರೇಣುಕಾಂಬ, ಭುವನೇಶ್ವರಿ ಇತ್ಯಾದಿ ೧೫ ಕ್ಕೂ ಹೆಚ್ಚು ಸ್ತ್ರೀಶಕ್ತಿ ಹಾಗೂ ಸ್ವಸಹಾಯ ಸಂಘಗಳಿವೆ.

೨೦೧೧ ರ ಜನಗಣತಿ ಪ್ರಕಾರ ೧೧೯೨ ಜನಸಂಖ್ಯೆ ಇದೆ. ೨೮೦ ಮನೆಗಳಿದೆ. ಆಶ್ರಯ, ಅಂಬೇಡ್ಕರ್, ಜನತಾ, ಇಂದಿರಾ ಆವಾಸ್, ಬಸವ ಯೋಜನೆಗಳ ೪೦ ಮನೆಗಳಿವೆ. ೬೫ ಕುಟುಂಬಗಳಲ್ಲಿ ಶೌಚಾಲಯವಿದೆ. ಕುಡಿಯುವ ನೀರಿಗಾಗಿ ಕಿರುನೀರು ಸರಬರಾಜು ವ್ಯವಸ್ಥೆಯಿದೆ. ೬ ಸಿಸ್ಟನ್‌ಗಳಲ್ಲಿ ನೀರು ಪೂರೈಸಲಾಗುತ್ತದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಪಾಠಶಾಲೆ, ಖಾಸಗಿ ಪ್ರೌಢಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೇ.೬೮ ರಷ್ಟು ಸಾಕ್ಷರತೆಯಿದೆ. ಗ್ರಾಮ ಪಂಚಾಯ್ತಿ ವತಿಯಿಂದ ನಡೆಯುವ ಗ್ರಂಥಾಲಯವಿದ್ದು ಸುಮಾರು ೨೮೦ ಪುಸ್ತಕಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೪೭ ಫಲಾನುಭವಿಗಳಿದ್ದಾರೆ. ಒಂದು ಚಿಕ್ಕ ಹೋಟೆಲ್, ೨ ಕಿರಾಣಿ ಅಂಗಡಿಗಳಿವೆ.

ಇಲ್ಲಿ ಶ್ರೀನಿವಾಸ ದೇವಸ್ಥಾನ, ಹನುಮಂತರಾಯನ, ಶನಿಮಹಾದೇವರ, ಈಶ್ವರ, ಯಲ್ಲಮ್ಮದೇವರ ಗುಡಿಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕರಿಯಮ್ಮ, ಪಾರ್ವತಮ್ಮ, ಹನುಮಕ್ಕ ಎಂಬುವರು ಸೋಬಾನೆ ಹಾಡುಗಳನ್ನು ಹಾಗೂ ಭಜನೆ ಹಾಡುಗಳನ್ನು ಹಾಡುತ್ತಾರೆ. ಪ್ರೊ॥ ನಾಗರಾಜು ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದು ಸಾಮಾಜಿಕ ಚಿಂತಕರಾಗಿದ್ದಾರೆ.

## ರಾಮನಹಳ್ಳಿ ಎ.ಕೆ. ಕಾಲೋನಿ

ರಾಮನಹಳ್ಳಿ ಎ.ಕೆ. ಕಾಲೋನಿಯು ರಾಮನಹಳ್ಳಿಯ ಹೊರವಲಯದಲ್ಲಿದ್ದು ಇದನ್ನು ಮಾದಿಗರಹಟ್ಟಿ ಎಂದು ಕರೆಯುತ್ತಾರೆ. ತಿಮ್ಮನಹಳ್ಳಿ ಗ್ರಾಮಪಂಚಾಯ್ತಿಗೆ ಸೇರಿದ ಈ ಗ್ರಾಮದಲ್ಲಿ ಆದಿಕರ್ನಾಟಕ ಜನಾಂಗದವರ ೬೭ ಮನೆಗಳಿವೆ. ಹೆಂಚಿನ, ಮಾಳಿಗೆಯ, ಶೀಟಿನ ಮನೆಗಳಿವೆ. ಇವು ಸರ್ಕಾರದ ವಸತಿ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೨೬೮ ಜನಸಂಖ್ಯೆಯನ್ನು ಹೊಂದಿದೆ. ಭಾಗ್ಯಜ್ಯೋತಿ ಉಚಿತ ವಿದ್ಯುತ್ ಸೌಲಭ್ಯವಿದೆ. ಕುಡಿಯಲು ತಿಮ್ಮನಹಳ್ಳಿ ಗ್ರಾಮ ಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಪೂರೈಸಲಾಗುತ್ತದೆ. ೨ ಸಿಸ್ಟನ್‌ಗಳಿವೆ. ಒಂದು ಅಂಗನವಾಡಿ ಕೇಂದ್ರರಿದೆ. ಹೆಚ್ಚಿನ ಶಿಕ್ಷಣಕ್ಕೆ ತಿಮ್ಮನಹಳ್ಳಿಗೆ ಹೋಗುತ್ತಾರೆ. ರಾಗಿ, ಹೆಸರು, ಅವರೆ, ಹುರುಳಿ ಮುಖ್ಯ ಬೆಳೆಗಳು. ತೆಂಗು, ಅಡಿಕೆ, ತೋಟಗಾರಿಕೆ ಇದೆ. ಕೊಬ್ಬರಿ, ಗರಿಕಡ್ಡಿ, ವ್ಯಾಪಾರಿ ಸರಕಾಗಿದೆ. ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳ ಜೊತೆಗೆ ಎತ್ತಿನ ಬಂಡಿ ಇದೆ. ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳು. ಒಂದು ಹಾಲಿನ ಡೈರಿಯಿದ್ದು ಈ ಕಾಲೋನಿಯಿಂದಲೂ ಹಾಲು ಸಂಗ್ರಹವಾಗುತ್ತದೆ. ಸಾರಿಗೆ, ಶಿಕ್ಷಣ, ಕಂದಾಯ, ಅರಣ್ಯ, ಕೆಇಬಿ ಇಲಾಖೆಯ ಸರ್ಕಾರಿ ನೌಕರರಿದ್ದಾರೆ. ಲಾರಿ, ಬಸ್ ಖಾಸಗಿ ಡ್ರೈವರ್‌ಗಳಿದ್ದಾರೆ. ವೃದ್ಧಾಪ್ಯ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ತಿಮ್ಮನಹಳ್ಳಿ ಗ್ರಾಮಪಂಚಾಯ್ತಿಯ ಒಬ್ಬರು ಸದಸ್ಯರಿದ್ದಾರೆ. ಆದಿಶಕ್ತಿ, ಶಾರದಾ ಮಹಿಳಾ ಸ್ತ್ರೀಶಕ್ತಿ ಸಂಘಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ರೊಟ್ಟಿ, ದೋಸೆ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕವಾಗಿ ಬಳಸುತ್ತಾರೆ. ೨೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಶನಿದೇವರು, ಎಲ್ಲಮ್ಮನ ದೇವಾಲಯವಿದೆ. ಶನಿದೇವರ ಶನಿವಾರದ ಪೂಜೆ, ಕಥಾಶ್ರವಣ ನಡೆಯುತ್ತದೆ. ಯಲ್ಲಮ್ಮನ ಉತ್ಸವ, ಆರತಿ, ಬಲಿ, ಬಾನದ ಸೇವೆ ವಾರ್ಷಿಕವಾಗಿ ನಡೆಯುತ್ತದೆ. ಗ್ರಾಮದ ಶ್ರೀನಿವಾಸ ಆಂಜನೇಯ ದೇವರ ಉತ್ಸವ, ಗುಡಿಗೆಲಸದಲ್ಲಿ ಈ ಬಡಾವಣೆಯವರ ಸೇವೆ ಮುಖ್ಯವಾಗಿರುತ್ತದೆ. ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ರಾಮಲಿಂಗನಪಾಳ್ಯ

ರಾಮಲಿಂಗನಪಾಳ್ಯ ಗ್ರಾಮವು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಚೌಳಕಟ್ಟೆ ಗ್ರಾಮಪಂಚಾಯ್ತಿಗೆ ಸೇರಿದ ಮಜರೆ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೮ ಕಿಮೀ ಅಂತರದಲ್ಲಿದೆ. ರಾಮಲಿಂಗನೆಂಬ ಶೈವ ಲಿಂಗಾಯಿತ ಜನಾಂಗದವನು ಈ ಗ್ರಾಮದಲ್ಲಿ ಮೊದಲು ನೆಲೆಸಿದ್ದರಿಂದ ಇವನ ಹೆಸರನ್ನೇ ಈ ಗ್ರಾಮಕ್ಕೆ ನಾಮಕರಣ ಮಾಡಲಾಯಿತು ಎಂದು ಹೇಳುತ್ತಾರೆ. ಭೌಗೋಳಿಕ ವಿಸ್ತೀರ್ಣ ೨೮೦.೮೬ ಹೆಕ್ಟೇರ್. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ೧ ತೆರೆದ ಬಾವಿಯಿದ್ದು ೬೦ ಕೊಳವೆ ಬಾವಿಗಳಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ, ದಾಳಿಂಬೆ, ತರಕಾರಿ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಲಿಂಗಾಯಿತ ಸಮುದಾಯವೇ ದೊಡ್ಡ ಸಮುದಾಯವಾಗಿದೆ. ಬೇರೆ ಯಾವುದೇ ಜನಾಂಗಗಳಿರುವುದಿಲ್ಲ. ಕನ್ನಡ ಭಾಷೆಯನ್ನು ಮಾತನಾಡಲು ಬಳಸುತ್ತಾರೆ. ೫೦ ಮನೆಗಳಿದ್ದು ಬಹುತೇಕ ಹೆಂಚಿನ ಮನೆಗಳೇ ಅಧಿಕವಾಗಿವೆ. ಕಾಂಕ್ರೀಟ್ ಮನೆಗಳು, ಕಲ್ಲಿನ ಮನೆಗಳಿವೆ. ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೪ ಆಶ್ರಯ ಮನೆಗಳು, ೨ ಜನತಾ ಮನೆಗಳು. ಇಂದಿರಾ ಆವಾಸ್ ಮನೆಗಳಾಗಿವೆ. ೪ ಕುಟುಂಬಗಳು ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕವನ್ನು ಹೊಂದಿವೆ. ವಿದ್ಯುಚ್ಛಕ್ತಿ ಒದಗಿಸುವ ೨೦ ಕಂಬಗಗಳಿದ್ದು ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ. ಹಾಲು ಉತ್ಪಾದಕರು ಹಂದನಕೆರೆ ಡೈರಿಗೆ ಹಾಲು ವಿತರಿಸುತ್ತಾರೆ. ಇಬ್ಬರು ಸರ್ಕಾರಿ ನೌಕರರಿದ್ದಾರೆ. ೨೦೧೧ ರ ಜನಗಣತಿ ಪ್ರಕಾರ ೧೧೯ ಜನಸಂಖ್ಯೆ ಇದೆ. ಒಟ್ಟು ಸಾಕ್ಷರರ ಪ್ರಮಾಣ ೬೪% ರಷ್ಟಿದೆ. ಇಲ್ಲಿನ ಮಕ್ಕಳು ಪಕ್ಕದ ಹೊನ್ನಗಟ್ಟಿಹಳ್ಳಿ, ಹಂದನಕೆರೆ, ಚೌಳಕಟ್ಟೆ ಗ್ರಾಮಗಳ ಶಾಲಾ-ಕಾಲೇಜುಗಳಿಗೆ ಹೋಗುತ್ತಾರೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಚೌಳಕಟ್ಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಒಂದು ಕಚ್ಚಾ ರಸ್ತೆಯಿದ್ದು ಹಂದನಕೆರೆ, ಚೌಳಕಟ್ಟೆ, ಹೊನ್ನಶೆಟ್ಟಿಹಳ್ಳಿ ಸಂಪರ್ಕ ಕಲ್ಪಿಸುತ್ತದೆ. ಸ್ತ್ರೀಶಕ್ತಿ ಸಂಘಗಳು, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರಿ ಸಂಘಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಈಶ್ವರ ದೇವಾಲಯವಿದೆ. ಹಂದನಕೆರೆ, ಸಿದ್ದರಬೆಟ್ಟ, ಚೌಳಕಟ್ಟೆ ಜಾತ್ರೆಗೆ ಈ ಗ್ರಾಮಸ್ಥರು ಹೋಗುತ್ತಾರೆ. ಯುಗಾದಿ, ಶಿವರಾತ್ರಿ ಹಬ್ಬಗಳಲ್ಲಿ ಭಜನೆಗಳನ್ನು ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ರಂಗಜ್ಜನಪಾಳ್ಯ

ರಂಗಜ್ಜನಪಾಳ್ಯವು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೧ ಕಿಮೀ ಅಂತರದಲ್ಲಿದೆ. ಇದು ಅಂಬಾರಪುರದ ಮಜಕೆ ಗ್ರಾಮವಾಗಿದ್ದು ರಂಗಜ್ಜ ಎಂಬ ವ್ಯಕ್ತಿ ಮೊದಲಿಗೆ ವಸತಿ ನಿರ್ಮಿಸಿಕೊಂಡು ವಾಸಿಸುತ್ತಿದ್ದ ಕಾರಣದಿಂದ ಆತನ ಹೆಸರಿನಲ್ಲಿಯೇ ಗ್ರಾಮ ಬೆಳೆದಿದೆ. ಭೌಗೋಳಿಕ ವಿಸ್ತೀರ್ಣ ಮುಖ್ಯಗ್ರಾಮದ ೧೮೭೯ ಹೆಕ್ಟೇರ್ ಭೂಮಿಯಲ್ಲಿ ಹಂಚಿಕೆಯಾಗಿದ್ದು ಗಿಡ, ಗುಡ್ಡಗಾಡು ಪ್ರದೇಶವಾದುದರಿಂದ ಕೃಷಿಭೂಮಿ ೧೪೮ ಹೆಕ್ಟೇರ್ ಮಾತ್ರವಿದೆ. ಈ ಪರಿಸರದಲ್ಲಿ ಬೋರನಕಣಿವೆ ಕಾಲುವೆ, ಕೋಡಿಯ ನೀರು ಹರಿದುಹೋಗುತ್ತದೆ. ಬೋರನಕಣಿವೆ ತುಂಬಿದರೆ ಭತ್ತ, ರಾಗಿ ಧಾನ್ಯದ ಬೆಳೆಗಳನ್ನು ಬೆಳೆಯುತ್ತಾರೆ. ಈರುಳ್ಳಿ ಬೆಳೆಯೂ ಇದೆ. ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಸಾಮಾಜಿಕ ರಚನೆಯಲ್ಲಿ ನಾಯಕ, ಲಂಬಾಣಿ, ಮಡಿವಾಳ ಜನಾಂಗದವರಿದ್ದಾರೆ. ಹೊಯ್ಸಳಕಟ್ಟೆ ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಒಟ್ಟು ೨೯ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೬೨ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು

ಕಾಣಬಹುದು. ಗಂಗಾಕಲ್ಯಾಣ ಯೋಜನೆ ಹಾಗೂ ಭಾಗ್ಯಜ್ಯೋತಿ ಯೋಜನೆಗಳ ಫಲಾನುಭವಿಗಳಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಬೆಳ್ಳಾರದಿಂದ ಅಂಚೆ ಸೌಲಭ್ಯವಿದೆ. ಶಿಕ್ಷಣ, ಪಡಿತರ ವಿಷಯಗಳಿಗೆ ಬೆಳ್ಳಾರಕ್ಕೆ ಹೋಗಬೇಕಿದೆ. ಸಾಕ್ಷರತೆ ೫೪% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಕರಿಯಮ್ಮನ ಊರ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ರಂಗಾಪುರ

ರಂಗಾಪುಪ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೆಳಗುಲಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೦ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ಬೆಳಗುಲಿಯ ಒಟ್ಟು ಭೌಗೋಳಿಕ ವಿಸ್ತೀರ್ಣವಾದ ೩೩೦೭.೨೩ ಎಕರೆಯಲ್ಲಿ ಸೇರಿದೆ. ಬಯಲು ನಾಡಾದ ಇಲ್ಲಿ ಬಿಳಿಮಿಶ್ರಿತ ಕೆಂಪು ಮಣ್ಣು, ಬಿಳಿ–ಕಪ್ಪು ಕಲ್ಲು ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಒಂದು ಕೆರೆ ಇದೆ. ಇದನ್ನು ರಂಗಾಪುರದ ಕೆರೆ ಎಂದು ಕರೆಯುತ್ತಾರೆ. ಒಂದು ತೆರೆದ ಬಾವಿ, ೩ ಕೊಳವೆ ಬಾವಿಗಳಿವೆ. ಹಳ್ಳವೂ ಸಮೀಪದಲ್ಲಿ ಹರಿಯುತ್ತದೆ. ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ೫ ಸಿಸ್ಟನ್‌ಗಳನ್ನು ಅ ಳವಡಿಸಲಾಗಿದೆ. ಇವುಗಳಿಗೆ ೨೦ ನಲ್ಲಿಗಳನ್ನು ಜೋಡಿಸಲಾಗಿದೆ.

೨೦೧೧ ರ ಜನಗಣತಿ ಪ್ರಕಾರ ೬೭೩ ಜನಸಂಖ್ಯೆ ಈ ಗ್ರಾಮದ ಸಾಮಾಜಿಕ ರಚನೆಯನ್ನು ಗಮನಿಸಿದಾಗ ಉಪ್ಪಾರ ಜನಾಂಗದವರು ದೊಡ್ಡ ಸಮುದಾಯವಾಗಿದ್ದು ಉಳಿದಂತೆ ಆಚಾರ್‍ರು, ನಾಯಕರು ಚಿಕ್ಕ ಸಮುದಾಯದವರಾಗಿದ್ದಾರೆ. ಎಲ್ಲರೂ ಕನ್ನಡ ಭಾಷೆ ಬಳಸುತ್ತಾರೆ. ಯರೇಕಟ್ಟೆ ಓಣಿ ಎಂಬ ಒಂದು ಓಣಿ ಇದೆ. ಒಟ್ಟು ೧೨೦ ಮನೆಗಳು, ಒಂದು ಕಾಂಕ್ರೀಟ್ ಮನೆ, ಉಳಿದವುಗಳು ಕಲ್ಲು ಹಾಗೂ ಮಣ್ಣನ್ನು ಬಳಸಿ ಕಟ್ಟಲಾಗಿದೆ. ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು ಹಾಗೂ ಕೆಂಪು ಹೆಂಚನ್ನು ಹೊದಿಸಿದ್ದಾರೆ. ೧೫ ಜನತಾ, ಆಶ್ರಯ, ವಸತಿ ಯೋಜನೆಯ ಫಲಾನುಭವಿಗಳಿದ್ದು ೧೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಸಿಕಲ್, ಲಾರಿ, ಕಾರು, ಜೆಸಿಬಿ, ಬೈಕುಗಳು ಇವೆ. ಗ್ರಾಮಕ್ಕೆ ರಸ್ತೆ ಹಾಗೂ ಚರಂಡಿ ವ್ಯವಸ್ಥೆ ಇದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆರೋಗ್ಯ ಎಂಬ ಖಾಸಗಿ ಡೈರಿಯಿದೆ. ದಿನಂಪ್ರತಿ ೮೦ ಲೀ. ಹಾಲು ಉತ್ಪಾದನೆಯಾಗುತ್ತದೆ. ತೆಂಗಿನಕಾಯಿ ಹಾಗೂ ಕೊಬ್ಬರು ಇಲ್ಲಿನ ಮುಖ್ಯ ವ್ಯಾಪಾರಿ ಸರಕು. ಈ ಊರಿನ ಇಬ್ಬರು ಶಿಕ್ಷಕರಾಗಿ ಸರ್ಕಾರಿ ಉದ್ಯೋಗ ಪಡೆದಿದ್ದಾರೆ. ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಕೆಲವರು ಉದ್ಯೋಗ ಪಡೆದಿದ್ದಾರೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಬೆಳಗುಲಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಾಗಿದ್ದಾರೆ. ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ. ಡಿಟಿಎಚ್ ಸೇವೆಯು ಗ್ರಾಮದಲ್ಲಿದೆ. ಜಗದಾಂಬಾ, ಶಾರದಾಂಬ, ಕಾವೇರಿ, ಲಕ್ಷ್ಮಿ ಮುಂತಾದ ಸ್ತ್ರೀಶಕ್ತಿ ಹಾಗೂ ಸ್ವಸಹಾಯ ಸಂಘಗಳಿವೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೇ.೭೫ ರಷ್ಟು ಸಾಕ್ಷರರಿದ್ದಾರೆ. ೩ ಚಿಕ್ಕ ಕಿರಾಣಿ ಅಂಗಡಿಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ.

ಶ್ರೀರಾಮ, ಹನುಮಂತನ ದೇವಾಲಯಗಳಿವೆ. ಅಂತರಗಟ್ಟ ಅಮ್ಮನ ಮಂದಿರವಿದೆ. ಡಿಸೆಂಬರ್‌ನಲ್ಲಿ ಹನುಮ ಜಯಂತಿ ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಉತ್ಸವ, ಪರೇವು ನಡೆಸಲಾಗುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಭಜನಾ ತಂಡ ಇವೆ. ಜಗದೀಶ, ನೀಲಕಂಠಪ್ಪ ಎಂಬುವರು ಭಜನಾ ಹಾಡುಗಳನ್ನು ಹಾಡುತ್ತಾರೆ. ಚೌಡಪ್ಪ ಹಾರ್ಮೋನಿಯಂ ನುಡಿಸುತ್ತಾರೆ.

## ರಾಮನಗರ

ರಾಮನಗರ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೭ ಕಿಮೀ ಅಂತರದಲ್ಲಿದೆ. ದಬ್ಬಕುಂಟೆಗೆ ಪ್ರತ್ಯೇಕವಾದ ಬಡಾವಣೆ ನಿರ್ಮಾಣವಾದಾಗ ಅದಕ್ಕೆ ರಾಮನ ಹೆಸರಿನಲ್ಲಿ ರಾಮನಗರ ಎಂದಾಗಿದೆ. ದಬ್ಬಗುಂಟೆ ಮಜರೆ ಗ್ರಾಮ ಬಯಲುನಾಡಾಗಿದೆ. ಕೆಂಪು ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ೩೩೯೧.೩೭ ಹೆಕ್ಟೇರ್‌ನಷ್ಟು ರಕ್ಷಿತಾರಣ್ಯವಿದ್ದು ಕಾಡು ಪ್ರಾಣಿ-ಪಕ್ಷಿಗಳಿಗೆ ವಾಸಿಸಲು ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ೪ ತೆರೆದ ಬಾವಿಗಳಿದ್ದು ಕೆಲವು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗೆ ಅಲ್ಪ ನೀರಿನ ಮೂಲಗಳಾಗಿವೆ. ಕುಡಿಯುವ ನೀರಿಗಾಗಿ ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ಮಿನಿ ಟ್ಯಾಂಕ್ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಉಪ್ಪಾರ, ಮರಾಠಿ ದೊಡ್ಡ ಸಮುದಾಯವಾಗಿದೆ. ಲಂಬಾಣಿ ಕಿರು ಸಮುದಾಯವಾಗಿದೆ. ಪ್ರಮುಖವಾಗಿ ಕನ್ನಡ ಮತ್ತು ಮರಾಠಿ ಭಾಷೆಗಳನ್ನು ಮಾತನಾಡುತ್ತಾರೆ. ಒಟ್ಟು ೮೪ ಮನೆಗಳಿರುವ ಗ್ರಾಮವು ೨೦೧೧ ರ ಜನಗಣತಿಯ ಪ್ರಕಾರ ೩೮೯ ಜನಸಂಖ್ಯೆ ಇದೆ. ವಿವಿಧ ಪ್ರಕಾರದ ಮನೆಗಳಿದ್ದು ಗುಡಿಸಲು, ಕಲ್ಲು-ಮಣ್ಣು, ಹೆಂಚು ಮತ್ತು ಕಾಂಕ್ರೀಟ್ ಮನೆಗಳಿವೆ. ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಜನತಾ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಯ ೨೯ ಮನೆಗಳಿವೆ. ಒಟ್ಟು ೬ ಮನೆಗಳು ಶೌಚಾಲಯ ಸೌಲಭ್ಯವನ್ನು ಹೊಂದಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಟೆಂಪೋ ಮತ್ತು ದ್ವಿಚಕ್ರ ವಾಹನಗಳನ್ನು ಬಳಸುತ್ತಾರೆ. ಕೃಷ್ಣೋಜಿರಾವ್ ಸೈನಿಕ ನೌಕರಿಯಲ್ಲಿದ್ದಾರೆ. ಆಧುನಿಕ ಡೈರಿಯ ವ್ಯವಸ್ಥೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದಸೂಡಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರನ್ನು ಹೊಂದಿದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಖಾಸಗಿ ಬಸ್ಸು, ಆಟೋ

ರಿಕ್ಷಾ, ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಸಂಚಾರಿ ದೂರವಾಣಿ ಹಾಗೂ ಡಿಟಿಎಚ್ ಸಂಪರ್ಕವನ್ನು ಕಾಣಬಹುದಾಗಿದೆ. ಒಂದು ಸ್ತ್ರೀಶಕ್ತಿ ಸಂಘವಿದ್ದು ಸಣ್ಣ ಉಳಿತಾಯ ಮತ್ತು ಸಾಲ ಸೌಲಭ್ಯ ಪಡೆಯುತ್ತಿದ್ದಾರೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೇ.೬೯ ರಷ್ಟು ಸಾಕ್ಷರತೆ ಇದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ.

ಯಲ್ಲಮ್ಮ ದೇವಿ, ಭೂತಪ್ಪನ ಗುಡಿ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ರಾಮನಗರ

ರಾಮನಗರ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೩೨ ಕಿಮೀ ಅಂತರದಲ್ಲಿದೆ. ತಮ್ಮಡಿಹಳ್ಳಿ ಮಜರೆ ಗ್ರಾಮ. ಬಯಲು ನಾಡಾಗಿದೆ. ಮರಳು ಮಿಶ್ರಿತ ಬಿಳಿ ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕೆಲವು ತೆರೆದ ಬಾವಿಗಳಿದ್ದು ಬತ್ತಿಹೋಗಿವೆ. ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ. ಕುಡಿಯುವ ನೀರಿಗಾಗಿ ಗ್ರಾಮಪಂಚಾಯ್ತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳ ವ್ಯವಸ್ಥೆಯಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಮುಸ್ಲಿಂ ಸಮುದಾಯವೇ ಪ್ರಧಾನವಾಗಿದ್ದು ಆದಿಕರ್ನಾಟಕ ಜನಾಂಗ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಅಲ್ಪ ಪ್ರಮಾಣದಲ್ಲಿ ಉರ್ದು ಬಳಸುತ್ತಾರೆ. ಒಟ್ಟು ೭೮ ಮನೆಗಳನ್ನು ಹೊಂದಿರುವ ಈ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೩೩೧ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಕಾಂಕ್ರೀಟ್, ಕಲ್ಲಿನ ಹಾಗೂ ಹೆಂಚಿನ ಮನೆಗಳಿವೆ. ಗುಡಿಸಲು ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ, ಅಂಬೇಡ್ಕರ್ ಹಾಗೂ ಇಂದಿರಾ ಆವಾಸ್ ವಸತಿ ಯೋಜನೆಯ ೧೪ ಫಲಾನುಭವಿಗಳಿದ್ದಾರೆ. ೮ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್, ಟೆಂಪೋ, ಆಟೋಗಳನ್ನು ಕಾಣಬಹುದು. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಒಬ್ಬರು ಸಾರಿಗೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ವ್ಯವಸಾಯ, ಕೂಲಿ ಇಲ್ಲಿನ ಜನರ ಉದ್ಯೋಗವಾಗಿದೆ. ಬೀಡಿ ಸುತ್ತುವುದು ಈ ಗ್ರಾಮದ ಜನರ ಪ್ರಮುಖ ಉದ್ಯೋಗವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಯಳನಡು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವಿದೆ. ಸರಸ್ವತಿ, ಲಕ್ಷ್ಮಿ ಸ್ತ್ರೀಶಕ್ತಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಸೇ.೬೪% ಸಾಕ್ಷರತಾ ಪ್ರಮಾಣವಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ರಾಮದೇವರ ದೇವಸ್ಥಾನ ಪ್ರಮುಖ ದೇವಾಲಯ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ

ಆಚರಿಸುತ್ತಾರೆ. ಮುಸ್ಲಿಮರು ಈದ್‌ಮಿಲಾದ್, ಬಕ್ರೀದ್, ರಂಜಾನ್ ಹಬ್ಬಗಳನ್ನು ಆಚರಿಸುತ್ತಾರೆ.

## ರಂಗೇನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೦ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೨೧೪ ಹೆಕ್ಟೇರ್. ಬರಗೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ಬಯಲು ನಾಡಾಗಿದ್ದು ಇಲ್ಲಿ ಕಪ್ಪು, ಬಿಳಿ ಕಲ್ಲು ಮತ್ತು ಕೆಂಪು-ಬಿಳಿ ಮಣ್ಣು ಕಂಡುಬರುತ್ತದೆ. ದುರ್ಗಮ್ಮನ ಬೆಟ್ಟ ಇದೆ. ರಂಗಪ್ಪ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ರಂಗೇನಹಳ್ಳಿ ಎಂದು ಹೆಸರಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು  ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಈ ಗ್ರಾಮದಲ್ಲಿ ೩ ತೆರೆದ ಬಾವಿಗಳಿವೆ. ೨೫ ಕ್ಕೂ ಹೆಚ್ಚು ಕೊಳವೆ ಬಾವಿಗಳಿದ್ದು ನೀರಾವರಿ ಬಳಕೆಯಿರುತ್ತವೆ. ಟ್ಯಾಂಕ್, ಜಗ್‌ಗಳಿವೆ. ಕೆರೆಯಿದೆ.  ಹೊಂಡಗಳಿವೆ. ಮೀನುಗಾರಿಕೆಯನ್ನು ಕೆಲವರು ಮೈಗೂಡಿಸಿಕೊಂಡಿದ್ದಾರೆ.

ಸರ್ಪ ಒಕ್ಕಲಿಗರು ದೊಡ್ಡ ಸಮುದಾಯ. ಮಡಿವಾಳ, ಕುರುಬ, ನಾಯಕರಿದ್ದಾರೆ. ಒಟ್ಟು ಜನಸಂಖ್ಯೆ ೫೪೦ ಇದ್ದಾರೆ. ಕನ್ನಡ ಭಾಷೆಯನ್ನು ಬಳಸುತ್ತಾರೆ. ಕೆಲವರು ಇಂಗ್ಲೀಷ್ ಭಾಷೆಯನ್ನು ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಬರಗೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬರಗೂರಿನಿಂದ ಅಂಚೆ ಸಂಪರ್ಕವಿದೆ.

ಒಟ್ಟು ೧೨೫ ಮನೆಗಳಿದ್ದು ಇದರಲ್ಲಿ ೨ ಕಾಂಕ್ರೀಟ್ ಮನೆಗಳಿವೆ. ಉಳಿದ ಎಲ್ಲಾ ಮನೆಗಳನ್ನು ಕಲ್ಲು ಹಾಗೂ ಮಣ್ಣನ್ನು ಬಳಸಿ ಕಟ್ಟಿದ್ದಾರೆ. ಮೇಲ್ಛಾವಣಿಗೆ ಕೆಲವರು ಕುಂಬಾರರ ಕಪ್ಪು ಹೆಂಚು ಮತ್ತು ಕೆಲವರು ಮಂಗಳೂರಿನ ಕೆಂಪು ಹೆಂಚನ್ನು ಹೊದಿಸಿದ್ದಾರೆ. ೨೦ ಮನೆಗಳಲ್ಲಿ ಶೌಚಾಲಯ ವ್ಯವಸ್ಥೆಯನ್ನು ಹೊಂದಿದ್ದಾರೆ. ಜನತಾ, ಆಶ್ರಯ ವಸತಿ ಯೋಜನೆಯ ೨೩ ಮನೆಗಳಿವೆ. ಬೈಕ್‌ಗಳಿವೆ. ಚರಂಡಿ ವ್ಯವಸ್ಥೆ ಹಾಗೂ ರಸ್ತೆಯಿದೆ.  ಆರೋಗ್ಯ ಎಂಬ ಡೈರಿಯಿದೆ. ಕೆಲವರು ಶಿಕ್ಷಕರು, ಇಂಜಿನಿಯರ್‌ಗಳು, ಮಿಲಿಟರಿ ಹುದ್ದೆಗಳಲ್ಲಿಯೂ ಇದ್ದಾರೆ. ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಕೆಲವರು ಕೆಲಸ ಮಾಡುತ್ತಿದ್ದಾರೆ. ಇಟ್ಟಿಗೆ ಕೈಗಾರಿಕೆ ಇದೆ. ಇಲ್ಲಿ ರೈತ ಸೇವಾ ಸಂಘ ಇದೆ. ದುರ್ಗಾಂಬ, ಸರಸ್ವತಿ, ಲಕ್ಷ್ಮಿ, ಯಲ್ಲಮ್ಮ ಮುಂತಾದ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಚಿಕ್ಕ ಚಿಕ್ಕ ಅಂಗಡಿಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೩ ಫಲಾನುಭವಿಗಳಿದ್ದಾರೆ.

ಐತಿಹಾಕಿಸ ಸ್ಮಾರಕವಾದ ಮಾಸ್ತಿಕಲ್ಲು ಇದೆ. ವೀರಗಲ್ಲು ಬೀರೇದೇವರು ಇದ್ದಾರೆ. ಹಳೆಯ ಬಾವಿಯಿದೆ, ಸ್ಮಶಾನವಿದೆ.

ದೊಡ್ಡಮ್ಮನ ಬಾನ ಮತ್ತು ದುರ್ಗಮ್ಮನ ಬಾನವನ್ನು ಅತ್ಯಂತ ವಿಜೃಂಭಣೆಯಿಂದ ಮಾಡುತ್ತಾರೆ. ಇಲ್ಲಿ ದುರ್ಗಮ್ಮನ ತೇರು, ಉತ್ಸವ ನಡೆಯುತ್ತದೆ. ದುರ್ಗಮ್ಮನಿಗೆ ಬಲಿ, ಮಾರಿ ಬಲಿ ಕೊಡುವ ಆಚರಣೆಯಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರೈತ ಸಂಘಗಳಿವೆ.

## ರಂಗೇನಹಳ್ಳಿ ಎ.ಕೆ. ಕಾಲೋನಿ

ರಂಗೇನಹಳ್ಳಿ ಎ.ಕೆ. ಕಾಲೋನಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೨೦ ಕಿಮೀ ದೂರದಲ್ಲಿದ್ದು

ರಂಗೇನಹಳ್ಳಿಗೆ ಹೊಂದಿಕೊಂಡಿದೆ. ಆದಿಕರ್ನಾಟಕ ಜನಾಂಗದವರು ಪ್ರತ್ಯೇಕ ಮನೆ ನಿರ್ಮಿಸಿಕೊಂಡ ಕಾರಣ ಮಾದಿಗರಹಟ್ಟಿ ಎಂದು ಕರೆಯುತ್ತಾರೆ. ಇಲ್ಲಿ ೧೪ ಮನೆಗಳಿದ್ದು ೫೨ ಜನಸಂಖ್ಯೆ ಹೊಂದಿದೆ. ಕುಡಿಯಲು ಗ್ರಾಮಪಂಚಾಯ್ತಿಯಿಂದ ನೀರು ಪೂರೈಸಲಾಗುತ್ತಿದ್ದು ಒಂದು ಸಿಸ್ಟನ್ ಇದೆ. ಇಲ್ಲಿನ ಮನೆಗಳು ಮಾಳಿಗೆ, ಹೆಂಚಿನ, ಶೀಟಿನ ಸ್ವರೂಪದಲ್ಲಿದ್ದು ಇವು ಜನತಾ, ಅಂಬೇಡ್ಕರ್ ವಸತಿ ಯೋಜನೆಯ ೧೦ ಫಲಾನುಭವಿಗಳು ಇದ್ದಾರೆ. ಆದಿ ಕರ್ನಾಟಕ ಜನಾಂಗ ಮಾತ್ರ ವಾಸಿಸುತ್ತಿದ್ದು ಮುಖ್ಯ ಗ್ರಾಮ ರಂಗೇನಹಳ್ಳಿಯಿಂದಲೇ ಶಿಕ್ಷಣ, ಪಡಿತರ, ಸೌಲಭ್ಯ ಪಡೆಯುತ್ತಿದ್ದಾರೆ. ಕೃಷಿಕರು ಹಾಗೂ ಕೃಷಿ ಕಾರ್ಮಿಕರು ಇದ್ದು ರಾಗಿ, ಹೆಸರು, ಅವರೆ ಬೆಳೆಯುತ್ತಿದ್ದಾರೆ. ತೋಟ ಇರುವವರು ತೆಂಗಿನಕಾಯಿ ಹಾಗೂ ಕೊಬ್ಬರಿ ವ್ಯಾಪಾರಿ ಸರಕಾಗಿ ಬಳಸುತ್ತಾರೆ. ಕುರಿ, ಹಸು, ಮೇಕೆ ಹಾಗೂ ಕೋಳಿ ಸಾಕುಪ್ರಾಣಿಗಳಾಗಿವೆ. ಗ್ರಾಮದ ಸಾಕ್ಷರತೆ ಪ್ರಮಾಣ ೫೧% ರಷ್ಟಿದೆ. ಎಲ್ಲರೂ ಕನ್ನಡ ಭಾಷೆಯನ್ನೇ ಆಡುತ್ತಾರೆ. ಇವರ ಮುಖ್ಯ ಆಹಾರ ರಾಗಿಮುದ್ದೆ, ಅನ್ನವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನವಾಗಿದೆ. ಗ್ರಾಮದ ಹಾಲು ಸಹಕಾರ ಸಂಘಕ್ಕೆ ಈ ಗ್ರಾಮದ ಕೆಲವರು ಸದಸ್ಯರಾಗಿದ್ದು ಹಾಲು ಪೂರೈಸುತ್ತಾರೆ. ರಂಗನಾಥ, ಚೌಡಮ್ಮ, ದುರ್ಗಮ್ಮ ಸ್ತ್ರೀಯರ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿವೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಬೋರ್‌ವೆಲ್‌ಗಳಿವೆ. ಗ್ರಾಮದ ದುರ್ಗಮ್ಮನ ದೇವರಿಗೆ ಆರತಿ, ಬಾನ, ಬ್ಯಾಟೇ ಸಂಪ್ರದಾಯವಿದ್ದು ದುರ್ಗಮ್ಮನ ಆರತಿ, ಜಾತ್ರೆ ನಡೆಯುತ್ತದೆ. ಸಾರಿಗೆ, ಕೆಇಬಿ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರಿದ್ದಾರೆ. ಆದಿಕರ್ನಾಟಕ ಜನಾಂಗಕ್ಕೆ ಸೇರಿದ ಪ್ರತ್ಯೇಕ ಸ್ಮಶಾನವಿದೆ. ಕಂದಿಕೆರೆ–ಚಿಕ್ಕನಾಯಕನಹಳ್ಳಿ ಮಾರ್ಗವಾಗಿ ರಸ್ತೆ ಸಂಪರ್ಕವಿದೆ. ಎತ್ತಿನ ಗಾಡಿಗಳನ್ನು ಬಳಸುತ್ತಾರೆ. ಒಂದು ಇಟ್ಟಿಗೆ ಫ್ಯಾಕ್ಟರಿ ಇದೆ.

## ರಂಗೇನಹಳ್ಳಿ ಗದ್ದಿಗೇಹಳ್ಳಿ

ರಂಗೇನಹಳ್ಳಿ ಗದ್ದಿಗೆಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೨೩ ಕಿಮೀ ದೂರದಲ್ಲಿದೆ. ಇದು ರಂಗೇನಹಳ್ಳಿ ಕಂದಾಯ ಗ್ರಾಮಕ್ಕೆ ಸೇರಿದ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ೧೨೧೪ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದ್ದು ೧೩೨ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಕುಡಿಯಲು ಬರಗೂರು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಕೆಯಾಗುತ್ತಿದೆ. ಒಂದು ಕೊಳವೆ ಬಾವಿ ಇದ್ದು ಒಂದು ಸಿಸ್ಟನ್ ಇದೆ. ಈ ಗ್ರಾಮದ ವಾರ್ಷಿಕ ಮಳೆ ೫೪೭ ಮಿಮೀ, ಉಷ್ಣಾಂಶ ೩೭ ಡಿಗ್ರಿ ಸೆಂಟಿಗ್ರೇಡ್, ಚಳಿ ೧೨ ಡಿಗ್ರಿ ಸೆಂಟಿಗ್ರೇಡ್ ಇದೆ. ವೀರಶೈವರು, ಉಪ್ಪಾರರು, ಕುರುಬರು ಇದ್ದು ಒಟ್ಟು ೩೨ ಮನೆಗಳಿವೆ. ಇವು ಜನತಾ, ಆಶ್ರಯ ಮನೆಗಳಾಗಿದ್ದು ಸರ್ಕಾರದ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ವ್ಯವಸಾಯ ಮುಖ್ಯ ಕಸುಬಾಗಿದೆ. ರಾಗಿ, ಭತ್ತ, ಅವರೆ, ಹುರುಳಿ, ಹೆಸರು ಆಹಾರ ಬೆಳೆಗಳಾಗಿವೆ. ತೆಂಗು, ವ್ಯಾಪಾರಿ ಬೆಳೆಯಾಗಿದೆ. ಗರಿಕಡ್ಡಿ, ಮುತ್ತುಗದ ಎಲೆ, ಊಟದ ಎಲೆ ವ್ಯಾಪಾರವಿದೆ. ಸಾಂಪ್ರದಾಯಿಕ ಎತ್ತಿನ ಗಾಡಿಗಳಿವೆ. ದ್ವಿಚಕ್ರ ವಾಹನ ಬಳಕೆಯಿದೆ. ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ, ಬರಗೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ಬರಗೂರು ಗ್ರಾಮದಿಂದ ಪಡಿತರ ಸೌಲಭ್ಯವಿದೆ. ಶಿಕ್ಷಣಕ್ಕೆ ಮಕ್ಕಳು ಬರಗೂರು ರಂಗೇನಹಳ್ಳಿಗೆ ಹೋಗುತ್ತಾರೆ. ೬೨% ಸಾಕ್ಷರತೆ ಇದೆ. ಶಿಕ್ಷಣ, ಸಾರಿಗೆ ಇಲಾಖೆಯಲ್ಲಿ ೩ ಜನ ಸರ್ಕಾರಿ ನೌಕರರಿದ್ದಾರೆ. ಒಂದು ಟೀ ಅಂಗಡಿ, ಗೂಡಂಗಡಿ ಇದೆ. ಕರಿಯಮ್ಮನ ಪೌಳಿಯಿದ್ದು ಊರ ಹಬ್ಬ ಆಚರಿಸುತ್ತಾರೆ. ಮಲ್ಲಿಗೆರೆಯಮ್ಮನಿಗೆ ನಡೆದುಕೊಳ್ಳುತ್ತಾರೆ. ದೀಪಾವಳಿ, ದಸರಾ, ಯುಗಾದಿ ಹಬ್ಬಗಳನ್ನು ಆಚರಿಸುತ್ತಾರೆ. ರಂಗೇನಹಳ್ಳಿ, ಬರಗೂರು, ಮತಿಘಟ್ಟ ಮಾರ್ಗವಾಗಿ ಬಸ್ ಸಂಪರ್ಕವಿದೆ. ಬರಗೂರು ಅಂಚೆ ಸಂಪರ್ಕ ಕಲ್ಪಿಸಿದೆ.

## ರಾಜಯ್ಯನಪಾಳ್ಯ

ರಾಜಯ್ಯನಪಾಳ್ಯ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೯ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೨೦ ಹೆಕ್ಟೇರ್. ಮಜರೆ ಗ್ರಾಮ ಸೋಮಲಾಪುರ ಗ್ರಾಮಕ್ಕೆ ಸೇರಿದೆ. ರಾಜಯ್ಯ ಎಂಬ ವ್ಯಕ್ತಿ ವಾಸವಾಗಿದ್ದಿರಬೇಕು. ಆ ಕಾರಣದಿಂದಾಗಿ ಈ ಗ್ರಾಮಕ್ಕೆ ರಾಜಯ್ಯನಪಾಳ್ಯ ಎಂಬ ಹೆಸರು ಬಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ.

೩೦೦–೪೦೦ ಅಡಿ ಆಳದ ೩ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಿಗೆ ನೀರೊದಗಿಸುತ್ತಿವೆ. ೩ ಮಿನಿ ಟ್ಯಾಂಕುಗಳು, ೧ ಹ್ಯಾಂಡ್ ಪಂಪುಗಳಿದ್ದು ಕುಡಿಯುವ ನೀರನ್ನೊದಗಿಸುತ್ತಿವೆ.

ಅರಸು ಸಮುದಾಯವು ಪ್ರಧಾನ ಸಮುದಾಯವಾಗಿದ್ದು ಕುರುಬರು, ಲಿಂಗಾಯಿತರು ಕಿರು ಸಮುದಾಯಗಳಾಗಿವೆ. ಪ್ರಮುಖ ಭಾಷೆ ಕನ್ನಡ. ಹಿಂದುಳಿದ ವರ್ಗಗಳ ಇಲಾಖೆ, ಅಂಚೆ ಇಲಾಖೆಗೆ ಸಂಬಂಧಿಸಿದಂತೆ ಇಬ್ಬರು ಸರ್ಕಾರಿ ನೌಕರರಿದ್ದಾರೆ. ೧೦ ಮಂದಿ ಖಾಸಗಿ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕೃಷಿ ಪ್ರಧಾನವಾದ ಕಪ್ಪು ಮತ್ತು ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಕಚ್ಚಾ ರಸ್ತೆಯಿದ್ದು ಸಂಚಾರಿ ದೂರವಾಣಿಗಳಿವೆ.

೨೦೧೧ ರ ಜನಗಣತಿ ಪ್ರಕಾರ ೧೦೫ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಒಟ್ಟು ೩೦ ಮನೆಗಳಿವೆ. ಕಾಂಕ್ರೀಟ್, ಮಣ್ಣಿನ, ಸೀಮೆ ಹೆಂಚಿನ ಮನೆಗಳಿವೆ. ಸೋಮಲಾಪುರದ ಅಂಗನವಾಡಿಗೆ ಹೋಗುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ.

ರೇಣುಕಾದೇವಿಯ ದೇವಾಲಯವಿದೆ. ಯಲ್ಲಮ್ಮ ದೇವತೆ. ರೇಣುಕಾ ದೇವಿಯ ವಿಗ್ರಹವು ಮರದಿಂದ ಮಾಡಲ್ಪಟ್ಟಿದೆ. ಆನೆಯ ಮೇಲೆ ಕುಳಿತಿರುವ ರೇಣುಕಾ ದೇವಿಯ ವಿಗ್ರಹಕ್ಕೆ ಬೆಳ್ಳಿಯ ಮುಖವಾಡವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ರಾಮಪ್ಪನಹಟ್ಟಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಿಕೆರೆ ಗ್ರಾಮಪಂಚಾಯ್ತಿಯ ವ್ಯಾಪ್ತಿಯಲ್ಲಿ ಬರುವ ರಾಮಪ್ಪನಹಟ್ಟಿ ಗೌರಸಾಗರದ ಮಜರೆ ಗ್ರಾಮ. ಶ್ರೀ ಕುಮಾರರಾಮ ಎಂಬ ಹೆಸರಿನ ದೇವಾಲಯವಿದೆ. ಆದುದರಿಂದಾಗಿ ಈ ಗ್ರಾಮಕ್ಕೆ ರಾಮಪ್ಪನಹಟ್ಟಿ ಎಂಬ ಹೆಸರು ಬಂದಿದೆ. ಕಂದಿಕೆರೆ ಗ್ರಾಮದ ಸಮೀಪ ಗುಡಿಸಲುಗಳಲ್ಲಿ ಜನಸಮುದಾಯ ವಾಸವಾಗಿದ್ದರು. ಆಕಸ್ಮಿಕವಾಗಿ ಗುಡಿಸಲುಗಳಿಗೆ ಬೆಂಕಿ ಬೀಳಲಾಗಿ ಸ್ಥಳಾಂತರಗೊಂಡು ಈಗ ಈ ಪ್ರದೇಶದಲ್ಲಿ ವಾಸವಿದ್ದಾರೆ. ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೧೩ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೬೫೨.೧೨ ಚ.ಕಿ.ಮೀ. ಬಯಲುನಾಡಿಗೆ ಸೇರಿದ ಈ ಭೂ ಪ್ರದೇಶದಲ್ಲಿ ಕಪ್ಪು ಮತ್ತು ಬಿಳಿ ಕಲ್ಲು ಕಂಡುಬರುತ್ತದೆ. ಇಲ್ಲಿಯ ಮಣ್ಣಿನ ಲಕ್ಷಣ ಬಿಳಿಯದಾಗಿರುತ್ತದೆ. ಗ್ರಾಮದ ಪಕ್ಕ ಕರೆಕಲ್ಲು ಗುಡ್ಡವಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಒಟ್ಟು ೨೨೦ ಮನೆಗಳಿವೆ. ಇಲ್ಲಿ ೭೬೭ ಜನಸಂಖ್ಯೆ ಹೊಂದಿರುವ ಎಲ್ಲರೂ ಗೊಲ್ಲ ಜನಾಂಗದವರೇ ಆಗಿರುತ್ತಾರೆ. ಇಲ್ಲಿ ಕನ್ನಡ ಭಾಷೆ ಮಾತನ್ನಾಡುತ್ತಾರೆ. ಒಂದು ಆರ್.ಸಿ.ಸಿ. ಮನೆ. ಮಣ್ಣಿನಿಂದ ಮತ್ತು ಕಲ್ಲಿನಿಂದ ಮನೆಗಳನ್ನು ನಿರ್ಮಿಸಿರುತ್ತಾರೆ. ಮಂಗಳೂರು ಹೆಂಚು, ಕುಂಬಾರ ಹೆಂಚು ಬಳಸಿ ಮೇಲ್ಛಾವಣಿ ಹಾಕಿರುತ್ತಾರೆ. ೩೨ ಮನೆಗಳು ಜನತಾ, ಆಶ್ರಯ ಯೋಜನೆಯಲ್ಲಿ ರಚನೆಯಾಗಿವೆ. ಬಯಲು ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ

ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಲಗೇಜ್ ಆಟೋಗಳು, ಲಾರಿಗಳು, ಟ್ರ್ಯಾಕ್ಟರ್‌ಗಳು, ಬೈಕ್‌ಗಳಿವೆ. ಇಲ್ಲಿ ಟಾರು ರಸ್ತೆ, ಮಣ್ಣು ರಸ್ತೆ ಇದೆ. ಕುರಿ ಸಾಕಣೆ ಮುಖ್ಯವಾಗಿದೆ. ಎಮ್ಮೆ ಹಾಲನ್ನು ಡೈರಿಗೆ ಮಾರಲಾಗುತ್ತದೆ. ೯ ಜನ ಸರ್ಕಾರಿ ನೌಕರರಿದ್ದು ಶಿಕ್ಷಕರು, ಕೆಎಸ್‌ಆರ್‌ಟಿಸಿ ಚಾಲಕರು ಹಾಗೂ ಗಾರ್ಮೆಂಟ್ಸ್‌ನಲ್ಲಿ ಕೆಲಸ ನಿರ್ವಹಿಸುವವರು ಸೇರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ನರೇಗ ರಸ್ತೆ ಮಾರ್ಗವಿದೆ. ಇದು ಸಾದರಹಳ್ಳಿ ಅಂಚೆಗೆ ಸೇರಿದೆ. ಸಂಚಾರಿ ಸಂಚಾರಿ ದೂರವಾಣಿಗಳನ್ನು ಬಳಸುತ್ತಾರೆ.

ಶ್ರೀ ಭುವನೇಶ್ವರಿ, ಶ್ರೀ ಕರಿಯಮ್ಮದೇವಿ ಸ್ತ್ರೀಶಕ್ತಿ ಸಂಘಗಳು ಹಾಗೂ ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೇ. ೪೦ ರಷ್ಟು ಸಾಕ್ಷರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೩ ಫಲಾನುಭವಿಗಳಿದ್ದಾರೆ.

ಊರಿನಲ್ಲಿ ರಾಮಪ್ಪದೇವರ ಮಂದಿರ, ಶ್ರೀ ಕುಮಾರ ರಾಮ ದೇವಸ್ಥಾನವಿದೆ. ಶಿವರಾತ್ರಿಯಲ್ಲಿ ದೇವರ ಉತ್ಸವ ಮತ್ತು ಜಾತ್ರೆ ಮಾಡುತ್ತಾರೆ. ಈ ಜಾತ್ರೆಗಳಿಗೆ ಗೌರಸಾಗರದ ಕರಿಯಮ್ಮದೇವಿ ಆಗಮಿಸುತ್ತದೆ. ಇಲ್ಲಿ ಸೋಮನ ಕುಣಿತ, ಡೊಳ್ಳು ಕುಣಿತ ಆಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಲಕ್ಷ್ಮಯ್ಯ ಜನಪದ ಗೀತೆ, ಚಿಕ್ಕಣ್ಣ, ನಿಂಗಯ್ಯ, ರಾಮಯ್ಯ ಕುರುಕ್ಷೇತ್ರ ನಾಟಕ, ರಾಜಾ ಸತ್ಯವ್ರತ ಇತ್ಯಾದಿ ನಾಟಕಗಳನ್ನು ಮಾಡುತ್ತಾರೆ. ಗುಂಡೇನ ಗಂಗಮ್ಮ, ಬಾಳಜ್ಜನ ಗೌರಮ್ಮ, ಲಕ್ಷ್ಮೀದೇವಮ್ಮ, ಜಯಮ್ಮ ಸೋಬಾನೆ ಪದ ಹಾಡುತ್ತಾರೆ. ಕೋಲಾಟವನ್ನೂ ಸಹ ಆಡುತ್ತಾರೆ. ಇಲ್ಲಿಯ ಕೆಲ ಯುವಕರು ಕ್ರೀಡೆಗಳಾದ ಕಬಡ್ಡಿ, ಖೋಖೋ, ಕ್ರಿಕೆಟ್ ಆಡುತ್ತಾರೆ. ಉಜ್ಜಜ್ಜಿ ರಾಜಣ್ಣ ಹಿರಿಯ ಪತ್ರಕರ್ತ, ಕಲಾವಿದ ಹಾಗೂ ಸಾಹಿತಿಗಳಾಗಿದ್ದು ಪುಸ್ತಕ ಪ್ರಕಟಿಸಿದ್ದಾರೆ.

## ರಾಮಘಟ್ಟ

ರಾಮಘಟ್ಟ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೯ ಕಿಮೀ ಅಂತರದಲ್ಲಿದೆ. ವೀರಶೈವ ಲಿಂಗಾಯಿತ ಸಮುದಾಯದವರು ಮೂಲತಃ ಹಂದನಕೆರೆ ಗ್ರಾಮದಲ್ಲಿ ವಾಸಿಸುತ್ತಿದ್ದರಂತೆ. ಇಲ್ಲಿ ಕೆಲವು ಜಾತಿ–ಜಾತಿಗಳ ನಡುವೆ ಸಂಘರ್ಷ ಉಂಟಾಗಿ ಇಲ್ಲಿದ್ದ ಕೆಲವು ವೀರಶೈವ ಲಿಂಗಾಯಿತ ಜನರು ಹಂದನಕೆರೆ ಅಕ್ಕಪಕ್ಕದಲ್ಲಿ ವಾಸಿಸಲು ಪ್ರಾರಂಭಿಸಿದರಂತೆ. ಹೀಗೆ ರಾಮಘಟ್ಟ ಎಂಬ ಊರನ್ನು ಕಟ್ಟಿಕೊಂಡು ವಾಸ ಮಾಡಲು ಪ್ರಾರಂಭಿಸಿದರೆಂದು ಅಲ್ಲಿನ ಸ್ಥಳೀಯ ನಿವಾಸಿಗಳು ಹೇಳುತ್ತಾರೆ. ಭೌಗೋಳಿಕ ವಿಸ್ತೀರ್ಣ ೩೯೪.೫೬ ಹೆಕ್ಟೇರ್. ಕೆಂಪು ಮಿಶ್ರಿತ ಮಣ್ಣನ್ನು ಹೊಂದಿ ಕೃಷಿಗೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೪೦ ಕೊಳವೆ ಬಾವಿಗಳಿವೆ. ೮ ಕಿರುನೀರು ಸರಬರಾಜು ವ್ಯವಸ್ಥೆಯನ್ನು ಹೊಂದಿದೆ.

ಲಿಂಗಾಯಿತ ಸಮುದಾಯದವರು ದೊಡ್ಡ ಸಮುದಾಯವಾಗಿದ್ದು ಬೋವಿ ಜನಾಂಗದವರಿದ್ದಾರೆ. ಕನ್ನಡ ಮತ್ತು ತೆಲುಗು ಭಾಷೆಯನ್ನು ಮಾತನಾಡುತ್ತಾರೆ. ೧೬೦ ಮನೆಗಳಿದ್ದು ಅದರಲ್ಲಿ ೧೦೦ ಹೆಂಚಿನ ಮನೆಗಳು, ೫೫ ಕಲ್ಲಿನ ಮನೆಗಳು, ೫ ಕಾಂಕ್ರೀಟ್ ಮನೆಗಳಿವೆ. ೬೦ ಮನೆಗಳಲ್ಲಿ ಶೌಚಾಲಯ ವ್ಯವಸ್ಥೆ ಇದೆ. ೧ ಇಂದಿರಾ ಆವಾಸ್, ಜನತಾ, ಆಶ್ರಯ ಮನೆಗಳಿವೆ. ೪೦ ಕುಟುಂಬಗಳು ಭಾಗ್ಯಜ್ಯೋತಿ ವ್ಯವಸ್ಥೆಯನ್ನು ಹೊಂದಿವೆ. ೪೦–೫೦ ಕೊಳವೆ ಬಾವಿಗಳಿವೆ. ವಿದ್ಯುಚ್ಛಕ್ತಿ ಒದಗಿಸುವ ೫೦ ಕಂಬಗಳಿವೆ. ಕಿರುನೀರು ಸರಬರಾಜು ಯೋಜನೆಯಲ್ಲಿ ೮ ಮಿನಿ ವಾಟರ್ ಟ್ಯಾಂಕ್‌ಗಳಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ,

ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಆಧುನಿಕ ಡೈರಿಯಿದೆ. ೨ ಹಿಟ್ಟಿನ ಗಿರಣಿಗಳಿವೆ. ೮ ಜನ ಸರ್ಕಾರಿ ನೌಕರರಿದ್ದಾರೆ. ೨೦೧೧ ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೬೩೫. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೩ ಫಲಾನುಭವಿಗಳಿದ್ದಾರೆ. ರಸ್ತೆ ಮಾರ್ಗವಿದ್ದು ಹುಳಿಯಾರು ಅರಸೀಕೆರೆ, ಹಂದನಕೆರೆ, ಹೊಸದುರ್ಗ, ಚಿ.ನಾ. ಹಳ್ಳಿ ಕ್ಷೇತ್ರಗಳಿಗೆ ಸಂಪರ್ಕ ಕಲ್ಪಿಸುತ್ತವೆ. ೩ ಕಚ್ಚಾ ರಸ್ತೆಗಳಿವೆ. ಇತ್ತೀಚೆಗೆ ೪೦ ಕೋಟಿ ವೆಚ್ಚದಲ್ಲಿ ರಸ್ತೆಯ ಅಗಲೀಕರಣ, ಡಾಂಬರೀಕರಣಕ್ಕೆ ಸ್ಥಳೀಯ ಶಾಸಕರು ಶಂಕುಸ್ಥಾಪನೆ ಮಾಡಿದ್ದಾರೆ. ಸ್ತ್ರೀಶಕ್ತಿ ಸಂಘಗಳಿವೆ. ಕುಟುಂಬ ಕಲ್ಯಾಣ ಯೋಜನೆಯಿದೆ. ೩ ಚಿಲ್ಲರೆ ಅಂಗಡಿಗಳಿವೆ. ಈ ಗ್ರಾಮದಿಂದ ಹಂದನಕೆರೆಯಲ್ಲಿ ಜರುಗುವ ಶ್ರೀ ದುರ್ಗಮ್ಮದೇವಿ ಜಾತ್ರೆಯು ಪ್ರಾರಂಭವಾಗುವುದು. ಇಲ್ಲಿನ ಸ್ಥಳೀಯರು ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಇಲ್ಲಿ ಬಸವೇಶ್ವರ, ಶಿವಲಿಂಗ, ಗಣಪತಿ ದೇವಾಲಯಗಳನ್ನು ನೋಡಬಹುದು. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ರಾಮಘಟ್ಟೆಪಾಳ್ಯ (ತಕ್ಕಲುಪಾಳ್ಯ)

ರಾಮಘಟ್ಟೆಪಾಳ್ಯ ಅಂಥಾ ತಕ್ಕಲುಪಾಳ್ಯ ಎಂದು ಕರೆಯುತ್ತಿರುವ ಈ ಗ್ರಾಮವು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಗ್ರಾಮಪಂಚಾಯ್ತಿಯ ವ್ಯಾಪ್ತಿಗೆ ಸೇರಿದ ರಾಮಘಟ್ಟೆಯ ಅಧೀನ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ૩೧ ಕಿಮೀ ಅಂತರದಲ್ಲಿದೆ. ಹಂದನಕೆರೆಯ ಪಾಳೇಗಾರಿಕೆಯ ಪಟ್ಟಣಗಳಲ್ಲಿ ಇದು ಕೂಡ ಒಂದು. ಇಲ್ಲಿ ತಳವಾರರು ಇದ್ದು ಇವರು ಬುರುಜುಗಳ ಮೇಲೆ ನಿಂತು ಶತ್ರುಗಳನ್ನು ನೋಡಿ ರಣಕಹಳೆಯನ್ನು ಊದುತ್ತಿದ್ದರಂತೆ. ಈಗಲೂ ಈ ಬುರುಜುಗಳ ಅವಶೇಷವನ್ನು ಕಾಣಬಹುದು. ಇಲ್ಲಿ ಹೆಚ್ಚು ಜನ ತಳವಾರಿಕೆಯನ್ನು ಮಾಡುತ್ತಿದ್ದರಂತೆ. ಹಾಗಾಗಿ ತಳವಾರರ ಪಾಳ್ಯವೆಂದು ಕಾಲಕ್ರಮೇಣ ತಕ್ಕಲುಪಾಳ್ಯವೆಂದೂ ಕರೆಯಲ್ಪಟ್ಟು ರಾಮಘಟ್ಟೆಪಾಳ್ಯಯವೆಂದು ಪ್ರಸ್ತುತವಾಗಿ ಕರೆಯುತ್ತಾರೆ. ಕ್ರಿ.ಶ.೧೪ ಅಥವಾ ೧೬ ನೇ ಶತಮಾನದಲ್ಲಿ ನಿರ್ಮಿತವಾದ ಪ್ರದೇಶವಾಗಿದೆ. ಭೌಗೋಳಿಕ ವಿಸ್ತೀರ್ಣ ೩೨೮.೮೨ ಹೆಕ್ಟೇರ್. ಕೆಂಪುಮಿಶ್ರಿತ ಕಪ್ಪು ಮಣ್ಣನ್ನು ಹೊಂದಿ ಕೃಷಿಗೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ತಿಮ್ಮಪ್ಪನ ಬೆಟ್ಟ, ೨ ಸಣ್ಣ ಗುಡ್ಡಗಳಿವೆ. ನಾಯ್ಕರ ಕೆರೆಯಿದೆ.

ನಾಯಕ ಸಮುದಾಯದವರು ದೊಡ್ಡ ಪ್ರಮಾಣದಲ್ಲಿದ್ದು ಬೋವಿ, ಆದಿಕರ್ನಾಟಕ ಜನಾಂಗದವರಿದ್ದಾರೆ. ಕನ್ನಡ ಮತ್ತು ತೆಲುಗು ಭಾಷೆಗಳನ್ನು ಮಾತನಾಡುತ್ತಾರೆ. ಗ್ರಾಮದಲ್ಲಿ ೧೨೦ ಮನೆಗಳಿದ್ದು ಅವುಗಳಲ್ಲಿ ೮೦ ಹೆಂಚಿನ, ೩೮ ಕಲ್ಲಿನ, ೨ ಮಣ್ಣಿನ, ೨ ಗುಡಿಸಲು ಮನೆಗಳನ್ನು ನೋಡಬಹುದು. ೨೦ ಮನೆಗಳಲ್ಲಿ ಶೌಚಾಲಯವಿದೆ. ಬಹುತೇಕ ಮನೆಗಳು ಇಂದಿರಾ ಆವಾಸ್, ಜನತಾ, ೨–೩ ಮನೆಗಳು ಆಶ್ರಯ ಮನೆಗಳಾಗಿವೆ. ೬೦ ಕುಟುಂಬಗಳು ಭಾಗ್ಯಜ್ಯೋತಿ ವಿದ್ಯುತ್ ವ್ಯವಸ್ಥೆಯನ್ನು ಹೊಂದಿವೆ. ೧ ವಸತಿರಹಿತ, ೧ ನಿವೇಶನರಹಿತ ಕುಟುಂಬಗಳಿವೆ. ವಿದ್ಯುಚ್ಛಕ್ತಿ ಒದಗಿಸುವ ೩೦ ಕಂಬಗಳು ಹಾಗೂ ೨೦ ಕೊಳವೆ ಬಾವಿಗಳಿವೆ. ಕಿರುನೀರು ಸರಬರಾಜು ಯೋಜನೆಯಲ್ಲಿ ೬ ಮಿನಿ ವಾಟರ್ ಟ್ಯಾಂಕ್‌ಗಳಿವೆ. ಆಧುನಿಕ ಡೈರಿಯಿದೆ. ೨ ಹಿಟ್ಟಿನ ಗಿರಣಿಯನ್ನು ಕಾಣಬಹುದು.

೨೦೧೧ ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೪೫೦ ರಷ್ಟಿದೆ. ಒಟ್ಟು ಸಾಕ್ಷರರ ಪ್ರಮಾಣ ೬೨% ರಷ್ಟಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಕಚ್ಚಾ ರಸ್ತೆಗಳಿವೆ. ಇವು ಹಂದನಕೆರೆ, ರಾಮಘಟ್ಟ, ಪುರದಕಟ್ಟೆ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುತ್ತವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೩ ಫಲಾನುಭವಿಗಳಿದ್ದಾರೆ. ನೀಲಾಂಬಿಕೆ, ಲಕ್ಕಮ್ಮದೇವಿ, ಕರಿಯಮ್ಮದೇವಿ ಸ್ತ್ರೀಶಕ್ತಿ ಸಂಘಗಳಿವೆ. ಕುಟುಂಬ ಕಲ್ಯಾಣ ಯೋಜನೆಯಿದೆ. ೨ ಚಿಲ್ಲರೆ ಅಂಗಡಿಗಳಿವೆ.

ಕರಿಯಮ್ಮ, ದುರ್ಗಮ್ಮ, ತಿಮ್ಮಪ್ಪ, ಗಣಪತಿ, ಲಕ್ಕಮ್ಮ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕರಿಯಪ್ಪ ಎಂಬುವವರು ರಂಗಗೀತೆಗಳನ್ನು ಹಾಡುತ್ತಾರೆ. ವಾಲ್ಮೀಕಿ ಸೇನೆ ಎಂಬ ಸಂಘವಿದೆ. ಹಂದನಕೆರೆಯಿಂದ ೪ ಕಿಮೀ ದೂರದಲ್ಲಿದೆ. ತಾಲ್ಲೂಕಿನ ಗಡಿ ಪ್ರದೇಶದಲ್ಲಿದೆ.

## ರಾಮಪ್ಪನಪಾಳ್ಯ

ರಾಮಪ್ಪನಪಾಳ್ಯ ಗ್ರಾಮವು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೪ ಕಿಮೀ ಅಂತರದಲ್ಲಿದೆ. ಇದು ಅಲೆಮಾರಿ ಜನಾಂಗದ ಗ್ರಾಮವಾಗಿದೆ. ಇದು ಮಾರಸಂದ್ರಕ್ಕೆ ಸೇರಿದ ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ೩೫೧.೩೫ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ರಾಯಪ್ಪ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ರಾಮಪ್ಪನಪಾಳ್ಯ ಎಂದು ಕರೆಯಲಾಗಿದೆ. ಬಯಲು ಭೂಪ್ರದೇಶ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಟೆಂಪೋ, ಬೈಕುಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಿಮ್ಲಾಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು

ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು.

ಧರ್ಮಸ್ಥಳ ಸ್ವಸಹಾಯ ಸಂಘಗಳಿವೆ. ಶ್ರೀಲಕ್ಷ್ಮಿ, ವಿನಾಯಕ ಸ್ತ್ರೀಶಕ್ತಿ ಸಂಘಗಳು, ರೈತಸಂಘ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳಿವೆ. ಸೌರ ವಿದ್ಯುತ್ ಸಂಪರ್ಕ ಪಡೆದ ಗ್ರಾಮ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೯ ಸಾಕ್ಷರತೆ ಇದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಒಂದು ಶಾಸನವಿದೆ.

ವರದರಾಜಸ್ವಾಮಿ, ಬೊಮ್ಮಲಿಂಗೇಶ್ವರ, ಈಶ್ವರ, ದುರ್ಗಮ್ಮ ಇಲ್ಲಿನ ಪ್ರಮುಖ ದೇವಾಲಯಗಳು. ವರದರಾಜಸ್ವಾಮಿಯ ತೇರು ಇಲ್ಲಿನ ಪ್ರಮುಖ ಆಕರ್ಷಣೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಜಿಲ್ಲಾ ಮುಖ್ಯರಸ್ತೆ ಹೊಂದಿದ್ದು ಖಾಸಗಿ ಬಸ್ಸುಗಳು, ಆಟೋರಿಕ್ಷಾ, ಸ್ವಂತ ವಾಹನ ಇಲ್ಲಿನ ಪ್ರಮುಖ ಸಾರಿಗೆಯಾಗಿದೆ.

## ಸೀಗೆಬಾಗಿ ಎ.ಕೆ. ಕಾಲೋನಿ

ಸೀಗೆಬಾಗಿ ಎ.ಕೆ. ಕಾಲೋನಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೨೯ ಕಿಮೀ ದೂರದಲ್ಲಿದ್ದು ಹುಳಿಯಾರು-ತಿಪಟೂರು ಮುಖ್ಯ ರಸ್ತೆಯಲ್ಲಿದೆ. ಇಲ್ಲಿ ಆದಿಕರ್ನಾಟಕ ಜನಾಂಗದ ಒಟ್ಟು ೩೧ ಮನೆಗಳಿದ್ದು ೧೫೧ ಜನಸಂಖ್ಯೆ ಹೊಂದಿದೆ. ಇಲ್ಲಿ ಹೆಂಚಿನ, ಶೀಟಿನ ಹಾಗೂ ಮಾಳಿಗೆ ಮನೆಗಳಿವೆ. ಇವು ಸರ್ಕಾರದ ಜನತಾ, ಅಂಬೇಡ್ಕರ್ ಜನವಸತಿ ಸೌಲಭ್ಯ ಪಡೆದವರಿದ್ದಾರೆ. ಕುಡಿಯಲು ಸೀಗೆಬಾವಿ ಗ್ರಾಮದ ಮೂಲಕ ಕೊಳವೆ ಪೈಪುಗಳ ಮೂಲಕ ನೀರು ಪೂರೈಸಲಾಗುತ್ತಿದೆ. ರೈತಾಪಿ ಬದುಕು ಮುಖ್ಯವಾಗಿದ್ದು ರಾಗಿ, ಜೋಳ, ಹೆಸರು, ಹುರುಳಿ ಬೆಳೆಯುತ್ತಾರೆ. ಎತ್ತಿನ ಗಾಡಿಗಳ ಬಳಕೆಯಿದೆ. ದ್ವಿಚಕ್ರ ವಾಹನಗಳ ಬಳಕೆಯಿದೆ. ಕೃಷಿ ಕಾರ್ಮಿಕರಿದ್ದಾರೆ. ಟ್ರ್ಯಾಕ್ಟರ್ ಡ್ರೈವರ್‌ಗಳಿದ್ದಾರೆ. ಸಾರಿಗೆ, ಶಿಕ್ಷಣ, ಅರಣ್ಯ ಇಲಾಖೆಯ ಸರ್ಕಾರಿ ನೌಕರರಿದ್ದಾರೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘವಿದ್ದು ಗ್ರಾಮದ ನಡುವೆ ಸೌರಶಕ್ತಿ ಸೌಕರ್ಯ ಒದಗಿಸಲಾಗಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮುಖ್ಯ ಆಹಾರವಾಗಿದ್ದು ರೊಟ್ಟಿ, ಇಡ್ಲಿ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನವಾಗಿದೆ. ಹೈನುಗಾರಿಕೆ ಇದ್ದು ಮುಖ್ಯ ಗ್ರಾಮದ ಡೈರಿಗೆ ಹಾಲು ಹಾಕಲಾಗುತ್ತಿದೆ. ಶಿಕ್ಷಣ, ಪಡಿತರ ವಿಷಯಗಳಿಗೆ ಮುಖ್ಯ ಗ್ರಾಮಕ್ಕೆ ಹೋಗುತ್ತಾರೆ. ಹಸು, ಕುರಿ, ಮೇಕೆ, ಎಮ್ಮೆ ಸಾಕುಪ್ರಾಣಿಗಳಾಗಿವೆ. ೧೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ದುರ್ಗಮ್ಮ ದೇವತೆಯ ಉತ್ಸವ, ಬಾಯಿಬೀಗ, ಸಿಡಿ ನಡೆಯುತ್ತದೆ. ಆರತಿ, ಬಾನ, ಬ್ಯಾಟೆ ಸಂಪ್ರದಾಯವಿದೆ. ೨ ಸ್ತ್ರೀಶಕ್ತಿ ಸಂಘಗಳಿವೆ. ವರದರಾಜಸ್ವಾಮಿ, ಬ್ರಹ್ಮಲಿಂಗೇಶ್ವರ ದೇವರ ದೇವಾಲಯಗಳಿವೆ. ಈ ಗ್ರಾಮದವರು ನಡೆದುಕೊಳ್ಳುತ್ತಾರೆ. ಒಬ್ಬರು ಗ್ರಾಮಪಂಚಾಯಿತಿ ಸದಸ್ಯರಿದ್ದಾರೆ. ತಿಮ್ಲಾಪುರ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ, ಹುಳಿಯಾರು ಜಿಲ್ಲಾ ಪಂಚಾಯ್ತಿಗೆ ಒಳಪಡುವ ಈ ಗ್ರಾಮ. ವರದರಾಜಸ್ವಾಮಿ ಜಾತ್ರೆಯ ಸಡಗರ ಒಂದು ವಾರದ ಕಾಲ ನಡೆಯುತ್ತದೆ. ಹೊಂಗೆಬೀಜ, ಕೊಬ್ಬರಿ, ತೆಂಗಿನ ಮಟ್ಟೆ ಹಾಗೂ ಮುತ್ತುಗದ ಎಲೆಯಿಂದ ಊಟದ ಎಲೆ ತಯಾರಿಸುತ್ತಾರೆ.

## ಸೀಗೆಬಾಗಿ ತೊರೆಮನೆ

ಸೀಗೆಬಾಗಿಯ ಸಮೀಪದಲ್ಲಿ ತೊರೆಮನೆ ಎಂಬ ಗ್ರಾಮವಿದ್ದು ಇದು ಸೀಗೆಬಾಗಿಯ ಉಪಗ್ರಾಮವಾಗಿದೆ. ಇದರ ಭೌಗೋಳಿಕ ವ್ಯಾಪ್ತಿ ಸೀಗೆಬಾಗಿಯ ೧೯೮೪.೦೫ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಇದು ಹುಳಿಯಾರು ಹೋಬಳಿ ತಿಮ್ಲಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದ್ದು ಕುರುಬರು, ಒಕ್ಕಲಿಗರು, ಅಗಸರು ಇಲ್ಲಿ ನೆಲೆಸಿದ್ದಾರೆ. ಒಟ್ಟು ೩೪ ಮನೆಗಳಿದ್ದು ೧೩೭ ಜನಸಂಖ್ಯೆ ಹೊಂದಿದೆ. ಈ ಮನೆಗಳು ಹೆಂಚಿನ, ಶೀಟಿನ ಸ್ವರೂಪದಲ್ಲಿದ್ದು ೧೪ ಮನೆಗಳು ಜನತಾ, ಆಶ್ರಯ ಯೋಜನೆಗಳ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ. ಹೊಳೆಯ ತೀರದಲ್ಲಿ ಮೊದಲಿಗೆ ಜನವಸತಿ ಆರಂಭವಾದ ಕಾರಣ ಇದನ್ನು ತೊರೆಮನೆ ಎಂದೇ ಕರೆಯಲಾಗಿದೆ. ವ್ಯವಸಾಯ ಇಲ್ಲಿನ ಪ್ರಧಾನ ಕಸುಬು. ರಾಗಿ, ಭತ್ತ, ಅವರೆ, ಹೆಸರು, ಹುರುಳಿ ಬೆಳೆಯುತ್ತಾರೆ. ತೋಟಗಾರಿಕೆ ಇರುವವರು ತೆಂಗು ಬೆಳೆಯುತ್ತಾರೆ. ಕೊಬ್ಬರಿ, ಹೊಂಗೆ ಬೀಜ, ಹುಣಸೇಹಣ್ಣು ಇವರ ವ್ಯಾಪಾರಿ ಸರಕಾಗಿದೆ. ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳು. ಕುರಿ ವ್ಯಾಪಾರವನ್ನ ಮಾಡುತ್ತಾರೆ. ಒಂದು ಅಂಗನವಾಡಿ ಕೇಂದ್ರವಿದೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಸೀಗೆಬಾಗಿಗೆ ಹೋಗುತ್ತಾರೆ. ವೃದ್ಧಾಪ್ಯವೇತನ, ವಿಧವಾ ವೇತನಗಳ

ಫಲಾನುಭವಿಗಳಿದ್ದಾರೆ. ಕುಡಿಯಲು ತಿಮ್ಲಾಪುರ ಗ್ರಾಮಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆಯ ಮೂಲಕ ನೀರು ಸರಬರಾಜು ಮಾಡುತ್ತಾರೆ. ಒಂದು ಸಿಸ್ಟನ್ ಇದೆ. ಒಂದು ಬೋರ್‌ವೆಲ್ ಇದೆ. ರಾಗಿಮುದ್ದೆ, ಅನ್ನ ಇವರ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಲಕ್ಷ್ಮೀ, ಕರಿಯಮ್ಮ ಸ್ತ್ರೀಶಕ್ತಿ ಕೇಂದ್ರಗಳಿವೆ. ಒಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘವಿದೆ. ಸೀಗೆಬಾಗಿ ವರದರಾಯ ದೇವರಿಗೆ ವಿಶೇಷ ಪೂಜೆಯಲ್ಲಿ ಈ ಗ್ರಾಮದವರು ಭಾಗವಹಿಸುತ್ತಾರೆ. ಉಳಿದಂತೆ ಕರಿಯಮ್ಮನಿಗೆ ಆರತಿ, ಬಾನ ಸೇವೆ ನಡೆಯುತ್ತದೆ. ಈ ಗ್ರಾಮದ ಒಬ್ಬರು ತಿಮ್ಲಾಪುರ ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಸೀಗೆಬಾಗಿ ಕೆರೆ ತುಂಬಿದರೆ ತೊರೆಮನೆಗೆ ಅನುಕೂಲವಾಗುತ್ತದೆ. ಹಳ್ಳ ಕಾಲುವೆಗಳಿಂದ ಕೂಡಿದ್ದು ಮಳೆಗಾಲದಲ್ಲಿ ಮಾತ್ರ ನೀರು ಇದ್ದು ಕುರಿ, ಹಸು ಪ್ರಾಣಿಗಳಿಗೆ ಅನುಕೂಲವಾಗುತ್ತದೆ. ಉಳಿದಂತೆ ದಸರಾ, ಯುಗಾದಿ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಸೈಯದ್ ಸಾಬ್ ಪಾಳ್ಯ

ಸೈಯದ್‌ಸಾಬ್ ಪಾಳ್ಯ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೭ ಕಿಮೀ ಅಂತರದಲ್ಲಿದೆ. ಸೈಯದ್ ಸಾಬ್ ಪಾಳ್ಯ ಮಜರೆ ಗ್ರಾಮವಾಗಿದ್ದು ತೊರೆಸೂರಗೊಂಡನಹಳ್ಳಿ ಗ್ರಾಮಕ್ಕೆ ಸೇರ್ಪಡೆಯಾಗಿದೆ. ಕಂದಾಯ ಗ್ರಾಮವಾಗಿದ್ದು ಬಯಲು ನಾಡಾಗಿದೆ. ಇದೊಂದು ಸೈಯದ್ ಸಾಬ್ ಎಂಬ ವ್ಯಕ್ತಿ ಮೂಲದ ಗ್ರಾಮದಿಂದ ಈ ಹೆಸರು ಬಂದಿದೆ. ಕೆಂಪು–ಬಿಳಿ ಮಿಶ್ರಿತ ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಚಪ್ಪರಮಲ್ಲಕಟ್ಟೆ ಹಳ್ಳ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತದೆ. ೨ ತೆರೆದ ಬಾವಿಗಳು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ. ಕೈಪಂಪುಗಳಿವೆ.

ಮುಸ್ಲಿಂ ಸಮುದಾಯವೇ ಪ್ರಧಾನವಾಗಿದ್ದು ಪ್ರಮುಖ ಭಾಷೆಯಾಗಿ ಕನ್ನಡ ಮತ್ತು ಉರ್ದು ಮಾತನಾಡುತ್ತಾರೆ. ಒಟ್ಟು ೪೩ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೦೮ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೨೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೧೭ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಬೈಕುಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದರೆ. ವ್ಯವಸಾಯ, ಬೀಡಿ ಕಾರ್ಮಿಕರು, ಕೂಲಿ ಇಲ್ಲಿನ ಪ್ರಮುಖ ಉದ್ಯೋಗವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಿಮ್ಲಾಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ.

ಶೇ.೬೯ ಸಾಕ್ಷರತೆಯಿದೆ. ಸ್ತ್ರೀಶಕ್ತಿ ಸಂಘಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಒಂದು ಸ್ಮಶಾನವಿದೆ.

ಮಸೀದಿಯಿದೆ. ಇವರು ರಂಜಾನ್, ಮೊಹರಂ, ಬಕ್ರೀದ್, ಈದ್ ಮಿಲಾದ್ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಸೋಮನಹಳ್ಳಿ

ಸೋಮನಹಳ್ಳಿ ಗ್ರಾಮವು ಚಿ.ನಾ. ಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೫ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೨೧೫೨.೦೬ ಹೆಕ್ಟೇರ್. ಸೋಮಣ್ಣ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ಈ ಹೆಸರು ಬಂದಿದೆ. ಇದೊಂದು ಕಂದಾಯ ಗ್ರಾಮ. ಗಂಗಾಬೋವಿ ಕಾಲೋನಿ, ವೆಂಕಟಾಬೋವಿ ಕಾಲೋನಿ, ಗೋರಿನಾಯ್ಕನ ತಾಂಡ್ಯ, ಜಿ.ಗೊಲ್ಲರಹಟ್ಟಿ ಈ ಗ್ರಾಮಕ್ಕೆ ಸೇರ್ಪಡೆಯಾಗಿರುವ ಇತರೆ ಗ್ರಾಮಗಳು. ೧೯೧೮ ಹೆಕ್ಟೇರ್ ಕೃಷಿ ಭೂಮಿಯಾಗಿದೆ. ಕಪ್ಪು ಮಿಶ್ರಿತ ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಅಭಯಾರಣ್ಯವಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕೋಡಿಹಳ್ಳ ಹಳ್ಳವಿದ್ದು ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತದೆ. ತೆರೆದ ಬಾವಿ / ಕೊಳವೆ ಬಾವಿ ಹಾಗೂ ಸೋಮನಹಳ್ಳಿ ಕೆರೆಯಿದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳ ವ್ಯವಸ್ಥೆಯಿದೆ,

ಆದಿದ್ರಾವಿಡ ಸಮುದಾಯವೇ ದೊಡ್ಡ ಸಮುದಾಯವಾಗಿದ್ದು ಮುಸ್ಲಿಂ ಸಮುದಾಯವು ಸಣ್ಣ ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮತ್ತು ಉರ್ದು ಬಳಸುತ್ತಾರೆ. ಒಟ್ಟು ೯೮ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೪೫೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೨೭ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೧೦ ಮನೆಗಳು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಆಧುನಿಕ ಡೈರಿಯಿದೆ. ತೆಂಗು, ಹುಣಸೆ ವ್ಯಾಪಾರವನ್ನು ಮಾಡುತ್ತಾರೆ. ಬಡಗಿ, ಬೀಡಿ ಕಾರ್ಮಿಕರು ಇದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ೩ ಜನ ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಹೊಯ್ಸಳಕಟ್ಟೆ ಅಂಚೆ ಸಂಪರ್ಕ ಹೊಂದಿದೆ. ೩ ಸ್ತ್ರೀಶಕ್ತಿ ಸಂಘಗಳು ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೭೪ ಸಾಕ್ಷರತೆ ಇದೆ. ಕನ್ನಡ ಇಲ್ಲಿನ ಭಾಷಾ ಮಾಧ್ಯಮವಾಗಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೪ ಫಲಾನುಭವಿಗಳಿದ್ದಾರೆ. ಒಂದು ಸ್ಮಶಾನವಿದೆ.

ಸೇವಾಲಾಲ್, ಮೂಡಲಗಿರಿ ತಿಮ್ಮಪ್ಪ, ಭೂತಪ್ಪ, ಕಣಿವೆ ಮಾರಮ್ಮ ಹಾಗೂ ಕ್ಯಾತಲಿಂಗೇಶ್ವರ ದೇವಸ್ಥಾನಗಳಿವೆ. ಕ್ಯಾತಲಿಂಗೇಶ್ವರಸ್ವಾಮಿ ರಥ ಹಾಗೂ ಸೇವಾಲಾಲ್ ತೇರು ಜಾತ್ರೆಯನ್ನು ಆಚರಿಸುತ್ತಾರೆ. ಸಿಡಿ,

ಓಕುಳಿ ಹಾಗೂ ಬಲಿ ಆಚರಣೆಗಳು ಚಾಲ್ತಿಯಲ್ಲಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಈರಣ್ಣನವರು ರಂಗಕಲಾವಿದರಾಗಿದ್ದಾರೆ.

## ಸೋಮನಹಳ್ಳಿ ಗೊಲ್ಲರಹಟ್ಟಿ

ಸೋಮನಹಳ್ಳಿ ಗೊಲ್ಲರಹಟ್ಟಿಯು ಹುಳಿಯಾರು ಹೋಬಳಿಯ ಗಾಣದಾಳು ಪಂಚಾಯ್ತಿಗೆ ಸೇರಿದ ಒಂದು ಮಜರೆ ಗ್ರಾಮವಾಗಿದೆ. ಕಾಡುಗೊಲ್ಲರೇ ಪ್ರತ್ಯೇಕವಾಗಿ ವಾಸಿಸುವುದರಿಂದಾಗಿ ಸೋಮನಹಳ್ಳಿ ಗೊಲ್ಲರಹಟ್ಟಿ ಎಂದು ಕರೆಯುತ್ತಾರೆ. ಒಟ್ಟು ೧೩೯ ಹೆಕ್ಟೇರ್ ವ್ಯವಸಾಯ ಭೂಮಿಯನ್ನು ಹೊಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಗಾಣದಾಳು ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕಾಡುಗೊಲ್ಲರು ದೊಡ್ಡ ಸಮುದಾಯವಾಗಿದ್ದು ೨೯ ಮನೆಗಳಿವೆ. ಒಟ್ಟು ೨೦೧೧ ರ ಜನಗಣತಿಯ ಪ್ರಕಾರ ೯೭ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಕುರಿ ಪೋಷಣೆ, ವ್ಯಾಪಾರವಿದೆ. ಕುರಿಗಳೊಂದಿಗೆ ಪರಸ್ಥಳಕ್ಕೆ ಹೋಗುವ ಸಂಪ್ರದಾಯವಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಶಿಕ್ಷಣ, ಅರಣ್ಯ ಇಲಾಖೆಗೆ ಸೇರಿದ ಇಬ್ಬರು ನೌಕರರಿದ್ದಾರೆ. ಮುತ್ತುಗದ ಎಲೆ, ಹಂಚಿಕಡ್ಡಿ ಸಂಗ್ರಹ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಸಹಾಯವಾಗಿದೆ. ಹುಳಿಯಾರು, ಬುಕ್ಕಾಪಟ್ಟಣ, ಹಿರಿಯೂರಿಗೆ ರಸ್ತೆ ಸಂಪರ್ಕವಿದೆ. ಪಡಿತರ, ಶಿಕ್ಷಣವನ್ನು ಗಾಣದಾಳುವಿನಿಂದ ಪಡೆಯುತ್ತಿದ್ದಾರೆ. ಸಾಕ್ಷರತೆ ಶೇ.೫೩ ರಷ್ಟಿದೆ.

ಕ್ಯಾತೆದೇವರು, ಪಾತೆದೇವರ ಪೌಳಿಗಳಿದ್ದು ದೀಪಾವಳಿಯ ಸಂದರ್ಭದಲ್ಲಿ ಏಳು ದಿನಗಳ ಕಾಲ ಹಾಲುಮೀಸಲು, ದೀಪ ಏರಿಸುವ, ಇಳಿಸುವ ಚರಣೆ ವಿಶೇಷವಾಗಿರುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಸಂಗೇನಹಳ್ಳಿ

ಸಂಗೇನಹಳ್ಳಿ ಗ್ರಾಮವು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೫ ಕಿಮೀ ಅಂತರದಲ್ಲಿದೆ. ಸಂಗಪ್ಪ ಎಂಬ ವ್ಯಕ್ತಿ ಮೂಲದಿಂದ ಸಂಗೇನಹಳ್ಳಿಯಾಗಿದೆ. ಇದೊಂದು ಕಂದಾಯ ಗ್ರಾಮ. ಬಯಲು ನಾಡಾಗಿದೆ. ಭೌಗೋಳಿಕ ವಿಸ್ತೀರ್ಣ ೬೭೮.೨೩ ಹೆಕ್ಟೇರ್. ೬೩೧ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಕೆಂಪು–ಬಿಳಿ ಚೌಳು ಮಿಶ್ರಿತ ಮಣ್ಣು ವ್ಯವಸಾಯಕ್ಕೆ ಯೋಗ್ಯವಾಗಿದೆ. ದೊಡ್ಡ ಬಂಡೆ ಹೆಸರಿನ ಕಲ್ಲು ಬಂಡೆಗಳ ಹಾಸು ಗ್ರಾಮದ ಪಶ್ಚಿಮ ದಿಕ್ಕಿನಲ್ಲಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ,

ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಕ್ಕೆ ಹೊಂದಿಕೊಂಡಂತೆ ಕೆರೆ, ಅಮ್ಮನಗುಡಿಹಳ್ಳಿ ಮತ್ತು ಅಯ್ಯನಕೆರೆ ಹಳ್ಳವಿದ್ದು ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ೩ ತೆರೆದ ಬಾವಿಗಳಿದ್ದು ಆಧುನಿಕ ಕೊಳವೆ ಬಾವಿಗಳಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯವ ನೀರಿನ ಒರತೆಗಳಾಗಿವೆ.

ಉಪ್ಪಾರ ದೊಡ್ಡ ಸಮುದಾಯವಾಗಿದೆ. ಮಡಿವಾಳ ಮತ್ತು ಅಕ್ಕಸಾಲಿಗರಿದ್ದಾರೆ. ಕನ್ನಡ ಪ್ರಮುಖ ಭಾಷೆಯಾಗಿದೆ. ಒಟ್ಟು ೧೮೩ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೮೫೪ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಗುಡಿಸಲುಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೬೮ ಮನೆಗಳನ್ನು ಕಾಣಬಹುದು. ೭ ಕುಟುಂಬಗಳಲ್ಲಿ ಶೌಚಾಲಯವಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಬೈಕ್, ಟೆಂಪೋಗಳನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಕಂದಿಕೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಬರಕನಹಾಳ್ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಮುತ್ತುಗದ ಎಲೆಯಿಂದ ತಟ್ಟೆ ಮಾಡುವ ಗುಡಿಕೈಗಾರಿಕೆಯಿದೆ. ಸ್ತ್ರೀಶಕ್ತಿ ಸಂಘಗಳು ಹಾಗೂ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ. ಜಿಲ್ಲಾ ಪಂಚಾಯ್ತಿ ರಸ್ತೆ ಸಂಪರ್ಕವಿದೆ. ಖಾಸಗಿ ಸಾರಿಗೆ ಸಂಪರ್ಕವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೭೦ ರಷ್ಟು ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೪೭ ಫಲಾನುಭವಿಗಳಿದ್ದಾರೆ.

ಆಂಜನೇಯಸ್ವಾಮಿ, ಕೊಲ್ಲಾಪುರದಮ್ಮ ದೇವಾಲಯಗಳಿವೆ. ವರ್ಷಕ್ಕೊಮ್ಮೆ ಆಂಜನೇಯಸ್ವಾಮಿ ರಥೋತ್ಸವ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

### ಸಿಂಗಾಪುರ

ಸಿಂಗಾಪುರ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೫ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೯೭೬.೩೭ ಹೆಕ್ಟೇರ್. ಕಂದಾಯ ಗ್ರಾಮ. ಬಯಲು ನಾಡಾಗಿದೆ. ಮರಳು ಮಿಶ್ರಿತ ಬಿಳಿ ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ೮೯೭ ಹೆಕ್ಟೇರ್ ಕೃಷಿ ಭೂಮಿಯಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೪ ಕೈಪಂಪುಗಳ ವ್ಯವಸ್ಥೆಯಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯವ ನೀರಿನ ಒರತೆಗಳಾಗಿವೆ. ೪ ತೆರೆದ

ಬಾವಿಗಳಿದ್ದು ಕೆಲವು ಬತ್ತಿ ಹೋಗಿ ಆಧುನಿಕ ಕೊಳವೆ ಬಾವಿಗಳು ಅಲ್ಪ ನೀರಿನ ಮೂಲಗಳಾಗಿವೆ. ಒಂದು ಕಲ್ಯಾಣಿ ಇದ್ದು ಮುಚ್ಚಿಹೋಗಿದೆ.

ನಾಯಕ, ಕುರುಬ ಸಮುದಾಯವೇ ಪ್ರಧಾನವಾಗಿದ್ದು ವೀರಶೈವ, ಮಡಿವಾಳ, ಕಮ್ಮಾರ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೨೨೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೯೧೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಗುಡಿಸಲಿನಲ್ಲಿ ನೆಲೆಸಿರುವ ಕುಟುಂಬಗಳಿವೆ. ೧೦೦ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೯೯ ಫಲಾನುಭವಿಗಳ ಮನೆಗಳನ್ನು ಕಾಣಬಹುದು.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಸಾವೆ, ನವಣೆ ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕು, ಟೆಂಪೋಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕೃಷಿ ಕೂಲಿಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆಧುನಿಕ ಡೈರಿ ವ್ಯವಸ್ಥೆಯಿದೆ. ಶಿಕ್ಷಣ ಇಲಾಖೆ, ಸಾರಿಗೆ, ಕಂದಾಯ, ವೈದ್ಯರು ಸೇರಿದಂತೆ ೬೩ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವೈದ್ಯರು, ಇಂಜಿನಿಯರ್ ಹಾಗೂ ವಕೀಲರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಯಳನಡು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಬನಶಂಕರಿ, ಕರಿಯಮ್ಮ ಸ್ತ್ರೀಶಕ್ತಿ ಸಂಘಗಳು, ಸಿದ್ಧರಾಮೇಶ್ವರ ಮಹಿಳಾ ಸ್ವಸಹಾಯ ಸಂಘ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೮೩ ರಷ್ಟು ಸಾಕ್ಷರತೆ ಪ್ರಮಾಣವಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೦೬ ಫಲಾನುಭವಿಗಳಿದ್ದಾರೆ.

ಆಂಜನೇಯ, ಬೇವಿನಳ್ಳಮ್ಮ, ಕೆರೆಸಂತೆ ಲಕ್ಷ್ಮೀದೇವಿ ದೇವಾಲಯಗಳಿವೆ. ಶ್ರೀ ಸಿದ್ಧರಾಮೇಶ್ವರ ಜಾತ್ರೆ ಇಲ್ಲಿನ ವಿಶೇಷ ಆಕರ್ಷಣೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಜಿಲ್ಲಾಪಂಚಾಯ್ತಿ ಮುಖ್ಯರಸ್ತೆ ಹೊಂದಿದ್ದು ಖಾಸಗಿ ಬಸ್ಸುಗಳು, ಆಟೋರಿಕ್ಷಾ ಮತ್ತು ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಹಿರಿಯ ಸಾಹಿತಿ, ಚಿಂತಕ ಎಸ್.ಜಿ. ಸಿದ್ದರಾಮಯ್ಯ ಇದೇ ಗ್ರಾಮದವರಾಗಿದ್ದು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಪ್ರಾಧ್ಯಾಪಕರಾಗಿ ಈಗ ನಿವೃತ್ತಿ ಹೊಂದಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.

## ಸಿದ್ದನಕಟ್ಟೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ರಾಮನಹಳ್ಳಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಈಶಾನ್ಯ ದಿಕ್ಕಿಗೆ ೨೬ ಕಿಮೀ ಅಂತರದಲ್ಲಿದೆ. ಸಿದ್ದಪ್ಪನಗುಡಿಯ ಸಮೀಪ ಜನವಸತಿ ಸಿದ್ದನಕಟ್ಟೆ ಆಗಿದೆ. ಭೌಗೋಳಿಕ ವಿಸ್ತೀರ್ಣ ೧೦೫೯.೦೬ ಹೆಕ್ಟೇರ್. ಬಯಲುನಾಡಿನಲ್ಲಿರುವ ಈ ಗ್ರಾಮದ ಸುತ್ತ ಬಿಳಿಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು

ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಗ್ರಾಮದ ಪಕ್ಕ ಉಪ್ಪಳ್ಳ, ಆಶ್ರೀಹಾಳ್ ಹಳ್ಳ ಎಂಬ ಹಳ್ಳಗಳು ಹರಿಯುತ್ತವೆ. ಗ್ರಾಮದಲ್ಲಿ ಎರಡು ಸೇದೋ ಬಾವಿಗಳಿವೆ. ೩ ಕೊಳವೆ ಬಾವಿಗಳಿವೆ. ಗ್ರಾಮಕ್ಕೆ ಕೆರೆಯಿದೆ. ಇದನ್ನು ಸಿದ್ದನಕಟ್ಟೆ ಕೆರೆ ಎಂದು ಕರೆಯಲಾಗುತ್ತದೆ. ಕುಡಿಯುವ ನೀರಿನ ಸಿಸ್ಟನ್‌ಗಳಿಗೆ ನಲ್ಲಿ ಅಳವಡಿಸಲಾಗಿದೆ. ಒಟ್ಟು ೧೫೫ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೯೦೮ ಜನಸಂಖ್ಯೆ ಹೊಂದಿದೆ. ನಾಯಕ ಸಮುದಾಯದವರು ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗ, ಒಕ್ಕಲಿಗ, ಲಿಂಗಾಯಿತ, ವೈಷ್ಣವರು (ರಾಯರು), ಮುಸ್ಲಿಂ, ಮಡಿವಾಳ, ಕಮ್ಮಾರರು ಸಣ್ಣ ಸಮುದಾಯದವರಾಗಿದ್ದಾರೆ. ಕನ್ನಡ ಮತ್ತು ಉರ್ದು ಭಾಷೆ ಬಳಸುತ್ತಾರೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೧೫ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ೧೦ ಗುಡಿಸಲುಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೬೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೫೦ ಕ್ಕೂ ಹೆಚ್ಚು ಕುಟುಂಬಗಳು ಶೌಚಾಲಯ ಹೊಂದಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕಾರು, ಬಸ್ಸು, ಬೈಕ್‌ಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಸ್ತೆ ಹಾಗೂ ಚರಂಡಿ ವ್ಯವಸ್ಥೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಬಹುತೇಕ ಜನರ ವೃತ್ತಿ ಕೃಷಿ ಆಗಿದೆ. ಗ್ರಾಮದ ಜನರು ಸೀಮೆಹಸುಗಳನ್ನು ಸಾಕಿದ್ದಾರೆ. ನಂದಿನಿ ಡೈರಿಗೆ ಹಾಲು ಮಾರುತ್ತಾರೆ. ಕೆರೆ ತುಂಬಿದಾಗ ಮೀನು ಕೃಷಿ ಮಾಡಲಾಗುತ್ತದೆ. ಕೊಬ್ಬರಿ, ಹಸಿ ತೆಂಗಿನಕಾಯಿ, ಅಡಿಕೆ ಇಲ್ಲಿನ ವ್ಯಾಪಾರಿ ಸರಕಾಗಿದೆ. ಡಾಕ್ಟರ್, ಇಂಜಿನಿಯರ್, ಲಾಯರ್, ಶಿಕ್ಷಕರಾಗಿ ಜೀವನ ನಡೆಸುತ್ತಿದ್ದಾರೆ. ಬಡಗಿಗಳು ಗ್ರಾಮದಲ್ಲಿದ್ದಾರೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಿಮ್ಮನಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ರಾಮನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರು, ಒಬ್ಬರು ಗ್ರಾಮಪಂಚಾಯ್ತಿ ಉದ್ಯೋಗಿ ಇದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಗ್ರಾಮಕ್ಕೆ ತಿಮ್ಮನಹಳ್ಳಿ, ಸಿದ್ದನಕಟ್ಟೆ, ಮದನಮಡು ಮೂಲಕ ತಾಲ್ಲೂಕು ಕೇಂದ್ರಕ್ಕೆ ಸಂಪರ್ಕಿಸುವ ರಸ್ತೆಯಿದೆ. ದುರ್ಗಾಂಬ, ಚಾಮುಂಡೇಶ್ವರಿ, ಭುವನೇಶ್ವರಿ, ರಾಜರಾಜೇಶ್ವರಿ, ಅನ್ನಪೂರ್ಣೇಶ್ವರಿ, ಅಕ್ಕಮಹಾದೇವಿ ಮುಂತಾದ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ. ೭೨ ರಷ್ಟು ಸಾಕ್ಷರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಎರಡು ಚಿಕ್ಕ ಅಂಗಡಿಗಳಿವೆ. ಸಿದ್ದೇಶ್ವರಸ್ವಾಮಿ ದೇವಸ್ಥಾನದ ಪಕ್ಕ ವೀರಗಲ್ಲು ಇದೆ.

ಶ್ರೀನಿವಾಸನ ದೇವಸ್ಥಾನ, ಸಿದ್ದೇಶ್ವರ ಸ್ವಾಮಿ ದೇವಾಲಯಗಳಿವೆ. ಶಿವರಾತ್ರಿ ನಂತರ ಜಾತ್ರೆ ಮಾಡುತ್ತಾರೆ. ಜಾತ್ರೆಯು ಮೂರು ದಿವಸ ನಡೆಯುತ್ತದೆ. ದೇವರ ಮದುವೆ, ಮದಲಿಂಗ ಆಗುವುದು, ಮದುವೆ, ತೇರು ಇತ್ಯಾದಿ ಕಾರ್ಯಕ್ರಮಗಳು ಜಾತ್ರೆಯಲ್ಲಿ ಜರುಗುತ್ತವೆ. ಓಕುಳಿ ಆಡಲಾಗುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಅನುಸೂಯಮ್ಮ, ಸುಜಾತ, ಜಯಲಕ್ಷ್ಮಿ ಎಂಬುವವರು ಜನಪದ ಗೀತೆ, ಭಾವಗೀತೆ, ಭಕ್ತಿಗೀತೆ, ದೇವರನಾಮ ಹಾಡುತ್ತಾರೆ.

## ಸಿದ್ದನಕಟ್ಟೆ ಎ.ಕೆ. ಕಾಲೋನಿ

ಸಿದ್ದನಕಟ್ಟೆ ಎ.ಕೆ. ಕಾಲೋನಿಯು ಸಿದ್ದನಕಟ್ಟೆಯ ಹೊರವಲಯದ ಆದಿಕರ್ನಾಟಕ ಕಾಲೋನಿ. ಇದನ್ನು ಮಾದಿಗರಹಟ್ಟಿ ಎಂದು ಕರೆಯುತ್ತಾರೆ. ಇಲ್ಲಿ ಮಾದಿಗ ಜನಾಂಗಕ್ಕೆ ಸೇರಿದ ೩೯ ಮನೆಗಳಿದ್ದು ೨೧೪ ಜನಸಂಖ್ಯೆ ಹೊಂದಿದೆ. ಹೆಂಚಿನ, ಶೀಟಿನ, ಮಾಳಿಗೆ ಸ್ವರೂಪದ ಮನೆಗಳಿದ್ದು ಇವು ಸರ್ಕಾರದ ವಸತಿ ಯೋಜನೆಗಳಾದ ಜನತಾ, ಅಂಬೇಡ್ಕರ್ ಮನೆಗಳ ಫಲಾನುಭವಿಗಳಿದ್ದಾರೆ. ೪ ಗುಡಿಸಲುಗಳಿವೆ. ಈ

ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಒಟ್ಟು ೨೦೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೦೪೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೧೨೩ ಮನೆಗಳನ್ನು ಕಾಣಬಹುದು.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕೊಬ್ಬರಿ, ತೆಂಗಿನ ಮಟ್ಟೆ, ಚಿಪ್ಪು ವ್ಯಾಪಾರಿ ಸರಕುಗಳು. ಸಾರಿಗೆ, ಅರಣ್ಯ, ಪೊಲೀಸ್, ಶಿಕ್ಷಣ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ. ೫೩% ರಷ್ಟು ಸಾಕ್ಷರತೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತಿಮ್ಮನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ರಾಮನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ರಾಮನಹಳ್ಳಿಯಿಂದ ಅಂಚೆ ಸಂಪರ್ಕವಿದೆ. ೨ ಟೀ ಅಂಗಡಿ, ೨ ಗೂಡಂಗಡಿಗಳಿವೆ.

೨ ಸ್ತ್ರೀಶಕ್ತಿ ಸಂಘಗಳು, ೧ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರಿ ಸಂಘದ ಘಟಕಗಳಿವೆ, ಶಿಕ್ಷಣ, ಪಡಿತರ ವಿಚಾರಗಳಿಗೆ ಮುಖ್ಯ ಗ್ರಾಮದೊಂದಿಗೆ ಹಂಚಿಕೆಯಾಗಿವೆ. ತಿಮ್ಮನಹಳ್ಳಿ, ಮದನಮಡು ಮಾರ್ಗದಲ್ಲಿ ರಸ್ತೆ ಸಂಪರ್ಕವಿದ್ದು ಬಸ್ ಓಡಾಡುತ್ತಿದೆ. ಇಬ್ಬರು ಬಡಗಿ ಕಸುಬಿನವರಿದ್ದಾರೆ. ಮನೆ ಕಟ್ಟುವ ಗಾರೆ ಕೆಲಸದವರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೧೦ ಫಲಾನುಭವಿಗಳಿದ್ದಾರೆ.

ಕರಿಯಮ್ಮ ದೇವರ ಪೌಳಿಯಿದೆ. ಗ್ರಾಮದ ಸಿದ್ದೇಶ್ವರ ದೇವರ ಜಾತ್ರೆಯಲ್ಲಿ ಈ ಬಡಾವಣೆಯವರ ಭಾಗವಹಿಸುವಿಕೆ ಅಪಾರವಾಗಿದೆ. ದೇವರ ಕಲ್ಯಾಣೋತ್ಸವ, ಓಕುಳಿ ಹಾಗೂ ತೇರು ಕಟ್ಟುವಲ್ಲಿ ಈ ಕೇರಿಯ ಜನರು ಕುಳವಾಡಿ ನೇಮದಂತೆ ಕಾರ್ಯನಿರ್ವಹಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಸೋಮನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೦ ಕಿಮೀ ಅಂತರದಲ್ಲಿದೆ. ಸೋಮನಹಳ್ಳಿ ಗ್ರಾಮವು ಆರಂಭದಲ್ಲಿ ಸೋಮ ಎಂಬ ವ್ಯಕ್ತಿಯಿಂದ ಆರಂಭವಾಗಿರಬೇಕೆಂಬುದು ಪ್ರತೀತಿ. ಭೌಗೋಳಿಕ ವಿಸ್ತೀರ್ಣ ೪೯೫.೫೩ ಹೆಕ್ಟೇರ್. ಇದೊಂದು ಕಂದಾಯ ಗ್ರಾಮವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಹಳ್ಳಿಕಾರ್ ಮತ್ತು ದೇವದಾರು ತಳಿಯ ಎತ್ತುಗಳನ್ನು ಸಾಕುತ್ತಾರೆ. ಜೆರ್ಸಿ ಮತ್ತು ಹೆಚ್.ಎಫ್ ತಳಿಯ ಸೀಮೆಹಸುಗಳನ್ನು ಸಾಕುತ್ತಾರೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ೬ ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೪೦

ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಿಗೆ ನೀರೊದಗಿಸುತ್ತದೆ. ೧೦೦ ವರ್ಷಗಳಷ್ಟು ಹಳೆಯದಾದ ೩ ಸೇದುವ ಬಾವಿಗಳಿದ್ದು ನೀರಿಲ್ಲದೆ ಬತ್ತಿಹೋಗಿವೆ. ಹೊಸಕೆರೆಹಳ್ಳ, ಮುರುಡಪ್ಪನಹಳ್ಳ ಎಂಬ ೨ ಹಳ್ಳಗಳಿದ್ದು ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ಪೂರ್ವಕ್ಕೆ ಗೋವುಕಟ್ಟೆಯಿದೆ. ಒಟ್ಟು ೧೯೩ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೮೩೧ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೯೮ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೨೩ ಮನೆಗಳು ಶೌಚಾಲಯ ಹೊಂದಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕಟ್ಟಡ ಕೆಲಸಗಾರರು ಮತ್ತು ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಆಧುನಿಕ ಡೈರಿ ವ್ಯವಸ್ಥೆಯಿದೆ. ಹಾಲು ಉತ್ಪಾದಕರ ಸಹಕಾರ ಸಂಘವು ಪ್ರತಿದಿನ ೩೦೦ ಲೀ. ಹಾಲು ಸಂಗ್ರಹಿಸುತ್ತಿದ್ದು ಆರ್ಥಿಕ ಚೇತರಿಕೆಗೆ ಕಾರಣವಾಗಿದೆ. ೮ ಮಂದಿ ಸರ್ಕಾರಿ ನೌಕರರಿದ್ದು ೨೦ ಮಂದಿ ಖಾಸಗಿ ಒಡೆತನದ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಐದು ಸ್ತ್ರೀಶಕ್ತಿ ಸಂಘಗಳು, ೩ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಘಗಳು, ೨ ಸ್ವಸಹಾಯ ಸಂಘಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗೋಡೆಕೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಹಾಗೂ ಒಬ್ಬರು ಗ್ರಾಮಪಂಚಾಯ್ತಿ ನೌಕರರು ಇದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಆಟೋಗಳ ಸೌಲಭ್ಯವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೯ ಫಲಾನುಭವಿಗಳಿದ್ದಾರೆ.

ಲಕ್ಷ್ಮಿ ದೇವಸ್ಥಾನ, ಬಸವೇಶ್ವರ, ಈಶ್ವರನ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಸೋಮನಹಳ್ಳಿ ಪಾಳ್ಯ

ಸೋಮನಹಳ್ಳಿ ಪಾಳ್ಯವು ಸೋಮನಹಳ್ಳಿಗೆ ಸೇರಿದ ಒಂದು ಮಜರೆ ಗ್ರಾಮವಾಗಿದೆ. ಇದರ ಭೌಗೋಳಿಕ ವಿಸ್ತೀರ್ಣ ಮುಖ್ಯ ಗ್ರಾಮದೊಂದಿಗೆ ಹಂಚಿಕೆಯಾಗಿದ್ದು ೧೧೪ ಹೆಕ್ಟೇರ್ ಕೃಷಿ ಭೂಮಿಯನ್ನು ಹೊಂದಿದೆ. ಇದು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧೧ ಕಿಮೀ ದೂರದಲ್ಲಿದೆ. ಈ ಪರಿಸರದಲ್ಲಿ ಕಾಡು ಪ್ರಾಣಿಗಳಾದ ನರಿ, ಮೊಲ, ಜಿಂಕೆ, ಹಂದಿ ಕಂಡುಬಂದರೆ ಗ್ರಾಮದಲ್ಲಿ ಹಸು, ಕುರಿ, ಮೇಕೆ ಸಾಕಿದ್ದಾರೆ. ಕೋಳಿ ಸಾಕುಪಕ್ಷಿಯಾದರೆ ಗಿಳಿ, ಗೊರವಂಕ, ಬೆಳವ, ಕೋಗಿಲೆ, ಕೊಕ್ಕರೆ ಕಾಡುಪಕ್ಷಿಗಳಾಗಿವೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ಕೊಳವೆ ಬಾವಿಯ ಮೂಲಕ ನೀರನ್ನು ಪೂರೈಸುತ್ತಿದ್ದು ವಾರ್ಷಿಕ ಮಳೆಯ ಪ್ರಮಾಣ ವಾರ್ಷಿಕ ೫೧೦ ಮಿಮೀ ಇದ್ದರೆ ಬಿಸಿಲು ೩೬–೩೯ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಚಳಿ ೧೨ ಡಿಗ್ರಿ ಸಹಜವಾಗಿರುತ್ತದೆ. ಉಪ್ಪಾರ, ಆದಿಕರ್ನಾಟಕ ಜನಾಂಗದವರು ನೆಲೆಸಿದ್ದು ೪೩ ಮನೆಗಳಿವೆ. ಇವು ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಸರ್ಕಾರದ ವಸತಿ ಯೋಜನೆಯಾದ ಜನತಾ, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ೨೬ ಫಲಾನುಭವಿಗಳಿದ್ದಾರೆ. ಎಲ್ಲರೂ ಕನ್ನಡ ಮಾತನಾಡುತ್ತಾರೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುತ್ತಾರೆ. ಹೋಳಿಗೆ, ಪಾಯಸ ವಿಶೇಷ ಸಾಂದರ್ಭಿಕ ಭೋಜನವಾಗಿವೆ. ಕೃಷಿ ಮುಖ್ಯ ಬೆಳೆ. ತೆಂಗು, ಅಡಿಕೆ ತೋಟಗಳಿವೆ. ಕೊಬ್ಬರಿ, ಅಡಿಕೆ ವ್ಯಾಪಾರಿ ಸರಕಾಗಿದೆ. ಆಡಳಿತಾತ್ಮಕವಾಗಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಗೋಡೆಕೆರೆ ಗ್ರಾಮಪಂಚಾಯ್ತಿ ಹಾಗೂ ಶೆಟ್ಟಿಕೆರೆ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ

ಒಳಪಟ್ಟಿದೆ. ಗೋಡೆಕೆರೆಯಿಂದ ಅಂಚೆ ಸೌಕರ್ಯ ಒದಗಿಸಿದೆ. ಸರ್ಕಾರಿ ಶಿಕ್ಷಕರು, ಸಾರಿಗೆ ಇಲಾಖೆಯ ಇಬ್ಬರು ನೌಕರರಿದ್ದಾರೆ. ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬಳಕೆಯಲ್ಲಿವೆ. ೨ ಸ್ತ್ರೀಶಕ್ತಿ ಕೇಂದ್ರಗಳಿವೆ. ಇವು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪ್ರೇರಕವಾಗಿವೆ. ೧೨ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ಒಂದು ಅಂಗನವಾಡಿ ಕೇಂದ್ರವಿದ್ದು ಮಕ್ಕಳಿಗೆ ಪೌಷ್ಠಿಕ ಆಹಾರ ಪೂರೈಸುತ್ತಾರೆ. ಶಿಕ್ಷಣ, ಸಾರಿಗೆ, ಪಡಿತರ ವಿಷಯಗಳಿಗೆ ಸೋಮೇನಹಳ್ಳಿ, ಗೋಡೆಕೆರೆ ಗೇಟಿಗೆ ಹೋಗಬೇಕಾಗಿದೆ. ಗ್ರಾಮದ ಸಾಕ್ಷರತೆ ೭೨% ರಷ್ಟಿದೆ. ಮುಖ್ಯ ಗ್ರಾಮ ಸೋಮೇನಹಳ್ಳಿಯ ಈಶ್ವರನ ದೇವಸ್ಥಾನಕ್ಕೆ ನಡೆದುಕೊಳ್ಳುತ್ತಾರೆ. ಯುಗಾದಿ, ದೀಪಾವಳಿ, ದಸರಾ, ಗೌರಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಸೋಮನಹಳ್ಳಿ ಎ.ಕೆ. ಕಾಲೋನಿ

ಸೋಮನಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೧ ಕಿಮೀ ಅಂತರದಲ್ಲಿದೆ. ಇದರ ಉಪಗ್ರಾಮ ಅಥವಾ ಹೊಂದಿಕೊಂಡಂತೆ ಆದಿದ್ರಾವಿಡ ಜನಾಂಗದ ಪ್ರತ್ಯೇಕ ಬಡಾವಣೆ ರಚನೆಯಾಗಿದೆ. ಅದನ್ನು ಹೊಲೆಯರಹಟ್ಟಿ, ಮಾದಿಗರಹಟ್ಟಿ ಎಂದೂ ಕರೆಯುತ್ತಾರೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಆದಿದ್ರಾವಿಡ ಜನಾಂಗಕ್ಕೆ ಸೇರಿದ ಒಟ್ಟು ೧೯೪ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೭೭೮ ಜನಸಂಖ್ಯೆ ಹೊಂದಿದೆ. ಇವರೆಲ್ಲರೂ ಕನ್ನಡ ಮಾತೃಭಾಷೆಯನ್ನು ಆಡುತ್ತಾರೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಉಚಿತ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕ ಹೊಂದಿದ್ದಾರೆ. ೧೪ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೪೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಗೋಡೆಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಗೋಡೆಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಕರಿಯಮ್ಮ, ಲಕ್ಷ್ಮೀದೇವಿ ಸ್ತ್ರೀಶಕ್ತಿ ಸಂಘಗಳಿವೆ. ಗರಿಕಡ್ಡಿ ಸಿಗಿಯುವ ಮಹಿಳೆಯರಿದ್ದಾರೆ. ಕೃಷಿ ಕೂಲಿ ಕಾರ್ಮಿಕರಿದ್ದಾರೆ.

ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಷ್ಠಿಕ ಆಹಾರ ನೀಡುತ್ತಿದ್ದಾರೆ. ಶಿಕ್ಷಣ, ಸಾರಿಗೆ, ಕಂದಾಯ, ಅರಣ್ಯ ಇಲಾಖೆಗೆ ಸೇರಿದ ೭ ಜನ ಸರ್ಕಾರಿ ನೌಕರರಿದ್ದಾರೆ. ಟ್ರ್ಯಾಕ್ಟರ್ ಡ್ರೈವರ್‌ಗಳಿದ್ದಾರೆ. ಗ್ರಾಮದ ಸಾಕ್ಷರತೆ ೬೩.೯ ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಗೋಡೆಕೆರೆಯಿಂದ ಅಂಚೆ ಸಂಪರ್ಕ ಹೊಂದಲಾಗಿದೆ. ಪಡಿತರ ವ್ಯವಸ್ಥೆ ಸೋಮನಹಳ್ಳಿ ಮುಖ್ಯ ಗ್ರಾಮದಿಂದ ಪಡೆಯಲಾಗುತ್ತಿದೆ. ಕೆ. ಬಿ. ಕ್ರಾಸ್ ಚಿಕ್ಕನಾಯಕನಹಳ್ಳಿಗೆ ಜೆ.ಸಿ. ಪುರದಿಂದ ರಸ್ತೆ ಸಂಪರ್ಕ, ಬಸ್ ಸೌಲಭ್ಯವಿದೆ.

ಲಕ್ಷ್ಮೀದೇವರು, ಕರಿಯಮ್ಮ ದೇವರಿಗೆ ಆರತಿ, ಬಾನ, ಬ್ಯಾಟೆಯ ಸಂಪ್ರದಾಯವಿದೆ. ಹತ್ಯಾಳು ನರಸಿಂಹಸ್ವಾಮಿಗೆ ಎದುರೆತ್ತಿ ಆರತಿ, ಮರಿ ಕಡಿಯುವುದು ರೂಢಿಯಲ್ಲಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಸೊಂಡೇನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೧ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೬೧೨ ಹೆಕ್ಟೇರ್. ಕಂದಾಯ ಗ್ರಾಮವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ೪ ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿವೆ. ದೊಡ್ಡ ಹಳ್ಳವಿದ್ದು ಹೆಚ್ಚು ಮಳೆ ಬಂದಾಗ ಹರಿಯುತ್ತದೆ. ಪೂರ್ವಕ್ಕೆ ಒಂದು ಕಟ್ಟೆಯಿದೆ. ೪೦೦-೫೦೦ ಅಡಿ ಆಳದ ೨೦ ಕೊಳವೆ ಬಾವಿಗಳು ಕೃಷಿ ಚಟುವಟಿಕೆಗಳಿಗೆ ನೀರೊದಗಿಸುತ್ತಿವೆ. ಒಂದು ಸೇದುವ ಬಾವಿಯಿದ್ದು ಸಂಪೂರ್ಣವಾಗಿ ಬತ್ತಿಹೋಗಿದೆ.

ನಾಯಕ ಜನಾಂಗವೇ ಪ್ರಧಾನ ಸಮುದಾಯವಾಗಿದ್ದು ಶೆಟ್ಟಿ ಬಣಜಿಗರು, ಸಲ್ಪರು, ಒಕ್ಕಲಿಗರು, ತಿಗಳ ಸಮುದಾಯದವರು ಕಿರು ಸಮುದಾಯಗಳಾಗಿವೆ. ಪ್ರಮುಖ ಭಾಷೆ ಕನ್ನಡ. ಒಟ್ಟು ೬೫ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೯೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಸೀಮೆಹೆಂಚಿನ ಹಾಗೂ ಗುಡಿಸಲು ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೪೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಕಟ್ಟಡ ಕೆಲಸಗಾರರು (ಗಾರೆ ಕೆಲಸ), ಕೂಲಿ ಕಾರ್ಮಿಕರು, ಮರಗೆಲಸ (ಬಡಗಿತನ) ಮಾಡುವವರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಒಬ್ಬರು ಶಿಕ್ಷಕರು, ಒಬ್ಬರು ಆರೋಗ್ಯ ಶುಶ್ರೂಷಕಿ ಇದ್ದಾರೆ.

ಕೃಷಿ ಪ್ರಧಾನವಾದ ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಜೆ.ಸಿ. ಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗೋಡೆಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಗ್ರಾಮಪಂಚಾಯ್ತಿ ಅಧ್ಯಕ್ಷರು ಇದೇ ಗ್ರಾಮದವರು. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೨ ಸ್ತ್ರೀಶಕ್ತಿ ಸಂಘಗಳು, ೨ ಸ್ವಸಹಾಯ ಸಂಘಗಳು, ೨ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘಗಳಿವೆ.

ಎರಡು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೮ ಫಲಾನುಭವಿಗಳಿದ್ದಾರೆ. ೪ ಸಣ್ಣ ಅಂಗಡಿಗಳಿವೆ.

ಕೆಂಪಮ್ಮ ಮತ್ತು ಆಂಜನೇಯಸ್ವಾಮಿ ದೇವಾಲಯಗಳಿವೆ. ತೇರು, ಸಿಡಿ, ಗಾವು, ಬಾಯಿಬೀಗವನ್ನೊಳಗೊಂಡಂತೆ ಐದು ದಿನಗಳ ಜಾತ್ರೆ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಸೊಂಡೇನಹಳ್ಳಿ ಗೊಲ್ಲರಹಟ್ಟಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೩ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೪೧ ಹೆಕ್ಟೇರ್. ಗ್ರಾಮವು ಸೊಂಡೇನಹಳ್ಳಿ ಗ್ರಾಮಕ್ಕೆ ಸೇರಿದ್ದು ಗೊಲ್ಲರೇ ಪ್ರಧಾನವಾಗಿರುವ ಕಾರಣ ಸೊಂಡೇನಹಳ್ಳಿ ಗೊಲ್ಲರಹಟ್ಟಿ ಎಂಬ ಹೆಸರು ಬಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ,

ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ೪ ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿವೆ. ಪೂರ್ವ ದಿಕ್ಕಿಗೆ ಒಂದು ಎಕರೆ ವಿಸ್ತೀರ್ಣದ ಕುರಿಕಟ್ಟೆ ಇದೆ. ಗ್ರಾಮದಲ್ಲಿ ೪೦೦–೫೦೦ ಅಡಿ ಆಳದ ೧೫ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಿಗೆ ನೀರೊದಗಿಸುತ್ತಿವೆ. ೬ ತೆರೆದ ಬಾವಿಗಳಿದ್ದು ಸಂಪೂರ್ಣ ಬತ್ತಿಹೋಗಿವೆ. ಕುಡಿಯುವ ನೀರಿಗಾಗಿ ೧ ಲಕ್ಷ ಲೀ. ನೀರಿನ ಸಂಗ್ರಹ ಸಾಮರ್ಥ್ಯದ ಒಂದು ನೀರಿನ ಮೇಲ್ತೊಟ್ಟಿ ಇದೆ.

ಗೊಲ್ಲ ಸಮುದಾಯವೇ ಪ್ರಧಾನವಾಗಿದ್ದು ನಾಯಕ ಸಮುದಾಯವು ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆ ಕನ್ನಡ. ಒಟ್ಟು ೮೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೩೮೬ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಮಣ್ಣಿನ, ಸೀಮೆಹೆಂಚಿನ, ಕುಂಬಾರ ಹೆಂಚಿನ ಹಾಗೂ ಗುಡಿಸಲು ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೧೬ ಮನೆಗಳನ್ನು ಕಾಣಬಹುದು. ಕಟ್ಟಡ ಕೆಲಸಗಾರರು ಮತ್ತು ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗೋಡೆಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಗ್ರಾಮದಲ್ಲಿ ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ನರೇಗ ರಸ್ತೆ ಸಂಪರ್ಕವಿದೆ. ೨ ಸ್ತ್ರೀಶಕ್ತಿ ಸಂಘ, ೨ ಸ್ವಸಹಾಯ ಸಂಘ, ೧ ಗ್ರಾಮೀಣ ಅಭಿವೃದ್ಧಿ ಸಂಘ, ಒಂದು ಶ್ರೀಕೃಷ್ಣ ಯಾದವ ಸಂಘವಿದೆ. ೩ ಮಂದಿ ಸರ್ಕಾರಿ ನೌಕರರಿದ್ದಾರೆ.

ಒಂದು ಅಂಗನವಾಡಿ ಕೇಂದ್ರವಿದೆ. ಇಲ್ಲಿಯ ಮಕ್ಕಳು ಸೊಂಡೇನಹಳ್ಳಿ ಗ್ರಾಮಕ್ಕೆ ಶಾಲೆಗೆ ಹೋಗುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೮ ಫಲಾನುಭವಿಗಳಿದ್ದಾರೆ.

ಮೂಡಲಗಿರಿ ದೇವಸ್ಥಾನವಿದ್ದು ದೀಪಾವಳಿ ಸಮಯದಲ್ಲಿ ಉತ್ಸವವನ್ನು ನಡೆಸುವುದರ ಮೂಲಕ ಜಾತ್ರೆ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಸಾಸಲು

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೦ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೯೩೧ ಹೆಕ್ಟೇರ್. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ೧೦ ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೪೦೦–೫೦೦ ಅಡಿ ಆಳದ ೧೫೦ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಿಗೆ ನೀರೊದಗಿಸುತ್ತಿದೆ. ೪ ತೆರೆದ ಬಾವಿಗಳು, ೪ ಸೇದುವ ಬಾವಿಗಳಿದ್ದು ಸಂಪೂರ್ಣವಾಗಿ ಬತ್ತಿಹೋಗಿವೆ. ಕುಡಿಯುವ ನೀರಿಗೆ ೧ ಲಕ್ಷ ಲೀ. ನೀರಿನ ಸಂಗ್ರಹ ಸಾಮರ್ಥ್ಯದ ಒಂದು ನೀರಿನ ಮೇಲ್ತೊಟ್ಟಿ ಇದೆ. ಗ್ರಾಮದ ೧೫೦ ಮನೆಗಳು

ಕೊಳಾಯಿ ಸಂಪರ್ಕ ಹೊಂದಿವೆ. ೪ ಒತ್ತುವ ಕೈಪಂಪುಗಳಿದ್ದು ಬತ್ತಿಹೋಗಿವೆ.

ಒಟ್ಟು ೩೦೪ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೨೦೪ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೧೩೨ ಮನೆಗಳನ್ನು ಕಾಣಬಹುದು. ೨೧೦ ಮನೆಗಳು ಶೌಚಾಲಯ ಹೊಂದಿವೆ.

ಲಿಂಗಾಯಿತ ಸಮುದಾಯವೇ ಪ್ರಧಾನವಾಗಿದ್ದು ಆದಿಕರ್ನಾಟಕ, ಆದಿದ್ರಾವಿಡ, ಒಕ್ಕಲಿಗರು, ನಾಯಕರು, ಮುಸ್ಲಿಂ, ಗಾಣಿಗ ಸಮುದಾಯಗಳು ಕಿರು ಸಮುದಾಯಗಳಾಗಿವೆ. ಪ್ರಮುಖ ಭಾಷೆ ಕನ್ನಡ.

ಕೃಷಿ ಪ್ರಧಾನವಾದ ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಎಲ್ಲಾ ರಸ್ತೆಗಳು ಸಿಮೆಂಟ್ ಮತ್ತು ಡಾಂಬರು ರಸ್ತೆಗಳಾಗಿವೆ. ಚರಂಡಿ ವ್ಯವಸ್ಥೆಯನ್ನು ಹೊಂದಿದ್ದು ಉತ್ತಮವಾಗಿದೆ. ಆಧುನಿಕ ಡೈರಿ ವ್ಯವಸ್ಥೆ ಇದೆ. ಹಾಲು ಉತ್ಪಾದಕರ ಸಹಕಾರ ಸಂಘವು ಪ್ರತಿದಿನ ೫೦೦ ಲೀ. ಹಾಲು ಸಂಗ್ರಹಿಸುತ್ತಿದ್ದಾರೆ. ೯ ಮಂದಿ ಸರ್ಕಾರಿ ನೌಕರರು, ೫೦ ಮಂದಿ ಖಾಸಗಿ ಒಡೆತನದ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ರಸ್ತೆ ಸಂಚಾರಕ್ಕೆ ಅನುಕೂಲವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಜೆ.ಸಿ. ಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು.

ಎರಡು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಮತ್ತು ಸರ್ಕಾರಿ ಪ್ರೌಢಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೭೨.೫ ರಷ್ಟು ಸಾಕ್ಷರತೆಯಿದೆ. ಜೆ.ಸಿ. ಪುರ ಗ್ರಾಮಪಂಚಾಯ್ತಿ ಆಡಳಿತಕ್ಕೊಳಪಟ್ಟಿರುವ ಗ್ರಂಥಾಲಯವಿದ್ದು ೪೦೦ ಪುಸ್ತಕಗಳ ಸಂಗ್ರಹವಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೪ ಸಣ್ಣ ಅಂಗಡಿಗಳಿವೆ. ಗ್ರಾಮಲೆಕ್ಕಾಧಿಕಾರಿಗಳ ಕಛೇರಿಯಿದೆ. ಬಯಲುಸೀಮೆ ಯೋಜನೆಯಡಿಯಲ್ಲಿ ಆದಿಕರ್ನಾಟಕ, ಆದಿ ದ್ರಾವಿಡ ಕಾಲೋನಿಯಲ್ಲಿ ಸಮುದಾಯ ಭವನವನ್ನು ಕಟ್ಟಲಾಗಿದೆ. ಸ್ತ್ರೀಶಕ್ತಿ ಸಂಘಗಳು, ಸ್ವಸಹಾಯ ಸಂಘಗಳು ಹಾಗೂ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಘಗಳು ಕಂಡುಬರುತ್ತವೆ.

ಈಶ್ವರ, ಬಸವಣ್ಣ, ಬನಶಂಕರಿ, ಮರುಳಸಿದ್ದೇಶ್ವರ ದೇವಾಲಯಗಳಿವೆ. ಬನಶಂಕರಿ ಮತ್ತು ಮೈಲಾರೇಶ್ವರ ದೇವಾಲಯಗಳು ಮುಜರಾಯಿ ದೇವಾಲಯಗಳಾಗಿವೆ. ಬನಶಂಕರಿ ದೇವತೆಯ ಜಾತ್ರೆಯು ಮೂರು ವರ್ಷಕ್ಕೋ ಆರು ವರ್ಷಕ್ಕೋ ಒಮ್ಮೆ ಜೇಷ್ಠ ಶುದ್ಧ ಪೌರ್ಣಮೆಯ ದಿನ ೬ ದಿನಗಳ ಕಾಲ ನಡೆಯುತ್ತದೆ. ಮೊದಲನೇ ಶನಿವಾರದಂದು ಕರಡಿ ಸಣ್ಣ ಮೇಳ ಬಡಿದುಕೊಂಡು ಊರಾಚೆ ಇರುವ ಬನಶಂಕರಿ ದೇವಸ್ಥಾನದ ಮುಂಭಾಗದ ಹೊಲಮಾಳದಲ್ಲಿ ಬಿಲ್‌ಗೂಡು ಹೂಡುತ್ತಾರೆ. ಭಾನುವಾರ ಮೊದಲ ಉತ್ಸವ. ಮರುಳಸಿದ್ದ ಸ್ವಾಮಿಯನ್ನು ಪಲ್ಲಕ್ಕಿಯಲ್ಲೂ ಬನಶಂಕರಿ ದೇವತೆಯನ್ನು ಅಡ್ಡಣಿಗೆಯಲ್ಲೂ ಉತ್ಸವ ಮಾಡುತ್ತಾರೆ. ಸೋಮವಾರ ಎರಡನೆಯ ಉತ್ಸವ. ಅಂದು ಬನಶಂಕರಿ ದೇವತೆಯನ್ನು ಮರದಿಂದ ಮಾಡಿದ ಬಿಳಿ ಕುದುರೆಯ ಮೇಲೂ, ಸ್ವಾಮಿಯನ್ನು ಮರದಿಂದ ಮಾಡಿದ ಬಿಳಿ ಬಸವನ ಮೇಲೂ ಕೂರಿಸಿ ಉತ್ಸವ ಮಾಡುತ್ತಾರೆ. ಮಂಗಳವಾರದ್ದೇ ವಿಶೇಷ. ಅಂದು ಸುಮಾರು ೧.೫ ಅಡಿ ಎತ್ತರ, ೧೦ ಅಡಿ ಅಗಲ, ೨೦ ಅಡಿ ಉದ್ದವಿರುವ ಕೆಂಡದ ರಾಶಿಯನ್ನು ನಗಾರಿ ಹೊತ್ತ ಬಸವನಿಂದ ಹಿಡಿದು ಎಲ್ಲ ಉತ್ಸವ ಪರಿಕರಗಳೂ ದೇವರ ಜೊತೆಯಲ್ಲಿ ಹಾಯ್ದು ಹೋಗುತ್ತವೆ. ರಾತ್ರಿ ಸುಮಾರು ೧೦ ಗಂಟೆಗೆ ಮಹೋತ್ಸವ ಮತ್ತು ಬಲಿ ಶುರುವಾಗುತ್ತದೆ. ಈ ಆಚರಣೆಯಲ್ಲಿ ಚಿಕ್ಕನಾಯಕನಹಳ್ಳಿ, ಹಿಂಡಿಸ್ಕೆರೆ, ಕೋಟನಾಯ್ಕನಹಳ್ಳಿ, ಅಣ್ಣಾಪುರ, ಹಳೇಪಾಳ್ಯ, ಬೆಂಗಳೂರು ಮುಂತಾದ ಕಡೆಗಳಿಂದ ನೂರಾರು ಜನ ದೇವಾಂಗದವರು ಪಾಲ್ಗೊಳ್ಳುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ,

ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ, ಚಿಂತಕ ಸಾ.ಶಿ.ಮರುಳಯ್ಯನವರು ಸಾಸಲು ಗ್ರಾಮದವರು. ಕಾದಂಬರಿ, ಕಾವ್ಯ, ಜೀವನಚರಿತ್ರೆ, ಸಣ್ಣಕತೆ ಕ್ಷೇತ್ರದಲ್ಲಿ ಸಾಹಿತ್ಯ ರಚಿಸಿದ್ದಾರೆ.

## ಸಾಸಲು ನವಗ್ರಾಮ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೦ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೪೦ ಹೆಕ್ಟೇರ್. ೨೦೦೮-೦೯ ನೇ ಇಸವಿಯಲ್ಲಿ ೬೦ ಮನೆಗಳ ಗುಂಪು ಯೋಜನೆಯಲ್ಲಿ ನಿರ್ಮಾಣವಾಗಿದ್ದು ನವಗ್ರಾಮ ಎಂಬ ಹೆಸರನ್ನು ಇಡಲಾಗಿದೆ. ಸಾಸಲು ಗ್ರಾಮಕ್ಕೆ ಹೋಗುವ ಬಸ್ಸುಗಳು ಇಲ್ಲಿಯೇ ನಿಲ್ಲುವುದರಿಂದ ಗ್ರಾಮವನ್ನು ಸಾಸಲು ಗೇಟ್ ಎಂದು ಕೂಡಾ ಕರೆಯುತ್ತಾರೆ. ಮಜರೆ ಗ್ರಾಮವಾಗಿದ್ದು ಸಾಸಲು ಗ್ರಾಮಕ್ಕೆ ಸೇರಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೨ ಕೊಳವೆ ಬಾವಿಗಳಿವೆ.

ಆದಿಕರ್ನಾಟಕ ಸಮುದಾಯವು ಪ್ರಧಾನ ಸಮುದಾಯ. ಆದಿದ್ರಾವಿಡ, ಲಿಂಗಾಯಿತ, ಒಕ್ಕಲಿಗ, ನಾಯಕ ಸಮುದಾಯಗಳಿವೆ. ಜನರ ಭಾಷೆ ಕನ್ನಡ. ದ್ವಿಚಕ್ರ ವಾಹನಗಳಿವೆ. ಒಟ್ಟು ೪೩ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೩೩ ಜನಸಂಖ್ಯೆ ಹೊಂದಿದೆ. ಎಲ್ಲ ಮನೆಗಳೂ ಕಾಂಕ್ರೀಟ್ ಮನೆಗಳಾಗಿವೆ.

ಕೃಷಿ ಪ್ರಧಾನವಾದ ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕಟ್ಟಡ ಕೆಲಸಗಾರರು ಮತ್ತು ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಜೆ.ಸಿ. ಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಚಿಕ್ಕನಾಯಕನಹಳ್ಳಿ-ತಿಪಟೂರು ಮಾರ್ಗಮಧ್ಯದಲ್ಲಿ ಕಂಡುಬರುವುದರಿಂದ ರಸ್ತೆ ಸಂಚಾರಕ್ಕೆ ಬಸ್ಸುಗಳ ಸೌಲಭ್ಯವಿದೆ. ೨ ಸ್ತ್ರೀಶಕ್ತಿ ಸಂಘಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಸಾಸಲು ಗೊಲ್ಲರಹಟ್ಟಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೧ ಕಿಮೀ ಅಂತರದಲ್ಲಿದೆ. ಇದೊಂದು ಸಾಸಲು ಗ್ರಾಮಕ್ಕೆ ಸೇರಿದ ಮಜರೆ ಗ್ರಾಮವಾಗಿದೆ. ಕಾಡುಗೊಲ್ಲರ ಜನಾಂಗದವರು ಮಾತ್ರ ವಾಸಿಸುವುದರಿಂದ ಗೊಲ್ಲರಹಟ್ಟಿ ಎಂದೂ, ಸಾಸಲು ಕಂದಾಯ ಗ್ರಾಮವಾಗಿರುವುದರಿಂದ ಸಾಸಲು ಗೊಲ್ಲರಹಟ್ಟಿ ಎಂದೂ ಕರೆಯುವುದು ರೂಢಿಯಾಗಿದೆ. ಬಯಲು ಪ್ರದೇಶ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು

ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಕಾಡುಗೊಲ್ಲರು ಮಾತ್ರ ವಾಸಿಸುವ ಇಲ್ಲಿ ಒಟ್ಟು ೭೬ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೪೬೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಹೆಂಚಿನ ಗುಡಿಸಲು ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೨೭ ಮನೆಗಳನ್ನು ಕಾಣಬಹುದು. ಕನ್ನಡ ಮಾತೃಭಾಷೆಯಾಗಿದೆ. ೨೩ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಹಾರಕ, ನವಣೆ ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಜೆ.ಸಿ. ಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಗ್ರಾಮದ ಇಬ್ಬರು ಗ್ರಾಮಪಂಚಾಯ್ತಿ ಪ್ರತಿನಿಧಿಗಳಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸಾಸಲು ಗ್ರಾಮದಿಂದ ಅಂಚೆ ಸಂಪರ್ಕ ಹೊಂದಿದೆ. ಸಾಸಲು ಗೇಟ್ ಹಾಗೂ ಗೋಡೆಕೆರೆ ಮಾರ್ಗವಾಗಿ ಬಸ್ ಸೌಕರ್ಯವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೭ ಸಾಕ್ಷರತೆಯಿದೆ. ಬಿಇಒ, ಇಂಜಿನಿಯರ್ ಸೇರಿದಂತೆ ಶಿಕ್ಷಣ, ಸಾರಿಗೆ, ಕಂದಾಯ, ಆರೋಗ್ಯ ಇಲಾಖೆಯಲ್ಲಿ ೧೪ ಜನ ಸರ್ಕಾರಿ ನೌಕರರಿದ್ದಾರೆ. ಪತ್ರಕರ್ತ ಸಾ.ಚಿ. ರಾಜಕುಮಾರ್ ಇದೇ ಗ್ರಾಮದವರು. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಚಿತ್ರದೇವರು, ಕಾಟಂದೇವರು ಹಾಗೂ ತಿಮ್ಮಪ್ಪನ ಪೌಳಿ ಹಾಗೂ ಗದ್ದುಗೆಗಳಿದ್ದು ದೀಪಾವಳಿ ಸಂದರ್ಭದಲ್ಲಿ ಜಾತ್ರೆ ಮಾಡುತ್ತಾರೆ. ಶೆಟ್ಟಿಕೆರೆಯ ಬನಶಂಕರಿ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಸಾಲ್ಕಟ್ಟೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೮ ಕಿಮೀ ಅಂತರದಲ್ಲಿದೆ. ಗ್ರಾಮದ ಭೌಗೋಳಿಕ ವಿಸ್ತೀರ್ಣವು ಸಾಲ್ಕಟ್ಟೆ ಭೌಗೋಳಿಕ ವಿಸ್ತೀರ್ಣದಲ್ಲಿ ಸೇರಿದೆ. ಸಾಲ್ಕಟ್ಟೆ ಪಾಳ್ಯ, ಲಂಬಾಣಿ ತಾಂಡ್ಯ, ಎ.ಕೆ. ಕಾಲೋನಿ, ಅಜ್ಜಯ್ಯನಗುಡ್ಲು ಸೇರಿದೆ. ಬಯಲು ನಾಡಾಗಿದ್ದು ಬಿಳಿಕಲ್ಲು, ಬಿಳಿ ಮಣ್ಣನ್ನು ಹೊಂದಿದೆ. ಸಾಲು ಗ್ರಾಮಗಳಿಂದ ಕೂಡಿದ ಪ್ರದೇಶವಾದುದರಿಂದ ಸಾಲುಕಟ್ಟೆ ಎಂಬ ಹೆಸರು ಬಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಸೇದೋಬಾವಿ ಹಾಗೂ ಕೊಳವೆ ಬಾವಿಗಳಿವೆ. ನಾಗತಿಕೆರೆ ಹಾಗೂ ಈರನಾಯ್ಕನ ಕೆರೆಗಳಿವೆ. ನಲ್ಲಿಗಳಿವೆ.

ವೀರಶೈವರು ದೊಡ್ಡ ಸಮುದಾಯದವರಾಗಿದ್ದು ವಿಶ್ವಕರ್ಮ, ಜೈನರು, ವೈಷ್ಣವರು, ನಾಯ್ಡುಗಳು, ಕುರುಬರು ಸಣ್ಣ ಸಮುದಾಯದವರಾಗಿದ್ದಾರೆ. ಕೆಲವು ಜನ ಕನ್ನಡ ಮತ್ತು ಕೆಲವು ಜನ ತೆಲುಗು ಮಾತನಾಡುತ್ತಾರೆ.

ಒಟ್ಟು ೫೧ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೨೩ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್,

ಕಲ್ಲಿನ, ಮಣ್ಣಿನ ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೨೭ ಮನೆಗಳನ್ನು ಕಾಣಬಹುದು. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಟೆಂಪೋ, ಆಟೋ, ಬೈಕುಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ನಂದಿನಿ ಡೈರಿಯಿದೆ. ಮುಖ್ಯ ವ್ಯಾಪಾರಿ ಸರಕು ಕೊಬ್ಬರಿ ಮತ್ತು ತೆಂಗಿನಕಾಯಿ ಆಗಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ೪ ಜನ ಶಿಕ್ಷಕರು, ಖಾಸಗಿ ವಕೀಲರು ಇಂಜಿನಿಯರ್‌ಗಳಿದ್ದಾರೆ. ಕೆಲವರು ಬೆಂಗಳೂರಿನ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮಾಳಿಗೆಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಲಕ್ಷ್ಮೀ, ಮಹಾಲಕ್ಷ್ಮೀಗಳೆಂಬ ೨ ಸ್ತ್ರೀಶಕ್ತಿ ಸಂಘಗಳು, ಸ್ವಸಹಾಯ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೭೨ ರಷ್ಟು ಸಾಕ್ಷರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೯ ಫಲಾನುಭವಿಗಳಿದ್ದಾರೆ. ಲಕ್ಷ್ಮೀರಂಗನಾಥ ತೆಂಗು ಉತ್ಪಾದಕರ ಸಂಘ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘವಿದೆ.

ಲಕ್ಷ್ಮೀ ರಂಗನಾಥಸ್ವಾಮಿ ಹಾಗೂ ಆಂಜನೇಯಸ್ವಾಮಿ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಸಾಲ್ಕಟ್ಟೆ ಪಾಳ್ಯ

ಸಾಲ್ಕಟ್ಟೆಪಾಳ್ಯ ಗ್ರಾಮವು ಒಂದು ಮಜರೆ ಗ್ರಾಮ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೧೦ ಕಿಮೀ ಅಂತರದಲ್ಲಿದೆ. ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವಾದ ೮೬೫.೨೬ ಚ.ಕಿ.ಮೀ ವ್ಯಾಪ್ತಿಯಲ್ಲಿ ಸೇರಿದೆ. ಈ ಗ್ರಾಮವು ಬಯಲು ಪ್ರದೇಶಕ್ಕೆ ಸೇರಿದ್ದು ಇಲ್ಲಿ ಬಿಳಿಯ ಕಲ್ಲು, ಮಣ್ಣು ಕಂಡುಬರುತ್ತದೆ. ಸಾಲು ಹಳ್ಳಿಗಳ ಪ್ರದೇಶವಾಗಿರುವುದರಿಂದ ಸಾಲುಕಟ್ಟೆ ಪಾಳ್ಯ ಎಂಬ ಹೆಸರು ಬಂದಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಯಿದ್ದು ನೀರಿರುವುದಿಲ್ಲ. ೬೦ ಕ್ಕೂ ಹೆಚ್ಚು ಕೊಳವೆ ಬಾವಿಗಳಿವೆ. ನೀರಾವರಿಗೆ ಬಳಕೆಯಾಗುತ್ತಿವೆ. ಗ್ರಾಮದ ಪಕ್ಕ ವೀರಶೆಟ್ಟಿ ಕಟ್ಟೆಯಿದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಒಟ್ಟು ೮೭ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೪೦೬ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೬೨ ಫಲಾನುಭವಿಗಳ ಮನೆಗಳನ್ನು ಕಾಣಬಹುದು.

ಕುರುಬರು ದೊಡ್ಡ ಸಮುದಾಯವಾಗಿದ್ದು ನಾಯಕರು, ಬೆಸ್ತರು, ಮಡಿವಾಳರು, ಲಿಂಗಾಯಿತರು ಸಣ್ಣ ಸಮುದಾಯದವರಾಗಿದ್ದಾರೆ. ಎಲ್ಲರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ೬ ಮನೆಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ. ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು,

ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್‌ಗಳಿವೆ. ಚರಂಡಿ ವ್ಯವಸ್ಥೆ ಹಾಗೂ ರಸ್ತೆ ಇದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಮುಖ್ಯ ವ್ಯಾಪಾರಿ ಸರಕು ತೆಂಗಿನಕಾಯಿ ಹಾಗೂ ಕೊಬ್ಬರಿ ಆಗಿದೆ. ಶಿಕ್ಷಕರು, ಪಂಚಾಯ್ತಿ ಕಾರ್ಯದರ್ಶಿಯಿದ್ದಾರೆ. ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಪಡೆದಿದ್ದಾರೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮುದ್ದೇನಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಬನಶಂಕರಿ, ಕೆಂಪಮ್ಮದೇವಿ, ಲಕ್ಷ್ಮೀದೇವಿ ಮುಂತಾದ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರವಿದೆ. ಶೇ.೬೦ ರಷ್ಟು ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೯ ಫಲಾನುಭವಿಗಳಿದ್ದಾರೆ.

ಬನಶಂಕರಿ ದೇವಾಲಯವಿದೆ. ರಾಮನವಮಿ ಸಂದರ್ಭದಲ್ಲಿ ಜಾತ್ರೆ ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಲಕ್ಕಮ್ಮ ಹಾಗೂ ಮಾಳಮ್ಮ ಎಂಬುವರು ಜನಪದ ಹಾಡುಗಳನ್ನು ಹಾಡುತ್ತಾರೆ.

## ಸಾಲ್ಕಟ್ಟೆ ಲಂಬಾಣಿ ತಾಂಡ್ಯ

ಸಾಲ್ಕಟ್ಟೆ ಲಂಬಾಣಿ ತಾಂಡ್ಯ ಒಂದು ಮಜರೆ ಗ್ರಾಮ. ಲಂಬಾಣಿ ಜನಾಂಗ ಇರುವುದರಿಂದ ಲಂಬಾಣಿ ತಾಂಡ್ಯ ಎಂಬ ಹೆಸರು ಬಂದಿದೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೮ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೮೬೫.೨೬ ಹೆಕ್ಟೇರ್. ಬಯಲುನಾಡು ಪ್ರದೇಶಕ್ಕೆ ಸೇರಿದ್ದು ಬಿಳಿಯ ಕಲ್ಲು, ಬಿಳಿಯ ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಅಜ್ಜಿಕಟ್ಟೆ ಎಂಬ ಕಟ್ಟೆಯಿದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಲಂಬಾಣಿಗರು (ಬಂಜಾರರು) ದೊಡ್ಡ ಸಮುದಾಯವಾಗಿದ್ದು ಕುರುಬರು, ನಾಯಕರು, ಲಿಂಗಾಯಿತರು ಸಣ್ಣ ಸಮುದಾಯದವರಾಗಿದ್ದಾರೆ. ಕನ್ನಡ, ಲಂಬಾಣಿ ಭಾಷೆ ಮಾತನಾಡುವವರಿದ್ದಾರೆ. ಒಟ್ಟು ೯೬ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೦೧ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಮಣ್ಣಿನ, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೪೭ ಮನೆಗಳನ್ನು ಕಾಣಬಹುದು. ೧೦ ಮನೆಗಳಲ್ಲಿ ಶೌಚಾಲಯ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕಾರು, ಬೈಕುಗಳು, ಆಟೋಗಳಿವೆ. ಕೊಬ್ಬರಿ ಮತ್ತು ತೆಂಗಿನಕಾಯಿ ವ್ಯಾಪಾರಿ ಸರಕು ಆಗಿದೆ. ೪ ಜನ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಲಾಯರ್, ಇಂಜಿನಿಯರ್, ಉಪನ್ಯಾಸಕರಾಗಿಯೂ ಕೆಲಸ ನಿರ್ವಹಿಸುತ್ತಿದ್ದಾರೆ. ಕೆಲವರು ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ, ಕೆ.ಎಸ್.ಆರ್.ಟಿ.ಸಿ. ಡಿಪೋಗಳಲ್ಲಿ ದುಡಿಮೆ ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮುದ್ದೇನಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ,

ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಬನಶಂಕರಿ ಸ್ತ್ರೀಶಕ್ತಿ ಸಂಘ ಹಾಗೂ ಧರ್ಮಸ್ಥಳ ಸ್ವಸಹಾಯ ಸಂಘವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೦ ರಷ್ಟು ಸಾಕ್ಷರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಪ್ಲೇಗಮ್ಮ, ಸೇವಾಲಾಲ್, ದುರ್ಗಮ್ಮ, ಚೌಡಮ್ಮ, ಶನಿಮಹಾದೇವರ ದೇವಸ್ಥಾನವಿದೆ. ಎಲ್ಲಾ ದೇವರುಗಳನ್ನು ಒಗ್ಗೂಡಿಸಿ ಜಾತ್ರೆ ಮಾಡುತ್ತಾರೆ. ಉತ್ಸವ, ಬನ್ನಿಮರ ಕತ್ತರಿಸುವುದು, ಬಲಿ ಹಾಕುವುದು ಜಾತ್ರೆಯ ವಿಶೇಷ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕಮಲಮ್ಮ ಹಾಗೂ ಭೀಮಮ್ಮ ಎಂಬುವರು ಲಂಬಾಣಿ ಹಾಡು ಹಾಗೂ ಕೋಲಾಟದ ಹಾಡುಗಳನ್ನು ಹಾಡುತ್ತಾರೆ.

## ಸಾಲ್ಕಟ್ಟೆ ಎ.ಕೆ. ಕಾಲೋನಿ

ಸಾಲ್ಕಟ್ಟೆ ಎ.ಕೆ. ಕಾಲೋನಿ ಒಂದು ಜನವಸತಿ ಗ್ರಾಮವಾಗಿದ್ದು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೯ ಕಿಮೀ ಅಂತರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ಸಾಲ್ಕಟ್ಟೆ ಎ.ಕೆ. ಕಾಲೋನಿಯ ೮೬೩.೨೬ ಚ.ಕಿ.ಮೀ. ವ್ಯಾಪ್ತಿಯಲ್ಲಿ ಸೇರಿದೆ. ಬಯಲು ಪ್ರದೇಶಕ್ಕೆ ಸೇರಿದ್ದು ಬಿಳಿಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ತೆರೆದ ಬಾವಿಯಿದೆ. ೩೦ ಕೊಳವೆ ಬಾವಿಗಳು ನೀರಾವರಿಗೆ ಬಳಕೆಯಾಗುತ್ತಿವೆ.ವೀರಶೆಟ್ಟಿಕಟ್ಟೆ ಹಾಗೂ ಹೊಲೆಯರ ಗುಂಡಿ ಎಂಬ ಕಟ್ಟೆಗಳಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಆದಿಕರ್ನಾಟಕರು ದೊಡ್ಡ ಸಮುದಾಯವಾಗಿದ್ದಾರೆ. ಎಲ್ಲರೂ ಕನ್ನಡವನ್ನೇ ಬಳಸುತ್ತಾರೆ. ಒಟ್ಟು ೯೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೪೫೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಮಣ್ಣಿನ, ಕಲ್ಲಿನ, ಹೆಂಚಿನ ಮನೆಗಳಿವೆ. ೪ ಗುಡಿಸಲು ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೪೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೬ ಮನೆಗಳಲ್ಲಿ ಶೌಚಾಲಯ ವ್ಯವಸ್ಥೆಯನ್ನು ಹೊಂದಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಹುರುಳಿ, ಅಲಸಂದೆ, ಜೋಳ, ಎಳ್ಳು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕು, ಕಾರುಗಳಿವೆ. ಚರಂಡಿ ವ್ಯವಸ್ಥೆ ಹಾಗೂ ರಸ್ತೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಇಲ್ಲಿಯ ಜನರ ಮುಖ್ಯ ವಾಣಿಜ್ಯ ಬೆಳೆ ತೆಂಗು, ಅಡಿಕೆ, ಬಾಳೆ ಆಗಿದೆ. ೯ ಜನ ಸರ್ಕಾರಿ ನೌಕರರಿದ್ದು ಶಿಕ್ಷಕರು, ಉಪನ್ಯಾಸಕರು, ವೈದ್ಯರು, ಇಂಜಿನಿಯರ್, ಪೊಲೀಸ್ ಕಾರ್ಯದರ್ಶಿಯಾಗಿದ್ದಾರೆ. ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಪಡೆದಿದ್ದಾರೆ. ಭಾಗ್ಯಜ್ಯೋತಿ ಯೋಜನೆಯಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮಾಳಿಗೆಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶ್ರೀ ಮಾರುತಿ, ಶ್ರೀಲಕ್ಷ್ಮಿ ಸ್ವಸಹಾಯ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೦ ರಷ್ಟು ಸಾಕ್ಷರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಚಿಕ್ಕ ಅಂಗಡಿಗಳಿವೆ.

ಯಲ್ಲಮ್ಮ ದೇವಿ, ನರಸಿಂಹಸ್ವಾಮಿ ದೇವಾಲಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಅಂಬೇಡ್ಕರ್ ಸಂಘ ಎಂಬ ರೈತಸಂಘವಿದೆ.

## ಸಾವಶೆಟ್ಟಿಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ವಾಯವ್ಯ ದಿಕ್ಕಿಗೆ ೬ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೪೪೬.೩೩ ಹೆಕ್ಟೇರ್. ಆಲದ ದೇವರಹಟ್ಟಿ ಹಾಗೂ ಗೊಲ್ಲರಹಟ್ಟಿಗಳು ಮಜರೆ ಗ್ರಾಮಗಳು. ಇದೊಂದು ವ್ಯಕ್ತಿಸೂಚಕ ಗ್ರಾಮವಾಗಿದ್ದು ಸಾವಶೆಟ್ಟಿ ಎಂಬುವನೇ ಗ್ರಾಮದ ಮೂಲಪುರುಷ. ಹಾಗಾಗಿಯೇ ಗ್ರಾಮಕ್ಕೆ ಅವನ ಹೆಸರು ಬಂದಿದೆ. ಗ್ರಾಮದ ಸುತ್ತ ಬಿಳಿಕಲ್ಲು ಹಾಗೂ ಬಿಳಿ ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಸೇದೋಬಾವಿಯಿದೆ. ತೋಟದಲ್ಲಿ ಕೊಳವೆ ಬಾವಿಗಳನ್ನು ತೋಡಿಸಿ ನೀರು ಹಾಯಿಸುತ್ತಾರೆ. ಒಂದು ಕೆರೆಯಿದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಲಿಂಗಾಯಿತರು ಹಾಗೂ ನಾಯಕ ಜನಾಂಗದವರು ವಾಸಿಸುತ್ತಾರೆ. ಎಲ್ಲರೂ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಒಟ್ಟು ೮೮ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೩೫೨ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೫೨ ಮನೆಗಳನ್ನು ಕಾಣಬಹುದು. ೧೭ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್‌ಗಳಿವೆ. ಊರಿಗೆ ರಸ್ತೆ ಹಾಗೂ ಚರಂಡಿ ವ್ಯವಸ್ಥೆಯಿದೆ. ಶೇ.೨೭ ಜನ ಶೌಚಾಲಯ ವ್ಯವಸ್ಥೆ ಮಾಡಿಕೊಂಡಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮಾಳಿಗೆಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಮದರ್ ಥೆರೇಸಾ ಮತ್ತು ಮಹಾಲಕ್ಷ್ಮಿ ಸ್ತ್ರೀಶಕ್ತಿ ಸಂಘಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೫೮ ರಷ್ಟು ಸಾಕ್ಷರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ. ವೀರಗಲ್ಲುಗಳಿವೆ. ಊರಿಗೆ ಕೋಟೆಯಿತ್ತು. ಆದರೆ ಈಗ ನಶಿಸಿಹೋಗಿದೆ.

ಆಂಜನೇಯಸ್ವಾಮಿ, ಲಕ್ಕಮ್ಮ, ಬಂದಮ್ಮ ದೇವಾಲಯಗಳಿವೆ. ಪ್ರತಿ ವರ್ಷವೂ ಆಂಜನೇಯಸ್ವಾಮಿ ಜಾತ್ರೆ ಮಾಡುತ್ತಾರೆ. ಬಂದಮ್ಮ ದೇವಿ ಜಾತ್ರೆಯನ್ನು ೧೨ ವರ್ಷಗಳಿಗೊಮ್ಮೆ ಮಾಡುತ್ತಾರೆ. ಜಾತ್ರೆಯಲ್ಲಿ ಕಳಸ, ಆರತಿ, ಬಾನ, ಓಕುಳಿ ಜರುಗುತ್ತವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ

ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಮಂಜುಳ ಎಂಬುವರು ಜನಪದ ಗೀತೆಗಳನ್ನು ಹಾಡುತ್ತಾರೆ. ಎಂ.ಸಿ.ಕಲ್ಲೇಶ್ ಎಂಬುವರು ಜನಪದ ಗೀತೆಗಳು, ಭಾವಗೀತೆಗಳು ಹಾಗೂ ಚಿತ್ರಗೀತೆಗಳನ್ನು ಹಾಡುತ್ತಾರೆ.

## ಸಿಂಗದಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ತೀರ್ಥಪುರ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೧೮ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೨೧೬.೧೮ ಚ.ಕಿ.ಮೀ. ಬಯಲುನಾಡಿಗೆ ಸೇರುವ ಈ ಗ್ರಾಮದ ಸುತ್ತ ಕಪ್ಪುಕಲ್ಲು, ಬಿಳಿ ಹಾಗೂ ಕೆಂಪುಮಣ್ಣು ಕಾಣಸಿಗುತ್ತದೆ. ಗ್ರಾಮದ ಸಮೀಪ ಸಾಲು ಬೆಟ್ಟಗಳಿವೆ. ಕರಡಿಗುಡ್ಡ, ನಾಯಿಕಲ್ಲು ಗುಡ್ಡಗಳಿವೆ. ಕಾಡುಕಲ್ಲು ಬಂಡೆಯಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ಕರಡಿ, ಕಾಡುಹಂದಿ, ಕತ್ತೆಕಿರುಬ, ಚಿರತೆ, ಮೊಲ, ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗುಡ್ಡದ ಕಡೆಯಿಂದ ಗಂಟೇನಹಳ್ಳಿ ಕೆರೆಗೆ ಹರಿಯುವ ಸನ್ನಿಹಳ್ಳ ಮತ್ತು ಸಿಂಗದಹಳ್ಳಿ ಕೆರೆಯಿಂದ ಗಂಟೇನಹಳ್ಳಿ ಕೆರೆಗೆ ಹರಿಯುವ ಕೋಡಿಹಳ್ಳ ಎಂಬ ಎರಡು ಹಳ್ಳಗಳು ಹರಿಯುತ್ತವೆ. ಸಿಂಗದಹಳ್ಳಿ ಕೆರೆ, ದಳವಾಯಿ ಕೆರೆ ಎಂಬು ಕರೆಯಲ್ಪಡುವ ಕೆರೆಯಿದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ನಾಯಕ ದೊಡ್ಡ ಸಮುದಾಯವಾಗಿದ್ದು ಕುಂಚಿಟಿಗ ಒಕ್ಕಲಿಗರು, ದಾಸರು, ಸುಡುಗಾಡು ಸಿದ್ದರು, ಗೊಲ್ಲರು ಸಣ್ಣ ಸಮುದಾಯವಾಗಿದ್ದಾರೆ. ಒಟ್ಟು ೯೭ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೪೬೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೬೧ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಬಯಲು ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಟಿಲ್ಲರ್, ಬೈಕ್‌ಗಳಿವೆ. ರಸ್ತೆ ಹಾಗೂ ಚರಂಡಿ ವ್ಯವಸ್ಥೆಯಿದೆ. ಕೆರೆಯಲ್ಲಿ ನೀರಿದ್ದಾಗ ಮೀನುಕೃಷಿ ಮಾಡುತ್ತಾರೆ. ಕೊಬ್ಬರಿ, ತೆಂಗಿನಕಾಯಿ, ಅಡಿಕೆ, ರಾಗಿ ಇಲ್ಲಿನ ವ್ಯಾಪಾರಿ ಸರಕು. ೪ ಜನ ಸರ್ಕಾರಿ ನೌಕರರಿದ್ದು ಶಿಕ್ಷಕ ವೃತ್ತಿಯನ್ನು ಹಾಗೂ ಬೆಂಗಳೂರು ವಿವಿಧ ಫ್ಯಾಕ್ಟರಿಗಳಲ್ಲಿ ದುಡಿಮೆ ಮಾಡುವವರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತೀರ್ಥಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಇಬ್ಬರು ಗ್ರಾಮಪಂಚಾಯ್ತಿ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ತುಂಗಭದ್ರಾ, ಮಾರುತಿ, ಧರಣಿ, ಅನ್ನಪೂರ್ಣೇಶ್ವರಿ ಮುಂತಾದ ಸ್ತ್ರೀಶಕ್ತಿ ಹಾಗೂ ಸ್ವಸಹಾಯ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಾಕ್ಷರತೆ ಪ್ರಮಾಣ ಶೇ.೭೪ ರಷ್ಟಿದೆ. ಡಾ.ವಿಶ್ವನಾಥ ನಾಯಕ್ ಎಂಬುವರು ವಿವಿಧ ಕಾಯಿಲೆಗಳಿಗೆ ಹೋಮಿಯೋಪತಿ ಚಿಕಿತ್ಸೆ ನೀಡುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೬ ಫಲಾನುಭವಿಗಳಿದ್ದಾರೆ. ಚಿಕ್ಕ ಅಂಗಡಿಗಳಿವೆ. ಸೀಬಯ್ಯ ಎಂಬುವರ ಅಡಿಕೆ ತೋಟದಲ್ಲಿ ವೀರಗಲ್ಲು ಹಾಗೂ ಮಾಸಿಕಲ್ಲುಗಳಿವೆ. ಸಮೀಪದಲ್ಲಿ ಹಳೆಯ ಊರಿನ ಅವಶೇಷಗಳಿವೆ.

ಭೂತೇಶ್ವರ ದೇವಸ್ಥಾನವಿದೆ. ಹಳೆ ಊರಿನಲ್ಲಿ ಆಂಜನೇಯ, ಈಶ್ವರನ ಗುಡಿಗಳಿವೆ. ಮಡಿವಾಳ ಮಾಚಿದೇವರ ಮಠ ಇವೆ. ಶ್ರಾವಣದಲ್ಲಿ ಭೂತಪ್ಪನ ಜಾತ್ರೆ ಮಾಡುತ್ತಾರೆ. ಆಗಸ್ಟ್‌ನಲ್ಲಿ ಮಾರಮ್ಮನ ಜಾತ್ರೆ ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗಿರಿಯಮ್ಮ, ತಿಮ್ಮಕ್ಕ, ಜಯಮ್ಮ, ಶಾಂತಮ್ಮ ಎಂಬುವರು ಜನಪದ ಹಾಡುಗಳನ್ನು ಹಾಡುತ್ತಾರೆ.

## ಸಿಂಗದಹಳ್ಳಿ ಎ.ಕೆ. ಕಾಲೋನಿ

ಸಿಂಗದಹಳ್ಳಿ ಎ.ಕೆ. ಕಾಲೋನಿ ಸಿಂಗದಹಳ್ಳಿಯ ಪೂರ್ವಕ್ಕೆ ಗ್ರಾಮಕ್ಕೆ ಹೊಂದಿಕೊಂಡ ಆದಿಕರ್ನಾಟಕ ಜನಾಂಗದ ಒಂದು ಬಡಾವಣೆ. ಇದನ್ನು ಸಿಂಗದಹಳ್ಳಿ ಮಾದಿಗರಹಟ್ಟಿ ಎಂದೂ ಕರೆಯುತ್ತಾರೆ. ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧೮ ಕಿಮೀ ದೂರದಲ್ಲಿದೆ. ಇಲ್ಲಿನ ಜನಸಂಖ್ಯೆ ೧೫೨ ಹೊಂದಿದ್ದು ೨೮ ಮನೆಗಳನ್ನು ಹೊಂದಿದೆ. ಈ ಮನೆಗಳು ಮಣ್ಣಿನ, ಮಾಳಿಗೆ ಹಾಗೂ ಹೆಂಚಿನ, ಶೀಟಿನ ಸ್ವರೂಪದಲ್ಲಿದ್ದು ಸರ್ಕಾರದ ವಸತಿ ಯೋಜನೆಯ ಇಂದಿರಾ ಆವಾಸ್, ಆಶ್ರಯ ಯೋಜನೆಯ ೧೦ ಫಲಾನುಭವಿಗಳಿದ್ದಾರೆ. ಕೃಷಿ ಹಾಗೂ ಕೃಷಿ ಕೂಲಿಯನ್ನು ಆಶ್ರಯಿಸಿರುವ ಇವರು ರಾಗಿ, ಹೆಸರು ಬೆಳೆಯುತ್ತಾರೆ. ಗರಿಕಡ್ಡಿ ಸಿಗಿಯುವುದು ಇದೆ. ಮುತ್ತುಗದ ಎಲೆ ಸಂಗ್ರಹ ಹಾಗೂ ಊಟದ ಎಲೆಗಳನ್ನು ಕಟ್ಟುತ್ತಾರೆ. ಮಹಿಳೆಯರು ಆದಿಶಕ್ತಿ ಸ್ವಸಹಾಯ ಸಂಘ ಮಾಡಿಕೊಂಡಿದ್ದಾರೆ. ರಾಗಿಮುದ್ದೆ ಮುಖ್ಯ ಆಹಾರ. ಸಾಂದರ್ಭಿಕವಾಗಿ ಬಾಡೂಟದ ವ್ಯವಸ್ಥೆಯಿರುತ್ತದೆ. ಶಿಕ್ಷಣ, ಪಡಿತರ ವಿಷಯಗಳಿಗೆ ಸಿಂಗದಹಳ್ಳಿ ಗ್ರಾಮದ ಸಹಯೋಗವಿದೆ. ಶಿಕ್ಷಣ, ಆರೋಗ್ಯ ಇಲಾಖೆಯ ಇಬ್ಬರು ನೌಕರರಿದ್ದಾರೆ. ಕುಡಿಯಲು ಗ್ರಾಮಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆಯಲ್ಲಿ ನೀರು ಪೂರೈಸುತ್ತಾರೆ. ಒಂದು ಕಿರು ಟ್ಯಾಂಕ್ ಇದೆ. ಇದೊಂದು ಶೌಚಾಲಯ ಮುಕ್ತ ಗ್ರಾಮವಾಗಿದ್ದು ಬಯಲು ಶೌಚಾಲಯ ಬಳಸುತ್ತಾರೆ. ತೀರ್ಥಪುರ ಗ್ರಾಮಪಂಚಾಯ್ತಿ ಕ್ಷೇತ್ರಕ್ಕೆ ಸೇರಿದ್ದು ಈ ಗ್ರಾಮದ ಒಬ್ಬರು ಪ್ರತಿನಿಧಿ ಇದ್ದಾರೆ. ಗ್ರಾಮದಲ್ಲಿ ಮಾರಮ್ಮನ ಪೌಳಿಯಿದೆ. ಗ್ರಾಮದ ಭೂತಪ್ಪ, ಆಂಜನೇಯ ದೇವರಿಗೆ ಆರತಿ ಮಾಡುವುದು ವಾಡಿಕೆ. ಜೊತೆಗೆ ಯರೆಕಟ್ಟೆ ರಾಮಪುರದ ಮಾರಿದೇವತೆಯ ಜಾತ್ರೆಯ ಸಂದರ್ಭದಲ್ಲಿ ಎದುರೆತ್ತಿ, ಆರತಿ, ಬಲಿ ಅರ್ಪಿಸುವುದು ಈ ಗ್ರಾಮದ ವಿಶೇಷ. ಚಿಕ್ಕನಾಯಕನಹಳ್ಳಿ – ಹಾಗಲವಾಡಿಗೆ ಬಸ್ ಸಂಪರ್ಕವಿದೆ. ಸಾಕ್ಷರತೆ ಪ್ರಮಾಣ ೬೨.೩ರಷ್ಟಿದೆ. ಯುಗಾದಿ, ದೀಪಾವಳಿ, ದಸರಾ ಹಾಗೂ ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಸುಬೇದಾರ್‌ಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೩೪ ಕಿಮೀ ಅಂತರದಲ್ಲಿದೆ. ಕೆಂಕೆರೆ ಸಮೀಪದ ಬರದಲೇಪಾಳ್ಯದ ಮಜರೆ ಗ್ರಾಮವಾಗಿದೆ. ಕೆಂಕೆರೆ ಗ್ರಾಮಪಂಚಾಯ್ತಿಗೆ ಸೇರಿದೆ. ಕಂಪನಿ ಸರ್ಕಾರದಲ್ಲಿ ಸುಬೇದಾರ್ ಹುದ್ದೆ ನಿರ್ವಹಿಸಿದ ವ್ಯಕ್ತಿ ಈ ಗ್ರಾಮದ ಮೂಲಪುರುಷನಾದ ಕಾರಣ ಆತನ ಹೆಸರಿನಿಂದ ಸುಬೇದಾರ್‌ನ ಪಾಳ್ಯ > ಸುಬೇದಾರ್‌ಪಾಳ್ಯ ಎಂದಾಗಿದೆ. ಇದೊಂದು ಬಯಲುಪ್ರದೇಶ. ವ್ಯವಸಾಯ ಇಲ್ಲಿ ಮುಖ್ಯವಾಗಿದೆ. ಹಾಗಾಗಿ ರಾಗಿ, ಜೋಳ, ಭತ್ತ, ನವಣೆ, ಹಾರಕ ಧಾನ್ಯಗಳನ್ನು ಬೆಳೆಯುತ್ತಾರೆ. ಹಸು, ಎಮ್ಮೆ, ಕುರಿ ಸಾಕುಪ್ರಾಣಿಗಳು. ಭೌಗೋಳಿಕ ವಿಸ್ತೀರ್ಣ ಮುಖ್ಯ ಗ್ರಾಮ ಬರದಲೇಪಾಳ್ಯ ಸರ್ವೆ ನಂ.೯೫೦.೨ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ವೀರಶೈವರು, ಕುರುಬರು, ಉಪ್ಪಾರರು, ನಾಯಕ ಜನಾಂಗದವರು ಇದ್ದು ಒಟ್ಟು ೩೭ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೭೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೮ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಬೈಕ್, ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕೆಂಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ

ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಕರಿಯಮ್ಮ, ಬಸವೇಶ್ವರ ದೇವಾಲಯಗಳಿವೆ. ಹುಳಿಯಾರು ಕೆಂಚಮ್ಮನ ಜಾತ್ರೆ ಆಚರಣೆ, ಉತ್ಸವ ವಿಶೇಷವಾಗಿರುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹಂದಿಗನಡು

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೭ ಕಿಮೀ ಅಂತರದಲ್ಲಿದೆ. ಇದು ಕಂದಾಯ ಗ್ರಾಮ ಬಯಲುನಾಡಾಗಿದೆ. ಕುಶಾಲಪುರ ಎಂಬ ಹೆಸರಿನಿಂದಲೂ ಕರೆಯಲ್ಪಡುತ್ತಿರುವ ಈ ಊರಿನ ಭೌಗೋಳಿಕ ವಿಸ್ತೀರ್ಣ ೮೩೦.೧೫ ಹೆಕ್ಟೇರ್. ಹಂದಿ ಸಾಕುತ್ತಿದ್ದ ವ್ಯಕ್ತಿಯ ವೃತ್ತಿ ಸೂಚಕವಾಗಿ ಹಂದಿನಾಡು ಹಂದಿನಡು ಆಗಿದೆ. ೭೧೪ ಹೆಕ್ಟೇರ್ ಕೃಷಿ ಭೂಮಿಯಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಹೊಸಕೆರೆ ಹಳ್ಳ ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ಬೆರಳೆಣಿಕೆಯಷ್ಟು ತೆರೆದ ಬಾವಿಗಳಿದ್ದು ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ. ೫ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ನಾಯಕ ಸಮುದಾಯ ದೊಡ್ಡದಾಗಿದ್ದು ಬ್ರಾಹ್ಮಣರು, ಮಡಿವಾಳ ಸಣ್ಣ ಸಮುದಾಯವಾಗಿದೆ. ಒಟ್ಟು ೧೫೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೬೮೬ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಕನ್ನಡ ಪ್ರಮುಖ ಭಾಷಾ ಮಾಧ್ಯಮವಾಗಿದೆ. ೧೦ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯನ್ನು ಹೊಂದಿರುತ್ತವೆ.

ಕೃಷಿ ಪ್ರಧಾನವಾದ ಮರಳು ಮಿಶ್ರಿತ ಬಿಳಿ-ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕು ಮತ್ತು ಟೆಂಪೋಗಳನ್ನು ಕಾಣಬಹುದಾಗಿದೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ರೈಲ್ವೇ ಪೊಲೀಸ್ ಅಧಿಕಾರಿ, ಶಿಕ್ಷಣ ಇಲಾಖೆಯಲ್ಲಿ ಮತ್ತು ಸರ್ಕಾರಿ ನೌಕರಿಯಲ್ಲಿರುವವರಿದ್ದಾರೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ಬರಕನಹಾಳ್ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶಿಕ್ಷಣ, ಸಾರಿಗೆ, ಕೆಇಬಿ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ. ಕೆಂಪಮ್ಮ ದೇವಿ, ಆದಿಶಕ್ತಿ ಹಾಗೂ ಕರಿಯಮ್ಮ ಸ್ತ್ರೀಶಕ್ತಿ ಸಂಘಗಳು ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೨% ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೯೪ ಫಲಾನುಭವಿಗಳಿದ್ದಾರೆ.

ಬಸವೇಶ್ವರ ದೇವಾಲಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ನರೇಗಾ ಯೋಜನೆಯಡಿ ಗ್ರಾಮದಲ್ಲಿ ರಸ್ತೆ, ಒಳಚರಂಡಿಗಳು ನಡೆದಿರುತ್ತವೆ. ಜಿಲ್ಲಾ

ಮುಖ್ಯರಸ್ತೆ ಸಂಪರ್ಕವಿದ್ದು ಖಾಸಗಿ ಸ್ವಂತ ವಾಹನಗಳು ಸಾರಿಗೆ ಸಂಪರ್ಕದ ಮೂಲವಾಗಿದೆ.

## ಹುಮ್ಲಾನಾಯ್ಕನ ತಾಂಡ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೬ ಕಿಮೀ ಅಂತರದಲ್ಲಿದೆ. ಹುಮ್ಲಾನಾಯಕ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ಈ ಹೆಸರು ಬಂದಿದೆ. ಇದು ದಸೂಡಿ ಮಜರೆ ಗ್ರಾಮ. ಈ ಗ್ರಾಮಕ್ಕೆ ನಾನ್ಯನಾಯಕನ ತಾಂಡ್ಯ ಗ್ರಾಮ ಸೇರ್ಪಡೆಯಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಒಟ್ಟು ೨೦೦ ಮನೆಗಳನ್ನು ಹೊಂದಿದೆ. ಬೆರಳೆಣಿಕೆಯಷ್ಟು ತೆರೆದ ಬಾವಿಗಳಿದ್ದು ಕೆಲವು ಬತ್ತಿ ಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗೆ ಅಲ್ಪ ನೀರಿನ ಮೂಲಗಳಾಗಿವೆ.

ಲಂಬಾಣಿ ಸಮುದಾಯವೇ ಪ್ರಮುಖವಾಗಿದ್ದು ಕನ್ನಡ ಮತ್ತು ಲಂಬಾಣಿ ಭಾಷೆಗಳನ್ನು ಮಾತನಾಡುತ್ತಾರೆ. ೨೦೧೧ ರ ಜನಗಣತಿಯ ಪ್ರಕಾರ ೫೦೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ೧೩೦ ಮನೆಗಳಿದ್ದು ಅವುಗಳಲ್ಲಿ ಗುಡಿಸಲು, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೪೩ ಮನೆಗಳನ್ನು ಕಾಣಬಹುದು. ೧೨ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ.

ಕೃಷಿ ಪ್ರಧಾನವಾದ ಕೆಂಪು ಮಿಶ್ರಿತ ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕೃಷಿ ಕೂಲಿಕಾರ್ಮಿಕರಿದ್ದಾರೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದಸೂಡಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಆಟೋರಿಕ್ಷಾ, ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ೨ ಸ್ತ್ರೀಶಕ್ತಿ ಸಂಘ, ಖಾಸಗಿ ಬ್ಯಾಂಕು ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಶ್ರೀ ಸೇವಾಲಾಲ್ ದೇವಾಲಯವಿದ್ದು ಸೇವಾಲಾಲ್ ಜಾತ್ರೆಯನ್ನು ಆಚರಿಸುತ್ತಾರೆ. ತೇರು-ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹನುಮಂತನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೨೨ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೫೫೭.೩೭ ಹೆಕ್ಟೇರ್. ಈ ಸ್ಥಳದಲ್ಲಿ ಹನುಮಂತದೇವರು ನೆಲೆಸಿದ್ದಾನೆ. ಆತನ ಸುತ್ತಮುತ್ತ ನೆಲೆಸಿದ ಜನವಸತಿಯೇ ಹನುಮಂತನಹಳ್ಳಿ ಆಯಿತೆಂದು ಗ್ರಾಮಸ್ಥರು ಹೇಳುತ್ತಾರೆ. ಇದೊಂದು ಬಯಲುನಾಡಿಗೆ ಸೇರಿದ ಗ್ರಾಮವಾಗಿದ್ದು ಕಪ್ಪು-ಬಿಳಿ ಕಲ್ಲು, ಕಪ್ಪು-ಬಿಳಿ ಮಣ್ಣು ಕಂಡುಬರುತ್ತದೆ. ಪೂರ್ವ ಹಾಗೂ ಪಶ್ಚಿಮದಲ್ಲಿ ಗುಡ್ಡಗಳಿವೆ. ಅವಕ್ಕೆ ಮೂಡುಗಡೆ ಗುಡ್ಡ, ಪಡುವಗಡೆ ಗುಡ್ಡ ಎನ್ನಲಾಗುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ

ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಸುತ್ತ ಕೆಂಬಾರೆ ಹಳ್ಳ, ದೊಡ್ಡಹಳ್ಳ, ಗೋಕಟ್ಟೆ ಹಳ್ಳ ಎಂಬ ೩ ಹಳ್ಳಗಳು ಹರಿಯುತ್ತವೆ. ಒಂದು ತೆರೆದ ಬಾವಿಯಿದೆ. ಎರಡು ಕೊಳವೆ ಬಾವಿಗಳಿವೆ. ದೊಡ್ಡಕೆರೆ, ಸಣ್ಣಕೆರೆ ಎಂಬ ೨ ಕೆರೆಗಳಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೯ ಸಿಸ್ಟನ್‌ಗಳಿವೆ. ೫೬ ನಲ್ಲಿಗಳನ್ನು ಅಳವಡಿಸಲಾಗಿದೆ.

ಒಟ್ಟು ೮೯ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೩೯೧ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಗುಡಿಸಲು, ಮಣ್ಣು-ಕಲ್ಲಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೨೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಬಯಲು ಶೌಚಾಲಯ ಬಳಸುತ್ತಾರೆ.

ನಾಯಕ ಜನಾಂಗ ಇಲ್ಲಿನ ದೊಡ್ಡ ಸಮುದಾಯ ಅಲ್ಲದೆ ಕುಂಚಿಟಿಗ ಒಕ್ಕಲಿಗರು, ಮಡಿವಾಳರು, ಆದಿಕರ್ನಾಟಕ, ವಡ್ಡರು ಇತ್ಯಾದಿ ಸಣ್ಣ ಸಮುದಾಯದವರೂ ವಾಸಿಸುತ್ತಿದ್ದಾರೆ. ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ದ್ವಿಚಕ್ರ ವಾಹನಗಳಿವೆ. ಪೊಲೀಸ್, ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುವವರಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಂದಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಕಂದಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ರಾಮನಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ರಾಮನಹಳ್ಳಿ, ಕಾತ್ರಿಕೆಹಾಳ್, ಕಂದಿಕೆರೆ ಹಾಗೂ ಚಿಕ್ಕನಾಯಕನಹಳ್ಳಿಗೆ ರಸ್ತೆ ಮಾರ್ಗವಿದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ದ್ಯಾವಲಾಂಬ, ಮಾರುತಿ, ಕೆಎನ್‌ಆರ್, ಸಿಂಗದಹಳ್ಳಿ, ರಾಜಕುಮಾರ್, ಧರ್ಮಸ್ಥಳ ಸಂಘ ಮುಂತಾದ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೮೬ ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ.

ಹಿಪ್ಪೆಕಲ್ಲು ಎಂಬ ಹಳೆಯ ಕಲ್ಲು ಇದೆ. ಇದಕ್ಕೆ ಜನ ಭಯ ಭಕ್ತಿ ವ್ಯಕ್ತಪಡಿಸುತ್ತಾರೆ. ಹಿಂದೆ ಊರಿನಲ್ಲಿ ಕೋಟೆಯಿತ್ತು ಎನ್ನುತ್ತಾರೆ. ಈಗ ನಶಿಸಿಹೋಗಿದೆ. ಆಂಜನೇಯಸ್ವಾಮಿ ಹಾಗೂ ಕೆಂಚರಾಯಸ್ವಾಮಿ ದೇವಾಲಯಗಳಿವೆ. ಯುಗಾದಿ ತರುವಾಯದ ೮ನೇ ದಿನಕ್ಕೆ ಆಂಜನೇಯಸ್ವಾಮಿ ರಥೋತ್ಸವ ನಡೆಯುತ್ತದೆ. ಈ ಸಂದರ್ಭದಲ್ಲಿ ನೂರೊಂದೆಡೆ ಸೇರೆ, ಕಂಕಣ ಕಟ್ಟುವುದು ಓಕಳಿ ಬಾನಗಳು ಜರುಗುತ್ತವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹರೇನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಚೌಳಕಟ್ಟೆ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೦ ಕಿಮೀ ಅಂತರದಲ್ಲಿದೆ. ಹರೇವಾದ್ಯ ನುಡಿಸುವ ಕಲಾವಿದರು ಆರಂಭದಲ್ಲಿದ್ದು ಈ ಹೆಸರಿಗೆ ಕಾರಣವಾಗಿದೆ ಆದರೆ ಇಂದು ಹರೆ ವಾದ್ಯ ಕಲಾವಿದರು ಇರುವುದಿಲ್ಲ. ಭೌಗೋಳಿಕ ವಿಸ್ತೀರ್ಣ ೨೮೦.೮೬ ಹೆಕ್ಟೇರ್. ಕೆಂಪು ಮಣ್ಣನ್ನು ಹೊಂದಿ ಕೃಷಿಗೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ

ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಹರೇನಹಳ್ಳಿ ಹಳ್ಳ, ೨ ತೆರೆದ ಬಾವಿ, ೪೦ ಕೊಳವೆ ಬಾವಿಗಳಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಲಿಂಗಾಯಿತ ಸಮುದಾಯದವರು ದೊಡ್ಡ ಸಮುದಾಯವಾಗಿದ್ದು ಕಮ್ಮಾರರು ಇದ್ದಾರೆ. ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಒಟ್ಟು ೮೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೦೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೨ ಕಾಂಕ್ರೀಟ್, ೧೮ ಕಲ್ಲಿನ, ೬೦ ಹೆಂಚಿನ ಮನೆಗಳಿವೆ. ೨೦ ಮನೆಗಳಲ್ಲಿ ಶೌಚಾಲಯವಿದೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಭಾಗ್ಯಜ್ಯೋತಿ ವಿದ್ಯುತ್‌ನ ಫಲಾನುಭವಿಗಳಿದ್ದಾರೆ. ೨ ತೆರೆದ ಬಾವಿ, ೪ ಕಿರು ವಾಟರ್ ಟ್ಯಾಂಕ್‌ಗಳಿವೆ. ಆಧುನಿಕ ಡೈರಿಯಿದೆ. ಕಮ್ಮಾರಿಕೆ ಇದೆ. ಇಬ್ಬರು ಶಿಕ್ಷಕರಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಚೌಳಕಟ್ಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಮತ್ತು ಒಬ್ಬರು ಗ್ರಾಮಪಂಚಾಯ್ತಿ ನೌಕರರ ಕಾರ್ಯನಿರ್ವಹಿಸುತ್ತಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಚೌಳಕಟ್ಟೆ ಅಂಚೆ ಸಂಪರ್ಕ ಕಲ್ಪಿಸಿದೆ. ಜಿಲ್ಲಾ ಮುಖ್ಯ ರಸ್ತೆ, ಕಚ್ಚಾ ರಸ್ತೆಗಳಿವೆ. ಸ್ತ್ರೀಶಕ್ತಿ ಸಂಘಗಳು ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ. ಗ್ರಾಮದ ಹೊರವಲಯದಲ್ಲಿ ಒಂದು ವೀರಗಲ್ಲಿನ ಚಿತ್ರವಿದ್ದು ಸಾಂದರ್ಭಿಕವಾಗಿ ಗ್ರಾಮಸ್ತರು ಪೂಜಿಸುತ್ತಾರೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಒಟ್ಟು ಸಾಕ್ಷರರ ಪ್ರಮಾಣ ೭೨% ಇದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಛತ್ರಗಳು, ವಸತಿಗಳು, ೩ ಅಂಗಡಿಗಳಿವೆ.

ಆಂಜನೇಯಸ್ವಾಮಿ, ಈಶ್ವರಲಿಂಗ ದೇವಾಲಯಗಳಿವೆ. ಹುಲಿಕಲ್ಲಮ್ಮ ದೇವಿಯವರ ಜಾತ್ರೆಯಲ್ಲಿ ಈ ಗ್ರಾಮದ ಜನರು ಭಾಗವಹಿಸುತ್ತಾರೆ. ಹುಲಿಕಲ್ಲಮ್ಮ ದೇವರ ಉತ್ಸವ, ದೇವರ ಎದುರೆತ್ತಿ, ಆರತಿ, ಬಾನ, ಹರಕೆ ಸಂಪ್ರದಾಯವಿದೆ. ದೇವರ ಉತ್ಸವ, ಸೋಮನ ಕುಣಿತ, ಅಸಾದಿ ಕುಣಿತ ಆಚರಣೆಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹರೇಹಳ್ಳಿ ಗೇಟ್

ಹರೇಹಳ್ಳಿ ಹಂದನಕೆರೆ ಹೋಬಳಿಗೆ ಸೇರಿದ ಒಂದು ಕಂದಾಯ ಗ್ರಾಮ. ಇದರ ಹೊರಾಂಗಣದಲ್ಲಿ ಬಸ್ ಸಂಪರ್ಕ ರಸ್ತೆಯ ಬದಿಗೆ ಪ್ರಯಾಣಿಕರ ಅನುಕೂಲಕ್ಕಾಗಿ ತಂಗುದಾಣ ಒಳರಸ್ತೆಯಿದ್ದು ಅದರ ಬದಿಗೆ ನಿರಾಶ್ರಿತರು ಇಂದು ಜನವಸತಿಯನ್ನಾಗಿ ಮಾಡಿಕೊಂಡು ಗ್ರಾಮದ ಸ್ವರೂಪ ಪಡೆದುಕೊಂಡಿದೆ. ಹಾಗಾಗಿ ಹರೇಹಳ್ಳಿ ಗೇಟ್ ಎಂದು ಮೂಲ ಹೆಸರಿನೊಂದಿಗೆ ಕರೆದುಕೊಂಡ ಜನವಸತಿ ಬೆಳೆದಿದೆ. ಒಟ್ಟು ೨೩ ಮನೆಗಳಿದ್ದು ಇವೆಲ್ಲವೂ ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಕೆಲವು ಸೋಗೆ ಗುಡಿಸಲಿನ ಮನೆಗಳಿವೆ. ಕೆಲವರು ಆಶ್ರಯ, ಅಂಬೇಡ್ಕರ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಉಚಿತ ವಿದ್ಯುತ್ ಸೌಕರ್ಯ ಕಲ್ಪಿಸಿದೆ. ಕುಡಿಯಲು ಚೌಳಕಟ್ಟೆ ಗ್ರಾಮಪಂಚಾಯ್ತಿಯಿಂದ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಪೂರೈಸಲಾಗಿದೆ. ೨೧ ಮನೆಗಳಿದ್ದು ವೀರಶೈವ, ನಾಯಕ, ಆದಿಕರ್ನಾಟಕ, ಮುಸ್ಲಿಂ ಕುಟುಂಬಗಳೂ ಇವೆ. ಮುಖ್ಯವಾಗಿ ವ್ಯವಸಾಯ ಇವರ ಬದುಕು.

ಗೂಡಂಗಡಿ, ಟೀ ಹೋಟೆಲ್‌ಗಳನ್ನು ನಡೆಸುತ್ತಾರೆ. ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ರೊಟ್ಟಿ ಬಳಸುತ್ತಾರೆ. ವಿಶೇಷ ಸಾಂದರ್ಭಿಕವಾಗಿ ಹೋಳಿಗೆ, ಬಾಡೂಟ ಬಳಸುತ್ತಾರೆ. ಹಸು, ಎಮ್ಮೆ, ಕುರಿ ಸಾಕುಪ್ರಾಣಿಗಳು. ಚಿಕ್ಕನಾಯಕನಹಳ್ಳಿಗೆ ೨೧ ಕಿಮೀ ದೂರದಲ್ಲಿದೆ. ಇದರ ಭೌಗೋಳಿಕ ವ್ಯಾಪ್ತಿ ಮುಖ್ಯ ಗ್ರಾಮ ಹರೇಹಳ್ಳಿಯ ೨೮೦.೬೬ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಪೂರ್ಣಭೂಮಿ ಕೃಷಿಭೂಮಿಯಲ್ಲಿದೆ. ೬ ಬೋರ್‌ವೆಲ್‌ಗಳಿವೆ. ಹಂದನಕೆರೆ ಜಿಲ್ಲಾ ಪಂಚಾಯ್ತಿ ತಾಲ್ಲೂಕು ಪಂಚಾಯ್ತಿ ಹಾಗೂ ಚೌಳಕಟ್ಟೆ ಗ್ರಾಮಪಂಚಾಯ್ತಿಗೆ ಸೇರಿದ್ದು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಚೌಳಕಟ್ಟೆ ಅಂಚೆ ಸಂಪರ್ಕ ಕಲ್ಪಿಸಿದೆ. ಹುಳಿಯಾರು–ಬಿದರೆಗುಡಿ ಮಾರ್ಗವಾಗಿ ಬಸ್ ಸಂಚಾರವಿದೆ. ರಾಗಿ, ಜೋಳ, ಹೆಸರು ಮುಖ್ಯ ಬೆಳೆ. ತೆಂಗಿನಕಾಯಿ, ಹುಣಸೆಹಣ್ಣು ವ್ಯಾಪಾರಿ ಸರಕಾಗಿದೆ. ಸಮುದಾಯ ಸೌಲಭ್ಯಗಳಾದ ವಿಧವಾವೇತನ, ವೃದ್ಧಾಪ್ಯ ವೇತನಗಳ ಫಲಾನುಭವಿಗಳಿದ್ದಾರೆ. ಶಿಕ್ಷಣ, ಪಡಿತರ ವ್ಯವಸ್ಥೆಗೆ ಮುಖ್ಯ ಗ್ರಾಮಕ್ಕೆ ಹೋಗುತ್ತಾರೆ. ಧಾರ್ಮಿಕವಾಗಿ ಹುಲಿಕಲ್ಲಮ್ಮನಿಗೆ ಎದುರೆತ್ತಿ, ಆರತಿ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ, ಗೌರಿ–ಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ. ಗ್ರಾಮದ ಸಾಕ್ಷರತೆ ೬೧% ರಷ್ಟಿದೆ. ವಾರ್ಷಿಕ ಮಳೆ ಪ್ರಮಾಣ ೫೬೪ ಮಿಮೀ, ಚಳಿ ೧೩ ಡಿಗ್ರಿ ಸೆಂಟಿಗ್ರೇಡ್, ಬಿಸಿಲು ೩೭ ಡಿಗ್ರಿ ಸೆಂಟಿಗ್ರೇಡ್ ಇದೆ. ಬಯಲು ಪ್ರದೇಶ. ಕೆಂಪು ಮಿಶ್ರಿತ ಮರಳು ಮಣ್ಣನ್ನು ಹೊಂದಿದೆ.

## ಹರೇನಹಳ್ಳಿ ಗೊಲ್ಲರಹಟ್ಟಿ

ಹರೇನಹಳ್ಳಿಯ ಹೊರವಲಯದಲ್ಲಿ ಕಾಡುಗೊಲ್ಲರು ಪ್ರತ್ಯೇಕವಾಗಿ ಜನವಸತಿ ನಿರ್ಮಿಸಿಕೊಂಡು ವಾಸಿಸುತ್ತಿರುವ ಗ್ರಾಮ. ಇದು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೧ ಕಿಮೀ ದೂರದಲ್ಲಿದೆ. ಮಜರೆ ಗ್ರಾಮ. ಹರೇನಹಳ್ಳಿಗೆ ಹೊಂದಿಕೊಂಡು ಗೊಲ್ಲರ ವಸತಿಗಳಾಗಿರುವುದರಿಂದ ಹರೇನಹಳ್ಳಿ ಗೊಲ್ಲರಹಟ್ಟಿ ಎಂದು ಕರೆಯಲಾಗುವುದು. ಬಯಲು ಪ್ರದೇಶ. ಕೃಷಿ ಮುಖ್ಯ ಕೆಲಸ. ವಾರ್ಷಿಕ ೫೬೪ ಮಿಮೀ ಮಳೆ ಬೀಳುತ್ತದೆ. ಬಿಸಿಲು ೩೭ ಡಿಗ್ರಿ, ಚಳಿ ೧೩ ಡಿಗ್ರಿ ಸೆಂಟಿಗ್ರೇಡ್. ಹಸು, ಕುರಿ, ಮೇಕೆ ಸಾಕುಪ್ರಾಣಿಗಳು. ಈ ಭಾಗದಲ್ಲಿ ನರಿ, ಮೊಲ, ಜಿಂಕೆ, ಚಿರತೆ, ಕರಡಿ ಕಾಡುಪ್ರಾಣಿಗಳು. ರಾಗಿ, ಭತ್ತ, ಹೆಸರು, ಹುರುಳಿ ಆಹಾರ ಬೆಳೆಗಳು. ತೆಂಗಿನ ತೋಟಗಾರಿಕೆ ಕೊಬ್ಬರಿ ವ್ಯಾಪಾರಿ ಸರಕು. ಕುರಿ ವ್ಯಾಪಾರವೂ ಇದೆ. ೩೨ ಮನೆಗಳಿವೆ. ಎಲ್ಲವೂ ಕಾಡುಗೊಲ್ಲರವು. ೨೩ ಮನೆಗಳ ಹೆಂಚಿನ, ಶೀಟಿನ ಮನೆಗಳು. ಸೋಗೆ ಗುಡಿಸಲು ಹಾಗೂ ಮಾಳಿಗೆ ಮನೆಗಳು ೯ ಇವೆ. ಆಶ್ರಯ, ಜನತಾ ವಸತಿ ಯೋಜನೆಯ ಫಲಾನುಭವಿಗಳು ಆರು ಮನೆಗಳಿವೆ. ಭಾಗ್ಯಜ್ಯೋತಿ ಯೋಜನೆಯ ಫಲಾನುಭವಿಗಳಿದ್ದಾರೆ. ೧೯೭ ಜನಸಂಖ್ಯೆ ಹೊಂದಿದೆ. ಕುಡಿಯಲು ಚೌಳಕಟ್ಟೆ ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಲ್ಲಿ ಒದಗಿಸಲಾಗುತ್ತದೆ. ಒಂದು ಕೊಳವೆ ಬಾವಿ, ಸಿಸ್ಟನ್ ಇದೆ. ಕೈಪಂಪು ಇದೆ. ರಾಗಿಮುದ್ದೆ, ಅನ್ನ, ರೊಟ್ಟಿ ಮುಖ್ಯ ಆಹಾರ. ಮಾಂಸಾಹಾರ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಶಿಕ್ಷಣ, ಪಡಿತರವನ್ನು ಹರೇನಹಳ್ಳಿಯಿಂದ ಪಡೆಯುತ್ತಾರೆ. ತುಮಕೂರು ಲೋಕಸಭೆ, ಚಿಕ್ಕನಾಯಕನಹಳ್ಳಿ ವಿಧಾನಸಭೆ, ಹಂದನಕೆರೆ ಹೋಬಳಿ, ಹಂದನಕೆರೆ ಜಿಲ್ಲಾ, ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ೧೩೮ ಜನಸಂಖ್ಯೆ ಹೊಂದಿವೆ. ಚೌಳಕಟ್ಟೆ ಅಂಚೆ ಸಂಪರ್ಕ ಒದಗಿಸಿದೆ. ಹಂದನಕೆರೆ ಮಾರ್ಗದಲ್ಲಿ ಜಿಲ್ಲಾ ಪಂಚಾಯ್ತಿ ರಸ್ತೆಗೆ ಇಲ್ಲಿಂದ ಕಚ್ಚಾರಸ್ತೆ ಇದೆ. ವಿಧವಾ ವೇತನ, ವೃದ್ಧಾಪ್ಯ ವೇತನಗಳ ಫಲಾನುಭವಿಗಳಿದ್ದಾರೆ. ಯುಗಾದಿ, ಶಿವರಾತ್ರಿ, ದಸರಾ ಹಬ್ಬ ಆಚರಿಸುತ್ತಾರೆ. ದೀಪಾವಳಿಯಂದು ಜುಂಜಪ್ಪ ದೇವರಿಗೆ ದೀಪ ಏರಿಸುವ, ಜನ್ನಿಗೆ ಮೀಸಲು, ಹಿರಿಯರಿಗೆ ಹಾಲು–ತುಪ್ಪ ಬಿಡುವುದು ಹೀಗೆ ಆರು ದಿನಗಳ ವಿಶೇಷ ಆಚರಣೆ ಇರುತ್ತದೆ. ಗ್ರಾಮದ ಸಾಕ್ಷರತೆ ೫೯% ರಷ್ಟಿದೆ.

## ಹಾರೋಗೊಂಡನಹಳ್ಳಿ

ಹಾರೋಗೊಂಡನಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೧೩ ಕಿಮೀ ದೂರದಲ್ಲಿದೆ. ಇದು ಮದನಮಡು ಮಜರೆ ಗ್ರಾಮ. ಅರುವೇಗೌಡ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ಅರಿವೆ > ಹಾರೋ ಆಗಿ ಹಾರೋಗೊಂಡನಹಳ್ಳಿ ಎಂದಾಗಿದೆ. ಕುರುಚಲು ಕಾಡಿನ ಕಂದು ಭೂಪ್ರದೇಶ. ಇದರ ಭೌಗೋಳಿಕ ವ್ಯಾಪ್ತಿ ೨೪೩ ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ. ವಾರ್ಷಿಕ ಮಳೆ ೩೭೬.೬ ಬಿಸಿಲು ೩೭ ಡಿಗ್ರಿ ಸೆಂಟಿಗ್ರೇಡ್. ಚಳಿ ೧೩ ಡಿಗ್ರಿ ಸೆಂಟಿಗ್ರೇಡ್. ಕುಡಿಯಲು ರಾಮನಹಳ್ಳಿ ಗ್ರಾಮ ಪಂಚಾಯ್ತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಪೂರೈಸಲಾಗುತ್ತಿದೆ. ಒಕ್ಕಲಿಗ, ನಾಯಕ, ಉಪ್ಪಾರ, ಅಗಸ, ಆದಿಕರ್ನಾಟಕ ಜನಾಂಗದ ೨೩ ಮನೆಗಳಿದ್ದು ೧೧೭ ಜನಸಂಖ್ಯೆ ಹೊಂದಿದೆ. ಇವು ಕಲ್ಲಿನ, ಹೆಂಚಿನ ಸ್ವರೂಪದಲ್ಲಿದೆ. ೬ ಮನೆಗಳು ಜನತಾ, ಇಂದಿರಾ ಆವಾಸ್ ವಸತಿ ಯೋಜನೆಯ ೪೬ ಫಲಾನುಭವಿಗಳಿದ್ದಾರೆ. ೪ ವಿದ್ಯುತ್ ಕಂಬಗಳಿದ್ದು

ಭಾಗ್ಯಜ್ಯೋತಿ ವಿದ್ಯುತ್ ಯೋಜನೆಯ ಫಲಾನುಭವಿಗಳಿದ್ದಾರೆ. ೪ ವಿದ್ಯುತ್ ಕಂಬಗಳಿದ್ದು ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕವನ್ನು ಎಲ್ಲ ಮನೆಗಳೂ ಪಡೆದಿವೆ. ಶಿಕ್ಷಣ, ಸಾರಿಗೆ, ಪಡಿತರಕ್ಕೆ ಪಕ್ಕದ ಅಜ್ಜಿಗುಡ್ಡೆ ಗ್ರಾಮಕ್ಕೆ ಹೋಗಬೇಕಾಗಿದೆ. ಆಡಳಿತಾತ್ಮಕವಾಗಿ ಕಂದಿಕೆರೆ ಹೋಬಳಿ, ತುಮಕೂರು ಲೋಕಸಭೆ, ಚಿಕ್ಕನಾಯಕನಹಳ್ಳಿ ವಿಧಾನಸಭೆ, ಕಂದಿಕೆರೆ ಜಿಲ್ಲಾ ಪಂಚಾಯ್ತಿ, ತೀರ್ಥಪುರ ತಾಲ್ಲೂಕು ಪಂಚಾಯ್ತಿ ಕಂದಿಕೆರೆ ಗ್ರಾಮಪಂಚಾಯ್ತಿಗೆ ಸೇರಿದೆ. ತೀರ್ಥಪುರದಿಂದ ಅಂಚೆ ಸಂಪರ್ಕ ಹೊಂದಿದೆ. ಅಜ್ಜಿಗುಡ್ಡೆ, ಮದನಮಡು ಮಾರ್ಗವಾಗಿ ಕಚ್ಚಾರಸ್ತೆ ಸಂಪರ್ಕವಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಹೋಳಿಗೆ, ಬಾಡೂಟ ಪಾಯಸ ವಿಶೇಷ ಸಾಂದರ್ಭಿಕ ಭೋಜನ. ಎಲ್ಲರೂ ಕನ್ನಡ ಭಾಷೆಯನ್ನು ಮುಖ್ಯವಾಗಿ ಮಾತನಾಡುತ್ತಾರೆ. ರಾಗಿ, ಹೆಸರು, ಜೋಳ, ತೊಗರಿ, ಶೇಂಗಾ ಬೆಳೆಯುತ್ತಾರೆ. ತೆಂಗು, ಅಡಿಕೆ ವ್ಯಾಪಾರಿ ಸರಕಾಗಿದೆ. ವಿಧವಾ ವೇತನ, ಸಂಧ್ಯಾ ಸುರಕ್ಷೆ ವೇತನಗಳ ೧೬ ಜನ ಫಲಾನುಭವಿಗಳಿದ್ದಾರೆ. ಗ್ರಾಮದ ಸಾಕ್ಷರತೆ ಶೇ. ೫೭ ರಷ್ಟಿದೆ. ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಹೊನ್ನಶೆಟ್ಟಿಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೨೯ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೬೦೦ ಹೆಕ್ಟೇರ್. ಇದು ಕಂದಾಯ ಗ್ರಾಮ. ಸಂತೆಹಳ್ಳ ಎಂಬ ಹಳ್ಳವಿದ್ದು ಅದು ಹಿಂದೆ ಸಂತೆಯ ಬೀದಿಯಾಗಿ ಅಲ್ಲಿ ಸಂತೆ ನಡೆದಿರಬಹುದು. ಜೊತೆಗೆ ಹೊನ್ನು, ಮುತ್ತು ರತ್ನಗಳನ್ನು ಶೆಟ್ರು ಮಾರುತ್ತಿದ್ದರೆಂದು ಕಾಲಕ್ರಮೇಣ ಈ ಗ್ರಾಮವು ಹೊನ್ನಿನಶೆಟ್ಟಿಯಹಳ್ಳ ಕರೆಯಲ್ಪಟ್ಟಿತ್ತು. ಅದು ಜನಪದರ ಬಲೆಗೆ ಸಿಲುಕಿ ಹೊನ್ನಶೆಟ್ಟಿಹಳ್ಳಿಯಾಗಿ ಮಾರ್ಪಾಟಾಗಿತ್ತೆಂದು ಊಹಿಸಲಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಈ ಊರಿನ ಪಕ್ಕದಲ್ಲಿ ಸಿದ್ದರಬೆಟ್ಟವಿದ್ದು ಅಲ್ಲಿ ವಿಶೇಷವಾಗಿ ನಗಾರಿ ಕಲ್ಲು, ದಪಾನಿ ಕಲ್ಲು, ಮುಚ್ಚಳಿಕೆ ಕಲ್ಲು, ಸೂಳೆಕಲ್ಲುಗಳನ್ನು ಕಾಣಬಹುದು.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಸಂತೆಹಳ್ಳ, ಚೌಲಿಹಳ್ಳಿ, ಹೊಂಗೆಹಳ್ಳಗಳು ಹಾಗೂ ಹುಣಸೆಕಟ್ಟೆ, ಕುಂಬಾರಕಟ್ಟೆ, ಅಣ್ಣಯ್ಯನ ಕಟ್ಟೆ, ಹತ್ತಿಕಟ್ಟೆಗಳೆಂಬ ಕೆರೆಗಳನ್ನು ಇಂದಿಗೂ ಕಾಣಬಹುದು. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ವೀರಶೈವ ಲಿಂಗಾಯಿತರು ದೊಡ್ಡ ಸಮುದಾಯದಲ್ಲಿದ್ದರೆ ನಾಯಕ ಜನಾಂಗದ ಸಣ್ಣ ಸಮುದಾಯ. ಇಲ್ಲಿನ ಭಾಷೆ ಕನ್ನಡವಾಗಿದೆ. ಒಟ್ಟು ೧೫೪ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೪೩೨ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೭೨ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೫೪ ಮನೆಗಳಲ್ಲಿ ಶೌಚಾಲಯ ವ್ಯವಸ್ಥೆಯಿದೆ. ಕಚ್ಚಾರಸ್ತೆಯಾದ ಹಂದನಕೆರೆ ತೋಟದಮನೆ, ಚೌಳಕಟ್ಟೆಯ ಮಾರ್ಗವು ಒಂದೇ ಒಂದು ಮಾತ್ರ ಇದೆ. ೧೮ ವಿದ್ಯುತ್ ಕಂಬಗಳಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ.

ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದೊಡ್ಡ ಎಣ್ಣೆಗೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಚೌಳಕಟ್ಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಚೌಳಕಟ್ಟೆಯಿಂದ ಅಂಚೆ ಸಂಪರ್ಕ ಹೊಂದಿದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು

ಕಾಣಬಹುದು. ೨ ಸ್ತ್ರೀಶಕ್ತಿ ಸಂಘಗಳು, ೨ ಧರ್ಮಸ್ಥಳ ಗ್ರಾಮೀಣ ಉದ್ಯೋಗ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೬ ಸಾಕ್ಷರತೆಯಿದೆ. ಹುಳಿಯಾರು ಮಾರ್ಗವಾಗಿ ಜಿಲ್ಲಾ ಮುಖ್ಯರಸ್ತೆ, ಸಾರಿಗೆ ಸಂಪರ್ಕವಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೩ ಫಲಾನುಭವಿಗಳಿದ್ದಾರೆ.

ಸಿದ್ಧಲಿಂಗೇಶ್ವರ, ಆಂಜನೇಯ, ಈಶ್ವರಲಿಂಗ, ಭೈರಲಿಂಗೇಶ್ವರ, ದುರ್ಗಮ್ಮನ ದೇವಾಲಯವಿದೆ. ಪ್ರತಿ ವರ್ಷ ಹೋಳಿ ಹಬ್ಬದಂದು ಕಾಮನ ಹುಣ್ಣಿಮೆಯಲ್ಲಿ ಸಿದ್ದೇಶ್ವರನ ಜಾತ್ರೆಯನ್ನು ನಡೆಸುತ್ತಾರೆ. ಇಲ್ಲಿನ ವಿಶೇಷವೇನೆಂದರೆ ಹೊನ್ನಶೆಟ್ಟಿಹಳ್ಳಿಯ ಭಕ್ತರಿಗೆ ಭಂಗಿಸೊಪ್ಪು ಬೆರೆತ ಅನ್ನವನ್ನು ಬೆಲ್ಲ, ಬಾಳೆಹಣ್ಣು, ತುಪ್ಪ ಇವುಗಳ ಜೊತೆ ಸೇರಿಸಿ ಪ್ರತಿಯೊಬ್ಬ ಭಕ್ತನೂ ಏಳು ಎಡೆಗಳನ್ನು ಇಟ್ಟು ಬೆಳಗಿನ ಜಾವ ಯಾರಿಗೂ ಕಾಣದಂತೆ ಆಹಾರಗಳನ್ನು ತಯಾರಿಸಿ ಬೆಟ್ಟದ ಸಿದ್ದೇಶ್ವರನ ಮುಂದೆ ಎಡೆಗಳನ್ನು ಹಾಕಿ ಅದಕ್ಕೆ ಸಾಂಬ್ರಾಣಿ, ಧೂಪದೊಂದಿಗೆ ಪೂಡೆಯನ್ನು ಮಾಡಿ ದೇವರಿಗೆ ಅರ್ಪಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಹೆಚ್.ಎನ್. ಸಿದ್ದಯ್ಯನವರು ಹಾರ್ಮೋನಿಯಂ ಮಾಸ್ಟರ್ ಆಗಿ ಅನೇಕ ನಾಟಕಗಳನ್ನು ಕಲಿಸುತ್ತಿದ್ದಾರೆ. ಸಿದ್ದರಾಜು ಎಂಬುವರು ಕೋಲಾಟದಲ್ಲಿ ಕಲಾವಿದರಾಗಿದ್ದಾರೆ. ಹೆಚ್.ಎನ್. ಸಿದ್ದಯ್ಯ ಯಕ್ಷಗಾನ ಭಾಗವತರಾಗಿ ಹೆಸರಾಗಿದ್ದಾರೆ.

## ಹೊನ್ನಶೆಟ್ಟಿಹಳ್ಳಿ ವಡ್ಡರಹಟ್ಟಿ

ಹೊನ್ನಶೆಟ್ಟಿಹಳ್ಳಿ ವಡ್ಡರಹಟ್ಟಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೯ ಕಿಮೀ ದೂರದಲ್ಲಿದೆ. ಹೊನ್ನಶೆಟ್ಟಿಹಳ್ಳಿ ಮಜರೆ ಗ್ರಾಮ. ಇದರ ಭೌಗೋಳಿಕ ವ್ಯಾಪ್ತಿ ಮುಖ್ಯಗ್ರಾಮದ ೬೦೦ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಬಯಲು ಪ್ರದೇಶ. ಬೋವಿ ಜನಾಂಗ ಮಾತ್ರ ಇದ್ದಾರೆ. ಹೊನ್ನಶೆಟ್ಟಿಹಳ್ಳಿಗೆ ಹೊಂದಿಕೊಂಡಿದೆ. ಹಾಗಾಗಿಯೇ ಹೊನ್ನಶೆಟ್ಟಿ ವಡ್ಡರಹಟ್ಟಿ ಎಂದು ಕರೆಯುತ್ತಾರೆ. ಬಯಲು ಪ್ರದೇಶ. ಕೃಷಿ ಮುಖ್ಯ ಕಸುಬು. ರಾಗಿ, ಹೆಸರು, ಜೋಳ ಬೆಳೆಯುತ್ತಾರೆ. ತೆಂಗು, ಅಡಿಕೆ ತೋಟಗಾರಿಕೆ ಇರುವವರು ಕೊಬ್ಬರಿ, ಅಡಿಕೆ ವ್ಯಾಪಾರಿ ಸರಕಾಗಿವೆ. ವಾರ್ಷಿಕ ಮಳೆ ೫೧೧೦ ಹೆಕ್ಟೇರ್. ಚಳಿ ೧೩ ಡಿಗ್ರಿ, ಬಿಸಿಲು ೩೭ ಡಿಗ್ರಿ ಸೆಂಟಿಗ್ರೇಡ್ ಇದೆ. ಸಾಂಪ್ರದಾಯಿಕ ಎತ್ತಿನ ಗಾಡಿಗಳಿವೆ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್ ಟಿಲ್ಲರ್‌ಗಳೊಂದಿಗೆ ದ್ವಿಚಕ್ರ ವಾಹನಗಳ ಬಳಕೆಯಿದೆ. ತುಮಕೂರು ಲೋಕಸಭಾ ಕ್ಷೇತ್ರ, ಹಂದನಕೆರೆ ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ದೊಡ್ಡ ಎಣ್ಣೆಗೆರೆ ತಾಲ್ಲೂಕು ಪಂಚಾಯ್ತಿ ಹಂದನಕೆರೆ ಹೋಬಳಿ ಹಾಗೂ ಹಂದನಕೆರೆ ಜಿಲ್ಲಾ ಪಂಚಾಯ್ತಿಗೆ ಒಳಪಡುತ್ತದೆ. ಕುಡಿಯಲು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರನ್ನು ಪೂರೈಸಲಾಗುವುದು. ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯ ೧೨ ಫಲಾನುಭವಿಗಳಿದ್ದಾರೆ. ವಿಧವಾ, ಅಂಗವಿಕಲ ಹಾಗೂ ವೃದ್ಧಾಪ್ಯವೇತನಗಳ ೬ ಫಲಾನುಭವಿಗಳಿದ್ದಾರೆ. ೧೪ ವಿದ್ಯುಚ್ಛಕ್ತಿ ಕಂಬಗಳಿವೆ. ಕುರಿ, ಮೇಕೆ, ಕೋಳಿ ಸಾಕುಪ್ರಾಣಿಗಳು. ಯುಗಾದಿ, ದಸರಾ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ. ಶೇ.೫೭% ಸಾಕ್ಷರತೆ ಇದೆ. ಶಿಕ್ಷಣ, ಸಾರಿಗೆ, ಪಡಿತರ ಸೌಲಭ್ಯಗಳನ್ನು ಚೌಳಕಟ್ಟೆಯಿಂದ ಪಡೆಯುತ್ತಿದ್ದಾರೆ.

## ಹುಲ್ಲೇನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಿಕೆರೆ ಹೋಬಳಿ ತಿಮ್ಮನಹಳ್ಳಿ ಗ್ರಾಮಪಂಚಾಯ್ತಿಯ ಬೇಚಾರಕ್ ಗ್ರಾಮ. ತಾಲ್ಲೂಕು ಕೇಂದ್ರದಿಂದ ಈಶಾನ್ಯ ದಿಕ್ಕಿಗೆ ೨೦ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೩೦೧.೨೪ ಹೆಕ್ಟೇರ್. ಇದು ಬಯಲುನಾಡು ಪ್ರದೇಶಕ್ಕೆ ಸೇರುತ್ತದೆ. ವ್ಯಕ್ತಿಮೂಲದಿಂದ ಗ್ರಾಮಕ್ಕೆ ಈ ಹೆಸರು ಬಂದಿದೆ. ಇಲ್ಲಿ ಬಿಳಿ-ಕಪ್ಪು ಕಲ್ಲು, ಬಿಳಿ-ಕೆಂಪು ಮಣ್ಣು ಕಂಡುಬರುತ್ತದೆ. ಪಶ್ಚಿಮಕ್ಕೆ ಕಂದಿಕೆರೆ ಗುಡ್ಡಸಾಲು ಇದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿವೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಇದು ಬೇಚಾರಕ್ ಗ್ರಾಮವಾಗಿದ್ದು ಯಾವುದೇ ಜನವಸತಿಯಿಲ್ಲ. ಆಜುಬಾಜು ವಿಚಾರಿಸಲಾಗಿ ಇಲ್ಲಿ ಈ ಹಿಂದೆ ಕುಂಚಿಟಿಗ ಒಕ್ಕಲಿಗರು ವಾಸವಿದ್ದರು ಎಂದು ಹೇಳುತ್ತಾರೆ. ಅವರೆಲ್ಲ ಒಂದು ಕಾಲಕ್ಕೆ ವಲಸೆ ಹೋಗಿ ಬಡಕೆಗುಡ್ಲುವಿನಲ್ಲಿ ವಾಸಿಸತೊಡಗಿದರು ಎಂದು ಹೇಳುತ್ತಾರೆ. ವಲಸೆಗೆ ನಿರ್ದಿಷ್ಟ ಕಾರಣ ತಿಳಿದುಬಂದಿಲ್ಲ. ಈಗಲೂ ಬಡಕೆಗುಡ್ಲುವಿನಲ್ಲಿ ಹುಲ್ಲೇನಳ್ಳೇರ ಓಣಿ ಎಂಬುದಿದೆ. ಇಲ್ಲಿ ಒಂದು ಕೋಟೆ ಇದ್ದು ಈಗ

ನಶಿಸಿಹೋಗಿದೆ. ಈ ಜಾಗದಲ್ಲಿ ಈಗ ಭೂತಪ್ಪನ ಗುಡಿಯಿದೆ. ಇಲ್ಲಿನ ಮೂಲ ಜನ ಅಂದರೆ ಬಡಕೆಗುಡ್ಲುವಿನಲ್ಲಿ ವಾಸಿಸುವ ಈ ದೇವರ ಒಕ್ಕಲುಗಳು ಈಗಲೂ ದೇವರಿಗೆ ಪೂಜೆ, ಹರಕೆ ಸಮರ್ಪಿಸುತ್ತಾರೆ.

ಕೆಲವರು ಇವರ ಮೂಲ ಬರಸಿಡ್ಲೇಹಳ್ಳಿ ಎಂಬ ಗ್ರಾಮ ಅಲ್ಲಿಂದ ಹುಲ್ಲೇನಳ್ಳಿಗೆ ಬಂದರು. ನಂತರ ಬಡಕೆಗುಡ್ಲಿಗೆ ಬಂದು ವಾಸ್ತವ್ಯ ಹೂಡಿದ ಸಮುದಾಯ ನಮ್ಮದು ಎನ್ನುತ್ತಾರೆ.

## ಹೊಸಕೆರೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೨ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೧೦೫.೩೯ ಚ.ಕಿ.ಮೀ. ಬಯಲು ಪ್ರದೇಶಕ್ಕೂ ಸೇರಿದ್ದು ಇಲ್ಲಿ ಕಪ್ಪು-ಬಿಳಿ ಕಲ್ಲು ಮತ್ತು ಕೆಂಪು-ಬಿಳಿ ಮಣ್ಣು ಕಂಡುಬರುತ್ತದೆ. ಗ್ರಾಮದ ಪಕ್ಕ ಕೆರೆಯೊಂದು ನಿರ್ಮಾಣವಾಗಿದ್ದರಿಂದಾಗಿ ಅದರ ಸಮೀಪದ ಗ್ರಾಮಕ್ಕೆ ಹೊಸಕೆರೆ ಎಂದು ಕರೆಯಲಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ೨ ತೆರೆದ ಬಾವಿಯಿದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ವೀರಶೈವರು ದೊಡ್ಡ ಸಮುದಾಯದವರಾಗಿದ್ದಾರೆ. ಕುರುಬರು, ಕುಂಬಾರರು, ಮಡಿವಾಳರು, ಆಚಾರ್ರು ಸಣ್ಣ ಸಮುದಾಯದವರಾಗಿದ್ದಾರೆ. ಒಂದು ಕನ್ನಡ ಭಾಷೆಯನ್ನು ಬಳಸುತ್ತಾರೆ. ಒಟ್ಟು ೧೪೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೦೪೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೬ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೨೬ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೧೦ ಮನೆಯಲ್ಲಿ ಶೌಚಾಲಯವಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕಾರು, ಬೈಸಿಕಲ್, ಬೈಕುಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ನಂದಿನಿ ಡೈರಿಯಿದೆ. ಮುಖ್ಯ ವ್ಯಾಪಾರಿ ಸರಕುಗಳು ತೆಂಗಿನಕಾಯಿ ಹಾಗೂ ಕೊಬ್ಬರಿ ಆಗಿದೆ. ಶಿಕ್ಷಕರು, ವಕೀಲರು ಆಗಿದ್ದಾರೆ. ಬೆಂಗಳೂರಿನ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವವರಿದ್ದಾರೆ. ಇಲ್ಲಿ ರೇಷ್ಮೆ ಕೈಗಾರಿಕೆ, ಕೈಮಗ್ಗಗಳಿವೆ. ಕಮ್ಮಾರರು, ಚಿತ್ರಕಾರರು ಇದ್ದಾರೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಬೆಳಗುಲಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಇಲ್ಲಿ ರಸ್ತೆ ಮಾರ್ಗವಿದೆ. ಉಡಸಲಮ್ಮ ದೇವಿ, ಮಾರುತಿ, ಪಾರ್ವತಿ, ಮಹಾಲಕ್ಷ್ಮಿ ಇತ್ಯಾದಿ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೭೨ ರಷ್ಟು ಸಾಕ್ಷರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಉಡಸಲಮ್ಮ, ಆಂಜನೇಯಸ್ವಾಮಿ, ಬಸವಪ್ಪ, ಲಕ್ಷ್ಮೀ ದೇವಾಲಯಗಳಿವೆ. ಗ್ರಾಮದವರು ಉಡಸಲಮ್ಮ ದೇವಿಯ ಜಾತ್ರೆಯನ್ನು ಮಾಡುತ್ತಾರೆ. ಉಡಸಲಮ್ಮನ ತೇರು, ಮಾರಮ್ಮನ ಕರಗ ನಡೆಯುತ್ತದೆ. ಸಿಡಿ, ಬಾನ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹೊಸ ಗೊಲ್ಲರಹಟ್ಟಿ

ಹೊಸ ಗೊಲ್ಲರಹಟ್ಟಿ ಬೆಳಗುಲಿ ಗ್ರಾಮಕ್ಕೆ ಸೇರಿದ ಮಜರೆ ಗ್ರಾಮವಾಗಿದೆ. ಗ್ರಾಮಕ್ಕೆ ಹೊಂದಿಕೊಂಡಂತೆ ಕಾಡುಗೊಲ್ಲರು ಪ್ರತ್ಯೇಕ ಮನೆ ರಚಿಸಿಕೊಂಡ ಕಾರಣ ಹೊಸಗೊಲ್ಲರಹಟ್ಟಿ ಎಂದು ಕರೆಯುತ್ತಾರೆ. ಮೊದಲಿಗೆ ಒಂದು ಗೊಲ್ಲರಹಟ್ಟಿ ಇದ್ದುದರಿಂದ ಹೊಸ ಗೊಲ್ಲರಹಟ್ಟಿ ಎಂದು ಕರೆಯುತ್ತಾರೆ. ಇಲ್ಲಿ ಕಾಡುಗೊಲ್ಲರ ೩೪ ಮನೆಗಳು ಮಾತ್ರ ಇದ್ದು ಕೃಷಿ ಹಾಗೂ ಕುರಿಗಾರಿಕೆ ವೃತ್ತಿಯಾಗಿದೆ. ೧೬೨ ಜನಸಂಖ್ಯೆ ಇದೆ. ಇಲ್ಲಿನ ಮನೆಗಳು ಹೆಂಚಿನ, ಶೀಟಿನ, ೪ ಗುಡಿಸಲುಗಳೂ ಸೇರಿವೆ. ೧೨ ಮನೆಗಳು ಆಶ್ರಯ, ಇಂದಿರಾ ಆವಾಸ್ ಮನೆಗಳಿವೆ. ಇವು ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ರಚನೆಯಾಗಿವೆ. ಕುಡಿಯಲು ಬೆಳಗುಲಿ ಗ್ರಾಮದಿಂದ ನೀರು ಪೂರೈಸಲಾಗುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ಮೊಲ, ನರಿ ಕಂಡುಬರುತ್ತದೆ. ಕುರಿ, ಮೇಕೆ, ಹಸು ಸಾಕುಪ್ರಾಣಿಗಳು. ಕಾಡುಗೊಲ್ಲರು ಕುರಿಗಳೊಂದಿಗೆ ಹುಲ್ಲು–ನೀರಿಗಾಗಿ ಪರಸ್ಥಳ ಹೋಗುವುದುಂಟು. ಇದಕ್ಕೆ ವಲಸೆ ಹೋಗುವುದು ಎಂದು ಕರೆಯುತ್ತಾರೆ. ರಾಗಿ, ಭತ್ತ, ಹೆಸರು, ತೆಂಗು ಬೆಳೆಯುತ್ತಾರೆ. ತೆಂಗಿನ ಹಾಗೂ ಕುರಿ ವ್ಯಾಪಾರಿ ಸರಕಾಗಿವೆ. ವೃದ್ಧಾಪ್ಯವೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ಕರಿಯಮ್ಮ ದೇವರಿಗೆ ಆರತಿ, ಬಾನ, ಹರಕೆ ಸಂಪ್ರದಾಯವಿದೆ. ಬೆಳಗುಲಿ ಗ್ರಾಮಪಂಚಾಯ್ತಿ, ಚಿಕ್ಕನಾಯಕನಹಳ್ಳಿ ವಿಧಾನಸಭೆ, ಹಂದನಕೆರೆ ಜಿಲ್ಲಾ ಪಂಚಾಯ್ತಿ, ಬರಗೂರು ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದೆ. ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಪಡಿತರ, ಶಿಕ್ಷಣ, ಸಾರಿಗೆ ಇವುಗಳಿಗೆ ಮುಖ್ಯ ಗ್ರಾಮಕ್ಕೆ ಹೋಗುತ್ತಾರೆ. ದೀಪಾವಳಿ ಈ ಗ್ರಾಮದ ಬಹುದೊಡ್ಡ ಆಚರಣೆ. ಹಿರಿಯರ ಹಬ್ಬ, ಹಾಲುಮೀಸಲು ಎಂದೆಲ್ಲಾ ಕರೆದು ಆಚರಿಸುತ್ತಾರೆ. ಚಿತ್ರದೇವರ ಪೌಳಿಯಿದ್ದು ದೇವರ ಉತ್ಸವ ಇರುತ್ತದೆ.

## ಹಳೇ ಗೊಲ್ಲರಹಟ್ಟಿ

ಹಳೇ ಗೊಲ್ಲರಹಟ್ಟಿ ಬೆಳಗುಲಿ ಗ್ರಾಮಕ್ಕೆ ಸೇರಿದ ಮಜರೆ ಗ್ರಾಮವಾಗಿದೆ. ಗ್ರಾಮಕ್ಕೆ ಸೇರಿದ ಪಕ್ಕದಲ್ಲಿಯೇ ಕಾಡುಗೊಲ್ಲರು ಪ್ರತ್ಯೇಕವಾಗಿ ಮನೆ ನಿರ್ಮಿಸಿಕೊಂಡ ಕಾರಣ ಗೊಲ್ಲರಹಟ್ಟಿ ಎಂದೇ ಕರೆಯುತ್ತಾರೆ. ಇದರ ಇನ್ನೊಂದು ಭಾಗವಾಗಿ ಕಾಡುಗೊಲ್ಲರ ಇನ್ನೊಂದು ಬಡಾವಣೆಯಿದ್ದು ಇದನ್ನು ಹೊಸಗೊಲ್ಲರಹಟ್ಟಿ ಎಂದು ಕರೆಯುತ್ತಾರೆ. ಹಳೆ ಗೊಲ್ಲರಹಟ್ಟಿಯಲ್ಲಿ ೪೭ ಮನೆಗಳಿದ್ದು ೨೧೪ ಜನಸಂಖ್ಯೆಯಿದೆ. ಇವು ಬೆಳಗುಲಿಯ ಹೆಸರಿನಲ್ಲಿಯೇ ದಾಖಲಾಗಿ ಕೃಷಿ ಹಾಗೂ ಕುರಿಗಾರಿಕೆ ಇಲ್ಲಿನ ಮುಖ್ಯ ಕಸುಬಾಗಿದೆ. ಕುರಿಗಳೊಂದಿಗೆ ಪರಸ್ಥಳಕ್ಕೆ ಹುಲ್ಲು–ನೀರಿನ ಹೋಗುತ್ತಾರೆ. ಇಲ್ಲಿನ ಮನೆಗಳು ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ಇವು ಸರ್ಕಾರದ ಜನತಾ, ಆಶ್ರಯ ಯೋಜನೆಯ ಅಡಿಯಲ್ಲಿ ರಚನೆಯಾಗಿವೆ. ಕುಡಿಯಲು ಗ್ರಾಮಪಂಚಾಯ್ತಿ ವತಿಯಿಂದ ನೀರು ಪೂರೈಸಲಾಗುತ್ತಿದೆ. ಇಲ್ಲಿನ ರೈತರು ರಾಗಿ, ಹೆಸರು, ಹುರುಳಿ, ತೊಗರಿ ಬೆಳೆಯುತ್ತಾರೆ. ತೋಟಗಾರಿಕೆ ಇರುವವರು ತೆಂಗು ಬೆಳೆಯುತ್ತಾರೆ. ಕೊಬ್ಬರಿ ಹಾಗೂ ಕುರಿ ವ್ಯಾಪಾರಿ ಸರಕಾಗಿದೆ. ಕಾಡುಗೊಲ್ಲರು ಮಾತ್ರ ವಾಸಿಸುತ್ತಿದ್ದಾರೆ.

ಹಂದನಕೆರೆ ಜಿಲ್ಲಾಪಂಚಾಯ್ತಿ, ಬರಗೂರು ತಾಲ್ಲೂಕು ಪಂಚಾಯ್ತಿ ಹಾಗೂ ಬೆಳಗುಲಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ತುಮಕೂರು ಲೋಕಸಭೆ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಧವಾ ವೇತನಗಳ ಫಲಾನುಭವಿಗಳಾಗಿದ್ದಾರೆ. ಹಳೆಹಟ್ಟಿಯಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ತಿಮ್ಮಪ್ಪ, ಕರಿಯಮ್ಮ ದೇವರ ಗದ್ದುಗೆ ಇದೆ. ದೀಪಾವಳಿ ಈ ಹಟ್ಟಿಯ ಬಹುದೊಡ್ಡ ಹಬ್ಬ. ಇದನ್ನು ಹಿರಿಯರ ಹಬ್ಬ, ದೀಪ ಏರಿಸುವ ಹಬ್ಬ, ಹಾಲು ಮೀಸಲಿನ ಹಬ್ಬ ಎಂದು ಕರೆಯುತ್ತಾರೆ. ಹಿರಿಯರ ಸಮಾಧಿಗೆ ಹಾಲು ಹಾಕುವುದು ಹೊಸಬಟ್ಟೆ ಧರಿಸುವುದು ಇದೇ ದಿನವಾಗಿದೆ. ಬೆಳಗುಲಿಯಿಂದ ಅಂಚೆ ಸಂಪರ್ಕ ಕಲ್ಪಿಸಿದೆ. ಒಂದು ಅಂಗನವಾಡಿ ಕೇಂದ್ರವಿದೆ. ಶಿಕ್ಷಣ, ಪಡಿತರ, ಆಸ್ಪತ್ರೆ ವಿಚಾರಕ್ಕೆ ಮುಖ್ಯ ಗ್ರಾಮ ಬೆಳಗುಲಿಗೆ ಹೋಗುತ್ತಾರೆ. ಬೆಳಗುಲಿಯ ಮೂಲಕ ರಸ್ತೆ ಸಂಪರ್ಕವಿದ್ದು ಒಂದು ಬಸ್ ಬಂದು ಹೋಗುತ್ತದೆ. ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಬಂಡಿಗಳಿವೆ. ಆಧುನಿಕ ವಾಹನಗಳಾದ ಸ್ಕೂಟರ್, ಟೆಂಪೋ, ಟ್ರ್ಯಾಕ್ಟರ್‌ಗಳಿವೆ.

## ಹೊಸಕೆರೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೩ ಕಿಮೀ ಅಂತರದಲ್ಲಿದೆ. ಇದು ಕಂದಾಯ ಗ್ರಾಮವಾಗಿದ್ದು ಇದರ ಭೌಗೋಳಿಕ ವಿಸ್ತೀರ್ಣ ೪೧೩ ಹೆಕ್ಟೇರ್ ಆಗಿದೆ. ಹೊಸದಾಗಿ ಕೆರೆ ನಿರ್ಮಾಣವಾದಾಗ ನಾಯಕ ಜನಾಂಗದ ಕೆಲವರು ಮೊದಲಿಗೆ ಜನವಸತಿ ನಿರ್ಮಿಸಿಕೊಂಡ ಕಾರಣದಿಂದಾಗಿ ಹೊಸಕೆರೆ ಎಂದೇ ಕರೆದಿದ್ದಾರೆ. ಬಯಲು ಮಿಶ್ರಿತ ಕುರುಚಲು ಗಿಡ–ಮರಗಳ ಪ್ರದೇಶ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ

ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಒಂದು ಕೆರೆಯಿದ್ದು ಮಳೆಗಾಲದಲ್ಲಿ ಮಾತ್ರ ನೀರಿರುತ್ತದೆ. ೨ ಕೊಳವೆ ಬಾವಿಗಳು, ಮೂರು ಸಿಸ್ಟನ್‌ಗಳಿವೆ.

ಬೇಡನಾಯಕರು ದೊಡ್ಡ ಸಮುದಾಯವಾಗಿದ್ದು ಕುರುಬರು, ಅಗಸರು, ಆದಿಕರ್ನಾಟಕ, ಕುರುಬರು ಕಿರು ಸಮುದಾಯವಾಗಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೧೧ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ಕೊಬ್ಬರಿ, ಹಲಸು, ಹುಣಸೆಹಣ್ಣು ವ್ಯಾಪಾರಿ ಸರಕಾಗಿದೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಬರಗೂರು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಬರಗೂರಿನಿಂದ ಅಂಚೆ ಸಂಪರ್ಕವಿದೆ. ಬರಗೂರು ಮಾರ್ಗವಾಗಿ ಚಿಕ್ಕನಾಯಕನಹಳ್ಳಿಗೆ ಬಸ್ ಸಂಪರ್ಕವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಗ್ರಾಮದ ಸಾಕ್ಷರತೆ ೫೭% ರಷ್ಟಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಶಿಕ್ಷಣ, ಸಾರಿಗೆ, ಅರಣ್ಯ ಇಲಾಖೆಗೆ ಸೇರಿದ ೭ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಟ್ರ್ಯಾಕ್ಟರ್ ಡ್ರೈವರ್, ಚಾಲಕರಿದ್ದಾರೆ. ಖಾಸಗಿ ಕಂಪನಿಗಳಲ್ಲಿ ಕಾರ್ಮಿಕರಿದ್ದಾರೆ.

ಕರಿಯಮ್ಮ ದೇವರ ಪೌಳಿಯಿದೆ. ವಾರ್ಷಿಕವಾಗಿ ಊರಹಬ್ಬ ಮಾಡುತ್ತಾರೆ. ಆರತಿ, ಬಾನ, ಉತ್ಸವ ಇರುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹಲ್ಕುರಿಲಿಂಗಯ್ಯನಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆ ಗ್ರಾಮಪಂಚಾಯ್ತಿಯ ಮಜರೆ ಗ್ರಾಮ. ಬೀರಲಿಂಗೇಶ್ವರ ದೈವಮೂಲದಿಂದ ಗ್ರಾಮಕ್ಕೆ ಈ ಹೆಸರು ಬಂದಿದೆ. ಬೀರಲಿಂಗ ದೇವರಿಗೆ ಗಾವು ಸಿಗಿಯುವ ಪದ್ಧತಿಯಿದ್ದು ಹಲ್ಲುಗಳಿಂದ ಕುರಿ ಸಿಗಿಯುವುದರಿಂದ ಹಲ್ಲು ಕುರಿಲಿಂಗಯ್ಯನ ಹೆಸರಲ್ಲಿ ಗ್ರಾಮ ರಚನೆಯಾಗಿದೆ. ತಾಲ್ಲೂಕು ಕೇಂದ್ರದಿಂದ ನೈಋತ್ಯ ದಿಕ್ಕಿಗೆ ೧೦ ಕಿಮೀ ಅಂತರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೩.೨.೮ ಚಕಿ.ಮೀ ವ್ಯಾಪ್ತಿಯಲ್ಲಿ ಬರುತ್ತದೆ. ಬಯಲು ನಾಡಿಗೆ ಸೇರಿದ್ದು ಇಲ್ಲಿ ಬಿಳಿ ಕಲ್ಲುಗಳು ಮತ್ತು ಬಿಳಿ ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಒಂದು ತೆರೆದ ಬಾವಿ ಹಾಗೂ ಹಿರೆಹಳ್ಳ ಇದೆ. ೫ ಕೊಳವೆ ಬಾವಿಗಳಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ

ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕುರುಬರು ದೊಡ್ಡ ಸಮುದಾಯದವರಾಗಿದ್ದಾರೆ. ಕನ್ನಡ ಭಾಷೆ ಮಾತನಾಡುತ್ತಾರೆ. ಒಟ್ಟು ೩೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೬೭ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ-ಮಣ್ಣಿನ, ಹೆಂಚಿನ, ಗುಡಿಸಲು ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಗ್ರಾಮಕ್ಕೆ ರಸ್ತೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಶೆಟ್ಟಿಕೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಒಬ್ಬರು ಶಿಕ್ಷಕರಿದ್ದಾರೆ. ವಿಜಯಕುಮಾರ್ ಎಂಬುವರು ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಟ್ರ್ಯಾಕ್ಟರ್ ಡ್ರೈವರ್‌ಗಳಿದ್ದಾರೆ. ಹಲ್ಕೂರು ಬೀರಲಿಂಗೇಶ್ವರ ಸ್ವಸಹಾಯ ಸಂಘವಿದೆ. ಧರ್ಮಸ್ಥಳ ಸಂಘಗಳಿವೆ. ಶೇ. ೬೮ ರಷ್ಟು ಸಾಕ್ಷರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಬೀರಲಿಂಗೇಶ್ವರಸ್ವಾಮಿ ದೇವಾಲಯ, ಕೆಂಪಮ್ಮದೇವಿ, ಅರವಮ್ಮ, ಲಕ್ಕಮ್ಮದೇವಿ ದೇವರುಗಳಿವೆ. ಹತ್ತು ವರ್ಷಗಳಿಗೊಮ್ಮೆ ಜಾತ್ರೆ ನಡೆಯುತ್ತದೆ. ಬಾನ, ಹೊಳೆ ಸೇವೆ, ಗಂಗಾಸ್ನಾನ, ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗ್ರಾಮದ ದೇವಮ್ಮ ಎಂಬುವರು ಸೋಬಾನೆ ಪದಗಳನ್ನು ಹಾಡುತ್ತಾರೆ. ಮೋಹನ್ ಕುಮಾರ್ ಎಂಬ ಶಿಕ್ಷಕರು ರಂಗಭೂಮಿ ನಿರ್ದೇಶಕ, ನಟರಾಗಿ ಗುರುತಿಸಿಕೊಂಡಿದ್ದಾರೆ.

## ಹಳೇಹಟ್ಟಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೩ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೪೭ ಹೆಕ್ಟೇರ್. ಹಳೇಹಟ್ಟಿ ಗ್ರಾಮವು ಮಜರೆ ಗ್ರಾಮ ಬಗ್ಗನಹಳ್ಳಿ ಗ್ರಾಮಕ್ಕೆ ಸೇರಿದೆ. ಕೆಂಪುಮಣ್ಣನ್ನನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೪೦೦-೫೦೦ ಅಡಿ ಆಳದ ೪ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗಳಿಗೆ ನೀರೊದಗಿಸುತ್ತದೆ. ೩ ಮಿನಿ ಟ್ಯಾಂಕುಗಳಿದ್ದು ಕುಡಿಯುವ ನೀರಿನ ಸೌಲಭ್ಯವಿದೆ. ಒಟ್ಟು ೩೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೬೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಮಣ್ಣಿನ, ಕಲ್ಲಿನ, ಕುಂಬಾರ ಹೆಂಚಿನ ಸೀಮೆಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೨೭ ಫಲಾನುಭವಿಗಳ ಮನೆಗಳನ್ನು ಕಾಣಬಹುದು.

ಗೊಲ್ಲ ಸಮುದಾಯದವರನ್ನು ಮಾತ್ರ ಕಾಣಬಹುದು. ಗ್ರಾಮದ ಪ್ರಮುಖ ಭಾಷೆ ಕನ್ನಡ. ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಆಟೋ ದ್ವಿಚಕ್ರ ವಾಹನಗಳೊಂದಿಗೆ ಎತ್ತಿನಗಾಡಿಗಳು ಸಹ ಉಳಿದುಕೊಂಡಿದೆ. ೮ ಮಂದಿ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಜೆ.ಸಿ. ಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗೋಡೆಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಒಂದು ಸ್ತ್ರೀಶಕ್ತಿ ಸಂಘವಿದ್ದು ೨ ಸಣ್ಣ ಅಂಗಡಿಗಳಿವೆ.

ಜುಂಜಪ್ಪ ದೇವಸ್ಥಾನವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹೆಸರಹಳ್ಳಿ

ಹೆಸರಹಳ್ಳಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ದುಗುಡಿಹಳ್ಳಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ಹೆಸರು ಧಾನ್ಯ ಮೂಲದಿಂದ ಈ ಗ್ರಾಮಕ್ಕೆ ಹೆಸರಳ್ಳಿ ಎಂದು ಕರೆಯಲಾಗಿದೆ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೧೧ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೮೦೮.೨೮ ಹೆಕ್ಟೇರ್. ಬಿಳಿ ಕಲ್ಲು ಬಿಳಿ ಮಣ್ಣುಗಳಿಂದ ಕೂಡಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೧-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಹೆಸರಹಳ್ಳಿ ತೊರೆ ಇದೆ. ಇದು ಕೋಣನ ಕಾವಲಿಂದ ಆರಂಭವಾಗಿ ಅಂಕಸಂದ್ರದ ಅಣೆವರೆಗೆ ಹರಿಯುತ್ತದೆ. ನಂತರ ಬೋನನಕಣಿವೆ ತಲುಪುತ್ತದೆ. ಹಾರನಕಟ್ಟೆ ಹಳ್ಳ ಎಂಬ ಮತ್ತೊಂದು ಹಳ್ಳವೂ ಇಲ್ಲಿ ಹರಿಯುತ್ತದೆ. ಎರಡು ಸೇದುವ ಬಾವಿಗಳಿವೆ. ಹೆಸರಹಳ್ಳಿ ಕೆರೆಯಿದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಕುರುಬ ಜನಾಂಗದವರು ದೊಡ್ಡ ಸಮುದಾಯವಾಗಿದ್ದು ಬೆಸ್ತರು, ಮಡಿವಾಳರು, ಮಾದಿಗರು, ನಾಯಕರು, ಭಂಡಾರಿಗಳು, ಲಿಂಗಾಯಿತರು, ಆಚಾರ್ರು, ಕೊರಮರು ಇದ್ದಾರೆ.

ಒಟ್ಟು ೨೫೫ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೯೫೭ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೬ ಕಾಂಕ್ರೀಟ್, ಮಣ್ಣು-ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೨೦ ಫಲಾನುಭವಿಗಳ ಮನೆಗಳನ್ನು ಕಾಣಬಹುದು.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಹುಚ್ಚೆಳ್ಳು, ಸಾವೆ, ಹುರುಳಿ, ಎಳ್ಳು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತೆಂಗು, ಅಡಿಕೆ, ಬಾಳೆ, ದಾಳಿಂಬೆ, ಕಾಕಡ ಹೂ ವಾಣಿಜ್ಯ ಬೆಳೆಗಳು. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್‌ಗಳು, ಆಟೋಗಳಿವೆ. ರಸ್ತೆ ಹಾಗೂ ಚರಂಡಿ ವ್ಯವಸ್ಥೆಯಿದೆ. ಕೆಎಂಎಫ್‌ನ ನಂದಿನಿ ಡೈರಿಯಿದೆ. ಕೆರೆ ತುಂಬಿದಾಗ ಮೀನುಕೃಷಿ ಮಾಡುತ್ತಾರೆ. ಕೊಬ್ಬರಿ, ಅಡಿಕೆ ಇಲ್ಲಿನ ವ್ಯಾಪಾರಿ ಸರಕು. ವೈದ್ಯವೃತ್ತಿ, ಶಿಕ್ಷಕರು, ಕೃಷಿ ಇಲಾಖೆಯಲ್ಲಿ ಸಹಾಯಕ ವೃತ್ತಿಯವರು ಇದ್ದಾರೆ. ೪ ಇಟ್ಟಿಗೆ ಫ್ಯಾಕ್ಟರಿಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ

ದುಗುಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ೩ ಜನ ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಜಿಲ್ಲಾ ಪಂಚಾಯ್ತಿ ರಸ್ತೆ ಮಾರ್ಗವಿದೆ. ಇದು ಜಿಲ್ಲಾ ಮುಖ್ಯರಸ್ತೆಯನ್ನು ಸಂಪರ್ಕಿಸುತ್ತದೆ. ರೈತಸಂಘ ಹಾಗೂ ಹಸಿರು ಸೇನೆಗಳಿವೆ. ಲಕ್ಷ್ಮೀದೇವಿ, ದೊಡ್ಡಮ್ಮ ದೇವಿ, ತುಳಸಿ ಮುಂತಾದ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೭೫ ರಷ್ಟು ಸಾಕ್ಷರರಿದ್ದಾರೆ. ದೊಡ್ಡಯ್ಯ ಎಂಬುವವರು ಜಾನುವಾರುಗಳಿಗೆ ಔಷಧ ನೀಡುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೪ ಫಲಾನುಭವಿಗಳಿದ್ದಾರೆ. ಒಂದು ಚಿಕ್ಕ ಹೋಟೆಲ್ ಹಾಗೂ ೩ ಚಿಕ್ಕ ಅಂಗಡಿಗಳು ಗ್ರಾಮದಲ್ಲಿವೆ. ಸ್ಮಶಾನವಿದೆ. ವಿನಾಯಕ, ಮಂಜುನಾಥ, ಮಡಿವಾಳರ ಸಂಘಗಳಿವೆ.

ಶ್ರೀಲಕ್ಷ್ಮೀದೇವಿ ದೇವಸ್ಥಾನವಿದೆ. ಈ ದೇವಸ್ಥಾನದಲ್ಲಿ ಚಿಕ್ಕಮ್ಮ, ಕಳಸದಮ್ಮ, ದೊಡ್ಡಮ್ಮ (ಲಕ್ಷ್ಮೀದೇವಿ) ದೇವರುಗಳನ್ನು ಪ್ರತಿಷ್ಠಾಪಿಸಿದ್ದಾರೆ. ಬೀರೇದೇವರ, ಆಂಜನೇಯಸ್ವಾಮಿ ದೇವಸ್ಥಾನಗಳಿವೆ. ಕಲ್ಲೇದೇವರ ದೇವಸ್ಥಾನವಿದ್ದು ಈಗ ಶಿಥಿಲವಾಗಿದೆ. ಏಪ್ರಿಲ್ ತಿಂಗಳಿನಲ್ಲಿ ದೊಡ್ಡಮ್ಮದೇವರ ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ಬನ್ನಿಮರ, ಕಳಸ, ಬಂಡಿಬಾನ ಇತ್ಯಾದಿಗಳು ಜರುಗುತ್ತವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಆದಿಕರ್ನಾಟಕ ಸಮುದಾಯದ ಶಿವಮ್ಮ ಎಂಬುವವರು ಸೋಬಾನೆ ಹಾಡುಗಳನ್ನು ಹಾಡುತ್ತಾರೆ.

## ಹುಳಿಯಾರು

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೫ ಕಿಮೀ ಅಂತರದಲ್ಲಿದೆ. ಹುಲಿಯೊಂದು ನಾಯಿಯ ಮೇಲೆ ಎಗರಿ ಕೊನೆಗೆ ನಾಯಿಯಿಂದ ಹುಲಿ ಹತ್ಯೆಯಾಯಿತೆಂದೂ ಹುಲಿಹಾರ – ಹುಲಿ ಬಲಿಯಾದ ಹುಲಿಹಾರ – ಹುಳಿಯಾರ ಆಗಿದೆ. ಇದು ಹೋಬಳಿ ಕೇಂದ್ರವಾಗಿದ್ದು ಭೌಗೋಳಿಕ ವಿಸ್ತೀರ್ಣ ೧೧೬೬.೩೮ ಹೆಕ್ಟೇರ್ ಹೊಂದಿರುವ ಕಂದಾಯ ಗ್ರಾಮ ಬಯಲುನಾಡಾಗಿದೆ. ಸೋಮಜ್ಜನಪಾಳ್ಯ, ರಾಮಶೆಟ್ಟಿಪಾಳ್ಯ, ಲಿಂಗಪ್ಪನಪಾಳ್ಯ, ಕೋಡಿಪಾಳ್ಯ, ಯಾಕೂಬ್‌ಸಾಬ್ ಪಾಳ್ಯ ಸೇರ್ಪಡೆ ಗ್ರಾಮಗಳಾಗಿವೆ. ಕೆಂಪು–ಬಿಳಿ ಮರಳು ಮಿಶ್ರಿತ ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಸಾಮಾಜಿಕ ಮತ್ತು ನೆಡುತೋಪುಗಳನ್ನು ಕಾಣಬಹುದಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಹುಳಿಯಾರಿನ ಅಮಾನಿಕೆರೆ ನೀರಿಲ್ಲದೆ ಬತ್ತಿಹೋಗಿದೆ. ಕೆರೆಗೆ ಹೊಂದಿಕೊಂಡಿರುವ ಹಳ್ಳ–ಕೊಳ್ಳಗಳು ಮಳೆಗಾಲದಲ್ಲಿ ತುಂಬಿಕೊಳ್ಳುತ್ತವೆ. ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಮುಸ್ಲಿಮ್ ದೊಡ್ಡ ಸಮುದಾಯವಾಗಿದ್ದು ಕುರುಬರು, ವೀರಶೈವ, ಬ್ರಾಹ್ಮಣರು, ನಾಯಕ, ವೈಶ್ಯ, ಆದಿಕರ್ನಾಟಕ ಸಣ್ಣ ಸಮುದಾಯವಾಗಿದೆ. ಕನ್ನಡ ಮತ್ತು ಉರ್ದು ಇಲ್ಲಿನ ಪ್ರಮುಖ ಭಾಷೆಗಳಾಗಿವೆ. ಗಾಂಧಿಪೇಟೆ, ವಿವೇಕಾನಂದ ರಸ್ತೆ, ಬಸವೇಶ್ವರ ನಗರ, ಎ.ಕೆ. ಕಾಲೋನಿ ರಸ್ತೆ ಹಾಗೂ ಮತ್ತಿತರ ಓಣಿಗಳನ್ನು ಕಾಣಬಹುದು. ಒಟ್ಟು ೨೫೦೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೭೩೨೪ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ–ಮಣ್ಣಿನ, ಹೆಂಚಿನ, ಶೀಟಿನ ಮನೆಗಳಿವೆ. ಗುಡಿಸಲುಗಳನ್ನೂ ಕಾಣಬಹುದು. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೦೦೦ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೨೦೦ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಜೋಳ, ಸಾವೆ, ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ತರಕಾರಿಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು,

ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಸಾಂಪ್ರದಾಯಿಕ ಹೈನುಗಾರಿಕೆಯ ಜೊತೆಗೆ ಆಧುನಿಕ ಡೈರಿ ವ್ಯವಸ್ಥೆಯಿದೆ. ತೆಂಗು ಮುಖ್ಯ ಸರಕಾಗಿದ್ದು ದಿನಸಿ ಅಂಗಡಿಗಳು, ಬೀದಿ ಬೀದಿ ವ್ಯಾಪಾರ, ತಳ್ಳುವ ಗಾಡಿಗಳಲ್ಲಿ ವ್ಯಾಪಾರ ಮಾಡುವವರಿದ್ದಾರೆ. ಎಣ್ಣೆ ಗಾಣಗಳು, ಇಟ್ಟಿಗೆ, ಹೆಂಚಿನ ಕೈಗಾರಿಕೆಗಳಿವೆ. ವ್ಯವಸಾಯ, ವ್ಯಾಪಾರ, ಕೂಲಿ ಮತ್ತು ಬೀಡಿ ಸುತ್ತುವುದು ಜನರ ಮುಖ್ಯ ಕಸುಬು. ದ್ವಿಚಕ್ರ ರಿಪೇರಿ, ಭಾರೀ ವಾಹನ ರಿಪೇರಿ, ಪ್ರಿಂಟಿಂಗ್ ಪ್ರೆಸ್, ಜೆರಾಕ್ಸ್, ಫೋಟೋ ಸ್ಟುಡಿಯೋ, ಮಾಲ್ ಗಳನ್ನು ಕಾಣಬಹುದಾಗಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಗ್ರಾಮದ ೨೫ ಜನ ಸದಸ್ಯರು ಮತ್ತು ೩೩ ಜನ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆ ಹಾಗೂ ಕಚ್ಚಾ ರಸ್ತೆಯ ಸಂಪರ್ಕವಿದೆ. ಅಂಚೆ ಕಛೇರಿ, ಕೊರಿಯರ್ ವ್ಯವಸ್ಥೆಯಿದೆ. ಈ-ಮೇಲ್, ಇಂಟರ್‌ನೆಟ್ ಕೆಫೆಗಳು ಸಹ ಕಾರ್ಯನಿರ್ವಹಿಸುತ್ತಿವೆ. ಬಾರ್ ಅಸೋಸಿಯೇಷನ್, ಗ್ರಾಮ ನ್ಯಾಯಮಂಡಳಿಯನ್ನು ಕಾಣಬಹುದಾಗಿದೆ. ಮಂಗಳವಾರ ಸಂತೆ ನಡೆಯುತ್ತದೆ. ಕೃಷಿ ಬ್ಯಾಂಕ್, ಸಹಕಾರಿ ಸಂಘ ಮತ್ತು ಮಾರುಕಟ್ಟೆ ವ್ಯವಸ್ಥೆ ಹೊಂದಿದೆ.

ರಾಷ್ಟ್ರೀಯ ಬ್ಯಾಂಕುಗಳಾದ ಕೆನರಾ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಜಯಾ ಬ್ಯಾಂಕು ಹಾಗೂ ಟಿಸಿಬಿ ಬ್ಯಾಂಕುಗಳಿವೆ. ಲಾಕರ್ ಎಟಿಎಂ ವ್ಯವಸ್ಥೆಯಿದೆ. ಖಾಸಗಿ ಬ್ಯಾಂಕು, ಸ್ತ್ರೀಶಕ್ತಿ ಸಂಘಗಳು, ಅಡಮಾನ ಸಂಸ್ಥೆಗಳು, ರಿಜಿಸ್ಟರ್ಡ್ ಚಿಟ್‌ಫಂಡ್‌ಗಳು ಇವೆ.

೪ ಅಂಗನವಾಡಿ ಕೇಂದ್ರಗಳು, ಕಿಡ್ಸ್ ಕೇರ್ ಸೆಂಟರ್‌ಗಳು, ಸರ್ಕಾರಿ ಶಾಲೆಗಳು, ಅನುದಾನಿತ ಶಾಲೆಗಳು ಹಾಗೂ ಖಾಸಗಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಇಂಗ್ಲೀಷ್, ಕನ್ನಡ ಮತ್ತು ಉರ್ದು ಭಾಷಾ ಮಾಧ್ಯಮವಾಗಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸರ್ಕಾರಿ ಪದವಿಪೂರ್ವ, ಕಾಳಿದಾಸ ಪದವಿಪೂರ್ವ ಹಾಗೂ ಐಟಿಐ ಕಾಲೇಜುಗಳು, ಹುಳಿಯಾರು ಕೆಂಕೆರೆಯಲ್ಲಿ ಪ್ರಥಮ ದರ್ಜೆ ಕಾಲೇಜು ಇದೆ. ವಿದ್ಯಾರ್ಥಿ ನಿಲಯಗಳಿವೆ. ೮೬% ಸಾಕ್ಷರತೆ ಇದೆ.

ಆರೋಗ್ಯ ಘಟಕ, ಪಶುವೈದ್ಯಶಾಲೆ ಮತ್ತು ಖಾಸಗಿ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಅನಂತರಾಮುರವರ ಆಯುರ್ವೇದ ಸೆಂಟರ್ ವಿಶೇಷವಾಗಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೬೮ ಫಲಾನುಭವಿಗಳಿದ್ದಾರೆ. ಹೋಟೆಲ್, ವಸತಿ ನಿಲಯಗಳು ಮತ್ತು ಅಂಗಡಿಗಳಿವೆ.

ಸೀತಾರಾಮ, ಗಣಪತಿ, ವಾಸವಿ, ಕಾಳಿಕಾಂಬ, ಲಕ್ಷ್ಮಿ ಹಾಗೂ ಶ್ರೀ ಬನಶಂಕರಿ ಛತ್ರಗಳನ್ನು ಕಾಣಬಹುದು. ಹೊಯ್ಸಳರ ಕಾಲದ ವೀರಗಲ್ಲು, ಮಾಸ್ತಿಕಲ್ಲುಗಳು, ಮಲ್ಲೇಶ್ವರ ದೇವಾಲಯ ಪ್ರದೇಶದಲ್ಲಿ ದೊರೆತಿವೆ. ಇವರದೇ ಕಾಲದ್ದೆನ್ನಲಾದ ಕೋಟೆಯಿತ್ತೆಂದು ಹೇಳಲಾಗುತ್ತದೆ. ಈಗ ನಶಿಸಿಹೋಗಿದೆ. ದುರ್ಗಾಪರಮೇಶ್ವರಿ, ಆಂಜನೇಯ, ಕೆಂಪಾಂಬ, ಕಾಳಿಕಾಂಬ, ಲಕ್ಷ್ಮಿ, ಬನಶಂಕರಿ, ಗಣಪತಿ, ಈಶ್ವರ, ವೀರಭದ್ರ, ಗಂಗಮಾಳಮ್ಮ, ಅಯ್ಯಪ್ಪ, ಮಲ್ಲೇಶ್ವರ ಮತ್ತಿತರ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ನಾಲ್ಕು ಮಸೀದಿಗಳು, ೩ ದರ್ಗಾ ಹಾಗೂ ಮದರಸಗಳಿವೆ. ೨ ಸ್ಮಶಾನಗಳಿವೆ. ದುರ್ಗಾ ಪರಮೇಶ್ವರಿ, ಆಂಜನೇಯ ಮತ್ತು ವಾಸವಾಂಬ ದೇವರ ಜಾತ್ರೆ, ತೇರು ವರ್ಷಕ್ಕೊಮ್ಮೆ ವಿಜೃಂಭಣೆಯಿಂದ ನಡೆಯುತ್ತದೆ. ಹರಕೆ, ಬಲಿ, ಸಿಡಿ, ಕೊಂಡ, ಬಾಯಿಬೀಗ ಪೂಜೆಗಳು ಚಾಲ್ತಿಯಲ್ಲಿವೆ. ಹುಳಿಯಾರು ನಟರಾಜು, ಸಾಹಿತಿ ಬಸವಮೂರ್ತಿ ಇದೇ ಗ್ರಾಮದವರು. ಹುಳಿಯಾರು ಲಕ್ಷ್ಮಣಪ್ಪ ಕಾದಂಬರಿ ಬರೆದಿದ್ದಾರೆ.

ಜಾನಪದ ಕಲಾವಿದ ಚನ್ನಬಸವಯ್ಯ, ಭಜನೆಯ ಗೋಪಾಲರಾವ್ ಮತ್ತು ಭವಾನಿ ರಮೇಶ್, ಚಿತ್ರಕಾರರಾದ ರವಿ, ಮರುಳಸಿದ್ದಯ್ಯ ಹಾಗೂ ರಂಗಭೂಮಿಯ ಕೆ.ಆರ್. ಬಸವರಾಜು ಜನಪ್ರಿಯ ಕಲಾವಿದರು. ಗವಿರಂಗಯ್ಯನವರು ಕಿರುತೆರೆ ಕಲಾವಿದರಾಗಿದ್ದಾರೆ. ಹುಳಿಯಾರಿನಲ್ಲಿ ಶ್ರೀ ಬಾಲಾಜಿ ಚಿತ್ರಮಂದಿರವಿದೆ. ಮಹಿಳಾ ಸಂಘಗಳು, ಹರಿಜನ-ಗಿರಿಜನ ಕ್ಷೇಮಾಭಿವೃದ್ಧಿ ಸಂಸ್ಥೆಗಳು, ವಕ್ಫ್ ಮಂಡಳಿ, ಪರಿಸರ ಯೋಜನೆ, ಸರ್ಕಾರಿ ನೌಕರರ ಸಂಘಗಳು, ಕಾರ್ಮಿಕರ ಸಂಘಗಳು, ಸ್ವಯಂಸೇವಾ ಸಂಸ್ಥೆಗಳಿವೆ.

ರೈತ ಚಳವಳಿ, ಭೂದಾನ ಚಳವಳಿ, ಭೂ ಹೋರಾಟ ಚಳವಳಿ, ಕನ್ನಡ ಚಳವಳಿ, ದಲಿತ ಚಳವಳಿ, ಮಹಿಳಾ ಚಳವಳಿಗಳು ನಡೆದಿರುತ್ತವೆ. ಕಲ್ಯಾಣ ಕಾರ್ಯಕ್ರಮವಾದ ಸಾಮೂಹಿಕ ವಿವಾಹಗಳು ನಡೆಯುತ್ತಿರುತ್ತವೆ. ಹುಳಿಯಾರು ಕೆಂಚಮ್ಮನನ್ನು ಕುರಿತ ಜನಪದ ಖಂಡಕಾವ್ಯವನ್ನು ಡಾ.ಚಿಕ್ಕಣ್ಣ ಯಣ್ಣೆಕಟ್ಟೆ ಸಂಗ್ರಹಿಸಿ 'ಬಂಡಿ ಬಂದಾವು ಬಾಳೆ ವನದಾಗೆ' ಕೃತಿಯಲ್ಲಿ ಪ್ರಕಟಿಸಿದ್ದಾರೆ. ಹುಳಿಯಾರು ಕೆಂಚಮ್ಮನ ಜಾತ್ರೆ ಒಂದು ವಾರದವರೆಗೆ ನಡೆಯುತ್ತದೆ.

## ಹುಳಿಯಾರು ಹೈಸ್ಕೂಲ್ ಬಡಾವಣೆ

ಹುಳಿಯಾರಿನ ಬಸ್ ನಿಲ್ದಾಣದಿಂದ ಪೂರ್ವದಲ್ಲಿ ಹುಳಿಯಾರು ಮಧ್ಯದಲ್ಲಿಯೇ ಹೊಸ ಬಡಾವಣೆ ಇದೆ. ಈ ಪ್ರದೇಶದಲ್ಲಿ ಹೈಸ್ಕೂಲ್, ಪದವಿ ಪೂರ್ವ ಕಾಲೇಜು ಇರುವುದರಿಂದಾಗಿ ಹೈಸ್ಕೂಲ್ ಬಡಾವಣೆ ಎಂದು ಕರೆಯುತ್ತಾರೆ. ಇಲ್ಲಿ ಬಸ್ ನಿಲ್ದಾಣ ಕೆಇಬಿಗೆ ಒಂದು ರಸ್ತೆ ಇದೆ. ವೀರಶೈವರು, ಕುರುಬರು, ವೈಶ್ಯರು ಇಲ್ಲಿನ ನಿವಾಸಿಗಳಾಗಿದ್ದಾರೆ. ಇಲ್ಲಿ ಒಟ್ಟು ೫೦೦ ಮನೆಗಳಿದ್ದು ೧೪೬೪ ಜನಸಂಖ್ಯೆಯನ್ನು ಹೊಂದಿದ್ದಾರೆ. ಹೈಸ್ಕೂಲ್, ಪದವಿ ಪೂರ್ವ ಕಾಲೇಜು, ಪ್ರವಾಸಿ ಮಂದಿರ, ಕೆಇಬಿ ಕಛೇರಿ, ಸರ್ಕಾರಿ ಕಛೇರಿಗಳು ಈ ಬಡಾವಣೆಯಲ್ಲಿ ಬರುತ್ತವೆ. ಪಡಿತರ, ಶಿಕ್ಷಣ ವಿಷಯಗಳಿಗೆ ಇಲ್ಲಿಯೇ ವ್ಯವಸ್ಥೆಯಿದೆ. ಎಲ್ಲರ ಮನೆಗಳಲ್ಲಿ ಶೌಚಾಲಯದ ಬಳಕೆ ಇದೆ. ಕಾಂಕ್ರೀಟ್, ಹೆಂಚಿನ ಸ್ವರೂಪದ ಮನೆಗಳಿವೆ. ಕೆಲವು ಜನತಾ, ಇಂದಿರಾ ಆವಾಸ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ೨೫ ಕಿರಾಣಿ ಅಂಗಡಿ, ೬ ಹೋಟೆಲ್, ಎಲೆಕ್ಟ್ರಾನಿಕ್, ಬಟ್ಟೆ ಅಂಗಡಿಗಳಿವೆ. ರಸ್ತೆ ಬದಿ ಗೂಡಂಗಡಿ ಹಾಗೂ ತಳ್ಳುವ ಗಾಡಿ ವ್ಯಾಪಾರವಿದೆ. ಉದ್ಯೋಗಸ್ಥರು, ವ್ಯಾಪಾರಿಗಳು, ಕಾರ್ಮಿಕರು ಈ ಬಡಾವಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು ಉಪ್ಪಿಟ್ಟು, ದೋಸೆ ಅಮುಖ್ಯ ಆಹಾರವಾಗಿದೆ. ಸಾಂದರ್ಭಿಕವಾಗಿ ಬಾಡೂಟ, ಹೋಳಿಗೆ ಊಟದ ವ್ಯವಸ್ಥೆಯಿದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ದುರ್ಗಮ್ಮ ದೇವಸ್ಥಾನವಿದ್ದು ವಾರ್ಷಿಕವಾಗಿ ಆರತಿ, ಬಾನ, ಬಲಿ, ಹರಕೆ ಸಂಪ್ರದಾಯವಿದೆ. ಯುಗಾದಿ, ದೀಪಾವಳಿ, ಮಹಾನವಮಿ, ಗೌರಿ–ಗಣೇಶ, ಶಿವರಾತ್ರಿ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹುಳಿಯಾರು ವಸಂತನಗರ

ಹುಳಿಯಾರು ವಸಂತನಗರ ಹುಳಿಯಾರಿನ ಹೊಸ ಬಡಾವಣೆಯಾಗಿದೆ. ಹುಳಿಯಾರು–ಹೊಸದುರ್ಗ ರಸ್ತೆಯಲ್ಲಿ ಈ ಬಡಾವಣೆಯಿದ್ದು ೮೧೪ ಮನೆಗಳಿವೆ. ೧೧೦೦ ಜನಸಂಖ್ಯೆ ಹೊಂದಿದ್ದು ಇಲ್ಲಿ ವೀರಶೈವರು, ವೈಶ್ಯರು, ಲಂಬಾಣಿಗರು, ಕುರುಬರು, ದಾಸರು, ಬ್ರಾಹ್ಮಣರು ನೆಲೆಸಿದ್ದಾರೆ. ಇಲ್ಲಿನ ಮನೆಗಳು ಹೆಂಚಿನ, ಕಾಂಕ್ರೀಟ್ ಸ್ವರೂಪದಲ್ಲಿವೆ. ಇವುಗಳಲ್ಲಿ ಕೆಲವು ಆಶ್ರಯ ಮನೆಗಳಿವೆ. ವ್ಯಾಪಾರಿಗಳು, ಉದ್ಯೋಗಿಗಳು, ಕಾರ್ಮಿಕರು, ಭೂಮಾಲೀಕರು ಇಲ್ಲಿದ್ದಾರೆ. ಕೆಲವರು ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ವ್ಯವಸಾಯಗಾರರು ರಾಗಿ, ಹೆಸರು, ತೊಗರಿ, ಅವರೆ, ಹುರುಳಿ ಬೆಳೆಯುತ್ತಾರೆ. ಹಸು, ಎಮ್ಮೆ ಸಾಕುಪ್ರಾಣಿಗಳು. ಹಸುಗಳನ್ನು ಹಾಲಿನ ಸಂಗ್ರಹಕ್ಕಾಗಿ ಸಾಕಲಾಗಿದೆ. ಕೊಬ್ಬರಿ, ಮರ, ಹಲಗೆ, ದಿಮ್ಮಿ ಇವು ವ್ಯಾಪಾರಿ ಸರಕಾಗಿದೆ. ವೀಳ್ಯದೆಲೆ, ಹಣ್ಣು, ತರಕಾರಿ ವ್ಯಾಪಾರಿಗಳಿದ್ದಾರೆ. ಬಸ್ ಮಾಲೀಕರು, ಲಾರಿ, ಟ್ರ್ಯಾಕ್ಟರ್ ಮಾಲೀಕರಿದ್ದಾರೆ. ಸ್ಥಿರ ಹಾಗೂ ಸಂಚಾರಿ ದೂರವಾಣಿಗಳಿವೆ. ಇಂಟರ್‌ನೆಟ್, ಡಿಟಿಎಚ್ ಸಂಪರ್ಕವಿದೆ. ಪ್ರಿಂಟಿಂಗ್ ಪ್ರೆಸ್, ಜೆರಾಕ್ಸ್, ಫೋಟೋ ಸ್ಟುಡಿಯೋ, ಮಾಲ್‌ಗಳಿವೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನಗಳ ೧೬ ಫಲಾನುಭವಿಗಳಿದ್ದು ಹೋಟೆಲ್‌ಗಳು, ವಸತಿ ನಿಲಯಗಳಿವೆ. ಸೀತಾರಾಮ, ಗಣಪತಿ, ವಾಸವಿ, ಕಾಳಿಕಾಂಬ, ಶ್ರೀ ಬನಶಂಕರಿ ದೇವಾಲಯಗಳಿವೆ. ಕವಿ ಬಸವಮೂರ್ತಿ, ಲೇಖಕ ಡಾ.ಹಾಲಪ್ಪ, ರಂಗಭೂಮಿ ಕಲಾವಿದರಾದ ಮರುಳಸಿದ್ದಯ್ಯ ಈ ಬಡಾವಣೆಯಲ್ಲಿದ್ದಾರೆ. ವಾಸವಿ ಜಯಂತಿ, ಸಿದ್ಧರಾಮ ಜಯಂತಿ, ಕನಕದಾಸ ಜಯಂತಿ ಕಾರ್ಯಕ್ರಮಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಯುಗಾದಿ, ಗೌರಿ–ಗಣೇಶ, ದಸರಾ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ೬ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘ, ೪ ಸ್ತ್ರೀಶಕ್ತಿ ಸಂಘಗಳಿವೆ. ಅಕ್ಕಮಹಾದೇವಿ ಮಹಿಳಾ ಸಂಘವಿದೆ. ಪೆಟ್ರೋಲ್ ಬಂಕ್, ಪ್ರವಾಸಿ ಮಂದಿರ, ಸಾಮಿಲ್‌ಗಳಿವೆ. ಮಾಜಿ ಶಾಸಕ ಕಿರಣ್‌ಕುಮಾರ್ ಇಲ್ಲಿ ನೆಲೆಸಿದ್ದಾರೆ.

## ಹುಳಿಯಾರು ಇಂದಿರಾನಗರ

ಹುಳಿಯಾರು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹೋಬಳಿ ಕೇಂದ್ರ. ಈ ಗ್ರಾಮದ ಇಂದಿರಾ ನಗರ ಹೊಸ ಬಡಾವಣೆಯಾಗಿದೆ. ಇಲ್ಲಿ ೧೬೨೦ ಜನಸಂಖ್ಯೆಯನ್ನು ಹೊಂದಿದ್ದು ೬೮೦ ಮನೆಗಳಿವೆ. ಆದಿಕರ್ನಾಟಕ, ಆದಿದ್ರಾವಿಡ, ಕುರುಬರು, ಬಂಜಾರರು,

ಮುಸ್ಲಿಂ ಈ ಬಡಾವಣೆಯ ನಿವಾಸಿಗಳಾಗಿದ್ದಾರೆ. ಇವರು ಕೃಷಿ ಹಾಗೂ ಕೃಷಿ ಕಾರ್ಮಿಕರು, ವ್ಯಾಪಾರಿಗಳು, ಸರ್ಕಾರಿ ನೌಕರರು ನೆಲೆಸಿದ್ದಾರೆ. ರಸ್ತೆ ಬದಿಯ ವ್ಯಾಪಾರಿಗಳೂ ಇದ್ದಾರೆ. ಕುಡಿಯಲು ಹುಳಿಯಾರು ಗ್ರಾಮಪಂಚಾಯ್ತಿಯಿಂದ ನೀರು ಪೂರೈಸಲಾಗುತ್ತದೆ. ಒಂದು ೧೫೦೦ ಲೀ. ಸಾಮರ್ಥ್ಯದ ಓವರ್‌ಹೆಡ್ ಟ್ಯಾಂಕ್ ಇದೆ. ನಲ್ಲಿ ಸಂಪರ್ಕವಿದೆ. ಇಲ್ಲಿನ ಮನೆಗಳು ಕಾಂಕ್ರೀಟ್, ಹೆಂಚಿನ ಸ್ವರೂಪದಲ್ಲಿದ್ದು ಇವುಗಳ್ಲಲಿ ಕೆಲವು ಸರ್ಕಾರಿ ವಸತಿ ಯೋಜನೆಗಳಾದ ಜನತಾ, ಆಶ್ರಯ, ಇಂದಿರಾ ಆವಾಸ್, ವಾಜಪೇಯಿ ಆವಾಸ್, ಭಾಗ್ಯಜ್ಯೋತಿ ಯೋಜನೆಯ ೧೬ ಫಲಾನುಭವಿಗಳಿದ್ದಾರೆ. ರಾಗಿ, ಶೇಂಗಾ, ಹೆಸರು, ಈರುಳ್ಳಿ, ಹುರುಳಿ ಬೆಳೆಯುತ್ತಾರೆ. ಕೊಬ್ಬರಿ, ಈರುಳ್ಳಿ, ಹುಣಸೇಹಣ್ಣು ವ್ಯಾಪಾರಿ ಸರಕಾಗಿದೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಪ್ರೌಢಶಾಲೆ, ಮಾರುತಿ ಶಾಲೆ ಈ ಬಡಾವಣೆಯಲ್ಲಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯಗಳಿವೆ. ಸಾಕ್ಷರತೆ ೮೪% ರಷ್ಟಿದೆ. ಹುಳಿಯಾರು ಪಂಚಾಯ್ತಿ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭೆ, ಹುಳಿಯಾರು ಜಿಲ್ಲಾ ಪಂಚಾಯ್ತಿಗೆ ಸೇರಿದೆ. ಶಿಕ್ಷಕರು, ಸಾರಿಗೆ, ಕಂದಾಯ, ಕೆಇಬಿ, ಮೀನುಗಾರಿಕೆ, ಆರೋಗ್ಯ ಇಲಾಖೆಗೆ ಸೇರಿದ ೬೭ ಜನ ಸರ್ಕಾರಿ ನೌಕರರಿದ್ದಾರೆ. ದುರ್ಗಮ್ಮ, ಮಾರಮ್ಮ ಊರ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಆರತಿ, ಬಾನ, ಉತ್ಸವ ನಡೆಯುತ್ತದೆ. ಹುಳಿಯಾರು ಕೆಂಚಮ್ಮನ ಜಾತ್ರೆ ಉತ್ಸವದಲ್ಲಿ ಈ ಬಡಾವಣೆಯವರ ಪಾತ್ರ ವಿಶೇಷವಾಗಿದೆ. ಎರಡು ಅಂಗನವಾಡಿ ಕೇಂದ್ರಗಳಿವೆ. ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲಾಗುತ್ತದೆ. ಪಡಿತರ ಅಂಗಡಿಯಿದ್ದು ಈ ಬಡಾವಣೆಗೆ ಸಂಬಂಧಿಸಿದಂತೆ ದವಸ, ಎಣ್ಣೆ ವಿತರಿಸಲಾಗುತ್ತದೆ. ಹಸು, ಕುರಿ, ಮೇಕೆ ಈ ಬಡಾವಣೆಯ ಸಾಕುಪ್ರಾಣಿಗಳು. ದ್ವಿಚಕ್ರ ವಾಹನ, ಟ್ರ್ಯಾಕ್ಟರ್‌ಗಳಿವೆ. ಒಂದು ಸಾಮಿಲ್ ಇದೆ. ೧೪ ಗೂಡಂಗಡಿಗಳಿವೆ. ೪ ಹೋಟೆಲ್‌ಗಳಿವೆ.

## ಹುಳಿಯಾರು ಉರ್ದು ಸ್ಕೂಲ್ ಬಡಾವಣೆ

ಹುಳಿಯಾರು ಉರ್ದು ಸ್ಕೂಲ್ ಬಡಾವಣೆ ಹುಳಿಯಾರಿನ ಕೇಂದ್ರಸ್ಥಳದಲ್ಲಿದೆ. ಹುಳಿಯಾರು ಬಸ್ ನಿಲ್ದಾಣದಿಂದ ಬಲಬದಿಗೆ ಸ್ವಲ್ಪ ದೂರದಲ್ಲಿದೆ. ಮೊದಲಿಗೆ ಉರ್ದು ಶಾಲೆ ಹಿಂಭಾಗ ಪ್ರವಾಸ ಮಂದಿರ, ಸರ್ಕಾರಿ ನೌಕರರಸಂಘ ಇಲ್ಲಿ ಆರಂಭವಾಗಿದೆ. ಆದುದರಿಂದ ಉರ್ದು ಶಾಲೆಯನ್ನು ಕೇಂದ್ರವಾಗಿರಿಸಿಕೊಂಡು ಉರ್ದು ಸ್ಕೂಲ್ ಬಡಾವಣೆ ಎಂದು ಕರೆಯುತ್ತಾರೆ. ಇಲ್ಲಿ ಮುಸ್ಲಿಂ, ಆದಿಕರ್ನಾಟಕ, ಬಂಜಾರ, ಬೋವಿ, ಅಕ್ಕಸಾಲಿಗ, ವೈಶ್ಯರು, ಕುರುಬರು ಇಲ್ಲಿ ನೆಲೆಸಿದ್ದಾರೆ. ಇಲ್ಲಿನ ಮನೆಗಳು ಹೆಂಚಿನ, ಮಾಳಿಗೆ, ಶೀಟಿನ ಸ್ವರೂಪದಲ್ಲಿದ್ದು ೧೯೦೪ ಮನೆಗಳಿದ್ದು ೩೦೦೦ ಜನರಿದ್ದಾರೆ. ಇವು ಹಳೆಯ ಮಾದರಿ ಮನೆಗಳು. ಕೆಲವು ಮನೆಗಳು ಇಂದಿರಾ ಆವಾಸ್, ಜನತಾ ವಸತಿ ಯೋಜನೆಯ ಫಲಾನುಭವಿಗಳದ್ದಾಗಿದೆ. ಹುಳಿಯಾರು ಗ್ರಾಮ ಪಂಚಾಯ್ತಿಯಿಂದ ಕುಡಿಯಲು ನೀರನ್ನು ಒದಗಿಸಲಾಗುತ್ತಿದೆ. ನಲ್ಲಿ ಸಂಪರ್ಕ ಹೊಂದಿದ್ದು ೧ ಲಕ್ಷ ಲೀ. ಸಾಮರ್ಥ್ಯದ ಟ್ಯಾಂಕ್ ಇದೆ. ಪೂರ್ವಕ್ಕೆ ಕೆಇಬಿ ಕಛೇರಿ, ಮಂಡಿ ಮಳಿಗೆಗಳು, ಬಲಕ್ಕೆ ಬಸ್ ನಿಲ್ದಾಣ, ಬ್ಯಾಂಕ್‌ಗಳು ಇವೆ. ಸಂತೆ ಮೈದಾನ, ಅಂಗಡಿ ಮಳಿಗೆಗಳಿವೆ. ೨೦೦ ಅಂಗಡಿಗಳು ಈ ಬಡಾವಣೆಯಲ್ಲಿವೆ. ಮಟನ್ ಮಾರ್ಕೆಟ್, ತರಕಾರಿ ಮಾರ್ಕೆಟ್, ಹಣ್ಣಿನ ಅಂಗಡಿಗಳಿವೆ. ಉರ್ದು ಶಾಲೆ, ಹೈಸ್ಕೂಲ್, ಕೇಶವ ಶಾಲೆ ಈ ಬಡಾವೆಯಲ್ಲಿವೆ. ಲಕ್ಷ್ಮಿ ದೇವಾಲಯ, ವಾಸವಿ ದೇವಾಲಯ, ಮದರಸಗಳಿವೆ. ಕಾಳಿಕಾಂಬ ದೇವಾಲಯವಿದೆ. ಆಸ್ಪತ್ರೆ, ಖಾಸಗಿ ಆಸ್ಪತ್ರೆಗಳಿವೆ. ಹಸು ಹಾಲು ಸಂಗ್ರಹಕ್ಕಾಗಿವೆ. ಹಾಲಿನ ಮಾರಾಟ ಡೈರಿಗಳಿವೆ. ಶಿಕ್ಷಕರು, ಸಾರಿಗೆ, ಕೆಇಬಿ, ಅರಣ್ಯ ಇಲಾಖೆಗೆ ಸೇರಿದ ೭೦ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಬಸ್ ಡ್ರೈವರ್, ಲಾರಿ, ಟ್ರ್ಯಾಕ್ಟರ್ ಡ್ರೈವರ್‌ಗಳಿದ್ದಾರೆ. ನಾರಿನ ಫ್ಯಾಕ್ಟರಿ, ಗ್ಯಾರೇಜ್, ಗ್ಯಾಸ್, ಜವಳಿ, ಪುರಿಭಟ್ಟಿ, ಹೂ-ತರಕಾರಿ, ಅಂಗಡಿಗಳ ಕಾರ್ಮಿಕರಿದ್ದಾರೆ. ಯುಗಾದಿ, ದಸರಾ, ದೀಪಾವಳಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ವಾಸವಿ ಜಯಂತಿ, ತೇರು, ಮೆರವಣಿಗೆ ಇರುತ್ತದೆ. ಹುಳಿಯಾರು ಕೆಂಪಮ್ಮ ಬಾಬಯ್ಯನ ಜಲದಿ ಉತ್ಸವದಲ್ಲಿ ಸಾಮೂಹಿಕವಾಗಿ ಭಾಗವಹಿಸುತ್ತಾರೆ.

## ಹುಳಿಯಾರು ಅಮಾನಿಕೆರೆ

ಹುಳಿಯಾರು ಒಂದು ಹೋಬಳಿ ಕೇಂದ್ರ. ಇದು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ೨೫ ಕಿಮೀ ದೂರದಲ್ಲಿದ್ದು ಹುಳಿಯಾರಿಗೆ ಹೊಂದಿಕೊಂಡಂತೆ ಹುಳಿಯಾರು ಅಮಾನಿಕೆರೆ ಜನವಸತಿ ಪ್ರದೇಶವಿದೆ. ಇಲ್ಲಿ ೧೭ ಮನೆಗಳಿದ್ದು ಇವು ಹೆಂಚಿನ, ಶೀಟಿನ ಸ್ವರೂಪದ ಮನೆಗಳಾಗಿವೆ. ಜನತಾ, ಆಶ್ರಯ, ಜನತಾ ಮನೆಯ ಫಲಾನುಭವಿಗಳಿದ್ದಾರೆ. ಕುಡಿಯಲು ಹುಳಿಯಾರು ಪಂಚಾಯ್ತಿ ವತಿಯಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಒಂದು ಕೊಳವೆ ಬಾವಿಯಿದ್ದು ಸಿಸ್ಟರ್ನ್‌ಗಳಿವೆ. ರೈತರೇ ಇಲ್ಲಿನ ನಿವಾಸಿಗಳು ರಾಗಿ, ಭತ್ತ, ಹೆಸರು, ಹುರುಳಿ, ಈರುಳ್ಳಿ ಬೆಳೆಯುತ್ತಾರೆ. ತೋಟಗಾರಿಕೆ ಬೆಳೆಯಾಗಿ ತೆಂಗಿನ, ಅಡಿಕೆ ತೋಟವಿದೆ.

ತೆಂಗು, ಅಡಿಕೆ, ಈರುಳ್ಳಿ, ತರಕಾರಿಗಳು ವ್ಯಾಪಾರಿ ಸರಕಾಗಿದೆ. ಹಸು, ಎಮ್ಮೆ, ಕುರಿ ಸಾಕಿದ್ದಾರೆ. ಹಾಲು ಸಂಗ್ರಹಿಸಿ ಹುಳಿಯಾರು ಡೈರಿಗೆ ಹಾಗೂ ಹೋಟೆಲ್‌ಗಳಿವೆ. ವರ್ತನೆಯ ಆಧಾರದ ಮೇಲೆ ಹಾಲು ಹಾಕಲಾಗುತ್ತಿದೆ. ಎತ್ತಿನ ಗಾಡಿಗಳಿವೆ. ದ್ವಿಚಕ್ರ ವಾಹನಗಳಿವೆ. ಪಡಿತರ, ಶಿಕ್ಷಣ ವಿಚಾರಗಳಿಗೆ ಹುಳಿಯಾರು ಮುಖ್ಯ ಗ್ರಾಮಕ್ಕೆ ಬರಬೇಕಿದೆ. ಇದೊಂದು ಬಯಲು ಶೌಚಾಲಯ ಹೊಂದಿರುವ ಗ್ರಾಮ. ಹುಳಿಯಾರು ಸಂತೆಗೆ ಬರುತ್ತಾರೆ. ಕೆಂಚಮ್ಮ ಸ್ತ್ರೀಶಕ್ತಿ ಸಂಘವಿದ್ದು ಮಹಿಳೆಯರ ಆರ್ಥಿಕ ಪ್ರಗತಿಗೆ ಪೂರಕವಾಗಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನಗಳ ಫಲಾನುಭವಿಗಳಿದ್ದಾರೆ. ಹುಳಿಯಾರು ಗ್ರಾಮಪಂಚಾಯಿತಿ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿಗೆ ಸೇರಿದೆ. ಅಂಚೆ ಸೌಕರ್ಯವನ್ನು ಹುಳಿಯಾರಿನಿಂದಲೇ ಪಡೆಯುತ್ತಾರೆ. ಪಶು ಆಸ್ಪತ್ರೆ, ಬ್ಯಾಂಕ್ ಹಾಗೂ ಆರೋಗ್ಯ, ವಿದ್ಯುತ್, ನಾಡ ಕಛೇರಿಗಳಿವೆ. ಹುಳಿಯಾರು ಕೇಂದ್ರವಾಗಿದೆ. ಕೆಂಚಮ್ಮ ದೇವಿಯ ಉತ್ಸವ, ಚಪ್ಪರ ವ್ಯವಸ್ಥೆ, ಆರತಿ, ಬಾನ, ಜಾತ್ರೆಯ ವ್ಯವಸ್ಥೆಯನ್ನು ಇದೇ ಗ್ರಾಮದವರು ಮುತುವರ್ಜಿಯಿಂದ ಮಾಡುತ್ತಾರೆ. ಯುಗಾದಿ, ದೀಪಾವಳಿ, ದಸರಾ, ಗೌರಿ–ಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ.

## ಹನುಮಂತಪುರ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೪೦ ಕಿಮೀ ಅಂತರದಲ್ಲಿದೆ. ಇದು ಮೋಟಿಹಳ್ಳಿ ಮಜರೆ ಗ್ರಾಮವಾಗಿದ್ದು ಬಯಲುನಾಡಾಗಿದೆ. ಕೆಂಪು ಮಿಶ್ರಿತ ಜೌಗು ಭೂಮಿಯನ್ನು ಹೊಂದಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೨ ತೆರೆದ ಬಾವಿಗಳಿದ್ದು ಕೆಲವು ಬತ್ತಿಹೋಗಿದ್ದು ಆಧುನಿಕ ಕೊಳವೆ ಬಾವಿಗಳಿದ್ದು ಕೃಷಿ ಚಟುವಟಿಕೆಗೆ ಅಲ್ಪ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯಿತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಸಿಳ್ಳೇಕ್ಯಾತ ಸಮುದಾಯವೇ ಪ್ರಧಾನವಾಗಿದ್ದು ಈಡಿಗ, ಲಂಬಾಣಿ ಎಂಬ ಕಿರು ಸಮುದಾಯಗಳಾಗಿವೆ. ಪ್ರಮುಖ ಭಾಷೆಯಾಗಿ ಮರಾಠಿ, ಕನ್ನಡ ಮತ್ತು ಲಂಬಾಣಿ ಮಾತನಾಡುತ್ತಾರೆ. ಒಟ್ಟು ೮೩ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೪೦೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೫೧ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೮ ಮನೆಗಳಲ್ಲಿ ಶೌಚಾಲಯದ ಸೌಲಭ್ಯವಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕೃಷಿ ಕೂಲಿ ಕಾರ್ಮಿಕರು ಮತ್ತು ನೌಕರರು ವಾಸವಾಗಿದ್ದಾರೆ. ಕೂದಲು, ಪಾತ್ರೆ, ಪೀಪಿ– ಪಿನ್ನು ಮಾರುವ ವ್ಯಾಪಾರಿಗಳಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯಿತಿ ಕ್ಷೇತ್ರ, ಯಳನಡು ತಾಲ್ಲೂಕು ಪಂಚಾಯಿತಿ ಹಾಗೂ ಕೋರಗೆರೆ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘಗಳಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೧ ಸಾಕ್ಷರತೆ ಇದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಜಿಲ್ಲಾ ಮುಖ್ಯರಸ್ತೆ ಮತ್ತು ಕಚ್ಚಾ ರಸ್ತೆಯಿದ್ದು ಖಾಸಗಿ ಬಸ್ಸು,

ಆಟೋ ರಿಕ್ಷಾ ಮತ್ತು ಸ್ವಂತ ವಾಹನಗಳಿಂದ ಸಾರಿಗೆ ವ್ಯವಸ್ಥೆಯಿದೆ.

ಆಂಜನೇಯಸ್ವಾಮಿ ದೇವಾಲಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹೊನ್ನಯ್ಯನಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೪ ಕಿಮೀ ಅಂತರದಲ್ಲಿದೆ. ಹೊನ್ನಯ್ಯನಪಾಳ್ಯ ಕೆಹಕೆರೆ ಮಜರೆ ಬಯಲು ನಾಡಾಗಿದೆ. ಹೊನ್ನಯ್ಯ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ಹೊನ್ನಯ್ಯನಪಾಳ್ಯ ಎಂದು ಹೆಸರಾಗಿದೆ. ಅಡಾಣಿಕಲ್ಲು ಗ್ರಾಮಕ್ಕೆ ಸೇರ್ಪಡೆಯಾಗಿದೆ. ಕರಿಕಲ್ಲು ಮಿಶ್ರಿತ ಕೆಂಪು ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಗುಡ್ಡ, ಕಲ್ಲು ಬಂಡೆಗಳ ಹಾಸನ್ನು ಕಾಣಬಹುದು. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಅಕ್ಕಿಕಲ್ಲುಗುಡ್ಡದಹಳ್ಳಿ, ದೊಡ್ಡನಕಟ್ಟೆ, ದಸರಪ್ಪನ ಕಟ್ಟೆಗಳು ಮಳೆ ಬಂದರೆ ಮಾತ್ರ ತುಂಬಿ ಹರಿಯುತ್ತದೆ. ಜಲಾಗಾರವಾದ ವಜ್ರಪ್ಪನ ಒಡ್ಡನ್ನು ಕಾಣಬಹುದು. ತೆರೆದ ಬಾವಿಗಳಿದ್ದು ಕೆಲವು ಬಾವಿಗಳು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿಚಟುವಟಿಕೆಗೆ ಮೂಲವಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೪ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಕುಡಿಯುವ ನೀರಿನ ಒರತೆಗಳಾಗಿವೆ. ಲಿಂಗಾಯಿತ, ಉಪ್ಪಾರ ಸಮುದಾಯವೇ ಪ್ರಧಾನವಾಗಿದ್ದು ಕನ್ನಡ ಮಾತನಾಡುತ್ತಾರೆ. ಒಟ್ಟು ೧೩೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೫೩೬ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೬೨ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಗುಡಿಸಲು ಮನೆಗಳಿವೆ. ೫೨ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್, ಟೆಂಪೋ ಕಾಣಬಹುದು. ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಸಾಂಪ್ರದಾಯಿಕ ಹೈನುಗಾರಿಕೆ ಹಾಗೂ ಆಧುನಿಕ ಡೈರಿ ವ್ಯವಸ್ಥೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುವವರಿದ್ದಾರೆ. ರಾಮಲಿಂಗಪ್ಪ ನಾಟಿ ವೈದ್ಯರಾಗಿದ್ದಾರೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಕೆಂಕೆರೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶೇ.೮೧ ರಷ್ಟು ಸಾಕ್ಷರತಾ ಪ್ರಮಾಣವಿದೆ. ಸ್ವರ್ಣಗೌರಿ, ಕಾಳಿಕಾಂಬ, ಶಾರದ ಸ್ತ್ರೀಶಕ್ತಿ ಸಂಘಗಳು ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಭೂತಪ್ಪ, ಬಸವೇಶ್ವರ ಪ್ರಮುಖ ದೇವಾಲಯಗಳು. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

# ಹೊಯ್ಸಳಕಟ್ಟೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತರ ದಿಕ್ಕಿಗೆ ೩೮ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೯೫೫.೩೦ ಹೆಕ್ಟೇರ್. ಇದೊಂದು ಕಂದಾಯ ಗ್ರಾಮ, ಬಯಲು ನಾಡಾಗಿದೆ. ಹೊಯ್ಸಳರ ಕಟ್ಟೆ ಅಥವಾ ಕೆರೆಯ ಹೆಸರಲ್ಲಿ ಈ ಗ್ರಾಮದ ಹೆಸರು ಪ್ರಕಟವಾಗಿ ಹೊಯ್ಸಳಕಟ್ಟೆ ಆಗಿದೆ. ಮರಳು ಮಿಶ್ರಿತ ಬಿಳಿ ಮತ್ತು ಎರೆ ಭೂಮಿಯಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಗ್ರಾಮ ಹೊಯ್ಸಳರ ಕಾಲದ ರಚನೆಯಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಕಾಡುಹಂದಿ, ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ನವಿಲು, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ತೋಣಸಿನಕಟ್ಟೆ ಹಳ್ಳವು ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತದೆ. ಕಮ್ಮಾರತಿ ಕಟ್ಟೆ ಮಳೆಗಾಲದಲ್ಲಿ ತುಂಬಿ ಜಾನುವಾರುಗಳಿಗೆ ಅನುಕೂಲವಾಗಿದೆ. ಬೋರನಕಣಿವೆ ಜಲಾಶಯ ಇಲ್ಲಿಗೆ ಸಮೀಪದಲ್ಲಿದ್ದು ಕೆರೆ ತುಂಬಿದಾಗ ನೀರನ್ನು ಕಾಲುವೆಯ ಮೂಲಕ ಹೊಯ್ಸಳಕಟ್ಟೆಯ ಕೃಷಿಕರು ಬಳಸಿ ಬೆಳೆಯುತ್ತಾರೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೨ ಕೈಪಂಪುಗಳ ವ್ಯವಸ್ಥೆಯಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಕುಡಿಯುವ ನೀರಿನ ಒರತೆಗಳಾಗಿವೆ.

ಒಕ್ಕಲಿಗ ಸಮುದಾಯ ಪ್ರಧಾನವಾಗಿದ್ದು ಆದಿದ್ರಾವಿಡ, ಆದಿಕರ್ನಾಟಕ, ಮುಸ್ಲಿಂ, ಕಮ್ಮಾರ, ವೈಶ್ಯ, ಅಗಸ, ಶೆಟ್ಟಿ, ನಾಯಕ, ಕ್ಷೌರಿಕರು, ಈಡಿಗ ಸಮುದಾಯಗಳು ಕಂಡುಬರುತ್ತವೆ. ಒಟ್ಟು ೨೭೮ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೨೮೧ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಗುಡಿಸಲುಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೨೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೮೮ ಕುಟುಂಬಗಳಲ್ಲಿ ಶೌಚಾಲಯ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ತರಕಾರಿ-ಸೊಪ್ಪು ಬೆಳೆಯುತ್ತಾರೆ. ಗ್ರಾಮದಲ್ಲಿ ಶಿಥಿಲಗೊಂಡಿರುವ ಒಂದು ಕೋಟೆ, ಊರ ಬಾಗಿಲ ಅವಶೇಷಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ಡೈರಿ, ರಾಗಿಮಿಲ್ಲು, ಇಟ್ಟಿಗೆ ಕಾರ್ಖಾನೆ ಹಾಗೂ ಬೀಡಿ ಸುತ್ತುವ ಕೈಗಾರಿಕೆಗಳಿವೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಗ್ರಾಮಪಂಚಾಯ್ತಿಗೆ ಆಯ್ಕೆಯಾಗಿರುವ ಮೂವರು ಸದಸ್ಯರು ೧೦ ಜನ ಸರ್ಕಾರಿ ನೌಕರರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯರಸ್ತೆ ಹಾಗೂ ಕಚ್ಚಾ ರಸ್ತೆಯ ಸಂಪರ್ಕಗಳಿದ್ದು ಸರ್ಕಾರಿ, ಖಾಸಗಿ ಬಸ್ಸುಗಳು, ಆಟೋರಿಕ್ಷಾ, ಟೆಂಪೋ ಮತ್ತು ಸ್ವಂತ ವಾಹನಗಳಿದ್ದು ಸಾರಿಗೆ ವ್ಯವಸ್ಥೆಗಳಾಗಿವೆ. ಸಾರ್ವಜನಿಕ ಗ್ರಂಥಾಲಯವಿದೆ. ಒಂದು ಸ್ಮಶಾನವಿದೆ.

ಎರಡು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೮೪ ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಅಂಚೆ ಕಛೇರಿ, ಕಾವೇರಿ-ಕಲ್ಪತರು ಗ್ರಾಮೀಣ ಬ್ಯಾಂಕ್, ಸ್ತ್ರೀಶಕ್ತಿಗಳು ಹಾಗೂ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ. ಕಾಲೇಜು ಶಿಕ್ಷಣ ಇಲಾಖೆಯ ಪ್ರೊ॥ ಸುಬ್ಬಣ್ಣ, ಪ್ರೊ॥ ಧಣೀಂದ್ರಕುಮಾರಿ ಸೇರಿದಂತೆ ೧೫ ಜನ ಸರ್ಕಾರಿ ನೌಕರರಿದ್ದಾರೆ.

ಇಂಜಿನಿಯರ್ ಇದ್ದಾರೆ. ಗಂಗಾಧರ ಎಂಬುವವರು ಪಶುವೈದ್ಯರಾಗಿದ್ದಾರೆ.

ಆಂಜನೇಯ ದೇವಾಲಯ ಹಾಗೂ ಕಮ್ಮಾರತಿ ಕಟ್ಟೆಯ ರಸ್ತೆಯ ಎಡಬದಿಗೆ ಒಂದು ವೀರಗಲ್ಲು ಇದ್ದು ಅದಕ್ಕೆ ಕಾರಹಬ್ಬದಂದು ವಿಶೇಷ ಪೂಜೆ ಸಲ್ಲಿಸುತ್ತಾರೆ. ಕರಿಯಮ್ಮ, ಆಂಜನೇಯ, ತಿಮ್ಮಪ್ಪ ದೇವರ ದೇವಸ್ಥಾನಗಳಿವೆ. ಕರಿಯಮ್ಮ ದೇವರ ಜಾತ್ರಾ ಮಹೋತ್ಸವ, ರಾಮಪುರದಮ್ಮನ ಜಾತ್ರೆ ಆಚರಿಸುತ್ತಾರೆ. ಬಲಿ, ಆರತಿ, ಹರಕೆ ಸಂಪ್ರದಾಯವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಸುನಂದಮ್ಮ, ರತ್ನಮ್ಮ, ಪುಟ್ಟಜ್ಜಿ ಸೋಬಾನೆ ಕಲಾವಿದರು. ರಂಗದಾಸಪ್ಪ ರಂಗಕಲಾವಿದರು. ಬಿ.ಒ.ಹೆಚ್ ಪ್ರಾಜೆಕ್ಟ್ ವರ್ಕ್‌ನಿಂದ ಈ ಗ್ರಾಮದ ಮಕ್ಕಳನ್ನು ದತ್ತು ಸ್ವೀಕರಿಸಿ ಅವರ ಸರ್ವ ಕಲಿಕೆ, ಊಟ, ವಸತಿ ಸೌಲಭ್ಯ ಕಲ್ಪಿಸಿದ್ದಾರೆ.

## ಹೊಯ್ಸಳಕಟ್ಟೆ ಗೇಟ್

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೭ ಕಿಮೀ ಅಂತರದಲ್ಲಿದೆ. ಹುಳಿಯಾರು-ಸಿರಾ ಮುಖ್ಯರಸ್ತೆಯ ಬಲಬದಿಗೆ ಹೊಯ್ಸಳಕಟ್ಟೆ, ದಬ್ಬಗುಂಟೆ, ದಸೂಡಿ ಮಾರ್ಗದಲ್ಲಿದೆ. ರಸ್ತೆಯ ತಿರುವಿನಲ್ಲಿ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಅಂಗಡಿಗಳು, ಹೋಟೆಲ್ ಬೆಳೆದು ಇಂದು ಒಂದು ಪ್ರಮುಖ ವ್ಯಾಪಾರಿ ಕೇಂದ್ರವಾಗಿ ನಾಗರಿಕ ಸೌಲಭ್ಯಗಳ ತಾಣವಾಗಿದೆ. ಬೋರನಕಣಿವೆ ಜಲಾಶಯಕ್ಕೆ ಸಮೀಪ ಇರುವುದರಿಂದ ಇದೊಂದು ಯಾತ್ರಾಸ್ಥಳದ ಸ್ವರೂಪ ಪಡೆದುಕೊಂಡಿದೆ. ವರ್ತಕರು, ದಲ್ಲಾಳಿಗಳು, ಗೂಡಂಗಡಿಗಳು, ಬಾರ್, ಕೋಳಿ ಅಂಗಡಿ, ಹೋಟೆಲ್ ಇಲ್ಲಿವೆ. ಇಲ್ಲಿಂದ ಮುಂದೆ ಹೊಯ್ಸಳಕಟ್ಟೆ ಗ್ರಾಮವಿದೆ.

ಕುಂಚಿಟಿಗರು, ನಾಯಕರು, ಲಿಂಗಾಯಿತರು, ಮುಸ್ಲಿಂ, ಆದಿಕರ್ನಾಟಕ, ಆದಿದ್ರಾವಿಡ ಜನಾಂಗದ ಜನರು ಇಲ್ಲಿ ನೆಲೆಸಿದ್ದಾರೆ. ವಸತಿಗಳಿಗಿಂತ ವ್ಯಾಪಾರಿಗಳ ವರ್ಗವೇ ಇಲ್ಲಿ ಅಧಿಕವಾಗಿದೆ. ಭೌಗೋಳಿಕ ವಿಸ್ತೀರ್ಣ ಹೊಯ್ಸಳಕಟ್ಟೆ ಕಂದಾಯ ಗ್ರಾಮದ ೯೫೫.೩೦ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಮರಳು ಮಿಶ್ರಿತ ಕಪ್ಪು ಮಣ್ಣಿನಿಂದ ಕೂಡಿದೆ. ಬಲಕ್ಕೆ ಬೋರನಕಣಿವೆ ದೊಡ್ಡ ಕಾಲುವೆ ಹರಿಯುತ್ತದೆ. ಗ್ರಾಮದ ಹಿಂದಕ್ಕೆ ಗದ್ದೆ ಬಯಲು ಇದೆ. ಬಹುತೇಕ ರೈತರು ರಾಗಿ, ಶೇಂಗ, ಭತ್ತ ಬೆಳೆಯುತ್ತಾರೆ. ಬೋರನಕಣಿವೆಯ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಕಿರಿಯ ಕಾಲೇಜಿಗೆ ಮಕ್ಕಳು ಹೋಗುತ್ತಾರೆ. ಇಲ್ಲಿಗೆ ಸಮೀಪದಲ್ಲಿ ಸಾಯಿಬಾಬ ಅಂತರರಾಷ್ಟ್ರೀಯ ಶಾಂತಿಧಾಮ, ಧ್ಯಾನಮಂದಿರಗಳಿವೆ. ೪೭ ಅಂಗಡಿಗಳು ಸೇರಿದಂತೆ ೨೬ ಗುಡಿಸಲು, ಹೆಂಚಿನ ಮನೆಗಳಿವೆ. ೧೪೭ ಜನಸಂಖ್ಯೆ ಹೊಂದಿದೆ. ಬಯಲು ಶೌಚಾಲಯ ಹೊಂದಿದ್ದಾರೆ. ಹೊಯ್ಸಳಕಟ್ಟೆಯ ಕರಿಯಮ್ಮನ ಹಬ್ಬದಲ್ಲಿ ಭಾಗವಹಿಸುತ್ತಾರೆ. ಆರತಿ ಬಾನ ಹೊರಡುತ್ತದೆ. ೮೩% ಸಾಕ್ಷರತೆಯಿದೆ. ಕುಡಿಯಲು ಹೊಯ್ಸಳಕಟ್ಟೆ ಗ್ರಾಮದಿಂದ ನೀರು ಪೂರೈಸಲಾಗುತ್ತದೆ. ೨ ಸಿಸ್ಟನ್‌ಗಳಿದ್ದು ೧ ಕೊಳವೆ ಬಾವಿಯಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹೊಸಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೬ ಕಿಮೀ ಅಂತರದಲ್ಲಿದೆ. ತಿಮ್ಲಾಪುರ ಮಜರೆ ಗ್ರಾಮ ಬಯಲುನಾಡಾಗಿದೆ. ಹೊಸದಾಗಿ ರೂಪುಗೊಂಡ ಕಾರಣ ಹೊಸಹಳ್ಳಿ ಎಂದು ಕರೆಯಲಾಗಿದೆ. ಕೆಂಪು-ಬಿಳಿ ಮಿಶ್ರಿತ ಮರಳು ಭೂಮಿಯು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ನಾಗಸಂದ್ರ ಕೆರೆ ಹಳ್ಳವು ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ತೆರೆದ ಬಾವಿಗಳಿದ್ದು ಬತಿಹೋಗಿ ಕೊಳವೆ ಬಾವಿಗಳು ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೨ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಂದರ್ಭದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಉಪ್ಪಾರ ಸಮುದಾಯವೇ ಪ್ರಧಾನವಾಗಿದ್ದು ಕುರುಬ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೨೪೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೮೮೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೩೨ ಫಲಾನುಭವಿಗಳ ಮನೆಗಳನ್ನು

ಕಾಣಬಹುದು. ೪೧ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಟೆಂಪೋ, ಬೈಕ್‌ಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕೂಲಿ ಕಾರ್ಮಿಕರು ಹೆಚ್ಚಾಗಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಹನುಮಂತಪ್ಪ ಮತ್ತು ಯೋಗೀಶ್ ಸರ್ಕಾರಿ ಹುದ್ದೆಯಲ್ಲಿದ್ದಾರೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಿಮ್ಲಾಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಮೂವರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಕರಿಯಮ್ಮ, ಅಂಬಾ ಭವಾನಿ ಸ್ತ್ರೀಶಕ್ತಿ ಸಂಘಗಳು ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೭೦ ರಷ್ಟು ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೬ ಫಲಾನುಭವಿಗಳಿದ್ದಾರೆ. ಒಂದು ಸ್ಮಶಾನವಿದೆ.

ಆಂಜನೇಯ, ಮಹಾಲಕ್ಷ್ಮಿ, ತಿಮ್ಮಪ್ಪ, ಕೊಲ್ಲಾಪುರದಮ್ಮ ಪ್ರಮುಖ ದೇವಾಲಯಗಳು. ಕೊಲ್ಲಾಪುರದಮ್ಮ ಜಾತ್ರೆ, ತೇರು ತೆಪ್ಪ, ಪಲ್ಲಕ್ಕಿ ಇಲ್ಲಿನ ವಿಶೇಷಗಲು. ಸಿಡಿ, ಓಕುಳಿ, ಬಲಿ ಚಾಲ್ತಿಯಲ್ಲಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹೊಸಹಳ್ಳಿ ಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೨೭ ಕಿಮೀ ಅಂತರದಲ್ಲಿದೆ. ತಿಮ್ಲಾಪುರ ಮಜರೆ ಗ್ರಾಮವಾಗಿ ಬಯಲು ನಾಡಾಗಿದೆ. ಹೊಸಹಳ್ಳಿಯ ಮತ್ತೊಂದು ಕವಲಾಗಿ ಕೆಲವು ಮನೆಗಳು ರಚನೆಯಾದುದರಿಂದ ಹೊಸಹಳ್ಳಿ ಪಾಳ್ಯವಾಗಿದೆ. ಕೆಂಪು-ಬಿಳಿ ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಅಳಗಣ್ಣನಕಟ್ಟೆ, ಕಂಚಿಗಾನಕಟ್ಟೆ ಹಳ್ಳವಿದೆ. ಕೆಲವು ತೆರೆದ ಬಾವಿಗಳಿದ್ದು ಬತ್ತಿಹೋಗಿ ಆಧುನಿಕ ಕೊಳವೆ ಬಾವಿಗಳೇ ಕೃಷಿ ಚಟುವಟಿಕೆಗಳಿಗೆ ಅಲ್ಪ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಂದರ್ಭಗಳಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಕುರುಬ ಸಮುದಾಯವೇ ಪ್ರಧಾನವಾಗಿದ್ದು ಮರಾಠಿ, ಕಮ್ಮಾರ ಕಿರು ಸಮುದಾಯಗಳಾಗಿವೆ. ಪ್ರಮುಖ ಭಾಷೆಯಾಗಿ ಕನ್ನಡ ಮಾತನಾಡುತ್ತಾರೆ. ಒಟ್ಟು ೨೧೬ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೮೬೫ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೬೮ ಮನೆಗಳನ್ನು ಕಾಣಬಹುದು. ೧೫ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು

ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಡೈರಿ ವ್ಯವಸ್ಥೆಯಿದೆ. ಶಿಕ್ಷಣ ಇಲಾಖೆಯಲ್ಲಿ ಲಿಂಗರಾಜು, ಗವಿಯಪ್ಪ ಹಾಗೂ ಪೊಲೀಸ್ ಇಲಾಖೆಯಲ್ಲಿ ಮಂಜುನಾಥ, ರಾಜಣ್ಣ, ದೇವರಾಜು ಕೆಲಸ ನಿರ್ವಹಿಸುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಿಮ್ಲಾಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಆದಿಶಕ್ತಿ ಸ್ತ್ರೀಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೮ ರಷ್ಟು ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಶ್ರೀರಾಮ, ಅಂತರಕಟ್ಟಮ್ಮ, ಕರಿಯಮ್ಮ, ಚೌಡೇಶ್ವರಿ ದೇವಾಲಯಗಳಿವೆ. ಅಂತರಕಟ್ಟಮ್ಮನ ಜಾತ್ರೆಯಲ್ಲಿ ತೇರು, ತೆಪ್ಪ, ಪಲ್ಲಕ್ಕಿ ಉತ್ಸವ, ಸಿಡಿ, ಓಕುಳಿ, ಬಲಿ ಆಚರಣೆಗಳು ಮುಖ್ಯ ಆಕರ್ಷಣೆಗಳಾಗಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಭಜನೆ ಹಾಡುವ ಕರಿಯಪ್ಪ, ರಾಮಲಿಂಗಯ್ಯ, ಬಸವರಾಜು, ತಿಮ್ಮಕ್ಕ ಇದ್ದಾರೆ.

## ಹುಳಿಯಾರು ತಮ್ಮಡಿಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೩೧ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೨೨೬೮.೧೬ ಹೆಕ್ಟೇರ್. ಹುಳಿಯಾರು ಸಮೀಪವಾಗಿರುವುದರಿಂದ ಹೆಚ್.ತಮ್ಮಡಿಹಳ್ಳಿ ಎಂಬ ಹೆಸರಿದೆ. ಕಂದಾಯ ಗ್ರಾಮ, ಬಯಲು ನಾಡಾಗಿದೆ. ಎ.ಕೆ. ಕಾಲೋನಿ, ಬಿಳಿಕಲ್ಲು ಗೊಲ್ಲರಹಟ್ಟಿ, ರಾಮನಗರ ಈ ಗ್ರಾಮದ ಮಜರೆ ಗ್ರಾಮಗಳು. ಮರಳು ಮಿಶ್ರಿತ ಬಿಳಿ ಮಣ್ಣಿನ ಲಕ್ಷಣವಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ೪ ತೆರೆದ ಬಾವಿಗಳಿವೆ. ಕೆಲವು ಬಾವಿಗಳು ಬತ್ತಿಹೋಗಿ ಕೊಳವೆ ಬಾವಿಗಳು ಕೃಷಿ ಚಟುವಟಿಕೆಗಳಿಗೆ ನೀರಿನ ಮೂಲಗಳಾಗಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಲಿಂಗಾಯಿತ ಸಮುದಾಯ ಪ್ರಧಾನವಾಗಿದ್ದು ನಾಯಕ ಕಿರು ಸಮುದಾಯವಾಗಿದೆ. ಪ್ರಮುಖ ಭಾಷೆಯಾಗಿ ಕನ್ನಡ ಭಾಷೆಯಿದೆ. ಒಟ್ಟು ೨೦೫ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೯೫೭ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೧೩ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಕ್, ಟೆಂಪೋ, ಆಟೋಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ

ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಡೈರಿ ವ್ಯವಸ್ಥೆಯಿದೆ. ಶಿಕ್ಷಣ ಇಲಾಖೆಯಲ್ಲಿ ಶ್ರೀಕಂಠಪ್ಪ, ಲೋಕಣ್ಣ ಹಾಗೂ ಪೊಲೀಸ್ ಇಲಾಖೆಯಲ್ಲಿ ಜಗದೀಶ್ ಕಾರ್ಯನಿರ್ವಹಿಸುತ್ತಿದ್ದಾರೆ. ಇಟ್ಟಿಗೆ ಕಾರ್ಖಾನೆಯಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹುಳಿಯಾರು ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಯಳನಡು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ನಾಲ್ವರು ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ರೈತಸೇವಾ ಸಂಘ, ಕರಿಯಮ್ಮ ದೇವಿ, ಅಕ್ಕಮಹಾದೇವಿ ಸ್ತ್ರೀಶಕ್ತಿ ಸಂಘಗಳು ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ಹಾಲು ಉತ್ಪಾದಕರ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಪ್ರೌಢಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೮೩ ಸಾಕ್ಷರತಾ ಪ್ರಮಾಣವಿದೆ. ಗ್ರಂಥಾಲಯ ವ್ಯವಸ್ಥೆಯಿದ್ದು ೫೦೦ ಪುಸ್ತಕಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಜಿಲ್ಲಾ ಪಂಚಾಯ್ತಿ ರಸ್ತೆಯಿದ್ದು ಖಾಸಗಿ ಬಸ್ಸುಗಳು, ಆಟೋ ರಿಕ್ಷಾ ಮತ್ತು ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ.

ಸಿದ್ಧರಾಮೇಶ್ವರ, ಕರಿಯಮ್ಮ, ಆಂಜನೇಯ, ಯಲ್ಲಮ್ಮ ದೇವಾಯಗಳಿವೆ. ಶ್ರೀ ಸಿದ್ಧರಾಮೇಶ್ವರ ಮತ್ತು ಕರಿಯಮ್ಮ ಜಾತ್ರೆ, ತೇರು, ತೆಪ್ಪ, ಪಲ್ಲಕ್ಕಿ ಉತ್ಸವ ವಿಶೇಷ ಆಕರ್ಷಣೆಗಳಾಗಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹೊಂಬಳಘಟ್ಟ

ಹೊಂಬಳಘಟ್ಟ ಗ್ರಾಮವು ತೀರ್ಥಪುರ ಕಂದಾಯ ಗ್ರಾಮಕ್ಕೆ ಸಮೀಪದಲ್ಲಿದ್ದು ಇಂದು ಬೇಚರಕ್ ಗ್ರಾಮವಾಗಿದೆ. ಇಲ್ಲಿ ಒಂದು ಆಂಜನೇಯ ದೇವಾಲಯವಿದ್ದು ಪ್ರತಿ ಶನಿವಾರ ತೀರ್ಥಪುರದಿಂದ ಅರ್ಚಕರು ಬಂದು ಪೂಜೆ ಮಾಡಿಕೊಂಡು ಹೋಗುತ್ತಾರೆ. ಕಂದಿಕೆರೆ ಹೋಬಳಿಗೆ ಸೇರಿದ ಗ್ರಾಮವಾಗಿದ್ದು ನಾಯಕ ಜನಾಂಗದ ಎರಡು ಮನೆಗಳು ಇತ್ತೀಚೆಗೆ ಜನತಾ ಯೋಜನೆಯಡಿಯಲ್ಲಿ ವಸತಿ ನಿರ್ಮಿಸಿಕೊಂಡಿದ್ದಾರೆ. ಕಂದಿಕೆರೆ ಹೋಬಳಿಗೆ ಸೇರಿದೆ. ಸಮೀಪ ಅಜ್ಜಿಗುಡ್ಡೆ, ವಜ್ರ ಕಣಿವೆಗಳಿವೆ.

## ಹೊನ್ನೆಬಾಗಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೩ ಕಿಮೀ ಅಂತರದಲ್ಲಿದೆ. ರಾಜರ ಕಾಲದಲ್ಲಿ ಈ ಮಾರ್ಗವಾಗಿ ಕುದುರೆ ಮೇಲೆ ಹೋಗುತ್ತಿದ್ದ ನಾಯಕನಿಗೆ ಭೂಮಿಯಲ್ಲಿ ಫಳಫಳನೆ ಹೊಳೆಯುವ ವಸ್ತುಗಳು ಕಾಣಿಸಿದವು. ಇದೇನೆಂದು ಮುದುಕಿಯೋರ್ವಳಿಗೆ ಕೇಳಿದಾಗ ಆಕೆ ಹೊನ್ನಿನ ಹೂಗಳು ಎಂದು ಹೇಳುತ್ತಾಳೆ. ಕುದುರೆಯಿಂದ ಇಳಿದು ಹೊಂಬಾಳೆ ರೀತಿಯಿದ್ದ ಹೊನ್ನನ್ನು ತೆಗೆದುಕೊಂಡ ನಾಯಕ ಈ ಪ್ರದೇಶಕ್ಕೆ ಬಾಗಿ ಹೊನ್ನನ್ನು ತೆಗೆದುಕೊಂಡಿದ್ದರಿಂದ ಹೊನ್ನುಬಾಗಿ ಎಂದು ನಾಮಕರಣ ಮಾಡಿದ. ಮುಂದೆ ಅದು ಹೊನ್ನೆಬಾಗಿ ಆಯಿತೆಂದು ಹಿರಿಯ ಗ್ರಾಮಸ್ಥರು ಹೇಳುತ್ತಾರೆ. ಭೌಗೋಳಿಕ ವಿಸ್ತೀರ್ಣ ೧೦೨೨.೨೦ ಹೆಕ್ಟೇರ್. ಬಯಲುನಾಡಿಗೆ ಸೇರಿದ್ದು ಬಿಳಿಕಲ್ಲು, ಬಿಳಿ ಹಾಗೂ ಕೆಂಪು ಮಣ್ಣು ಕಂಡುಬರುತ್ತದೆ. ಪೂರ್ವಕ್ಕೆ ಒಂದು ರಂಗನಾಥಸ್ವಾಮಿ ಬೆಟ್ಟವಿದೆ. ಪೂರ್ವಕ್ಕೆ ಅಬ್ಬಿಗೆ ಗುಡ್ಡ ಹಾಗೂ ಸಾಲುಗುಡ್ಡವಿದೆ. ಆನೆಗುಂಡಿಯಲ್ಲಿ ಕಲ್ಲು ಹಾಸು ಇದೆ. ಇಲ್ಲಿ ಸಾಮಾಜಿಕ ಅರಣ್ಯ ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ದೇವರಹಳ್ಳ, ಕೋಡುಗಲ್ಲುಹಳ್ಳ, ಹೊಂಗೆಹಳ್ಳ, ಚಿಕ್ಕಹಳ್ಳಗಳು ಹರಿಯುತ್ತವೆ. ಕಲ್ಲನಕಟ್ಟೆ ಹಾಗೂ ಬಸವನಕಟ್ಟೆ ಎಂಬ ಕಟ್ಟೆಗಳಿವೆ. ತೆರೆದ ಬಾವಿಗಳು ಹಾಗೂ ಕೊಳವೆ ಬಾವಿಗಳಿವೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ.

ಒಟ್ಟು ೩೮೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೨೦೬ ಜನಸಂಖ್ಯೆ

ಹೊಂದಿದೆ. ವೀರಶೈವರು ದೊಡ್ಡ ಸಮುದಾಯವಾಗಿದ್ದು ಆದಿಕರ್ನಾಟಕ, ಕುರುಬರು, ನಾಯಕರು, ಶೆಟ್ಟರ, ಮಡಿವಾಳರು, ಮುಸ್ಲಿಮರು, ನಾಪಿತರು, ಆಚಾರ್ರು, ಬಿಳಿಮಗ್ಗದವರು, ಈಡಿಗರು, ಸರ್ಪ ಒಕ್ಕಲಿಗರು ಸಣ್ಣ ಸಮುದಾಯದವರಾಗಿದ್ದಾರೆ. ಇವರು ಪ್ರಧಾನವಾಗಿ ಕನ್ನಡ ಭಾಷೆ ಮಾತನಾಡುತ್ತಾರೆ. ಮುಸ್ಲಿಮರು ಉರ್ದು ಮಾತನಾಡುತ್ತಾರೆ. ಎಮ್ಮೆ ಓಣಿ, ತೋಟದ ಓಣಿ ಎಂಬ ಓಣಿಗಳಿವೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೪೦ ಫಲಾನುಭವಿಗಳ ಮನೆಗಳನ್ನು ಕಾಣಬಹುದು.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಹುಚ್ಚೆಳ್ಳು, ಎಳ್ಳು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಲಾರಿ, ಕಾರು, ಆಟೋ, ಬೈಕ್ ಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಊರಲ್ಲಿ ರಸ್ತೆ, ಚರಂಡಿ ಸುಸ್ಥಿತಿಯಲ್ಲಿದೆ. ಆಧುನಿಕ ನಂದಿನಿ ಡೈರಿಯಿದೆ. ಇಬ್ಬರು ವೈದ್ಯರಿದ್ದಾರೆ. ಇಂಜಿನಿಯರ್‌ಗಳು, ಉಪನ್ಯಾಸಕರು, ವಕೀಲರು, ಶಿಕ್ಷಕರು, ಎಸ್‌ಡಿಎಗಳು ಇದ್ದಾರೆ. ಇಟ್ಟಿಗೆ ಕಾರ್ಖಾನೆಯಿದೆ. ಬಡಗಿಗಳಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕಸಬಾ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ೩ ಜನ ಗ್ರಾಮಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಗ್ರಾಮದಿಂದ ತಾಲ್ಲೂಕು ಕೇಂದ್ರಕ್ಕೆ ಹಾಗೂ ಗುಬ್ಬಿ ಕಡೆಗೆ ಉತ್ತಮ ರಸ್ತೆಮಾರ್ಗವಿದೆ. ಅಂಚೆ ಕಛೇರಿಯಿದೆ. ದಿವ್ಯಜ್ಯೋತಿ, ಜ್ಞಾನಭಾರತಿ, ಶಾಂತಲಾ, ಸ್ಫೂರ್ತಿ ಸ್ತ್ರೀಶಕ್ತಿ ಸಂಘಗಳಿವೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೭೮ ರಷ್ಟು ಸಾಕ್ಷರತೆಯಿದೆ. ಗ್ರಂಥಾಲಯವಿದ್ದು ೪೫೦ ಪುಸ್ತಕಗಳಿವೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೬ ಫಲಾನುಭವಿಗಳಿದ್ದಾರೆ. ೬ ಚಿಕ್ಕ ಅಂಗಡಿಗಳಿವೆ. ಹಿಂದೆ ಗ್ರಾಮದಲ್ಲಿ ಕೋಟೆಯಿತ್ತು ಎಂದು ಹೇಳುತ್ತಾರೆ. ಈಗ ಶಿಥಿಲವಾಗಿದೆ. ಹಳೆಯ ಬಾವಿಗಳಿವೆ.

ರಂಗನಾಥಸ್ವಾಮಿ ದೇವಾಲಯ ಬೆಟ್ಟದ ಮೇಲಿದೆ. ಇದನ್ನು ನೀರುದೀವಿಗೆ ರಂಗನಾಥಸ್ವಾಮಿ ಎಂದು ಕರೆಯಲಾಗುತ್ತದೆ. ಈಶ್ವರನ, ಆಂಜನೇಯ, ಕರಿಯಮ್ಮದೇವಿ, ಹಗೇವು ಮಾರಮ್ಮ, ರಾಮದೇವರ, ಯಲ್ಲಮ್ಮದೇವರ, ಅಬ್ಬಿಗೆ ಮಲ್ಲೇಶ್ವರಸ್ವಾಮಿ ದೇವಾಲಯಗಳಿವೆ. ಏಪ್ರಿಲ್‌ನಲ್ಲಿ ಗ್ರಾಮದ ಜಾತ್ರೆಯಿದೆ. ಆಯುಧಪೂಜೆಯಲ್ಲಿ ಅಂಬು ಹಾಯಿಸಲಾಗುತ್ತದೆ. ಜಾತ್ರೆಯಲ್ಲಿ ಬನ್ನಿಮರ ಹತ್ತುವುದು ಮುಂತಾದ ಆಚರಣೆಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

ಅನ್ನಪೂರ್ಣೇಶ್ವರಿ ಭಜನಾ ಮಂಡಳಿ ಹಾಗೂ ಕೋಡುಗಲ್ಲು ಬಸವೇಶ್ವರ ಭಜನಾ ತಂಡಗಳಿವೆ. ರೇಣುಕಮ್ಮ ಸೋಬಾನೆ ಹಾಡು ಹಾಡುತ್ತಾರೆ. ಎಲ್ಲಮ್ಮ, ಕರಿಯಮ್ಮ, ಜಯಮ್ಮ, ಗಂಗಮ್ಮ ಹಾಗೂ ಇತರರು ಸೋಬಾನೆ ಹಾಡುಗಳನ್ನು ಹಾಡುತ್ತಾರೆ. ಅಂಬೇಡ್ಕರ್, ವಾಲ್ಮೀಕಿ, ಈಶ್ವರಿ, ರೈತ ಮಹಿಳಾ ಸ್ವಸಹಾಯ ಸಂಘಗಳಿವೆ.

## ಹೊನ್ನೇಬಾಗಿ ಎ.ಕೆ. ಕಾಲೋನಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ೩ ಕಿಮೀ ಅಂತರದಲ್ಲಿದೆ. ಇದಕ್ಕೆ ಹೊಂದಿಕೊಂಡಂತೆ ಆದಿಕರ್ನಾಟಕ ಜನಾಂಗಕ್ಕೆ ಸೇರಿದ ೩೭ ಮನೆಗಳಿವೆ. ಇದನ್ನು ಮಾದಿಗರಹಟ್ಟಿ ಎಂದೂ ಕರೆಯುತ್ತಾರೆ. ಇಲ್ಲಿನ ಮನೆಗಳು ಹೆಂಚಿನ, ಮಾಳಿಗೆಯ, ಶೀಟಿನ ಸ್ವರೂಪದಲ್ಲಿವೆ. ಇವು ಸರ್ಕಾರದ ವಸತಿ ಯೋಜನೆಯಾದ ಜನತಾ, ಇಂದಿರಾ ಆವಾಸ್, ಅಂಬೇಡ್ಕರ್ ಆವಾಸ್ ವಸತಿ ಯೋಜನೆಯ ೧೩ ಫಲಾನುಭವಿಗಳಿದ್ದು ೪ ಮನೆಗಳಲ್ಲಿ ಶೌಚಾಲಯ

ಬಳಸುತ್ತಾರೆ. ಕುಡಿಯಲು ಹೊನ್ನೇಬಾಗಿ ಮುಖ್ಯ ಗ್ರಾಮದಿಂದ ನೀರು ಪೂರೈಸುತ್ತಿದ್ದು ಒಂದು ಸಿಸ್ಟನ್ ಸೌಲಭ್ಯವಿದೆ. ಕೃಷಿಕರು ಹಾಗೂ ಕೃಷಿ ಕಾರ್ಮಿಕರು ಹೆಚ್ಚಾಗಿದ್ದು ರಾಗಿ, ಹೆಸರು, ಅವರೆ, ಹುರುಳಿ ಬೆಳೆಯುತ್ತಾರೆ. ತೆಂಗು ತೋಟದ ಬೆಳೆಯಾಗಿದೆ. ಕೊಬ್ಬರಿ ಹಾಗೂ ಕೊಬ್ಬರಿ ಚಿಪ್ಪು ಹಾಗೂ ಕಾಯಿಮಟ್ಟೆ ವ್ಯಾಪಾರಿ ಸರಕಾಗಿದೆ. ಗರಿಕಡ್ಡಿ ಸಿಗಿಯುವ ಮಹಿಳೆಯರಿದ್ದಾರೆ. ೨ ಸ್ತ್ರೀಶಕ್ತಿ ಸಂಘಗಳಿದ್ದು ಮಹಿಳೆಯರ ಸ್ವಾವಲಂಬನೆಗೆ ಸಹಕಾರಿಯಾಗಿದೆ. ೧೪೮ ಜನಸಂಖ್ಯೆ ಹೊಂದಿದೆ. ಹೊನ್ನೇಬಾಗಿ ಗ್ರಾಮಪಂಚಾಯ್ತಿಗೆ ಸೇರಿದ ಒಬ್ಬರು ಸದಸ್ಯರಿದ್ದಾರೆ. ಶಿಕ್ಷಣ, ಸಾರಿಗೆ, ಅರಣ್ಯ ಇಲಾಖೆಗೆ ಸೇರಿದ ಒಟ್ಟು ೬ ಜನ ಸರ್ಕಾರಿ ನೌಕರರಿದ್ದಾರೆ. ಸಾಕ್ಷರತೆ ೫೭% ರಷ್ಟಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಇಟ್ಟಿಗೆ ಫ್ಯಾಕ್ಟರಿಯ ನೌಕರರಿದ್ದಾರೆ.

ಧಾರ್ಮಿಕವಾಗಿ ಹಗೇವು ಮಾರಮ್ಮ, ಕರಿಯಮ್ಮ ದೇವಸ್ಥಾನಗಳಿವೆ. ಇವುಗಳಿಗೆ ಬಾನ, ಬ್ಯಾಟೆ, ಹರಕೆ ಸಂಪ್ರದಾಯಗಳಿವೆ. ಗ್ರಾಮದ ಅಬ್ಬಿಗೆ ಮಲ್ಲೇಶ್ವರ ದೇವರ ಜಾತ್ರೆಯಲ್ಲಿ ಈ ಬಡಾವಣೆಯವರ ಸೇವೆ ಮುಖ್ಯವಾಗಿರುತ್ತದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ಸಂಧ್ಯಾ ಸುರಕ್ಷೆಯ ೧೪ ಫಲಾನುಭವಿಗಳಾಗಿದ್ದಾರೆ. ಚಿಕ್ಕನಾಯಕನಹಳ್ಳಿಯಿಂದ ಸಾರಿಗೆ ಸಂಪರ್ಕವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹಂದನಕೆರೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹೋಬಳಿ ಕೇಂದ್ರ. ಹಂದನಕೆರೆ ಗ್ರಾಮ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೬ ಕಿಮೀ ಅಂತರದಲ್ಲಿದೆ. ಇಂದಿನ ಹಂದನಕೆರೆಯ ಮೂಲಸ್ಥಾನ ಈಗಿರುವ ಊರಿನ ದಕ್ಷಿಣ ಪಶ್ಚಿಮ ದಿಕ್ಕಿನ ನಾಗತಿಕೆರೆಯ ಮುಂಭಾಗದ ತೆಂಗಿನಕಟ್ಟೆಯ ಪಶ್ಚಿಮ ದಿಕ್ಕಿನ ಹಾಳೂರು. ಆಗ ಅದಕ್ಕೆ ಹೊನ್ನಿನಕೆರೆ ಎಂದು ಕರೆಯಲಾಗಿತ್ತು. ಯಾವುದೇ ಕಾರಣಕ್ಕೆ ಆ ಊರನ್ನು ಬಿಟ್ಟು ಈಗಿನ ಸ್ಥಳದಲ್ಲಿ ಊರು ನೆಲೆಯಾಗಿ ಹೊನ್ನಿನಕೆರೆ ಶಬ್ದವು ಜನಪದರ ಅರ್ಥಾಪಕರ್ಷಕ್ಕೆ ಸಿಲುಕಿ ಹಂದನಕೆರೆಯಾಗಿದೆಯೆಂದು ತಿಳಿಸುತ್ತಾರೆ. ತೆಂಗಿನಕಟ್ಟೆಯ ಪಶ್ಚಿಮ ದಿಕ್ಕಿನಲ್ಲಿ ಈಗ ಹಾಳುಬಿದ್ದಿರುವ ಸ್ಥಳದಲ್ಲಿ ಹೊನ್ನಿನಕೆರೆ ಇತ್ತು ಎಂಬುದಕ್ಕೆ ಈ ಕೆಳಗಿನ ತ್ರಿಪದಿಯನ್ನು ಉದಾಹರಿಸುತ್ತಾರೆ.

ಹೊನ್ನಿನ ಗಿಂಡ್ಯಾಗ ಹೊನ್ನಾಲೆ
ನೀರ್ತುಂಬಿ, ತೆಂಗಿನಕಟ್ಟೆ ತಿಳಿನೀರ ತಕ್ಕೊಂಡು
ಕೋಡಿ ಬಸವಣ್ಣೆಗೆ ಅಭಿಷೇಕ

ಆದರೆ ಹೊನ್ನಿನಕೆರೆ ಹಾಳಾದಮೇಲೆ ಅಲ್ಲಿಯ ಜನರು ಈಗಿನ ಹಂದನಕೆರೆ ಇರುವ ಸ್ಥಳಕ್ಕೆ ಬಂದಿರುವುದಕ್ಕೆ ಯಾವುದೇ ಪುರಾವೆಗಳನ್ನು ಅವರು ನೀಡಿರುವುದಿಲ್ಲ. ಪಟ್ಟಣದ ಸುತ್ತ ಇರುವ ೧೧ ಕೆರೆ ಕಟ್ಟೆಗಳು ಶಿವಲಿಂಗ ಪಾಣಿಬಟ್ಟಲಿನಂತೆ ಸುತ್ತುವರಿದಿದ್ದು ಪಟ್ಟಣವು ಶಿವಲಿಂಗದಂತೆ ಇರುವುದು ಭಾಸವಾಗುತ್ತದೆ. ಜನಪದರ ಮಾತಿಗೆ ಸಾಕ್ಷಿಯೆಂಬಂತೆ ೧೧ ಕೆರೆಗಳು ಸೇರಿ ಹಂದನಕೆರೆ ಆಗಿತ್ತೆಂದು ಊಹಿಸಬಹುದಾಗಿದೆ. ಹಂದಲನಾಯ್ಕನು ಆಳ್ವಿಕೆ ಮಾಡಿದ್ದರಿಂದ ಈ ಗ್ರಾಮಕ್ಕೆ ಹಂದನಕೆರೆ ಎಂಬ ಹೆಸರು ಬರಲು ಕಾರಣವಾಯಿತೆಂದು ಸ್ಥಳೀಯರ ಅಭಿಪ್ರಾಯವಾಗಿದೆ. ಈಗ ಹಂದನಕೆರೆಯು ಹಾಳಾದ ಕೋಟೆ ಕೊತ್ತಲಗಳು, ಶಿಥಿಲಾವಸ್ಥೆಯಲ್ಲಿರುವ ದೇವಾಲಯಗಳು, ವಾಸ್ತುಶಿಲ್ಪಗಳು, ದೀಪಸ್ತಂಭಗಳು, ವಿಶಿಷ್ಟವಾದ ಬಾವಿಗಳು, ಸ್ಮಾರಕಗಳು. ವೀರಗಲ್ಲು–ಮಹಾಸತಿ ಕಲ್ಲುಗಳು ಈ ಹಿಂದೆ ಆಳಿ ಅಳಿದುಹೋದ ರಾಜಮಹಾರಾಜರ ಪಾಳೇಗಾರರ ಇತಿಹಾಸದ ಒಂದೊಂದೇ ಪುಟಗಳನ್ನು ತೆರೆಯುತ್ತಾ ಹೋಗುತ್ತದೆ.

ಭೌಗೋಳಿಕ ವಿಸ್ತೀರ್ಣ ೧೨೬೮.೬೩ ಹೆಕ್ಟೇರ್. ಕೃಷಿ ಯೋಗ್ಯವಾದ ಕೆಂಪು ಮಿಶ್ರ ಮಣ್ಣನ್ನು ಹೊಂದಿದೆ. ಸಿದ್ದರಬೆಟ್ಟವಿದೆ ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಕುರುಬ ಸಮುದಾಯದ ಜನರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಆದಿಕರ್ನಾಟಕ, ಆದಿದ್ರಾವಿಡ, ಕುಂಬಾರರು, ಮುಸ್ಲಿಂ, ಗಾಣಿಗ, ಬ್ರಾಹ್ಮಣ, ನಾಯಕ, ಮಡಿವಾಳ, ವೈಶ್ಯರು, ಬಲಜಿಗ, ಲಿಂಗಾಯಿತರು,

ಕೊರಮ, ಆಚಾರ್ಯರು ಜನಾಂಗದ ಜನರು ವಾಸಮಾಡುತ್ತಿದ್ದಾರೆ. ಕನ್ನಡ ಪ್ರಮುಖ ಭಾಷೆಯಾಗಿದ್ದು ತೆಲುಗು, ಉರ್ದು ಮಾತನಾಡುವ ಜನರು ಇದ್ದಾರೆ. ಹೆಂಚಿನ ಮನೆಗಳೇ ಅಧಿಕವಾಗಿದೆ. ಒಟ್ಟು ೧೩೦೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೪೦೦೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೫೦ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ೧೦ ಗುಡಿಸಲುಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೭೦ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೬೩೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ದಾಳಿಂಬೆ, ತರಕಾರಿಗಳನ್ನು ವಾಣಿಜ್ಯ ಬೆಳೆಗಳಾಗಿ ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕುಂಬಾರಿಕೆ, ಬಡಿಗತನ, ಕಮ್ಮಾರಿಕೆಯನ್ನು ನಡೆಸುವ ಜನರು ಹಾಗೂ ೧೦೦ ಮಂದಿ ಸರ್ಕಾರಿ ನೌಕರರು ವಾಸವಾಗಿದ್ದಾರೆ. ಶಿಕ್ಷಣ, ಅಂಚೆ, ಪೋಲೀಸ್, ಕಂದಾಯ, ಅರಣ್ಯ ಇಲಾಖೆಗೆ ಸೇರಿದ ೨೩ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಇಂಜಿನಿಯರ್, ವಕೀಲರಿದ್ದಾರೆ.

ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಅಂಚೆ ಕಚೇರಿ ಹೊಂದಿದೆ.

ಮೂರು ಅಂಗನವಾಡಿ ಕೇಂದ್ರ, ೨ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ, ೨ ಹಿರಿಯ ಪ್ರಾಥಮಿಕ ಪಾಠಶಾಲೆ, ೩ ಪ್ರೌಢಶಾಲೆಗಳು, ೧ ವಿಜ್ಞಾನ ಪದವಿಪೂರ್ವ ಕಾಲೇಜುಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೪೧ ಫಲಾನುಭವಿಗಳಿದ್ದಾರೆ.

ದೇವಾಲಯಗಳೇ ತುಂಬಿದ್ದು ಅವುಗಳಲ್ಲಿ ಸಪ್ತಲಿಂಗಗಳು ವಿಶಿಷ್ಟತೆಯನ್ನು ಪಡೆದಿವೆ. ಐತಿಹಾಸಿಕ ೧೧ ಸೋಪಾನದ ಬಾವಿಯು ನಮ್ಮ ರಾಜ್ಯದಲ್ಲಿ ಮಹತ್ವ ಪಡೆದಿದೆ. ದೊಡ್ಡಲಿಂಗನ ಬಾವಿಯು ಕೂಡ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ ಮತ್ತೊಂದು ಬಾವಿಯಿದೆ. ಮಠ ಸಂಸ್ಕೃತಿಗೆ ತನ್ನದೇ ಆದ ಕೊಡುಗೆಯನ್ನು ನೀಡಿರುವ ಈ ಗ್ರಾಮದಲ್ಲಿ ರೇವಣ್ಣಸಿದ್ದರ ಮಠ, ಸಿದ್ದಪ್ಪರ ಮಠ, ತರಳಬಾಳು ಮಠವೂ ಕೂಡ ಇದೆ. ಸಿಡಿ, ಓಕುಳಿ, ಬಲಿ, ಹರಕೆ, ಬಾಯಿಬೀಗ ಇತ್ಯಾದಿಗಳು ಜಾತ್ರಾ ಸಮಯದಲ್ಲಿ ನಡೆಯುತ್ತವೆ. ಹರಿಹರೇಶ್ವರ ಹಾಗೂ ಆಂಜನೇಯಸ್ವಾಮಿ ದೇವಾಲಯದಲ್ಲಿ ಶಿಲಾ ಶಾಸನಗಳನ್ನು ಗುರು ಗಿರಿಸಿದ್ದೇಶ್ವರನ ಹಾಗೂ ರೇವಣ್ಣಸಿದ್ದರ ಮಠದಲ್ಲಿ ತಾಳೆ ಪತ್ರಗಳನ್ನು ಕಾಣಬಹುದಾಗಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರಾಜ್ಯಪ್ರಶಸ್ತಿ ಪುರಸ್ಕೃತೆ ಶ್ರೀಮತಿ ಲಕ್ಷ್ಮಜ್ಜಿ ಹಾಗೂ ಅವರ ಸೋಬಾನೆ ಹಾಡುಗಳು ಇಂದಿಗೂ ಜೀವಂತವಾಗಿವೆ. ರಾಜ್ಯಪ್ರಶಸ್ತಿ ಪುರಸ್ಕೃತರಾದ ಕರಿಯಣ್ಣ ಶೆಟ್ರು ಮೋಡಿ ಕಲಾವಿದರಾಗಿ ಹೆಸರಾಗಿದ್ದರು. ಇವರು ಮುಖವಾಡಗಳನ್ನು ತಯಾರಿಸುವುದರಲ್ಲಿ ರಾಜ್ಯಾದ್ಯಂತ ಹೆಸರು ಮಾಡಿದ್ದವರು. ಯಕ್ಷಗಾನ ಕಲೆಯಲ್ಲಿ ಹಂದನಕೆರೆಯು ತುಂಬಾ ಪ್ರಖ್ಯಾತಿ ಪಡೆದಿದ್ದು ಭಾಗವಂತಿಕೆಯ ಬಸವಾಚಾರ್ ಮೂಡ್ಲನಾಯ್ಕ, ಎಲೆರಂಗಪ್ಪ, ಕಲ್ಲೇಬಾಗಿಲು ಬಸವಣ್ಣ, ಭೀಮಣ್ಣನ ಹನುಮಂತಣ್ಣ ಮುಂತಾದವರು ಖ್ಯಾತರಾಗಿದ್ದಾರೆ. ಅಂಚೆ ಇಲಾಖೆಯ ಸಿ.ಪುಟ್ಟಯ್ಯನವರು ಅಂಕಣಕಾರರಾಗಿ ಹೆಸರಾಗಿದ್ದಾರೆ. ಡಾ॥ ಅಬ್ದುಲ್ ಹಮೀದ್ ಸಾಹಿತಿಯಾಗಿ ಹಂದನಕೆರೆಗೆ ಶ್ರೇಷ್ಠತೆಯನ್ನು ತಂದಿದ್ದಾರೆ. ಸೂಫಿ ಪಂಥದ ಮೇಲೆ ಸಂಶೋಧನೆ ನಡೆಸಿದ್ದಾರೆ.

ಕರ್ನಾಟಕ ರಕ್ಷಣಾ ವೇದಿಕೆ, ಕ್ರಾಂತೀವೀರ ಸಂಗೊಳ್ಳಿ ರಾಯಣ್ಣ ಸಂಘ, ಜಯಕರ್ನಾಟಕ ಕನ್ನಡಪರ ಸಂಘಟನೆಗಳು ಈ ಗ್ರಾಮದಲ್ಲಿ ತನ್ನ ಚಟುವಟಿಕೆಗಳನ್ನು ನಡೆಸುತ್ತಾ ಬರುತ್ತಿವೆ. ಹಂದನಕೆರೆ ಕರಿಯಣ್ಣ ಶೆಟ್ಟಿ ಅವರ ಛೋಟ ಆಟವನ್ನು ೧೯೮೫ ರಲ್ಲಿ ಕರ್ನಾಟಕ ಜಾನಪದ ಪರಿಷತ್ತು

ಹೆಚ್.ಎಲ್.ನಾಗೇಗೌಡರ ಮಾರ್ಗದರ್ಶನದಲ್ಲಿ ಏರ್ಪಡಿಸಿತ್ತು.

## ಹಂದನಕೆರೆ ಜನತಾ ಹೌಸಿಂಗ್ ಕಾಲೋನಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೬ ಕಿಮೀ ಅಂತರದಲ್ಲಿದೆ. ಹಂದನಕೆರೆಯ ಉಪಗ್ರಾಮವಾಗಿ ಪ್ರತ್ಯೇಕ ಜನವಸತಿ ಪಡೆದ ಸ್ಥಳವಾಗಿದೆ. ಸರ್ಕಾರದ ವಸತಿ ಯೋಜನೆಯಲ್ಲಿ ಸ್ಥಳ ಹಾಗೂ ಅನುದಾನ ಪಡೆದು ಜನತಾ ಹೌಸಿಂಗ್ ವಸತಿ ಯೋಜನೆಯಲಗ್ಲಿ ೧೦೨ ಮನೆಗಳು ರಚನೆಯಾಗಿವೆ. ಆದುದರಿಂದ ಹಂದನಕೆರೆ ಹೌಸಿಂಗ್ ಕಾಲೋನಿ ಎಂದು ಕರೆಯುತ್ತಾರೆ. ಕುಡಿಯಲು ಹಂದನಕೆರೆ ಗ್ರಾಮಪಂಚಾಯ್ತಿಯ ಮೂಲಕ ನೀರು ಪೂರೈಸುತ್ತಿದ್ದು ನಲ್ಲಿ ಸಂಪರ್ಕಿಸಲಾಗಿದೆ.

ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುರುಬ ಸಮುದಾಯದವರು ದೊಡ್ಡ ಸಮುದಾಯವಾಗಿದ್ದು ಉಳಿದಂತೆ ಕುಂಬಾರ, ದೇವಾಂಗ, ಆದಿದ್ರಾವಿಡ, ಮುಸ್ಲಿಂ, ನಾಯಕ, ಕೊರಚ ಸಮುದಾಯದವರು ನೆಲೆಸಿದ್ದಾರೆ. ಪಡಿತರ, ಶಾಲೆ ವಿಷಯಗಳಿಗೆ ಮುಖ್ಯ ಗ್ರಾಮ ಹಂದನಕೆರೆಗೆ ಬರುತ್ತಾರೆ. ಹಂದನಕೆರೆಯ ಪಂಚಾಯ್ತಿ, ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯ್ತಿ ಕೇಂದ್ರವಾಗಿದ್ದು ಈ ಬಡಾವಣೆಯ ಒಬ್ಬರು ಸದಸ್ಯರಾಗಿದ್ದಾರೆ. ಅಂಚೆ ಸೌಲಭ್ಯ ಹಂದನಕೆರೆಯಿಂದ ಪಡೆಯಲಾಗಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ದುರ್ಗದ ಜಾತ್ರೆಯಲ್ಲಿ ಈ ಬಡಾವಣೆಯಿಂದ ಆರತಿ ಹೊರಡುತ್ತವೆ. ದುರ್ಗಮ್ಮನಿಗೆ ಆರತಿ, ಬಾನ, ಸೇವೆ ಇರುತ್ತದೆ. ಕುರಿ, ಮೇಕೆ, ಹಸು ಸಾಕುಪ್ರಾಣಿಗಳು. ಬೇಸಾಯ ಮುಖ್ಯ ಕಸುಬು. ಗಾರೆ ಕೆಲಸ, ಬೀಡಿ ಕಟ್ಟುವುದು ಮಹಿಳೆಯರ ಉಪಕಸುಬಾಗಿದೆ. ಸಮುದಾಯ ಸೌಲಭ್ಯಗಳಾದ ಅಂಗವಿಕಲ, ವೃದ್ಧಾಪ್ಯ, ವಿಧವಾ ವೇತನಗಳ ಸೌಲಭ್ಯ ಪಡೆದವರಿದ್ದಾರೆ. ಉಚಿತ ಭಾಗ್ಯಜ್ಯೋತಿ ಯೋಜನೆಯಲ್ಲಿ ವಿದ್ಯುತ್ ಸೌಲಭ್ಯ ಪಡೆದಿದ್ದಾರೆ. ೨೬ ಮನೆಗಳಲ್ಲಿ ಶೌಚಾಲಯ ಸೌಲಭ್ಯವಿದೆ. ಗ್ರಾಮದ ಸಾಕ್ಷರತೆ ೬೮% ರಷ್ಟಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹಂದನಕೆರೆ ರಾಜಾಜಿನಗರ ಬಡಾವಣೆ

ರಾಜಾಜಿನಗರ ಬಡಾವಣೆ ಹಂದನಕೆರೆಗೆ ಸೇರಿದ ಹೊಸ ಜನವಸತಿ ಇರುವ ಸ್ಥಳ. ಇದನ್ನು ವಿದ್ಯಾನಗರ ಎಂತಲೂ ಕರೆಯುತ್ತಾರೆ. ಹಂದನಕೆರೆಗೆ ಸೇರಿದ ಶಾಲಾ ವಲಯದ ಹಿಂಭಾಗದಲ್ಲಿ ಜನವಸತಿ ಆರಂಭವಾದುದರಿಂದಾಗಿ ವಿದ್ಯಾನಗರ ಅಥವಾ ರಾಜಾಜಿನಗರ ಎಂತಲೂ ಕರೆಯುತ್ತಾರೆ. ಒಟ್ಟು ೪೨ ಮನೆಗಳಿದ್ದು ಇವು ಹೆಂಚಿನ, ಮೌಲ್ಡಿಂಗ್ ಮನೆಗಳಿವೆ. ಇವು ಸರ್ಕಾರದ ವಸತಿ ಯೋಜನೆ, ಆಶ್ರಯ, ವಾಜಪೇಯಿ ಆವಾಸ್ ಯೋಜನೆಯ ೨೩ ಫಲಾನುಭವಿಗಳಿದ್ದಾರೆ. ೩೦ ಮನೆಗಳಲ್ಲಿ ಶೌಚಾಲಯ ಸೌಲಭ್ಯ ಪಡೆದಿದೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬು. ರಾಗಿ, ಜೋಳ, ಹೆಸರು ಬೆಳೆಯುತ್ತಾರೆ. ತೆಂಗಿನ ತೋಟಗಾರಿಕೆಯು ಇದೆ. ಕುಡಿಯಲು ಹಂದನಕೆರೆ ಗ್ರಾಮಪಂಚಾಯ್ತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸುತ್ತಾರೆ. ಎಲ್ಲರ ಮನೆಗಳೂ ಖಾಸಗಿ ನಲ್ಲಿ ಸಂಪರ್ಕ ಹೊಂದಿವೆ. ೧೦ ಜನ ಶಿಕ್ಷಕರಿದ್ದಾರೆ. ಇಬ್ಬರು ಕಂಡಕ್ಟರ್ ಇದ್ದಾರೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ಹಾಗೂ ವಿಧವಾ ವೇತನಗಳ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ, ಅನ್ನ ಮುಖ್ಯ ಆಹಾರಗಳು. ರೊಟ್ಟಿ, ಉಪ್ಪಿಟ್ಟು ಅಮುಖ್ಯ ಆಹಾರಗಳು. ಮಾಂಸಾಹಾರ ಹೋಳಿಗೆ, ಪಾಯಸ ವಿಶೇಷ ಸಾಂದರ್ಭಿಕ ಭೋಜನಗಳು. ಶಿಕ್ಷಣ, ಪಡಿತರ, ಅಂಚೆ ಸೌಲಭ್ಯವನ್ನು ಹಂದನಕೆರೆ ಮುಖ್ಯಗ್ರಾಮದಿಂದ ಪಡೆಯಲಾಗಿದೆ. ಇಲ್ಲಿನ ಸಾಕ್ಷರತೆ ೬೭% ಇದೆ. ಒಟ್ಟು ಜನಸಂಖ್ಯೆ ೧೯೩ ಆಗಿದೆ. ಇಲ್ಲಿಂದ ಅರಸೀಕೆರೆ, ಬೆಲಗೂರು, ಗವಿರಂಗಾಪುರ, ಚಿಕ್ಕನಾಯಕನಹಳ್ಳಿ ಕಡೆಗೆ ಬಸ್ ಸಂಚಾರವಿದೆ. ಆಸ್ಪತ್ರೆ, ಪಶು ಆಸ್ಪತ್ರೆ ಇಲ್ಲಿಗೆ ಸಮೀಪದಲ್ಲಿದೆ. ದುರ್ಗಮ್ಮನ ಜಾತ್ರಾ ಮಹೋತ್ಸವದಲ್ಲಿ ಈ ಬಡಾವಣೆಯ ಪಾತ್ರ ಮುಖ್ಯವಾದುದು. ಕುರುಬರು, ಬೇಡರು, ಕುಂಬಾರರು, ಲಿಂಗಾಯಿತರು ನೆಲೆಸಿದ್ದಾರೆ. ಯುಗಾದಿ, ದಸರಾ, ದೀಪಾವಳಿ, ಗೌರಿ–ಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ.

## ಹಳ್ಳಿ ತಿಮ್ಮಲಾಪುರ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಗ್ರಾಮಪಂಚಾಯ್ತಿಯ ಮಜರೆ ಗ್ರಾಮ. ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೮ ಕಿಮೀ ಅಂತರದಲ್ಲಿದೆ. ಗ್ರಾಮದ ಐತಿಹಾಸಿಕ ಹಿನ್ನೆಲೆಯು ಹಂದನಕೆರೆಯ ಐತಿಹಾಸಿಕ ಹಿನ್ನೆಲೆಗೆ ತಳಕುಹಾಕಿಕೊಂಡಿದೆ. ಹಂದನಕೆರೆಯಲ್ಲಿದ್ದ ಕುರುಬ

ಸಮುದಾಯದ ಕೆಲವು ಜನರು ವಲಸೆ ಹೋಗಿ ಈ ಗ್ರಾಮದಲ್ಲಿ ನೆಲೆಸಿದರು. ತಿಮ್ಮಣ್ಣನೆಂಬ ಕುರುಬ ಗೌಡನ ಉಸ್ತುವಾರಿಯಲ್ಲಿತ್ತೆಂದು, ಹಾಗಾಗಿ ಅವನ ಹೆಸರನ್ನೇ ಈ ಗ್ರಾಮಕ್ಕೆ ನಾಮಕರಣ ಮಾಡಿದರೆಂದು ಅಲ್ಲಿನ ಸ್ಥಳೀಯ ಜನರು ತಿಳಿಸಿದರು. ಈ ಪುಟ್ಟಹಳ್ಳಿಗೆ ಹಳ್ಳಿತಿಮ್ಮಲಾಪುರ ಎಂದು ಹೆಸರಾಯಿತು. ಭೌಗೋಳಿಕ ವಿಸ್ತೀರ್ಣ ೨೯೧.೮೬ ಹೆಕ್ಟೇರ್. ಕೆಂಪು ಮಿಶ್ರಿತ ಕಪ್ಪು ಮಣ್ಣನ್ನು ಹೊಂದಿ ಕೃಷಿಗೆ ಯೋಗ್ಯವಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು  ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ. ಬಯಲುಸೀಮೆಯ ಉಷ್ಣವಲಯದಲ್ಲಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕಲ್ಲಕಟ್ಟೆಕೆರೆಯಿದೆ. ಚೌಲಿಹಳ್ಳಿಯು ಗ್ರಾಮದ ಪಕ್ಕದಲ್ಲಿದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ೪ ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಕುರುಬ ಸಮುದಾಯದವರು ದೊಡ್ಡ ಸಮುದಾಯವಾಗಿದ್ದು ಲಿಂಗಾಯಿತ ಸಮುದಾಯ ಹಾಗೂ ಬಂಜಾರ ಸಮುದಾಯದವರು ನಂತರದ ಸ್ಥಾನದಲ್ಲಿದ್ದು ಕನ್ನಡ ಮತ್ತು ಲಂಬಾಣಿ ಭಾಷೆಗಳನ್ನು ಮಾತನಾಡುತ್ತಾರೆ. ಒಟ್ಟು ೬೫ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೪೬ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೨೦ ಕಾಂಕ್ರೀಟ್, ೨೦ ಕಲ್ಲಿನ, ೩ ಮಣ್ಣಿನ, ೪೦ ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೨೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೫ ಮನೆಗಳಲ್ಲಿ ಮಾತ್ರ ಶೌಚಾಲಯ ವ್ಯವಸ್ಥೆಯಿದೆ. ೨೦ ಮನೆಗಳಲ್ಲಿ ಭಾಗ್ಯಜ್ಯೋತಿ ವಿದ್ಯುತ್ ವ್ಯವಸ್ಥೆಯನ್ನು ಹೊಂದಿವೆ. ೬ ಕುಟುಂಬಗಳು ನಿವೇಶನರಹಿತವಾಗಿವೆ. ೩೦ ಕೊಳವೆ ಬಾವಿಗಳಿವೆ. ಹಂದನಕೆರೆ ಡೈರಿಗೆ ಇಲ್ಲಿನ ರೈತರು ಹಾಲು ನೀಡಲು ಬರುತ್ತಾರೆ. ಎರಡು ಕುಟುಂಬಗಳು ಬಡಗಿತನವನ್ನು ಮಾಡುತ್ತಾರೆ. ಒಟ್ಟು ಸಾಕ್ಷರ ಪ್ರಮಾಣ ೬೪% ಇದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಇದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.  ಒಂದು ಕಚ್ಚಾರಸ್ತೆಯಿದ್ದು ಹಂದನಕೆರೆ-ರಾಮಘಟ್ಟಕ್ಕೆ ಸಂಚರಿಸಬಹುದು. ಶ್ರೀ ದುರ್ಗಾಶಕ್ತಿ, ಸೀತಾಮಾತಾ, ತುಳಸಾಂಬ ಸ್ತ್ರೀಶಕ್ತಿ ಸಂಘಗಳು ಕಾರ್ಯನಿರ್ವಹಿಸುತ್ತವೆ. ೧ ಚಿಲ್ಲರೆ ಅಂಗಡಿಯಿದೆ.

ಹಂದನಕೆರೆಯಲ್ಲಿ ಜರುಗುವ ಶ್ರೀ ದುರ್ಗಮ್ಮದೇವಿ ಜಾತ್ರೆಯಲ್ಲಿ ಹಳ್ಳಿ ತಿಮ್ಮಲಾಪುರದ ಜನರು ಭಾಗವಹಿಸುತ್ತಾರೆ. ಬಾಯಿಬೀಗ, ಬೇವಿನ ಸೀರೆಯಲ್ಲಿ ಹೆಣ್ಣುಮಕ್ಕಳು ಸಂತೋಷದಿಂದ ಪಾಲ್ಗೊಳ್ಳುತ್ತಾರೆ. ದುರ್ಗಮ್ಮ, ತುಳಸಮ್ಮ ದೇವಿಗೆ ಪೂಜೆ ಪುನಸ್ಕಾರಗಳನ್ನು ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹುಚ್ಚನಹಳ್ಳಿ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ಹುಚ್ಚಪ್ಪ ಎಂಬ ವ್ಯಕ್ತಿ ಹೊರಗಿನಿಂದ ಬಂದು ಹೊಸದಾಗಿ ಮನೆ ಮಾಡಿಕೊಂಡು ಅಕ್ಕಪಕ್ಕದಲ್ಲಿ ಭೂಮಿಯಲ್ಲಿ ಕೃಷಿ ಮಾಡುತ್ತಾ ತೊಡಗಿ ಕ್ರಮೇಣ ಅಲ್ಲಿಯೇ ನೆಲೆಸಿದನು. ಈತನು ಮೂಲತಃ ಹಂದನಕೆರೆ ಗ್ರಾಮದವನೆಂದು ಹೇಳಲಾಗುತ್ತದೆ. ನಂತರ ಹಂದನಕೆರೆಯನ್ನು ಬಿಟ್ಟು ಹುಚ್ಚನಹಳ್ಳಿ ಗ್ರಾಮದಲ್ಲಿಯೇ ನೆಲೆಯೂರಿದರಂತೆ ಎಂಬು ಸ್ಥಳೀಯರ ಅಭಿಪ್ರಾಯವಾಗಿದೆ.

ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೨೩ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೯೦.೧೨ ಹೆಕ್ಟೇರ್. ಕೃಷಿಗೆ ಯೋಗ್ಯವಾದ ಕೆಂಪು ಮಣ್ಣನ್ನು ಹೊಂದಿದ್ದು ಇಲ್ಲಿನ ರೈತರ ಪ್ರಮುಖ ವೃತ್ತಿ ಕೃಷಿಯಾಗಿದೆ. ಬಯಲುಸೀಮೆ ಉಷ್ಣವಲಯದಲ್ಲಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಊರಮುಂದಿನ ಕಟ್ಟೆಯಿದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ. ಒಟ್ಟು ೯೨ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೪೧೮ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಲ್ಲಿನ, ಮಣ್ಣಿನ, ಗುಡಿಸಲು, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೬೩ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ಒಂದು ಕುಟುಂಬ ವಸತಿ ರಹಿತವಾಗಿದೆ. ಭಾಗ್ಯಜ್ಯೋತಿ ಯೋಜನೆಯನ್ನು ಹೊಂದಿದೆ.

ಕುರುಬ ಸಮುದಾಯದ ಜನರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಕಮ್ಮಾರರು ಇದ್ದಾರೆ. ಕನ್ನಡ ಆಡುವ ಭಾಷೆಯಾಗಿದೆ. ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಆಧುನಿಕ ಡೈರಿಯಿದೆ.

ಹಂದನಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹಂದನಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಹೊನ್ನೇಬಾಗಿ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮ ಪಂಚಾಯ್ತಿ ಸದಸ್ಯರನ್ನು ಹೊಂದಿದೆ. ಗ್ರಾಮಪಂಚಾಯ್ತಿ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಕಚ್ಚಾರಸ್ತೆಯಿದ್ದು ಹಂದನಕೆರೆ–ಬಂದ್ರೆಹಳ್ಳಿ, ಸೋರಲಮಾವುಗೆ ಮಾತ್ರ ಸಂಚಾರ ಮಾಡಬಹುದಾಗಿದೆ. ಸ್ತ್ರೀಶಕ್ತಿ ಸಂಘಗಳಾದ ಚೌಡಮ್ಮ, ದುರ್ಗಮ್ಮ, ಕರಿಯಮ್ಮ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೩ ಫಲಾನುಭವಿಗಳಿದ್ದಾರೆ. ೩ ಚಿಲ್ಲರೆ ಅಂಗಡಿಗಳಿವೆ.

ಲಕ್ಕಮ್ಮದೇವಿ, ಚೌಡಮ್ಮದೇವಿ, ಬೀರಲಿಂಗೇಶ್ವರ ದೇವಾಲಯಗಳಿವೆ. ಮಾರ್ಚ್ ತಿಂಗಳಲ್ಲಿ ಚೌಡಮ್ಮನವರ ಜಾತ್ರೆಯನ್ನು ಮಾಡುತ್ತಾರೆ. ದೇವರ ಉತ್ಸವ, ಓಕುಳಿ, ಬಾಯಿಬೀಗಗಳನ್ನು ಕಾಣಬಹುದು. ದುರ್ಗಮ್ಮನಿಗೆ ಎದುರೆತ್ತಿ, ಆರತಿ, ಬ್ಯಾಟೆ ಮಾಡುವುದು ಇಲ್ಲಿನ ಹರಕೆ ಸಂಪ್ರದಾಯವಾಗಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

# ಹಾಲುಗೊಣ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಜಯಚಾಮರಾಜಪುರ ಗ್ರಾಮಪಂಚಾಯ್ತಿಯ ಕಂದಾಯ ಗ್ರಾಮ. ಈ ಹಿಂದೆ ಗ್ರಾಮಕ್ಕೆ ಹಾಲಿನ ಕೊಣ ಎಂಬ ಹೆಸರಿತ್ತು. ಜನಭಾಷೆಯಲ್ಲಿ ಹಾಲಿನ ಕೊಣ > ಹಾಲು ಕೊಣ > ಹಾಲುಗೊಣ ಆಗಿದೆ. ಹಾಲಿಗಾಗಿ ಹಸುಗಳ ಸಾಕಣೆ ಈ ಹಿಂದೆ ಹೆಚ್ಚಾಗಿತ್ತು. ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿಗೆ ೧೦ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೧೨೫.೮ ಹೆಕ್ಟೇರ್. ಬೋರೇಗೌಡನಪಾಳ್ಯ, ಕೆ.ಆರ್ ಸಾಗರ, ನಾಗೇನಹಳ್ಳಿ ಇವು ಇದರ ಮಜರೆ ಗ್ರಾಮ. ಬಯಲುನಾಡಿಗೆ ಸೇರಿರುವ ಈ ಗ್ರಾಮದ ಸುತ್ತ ಬಿಳಿ–ಕಪ್ಪು ಕಲ್ಲು, ಬಿಳಿ–ಕಪ್ಪು ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು  ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ. ಕೃಷ್ಣರಾಜ ಸಾಗರ ಕೆರೆಯ ಒಂದಷ್ಟು ಭಾಗ ಈ ಗ್ರಾಮಕ್ಕೆ ಸೇರುತ್ತದೆ. ಹೊಸಕೆರೆ ಹಳ್ಳ, ಮರುಡಪ್ಪನಹಳ್ಳ ಎಂಬ ಹಳ್ಳಗಳಿವೆ. ನಾಲ್ಕು ತೆರೆದ ಬಾವಿಗಳು, ೩ ಕೈಪಂಪುಗಳು, ೧೨೦ ಕೊಳವೆ ಬಾವಿಗಳಿವೆ. ೧೫೦ ನಲ್ಲಿಗಳಿವೆ. ಒಟ್ಟು ೧೫೪ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ  ೬೨೧ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೪೨ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೧೩೨ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ವೀರಶೈವರು ದೊಡ್ಡ ಸಮುದಾಯದವರಾಗಿದ್ದಾರೆ. ಆದಿಕರ್ನಾಟಕ, ಆದಿದ್ರಾವಿಡ, ಕುರುಬರು, ಮಡಿವಾಳರು ಇದ್ದಾರೆ. ಎಲ್ಲರೂ ಕನ್ನಡ ಭಾಷೆ ಬಳಸುತ್ತಾರೆ. ಹಳೆಮನೆ, ಅರಳಿಮರದವರು, ಕಬ್ಬಿಣದವರು, ಉಜೇದರು, ಪುಟ್ಟಯ್ಯನವರ ವಂಶಸ್ಥರು ಇದ್ದಾರೆ. ಹಟ್ಟದಮ್ಮನ ಓಣಿ, ಕೆನ್ನಂಜಯ್ಯನ ಕಟ್ಟೆ ಓಣಿ, ಮಲ್ಲೇನಹಳ್ಳಿ ಓಣಿ, ಗೋಡೆಕೆರೆ ಕಡೆ ಹೋಗುವ ಹೊಸಕೆರೆ ಹಳ್ಳದ ಓಣಿ ಇತ್ಯಾದಿ ಓಣಿಗಳಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಕಾರು, ಲಗೇಜ್ ಆಟೋ, ಬೈಕುಗಳಿವೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ರಸ್ತೆ ಹಾಗೂ ಚರಂಡಿ ವ್ಯವಸ್ಥೆಯಿದೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕೆಎಂಎಫ್ ನಂದಿನಿ ಡೈರಿಯಿದೆ. ನಿತ್ಯ ೪೪೦ ಲೀ. ಹಾಲು ಸಂಗ್ರಹಿಸುತ್ತದೆ. ತೆಂಗಿನಕಾಯಿ, ಕೊಬ್ಬರಿ ಮುಖ್ಯ ವ್ಯಾಪಾರಿ ಸರಕುಗಳು. ಶಿಕ್ಷಕರು, ಲೋಕೋಪಯೋಗಿ ಇಂಜಿನಿಯರ್‌ಗಳು, ಉಪನ್ಯಾಸಕರು, ವೈದ್ಯರು, ಪೊಲೀಸರು, ಕೆಎಸ್‌ಆರ್‌ಟಿಸಿ ಚಾಲಕರು–ನಿರ್ವಾಹಕರಾಗಿ, ಕಂದಾಯ ಇಲಾಖೆಯ ಅಧಿಕಾರಿಗಳು, ವಾಣಿಜ್ಯ ಇಲಾಖೆಯಲ್ಲಿ, ವಕೀಲರು, ಕೃಷಿ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ, ಭಾರತೀಯ ಭಾಷಾ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಹಲವು ಕಡೆ ನೌಕರಿ ಪಡೆದಿದ್ದಾರೆ. ಬಡಗಿತನ ಮಾಡುವವರಿದ್ದಾರೆ. ಎರಡು ಇಟ್ಟಿಗೆ ಫ್ಯಾಕ್ಟರಿಗಳಿವೆ.

ಶೆಟ್ಟಿಕೆರೆ ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಶೆಟ್ಟಿಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಜೆ.ಸಿ. ಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರು, ಒಬ್ಬರು ಜಿಲ್ಲಾ ಪಂಚಾಯ್ತಿ ಸದಸ್ಯರಿದ್ದಾರೆ. ಒಬ್ಬರು ಗ್ರಾಮಪಂಚಾಯ್ತಿ ನೌಕರರು ಇದ್ದಾರೆ. ರಾಜ್ಯ ಹೆದ್ದಾರಿ ಸಂಪರ್ಕ ರಸ್ತೆ ಹೊಂದಿದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ, ಇ–ಮೇಲ್ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶ್ರೀ ಭುವನೇಶ್ವರಿ,

ಶ್ರೀಲಕ್ಷ್ಮಿ, ಶ್ರೀ ಕೆಂಪಮ್ಮ, ಶ್ರೀಪೃಥ್ವಿ ಇತ್ಯಾದಿ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೮೫ ರಷ್ಟು ಸಾಕ್ಷರರಿದ್ದಾರೆ. ತಿಮ್ಮಯ್ಯ ಎಂಬುವವರು ದನಕರುಗಳಿಗೆ ನಾಟಿ ಪದ್ಧತಿ ಮೂಲಕ ವಿವಿಧ ಕಾಯಿಲೆಗಳಿಗೆ ಔಷಧ ನೀಡುತ್ತಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ಇಲ್ಲಿ ಚಿಕ್ಕ ೩ ಅಂಗಡಿಗಳಿವೆ. ಊರಲ್ಲಿ ಮಾಸ್ತಿಕಲ್ಲು ಇದೆ. ಇದನ್ನು ಮಾಸ್ತಮ್ಮನ ಗುಡಿ ಎನ್ನುತ್ತಾರೆ. ಹಿಂದೆ ಗ್ರಾಮಕ್ಕೆ ಕೋಟೆ ಇತ್ತು. ಈಗ ನಶಿಸಿದೆ. ಈಶ್ವರನ ಗುಡಿ ಸಮೀಪ ಸ್ಮಶಾನ ಜಾಗ ಇತ್ತು ಈಗ ಒತ್ತುವರಿಯಾಗಿದೆ.

ರುದ್ರೇಶ್ವರ, ಈಶ್ವರ, ಮಾಸ್ತಮ್ಮ ದೇವಾಲಯಗಳಿವೆ. ಪ್ರತಿ ಶ್ರಾವಣ ಮಾಸದಲ್ಲಿ ರುದ್ರೇಶ್ವರ ಸ್ವಾಮಿ ಜಾತ್ರೆ ನಡೆಯುತ್ತದೆ. ಕೆಂಡ, ಎಡಿಗೆಪರ ಜಾತ್ರೆಯ ಕಾರ್ಯಕ್ರಮಗಳಾಗಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ನರಸಿಂಹಮೂರ್ತಿ ತಬಲಾ ನುಡಿಸುತ್ತಾರೆ. ಷಡಕ್ಷರಿ, ವಿಶ್ವನಾಥ್ ಎಂಬುವರು ಕರಡೇವು ನುಡಿಸುತ್ತಾರೆ. ನವೀನ್ ಹಳೇಮನೆ ಎಂಬ ಯುವ ಬರಹಗಾರರು ಕನ್ನಡದ ಶ್ರೇಷ್ಠ ನಾಟಕಕಾರರು, ಭಾಷಾ ತಜ್ಞರೂ ಆದ ಲಿಂಗದೇವರು ಹಳೇಮನೆ ಈ ಗ್ರಾಮದವರು.

## ಹಂಚನಹಳ್ಳಿ

ಹಂಚನಹಳ್ಳಿ ಗಾಣದಾಳು ಕಂದಾಯ ಗ್ರಾಮಕ್ಕೆ ಸೇರಿದ ಮಜರೆ ಗ್ರಾಮ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೩೬ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ಗಾಣದಾಳು ಕಂದಾಯ ಗ್ರಾಮದಲ್ಲಿ ಹಂಚಿಕೆಯಾಗಿದ್ದು ೩೦೮ ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ. ಪಂಚಯ್ಯ – ಪಂಚಣ್ಣ ಹೆಸರಿನ ಮೂಲದಿಂದ ಪಂಚ ಎಂದಾಗಿ ಬಳಕೆಯಾಗುತ್ತ ಹಂಚನಹಳ್ಳಿ ಎಂದಾಗಿದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಒಂದು ಕೊಳವೆ ಬಾವಿಯಿದೆ. ೩ ಕೈಪಂಪುಗಳಿದ್ದು ವಿದ್ಯುತ್ ಅಭಾವದ ಸಮಯದಲ್ಲಿ ಗ್ರಾಮಸ್ಥರ ಕುಡಿಯುವ ನೀರಿನ ಒರತೆಗಳಾಗಿವೆ.

ಲಿಂಗಾಯಿತ, ನಾಯಕ, ಈಡಿಗ ಸಮುದಾಯಗಳು ವಾಸಿಸುತ್ತಿದ್ದು ಒಟ್ಟು ೨೮ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೭೦ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಶೀಟಿನ, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೬ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕೂಲಿಗಳು, ಟ್ರ್ಯಾಕ್ಟರ್ ಡ್ರೈವರ್‌ಗಳು ಇದ್ದಾರೆ. ಶಿಕ್ಷಣ ಇಲಾಖೆಗೆ ಸೇರಿದ ಒಬ್ಬರು ಸರ್ಕಾರಿ ನೌಕರರಿದ್ದಾರೆ. ದ್ವಿಚಕ್ರ ವಾಹನ ಬಳಸುತ್ತಾರೆ. ಶಿಕ್ಷಣ, ಪಡಿತರ ವಿಷಯಗಳಿಗೆ ಗಾಣದಾಳು ಗ್ರಾಮಕ್ಕೆ ಹೋಗುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ಗಾಣದಾಳು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ

ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶೇ.೬೯ ರಷ್ಟು ಸಾಕ್ಷರರಿದ್ದಾರೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೩ ಫಲಾನುಭವಿಗಳಿದ್ದಾರೆ. ಗಾಣದಾಳು ಅಂಚೆ ಸೌಕರ್ಯ ಕೇಂದ್ರವಾಗಿದೆ. ಬೋರನಕಣಿವೆ ಮಾರ್ಗವಾಗಿ ಜಿಲ್ಲಾ ಪಂಚಾಯ್ತಿ ಮುಖ್ಯ ರಸ್ತೆಯಿದ್ದು ಬಸ್ ಸಂಚಾರವಿದೆ.

ಈಶ್ವರನ ಪೌಳಿಯಿದ್ದು ಶಿವರಾತ್ರಿಯಂದು ವಿಶೇಷ ಭಜನೆ, ಅಭಿಷೇಕ ಏರ್ಪಡುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹೊನ್ನಯ್ಯನಪಾಳ್ಯ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ ೪೪ ಕಿಮೀ ಅಂತರದಲ್ಲಿದೆ. ಗಾಣದಾಳು ಮಜರೆ ಗ್ರಾಮ. ಹೊನ್ನಯ್ಯ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ಹೊನ್ನಯ್ಯನಪಾಳ್ಯ ಎಂದು ಹೆಸರು ಬಂದಿದೆ. ಭೂತನಗುಡಿ, ಸಕ್ಕರೆನಾಯ್ಕನ ತಾಂಡ್ಯ ಮತ್ತು ಕ್ಯಾತೆದೇವರ ಹಟ್ಟಿ ಗ್ರಾಮಗಳು ಸೇರ್ಪಡೆ ಗ್ರಾಮಗಳಾಗಿವೆ. ಕೆಂಪು ಮಿಶ್ರಿತ ಭೂ ಪ್ರದೇಶವಾಗಿದೆ. ವ್ಯವಸಾಯಕ್ಕೆ ಯೋಗ್ಯವಾಗಿದೆ. ಒಂದು ರಕ್ಷಿತ ಅರಣ್ಯವಿದ್ದು ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮಪಂಚಾಯ್ತಿ ವತಿಯಿಂದ ಕಿರುನೀರು ಸರಬರಾಜು ಯೋಜನೆಯಡಿಯಲ್ಲಿ ನೀರಿನ ಟ್ಯಾಂಕ್, ಮಿನಿ ಟ್ಯಾಂಕ್, ಕೊಳವೆ ಬಾವಿಗಳ ಮೂಲಕ ಸಾರ್ವಜನಿಕವಾಗಿ ನೀರು ಒದಗಿಸಲಾಗುತ್ತದೆ. ಗ್ರಾಮಕ್ಕೆ ಹೊಂದಿಕೊಂಡಂತೆ ಕೋಡಿಹಳ್ಳವಿದ್ದು ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತದೆ. ೨ ಬೆರಳೆಣಿಕೆಯಷ್ಟು ತೆರೆದ ಬಾವಿಗಳಿದ್ದು ಆಧುನಿಕ ಕೊಳರೆ ಬಾವಿಗಳೇ ಅಲ್ಪ ನೀರಿನ ಮೂಲಗಳಾಗಿವೆ.

ಗೊಲ್ಲ ಸಮುದಾಯ ಪ್ರಧಾನವಾಗಿದ್ದು ಮುಸ್ಲಿಮ್ ಕಿರು ಸಮುದಾಯವಾಗಿದೆ. ಪ್ರಮುಖವಾಗಿ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಉರ್ದು ಭಾಷಿಕರೂ ಇದ್ದಾರೆ. ಒಟ್ಟು ೧೨೭ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೫೯೮ ಜನಸಂಖ್ಯೆ ಹೊಂದಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೬೪ ಫಲಾನುಭವಿಗಳ ಮನೆಗಳನ್ನು ಕಾಣಬಹುದು.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಕೃಷಿ ಮತ್ತು ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಹುಳಿಯಾರು ಹೋಬಳಿ, ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಹೊಯ್ಸಳಕಟ್ಟೆ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಗಾಣದಾಳು ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರನ್ನು ಒಳಗೊಂಡಿದೆ. ತಹಸೀಲ್ದಾರ್, ಪೊಲೀಸ್ ಠಾಣೆ, ಲೋಕೋಪಯೋಗಿ ಇಲಾಖೆ, ವಿದ್ಯುತ್ ಮಂಡಳಿ, ನೀರು ಇಲಾಖೆಯು ಚಿಕ್ಕನಾಯಕನಹಳ್ಳಿಯಲ್ಲಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಖಾಸಗಿ ಬಸ್ಸು, ಆಟೋರಿಕ್ಷಾ, ಸ್ವಂತ ವಾಹನಗಳು ಪ್ರಮುಖ ಸಾರಿಗೆ ವ್ಯವಸ್ಥೆಗಳಾಗಿವೆ. ಅಂಚೆ ವ್ಯವಸ್ಥೆಯಿದೆ. ೨ ಸ್ತ್ರೀಶಕ್ತಿ ಸಂಘಗಳು, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘಗಳಿವೆ. ಜಿಲ್ಲಾ ಪಂಚಾಯ್ತಿ ಮುಖ್ಯ ರಸ್ತೆ ಸಂಪರ್ಕವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೩ ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ.

ಕ್ಯಾತಲಿಂಗೇಶ್ವರ, ಕರಿಯಮ್ಮದೇವಿ, ಈರಣ್ಣಸ್ವಾಮಿ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹೊನ್ನಯ್ಯನ ಪಾಳ್ಯ

ಹೊನ್ನಯ್ಯನ ಪಾಳ್ಯ ಬೆಳ್ಳಾರ ಕಂದಾಯ ಗ್ರಾಮಕ್ಕೆ ಸೇರಿದೆ. ಮಜರೆ ಗ್ರಾಮ. ಇದರ ಭೌಗೋಳಿಕ ವ್ಯಾಪ್ತಿ ಮುಖ್ಯ ಗ್ರಾಮದೊಂದಿಗೆ ಹಂಚಿಕೆ ಯಾಗಿದ್ದು, ಕೃಷಿಭೂಮಿಯಾಗಿ ೩೧೨ ಹೆಕ್ಟೇರ್ ಹೊಂದಿದೆ. ಇದೊಂದು ಬಯಲು ಸೀಮೆಯಾಗಿದ್ದು, ಹೊನ್ನಯ್ಯ ಎಂಬ ವ್ಯಕ್ತಿ, ಬೆಳ್ಳಾರದಿಂದ ಹೊರಗೆ ಪ್ರತ್ಯೇಕವಾಗಿ ಜನವಸತಿ ನಿರ್ಮಿಸಿಕೊಂಡ ಕಾರಣ ಆತನ ಹೆಸರಿನಲ್ಲಿಯೇ ಬಡಾವಣೆ ನಿರ್ಮಾಣವಾಗಿದೆ. ಈ ಪರಿಸರದಲ್ಲಿ ಕಾಡು ಪ್ರಾಣಿಯಾಗಿ ನರಿ, ಮೊಲ, ಜಿಂಕೆ, ಕರಡಿ, ಕಂಡುಬಂದರೆ ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ ಸಾಕಿದ್ದಾರೆ. ಕಾಡು ಪಕ್ಷಿಯಾಗಿ ನವಿಲು,ಕಾಗೆ, ಕೋಗಿಲೆ, ಗೂಬೆ, ಗುಬ್ಬಚ್ಚಿ, ಕಂಡು ಬಂದರೆ ಸಾಕು ಪಕ್ಷಿಯಾಗಿ ಕೋಳಿಗಳಿವೆ. ವಾರ್ಷಿಕ ೪೬೩ ಮಿ.ಮೀ. ಮಳೆ ಬೀಳುತ್ತಿದ್ದು, ಉಷ್ಣಾಂಶ ೩೭ ಡಿ.ಸೆಂ. ಇದ್ದರೆ ಚಳಿ ೧೪ ಡಿ.ಸೆಂ. ಇರುತ್ತದೆ. ಕುಡಿಯಲು ಬೆಳ್ಳಾರ ಗ್ರಾಮದಿಂದ ನೀರು ಪೂರೈಸಲಾಗುತ್ತಿದೆ. ಒಂದು ಸಿಸ್ಟನ್ ಇದ್ದು, ೪ ಕೊಳವೆ ಬಾವಿಗಳಿವೆ. ಕುಂಚಿಟಿಗ, ಬೋವಿ, ಕ್ಷೌರಿಕ ಕೊರಚರು, ಈ ಬಡಾವಣೆಯಲ್ಲಿದ್ದಾರೆ. ಕಲ್ಲಿನ, ಸೀಟಿನ, ಸ್ವರೂಪದ ೩೨ ಮನೆಗಳಿದ್ದು, ಇವು ಜನತಾ ಆಶ್ರಯ ವಸತಿ ಯೋಜನೆಯ ಫಲಾನುಭವಿಗಳಿದ್ದಾರೆ. ಬಯಲು ಶೌಚಾಲಯ ಬಳಸುತ್ತಾರೆ. ರಾಗಿ ಮುದ್ದೆ ಮುಖ್ಯ ಆಹಾರವಾಗಿದ್ದು, ಹೆಸರು, ಜೋಳ, ಈರುಳ್ಳಿ, ಹುರುಳಿ, ಬೆಳೆಯುತ್ತಾರೆ. ಹುಣಸೆಹಣ್ಣು ಹೊಂಗೆಬೀಜ, ವ್ಯಾಪಾರದ ಮುಖ್ಯ ಸರಕುಗಳಾಗಿವೆ. ಹುಳಿಯಾರು ಹೋಬಳಿ ಚಿಕ್ಕನಾಯಕನಹಳ್ಳಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ ಹಾಗೂ ಹೋಯ್ಸಳಕಟ್ಟೆ ಜಿಲ್ಲಾಪಂಚಾಯಿತಿ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಕ್ಷೇತ್ರವಾಗಿದೆ. ಪಡಿತರ ಅಂಚೆ ಬೆಳ್ಳಾರ ಗ್ರಾಮಕ್ಕೆ ಹೋಗುತ್ತಾರೆ. ಶಿಕ್ಷಣಕ್ಕೆ ಬೆಳ್ಳಾರಕ್ಕೆ ಹೋಗುತ್ತಾರೆ. ಒಂದು ಅಂಗನವಾಡಿ ಕೇಂದ್ರವಿದೆ. ಅಂಜನಯ್ಯ, ಲಕ್ಷ್ಮೀದೇವರ ತಾಳಿಗಳಿದ್ದು, ಕರಿಯಮ್ಮನ ಊರ ಹಬ್ಬ ಆಚರಿಸುತ್ತಾರೆ. ಆರತಿ, ಬಲಿ, ಹರಕೆ ಸಂಪ್ರದಾಯ ಬಾಡೂಟದ ಸಾಮೂಹಿಕ ಬೋಜನ ವ್ಯವಸ್ಥೆಇದೆ. ಸಮುದಾಯದ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯ ವೇತನದ ೧೨ ಫಲಾನುಭವಿಗಳಿದ್ದಾರೆ. ದಸರಾ, ಯುಗಾದಿ, ಶಿವರಾತ್ರಿ, ಹಬ್ಬಗಳನ್ನು ಆಚರಿಸುತ್ತಾರೆ. ಸಿರಾ-ಹುಳಿಯಾರು ರಸ್ತೆ, ಬಸ್ ಸಂಪರ್ಕವಿದೆ.

## ಹಾಲು ಮಲ್ಲೇದೇವರ ಕಾವಲು

ಇದು ದೊಡ್ಡ ಎಣ್ಣೇಗೆರೆ ಗ್ರಾಮದ ಕಂದಾಯ ಸರ್ವೆ ನಂಬರ್‌ಗೆ ಸೇರಿದ್ದು, ಮಲ್ಲೇದೇವರ ಗುಡಿಯ ಹೊರಾಂಗಣದಲ್ಲಿ ಜನರು ಹೊಸದಾಗಿ ಮನೆ ನಿರ್ಮಿಸಿಕೊಂಡ ಕಾರಣ ಹಾಲು ಮಲ್ಲೇದೇವರ ಕಾವಲು ಎಂದು ಕರೆಯುತ್ತಾರೆ. ಇದರ ಭೌಗೋಳಿಕ ವಿಸ್ತೀರ್ಣ ಮುಖ್ಯ ಗ್ರಾಮದ ೮೦೬-೮೬ ಹೆಕ್ಟೇರ್‌ನಲ್ಲಿ ಹಂಚಿಕೆಯಾಗಿದೆ. ಮರಗಿಡಗಳ ಭೂಪ್ರದೇಶ ಗವಿರಂಗನಾಥಸ್ವಾಮಿ ಬೆಟ್ಟವಿದೆ. ಹಾಗಾಗಿ ಕಾಡುಪ್ರಾಣಿಗಳಾದ ನರಿ, ಕರಡಿ, ಜಿಂಕೆ, ಕಾಡುಹಂದಿ, ತೋಳ ಕಂಡುಬರುತ್ತವೆ. ಕಾಡು ಪಕ್ಷಿಯಾದ ಗಿಳಿ, ಗೊರವಂಕ, ನವೀಲು, ಗೂಬೆ, ಗುಬ್ಬಚ್ಚಿ, ಕಂಡುಬಂದರೆ ಗ್ರಾಮದಲ್ಲಿ ಕೋಳಿ ಸಾಕು ಪಕ್ಷಿಯಾಗಿದೆ. ಒಟ್ಟು ೨೭ ಮನೆಗಳಿದ್ದು, ಕುರುಬರು, ಲಿಂಗಾಯಿತರು, ನಾಯಕ ಸಮುದಾಯದವರು ನೆಲಸಿರುತ್ತಾರೆ. ಇವರೆಲ್ಲರೂ ಆಶ್ರಮ, ಜನತಾ ವಸತಿ ಯೋಜನೆಯ ೧೪ ಫಲಾನುಭವಿಗಳಾಗಿದ್ದು, ಬಯಲು ಶೌಚಾಲಯ ಬಳಸುತ್ತಾರೆ. ಕುಡಿಯಲು ಗ್ರಾಮ ಪಂಚಾಯಿತಿಯಿಂದ ಕಿರುನೀರು ಸರಬರಾಜು ಯೋಜನೆಯ ಅಡಿಯಲ್ಲಿ ಕೊಳವೆ ಬಾವಿಯ ಮೂಲಕ ನೀರು ಪೂರೈಸುತ್ತಿದ್ದಾರೆ. ಕೃಷಿಕರಾಗಿದ್ದು, ರಾಗಿ, ಹೆಸರು, ಈರುಳ್ಳಿ, ಹುರುಳಿ ಬೆಳೆಯುತ್ತಾರೆ. ತೆಂಗು, ಈರುಳ್ಳಿ ವ್ಯಾಪಾರಿ ಬೆಳೆಯಾಗಿದೆ. ಹಸು, ಎಮ್ಮೆ, ಕುರಿ, ಸಾಕು ಪ್ರಾಣಿಗಳು ಹುಳಿಯಾರು ಜಿಲ್ಲಾ ಪಂಚಾಯಿತ್ ಚಿಕ್ಕನಾಯಕನಹಳ್ಳಿ ವಿಧಾನ ಸಭಾಕ್ಷೇತ್ರ ತುಮಕೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ. ದೊಡ್ಡಎಣ್ಣೇಗೆರಿಯಿಂದ ಅಂಚೆ ಸಂಪರ್ಕ ಹೊಂದಿದೆ. ಶಿಕ್ಷಣ, ಸಾರಿಗೆ, ಪಡಿತರಕ್ಕೆ ದೊಡ್ಡಎಣ್ಣೇಗೆರೆ ಗೇಟಿಗೆ ಹೋಗಬೇಕಾಗಿದೆ. ಸಮುದಾಯ ಸೌಲಭ್ಯಗಳಾದ ಅಂಗವಿಕಲ, ವಿಧವಾ, ವೃದ್ಧಾಪ್ಯ, ವೇತನದ ೯ ಫಲಾನುಭವಿಗಳಿದ್ದಾರೆ. ಶಿಕ್ಷಣ ಇಲಾಖೆಗೆ ಸೇರಿದ ಒಬ್ಬರು ಸರ್ಕಾರಿ ನೌಕರರಿದ್ದಾರೆ. ಟ್ರಾಕ್ಟರ್, ಹಾಗೂ ಲಾರಿ ಡ್ರೈವರ್, ಇಟ್ಟಿಗೆ ಪ್ಯಾಕ್ಟರಿ ಕಾರ್ಮಿಕರಿದ್ದಾರೆ. ಗ್ರಾಮದ ಸಾಕ್ಷರತೆ ೬೧ ರಷ್ಟಿದೆ. ಹಾಲು ಮಲ್ಲೇಶ್ವರ, ಗವಿರಂಗನಾಥ ಮೈಲಾಪುರದ ಮೈಲಾರದೇವರ ಉತ್ಸವವನ್ನು ವಿಶೇಷವಾಗಿ ಆಚರಿಸುತ್ತಾರೆ. ದೀಪಾವಳಿ, ದಸರಾ, ಯುಗಾದಿ, ಗೌರಿಗಣೇಶ, ಶಿವರಾತ್ರಿ ಹಬ್ಬವನ್ನು ಆಚರಿಸುತ್ತಾರೆ.

## ಚಿಕ್ಕನಾಯಕನಹಳ್ಳಿ ಪಟ್ಟಣ

### ದಶಾವತಾರ ಬಡಾವಣೆ, ವಾರ್ಡ್ ನಂ.೧

ದಶಾವತಾರ ಬಡಾವಣೆಯು ಚಿಕ್ಕನಾಯಕನಹಳ್ಳಿ ಟೌನ್‌ನ ವಾರ್ಡ್ ನಂ.೧ ರ ಆಗ್ನೇಯ ದಿಕ್ಕಿನಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣದ ೫.೩೦ ಎಕರೆಯಲ್ಲಿ ಇದರ ವಿಸ್ತೀರ್ಣವೂ ಸೇರಿದೆ. ಬಯಲು ನಾಡಿನಲ್ಲಿ ಬರುವ ಈ ಪ್ರದೇಶದ ಸುತ್ತ ಬಿಳಿಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಕುರಿ, ನಾಯಿ ಇಲ್ಲಿನ ಸಾಕುಪ್ರಾಣಿಗಳಾಗಿವೆ. ಇಲ್ಲಿ ೫೯೮.೩ ಮಿಮೀ ನ ಆಸುಪಾಸು ಮಳೆ ಬಿದ್ದ ದಾಖಲೆ ಇದೆ. ೧೦–೧೫ ಡಿಗ್ರಿ ಚಳಿಯೂ, ೨೬–೩೬ ಡಿಗ್ರಿ ಬಿಸಿಲೂ ಇಲ್ಲಿ ಕಂಡುಬರುತ್ತದೆ. ಈ ಬಡಾವಣೆಯಲ್ಲಿ ೩ ಕೊಳವೆ ಬಾವಿಗಳಿವೆ. ಚಿಕ್ಕನಾಯಕನಹಳ್ಳಿ ಕೆರೆಯ ಒಂದು ಭಾಗ ಈ ಬಡಾವಣೆಯ ಅಂಚಿನಲ್ಲಿದೆ. ಕುಡಿಯುವ ನೀರಿಗಾಗಿ ೩೫೦ ನಲ್ಲಿಗಳನ್ನು ಅಳವಡಿಸಲಾಗಿದೆ.

ವೀರಶೈವರು ಪ್ರಧಾನವಾಗಿದ್ದು ಉಳಿದಂತೆ ಕುರುಬರು, ಮುಸ್ಲಿಮರು, ಆದಿಕರ್ನಾಟಕ, ಆದಿದ್ರಾವಿಡ, ಅಕ್ಕಸಾಲಿಗರು, ಅರಸರು, ಬಂಜಾರ್‍ರು, ದೇವಾಂಗ ಸಮುದಾಯ ಇದ್ದಾರೆ. ಕನ್ನಡ ಭಾಷೆಯನ್ನು ಪ್ರಧಾನವಾಗಿ ಬಳಸುತ್ತಾರೆ. ಉರ್ದು ಮಾತನಾಡುತ್ತಾರೆ. ಇಲ್ಲಿ ಒಟ್ಟಾರೆ ೧೩೮೬ ಜನಸಂಖ್ಯೆ ಇದೆ. ೪೦೦ ಮನೆಗಳು ಇವೆ. ಇವುಗಳಲ್ಲಿ ೩೫೦ ಕಾಂಕ್ರೀಟ್ ಮನೆಗಳು, ೪೬ ಕಲ್ಲು ಹಾಗೂ ಮಣ್ಣು ಸೇರಿಸಿ ಕಟ್ಟಿದ ಮನೆಗಳು, ೪ ಗುಡಿಸಲುಗಳಿವೆ. ಹೆಂಚು ಹಾಗೂ ಶೀಟ್‌ಗಳನ್ನು ಮೇಲ್ಛಾವಣಿಗೆ ಬಳಸಿದ್ದಾರೆ. ಇಲ್ಲಿಯ ಜನರ ಮುಖ್ಯ ಆಹಾರ ರಾಗಿಮುದ್ದೆ, ಅನ್ನ, ಉಪ್ಪಿಟ್ಟು, ಚಿತ್ರಾನ್ನ, ಇಡ್ಲಿ, ದೋಸೆ, ಅವಲಕ್ಕಿ ಒಗ್ಗರಣೆ ಇತ್ಯಾದಿ ಬಳಸುತ್ತಾರೆ. ವಿಶೇಷ ಊಟವಾಗಿ ಪಾಯಸ, ಒಬ್ಬಟ್ಟು ಮಾಡುತ್ತಾರೆ. ಬೈಕುಗಳು, ಕಾರುಗಳನ್ನು ಬಳಸುತ್ತಾರೆ. ಬಡಾವಣೆಯಲ್ಲಿ ಚರಂಡಿ ವ್ಯವಸ್ಥೆ ಮಾಡಲಾಗಿದೆ. ರಸ್ತೆಯಿದೆ. ನಂದಿನಿ ಹಾಲಿನ ಡೈರಿಯಿದೆ. ಚಿಕ್ಕ ಚಿಕ್ಕ ಅಂಗಡಿಗಳು ಇಲ್ಲಿ ಬರುತ್ತವೆ. ತಳ್ಳುವ ಗಾಡಿಯಲ್ಲಿ ವ್ಯಾಪಾರ ಮಾಡುತ್ತಾರೆ. ಹೆಚ್ಚಿನ ಸಂಖ್ಯೆಯ ಸರ್ಕಾರಿ ಉದ್ಯೋಗಿಗಳಿದ್ದಾರೆ. ಸರ್ಕಾರಿ ಪ್ರಾಧ್ಯಾಪಕರು, ಉಪನ್ಯಾಸಕರು, ಬ್ಯಾಂಕ್ ನೌಕರರು, ವಕೀಲರು ಇದ್ದಾರೆ. ಬೆಂಗಳೂರಿನ ವಿವಿಧ ಖಾಸಗಿ ಕಂಪನಿಗಳಲ್ಲಿ ೧೫ ಜನ ಕೆಲಸ ನಿರ್ವಹಿಸುತ್ತಿದ್ದಾರೆ. ೮ ಕುಟುಂಬಗಳು ಕೈಮಗ್ಗಗಳನ್ನು ಹೊಂದಿದ್ದಾರೆ.

ಚಿಕ್ಕನಾಯಕನಹಳ್ಳಿ ಪುರಸಭೆ, ತುಮಕೂರು ಲೋಕಸಭಾ ವ್ಯಾಪ್ತಿ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರುತ್ತದೆ. ಇಂಟರ್‌ನೆಟ್, ಡಿಟಿಎಚ್, ಇ–ಮೇಲ್ ಇತ್ಯಾದಿ ಬಳಸುತ್ತಾರೆ. ಸಂಚಾರಿ ಹಾಗೂ ಸ್ಥಿರ ದೂರವಾಣಿಗಳನ್ನು ಹೊಂದಿದ್ದಾರೆ. ಬಿಎಸ್‌ಎನ್‌ಎಲ್ ತಾಲ್ಲೂಕು ಕಛೇರಿ ಕೂಡ ಇದೇ ಬಡಾವಣೆಯಲ್ಲಿದೆ. ಕಲ್ಪತರು ಗ್ರಾಮೀಣ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಇದೆ. ಪ್ರತಿ ಸೋಮವಾರ ತಾಲ್ಲೂಕು ಮಟ್ಟದ ಸಂತೆ ನಡೆಯುತ್ತದೆ. ೬ ಸ್ತ್ರೀಶಕ್ತಿ ಸಂಘಗಳಿವೆ. ವಾಣಿಜ್ಯ ಸಂಕೀರ್ಣಗಳಿವೆ. ಶೇ.೯೮ ರಷ್ಟು ಸಾಕ್ಷರತೆ ಈ ಬಡಾವಣೆಯಲ್ಲಿದೆ. ಆಂಗ್ಲ ಮಾಧ್ಯಮದ ವಿದ್ಯಾವಾರಿಧಿ ಎಂಬ ಖಾಸಗಿ ಪ್ರಾಥಮಿಕ ಶಾಲೆ, ಸರ್ಕಾರಿ ಉರ್ದು ಕಿರಿಯ ಹಾಗೂ ಪ್ರಾಥಮಿಕ ಪಾಠಶಾಲೆ, ಸರ್ಕಾರಿ ಪದವಿಪೂರ್ವ, ಪದವಿ ಕಾಲೇಜು, ಎಸ್.ಎಂ.ಎಸ್. ಖಾಸಗಿ ಪದವಿಪೂರ್ವ ಕಾಲೇಜು ಇದೆ. ಶಾಲೆಗಳಲ್ಲಿ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಇದೆ. ಬಿಸಿಯೂಟ, ಕ್ಷೀರಭಾಗ್ಯ ಯೋಜನೆಗಳು ಜಾರಿಯಲ್ಲಿವೆ. ಸಾರ್ವಜನಿಕ ತೀನಂಶ್ರೀ ಗ್ರಂಥಾಲಯವಿದೆ. ೫೦೦೦ ಕ್ಕೂ ಹೆಚ್ಚು ಪುಸ್ತಕಗಳಿವೆ. ಕ್ರೀಡಾಂಗಣವಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಕಲಚೇತನ, ವಿಧವಾ ವೇತನ ಪಡೆಯುವ ೨೭ ಫಲಾನುಭವಿಗಳಿದ್ದಾರೆ. ದಶಾವತಾರ ದೇವಸ್ಥಾನ, ಶ್ವೇತಾಂಬರ ಜೈನ ಪ್ರಾರ್ಥನಾ ಮಂದಿರಗಳಿವೆ. ಯುಗಾದಿ, ಮಹಾನವಮಿ, ದೀಪಾವಳಿ, ಗೌರಿ–ಗಣೇಶ, ಕಾರಹಬ್ಬ, ಏಕಾದಶಿ ಇತ್ಯಾದಿ ಹಿಂದೂಗಳ ಬಹುತೇಕ ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ. ರಾಧಾಕೃಷ್ಣ ಎಂಬ ೪೫ ವರ್ಷದವರು ಅಂಕಣ ಬರಹಗಾರರು ಈ ಬಡಾವಣೆಯಲ್ಲಿದ್ದಾರೆ. ಇಲ್ಲಿ ಧರ್ಮಸ್ಥಳ ಸಂಘ, ಸ್ನೇಹ ಕೂಟ, ಚಿಕ್ಕನಾಯಕನಹಳ್ಳಿ ಯೂತ್‌ಕ್ಲಬ್‌ಗಳು ಈ ಬಡಾವಣೆಯಲ್ಲಿವೆ.

### ಜೋಗಿಹಳ್ಳಿ ವಾರ್ಡ್ ನಂ.೨

ಜೋಗಿಹಳ್ಳಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ೧ ಕಿಮೀ ದೂರದಲ್ಲಿದೆ. ಚಿಕ್ಕನಾಯಕನಹಳ್ಳಿ ಕೆರೆಯ ಮುಂಭಾಗದಲ್ಲಿ ಸರ್ಕಾರಿ ಕಾಲೇಜಿನ ಹಿಂಭಾಗದ ರಸ್ತೆಯಲ್ಲಿದೆ. ಇದೊಂದು ಕೃಷಿ ಪ್ರಧಾನ ಗ್ರಾಮ. ಚಿಕ್ಕನಾಯಕನಹಳ್ಳಿ ಪುರಸಭೆ ವಾರ್ಡ್ ನಂ.೨ ಕ್ಕೆ ಸೇರಿದೆ. ಕೆಂಪು ಮಿಶ್ರಿತ ಮರಳು ಭೂಪ್ರದೇಶವಾಗಿದೆ. ಹಸು, ಎಮ್ಮೆ, ಕುರಿ, ಮೇಕೆ, ಕೋಳಿ ಸಾಕು ಪ್ರಾಣಿಗಳಾಗಿವೆ. ವಾರ್ಷಿಕ ೫೮೩ ಮಿಮೀ ಮಳೆ ಬೀಳುತ್ತದೆ. ಉಷ್ಣಾಂಶ ೩೭ ಡಿಗ್ರಿ, ಚಳಿ ೧೩ ಡಿಗ್ರಿ ಸೆಂಟಿಗ್ರೇಡ್ ಇದೆ. ಕುಡಿಯಲು ಪುರಸಭೆಯ ವತಿಯಿಂದ ಪೈಪ್‌ಲೈನ್ ಮೂಲಕ ನೀರು ಪೂರೈಸಲಾಗುತ್ತದೆ. ಎರಡು ಕೈಪಂಪುಗಳಿವೆ. ಸಾಮಾಜಿಕ ರಚನೆಯಲ್ಲಿ ಕುರುಬರು ದೊಡ್ಡ ಸಮುದಾಯ. ಬಲಜಿಗ

ಕಿರು ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದೆ. ಕಲ್ಲಿನ, ಹೆಂಚಿನ, ಶೀಟಿನ ಸ್ವರೂಪದ ೪೧೦ ಮನೆಗಳಿವೆ. ಇವು ಜನತಾ, ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ೧೪೦ ಫಲಾನುಭವಿಗಳಿದ್ದಾರೆ. ೭೪ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ಉಚಿತ ಭಾಗ್ಯಜ್ಯೋತಿ ಫಲಾನುಭವಿಗಳಿದ್ದು ೪೩ ವಿದ್ಯುತ್ ಕಂಬ, ೨೬ ದೀಪಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕೃಷಿ ಇಲ್ಲಿನ ಮುಖ್ಯ ಕಸುಬು. ರಾಗಿ, ಭತ್ತ, ಹೆಸರು, ಜೋಳ, ತೆಂಗು, ಅಡಿಕೆ ಬೆಳೆಯುತ್ತಾರೆ. ತೆಂಗು, ಅಡಿಕೆ ವ್ಯಾಪಾರಿ ಸರಕಾಗಿದೆ. ಸಾಂಪ್ರದಾಯಿಕ ಎತ್ತಿನ ಗಾಡಿಗಳಿವೆ. ಟ್ರ್ಯಾಕ್ಟರ್, ಆಟೋ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ. ಕೊಬ್ಬರಿ, ಅಡಿಕೆ, ಕಂಬಳಿ ವ್ಯಾಪಾರಿ ಸರಕಾಗಿದೆ. ಆಡಳಿತಾತ್ಮಕವಾಗಿ ತುಮಕೂರು ಲೋಕಸಭೆ, ಚಿಕ್ಕನಾಯಕನಹಳ್ಳಿ ವಿಧಾನಸಭೆ, ಚಿಕ್ಕನಾಯಕನಹಳ್ಳಿ ಪುರಸವೆ ವಾರ್ಡ್ ನಂ.೨ ರ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಪುರಸಭೆಯ ಸದಸ್ಯರಿದ್ದಾರೆ. ಚಿಕ್ಕನಾಯಕನಹಳ್ಳಿ ಕೇಂದ್ರ ಸ್ಥಳದಿಂದ ಅಂಚೆ ಸೌಕರ್ಯ ಪಡೆಯಲಾಗಿದೆ. ಸ್ಥಿರ–ಚರ ದೂರವಾಣಿಗಳಿವೆ. ಶಿಕ್ಷಣ, ಕಂದಾಯ, ಸಾರಿಗೆ, ಕೆಇಬಿ ಇಲಾಖೆಗಳ ಒಟ್ಟು ೨೩ ಸರ್ಕಾರಿ ನೌಕರರಿದ್ದಾರೆ. ಖಾಸಗಿ ಡ್ರೈವರ್ ಹಾಗೂ ಇಟ್ಟಿಗೆ ಫ್ಯಾಕ್ಟರಿ ನೌಕರರಿದ್ದಾರೆ. ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಒಂದು ಅಂಗನವಾಡಿ ಕೇಂದ್ರವಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯಗಳಿವೆ. ಒಟ್ಟು ಸಾಕ್ಷರತಾ ಪ್ರಮಾಣ ೭೩ ರಷ್ಟಿದೆ. ಸಮುದಾಯ ಸೌಲಭ್ಯಗಳಾದ ೨೩ ವಿಧವಾ ವೇತನದ, ೩ ಅಂಗವಿಕಲ ವೇತನದ ಹಾಗೂ ೧೪ ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೪ ಧರ್ಮಸ್ಥಳ ಸ್ವಸಹಾಯ ಸಂಘ, ೨ ಸ್ತ್ರೀಶಕ್ತಿ ಸಂಘಗಳಿವೆ. ಆಂಜನೇಯನ ಪುರಾತನ ದೇವಾಲಯವಿದೆ. ಶ್ರಾವಣ ಮಾಸದಲ್ಲಿ ಆರತಿ, ಪರೇವು ಮಾಡುತ್ತಾರೆ. ಯುಗಾದಿ, ದಸರಾ, ಗಣೇಶನ ಹಬ್ಬಗಳನ್ನು ಆಚರಿಸುತ್ತಾರೆ.

### ಟಿ.ಎನ್.ಎಸ್. ಬಡಾವಣೆ, ವಾರ್ಡ್ ನಂ.೩

ಟಿ.ಎನ್.ಎಸ್. ಬಡಾವಣೆಯು ಚಿಕ್ಕನಾಯಕನಹಳ್ಳಿ ಟೌನ್‌ನಲ್ಲಿ ಬರುವ ಒಂದು ಬಡಾವಣೆ ಆಗಿದೆ. ೩ನೇ ವಾರ್ಡ್ ಎಂದು ಇದನ್ನು ಹೆಸರಿಸಲಾಗಿದೆ. ವಿದ್ಯಾನಗರದ ಒಂದಷ್ಟು ಭಾಗ, ಡಿ.ದೇವರಾಜ ಅರಸು ಬಡಾವಣೆ, ಮಾರುತಿ ಬಡಾವಣೆ, ಕನಕಗಿರಿ ಬಡಾವಣೆಗಳು ಇದರಲ್ಲಿ ಸೇರಿವೆ. ಉತ್ತರದಿಂದ ದಕ್ಷಿಣಕ್ಕೆ ಬಿ.ಹೆಚ್. ರಸ್ತೆಯ ಎಡಭಾಗದಲ್ಲಿ ಇದರ ಹರಹು ಇದೆ. ವಿದ್ಯಾನಗರ ಪ್ರವೇಶದ್ವಾರದಿಂದ ತಾಲ್ಲೂಕು ಕಛೇರಿವರೆವಿಗೂ ಇದು ಹರಡಿದೆ. ಇದರ ಒಟ್ಟು ವಿಸ್ತೀರ್ಣವು ನಗರದ ಒಟ್ಟು ವಿಸ್ತೀರ್ಣವಾದ ೫.೩೦ ಎಕರೆಯಲ್ಲೇ ಸೇರಿದೆ. ಇದೊಂದು ಬಯಲುನಾಡಿನಲ್ಲಿ ಬರುವ ಜನವಸತಿ. ಇಲ್ಲಿ ಬಿಳಿಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಹಸುಗಳು, ನಾಯಿಗಳು, ಎಮ್ಮೆಗಳು, ಎತ್ತುಗಳನ್ನು ಸಾಕುತ್ತಾರೆ. ಕೋಳಿ ಸಾಕಿದ್ದಾರೆ. ೫೯೮.೩ ಮಿಮೀ ಮಳೆ, ೧೦–೧೫ ಡಿಗ್ರಿ ಚಳಿ, ೨೬–೩೬ ಡಿಗ್ರಿ ಬಿಸಿಲು ಕಂಡುಬರುತ್ತದೆ. ಈ ಭಾಗದಲ್ಲಿ ತುರುಕರ ಕಟ್ಟೆ, ಹೊಸಕಟ್ಟೆ (ಬಳೆಗಾರರ ಕಟ್ಟೆ), ಜೋಗಿಕಟ್ಟೆ ಎಂಬ ಕಟ್ಟೆಗಳಿವೆ. ಕೋಡುಗಲ್ಲು ಹಳ್ಳ ಎಂಬ ಹಳ್ಳ ಹರಿಯುತ್ತದೆ. ಇದು ನಡುವನಹಳ್ಳಿ ಕೆರೆಯಿಂದ ಜೆ.ಸಿ.ನಾ ಹಳ್ಳಿ ಕೆರೆಗೆ ಬರುತ್ತದೆ. ೧೫ ಕೊಳವೆ ಬಾವಿಗಳು ಇಲ್ಲಿವೆ. ಕುಡಿಯುವ ನೀರಿಗಾಗಿ ೩೦೦ ನಲ್ಲಿಗಳನ್ನು ಅಳವಡಿಸಲಾಗಿದೆ.

ಕುರುಬ ಸಮುದಾಯದವರು ಪ್ರಧಾನವಾಗಿದ್ದು ಉಳಿದಂತೆ ಮುಸ್ಲಿಮರು, ವೀರಶೈವರು, ಹೂವಾಡಿಗರು (ಬಲಜಿಗರು), ಆದಿಕರ್ನಾಟಕ, ದೇವಾಂಗ, ಸರ್ಪ ಒಕ್ಕಲಿಗ, ಶ್ರೀವೈಷ್ಣವರು, ಆಚಾರ್ರು ಇದ್ದಾರೆ. ಮುಸ್ಲಿಮರು ಮಾತ್ರ ಉರ್ದು, ಉಳಿದ ಎಲ್ಲರೂ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ದೇವಾಂಗ ಬೀದಿ, ಮೂರ್ತಪ್ಪನ ವಠಾರ ಎಂಬ ಓಣಿಗಳಿವೆ. ೨೦೧೧ ರ ಜನಗಣತಿ ಪ್ರಕಾರ ೧೮೫೦ ಜನಸಂಖ್ಯೆ ಇದೆ. ಒಟ್ಟು ಇಲ್ಲಿ ೫೯೬ ಮನೆಗಳಿವೆ. ೬ ಮನೆಗಳನ್ನು ಕಲ್ಲು ಹಾಗೂ ಮಣ್ಣು ಬಳಸಿ ಕಟ್ಟಿದ್ದಾರೆ. ಉಳಿದಂತೆ ಎಲ್ಲವೂ ಕಾಂಕ್ರೀಟ್ ಮನೆಗಳು. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಇಲ್ಲಿ ಸಾಂಪ್ರದಾಯಿಕ ವಾಹನವಾದ ಎತ್ತಿನಗಾಡಿಗಳು, ಬೈಸಿಕಲ್, ಲಾರಿಗಳು, ಕಾರುಗಳು, ಬೈಕುಗಳು, ಆಟೋ ಮುಂತಾದ ಆಧುನಿಕ ವಾಹನಗಳು ಇವೆ. ಸಿಮೆಂಟ್ ರಸ್ತೆ ಹಾಗೂ ಚರಂಡಿ ವ್ಯವಸ್ಥೆ ಇದೆ. ೫೯೬ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕೃಷಿಕರಿದ್ದಾರೆ. ಹೆಚ್ಚಾಗಿ ನೌಕರರಿದ್ದಾರೆ. ರಾಗಿಯನ್ನು ಮುಖ್ಯ ಬೆಳೆಯಾಗಿ ಬೆಳೆಯುತ್ತಾರೆ. ಹುರುಳಿ, ಅವರೆ, ಹೆಸರು ಉಪಬೆಳೆಗಳು. ತೆಂಗು, ಅಡಿಕೆಗಳು ಇಲ್ಲಿನ ವಾಣಿಜ್ಯ ಬೆಳೆಗಳು. ತೆಂಗಿನಕಾಯಿ, ಕೊಬ್ಬರಿ, ಅಡಿಕೆಗಳು ವ್ಯಾಪಾರಿ ಬೆಳೆಗಳು. ಇಲ್ಲಿ ೨೫೦ ಕ್ಕೂ ಹೆಚ್ಚು ಜನ ಶಿಕ್ಷಕರು, ಇಬ್ಬರು ವೈದ್ಯರು, ೬ ಜನ ಇಂಜಿನಿಯರ್‌ಗಳು, ೮ ಜನ ವಕೀಲರುಗಳು ನೌಕರಿ ಮಾಡುತ್ತಿದ್ದಾರೆ. ಇಲ್ಲಿ ಸಾಮಿಲ್ಲು, ಪ್ರಿಂಟಿಂಗ್ ಪ್ರೆಸ್‌ಗಳಿವೆ. ನಂದನ ಸ್ಟೀಲ್ ಕಂಫರ್ಟ್ ಎಂಬ ಬೀರು

ತಯಾರಿಕಾ ಕಾರ್ಖಾನೆ ಇದೆ. ಸಾಂಪ್ರದಾಯಿಕ ಕಸುಬುದಾರರಾದ ಬಡಗಿಗಳು, ಕಮ್ಮಾರರು ಇದ್ದಾರೆ.

ಚಿಕ್ಕನಾಯಕನಹಳ್ಳಿ ಪುರಸಭೆ, ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರದಲ್ಲಿದೆ. ಇಲ್ಲಿ ಗಣಕ, ಟಿ.ವಿಗಳನ್ನು ಬಳಸುತ್ತಾರೆ. ಇಂಟರ್‌ನೆಟ್, ಡಿಟಿಎಚ್, ಕೊರಿಯರ್, ಸಂಚಾರಿ ಹಾಗೂ ಸ್ಥಿರ ದೂರವಾಣಿಗಳಿವೆ. ತಾಲ್ಲೂಕಿನ ಜೆಎಂಎಫ್‌ಸಿ ಹಾಗೂ ಸಿವಿಲ್ ನ್ಯಾಯಾಲಯ, ಶಿವಯೋಗಿ ಪತ್ತಿನ ಸಹಕಾರ ಸಂಘ ಇದೆ. ಸ್ತ್ರೀಶಕ್ತಿ ಸಂಘಗಳು ಅಸ್ತಿತ್ವದಲ್ಲಿವೆ. ಶೇ.೯೦ ರಷ್ಟು ಸಾಕ್ಷರರು ಇದ್ದಾರೆ. ಒಂದು ಅಂಗನವಾಡಿ ಕೇಂದ್ರವಿದೆ. ದಿವ್ಯಪ್ರಭ ಎಂಬ ಎರಡು ಖಾಸಗಿ ಕಿರಿಯ ಹಾಗೂ ಪ್ರಾಥಮಿಕ ಶಾಲೆಗಳಿವೆ. ಮಲ್ಲಿಕಾರ್ಜುನ ಸ್ವಾಮಿ ಕೈಗಾರಿಕಾ ತರಬೇತಿ ಕೇಂದ್ರವಿದೆ. ಮಲ್ಲಿಕಾರ್ಜುನಸ್ವಾಮಿ ಕೈಗಾರಿಕಾ ತರಬೇತಿ ಕೇಂದ್ರವಿದೆ. ಕಣ್ಣಿನ ಆರೋಗ್ಯಕ್ಕಾಗಿ ಕಣ್ಣು ಪರೀಕ್ಷಾ ಕೇಂದ್ರವಿದೆ.

ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನ ಪಡೆಯುವ ೩೧ ಫಲಾನುಭವಿಗಳಿದ್ದಾರೆ. ೨ ಹೋಟೆಲ್‌ಗಳು, ಜನತಾ ಲಾಡ್ಜ್ ಎಂಬ ವಸತಿ ನಿಲಯ, ೪ ಅಂಗಡಿಗಳು, ಮುಸಲ್ಮಾನರ ಸ್ಮಶಾನ ಇದೆ.

ಆದಿಹೊಲದ ಆಂಜನೇಯಸ್ವಾಮಿ ದೇವಾಲಯ, ಸಾಯಿಬಾಬಾ ಮಂದಿರ, ಎರಡು ಚಿಕ್ಕ ಚರ್ಚ್‌ಗಳು, ಒಂದು ಮಸೀದಿ, ಜೋಗಿಮಠವಿದೆ. ಪ್ರತಿವರ್ಷ ಆದಿಆಂಜನೇಯಸ್ವಾಮಿ ಜಾತ್ರೆ ಮಾಡುತ್ತಾರೆ. ಜಾತ್ರೆಯಲ್ಲಿ ಅನ್ನ ಸಂತರ್ಪಣೆ, ದೊಡ್ಡೆಡೆಗಳು ಜರುಗುತ್ತವೆ. ಯುಗಾದಿ, ಮಹಾನವಮಿ, ಶಿವರಾತ್ರಿ, ಏಕಾದಶಿ, ಗೌರಿ–ಗಣೇಶ, ಬಸವನಹಬ್ಬ, ಆಯುಧಪೂಜೆ, ಕಾರಹಬ್ಬ ಇತ್ಯಾದಿ ಎಲ್ಲಾ ಹಬ್ಬಗಳನ್ನು ಇವರು ಆಚರಿಸುತ್ತಾರೆ.

ಸಾಂಸ್ಕೃತಿಕವಾಗಿ ಇಲ್ಲಿ ಮಾರುತಿ ಭಜನಾ ಮಂಡಳಿ ಇದೆ. ವಿಜಯಮ್ಮ, ಭಾರತಿ, ನರಸಿಂಹಯ್ಯ, ಸುವರ್ಣ ಇವರು ಭಜನಾ ಗೀತೆಗಳು, ಸೋಬಾನೆ ಹಾಡುಗಳು, ಭಕ್ತಿಗೀತೆಗಳನ್ನು ಹಾಡುತ್ತಾರೆ. ಪೆಟ್ರೋಲ್ ಬಂಕ್, ವಕೀಲರ ಸಂಘ, ತಾಲ್ಲೂಕು ಕಛೇರಿ, ರೈತಸಂಘ, ಹಸಿರು ಸೇನೆ ಸಂಘ, ತಾಲ್ಲೂಕು ಜನಪರ ವೇದಿಕೆ, ಧರ್ಮಸ್ಥಳ ಸಂಘ–ಸಂಸ್ಥೆಗಳು ಅಸ್ತಿತ್ವದಲ್ಲಿವೆ.

## ದಬ್ಬೇಘಟ್ಟ, ವಾರ್ಡ್ ನಂ.೪

ದಬ್ಬೇಘಟ್ಟ ಗ್ರಾಮವು ೪ನೇ ವಾರ್ಡ್‌ನಲ್ಲಿರುವ ಒಂದು ಕಂದಾಯ ಗ್ರಾಮವಾಗಿದ್ದು ಚಿಕ್ಕನಾಯಕನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿದೆ. ಇಲ್ಲಿ ಮೇದ ಸಮುದಾಯದವರು ಹೆಚ್ಚಾಗಿ ವಾಸಿಸುತ್ತಿದ್ದು ಬಿದಿರು ಕೆಲಸದ ದಬ್ಬೆಗಳನ್ನು ಬಳಸಿಕೊಂಡು ಕುಕ್ಕೆಗಳನ್ನು ತಯಾರಿಸಿ ಜೀವನ ಮಾಡುತ್ತಿದ್ದರು. ಹಾಗಾಗಿ ದಬ್ಬೇಘಟ್ಟ ಹೆಸರು ಬಂದಿದೆ. ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ೧.೪ ಕಿಮೀ ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣವು ಚಿಕ್ಕನಾಯಕನಹಳ್ಳಿಯ ಒಟ್ಟು ಭೌಗೋಳಿಕ ವಿಸ್ತೀರ್ಣವಾದ ೮.೭೨ ಚ.ಕಿ.ಮೀ ನಲ್ಲಿ ಸೇರಿದೆ.

ಬಯಲುನಾಡಿಗೆ ಸೇರಿದ್ದು ಬಿಳಿ ಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಕರಿಕಲ್ಲು ಬಂಡೆ ಹಾಸು ಕಂಡುಬರುತ್ತದೆ. ತಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ಹರಿಹಳ್ಳ ಎಂಬ ಹಳ್ಳವು ಹರಿದು ಹೊಲಮಾಳದಿಂದ ಕ್ರೋಢೀಕೃತವಾಗಿ ಹಳ್ಳದ ರೂಪವಾಗಿ ಮೇಲನಹಳ್ಳಿ ಗ್ರಾಮದ ಕೆರೆಗೆ ಸೇರುತ್ತದೆ. ಕಲ್ಲುಬಾವಿ, ಮಾದಿರ ಬಾವಿ ಎಂಬ ತೆರೆದ ಬಾವಿಗಳಿವೆ. ೬೫ ಕ್ಕೂ ಹೆಚ್ಚು ಕೊಳವೆ ಬಾವಿಗಳನ್ನು ಕೃಷಿ ಬಳಕೆಗಾಗಿ ತಮ್ಮ ಹೊಲ–ತೋಟಗಳಲ್ಲಿ ಹಾಕಿಸಿಕೊಂಡಿದ್ದಾರೆ. ೨ ಕೈಪಂಪುಗಳಿವೆ. ನಾಗಿನಕಟ್ಟೆ, ಅಪ್ಪಯ್ಯನಕಟ್ಟೆ ಎಂಬ ಎರಡು ಕಟ್ಟೆಗಳಿವೆ. ದಬ್ಬೆಘಟ್ಟ ಕೆರೆ, ಅಯ್ಯನ ಕೆರೆ ಎಂಬ ೨ ಕೆರೆಗಳಿವೆ. ಕುಡಿಯುವ ನೀರಿಗಾಗಿ ಓವರ್‌ಹೆಡ್ ಟ್ಯಾಂಕ್ ಇದೆ. ೩೨ ಕ್ಕೂ ಹೆಚ್ಚು ನಲ್ಲಿಗಳನ್ನು ಗ್ರಾಮದಲ್ಲಿ ಅಳವಡಿಸಲಾಗಿದೆ.

ಒಟ್ಟು ೨೧೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೯೧೦ ಜನಸಂಖ್ಯೆ ಹೊಂದಿದೆ. ವೀರಶೈವರು ಹಾಗೂ ನಾಯಕ ಸಮುದಾಯದವರು ಸಮಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದ್ದಾರೆ. ಮಡಿವಾಳರು, ಆದಿಕರ್ನಾಟಕ, ಗಾಣಿಗರು, ಬಣಜಿಗಶೆಟ್ರು, ಕುರುಬರು, ಭಜಂತ್ರಿಗಳು ಮುಂತಾದ ಸಣ್ಣ ಸಮುದಾಯದವರಿದ್ದಾರೆ. ಎಲ್ಲರೂ ಕನ್ನಡ ಮಾತನಾಡುತ್ತಾರೆ. ಚಿಕ್ಕೋಣಿ, ದೊಡ್ಡೋಣಿ, ಕೆರೆ ಓಣಿ, ಕಲ್ಲೇನಹಳ್ಳಿ ಓಣಿ ಎಂಬ ಓಣಿಗಳಿವೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೫ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ೩೮ ಮನೆಗಳನ್ನು ಕಾಣಬಹುದು. ೧೮೦ ಕುಟುಂಬಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಉದ್ದು , ಹರಳು, ಹುರುಳಿ ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಜೆರ್ಸಿ, ಹೆಚ್‌ಎಫ್ ಇತ್ಯಾದಿ ತಳಿಯ ಹಸುಗಳನ್ನು ಹಾಗೂ ಎಮ್ಮೆಗಳನ್ನು ಹಾಲು ಉತ್ಪಾದನೆಗಾಗಿ ಜನರು ಸಾಕಿದ್ದಾರೆ. ಕೆಎಂಎಫ್ ಸಹಯೋಗದ ನಂದಿನಿ ಡೈರಿಯಿದ್ದು ನಿತ್ಯ ೩೨೦ ಲೀ. ಹಾಲು ಸಂಗ್ರಹವಾಗುತ್ತದೆ. ಕೆರೆಯಲ್ಲಿ ನೀರು ತುಂಬಿದಾಗ ಮೀನು ಕೃಷಿ ಮಾಡಲಾಗುತ್ತದೆ. ತೆಂಗಿನಕಾಯಿ ಮತ್ತು ಕೊಬ್ಬರಿ ಇಲ್ಲಿನ ಮುಖ್ಯ ವ್ಯಾಪಾರಿ ಸರಕು ಆಗಿದೆ. ಗ್ರಾಮದ ನಾಲ್ವರು ಶಿಕ್ಷಕ ವೃತ್ತಿ ಮಾಡುತ್ತಿದ್ದಾರೆ. ೧೨ಕ್ಕೂ ಹೆಚ್ಚು ಜನ ಬೆಂಗಳೂರಿನ ವಿವಿಧ ಉದ್ದಿಮೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ೩ ಇಟ್ಟಿಗೆ ಕಾರ್ಖಾನೆಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ನಗರಸಭೆ ವ್ಯಾಪ್ತಿಗೆ ಸೇರುತ್ತದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಕೆಂಪಮ್ಮದೇವಿ, ಲಕ್ಷ್ಮಿ, ಮರುಳಸಿದ್ದೇಶ್ವರ, ಶ್ರೀ ಬಸವೇಶ್ವರ ಸ್ತ್ರೀಶಕ್ತಿ ಸಂಘಗಳಿವೆ. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯೂ ಕಾರ್ಯನಿರ್ವಹಿಸುತ್ತಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೪೮ ಫಲಾನುಭವಿಗಳಿದ್ದಾರೆ. ಮರುಳಸಿದ್ದೇಶ್ವರ ಪ್ರಾರ್ಥನಾ ಮಂದಿರ, ನಾಲ್ಕು ಚಿಕ್ಕ ಅಂಗಡಿಗಳು ಇವೆ.

ಮರುಳಸಿದ್ದೇಶ್ವರ, ಕೆಂಪಮ್ಮದೇವಿ, ಕೊಟ್ರಬಸಪ್ಪ, ಬಸವಣ್ಣ, ಈಶ್ವರ, ತಿಮ್ಮಪ್ಪನ ದೇವಾಲಯಗಳಿವೆ. ಮೇ ತಿಂಗಳಿನಲ್ಲಿ ಕೆಂಪಮ್ಮ ದೇವಿ ಜಾತ್ರೆಯನ್ನು, ಮರುಳಸಿದ್ದೇಶ್ವರ ಜಾತ್ರೆಯನ್ನು ಮಾಡುತ್ತಾರೆ. ಜಾತ್ರೆಯಲ್ಲಿ ಕೆಂಡ, ತೇರು, ಸಿಡಿ, ಬಾಯಿಬೀಗ, ಕಳಸ, ಬಾನ, ಗಾವು ಸಿಗಿಯುವುದು ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗ್ರಾಮದ ಕರಿಯಮ್ಮ, ಕೆಂಪಮ್ಮ ಎಂಬುವರು ಸೋಬಾನೆ ಹಾಗೂ ಜನಪದ ಹಾಡುಗಳನ್ನು ಹಾಡುತ್ತಾರೆ. ಮದಕರಿ ನಾಯಕ ಯುವಕ ಸಂಘ, ಮರುಳ ಸಿದ್ದೇಶ್ವರ ಯುವಕರ ಸಂಘಗಳು ಅಸ್ತಿತ್ವದಲ್ಲಿವೆ.

## ಕೆಇಬಿ ಬಡಾವಣೆ, ವಾರ್ಡ್ ನಂ.೫

ಕೆಇಬಿ ಬಡಾವಣೆಯು ಚಿಕ್ಕನಾಯಕನಹಳ್ಳಿ ಟೌನಿನ ಐದನೇ ವಾರ್ಡ್ ಎಂದು ಸೂಚಿಸಲಾಗಿದೆ. ಇದು ಬನಶಂಕರಿ ಬಡಾವಣೆ, ಬಸವೇಶ್ವರ ನಗರ ರಸ್ತೆಯ ಪಕ್ಕದಿಂದ ರಾಜ್ಯಹೆದ್ದಾರಿಯ ಬಲಪಕ್ಕದ ಎಲ್ಲಾ ಮನೆಗಳು, ತಾಲ್ಲೂಕು ಕಛೇರಿಯವರೆಗೂ ವ್ಯಾಪಿಸುತ್ತದೆ. ನಗರದ ದಕ್ಷಿಣ ಭಾಗಕ್ಕೂ ಈ ಬಡಾವಣೆಯಿದೆ. ಇದರ ಭೌಗೋಳಿಕ ವಿಸ್ತೀರ್ಣವು ನಗರದ ಒಟ್ಟು ಭೌಗೋಳಿಕ ವಿಸ್ತೀರ್ಣವಾದ ೫.೩೦ ಎಕರೆಯಲ್ಲೇ ಸೇರಿದೆ. ಬಯಲುನಾಡಿಗೆ ಸೇರುವ ಈ ಪ್ರದೇಶದಲ್ಲಿ ಬಿಳಿ ಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಇಲ್ಲಿ ಕೆಲವರು ಹಸುಗಳು, ನಾಯಿಗಳನ್ನು ಸಾಕಿದ್ದಾರೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦–೧೨ ಡಿಗ್ರಿ ಹಾಗೂ ಬಿಸಿಲು ೩೪–೩೬ ಡಿಗ್ರಿ ಸರಾಸರಿ ಇದೆ. ೩ ಕೊಳವೆ ಬಾವಿಗಳಿವೆ. ಯಂಕಣ್ಣನಕಟ್ಟೆ ಎಂಬ ಒಂದು ಕಟ್ಟೆಯಿದೆ. ಕುಡಿಯುವ ನೀರಿಗಾಗಿ ೬೦೦ ನಲ್ಲಿಗಳನ್ನು ಅಳವಡಿಸಲಾಗಿದೆ.

ಇಲ್ಲಿ ದೇವಾಂಗಶೆಟ್ರು ದೊಡ್ಡ ಸಮುದಾಯವಾಗಿದ್ದು ಕುರುಬರು, ಆದಿಕರ್ನಾಟಕ, ಆದಿದ್ರಾವಿಡ, ಮುಸ್ಲಿಂ, ವೀರಶೈವ, ಒಕ್ಕಲಿಗರು, ಅಕ್ಕಸಾಲಿಗರು ಸಣ್ಣ ಸಮುದಾಯದವರಾಗಿದ್ದಾರೆ. ಎಲ್ಲರೂ ಕನ್ನಡ ಮಾತನಾಡುತ್ತಾರೆ. ಇಲ್ಲಿ ರೋಟರಿ ಸ್ಕೂಲ್ ಪಕ್ಕದಲ್ಲಿ ಓಣಿಯಿದೆ. ಒಟ್ಟು ೬೦೦ ಮನೆಗಳನ್ನು ಹೊಂದಿದೆ. ನಗರದ ಒಟ್ಟು ೨೨೩೬೦ ರಲ್ಲಿ ಈ ಬಡಾವಣೆಯ ಜನಸಂಖ್ಯೆಯೂ ಸೇರಿದೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೫೦೦ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಸರ್ಕಾರದ ಯೋಜನೆಗಳಾದ ಜನತಾ, ಆಶ್ರಯ ಹಾಗೂ ಇಂದಿರಾ ಆವಾಸ್ ಯೋಜನೆಯ ೧೪೬ ಫಲಾನುಭವಿಗಳ ಮನೆಗಳನ್ನು ಕಾಣಬಹುದು. ೬೦೦ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು, ಎಳ್ಳು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ

ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಉಪಕಸುಬಾಗಿ ಕುರಿಗಾರಿಕೆಯನ್ನು ಮಾಡುತ್ತಿದ್ದಾರೆ. ಗೂಡೆ ವ್ಯಾಪಾರ, ತಳ್ಳುವ ಗಾಡಿಗಳ ವ್ಯಾಪಾರಸ್ಥರು ಇದ್ದಾರೆ. ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಲೋಕೋಪಯೋಗಿ ಹಾಗೂ ಇಂಧನ ಇಲಾಖೆಯಲ್ಲಿ ಸರ್ಕಾರಿ ಉದ್ಯೋಗ ಪಡೆದವರಿದ್ದಾರೆ. ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಕೆಲಸಮಾಡುವ ೩೦ ಕ್ಕೂ ಹೆಚ್ಚು ಜನರಿದ್ದಾರೆ. ಒಂದು ಇಟ್ಟಿಗೆ ಫ್ಯಾಕ್ಟರಿ ಇದೆ. ಕುಂಬಾರರು, ಬಡಗಿಗಳು, ಕಮ್ಮಾರರು, ಗುಡಿಕಾರರು ಇದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಪುರಸಭಾ ವ್ಯಾಪ್ತಿಗೆ ಸೇರುತ್ತದೆ. ಈ ಬಜಾವಣೆಯಲ್ಲಿ ರಸ್ತೆ ವ್ಯವಸ್ಥೆ ಇದೆ. ಇ-ಮೇಲ್, ಇಂಟರ್‌ನೆಟ್, ಕೊರಿಯರ್ ವ್ಯವಸ್ಥೆಗಳಿವೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೮ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ, ಆಂಗ್ಲ ಮಾಧ್ಯಮದ ನವೋದಯ ಕಿರಿಯ ಪ್ರಾಥಮಿಕ ಶಾಲೆ, ರೋಟರಿ ಸ್ಕೂಲ್, ದೇಶೀಯ ವಿದ್ಯಾಪೀಠ ಸಂಸ್ಥೆಯ ೨ ಖಾಸಗಿ ಪ್ರೌಢಶಾಲೆಗಳು, ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಹಾಗೂ ನವೋದಯ ಪ್ರಥಮದರ್ಜೆ ಕಾಲೇಜುಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಎಸ್‌ಆರ್‌ಎಸ್ ಐಟಿಐ ಕಾಲೇಜುಗಳಿವೆ. ತಾಲ್ಲೂಕು ಸರ್ಕಾರಿ ಆರೋಗ್ಯ ಕೇಂದ್ರ, ಕೃಷಿ ಇಲಾಖೆ ಕಛೇರಿಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೧೦ ಫಲಾನುಭವಿಗಳಿದ್ದಾರೆ. ೬ ಹೋಟೆಲ್‌ಗಳು, ಸರ್ಕಾರಿ ಬಾಲಕ-ಬಾಲಕಿಯರ ವಸತಿ ನಿಲಯವಿದೆ.

೨ ಗಣಪತಿ ದೇವಾಲಯಗಳು, ಬನಶಂಕರಿ ದೇವಾಲಯ ಇದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕಾಡುಬಸವಯ್ಯ ಲೇಖಕರಾಗಿದ್ದಾರೆ. ಬ್ಯಾಲದಕೆರೆ ಲಿಂಗದೇವರು, ಅಂತರರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಚಲನಚಿತ್ರ ನಿರ್ದೇಶಕ ಕಲಾವಿದರು.

## ಕೇದಿಗೆಹಳ್ಳಿ, ವಾರ್ಡ್ ನಂ.೬

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಟೌನಿನ ಹೊರವಲಯದಲ್ಲಿರುವ ಪುರಸಭೆಯ ಅಧೀನಕ್ಕೆ ಒಳಪಟ್ಟ ಗ್ರಾಮ. ೬ನೇ ವಾರ್ಡ್ ಎಂದು ಪರಿಗಣಿಸಲಾಗಿದೆ. ೬ನೇ ವಾರ್ಡಿನ ವಿಸ್ತಾರ ರೋಟರಿ ಸ್ಕೂಲ್ ಹಿಂಭಾಗ, ಕೇದಿಗೆಹಳ್ಳಿ ಗ್ರಾಮದ ರಸ್ತೆಯ ಎರಡೂ ಬದಿ, ಕೇದಿಗೆಹಳ್ಳಿಪಾಳ್ಯ, ಕಲ್ಲೇನಹಳ್ಳಿ, ನಿಂಗಯ್ಯನಪಾಳ್ಯ ಸೇರಿವೆ. ಹೇರಳವಾಗಿ ಕೇದಿಗೆ ಮರಗಳು (ತಾಳೆ ಹೂವಿನ ಮರ) ಇದ್ದವಾದ್ದರಿಂದ ಈ ಜನವಸತಿಗೆ ಕೇದಿಗೆಹಳ್ಳಿ ಎಂಬ ಹೆಸರು ಬಂದಿದೆ. ತಾಲ್ಲೂಕು ಕೇಂದ್ರದಿಂದ ನೈಋತ್ಯ ದಿಕ್ಕಿಗೆ ೨ ಕಿಮೀ ಅಂತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ನಗರದ ಒಟ್ಟು ೫.೩೦ ಎಕರೆ ವಿಸ್ತೀರ್ಣದಲ್ಲಿ ಸೇರಿದೆ. ಬಯಲುನಾಡಿಗೆ ಸೇರಿದ ಈ ಪ್ರದೇಶದಲ್ಲಿ ಬಿಳಿ ಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಹಿಪ್ಪೆತೋಪು, ಗುಂಡುತೋಪು ಎಂಬ ೨ ತೋಪುಗಳಿವೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಒಂದು ಸೇದುವಬಾವಿಯಿದ್ದು ನೀರು ಇರುವುದಿಲ್ಲ. ೨ ಕೈಪಂಪುಗಳಿವೆ. ೨೦ ಕೊಳವೆ ಬಾವಿಗಳಿವೆ. ಕುಡಿಯುವ ನೀರಿಗಾಗಿ ೨ ಸಿಸ್ಟನ್‌ಗಳು, ೮ ನಲ್ಲಿಗಳಿವೆ.

ಕುರುಬರು ದೊಡ್ಡ ಸಮುದಾಯವಾಗಿದ್ದು ನಾಯಕರು, ಮುಸ್ಲಿಮರು, ಗಾಣಿಗರು, ಶೆಟ್ರು, ಆದಿಕರ್ನಾಟಕ ಸಣ್ಣ ಸಮುದಾಯದವರಾಗಿದ್ದಾರೆ. ಒಟ್ಟು ೧೮೪ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೭೫೭ ಜನಸಂಖ್ಯೆ ಹೊಂದಿದೆ. ಎಲ್ಲರೂ ಕನ್ನಡ ಭಾಷೆ ಮಾತನಾಡುತ್ತಾರೆ. ಮುಸ್ಲಿಮರು ತಮ್ಮ ಕೌಟುಂಬಿಕ ಭಾಷೆಯಾಗಿ ಉರ್ದು ಬಳಸುತ್ತಾರೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೨ ಕಾಂಕ್ರೀಟ್, ಕಲ್ಲಿನ, ಹೆಂಚಿನ, ೨ ಗುಡಿಸಲು ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಹೆಂಚು ಹಾಗೂ ಕೆಂಪುಹೆಂಚನ್ನು ಬಳಸುತ್ತಾರೆ. ೫೮೪ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ

ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಸಿಕಲ್, ಬೈಕುಗಳು, ಲಗೇಜ್ ಆಟೋಗಳು ಇವೆ. ತೆಂಗಿನಕಾಯಿ, ಕೊಬ್ಬರಿ ಮುಖ್ಯ ವ್ಯಾಪಾರಿ ಸರಕು. ೩ ಇಟ್ಟಿಗೆ ಕಾರ್ಖಾನೆಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಪುರಸಭಾ ವ್ಯಾಪ್ತಿಗೆ ಸೇರುತ್ತದೆ. ಸಂಚಾರಕ್ಕೆ ರಸ್ತೆ ಮಾರ್ಗವಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಅನ್ನಪೂರ್ಣೇಶ್ವರಿ, ಲಕ್ಷ್ಮಿ, ಶಾರದಾ, ಸರಸ್ವತಿ, ಭೂಮಿಕ, ಗೌರಿ ಎಂಬ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೭೫ ರಷ್ಟು ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ಫಲಾನುಭವಿಗಳಿದ್ದಾರೆ. ೨ ಚಿಕ್ಕ ಪೆಟ್ಟಿಗೆ ಅಂಗಡಿಗಳಿವೆ.

ಆಂಜನೇಯ ದೇವಾಲಯ ಹಾಗೂ ಕೆರೆಸಂತೆಮ್ಮ ದೇವಾಲಯಗಳಿವೆ. ಶಿವರಾತ್ರಿ ನಂತರ ಜಾತ್ರೆ ಮಾಡುತ್ತಾರೆ. ಜಾತ್ರೆಯಲ್ಲಿ ಪರೇವು, ಆರತಿ, ಬಾನ ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಕುರುಬರಹಳ್ಳಿ, ವಾರ್ಡ್ ನಂ.೭

ಕುರುಬರಹಳ್ಳಿ ಗ್ರಾಮವು ಚಿಕ್ಕನಾಯಕನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿರುವ ಗ್ರಾಮವಾಗಿದೆ. ಇದನ್ನು ೭ನೇ ವಾರ್ಡ್ ಎಂದು ಪರಿಗಣಿಸಲಾಗಿದೆ. ಕುರುಬ ಸಮುದಾಯದವರು ಕುರುಬರಹಳ್ಳಿ ಎಂಬ ಹೆಸರು ಬಂದಿದೆ. ತಾಲ್ಲೂಕು ಸ್ಥಳದಿಂದ ಪಶ್ಚಿಮಕ್ಕೆ ೧ ಕಿಮೀ ದೂರದಲ್ಲಿದೆ. ನಗರದ ಒಟ್ಟು ೮.೭೨ ಚಕಿಮೀ ವಿಸ್ತೀರ್ಣದಲ್ಲಿ ಇದರ ವಿಸ್ತೀರ್ಣವೂ ಸೇರಿದೆ. ಬಯಲುನಾಡಿಗೆ ಸೇರಿರುವ ಇಲ್ಲಿ ಬಿಳಿಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಸಮೀಪದಲ್ಲಿ ಬಳ್ಳಾರಿ ಬಂಡೆ (ಬಾಳಾರೆ ಬಂಡೆ) ಬಂಡೆ ಮಲ್ಪಿಯೂ ಇದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಗ್ರಾಮದಸಮೀಪ ದೊಡ್ಡಹಳ್ಳ ಹಾಗೂ ಚಿಕ್ಕಹಳ್ಳಗಳು ಹರಿಯುತ್ತವೆ. ದೊಡ್ಡಹಳ್ಳ ದಬ್ಬೇಘಟ್ಟದ ಕೆರೆಯಿಂದ ಮೇಲನಹಳ್ಳಿ ಕೆರೆಗೆ ಹೋಗುತ್ತದೆ. ಚಿಕ್ಕಹಳ್ಳವು ಮಲ್ಪಿಯಿಂದ ಮೇಲನಹಳ್ಳಿ ಕೆರೆಗೆ ಹೋಗುತ್ತದೆ. ಮೂರು ಸೇದೇ ಬಾವಿಗಳಿದ್ದು ನೀರು ಬತ್ತಿಹೋಗಿದೆ. ಗ್ರಾಮದ ಸುತ್ತಮುತ್ತಲ ಜಮೀನಿನಲ್ಲಿ ೩೦ ಕ್ಕೂ ಹೆಚ್ಚು ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ತಿಮ್ಮನಾಯನಕಟ್ಟೆ, ಅಗಸರಕಟ್ಟೆ, ಉಣ್ಣೆಕಟ್ಟೆ ಎಂಬ ೩ ಕಟ್ಟೆಗಳಿವೆ. ೩ ಸಿಸ್ಟನ್‌ಗಳು, ೩೨ ನಲ್ಲಿಗಳಿವೆ.

ಕುರುಬರು ಪ್ರಧಾನ ಸಮುದಾಯ. ನಾಯಕರು, ಮಡಿವಾಳಲು, ಆಚಾರ್ರು, ದೇವಾಂಗ ಶೆಟ್ಟರು, ಭಜಂತ್ರಿಗಳು ಸಣ್ಣ ಸಮುದಾಯದವರಾಗಿದ್ದಾರೆ. ಒಟ್ಟು ೨೦೫ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೮೬೪ ಜನಸಂಖ್ಯೆ ಹೊಂದಿದೆ. ಎಲ್ಲ ಜನರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ದೊಡ್ಡೋಣಿ, ಚಿಕ್ಕೋಣಿ ಎಂಬ ೨ ಓಣಿಗಳಿವೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೮ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪುಹೆಂಚು, ಮಂಗಳೂರಿನ ಕೆಂಪು ಹೆಂಚು, ಸಿಮೆಂಟ್ ಇಲ್ಲವೇ ತಗಡಿನ ಶೀಟುಗಳನ್ನು ಹೊದಿಸಿದ್ದಾರೆ. ೯೩೦ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಸಿಕಲ್, ಬೈಕುಗಳು, ಕಾರು, ಲಾರಿ, ಲಗೇಜ್ ಆಟೋಗಳಿವೆ. ತೆಂಗು ಹಾಗೂ ಅಡಿಕೆ ವಾಣಿಜ್ಯ ಬೆಳೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ನಂದಿನಿ ಡೈರಿಯಿದೆ. ೨೦ ಕ್ಕೂ ಹೆಚ್ಚು ಶಿಕ್ಷಕರು, ಇಬ್ಬರು

ಅಭಿಯಂತರರು, ಒಬ್ಬರು ವೈದ್ಯರು, ಇಬ್ಬರು ನರ್ಸ್, ಕ.ರಾ.ರ.ಸಾ.ಸಂಸ್ಥೆಯಲ್ಲಿ ೩ ಜನ ಹಾಗೂ ಬೆಂಗಳೂರಿನ ವಿವಿಧ ಖಾಸಗಿ ಕಂಪನಿಗಳಲ್ಲಿ ೧೫ ಕ್ಕೂ ಹೆಚ್ಚು ಜನ ಕೆಲಸ ಮಾಡುವವರಿದ್ದಾರೆ. ೨ ಇಟ್ಟಿಗೆ ಫ್ಯಾಕ್ಟರಿಗಳು, ಒಂದು ಹಿಟ್ಟಿನ ಗಿರಣಿಗಳಿವೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಬಡಗಿಗಳಿದ್ದಾರೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಪುರಸಭಾ ವ್ಯಾಪ್ತಿಗೆ ಸೇರುತ್ತದೆ. ಚಿಕ್ಕನಾಯಕನಹಳ್ಳಿ ಟೌನ್‌ನಿಂದ ರಸ್ತೆ ಮಾರ್ಗವಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ನೀಲಮ್ಮದೇವಿ, ಲಕ್ಷ್ಮೀದೇವಮ್ಮ, ಕೆಂಪಮ್ಮದೇವಿ ಸ್ತ್ರೀಶಕ್ತಿ ಸಂಘಗಳು, ೧೦ಕ್ಕೂ ಹೆಚ್ಚು ಸ್ವಸಹಾಯ ಸಂಘಗಲಿವೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಹಾಗೂ ಕಿರಿಯ ಪ್ರಾಥಮಿಕ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೮೦ ರಷ್ಟು ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೩೨ ಕ್ಕೂ ಹೆಚ್ಚು ಫಲಾನುಭವಿಗಳಿದ್ದಾರೆ. ಚಿಕ್ಕ ಪೆಟ್ಟಿಗೆ ಅಂಗಡಿಗಳಿವೆ.

ದಳವಾಯಿ ಬಸವೇಶ್ವರಸ್ವಾಮಿ ದೇವಾಲಯ, ಮೈಲಾರಲಿಂಗೇಶ್ವರ, ಅರಿವೆ ಲಕ್ಕಮ್ಮ, ಲಕ್ಷ್ಮೀ, ವಿಜಯನಗರದಮ್ಮ ದೇವಾಲಯಗಳಿವೆ. ಪ್ರತಿ ಮೇ ತಿಂಗಳಿನಲ್ಲಿ ಬಸವೇಶ್ವರ ಸ್ವಾಮಿಯ ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ಕೆಂಡ, ತೇರು, ಪರೇವು ಕಾರ್ಯಕ್ರಮಗಳಿರುತ್ತವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ನಾಗರಾಜು, ಬಸವರಾಜು, ಕಲ್ಲೇಶ, ಶಿವಮ್ಮ, ಸಿದ್ದಮ್ಮ ಎಂಬುವವರು ಭಜನೆ ಮಾಡುತ್ತಾರೆ.

## ಮಹಾಲಕ್ಷ್ಮಿ ಬಡಾವಣೆ, ವಾರ್ಡ್ ನಂ.೮

ಚಿಕ್ಕನಾಯಕನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿರುವ ಬಡಾವಣೆಯಾಗಿದೆ. ಇದನ್ನು ೮ನೇ ವಾರ್ಡ್ ಎಂದು ಪರಿಗಣಿಸಲಾಗಿದೆ. ಉತ್ತರಕ್ಕೆ ಖಾಸಗಿ ಬಸ್ ನಿಲ್ದಾಣದ ಬಲಭಾಗ, ಬಿ.ಹೆಚ್. ರಸ್ತೆಯ ಬಲಭಾಗ, ದಕ್ಷಿಣಕ್ಕೆ ಹಳೆ ದೂರವಾಣಿ ವಿನಿಮಯ ಕೇಂದ್ರದವರೆಗೆ, ಪೂರ್ವಕ್ಕೆ ಮಹಾಲಕ್ಷ್ಮಿ ಬಡಾವಣೆಯ ರಸ್ತೆ, ಪಶ್ಚಿಮಕ್ಕೆ ಕುರುಬರಹಳ್ಳಿಯ ಹೊಸ ಲೇಔಟ್‌ವರೆಗೆ ಇದೆ. ಇದು ಟೌನಿನ ದಕ್ಷಿಣ ಭಾಗದಲ್ಲಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ ನಗರದ ಒಟ್ಟು ೮.೭೨ ಚಕಿಮೀ ವಿಸ್ತೀರ್ಣದಲ್ಲಿ ಇದರ ವಿಸ್ತೀರ್ಣವೂ ಸೇರಿದೆ. ೯೦ ರ ದಶಕದಲ್ಲಿಮಾಜಿ ಸಚಿವರಾದ ಎನ್.ಬಸವಯ್ಯನವರ ಮಾಲೀಕತ್ವದ ಮಹಾಲಕ್ಷ್ಮಿ ಎಂಬ ಸಿನಿಮಾ ಟೆಂಟ್ ಇತ್ತು. ಆ ಕಾರಣದಿಂದ ಈ ಬಡಾವಣೆಗೆ ಮಹಾಲಕ್ಷ್ಮಿ ಬಡಾವಣೆ ಎಂಬ ಹೆಸರು ಬಂದಿದೆ.

ಬಯಲುನಾಡಿಗೆ ಸೇರಿರುವ ಇಲ್ಲಿ ಬಿಳಿಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಹೊಸಬಾವಿ ಎಂದು ಕರೆಯುವ ತೆರೆದ ಬಾವಿಯಿದೆ. ನೀರು ಬತ್ತಿಹೋಗಿದೆ. ಗ್ರಾಮದ ಸುತ್ತಮುತ್ತಲ ಜಮೀನಿನಲ್ಲಿ ೪ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ೪೨೦ ನಲ್ಲಿಗಳಿವೆ.

ಮುಸಲ್ಮಾನರು, ಕುರುಬರು, ನಾಯಕರು, ಆದಿಕರ್ನಾಟಕರು, ಮಡಿವಾಳರು, ವೈಶ್ಯರು, ಉಪ್ಪಾರರು, ಬೆಸ್ತರು, ದೇವಾಂಗದವರು, ಭಜಂತ್ರಿಗಳು, ಅರಸು ಮಕ್ಕಳು, ಶೆಟ್ಟಿ ಬಣಜಿಗರು, ಗಂಗಟಿಗಾರ ಒಕ್ಕಲಿಗರು ಸಮುದಾಯದವರಿದ್ದಾರೆ. ಒಟ್ಟು ೪೫೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೯೪೮ ಜನಸಂಖ್ಯೆ ಹೊಂದಿದೆ. ಎಲ್ಲ ಜನರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೧೫೦ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪುಹೆಂಚು, ಮಂಗಳೂರಿನ ಕೆಂಪು ಹೆಂಚು, ಸಿಮೆಂಟ್ ಇಲ್ಲವೇ ತಗಡಿನ ಶೀಟುಗಳನ್ನು ಹೊದಿಸಿದ್ದಾರೆ. ೪೦೦ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಸಿಕಲ್, ಬೈಕುಗಳು, ಕಾರು, ಲಾರಿ, ಲಗೇಜ್ ಆಟೋಗಳಿವೆ. ತೆಂಗು ಹಾಗೂ ಅಡಿಕೆ ವಾಣಿಜ್ಯ ಬೆಳೆ. ರಾಗಿಮುದ್ದೆ,

ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ರಸ್ತೆ ಹಾಗೂ ಚರಂಡಿ ವ್ಯವಸ್ಥೆಯಿದೆ.

ಕೃಷಿ ಕೆಲಸವನ್ನು, ವಿವಿಧ ರೀತಿಯ ವ್ಯಾಪಾರವನ್ನು ಮಾಡುವರರು, ಕೈಮಗ್ಗದವರು ರೇಷ್ಮೆ ಸೀರೆಗಳನ್ನು ನೇಯುತ್ತಾರೆ. ೧೫ ಜನ ಶಿಕ್ಷಕರು, ೧೦ ಜನ ಲಾರಿ-ಬಸ್ ಚಾಲಕರು, ೫ ಜನ ನರ್ಸ್, ಪುರಸಭೆಯಲ್ಲಿ ೫ ಜನ ಹಾಗೂ ಬೆಂಗಳೂರಿನ ವಿವಿಧ ಖಾಸಗಿ ಕಂಪನಿಗಳಲ್ಲಿ ೧೫ ಕ್ಕೂ ಹೆಚ್ಚು ಜನ ಕೆಲಸ ಮಾಡುವವರಿದ್ದಾರೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಕಮ್ಮಾರರು ಹಾಗೂ ಬಡಗಿಗಳಿದ್ದಾರೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಪುರಸಭಾ ವ್ಯಾಪ್ತಿಗೆ ಸೇರುತ್ತದೆ. ಚಿಕ್ಕನಾಯಕನಹಳ್ಳಿ ಟೌನ್‌ನಿಂದ ರಸ್ತೆ ಮಾರ್ಗವಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಇ-ಮೇಲ್, ಇಂಟರ್‌ನೆಟ್ ಬಳಕೆಯಿದೆ. ಸುಮುಖಿ, ಶಾರದಾ, ನಿಮಿಷಾಂಬ, ಅನ್ನಪೂರ್ಣೇಶ್ವರಿ, ಎಲ್ಲಮ್ಮ ಸ್ತ್ರೀಶಕ್ತಿ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರವಿದೆ. ಶೇ.೮೦ ರಷ್ಟು ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೩೨ ಕ್ಕೂ ಹೆಚ್ಚು ಫಲಾನುಭವಿಗಳಿದ್ದಾರೆ. ಚಿಕ್ಕ ದಿನಸಿ ಅಂಗಡಿಗಳಿವೆ.

ಬಸವೇಶ್ವರ, ಆಂಜನೇಯಸ್ವಾಮಿ, ಅಯ್ಯಪ್ಪಸ್ವಾಮಿ ದೇವಾಲಯಗಳಿವೆ. ಪ್ರತಿ ಮೇ ತಿಂಗಳಿನಲ್ಲಿ ಆಂಜನೇಯ ಸ್ವಾಮಿಯ ಉತ್ಸವ ನಡೆಯುತ್ತದೆ. ಹಳೆಯೂರು ಆಂಜನೇಯನ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಅನ್ನ ದಾಸೋಹ ಕಾರ್ಯಕ್ರಮವಿರುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ತಾತಯ್ಯನ ಸಂಘ, ಎಲ್ಲಮ್ಮದೇವಿ ಸಂಘ, ಶಿವಶಕ್ತಿ ಸಂಘ, ಮಾಮರದಮ್ಮನ ಸಂಘ, ರಾಂಪುರದಮ್ಮನ ಸಂಘ ಇತ್ಯಾದಿ ಸಂಘಗಳನ್ನು ಮಾಡಿಕೊಂಡಿದ್ದಾರೆ. ಧರ್ಮಸ್ಥಳ ಸ್ವಸಹಾಯ ಸಂಘಗಳು ಅಸ್ತಿತ್ವದಲ್ಲಿವೆ.

## ಬೋವಿ ಕಾಲೋನಿ, ವಾರ್ಡ್ ನಂ.೯

ಬೋವಿ ಕಾಲೋನಿಯು ಚಿಕ್ಕನಾಯಕನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿರುವ ವಾರ್ಡ್ ಎಂದು ಪರಿಗಣಿಸಲಾಗಿದೆ. ಬೋವಿ ಸಮುದಾಯದವರು ಹೆಚ್ಚಿರುವುದರಿಂದ ಬೋವಿ ಕಾಲೋನಿ ಎಂಬ ಹೆಸರು ಬಂದಿದೆ. ಪಟ್ಟಣದ ನೈಋತ್ಯ ದಿಕ್ಕಿನಲ್ಲಿದೆ. ಈ ಬಡಾವಣೆಯು ಶೆಟ್ಟಿಕೆರೆ ರಸ್ತೆಯಲ್ಲಿ ಪಕ್ಕ ಇರುವ ಎನ್. ಬಸವಯ್ಯನವರ ಸಮಾಧಿಯ ಎದುರು ಶೆಟ್ಟಿಕೆರೆ ಗೇಟ್‌ನಿಂದ ನೆಹರು ಸರ್ಕಲ್‌ವರೆವಿಗಿನ ಪಶ್ಚಿಮ ಭಾಗ. ಕಾಸ್ಮೋ ಕ್ಲಬ್ ಹಾಗೂ ಮಹಾಲಕ್ಷ್ಮಿ ಟಾಕೀಸ್‌ವರೆಗೂ ಹರಡಿದೆ. ನಗರದ ಒಟ್ಟು ೫.೩೦ ಚಕಿಮೀ ವಿಸ್ತೀರ್ಣದಲ್ಲಿ ಇದರ ವಿಸ್ತೀರ್ಣವೂ ಸೇರಿದೆ. ಬಯಲುನಾಡಿಗೆ ಸೇರಿರುವ ಇಲ್ಲಿ ಬಿಳಿಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಸಮೀಪದಲ್ಲಿ ಬಳ್ಳಾರಿ ಬಂಡೆ (ಬಾಳಾರೆ ಬಂಡೆ) ಬಂಡೆ ಮಲ್ಪಿಯೂ ಇದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕುಡಿಯುವ ನೀರಿಗಾಗಿ ನಲ್ಲಿಗಳಿವೆ.

ಬೋವಿಗಳು, ಆದಿಕರ್ನಾಟಕ ಸಮುದಾಯ ಪ್ರಧಾನವಾಗಿದ್ದು ಮುಸ್ಲಿಮರು, ದೇವಾಂಗದವರು, ಅಕ್ಕಸಾಲಿಗರು, ಲಿಂಗಾಯಿತರು, ಸೇಟುಗಳು, ಕುರುಬರು, ಶೆಟ್ರು, ಗೊಲ್ಲರು ಸಣ್ಣ ಸಮುದಾಯದವರಾಗಿದ್ದಾರೆ. ಒಟ್ಟು ೩೫೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೨೨೩೬೦ ನಗರದ ಒಟ್ಟು ಜನಸಂಖ್ಯೆಯಲ್ಲಿ ಈ ಬಡಾವಣೆಯೂ ಸೇರಿದೆ. ಎಲ್ಲ ಜನರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ಕೆಲವರು ಮಾತ್ರ ರಾಜಾಸ್ಥಾನಿ, ತೆಲುಗು ಭಾಷೆ ಮಾತನಾಡುತ್ತಾರೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೧೫೦ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪುಹೆಂಚು, ಮಂಗಳೂರಿನ ಕೆಂಪು ಹೆಂಚು, ಸಿಮೆಂಟ್ ಇಲ್ಲವೇ ತಗಡಿನ ಶೀಟುಗಳನ್ನು ಹೊದಿಸಿದ್ದಾರೆ. ೨೯೪ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಸಿಕಲ್, ಬೈಕುಗಳು, ಕಾರು, ಲಾರಿ, ಲಗೇಜ್ ಆಟೋಗಳಿವೆ. ರಸ್ತೆ

ಹಾಗೂ ಚರಂಡಿ ವ್ಯವಸ್ಥೆಯಿದೆ. ತೆಂಗು ಹಾಗೂ ಅಡಿಕೆ ವಾಣಿಜ್ಯ ಬೆಳೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಇಲ್ಲಿ ಬಟ್ಟೆ, ಕಿರಾಣಿ ವಸ್ತು, ಧಾನ್ಯ, ಸ್ಟೇಷನರಿ, ಚಪ್ಪಲಿ, ಆಭರಣ ಇತ್ಯಾದಿ ವ್ಯಾಪಾರ ಮಾಡುವವರಿದ್ದಾರೆ. ಬೀದಿಬದಿ ವ್ಯಾಪಾರಿಗಳು, ತಳ್ಳುವ ಗಾಡಿ ವ್ಯಾಪಾರಿಗಳಿದ್ದಾರೆ. ೨೨ ಕ್ಕೂ ಹೆಚ್ಚು ಶಿಕ್ಷಕರು, ೮ ಜನ ಅಭಿಯಂತರರು, ಆರು ಜನ ವೈದ್ಯರು ಹಾಗೂ ಬೆಂಗಳೂರಿನ ವಿವಿಧ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವವರಿದ್ದಾರೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಕಮ್ಮಾರರು, ಬಡಗಿಗಳಿದ್ದಾರೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಪುರಸಭಾ ವ್ಯಾಪ್ತಿಗೆ ಸೇರುತ್ತದೆ. ಚಿಕ್ಕನಾಯಕನಹಳ್ಳಿ ಟೌನ್‌ನಿಂದ ರಸ್ತೆ ಮಾರ್ಗವಿದೆ. ತಾಲ್ಲೂಕು ಕೇಂದ್ರ ಪೊಲೀಸ್ ಠಾಣೆಯಿದೆ. ಟಾರ್ ರಸ್ತೆಗಳಿವೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಇಂಟರ್‌ನೆಟ್, ಕೊರಿಯರ್ ಬಳಕೆದಾರರಿದ್ದಾರೆ. ಸಿನಿಮಾ ಮಂದಿರವಿದೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್, ಡಿಸಿಸಿ ಬ್ಯಾಂಕ್, ವ್ಯವಸಾಯೋತ್ಪನ್ನ ಸಹಕಾರ ಸಂಘಗಳಿವೆ. ಸ್ತ್ರೀಶಕ್ತಿ ಸಂಘಗಳು, ಸ್ವಸಹಾಯ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರವಿದೆ. ಶೇ.೭೦ ರಷ್ಟು ಸಾಕ್ಷರತೆಯಿದೆ. ಸರ್ಕಾರಿ ಆಯುರ್ವೇದ ಆಸ್ಪತ್ರೆ, ಪಶುವೈದ್ಯ ಆಸ್ಪತ್ರೆ ಹಾಗೂ ಕಛೇರಿಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೨೩ ಕ್ಕೂ ಹೆಚ್ಚು ಫಲಾನುಭವಿಗಳಿದ್ದಾರೆ. ಚಿಕ್ಕ ಪೆಟ್ಟಿಗೆ ಅಂಗಡಿಗಳಿವೆ. ಸ್ವಾತಂತ್ರ್ಯ ಹೋರಾಟಗಾರ ದಿ॥ ಸಿ.ಎನ್. ನಾರಾಯಣರಾವ್‌ರವರು ಈ ಬಡಾವಣೆಯವರು.

ಮೈಲಾರಲಿಂಗೇಶ್ವರ, ಪಂಚಮುಖಿ, ಗಣಪತಿ, ಆಂಜನೇಯಸ್ವಾಮಿ ದೇವಾಲಯಗಳಿವೆ. ಪ್ರತಿ ಏಕಾದಶಿಯಲ್ಲಿ ನಡೆಯುವ ಹಳೆಯೂರು ಆಂಜನೇಯಸ್ವಾಮಿ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಧರ್ಮಸ್ಥಳ ಕ್ಷೇಮಾಭಿವೃದ್ಧಿ ಸಂಘದ ತಾಲ್ಲೂಕು ಕಛೇರಿ ಈ ಬಡಾವಣೆಯಲ್ಲಿದೆ.

## ಬ್ರಾಹ್ಮಣರ ಬೀದಿ, ವಾರ್ಡ್ ನಂ.೧೦

ಬ್ರಾಹ್ಮಣರ ಬೀದಿ ಚಿಕ್ಕನಾಯಕನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿರುವ ಪುರಸಭೆಗೆ ಸೇರಿದ ೧೦ನೇ ವಾರ್ಡ್ ಎಂದು ಪರಿಗಣಿಸಲಾಗಿದೆ. ದೇವಾಂಗ ಬೀದಿ, ಕುಂಬಾರರ ಬೀದಿ, ಬ್ರಾಹ್ಮಣರ ಕೇರಿ, ಕಣ್ಣಪ್ಪ ದೇವಾಲಯ ಹೀಗೆ ಎಡಭಾಗದ ಉತ್ತರಕ್ಕೆ ಬಿ.ಹೆಚ್. ರಸ್ತೆ, ನೆಹರು ಸರ್ಕಲ್, ಪಶ್ಚಿಮಕ್ಕೆ ಹೊಸ ಬಸ್ ನಿಲ್ದಾಣದವರೆಗೂ ಇದರ ವ್ಯಾಪ್ತಿ ಹಬ್ಬಿದೆ. ಕಪ್ಪು ಮಿಶ್ರಿತ ಮರಳು ಮಣ್ಣಿನ ಭೂಪ್ರದೇಶ. ಪಶ್ಚಿಮಕ್ಕೆ ಹಾಗಲವಾಡಿ, ದೊಡ್ಡ ಕೆರೆಯಿದೆ. ಈ ಪರಿಸರದಲ್ಲಿ ಬಡಾವಣೆಯ ಹೊರಗೆ ತೋಟಗಾರಿಕೆ ಇದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಮುಂಗುಸಿ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕುಡಿಯಲು ಚಿಕ್ಕನಾಯಕನಹಳ್ಳಿ ಪುರಸಭೆಯಿಂದ ನೀರು ಪೂರೈಸಲಾಗುತ್ತದೆ. ೩೦೦ ನಲ್ಲಿಗಳಿವೆ.

ಬ್ರಾಹ್ಮಣರು ಪ್ರಧಾನ ಸಮುದಾಯ. ಕುಂಬಾರ, ದೇವಾಂಗ, ವೈಶ್ಯರು, ವಿಶ್ವಕರ್ಮ, ಶ್ರೀವೈಷ್ಣವ, ಕುರುಬರು, ಮುಸ್ಲಿಂ ಸಮುದಾಯಗಳು ಸಣ್ಣ ಸಮುದಾಯದವರಾಗಿದ್ದಾರೆ. ಒಟ್ಟು ೩೪೨ ಮನೆಗಳನ್ನು ಹೊಂದಿದೆ. ಎಲ್ಲ ಜನರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ತೆಲುಗು, ಉರ್ದು ಮಾತನಾಡುವವರಿದ್ದಾರೆ. ಆಶ್ರಯ, ಇಂದಿರಾ ಆವಾಸ್ ವಸತಿ ಯೋಜನೆಯ ೧೨೪ ಫಲಾನುಭವಿಗಳಿದ್ದಾರೆ. ೩೧೨ ಮನೆಗಳಲ್ಲಿ ಶೌಚಾಲಯ ಬಳಸುತ್ತಿದ್ದಾರೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೮ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪುಹೆಂಚು, ಮಂಗಳೂರಿನ ಕೆಂಪು ಹೆಂಚು, ಸಿಮೆಂಟ್ ಇಲ್ಲವೇ ತಗಡಿನ ಶೀಟುಗಳನ್ನು ಹೊದಿಸಿದ್ದಾರೆ. ಜನಾಂಗಿಕ ಹಿನ್ನೆಲೆಯಲ್ಲಿ ಹಳೆಯ ಓಣಿಗಳಿವೆ. ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಸಿಕಲ್, ಬೈಕುಗಳು, ಕಾರು, ಲಾರಿ, ಲಗೇಜ್ ಆಟೋಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ವ್ಯಾಪಾರಿಗಳು ಅಧಿಕವಾಗಿದ್ದು ಸೀರೆ, ಕಂಬಳಿ ನೇಯ್ಗೆಯವರು ಕಂಡು ಬರುತ್ತಾರೆ. ನಂದಿನಿ ಹಾಲಿನ ಡೈರಿಯಿದೆ. ಶಿಕ್ಷಕರು, ಅಭಿಯಂತರರು, ವೈದ್ಯರು, ಸಾರಿಗೆ ನೌಕರರು ಸೇರಿದಂತೆ ೬೮ ಜನರಿದ್ದಾರೆ. ಖಾಸಗಿ ವೈದ್ಯರಿದ್ದಾರೆ. ಬಟ್ಟೆ, ಚಪ್ಪಲಿ, ಪಡಿತರ, ೪ ಹೋಟೆಲ್, ಕಿರಾಣಿ ಅಂಗಡಿಗಳಿವೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಪುರಸಭಾ ವ್ಯಾಪ್ತಿಗೆ ಸೇರುತ್ತದೆ. ಪ್ರಧಾನ ಅಂಚೆ ಕಛೇರಿ ಇದೆ. ಚಿಕ್ಕನಾಯಕನಹಳ್ಳಿ ಟೌನ್‌ನಿಂದ ರಸ್ತೆ ಮಾರ್ಗವಿದೆ. ಸ್ಥಿರ ಹಾಗೂ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಮರುಳಸಿದ್ದೇಶ್ವರ ಪತ್ತಿನ ಸಹಕಾರಿ ಸಂಘ, ಕೆನರಾ ಬ್ಯಾಂಕ್, ಧರ್ಮಸ್ಥಳ ಸ್ವಸಹಾಯ ಸಂಘಗಳಿವೆ.

ವಾಣಿ ಚಿತ್ರಕಲಾ ಶಾಲೆಯಿದೆ.. ಶೇ.೮೦ ರಷ್ಟು ಸಾಕ್ಷರತೆಯಿದೆ. ಡಾ॥ ಹೆಗಡೆ ಕ್ಲಿನಿಕ್, ರಂಗನಾಥ ಕ್ಲಿನಿಕ್, ಪೈಲ್ಸ್ ಆಸ್ಪತ್ರೆಗಳಿವೆ. ಸಮುದಾಯ ಸೌಲಭ್ಯಗಳಾದ ೧೮ ಜನ ವಿಧವಾ ವೇತನ, ೨೨ ವೃದ್ಧಾಪ್ಯವೇತನ, ೬ ಜನ ವಿಕಲಚೇತನದ ಫಲಾನುಭವಿಗಳಿದ್ದಾರೆ.

ಆಂಜನೇಯ ಸ್ವಾಮಿ ದೇವಾಲಯವಿದ್ದು ಆಷಾಢ ಮಾಸದ ಕೊನೆಯ ಏಕಾದಶಿಯಂದು ಮೂರು ದಿನಗಳ ಬೃಹತ್ ಜಾತ್ರೆ ನಡೆಯುತ್ತದೆ. ರಥೋತ್ಸವ, ಜನಪದ ಕಲಾ ಪ್ರದರ್ಶನ ಇರುತ್ತದೆ. ಕಣ್ಣಪ್ಪ, ಗಣಪತಿ ದೇವಾಲಯಗಳಿವೆ. ಹೊಸದಾಗಿ ವಿವಾಹವಾದ ದಂಪತಿಗಳು ಇಲ್ಲಿನ ತೇರಿಗೆ ದವನ, ಬಾಳೆಹಣ್ಣು ಉಗ್ಗುವುದು ವಾಡಿಕೆ. ವಿವಾಹಿತ ಗಂಡುಗಳಿಗೆ ವಿವಿಧ ಬಗೆಯ ಸ್ಪರ್ಧೆ ಏರ್ಪಡಿಸಿ ವಿಜೇತರಿಗೆ ಬಹುಮಾನ ನೀಡಲಾಗುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಹಿರಿಯ ಸಾಹಿತಿ ಎಂ.ವಿ. ನಾಗರಾಜರಾವ್ ಶೃಂಗಾರ ಪ್ರಕಾಶ ಸ್ಥಾಪಿಸಿ ೨೫೦ ಪುಸ್ತಕ ಪ್ರಕಟಿಸಿದ್ದಾರೆ. ಭಾಸ್ಕರ ಲೇಖಕರಾಗಿದ್ದಾರೆ.

## ಹೊಸಬಾಗಿಲು, ವಾರ್ಡ್ ನಂ.೧೧

ಹೊಸಬಾಗಿಲು ಚಿಕ್ಕನಾಯಕನಹಳ್ಳಿ ಪುರಸಭಾ ವ್ಯಾಪ್ತಿಗೆ ಸೇರಿದ ಬಸ್ ನಿಲ್ದಾಣದ ಸಮೀಪದ ಬಡಾವಣೆ. ಪೂರ್ವಕ್ಕೆ ಕರಿದೇವರ ಮಠ, ಪಶ್ಚಿಮಕ್ಕೆ ಮತಿಘಟ್ಟ ರಸ್ತೆ, ಹುಳಿಯಾರು-ಚಿ.ನಾ. ಹಳ್ಳಿ ರಸ್ತೆ, ದೊಡ್ಡ ಮೋರಿಯವರೆಗೆ ಈ ಬಡಾವಣೆಯ ವ್ಯಾಪ್ತಿ ಹರಡಿಕೊಂಡಿದೆ. ಕಪ್ಪು ಮಿಶ್ರಿತ ಮರಳು ಭೂ ಪ್ರದೇಶ. ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಪಶ್ಚಿಮಕ್ಕೆ ನಾಟಕ ಶಿರೋಮಣಿ ಸಿ.ಬಿ. ಮಲ್ಲಪ್ಪನವರ ಮನೆಯಿದೆ. ಬನಶಂಕರಮ್ಮ, ಕರಿಸಿದ್ದೇಶ್ವರ ಹಾಗೂ ಜೋಗಯ್ಯನ ಮಠವಿದೆ. ದೇವಾಂಗ ದೊಡ್ಡ ಸಮುದಾಯ. ಕುರುಬರು, ಗಾಣಿಗರು, ಮುಸ್ಲಿಂ, ಕಮ್ಮಾರ, ಬಲಜಿಗ, ದರ್ಜಿ, ವೀರಶೈವ, ವೈಶ್ಯ ಕಿರು ಸಮುದಾಯಗಳು. ಎಲ್ಲ ಜನರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ಉರ್ದು, ತೆಲುಗು ಮಾತನಾಡುತ್ತಾರೆ. ವಿವಿಧ ಪ್ರಕಾರದ ೨೦೦ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪುಹೆಂಚು, ಮಂಗಳೂರಿನ ಕೆಂಪು ಹೆಂಚು, ಸಿಮೆಂಟ್ ಇಲ್ಲವೇ ತಗಡಿನ ಶೀಟುಗಳನ್ನು ಹೊದಿಸಿದ್ದಾರೆ. ೮೫೦ ಜನಸಂಖ್ಯೆ ಇದೆ. ೧೫೦ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಸಿಕಲ್, ಬೈಕುಗಳು, ಕಾರು, ಲಾರಿ, ಲಗೇಜ್ ಆಟೋಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಕೃಷಿ ಹಾಗೂ ವ್ಯಾಪಾರ ಇಲ್ಲಿನ ಮುಖ್ಯ ಉದ್ಯೋಗವಾಗಿದೆ. ಕಂಬಳಿ ನೇಯ್ಗೆ, ಬಟ್ಟೆ ನೇಯ್ಗೆ ಕಸುಬುದಾರರಿದ್ದಾರೆ. ಕೈಮಗ್ಗ ಉಪ ಕಾರ್ಖಾನೆಗಳಿವೆ. ರಾಗಿ, ಹೆಸರು, ತೆಂಗು, ಅಡಿಕೆ ಬೆಳೆಯುತ್ತಾರೆ. ತೆಂಗು, ಕೊಬ್ಬರಿ, ಅಡಿಕೆ, ಕಂಬಳಿ, ರೇಷ್ಮೆ ಸೀರೆ ಮುಖ್ಯ ವ್ಯಾಪಾರಿ ಸರಕಾಗಿದೆ. ನಂದಿನಿ ಹಾಲಿನ ಡೈರಿಯಿದೆ. ಶಿಕ್ಷಕರು, ಗ್ರಂಥಾಲಯ ಇಲಾಖೆ, ಕಂದಾಯ, ಆರೋಗ್ಯ ಇಲಾಖೆಗೆ ಸೇರಿದ ೫೬ ಜನ ಸರ್ಕಾರಿ ಉದ್ಯೋಗದಲ್ಲಿದ್ದಾರೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಪುರಸಭಾ ವ್ಯಾಪ್ತಿಗೆ ಸೇರುತ್ತದೆ. ಪುರಸಭೆಯಿಂದ ೨೦೦ ಮನೆಗಳು ನಲ್ಲಿ ಸಂಪರ್ಕ ಪಡೆದಿವೆ. ವ್ಯವಸಾಯೋತ್ಪನ್ನ ಸಹಕಾರ ಸಂಘಗಳಿವೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರಿ ಸಂಘ ಸೇರಿ ೨೩ ಸ್ತ್ರೀಶಕ್ತಿ ಸಂಘಗಳಿವೆ. ಚಿಕ್ಕನಾಯಕನಹಳ್ಳಿ ಟೌನ್‌ನಿಂದ ರಸ್ತೆ ಮಾರ್ಗವಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಶೇ.೮೦ ರಷ್ಟು ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೩೨ ಕ್ಕೂ ಹೆಚ್ಚು ಫಲಾನುಭವಿಗಳಿದ್ದಾರೆ. ಚಿಕ್ಕ ಹೋಟೆಲ್, ಬನಶಂಕರಿ ಸಮುದಾಯ ಭವನ, ಶಾಂತಾನಂದ ವಸತಿ ಗೃಹವಿದೆ.

ಬನಶಂಕರಿ, ಚೌಡೇಶ್ವರಿ, ಬಿದಿರು ಕೊಂತಮ್ಮ, ಹೊಂಬಾಳಮ್ಮ ದೇವಾಲಯಗಳಿವೆ. ಅಜಂತನ ಮಠ, ಕರಿಸಿದ್ದೇಶ್ವರ ಮಠಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ

ಆಚರಿಸುತ್ತಾರೆ. ಗಾಯತ್ರಿ ಯುವಕರ ಸಂಘ, ವಿದ್ಯಾಗಣಪತಿ ಸಂಘ ಹಾಗೂ ಬನಶ್ರೀ ಯುವಕ ಸಂಘಗಳಿವೆ. ಕುಮಾರ್ ಎಂಬ ಯಕ್ಷಗಾನ ಭಾಗವತರಿದ್ದು ಪ್ರತಿವರ್ಷ ಶನಿಮಹಾತ್ಮೆ ಯಕ್ಷಗಾನ ಪ್ರದರ್ಶನ ನಡೆಯುತ್ತದೆ.

## ಎಂ.ಪಿ.ಜಿ.ಎಂ.ಎಸ್. ಶಾಲಾ ಬಡಾವಣೆ, ವಾರ್ಡ್ ನಂ.೧೨

ಇದು ಚಿಕ್ಕನಾಯಕನಹಳ್ಳಿ ಪುರಸಭೆಯ ವಾರ್ಡ್ ನಂ.೧೨ ರ ವ್ಯಾಪ್ತಿಗೆ ಬರುತ್ತದೆ. ಎಂ.ಪಿ.ಜಿ.ಎಸ್. ಪಾಠಶಾಲೆಯಿಂದ ಚಿಕ್ಕ ಆಂಜನೇಯ ಗುಡಿ ಬೀದಿ, ಕರಿದೇವರ ಮಠ, ಕುರುಬರ ಶ್ರೇಣಿ ಶಾಲೆ, ವೆಂಕಟರಮಣಸ್ವಾಮಿ ದೇವರ ದೇವಾಲಯದ ಹಿಂಭಾಗದವರೆಗೆ ಇದರ ವ್ಯಾಪ್ತಿ ಹರಡಿದೆ. ಕಪ್ಪು ಮಿಶ್ರಿತ ಮರಳು ಭೂಪ್ರದೇಶ. ಕೃಷಿ, ವ್ಯಾಪಾರ, ಕಂಬಳಿ ನೇಯ್ಗೆ ಇಲ್ಲಿನ ಕಸುಬಾಗಿದೆ. ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ३೪-३೬ ಡಿಗ್ರಿ ಸರಾಸರಿ ಇದೆ. ೪ ಸೇದೋ ಬಾವಿಗಳಿವೆ. ದೇವಾಂಗ ಇಲ್ಲಿನ ದೊಡ್ಡ ಸಮುದಾಯವಾಗಿದ್ದು ಕುರುಬರು, ನಾಯಕರು, ಹಳ್ಳಿಕಾರರು, ಬ್ರಾಹ್ಮಣರು, ಅಕ್ಕಸಾಲಿಗ, ಮುಸ್ಲಿಂ ಸಣ್ಣ ಸಮುದಾಯವಾಗಿದೆ. ಸಿ.ಬಿ. ಮಲ್ಲಪ್ಪ ಓಣಿ, ದೇವಾಂಗ ಬೀದಿ, ಕುರುಬರ ಬೀದಿ, ಹಳ್ಳಿಕಾರರ ಓಣಿಗಳಿವೆ. ಕನ್ನಡ ಇಲ್ಲಿನ ಮಾತೃಭಾಷೆ. ತೆಲುಗು, ಉರ್ದು ಮಾತನಾಡುತ್ತಾರೆ. ಕಲ್ಲಿನ, ಶೀಟಿನ, ಹೆಂಚಿನ, ಕುಂಬಾರ ಹೆಂಚಿನ, ಕಾಂಕ್ರೀಟ್ ಸ್ವರೂಪದ ಮನೆಗಳಿವೆ. ೩೦೦ ಮನೆಗಳಿದ್ದು ೧೫೦೦ ಜನಸಂಖ್ಯೆ ಹೊಂದಿದೆ. ೧೩೦ ಮನೆಗಳಲ್ಲಿ ಶೌಚಾಲಯಗಳಿವೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರವಾಗಿದ್ದು ಪಾಯಸ, ಹೋಳಿಗೆ, ಮಾಂಸಾಹಾರ ವಿಶೇಷ ಸಾಂದರ್ಭಿಕ ಆಹಾರವಾಗಿದೆ. ಎತ್ತಿನ ಗಾಡಿಗಳಿವೆ. ಸಾಂಪ್ರದಾಯಿಕ ವಾಹನವಾದ ಟೆಂಪೋ, ಆಟೋ, ದ್ವಿಚಕ್ರ ವಾಹನ, ಕಾರುಗಳಿವೆ. ಕೃಷಿ ಹಾಗೂ ಕಂಬಳಿ, ಸೀರೆ ನೇಯ್ಗೆ ಉಪಕಸುಬಾಗಿದೆ. ರೈತರು ರಾಗಿ, ಹೆಸರು, ಹುರುಳಿ, ಅವರೆ, ತೆಂಗು, ಅಡಿಕೆ ಬೆಳೆಯುತ್ತಾರೆ. ಬಟ್ಟೆ ವ್ಯಾಪಾರ, ಕಂಬಳಿ ವ್ಯಾಪಾರಿಗಳಿದ್ದಾರೆ. ೬ ಚಿಲ್ಲರೆ ಅಂಗಡಿಗಳಿವೆ. ಟೀ ಅಂಗಡಿಗಳಿವೆ. ಶಿಕ್ಷಕರು, ಇಂಜಿನಿಯರ್, ಕಂದಾಯ, ಆರೋಗ್ಯ ಇಲಾಖೆಯ ಅಧಿಕಾರಿಗಳಿದ್ದಾರೆ. ಬಡಗಿ, ಸಾಂಪ್ರದಾಯಿಕ ಕಸುಬಿನವರಿದ್ದಾರೆ. ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಪುರಸಭೆ, ತುಮಕೂರು ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಗೆ ಒಳಪಟ್ಟಿದೆ. ಅಂಚೆ ಕಛೇರಿಯಿದೆ. ಸ್ವಸಹಾಯ ಸಂಘ, ಸ್ತ್ರೀಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಸರ್ಕಾರಿ ಮಾದರಿ ಪಾಠಶಾಲೆ, ಎನ್.ಟಿ.ಜಿ.ಎಂ.ಎಸ್. ಸ್ಕೂಲ್, ನಿರ್ವಾಣೇಶ್ವರ ಬಾಲಕಿಯ ಪ್ರೌಢಶಾಲೆಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯಗಳಿವೆ. ಸಾಕ್ಷರತೆ ಶೇ.೮೦ ಇದೆ. ೧೦ ಜನ ವೃದ್ಧಾಪ್ಯವೇತನ, ೬ ಜನ ವಿಕಲಚೇತನ, ೮ ವಿಧವಾ ವೇತನದ ಫಲಾನುಭವಿಗಳಿದ್ದಾರೆ.

ವೆಂಕಟರಮಣಸ್ವಾಮಿ, ಶನಿದೇವರ ದೇವಾಲಯಗಳಿವೆ. ರುನಾನಿ ಮಸೀದಿಯಿದೆ. ವೈಕುಂಠ ಏಕಾದಶಿಯಂದು ವೆಂಕಟರಮಣಸ್ವಾಮಿ ಜಾತ್ರೆ ನಡೆಯುತ್ತದೆ. ರಥೋತ್ಸವ ಜರುಗುತ್ತದೆ. ಯುಗಾದಿ, ದೀಪಾವಳಿ, ದಸರಾ, ಗೌರಿ-ಗಣೇಶ, ಶಿವರಾತ್ರಿ, ರಾಮನವಮಿ ಹಬ್ಬಗಳನ್ನು ಆಚರಿಸುತ್ತಾರೆ. ನಾಟಕ ಶಿರೋಮಣಿ ಸಿ.ಬಿ. ಮಲ್ಲಪ್ಪನವರು ಇದೇ ಬಡಾವಣೆಯ ಮೂಲ ಪುರುಷರಾಗಿದ್ದು ಅವರ ಮಕ್ಕಳು ಇಲ್ಲಿ ನೆಲೆಸಿದ್ದಾರೆ ಶನಿದೇವರ ರಂಗ ಮಂದಿರವಿದೆ. ತಬಲಾ ವಾದಕ ನಾಗಭೂಷಣ, ಭಾಗವತ ನಾರಾಯಣಪ್ಪ, ಪುಟ್ಟನರಸಿಂಹಯ್ಯ ಈ ಬಡಾವಣೆಯ ಕಲಾವಿದರಾಗಿದ್ದಾರೆ.

## ಹಳ್ಳಿಕಾರರ ಬಡಾವಣೆ, ವಾರ್ಡ್ ನಂ.೧೩

ಚಿಕ್ಕನಾಯಕನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿರುವ ಹಳ್ಳಿಕಾರರ ಬಡಾವಣೆಯನ್ನು ೧೩ನೇ ವಾರ್ಡ್ ಎಂದು ಪರಿಗಣಿಸಲಾಗಿದೆ. ಈ ಬಡಾವಣೆಯ ಒಂದು ಭಾಗದಲ್ಲಿ ಹಳ್ಳಿಕಾರ ಸಮುದಾಯದ ಜನರು ವಾಸವಾಗಿರುವುದರಿಂದ ಈ ಹೆಸರು ಬಂದಿದೆ. ಇದು ನಗರದ ನೆಹರೂ ಸರ್ಕಲ್‌ನ ಉತ್ತರ ದಿಕ್ಕಿನಲ್ಲಿದೆ. ನೆಹರೂ ಸರ್ಕಲ್‌ನಲ್ಲಿ ಹಾಯ್ದುಹೋಗುವ ಹಾಗಲವಾಡಿ ರಸ್ತೆಯ ಎಡಭಾಗ ಹಾಗೂ ವೆಂಕಟರಮಣಸ್ವಾಮಿ ದೇವಾಲಯದ ಮುಂಭಾಗದ ಜನವಸತಿಗೆ ಈ ಹೆಸರು ನೀಡಲಾಗಿದೆ. ನಗರ ಒಟ್ಟು ೫.೩೦ ಚಕಿಮೀ ವಿಸ್ತೀರ್ಣದಲ್ಲಿ ಇದರ ವಿಸ್ತೀರ್ಣವೂ ಸೇರಿದೆ. ಬಯಲುನಾಡಿಗೆ ಸೇರಿರುವ ಇಲ್ಲಿ ಬಿಳಿಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಕೆಲವು ಕುಟುಂಬದವರು ಹಸು, ಎಮ್ಮೆ, ಕುರಿ, ಮೇಕೆ, ಕೋಳಿಗಳನ್ನು ಸಾಕಲಾಗಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ३೪-३೬ ಡಿಗ್ರಿ ಸರಾಸರಿ ಇದೆ. ಸಮೀಪದಲ್ಲಿ ಹಳೆ ಹಳ್ಳವಿದೆ. ೨ ಸೇದೋ ಬಾವಿಗಳಿದ್ದು ನೀರು ಬತ್ತಿಹೋಗಿದೆ. ಗ್ರಾಮದ ಸುತ್ತಮುತ್ತಲ ಜಮೀನಿನಲ್ಲಿ ೪ ಕ್ಕೂ ಹೆಚ್ಚು ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ೧ ಕೈಪಂಪು ಹಾಗೂ ೨೩೫ ನಲ್ಲಿಗಳನ್ನು ಕುಡಿಯುವ ನೀರಿಗಾಗಿ ಅಳವಡಿಸಲಾಗಿದೆ.

ಕುರುಬರು, ಲಿಂಗಾಯಿತರು ಪ್ರಧಾನ ಸಮುದಾಯ. ಹಳ್ಳಿಕಾರರು, ಬಲಜಿಗರು, ಅಗಸರು, ಸರ್ಪವಕ್ಕಲಿಗರು, ಮುಸ್ಲಿಮರು, ಗಾಣಿದರು, ಆಚಾರ್ರು, ಭಜಂತ್ರಿಗಳು, ಬ್ರಾಹ್ಮಣರು, ದೇವಾಂಗದವರು, ಶ್ರೀವೈಷ್ಣವರು, ಭಟ್ಟರು ಸಣ್ಣ ಸಮುದಾಯದವರಾಗಿದ್ದಾರೆ. ಒಟ್ಟು ೨೬೬ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ನಗರದ ಒಟ್ಟು ಜನಸಂಖ್ಯೆಯಾದ ೨೨೩೬೦ ರಲ್ಲಿ ಈ ಬಡಾವಣೆಯ ಜನಸಂಖ್ಯೆ ಸೇರಿದೆ. ಎಲ್ಲ ಜನರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೪ ಕಾಂಕ್ರೀಟ್, ೨೬೨ ಕಲ್ಲಿನ, ಹೆಂಚಿನ ಮನೆಗಳಿವೆ. ಮೇಲ್ಚಾವಣಿಗೆ ಕುಂಬಾರರ ಕಪ್ಪುಹೆಂಚು, ಮಂಗಳೂರಿನ ಕೆಂಪು ಹೆಂಚು, ಸಿಮೆಂಟ್ ಇಲ್ಲವೇ ತಗಡಿನ ಶೀಟುಗಳನ್ನು ಹೊದಿಸಿದ್ದಾರೆ. ಇಲ್ಲಿ ಆಶ್ರಯ, ಜನತಾ, ಅಂಬೇಡ್ಕರ್, ಇಂದಿರಾ ಆವಾಸ್ ಇತ್ಯಾದಿ ಸರ್ಕಾರಿ ಯೋಜನೆಯ ೩೭ ಮನೆಗಳಿವೆ.

ಕೃಷಿ ಪ್ರಧಾನವಾದ ಕೆಂಪು ಮಣ್ಣಿನಲ್ಲಿ ಮುಖ್ಯ ಬೆಳೆಯಾಗಿ ರಾಗಿ, ಉಪಬೆಳೆಗಳಾದ ಅವರೆ, ಭತ್ತ, ಅಲಸಂದೆ, ತೊಗರಿ, ಹೆಸರು ಇತರೆ ಸಣ್ಣ ಕಾಳುಗಳನ್ನು ಹಾಗೂ ತೆಂಗು, ಅಡಿಕೆ, ರೇಷ್ಮೆ, ಬಾಳೆ ಇತ್ಯಾದಿ ತೋಟದ ಬೆಳೆಗಳನ್ನು ಬೆಳೆಯುತ್ತಾರೆ. ವ್ಯವಸಾಯಕ್ಕೆ ಹಸು, ಎತ್ತು ಇತ್ಯಾದಿ ಸಾಕುಪ್ರಾಣಿಗಳನ್ನು, ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಗಾಡಿ, ಆಧುನಿಕ ವಾಹನವಾದ ಟ್ರ್ಯಾಕ್ಟರ್‌ನ್ನು ಬಳಸುತ್ತಾರೆ. ಬೈಸಿಕಲ್, ಬೈಕುಗಳು, ಕಾರು, ಲಾರಿ, ಲಗೇಜ್ ಆಟೋಗಳಿವೆ. ತೆಂಗು, ಕೊಬ್ಬರಿ ಹಾಗೂ ಅಡಿಕೆ ವಾಣಿಜ್ಯ ಬೆಳೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ರಸ್ತೆ ಹಾಗೂ ಚರಂಡಿ ವ್ಯವಸ್ಥೆಯಿದೆ.

ತಳ್ಳುವ ಗಾಡಿಗಳಲ್ಲಿ ೨೫ ಕ್ಕೂ ಹೆಚ್ಚು ಜನ ನಗರದ ವಿವಿಧೆಡೆ ವಿವಿಧ ರೀತಿಯ ವ್ಯಾಪಾರ ಮಾಡುತ್ತಾರೆ. ನಂದಿನಿ ಡೈರಿಯಿದೆ. ೮ ಕ್ಕೂ ಹೆಚ್ಚು ಶಿಕ್ಷಕರು ಹಾಗೂ ಬೆಂಗಳೂರಿನ ವಿವಿಧ ಖಾಸಗಿ ಕಂಪನಿಗಳಲ್ಲಿ ೧೫ ಕ್ಕೂ ಹೆಚ್ಚು ಜನ ಕೆಲಸ ಮಾಡುವವರಿದ್ದಾರೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಪುರಸಭಾ ವ್ಯಾಪ್ತಿಗೆ ಸೇರುತ್ತದೆ. ಚಿಕ್ಕನಾಯಕನಹಳ್ಳಿ ಟೌನ್‌ನಿಂದ ಕಾತ್ರಿಕೆಹಾಳ್, ತೀರ್ಥಪುರ, ಹಾಗಲವಾಡಿ ಮಾರ್ಗವಾಗಿ ತುಮಕೂರಿಗೆ ಹೋಗುವ ಮುಖ್ಯ ರಸ್ತೆ ಮಾರ್ಗವಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಇಂಟರ್‌ನೆಟ್, ಕೇಬಲ್ ಟಿವಿ ಸಂಪರ್ಕವಿದೆ.

ಒಂದು ಅಂಗನವಾಡಿ ಕೇಂದ್ರ, ಜ್ಞಾನಜ್ಯೋತಿ ಇಂಗ್ಲೀಷ್ ಕಾನ್ವೆಂಟ್ ಇದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೭೮ ರಷ್ಟು ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ವಿಧವಾ ವೇತನ, ವೃದ್ಧಾಪ್ಯವೇತನದ ೧೨೬ ಕ್ಕೂ ಹೆಚ್ಚು ಫಲಾನುಭವಿಗಳಿದ್ದಾರೆ. ೬ ಚಿಕ್ಕ ಪೆಟ್ಟಿಗೆ ಅಂಗಡಿಗಳಿವೆ.

೧೦೧ ಲಿಂಗಗಳ ದೇವಸ್ಥಾನ, ಬೇಡರ ಕಣ್ಣಪ್ಪ, ನಿರ್ವಾಣಸ್ವಾಮಿ, ದುರ್ಗಮ್ಮನ ದೇವಾಲಯ ಹಾಗೂ ರಾಮಮಂದಿರಗಳಿವೆ. ಏಕಾದಶಿಯಲ್ಲಿ ನಡೆಯುವ ಹಳೆಯೂರು ಆಂಜನೇಯನ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಪ್ರತಿ ಏಪ್ರಿಲ್-ಮೇ ತಿಂಗಳಿನಲ್ಲಿ ನಿರ್ವಾಣಸ್ವಾಮಿ ಜಾತ್ರೆ ಮಾಡುತ್ತಾರೆ. ಜಾತ್ರೆಯಲ್ಲಿ ಕೆಂಡ, ಅನ್ನದಾಸೋಹ, ಉತ್ಸವ ಕಾರ್ಯಕ್ರಮಗಳಿರುತ್ತವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಅರಳೇಪೇಟೆ, ವಾರ್ಡ್ ನಂ.೧೪

ಅರಳೇಪೇಟೆ ಚಿಕ್ಕನಾಯಕನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿರುವ ೧೩ನೇ ವಾರ್ಡ್ ಎಂದು ಪರಿಗಣಿಸಲಾಗಿದೆ. ಕಣ್ಣಪ್ಪನ ದೇವಾಲಯದಿಂದ ಟೌನ್ ಕೋ-ಆಪರೇಟಿವ್ ಬ್ಯಾಂಕ್, ಬಸವಣ್ಣ ದೇವಾಲಯ, ವೆಂಕಟರಮಣ ದೇವಸ್ಥಾನ, ಆಂಜನೇಯ ದೇವಾಲಯದ ತನಕ ಇದರ ವ್ಯಾಪ್ತಿ ಹಬ್ಬಿದೆ. ಪೂರ್ವಕ್ಕೆ ಮಾರಮ್ಮನ ಗುಡಿ, ಚಿಕ್ಕನಾಯಕನಹಳ್ಳಿ ಕೆರೆಯ ಕೋಡಿಯವರೆಗೆ ಇದರ ವ್ಯಾಪ್ತಿಯಿದೆ. ಪುರಸಭೆಗೆ ಹೊಂದಿಕೊಂಡಂತಿದೆ. ಬಯಲುನಾಡಿಗೆ ಸೇರಿರುವ ಇಲ್ಲಿ ಪೂರ್ವಕ್ಕೆ ಕೆರೆ ಬಯಲು, ತೋಟಸಾಲು ಕಂಡುಬರುತ್ತದೆ. ಈ ಪರಿಸರದಲ್ಲಿ ಕಾಡುಪ್ರಾಣಿಗಳಾದ ನರಿ, ಮೊಲ, ಜಿಂಕೆ ಕಾಡುಪ್ರಾಣಿಗಳೊಂದಿಗೆ ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳಾಗಿವೆ. ಗೊರವಂಕ, ಬೆಳವ, ಗಿಡುಗ, ಕಾಗೆ ಪಕ್ಷಿಗಳಾಗಿದ್ದು ಕೋಳಿಯನ್ನು ಸಾಕುಪಕ್ಷಿಯಾಗಿ ಸಾಕಲಾಗಿದೆ.

ಕೃಷಿ-ವ್ಯಾಪಾರಿ ವಿವಿಧ ನೌಕರಿ ಸಮ್ಮಿಶ್ರ ಬದುಕು ಇಲ್ಲಿಯದು. ಕಪ್ಪು ಮಿಶ್ರಿತ ಮರಳು ಮಣ್ಣಿನ ಭೂಪ್ರದೇಶ. ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ೪ ಸೇದೋ ಬಾವಿಗಳಿದ್ದು ನೀರು ಬತ್ತಿಹೋಗಿದೆ. ಮನೆಗಳಿಗೆ ನಲ್ಲಿ ಸಂಪರ್ಕ ಪಡೆದಿದ್ದಾರೆ.

ಅರಳೆಯಿಂದ ದಾರ ತೆಗೆಯುತ್ತಿದ್ದ, ಬಟ್ಟೆ ತೆಗೆಯುತ್ತಿದ್ದ ಕಾರಣದಿಂದ ಅರಳೇಪೇಟೆ ಎಂದು ಕರೆಯುತ್ತಾರೆ. ವೀರಶೈವರು, ಬಲಜಿಗರು, ಬೇಡರು, ಕುರುಬರು, ದೇವಾಂಗ, ಅರಸರು, ಮುಸ್ಲಿಂ, ಸರ್ಪ ಒಕ್ಕಲಿಗರು ವಾಸಿಸುತ್ತಿದ್ದಾರೆ. ಬಲಜಿಗರ ಓಣಿ, ಧರ್ಮವರ ಬೀದಿ, ಓಣಿಗಳಿವೆ. ಒಟ್ಟು ೩೧೦ ಮನೆಗಳನ್ನು ಹೊಂದಿದೆ. ಎಲ್ಲ ಜನರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ತೆಲುಗು, ಉರ್ದು ಮಾತನಾಡುವವರಿದ್ದಾರೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪುಹೆಂಚು, ಮಂಗಳೂರಿನ ಕೆಂಪು ಹೆಂಚು, ಸಿಮೆಂಟ್ ಇಲ್ಲವೇ ತಗಡಿನ ಶೀಟುಗಳನ್ನು ಹೊದಿಸಿದ್ದಾರೆ. ಜನತಾ, ಇಂದಿರಾ ಆವಾಸ್ ವಸತಿ ಯೋಜನೆಯ ೧೧೦ ಫಲಾನುಭವಿಗಳಿದ್ದಾರೆ. ೩೦೦ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ.

ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ಎತ್ತಿನ ಬಂಡಿ, ತಳ್ಳುವ ಗಾಡಿ, ಆಧುನಿಕ ವಾಹನವಾಗಿ ಕಾರು, ಬಸ್ಸು, ಲಾರಿ, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಿವೆ. ಕೃಷಿ ಅವಲಂಬಿತರು. ತೆಂಗು, ಅಡಿಕೆ ವ್ಯಾಪಾರಿ ಬೆಳೆಯಾಗಿಯೂ ರಾಗಿ, ಹೆಸರು, ಭತ್ತ ಆಹಾರ ಬೆಳೆಯಾಗಿ ಬೆಳೆಯುತ್ತಾರೆ. ಶಿಕ್ಷಕರು, ಇಂಜಿನಿಯರ್, ವೈದ್ಯರು, ವಾಹನ ಚಾಲಕರು ಸರ್ಕಾರಿ ನೌಕರರಾಗಿದ್ದಾರೆ. ಊದುಬತ್ತಿ, ಊಟದ ಎಲೆ ಕಟ್ಟುವುದು, ಬೀಡಿ ಸುತ್ತುವುದು ಸಣ್ಣ ಕೈಗಾರಿಕೆಯಾಗಿದೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಪುರಸಭಾ ವ್ಯಾಪ್ತಿಗೆ ಸೇರುತ್ತದೆ. ಅಂಚೆ ಸೌಕರ್ಯವಿದೆ. ಸಾರಿಗೆ, ಖಾಸಗಿ ವಾಹನಗಳು ಓಡಾಡುತ್ತಿವೆ. ಟೌನ್ ಕೋ-ಆಪರೇಟಿವ್ ಬ್ಯಾಂಕ್ ಇದೆ. ಯೋಗಿ ನಾರಾಯಣ ಪತ್ತಿನ ಸಹಕಾರಿ ಸಂಘವಿದೆ.

ಒಂದು ಅಂಗನವಾಡಿ ಕೇಂದ್ರ, ಸರ್ಕಾರಿ ಹಿರಿಯ ಹಾಗೂ ಕಿರಿಯ ಪ್ರಾಥಮಿಕ ಪಾಠಶಾಲೆ, ಎ.ಪಿ.ಎಸ್. ಆಂಗ್ಲ ಮಾಧ್ಯಮ ಶಾಲೆ, ಜ್ಞೋನಜ್ಯೋತಿ ಪ್ರೌಢಶಾಲೆ, ಶಿಕ್ಷಣ ಸಂಸ್ಥೆಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೭೨ ರಷ್ಟು ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ೧೩ ವಿಧವಾ ವೇತನ, ೨೨ ಜನ ವೃದ್ಧಾಪ್ಯವೇತನದ, ೬ ವಿಕಲಚೇತನ ಯೋಜನೆಯ ಫಲಾನುಭವಿಗಳಿದ್ದಾರೆ.

ರಾಮನಾಥಪ್ಪ, ಮೇಘನಾಥ್ ಕುಟುಂಬದವರು ಜನಪದ ವೈದ್ಯರಾಗಿದ್ದು ಕಾಮಾಲೆ ಸಂಬಂಧಿ ಪಂಡಿತರಾಗಿದ್ದಾರೆ. ಸಪ್ತರ್ಷಿ ಸಭಾಂಗಣ, ಸೀತಾರಾಮ ಕಲ್ಯಾಣ ಮಂಟಪಗಳಿವೆ. ಒಂದು ಸ್ಮಶಾನವಿದೆ.

ಎಲ್ಲಮ್ಮ, ನಿರ್ವಾಣಸ್ವಾಮಿ, ಬಸವಣ್ಣ, ದುರ್ಗಮ್ಮ, ತ್ಯಾಗರಾಜ ದೇವಾಲಯಗಳಿವೆ. ಪ್ರತಿ ಏಪ್ರಿಲ್ ತಿಂಗಳಿನಲ್ಲಿ ಎಲ್ಲಮ್ಮ ಗ್ರಾಮದೇವತೆಯ ಜಾತ್ರೆ ಆರತಿ, ಬಾನ, ಬಲಿ, ಹರಕೆ ಸಂಪ್ರದಾಯಗಳೊಂದಿಗೆ ನಡೆಯುತ್ತದೆ. ಭಂಡಾರ ಸೇವೆ, ಹಂಚಿಕೆ ಇಲ್ಲಿನ ವಿಶೇಷವಾಗಿದೆ. ರಾಮಮಂದಿರ, ಭಜನೆ ತಂಡವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಕುದುರೆಗಾಡಿ ನರಸಿಂಹಯ್ಯ, ನಾಟಕದ ಜಯರಾಮಯ್ಯ, ರಂಗನಿರ್ದೇಶಕ ಭಾಗವತರಾಗಿ ಹೆಸರು ಮಾಡಿದ್ದಾರೆ. ಒಂದು ಹಸಿರು ಸೇನೆ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಹಕಾರ ಸಂಘವಿದೆ.

## ಧರ್ಮಾವರದ ಬೀದಿ, ವಾರ್ಡ್ ನಂ.೧೫

ಧರ್ಮಾವರದ ಬೀದಿ ಚಿಕ್ಕನಾಯಕನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿರುವ ೧೫ನೇ ವಾರ್ಡ್ ಆಗಿದೆ. ಸಂಪಯ್ಯನಬಾವಿ, ರಾಜಣ್ಣನ ಅಂಗಡಿ, ದಕ್ಷಿಣಕ್ಕೆ ಮಾರುಕಟ್ಟೆ, ಪೂರ್ವಕ್ಕೆ ಕೋಟೆಸಾಬರ ಮನೆ, ಉತ್ತರಕ್ಕೆ ಕ್ಷೌರದ ಮಂಜಣ್ಣನ ಮನೆ ಇವು ಧರ್ಮಾವರದ ಬಡಾವಣೆಯ ವಿನ್ಯಾಸವಾಗಿದೆ. ಬಯಲು ನಾಡು. ಮರಳು ಮಿಶ್ರಿತ ಕಪ್ಪುನೆಲ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಕುಡಿಯಲು ಪುರಸಭೆಯಿಂದ ನೀರು ಪೂರೈಕೆಯಾಗುತ್ತಿದ್ದು ೩೧೪ ನಲ್ಲಿ ಸಂಪರ್ಕವಿದೆ. ಒಂದು ಓ.ಹೆಚ್ ನೀರಿನ ಟ್ಯಾಂಕ್ ಇದೆ. ೨ ಹಳೆಯ ಬಾವಿಗಳಿದ್ದು ಸಧ್ಯ ಒಣಗಿಹೋಗಿವೆ. ಪೂರ್ವಕ್ಕೆ ಕೆರೆಯಿದೆ. ಹಸು, ಎಮ್ಮೆ, ಕುರಿ, ಮೇಕೆ ಸಾಕುಪ್ರಾಣಿಗಳು.

ಕುರುಬರು ಪ್ರಧಾನ ಸಮುದಾಯ. ಮುಸ್ಲಿಂ, ಬಲಜಿಗ, ನಾಯಕ, ಗೊಲ್ಲರು, ಲಿಂಗಾಯಿತರು, ಭಜಂತ್ರಿಗಳು, ಭಾವಸಾರ ಕ್ಷತ್ರಿಯ ಸಣ್ಣ ಸಮುದಾಯದವರಾಗಿದ್ದಾರೆ. ಒಟ್ಟು ೩೮೦ ಮನೆಗಳನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ೧೨೫೦ ಜನಸಂಖ್ಯೆ ಹೊಂದಿದೆ. ಎಲ್ಲ ಜನರೂ ಕನ್ನಡ ಭಾಷೆಯನ್ನು ಬಳಸುತ್ತಾರೆ. ಸಾಂಪ್ರದಾಯಿಕ ಎತ್ತಿನ ಗಾಡಿಗಳಿವೆ. ಕೃಷಿ ಹಾಗೂ ವ್ಯಾಪಾರ ಮುಖ್ಯ ಕಸುಬಾಗಿದೆ. ತೆಂಗು, ಅಡಿಕೆ, ಕಂಬಳಿ ವ್ಯಾಪಾರ

ಮಾಡುತ್ತಾರೆ. ೧ ಪಾರ್ಕ್ ಇದೆ. ೨ ಗೂಡಂಗಡಿಗಳಿವೆ. ಶಿಕ್ಷಕರು, ಇಂಜಿನಿಯರ್, ಕಂದಾಯ, ಸಾರಿಗೆ ಇಲಾಖೆಯ ಸರ್ಕಾರಿ ನೌಕರರಿದ್ದಾರೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಪುರಸಭಾ ವ್ಯಾಪ್ತಿಗೆ ಸೇರುತ್ತದೆ. ಟಾರ್ ರಸ್ತೆಯಿದೆ. ಪ್ರತಿ ಸೋಮವಾರ ಸಂತೆ ನಡೆಯುತ್ತದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ಧರ್ಮಸ್ಥಳ ಮಹಿಳಾಸ್ವಸಹಾಯ ಸಂಘ, ಸ್ತ್ರೀಶಕ್ತಿ ಸಂಘಗಳ ೨೦ ತಂಡಗಳಿವೆ.

ಒಂದು ಅಂಗನವಾಡಿ ಕೇಂದ್ರ, ಜ್ಞಾನಜ್ಯೋತಿ ಆಂಗ್ಲ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೬೫ ರಷ್ಟು ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ೨೦ ವಿಧವಾ ವೇತನ, ೨೫ ವೃದ್ಧಾಪ್ಯವೇತನ, ೮ ವಿಕಲಚೇತನ ವೇತನದ ಫಲಾನುಭವಿಗಳಿದ್ದಾರೆ. ಚಿಕನ್ ಅಂಗಡಿ, ಗ್ಯಾರೇಜ್, ೧೦ ಕಿರಾಣಿ ಅಂಗಡಿಗಳಿವೆ.

ಪಾಂಡುರಂಗನ ದೇವಾಲಯವಿದ್ದು ಪ್ರತಿ ಶನಿವಾರ ಭಜನೆ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಅರಸು ಕಲಾಸಂಘ, ಸಿದ್ಧರಾಮೇಶ್ವರ ಕಲಾ ಸಂಘಗಳಿವೆ.

## ಮುಸ್ಲಿಂ ಬಡಾವಣೆ, ವಾರ್ಡ್ ನಂ.೧೬

ಮುಸ್ಲಿಂ ಬಡಾವಣೆ ಚಿಕ್ಕನಾಯಕನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿರುವ ೧೬ನೇ ವಾರ್ಡ್ ಎಂದು ಪರಿಗಣಿಸಲಾಗಿದೆ. ಮೊದಲಿಗೆ ಮುಸ್ಲಿಂ ಸಮುದಾಯದವರು ಮಾತ್ರ ಜನವಸತಿ ರಚಿಸಿಕೊಂಡಿದ್ದರು. ನಂತರ ಇತರೆ ಜನಾಂಗದವರೂ ಸೇರಿಕೊಂಡರು. ಬಹುಸಂಖ್ಯೆಯಲ್ಲಿ ಮುಸ್ಲಿಮರು ಇರುವುದರಿಂದಾಗಿ ಮುಸ್ಲಿಂ ಬಡಾವಣೆ ಎಂದು ಕರೆಯುತ್ತಾರೆ. ಕಪ್ಪು ಮಿಶ್ರಿತ ಮರಳು ಮಣ್ಣಿನ ಭೂಪ್ರದೇಶ. ಉಡೇಬೀದಿ, ದೇವಾಂಗ ಬೀದಿ, ಬುಗುರಿ ಮರದ ಓಣಿಯಿಂದ ವೆಂಕಟರಮಣ ದೇವಾಲಯದ ತನಕ ಇದರ ವ್ಯಾಪ್ತಿ ಹರಡಿಕೊಂಡಿದೆ. ಕುರಿ, ಮೇಕೆ, ಕೋಳಿ ಇಲ್ಲಿನ ಸಾಕುಪ್ರಾಣಿಗಳಾಗಿವೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ೧೧೨ ನಲ್ಲಿಗಳಿವೆ. ಒಂದು ನೀರಿನ ಟ್ಯಾಂಕ್ ಇದೆ.

ಮುಸ್ಲಿಮರು ಪ್ರಧಾನ ಸಮುದಾಯ. ದೇವಾಂಗ, ಬಲಜಿಗ, ಬಂಜಾರರು, ಶೆಟ್ಟಿ ಬಣಜಿಗ, ಕುರುಬರು ಸಣ್ಣ ಸಮುದಾಯದವರಾಗಿದ್ದಾರೆ. ಒಟ್ಟು ೨೧೦ ಮನೆಗಳನ್ನು ಹೊಂದಿದೆ. ಎಲ್ಲ ಜನರೂ ಕನ್ನಡ ಭಾಷೆಯನ್ನು ಬಳಸುತ್ತಾರೆ.  ಉರ್ದು, ತೆಲುಗು ಮಾತನಾಡುತ್ತಾರೆ. ವಿವಿಧ ಪ್ರಕಾರದ ಮನೆಗಳಿದ್ದು ಅವುಗಳಲ್ಲಿ ೮ ಕಾಂಕ್ರೀಟ್, ಕಲ್ಲಿನ, ಹೆಂಚಿನ ಮನೆಗಳಿವೆ. ಮೇಲ್ಛಾವಣಿಗೆ ಕುಂಬಾರರ ಕಪ್ಪುಹೆಂಚು, ಮಂಗಳೂರಿನ ಕೆಂಪು ಹೆಂಚು, ಸಿಮೆಂಟ್ ಇಲ್ಲವೇ ತಗಡಿನ ಶೀಟುಗಳನ್ನು ಹೊದಿಸಿದ್ದಾರೆ. ಈ ಮನೆಗಳು ಹೆಂಚಿನ, ಶೀಟಿನ, ಕಾಂಕ್ರೀಟ್ ಸ್ವರೂಪದಲ್ಲಿವೆ. ೬೮ ಮನೆಗಳು ಇಂದಿರಾ ಆವಾಸ್, ಜನತಾ ವಸತಿ ಯೋಜನೆ ಹಾಗೂ ೨೦೦ ಮನೆಗಳು ಶೌಚಾಲಯ ಹೊಂದಿವೆ.

ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.  ಎತ್ತಿನ ಗಾಡಿ, ಟೈರು ಗಾಡಿಗಳಿವೆ. ಲಾರಿ, ಬಸ್, ಕಾರುಗಳು, ಆಟೋ, ದ್ವಿಚಕ್ರ ವಾಹನಗಳಿವೆ. ಕೃಷಿ, ಬೀಡಿ ಸುತ್ತುವುದು, ನೇಯ್ಗೆ ಹಾಗೂ ವ್ಯಾಪಾರ ಮುಖ್ಯ ಕಸುಬಾಗಿದೆ. ರಾಗಿ, ಹೆಸರು, ಹುರುಳಿ ಬೆಳೆಯುತ್ತಾರೆ. ತೆಂಗು, ಅಡಿಕೆ ವ್ಯಾಪಾರಿ ಬೆಳೆಗಳಾಗಿವೆ. ಶಿಕ್ಷಕರು, ಸಾರಿಗೆ ವಾಹನ ಚಾಲಕರು ೧೪ ಜನ ಇದ್ದಾರೆ. ವಿವಿಧ ವ್ಯಾಪಾರಿಗಳು ಹೆಚ್ಚಿದ್ದಾರೆ.

ತುಮಕೂರು ಲೋಕಸಭಾ ಕ್ಷೇತ್ರ, ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ, ಪುರಸಭಾ ವ್ಯಾಪ್ತಿಗೆ ಸೇರುತ್ತದೆ. ಚಿಕ್ಕನಾಯಕನಹಳ್ಳಿ ಟೌನ್‌ನಿಂದ ರಸ್ತೆ ಮಾರ್ಗವಿದೆ. ಬಹುಪಾಲು ಮನೆಯಲ್ಲಿ ಸಂಚಾರಿ ದೂರವಾಣಿ ಮತ್ತು ಡಿಟಿಎಚ್ ಸಂಪರ್ಕವನ್ನು ಕಾಣಬಹುದು. ೬ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರವಿದೆ. ಶೇ.೬೦ ರಷ್ಟು ಸಾಕ್ಷರತೆಯಿದೆ. ಸಮುದಾಯ ಸೌಲಭ್ಯಗಳಾದ ೧೦ ವಿಧವಾ ವೇತನ, ೨೦ ವೃದ್ಧಾಪ್ಯವೇತನ, ೧೦ ವಿಕಲಚೇತನದ ಫಲಾನುಭವಿಗಳಿದ್ದಾರೆ. ೪ ಚಿಕ್ಕ ಅಂಗಡಿ, ೨ ಟೀ ಅಂಗಡಿ, ೨ ಮಟನ್ ಅಂಗಡಿಗಳಿವೆ.

ಮಹಬೂಬ್ ಸುಬಾನಿ, ಸಾರಾನಿ ಮಸೀದಿಗಳಿವೆ. ದೇವಾಂಗದವರ ಹೊಂಬಾಳಮ್ಮ ದೇವಾಲಯವಿದೆ. ಪ್ರತಿ ಮಾರ್ಚ್ ತಿಂಗಳಿನಲ್ಲಿ ಉರುಸ್ ನಡೆಯುತ್ತದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ, ರಂಜಾನ್, ಬಕ್ರೀದ್ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಟಿಪ್ಪು ಸಂಘ, ಅಜ್ಮೀರ್, ಕೆಜಿಎನ್ ಸಂಘಗಳಿವೆ. ನಾರಾಯಣಪ್ಪ ಯಕ್ಷಗಾನ ಭಾಗವತರಾಗಿದ್ದು ದೇವಾಂಗ ಸಂಘದವರಿಗೆ ಯಕ್ಷಗಾನ ಕಲಿಸುತ್ತಾರೆ.

## ಲಿಂಗನಾಯಕನಹಟ್ಟಿ, ವಾರ್ಡ್ ನಂ.೧೭

ಲಿಂಗನಾಯಕನಹಟ್ಟಿ ಚಿಕ್ಕನಾಯಕನಹಳ್ಳಿ ಪುರಸಭೆಯ ವಾರ್ಡ್ ನಂ.೧೭ ರ ವ್ಯಾಪ್ತಿಗೆ ಒಳಪಡುತ್ತದೆ. ಪುರಸಭೆಯಿಂದ ಉತ್ತರಕ್ಕೆ ಈ ಬಡಾವಣೆ ಇದೆ. ರುದ್ರನ ಗುಡಿ, ಕಾಳಮ್ಮನಗುಡಿ, ಬುಗುರಿ ಮಠ, ಮಟನ್ ಮಾರ್ಕೆಟ್‌ನಿಂದ ಸೇದೋಬಾವಿಯವರೆವಿಗೂ ಇದರ ವ್ಯಾಪ್ತಿ ವಿಸ್ತಾರವಾಗಿದೆ. ಕಪ್ಪು ಮರಳು ಮಿಶ್ರಿತ ಭೂಪ್ರದೇಶ. ಶಿಕ್ಷಕರು, ವ್ಯಾಪಾರಿಗಳು ಇಲ್ಲಿದ್ದಾರೆ. ಹಸು, ಎಮ್ಮೆ, ಕುರಿ, ಮೇಕೆ, ಕೋಳಿ ಸಾಕಿದ್ದಾರೆ. ವಾರ್ಷಿಕ ೫೯೮.೩ ಮಿಮೀ ಮಳೆ ಬೀಳುತ್ತಿದ್ದು ಉಷ್ಣಾಂಶ ೩೬ ಡಿಗ್ರಿ ಇದ್ದರೆ ಚಳಿ ೧೪ ಡಿಗ್ರಿ ಇರುತ್ತದೆ. ಕುಡಿಯಲು ಪುರಸಭೆಯ ವತಿಯಿಂದ ಕೊಳಾಯಿಗಳ ಮೂಲಕ ನೀರು ಪೂರೈಸಲಾಗುತ್ತಿದೆ. ೧೪೨ ಸಾರ್ವಜನಿಕ ಕೊಳಾಯಿಗಳು, ೧೬೨೪ ನಲ್ಲಿ ಸಂಪರ್ಕ ಪಡೆದವರಿದ್ದಾರೆ. ೩ ಸೇದೋ ಬಾವಿಗಳಿದ್ದು ಬತ್ತಿಹೋಗಿವೆ. ಇಲ್ಲಿನ ಸಾಮಾಜಿಕ ರಚನೆಯಲ್ಲಿ ಕುರುಬ ಸಮುದಾಯ ದೊಡ್ಡ ಸಮುದಾಯ. ವೀರಶೈವ, ಶೆಟ್ಟಿ ಬಣಜಿಗ, ದರ್ಜಿ, ವೈಶ್ಯರು, ನಾಯಕರು, ಮುಸ್ಲಿಂ ಸಣ್ಣ ಸಮುದಾಯವಾಗಿದೆ. ಕಾಟರಾಮಯ್ಯನ ಓಣಿ, ಸೇಂದಿ ಓಣಿ, ಲಿಂಗನಾಯ್ಕನಹಳ್ಳಿ ಓಣಿ, ಬರಗೂರು ನರಸಪ್ಪನ ಓಣಿ, ಹಳೇ ಸೇಂದಿ ಅಂಗಡಿ ಓಣಿಗಳಿವೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ, ಮಣ್ಣಿನ, ಕುಂಬಾರ ಹೆಂಚಿನ ಸ್ವರೂಪದ ಒಟ್ಟು ೩೦೦ ಮನೆಗಳಿವೆ. ೧೮೦೦ ಜನಸಂಖ್ಯೆ ಇದೆ. ಜನತಾ, ಬಸವ, ಇಂದಿರಾ ವಸತಿ ಯೋಜನೆಯಡಿಯಲ್ಲಿ ನಿರ್ಮಿತವಾದ ೮೦ ಮನೆಗಳಿವೆ. ೧೮೫ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಕನ್ನಡ ಮಾತೃಭಾಷೆಯಾಗಿದ್ದು ತೆಲುಗು, ಉರ್ದು ಮಾತನಾಡುತ್ತಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಪಾಯಸ, ಹೋಳಿಗೆ, ಮಾಂಸಾಹಾರ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಸಾಂಪ್ರದಾಯಿಕ ಎತ್ತಿನ ಗಾಡಿಗಳಿವೆ. ಕಾರು, ಟ್ರ್ಯಾಕ್ಟರ್, ಬಸ್, ಲಾರಿ, ಟೆಂಪೋ ಹಾಗೂ ದ್ವಿಚಕ್ರ ವಾಹನಗಳ ಬಳಕೆಯಿದೆ. ಕೃಷಿ ಹಾಗೂ ಕಂಬಳಿ ನೇಯ್ಗೆ ಇಲ್ಲಿನ ಪ್ರಧಾನ ಕಸುಬು. ಕಂಬಳಿ ಉಣ್ಣೆ ಸಿದ್ಧಪಡಿಸುವ, ದಾರ ತೆಗೆದು ಕಂಬಳಿ ನೇಯ್ಗೆ ಹಾಗೂ ಮಾರಾಟದ ವ್ಯವಸ್ಥೆಯಿದೆ. ಕೃಷಿಕರು ರಾಗಿ, ಜೋಳ, ಅವರೆ, ಹೆಸರು, ಅಲಸಂದೆ ಬೆಳೆಯುತ್ತಾರೆ. ತೆಂಗು, ಅಡಿಕೆ, ಕಂಬಳಿ ವ್ಯಾಪಾರಿ ಸರಕಾಗಿದೆ. ಶಿಕ್ಷಕರು, ವಾಹನ ಚಾಲಕರು, ಪುರಸಭೆ ನೌಕರರು ಸೇರಿದಂತೆ ೨೭ ಸರ್ಕಾರಿ ನೌಕರರಿದ್ದಾರೆ. ಖಾಸಗಿ ನೌಕರರು, ಅಂಗಡಿ ವ್ಯಾಪಾರಿ, ಕಂಬಳಿ ನೇಯ್ಗೆ ಕಾರ್ಮಿಕರು ಅಧಿಕವಾಗಿದ್ದಾರೆ. ಚಿಕ್ಕನಾಯಕನಹಳ್ಳಿ ಪುರಸಭೆ, ತುಮಕೂರು ಲೋಕಸಭೆ ವಾರ್ಡ್ ನಂ.೧೭ ಕ್ಕೆ ಸೇರಿದೆ. ಸಾರಿಗೆ ಸೌಲಭ್ಯವಿದೆ. ಸಿಮೆಂಟ್, ಟಾರ್ ರಸ್ತೆ, ಚರಂಡಿ ಸೌಲಭ್ಯವಿದೆ. ಪುರಸಭೆಯ ಶೌಚಾಲಯವಿದೆ. ಒಂದು ಅಂಗನವಾಡಿ ಕೇಂದ್ರವಿದೆ. ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಸಂಧ್ಯಾ ಸುರಕ್ಷೆ ೧೮, ವಿಕಲಚೇತನ ೪, ವಿಧವಾ ವೇತನ ೨೩ ಫಲಾನುಭವಿಗಳಿದ್ದಾರೆ. ೨ ಹೋಟೆಲ್, ೮ ಕಿರಾಣಿ ಅಂಗಡಿಗಳಿವೆ. ಶನಿದೇವರು, ಯಲ್ಲಮ್ಮ, ವೀರಭದ್ರ ಇಲ್ಲಿನ ದೇವಾಲಯಗಳು. ಶನಿದೇವರ ಉತ್ಸವ ರಾಮನವಮಿಯಂದು ನಡೆದು ಸಾರ್ವತ್ರಿಕ ಅನ್ನ ಸಂತರ್ಪಣೆ ಇರುತ್ತದೆ. ಯಲ್ಲಮ್ಮ, ವೀರಭದ್ರ ದೇವರ ದಸರಾ ಉತ್ಸವ ನಡೆಯುತ್ತದೆ. ಬಸವ ಜಯಂತಿ, ಶಿವರಾತ್ರಿ, ದೀವಣಿಗೆ, ಯುಗಾದಿ, ದಸರಾ, ಕಾರಹಬ್ಬ, ಗೌರಿ–ಗಣೇಶನ ಹಬ್ಬ ಆಚರಿಸುತ್ತಾರೆ. ವಿನಾಯಕ ಆಚರಣಾ ಸಮಿತಿಯಿದೆ. ಗ್ರಾಮದ ಸಾಕ್ಷರತೆ ೭೦.

## ಸಿದ್ದೇಶ್ವರ ಮಠ ಬಡಾವಣೆ, ವಾರ್ಡ್ ನಂ.೧೮

ಹಳೆಯ ದೊಡ್ಡಹಟ್ಟಿ ಮತ್ತು ಮಂಕಯ್ಯನಹಟ್ಟಿಗಳು ಸೇರಿಕೊಂಡು ಸಿದ್ದೇಶ್ವರ ಮಠದ ಬಡಾವಣೆ ಎಂದಾಗಿವೆ. ಉಳ್ಳೆಗೆರೆ ಬಾವಿಯಿಂದ ಶನಿದೇವರ ರಸ್ತೆ, ಕುರುಬರ ಶ್ರೇಣಿ ರಸ್ತೆ, ಬಿ.ಹೆಚ್ ರಸ್ತೆ ಎಡಭಾಗ, ಮನೆಘಟ್ಟ ಗೇಟ್ ಉತ್ತರಭಾಗ ಈ ಬಡಾವಣೆಯ ವ್ಯಾಪ್ತಿಗೆ ಸೇರಿವೆ. ಇದು ಚಿಕ್ಕನಾಯಕನಹಳ್ಳಿ ಪುರಸಭೆಯ ವ್ಯಾಪ್ತಿಗೆ ವಾರ್ಡ್ ನಂ.೧೮ ರ ಸೇರಿದೆ. ಕಪ್ಪು ಮಿಶ್ರಿತ ಮರಳು ಪ್ರದೇಶ. ಕೃಷಿ ಹಾಗೂ ಕಂಬಳಿ ಉದ್ಯೋಗವಿದೆ. ರೈತರು ಹಸು, ಎಮ್ಮೆ, ಕುರಿ, ಮೇಕೆ ಸಾಕಿದ್ದಾರೆ. ವಾರ್ಷಿಕ ೫೯೮ ಮಿಮೀ ಮಳೆ ಬೀಳುತ್ತಿದ್ದು ಉಷ್ಣಾಂಶ ೩೬ ಡಿಗ್ರಿ ಇದ್ದರೆ ಚಳಿ ೧೩ ಡಿಗ್ರಿ ಸೆಂಟಿಗ್ರೇಡ್ ಇದೆ. ೪ ತೆರೆದ ಹಳೆಯ ಬಾವಿಗಳಿದ್ದು ಒಣಗಿಹೋಗಿವೆ. ೨ ಕೈಪಂಪುಗಳಿವೆ. ಕುರುಬರು ದೊಡ್ಡ ಸಮುದಾಯ. ಬೆಸ್ತರು, ದೇವಾಂಗ, ಮುಸ್ಲಿಂ, ಬೋವಿ, ಅಕ್ಕಸಾಲಿಗ, ಲಿಂಗಾಯಿತ, ಬೇಡರು, ಅರಸು ಮಕ್ಕಳು ಕಿರು ಸಮುದಾಯಗಳಾಗಿವೆ. ಮೇಕೆರಯ್ಯನಹಟ್ಟಿ ಓಣಿ, ಎಲ್ಲಮ್ಮ ದೇವರ ಓಣಿ, ದೊಡ್ಡಹಟ್ಟಿ ಓಣಿಗಳಿರುತ್ತವೆ. ಕನ್ನಡ ಇಲ್ಲಿನ ಮಾತೃಭಾಷೆ. ಉರ್ದು, ತೆಲುಗು ಮಾತನಾಡುತ್ತಾರೆ. ಕಾಂಕ್ರೀಟ್, ಕಲ್ಲಿನ, ಹೆಂಚಿನ ಸ್ವರೂಪದ ಒಟ್ಟು ೧೬೭ ಮನೆಗಳಿದ್ದು ೨೦೦೦ ಜನಸಂಖ್ಯೆ ಹೊಂದಿದೆ. ಇವು ಜನತಾ, ಆಶ್ರಯ, ಇಂದಿರಾ ಆವಾಸ್, ಬಸವ ವಸತಿ ಯೋಜನೆಯ ೧೪೦ ಫಲಾನುಭವಿಗಳಿದ್ದಾರೆ. ೧೫೦ ಮನೆಗಳು ಶೌಚಾಲಯ ಬಳಸುತ್ತಾರೆ. ಭಾಗ್ಯಜ್ಯೋತಿ ಫಲಾನುಭವಿಗಳಿದ್ದು ೭೪ ವಿದ್ಯುತ್ ಕಂಬ, ೨೩ ವಿದ್ಯುತ್ ಬೀದೀದೀಪಗಳಿವೆ.

ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಪಾಯಸ, ಬಾಡೂಟ, ಹೋಳಿಗೆ ವಿಶೇಷ ಸಾಂದರ್ಭಿಕ

ಭೋಜನವಾಗಿದೆ. ಸಾಂಪ್ರದಾಯಿಕ ಎತ್ತಿನ ಗಾಡಿಗಳಿವೆ. ಟ್ರ್ಯಾಕ್ಟರ್, ಕಾರು, ದ್ವಿಚಕ್ರ ವಾಹನ, ಬಸ್‌ಗಳಿವೆ. ರಾಗಿ, ಭತ್ತ, ಹೆಸರು ಬೆಳೆಯುತ್ತಾರೆ. ತೆಂಗು, ಕೊಬ್ಬರಿ, ಅಡಿಕೆ ವ್ಯಾಪಾರಿ ಬೆಳೆ. ಕಂಬಳಿ, ರೇಷ್ಮೆ ಸೀರೆ ವ್ಯಾಪಾರವಿದೆ. ಕೈಮಗ್ಗಗಳಿವೆ. ಶಿಕ್ಷಣ, ಸಾರಿಗೆ, ಕಂದಾಯ ಭಾರತೀಯ ಸೇನೆ ಸೇರಿದಂತೆ ಒಟ್ಟು ೫೪ ಜನ ಸರ್ಕಾರಿ ನೌಕರರಿದ್ದಾರೆ. ತುಮಕೂರು ಲೋಕಸಭಾ, ಚಿಕ್ಕನಾಯಕನಹಳ್ಳಿ ಪುರಸಭೆ ಹಾಗೂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರುತ್ತದೆ. ಸ್ಥಿರ ಹಾಗೂ ಚರ ದೂರವಾಣಿಗಳಿವೆ. ಕ್ಯಾಪ್ಟನ್ ಸೋಮಶೇಖರ್, ನಿವೃತ್ತ ಸೇನಾ ಮುಖ್ಯಸ್ಥರಿದ್ದಾರೆ. ನವಚೇತನ ಸಹಕಾರ ಬ್ಯಾಂಕ್ ಇದೆ. ಅಂಗನವಾಡಿ ಕೇಂದ್ರ, ಸರ್ಕಾರಿ ಕುರುಬರ ಪಾಠಶಾಲೆ, ಕಾಳಮ್ಮನ ಬೀದಿ ಕಿರಿಯ ಪಾಠಶಾಲೆಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯವಿದೆ. ಶೇ.೯೦ ರಷ್ಟು ಸಾಕ್ಷರತೆ ಇದೆ. ನಿಜಲಿಂಗಯ್ಯ ಎಂಬ ನಾಟಿ ವೈದ್ಯರಿದ್ದು ಪಾರ್ಶ್ವವಾಯು ರೋಗಕ್ಕೆ ಚಿಕಿತ್ಸೆ ನೀಡುತ್ತಿದ್ದಾರೆ.

ಸಮುದಾಯ ಸೌಲಭ್ಯಗಳಾದ ೧೨ ವೃದ್ಧಾಪ್ಯವೇತನ, ೩ ವಿಕಲಚೇತನ, ೧೬ ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೪ ಚಿಕ್ಕ ಹೋಟೆಲ್‌ಗಳಿವೆ. ವೆಂಕಟೇಶ್ವರ ಲಾಡ್ಜ್, ೧೨ ಅಂಗಡಿಗಳು ಇವೆ. ಕೆಂಪಮ್ಮ ದೇವಾಲಯ ಶಿವ ಸಪ್ತಾಹ ಸಮಿತಿ, ಗುಂಡು ಪೀಪಯ್ಯ (ಆಂಜನೇಯ) ಬ್ಯಾಲಕೆರೆ ಕೆಂಪಮ್ಮದೇವಿ, ಹೊಂಬಾಳಮ್ಮ, ಚೌಡಿಕೆ ಎಲ್ಲಮ್ಮದೇವಿ, ಬೋಸಲ ಕುರುಬರ ಎಲ್ಲಮ್ಮ ದೇವಾಲಯಗಳಿವೆ. ಮೈಲಾರದೇವರು, ಶಿವಪ್ಪನ ಗುಡಿ, ರಾಮ ದೇವಸ್ಥಾನ, ಹಣದೀರಯ್ಯನ ದೇವಾಲಯವಿದೆ. ಆಂಜನೇಯನ ಜಾತ್ರೆ ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ನಡೆಯುತ್ತಿದೆ. ಕೆಂಪಮ್ಮ ದೇವಿ ಯಕ್ಷಗಾನ ಕಲಾಸಂಘವಿದೆ. ಪ್ರತಿವರ್ಷ ದೇವಿ ಮಹಾತ್ಮೆ ನಾಟಕ ಅಭಿನಯಿಸುತ್ತಾರೆ. ರಾಮಯ್ಯ ಎಂಬ ಭಾಗವತರಿದ್ದಾರೆ. ಕೆಂಪಮ್ಮದೇವಿ ಬಯಲು ರಂಗಮಂದಿರ, ಲಕ್ಷ್ಮೀನರಸಿಂಹ ಚಿತ್ರಮಂದಿರ ಇದೆ. ಸಿದ್ಧಿವಿನಾಯಕ ಸಾಂಸ್ಕೃತಿಕ ಸಂಘವಿದೆ. ಬನಶಂಕರಿ ಕಲ್ಯಾಣ ಮಂದಿರವಿದೆ.

## ಮಣೆದೀರನಹಟ್ಟಿ, ವಾರ್ಡ್ ನಂ.೧೯

ಮಣೆದೀರನಹಟ್ಟಿ ಚಿಕ್ಕನಾಯಕನಹಳ್ಳಿಯ ಹಳೆಯ ಬಡಾವಣೆ ದೇವರ ಉತ್ಸವಗಳಲ್ಲಿ ಮಣೇವು ಸೇವೆಯಲ್ಲಿ ಹೆಸರಾಗಿದ್ದ ಕಲಾವಿದನೊಬ್ಬನ ಹೆಸರಲ್ಲಿ ಈ ಬಡಾವಣೆ ರಚನೆಯಾಗಿದೆ. ಚಿಕ್ಕನಾಯಕನಹಳ್ಳಿ ಪುರಸಭೆಯ ವಾರ್ಡ್ ನಂ.೧೯ ರಲ್ಲಿ ಸೇರಿದೆ. ಪಶ್ಚಿಮಕ್ಕೆ ಕಂಬಳಿ ಸೊಸೈಟಿಯಿಂದ ಉತ್ತರಕ್ಕೆ ಎ.ಕೆ. ಕಾಲೋನಿ, ದಕ್ಷಿಣಕ್ಕೆ ಎಸ್.ಎಲ್.ಎನ್ ಚಿತ್ರಮಂದಿರದಿಂದ ಮೇಲಕ್ಕೆ ಬಂಡೇರಹಟ್ಟಿ, ಹುಳಿಯಾರು ರಸ್ತೆಯ ಮೇಲ್ಭಾಗದ ಮನೆಗಳು ಈ ವ್ಯಾಪ್ತಿಗೆ ಸೇರಿವೆ. ಕೃಷಿ, ಕಂಬಳಿ ನೇಯ್ಗೆ, ಕಂಬಳಿ ವ್ಯಾಪಾರ ಇಲ್ಲಿನ ಮುಖ್ಯ ಕಸುಬು. ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಹಸು, ಕುರಿ, ಮೇಕೆ, ಕೋಳಿ ಸಾಕುಪ್ರಾಣಿಗಳು. ಕುಡಿಯಲು ಪುರಸಭೆಯಿಂದ ಕೊಳಾಯಿ ಮೂಲಕ ನೀರು ಪೂರೈಸುತ್ತಾರೆ. ೧೨೩ ಸಾರ್ವಜನಿಕ ನಲ್ಲಿಗಳಿವೆ. ಒಂದು ಓವರ್‌ಹೆಡ್ ಟ್ಯಾಂಕ್ ಇದೆ.

ಸಮುದಾಯ ರಚನೆಯಲ್ಲಿ ಕುರುಬರು ದೊಡ್ಡ ಸಮುದಾಯ. ಉಪ್ಪಾರರು, ಅಕ್ಕಸಾಲಿಗರು ಕಿರು ಸಮುದಾಯವಾಗಿದೆ. ಕಸವೇರಹಟ್ಟಿ ಓಣಿ, ರೇವಣರ ಮಠದ ಓಣಿ, ಬಂಡೇರಹಟ್ಟಿ ಓಣಿಗಳಿವೆ. ಕನ್ನಡ ಇಲ್ಲಿನ ಪ್ರಧಾನ ಭಾಷೆ. ಒಟ್ಟು ೧೬೩ ಮನೆಗಳಿವೆ. ಇವು ಹೆಂಚಿನ, ಕಾಂಕ್ರೀಟ್, ಕರಿ ಹೆಂಚಿನ ಸ್ವರೂಪದಲ್ಲಿವೆ. ೧೦೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ಜನತಾ, ಆಶ್ರಯ ವಸತಿ ಯೋಜನೆಯ ೭೪ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಪಾಯಸ, ಬಾಡೂಟ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಸಾಂಪ್ರದಾಯಿಕ ಎತ್ತಿನ ಗಾಡಿಗಳಿವೆ. ಕಾರು, ಲಾರಿ, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಿವೆ. ರಾಗಿ, ಹೆಸರು, ಅವರೆ, ತೊಗರಿ, ತೆಂಗು, ಅಡಿಕೆ ಮುಖ್ಯ ಬೆಳೆಗಳು. ಡಾಕ್ಟರ್, ಇಂಜಿನಿಯರ್, ಶಿಕ್ಷಕರು, ವಾಹನ ಚಾಲಕರು, ಕಂದಾಯ ಇಲಾಖೆಗಳಲ್ಲಿ ೫೭ ಜನ ಸರ್ಕಾರಿ ನೌಕರರಿದ್ದಾರೆ. ಕಂಬಳಿ ಮಗ್ಗಗಳಿವೆ. ಕಂಬಳಿ ವ್ಯಾಪಾರ ಕೇಂದ್ರವಿದೆ. ಒಂದು ಕಂಬಳಿ ಸಮುದಾಯ ಭವನವಿದೆ.

ಆಡಳಿತಾತ್ಮಕವಾಗಿ ತುಮಕೂರು ಲೋಕಸಭೆ, ಚಿಕ್ಕನಾಯಕನಹಳ್ಳಿ ವಿಧಾನಸಭೆ ಹಾಗೂ ಪುರಸಭೆಯ ವ್ಯಾಪ್ತಿಗೆ ಸೇರಿದೆ. ಅಂಚೆ ಕಛೇರಿ ಇದೆ. ಸ್ಥಿರ-ಚರ ದೂರವಾಣಿಗಳಿವೆ. ೧೦ ಅಂಗಡಿ, ೪ ಹೋಟೆಲ್‌ಗಳಿವೆ. ಚಿಕ್ಕನಾಯಕನಹಳ್ಳಿ-ಹುಳಿಯಾರು ರಸ್ತೆ, ಬಸ್ ಸಂಪರ್ಕವಿದೆ. ಒಂದು ಅಂಗನವಾಡಿ, ಸರ್ಕಾರಿ ಮಾಧ್ಯಮಿಕ ಪಾಠಶಾಲೆ, ಅಂಬೇಡ್ಕರ್ ಪ್ರೌಢಶಾಲೆಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೭೫ ಸಾಕ್ಷರತೆಯಿದೆ. ಮಲ್ಲಿಕಾರ್ಜುನ ಐಟಿಐ ಕಾಲೇಜು ಇದೆ. ಸಮುದಾಯ ಸೌಲಭ್ಯಗಳಾದ ೧೮ ವೃದ್ಧಾಪ್ಯವೇತನ, ೩ ವಿಕಲಚೇತನ, ೧೨ ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಧರ್ಮಸ್ಥಳ

ಸ್ವಸಹಾಯ ಸಂಘ, ಸ್ತ್ರೀಶಕ್ತಿ ಸಂಘಗಳ ೧೪ ಸಂಘಗಳಿವೆ. ಶ್ರೀರಾಮ ಮಂದಿರ, ಮೈಲಾರಲಿಂಗ, ಬೀರೇಶ್ವರ, ಆಂಜನೇಯ, ಲಕ್ಷ್ಮೀಗುಡಿಗಳಿವೆ. ಏಕಾದಶಿಯಲ್ಲಿ ಗ್ರಾಮದೇವತೆ ಮಾರಮ್ಮನ ಜಾತ್ರೆ ನಡೆಯುತ್ತದೆ. ಶ್ರೀರಾಮ ಭಜನಾ ಮಂಡಳಿ, ಕನಕ ಸಹಕಾರಿ ಸಂಘ, ಸಾಂಸ್ಕೃತಿಕ ಸಂಘಗಳಿವೆ.

## ಕನಕನಗರ, ವಾರ್ಡ್ ನಂ.೨೦

ಚಿಕ್ಕನಾಯಕನಹಳ್ಳಿ ಪಟ್ಟಣದ ಪೇಟೆ ಬೀದಿ, ಹೊಸ ಬೀದಿ ಹಾಗೂ ಕನಕದಾಸ ನಗರ ಒಟ್ಟುಗೂಡಿ ಕನಕನಗರ ಎಂಬ ಹೆಸರಿನಲ್ಲಿ ಬಡಾವಣೆ ರಚನೆಯಾಗಿದೆ. ಇದು ವಾರ್ಡ್ ೨೦ ರಲ್ಲಿ ಸೇರಿದೆ. ದಕ್ಷಿಣಕ್ಕೆ ಹೂವಾಡಿಗರ ಬೀದಿ, ಪೂರ್ವ-ದಕ್ಷಿಣಕ್ಕೆ ರೇವಣರ ಮಠಗಳಿವೆ. ಕಪ್ಪುಮಿಶ್ರಿತ ಮರಳು ಭೂಪ್ರದೇಶ. ಕೃಷಿಕರು, ವರ್ತಕರು, ಕಂಬಳಿ ನೇಕಾರರು ಅಧಿಕ ಸಂಖ್ಯೆಯಲ್ಲಿದ್ದಾರೆ. ಹಸು, ಎಮ್ಮೆ, ಕುರಿ ಸಾಕಾಣಿಕೆ ಇದೆ. ಕುಡಿಯಲು ಚಿಕ್ಕನಾಯಕನಹಳ್ಳಿ ಪುರಸಭೆಯಿಂದ ನೀರು ಪೂರೈಕೆಯಾಗುತ್ತಿದೆ. ೪ ಹಳೆಯ ಸೇದೋಬಾವಿಗಳಿದ್ದು ಒಣಗಿವೆ. ೨೪೮ ಸಾರ್ವಜನಿಕ ನಲ್ಲಿ ಸಂಪರ್ಕವಿದೆ. ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ.

ಕುರುಬರು ದೊಡ್ಡ ಸಮುದಾಯ. ಮಡಿವಾಳರು, ವೈಶ್ಯರು, ನಾಯಕರು, ಹೂವಾಡಿಗರು ಕಿರು ಸಮುದಾಯವಾಗಿದೆ. ಕನ್ನಡ ಇಲ್ಲಿನ ಮಾತೃಭಾಷೆ. ತೆಲುಗು ಮಾತನಾಡುತ್ತಾರೆ. ೩೫೦ ಮನೆಗಳಿದ್ದು ಇವು ಕಲ್ಲಿನ, ಕಾಂಕ್ರೀಟ್, ಹೆಂಚಿನ, ನಾಡಹೆಂಚಿನ ಸ್ವರೂಪದಲ್ಲಿವೆ. ೩೦೦ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ. ೩೦ ಮನೆಗಳು ಜನತಾ ವಸತಿ ಸೌಲಭ್ಯದ ಫಲಾನುಭವಿಗಳಿದ್ದಾರೆ. ಸತತವಾಗಿ ೩ ಬಾರಿ ಶಾಸಕರಾಗಿರುವ ಸಿ.ಬಿ.ಸುರೇಶ್‌ಬಾಬು ಇದೇ ಬಡಾವಣೆಯಲ್ಲಿ ನೆಲೆಸಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಪಾಯಸ, ಬಾಡೂಟ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಸಾಂಪ್ರದಾಯಿಕ ಎತ್ತಿನ ಗಾಡಿಗಳಿವೆ. ಕಾರು, ಬಸ್, ಲಾರಿ, ಆಟೋ, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ. ಕೃಷಿಕರು ರಾಗಿ, ಭತ್ತ, ಹೆಸರು, ಅವರೆ, ತೆಂಗು, ಅಡಿಕೆ ಬೆಳೆಯುತ್ತಾರೆ. ಕಂಬಳಿ ನೇಯ್ಗೆ ಮತ್ತು ಮಾರಾಟವಿದೆ. ಕೊಬ್ಬರಿ, ಅಡಿಕೆ ಮಾರಾಟದ ಸರಕಾಗಿದೆ. ಶಿಕ್ಷಣ, ಕಂದಾಯ, ಭೂಮಾಪನ, ಕೆಇಬಿ, ಆರೋಗ್ಯ, ಇಂಜಿನಿಯರಿಂಗ್ ಇಲಾಖೆಯ ೫೦ ಜನ ಸರ್ಕಾರಿ ನೌಕರರಿದ್ದಾರೆ. ಖಾಸಗಿ ವಾಹನ ಚಾಲಕರಿದ್ದಾರೆ. ಆಡಳಿತಾತ್ಮಕವಾಗಿ ತುಮಕೂರು ಲೋಕಸಭೆ, ಚಿಕ್ಕನಾಯಕನಹಳ್ಳಿ ವಿಧಾನಸಭೆ ಹಾಗೂ ಪುರಸಭೆಯ ವ್ಯಾಪ್ತಿಗೆ ಸೇರಿದೆ. ಉತ್ತಮ ಟಾರ್ ರಸ್ತೆಯಿದೆ. ಚರ-ಸ್ಥಿರ ದೂರವಾಣಿ ಸಂಪರ್ಕವಿದೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘ, ಸ್ತ್ರೀಶಕ್ತಿ ಸಂಘ ಸೇರಿದಂತೆ ೨೦ ಮಹಿಳಾ ಸ್ತ್ರೀಶಕ್ತಿ ಸಂಘಗಳಿವೆ.

ಅಂಗನವಾಡಿ, ಸರ್ಕಾರಿ ಮಾಧ್ಯಮಿಕ, ಪ್ರೌಢಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೮೦ ರಷ್ಟು ಸಾಕ್ಷರತೆ ಇದೆ. ಸಮುದಾಯ ಸೌಲಭ್ಯಗಳಾದ ೪೨ ವೃದ್ಧಾಪ್ಯವೇತನ, ೧ ವಿಕಲಚೇತನ, ೬೪ ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೬ ಚಿಕ್ಕ ಹೋಟೆಲ್‌ಗಳಿವೆ. ೮ ಗೂಡಂಗಡಿ ಇದೆ. ಗುರು ರೇವಣಸಿದ್ದೇಶ್ವರ ಮಠ, ದೇವಾಲಯವಿದ್ದು ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿದೆ. ಬೀರಲಿಂಗೇಶ್ವರ, ರೇಣುಕಾದೇವಿ, ಲಕ್ಷ್ಮೀದೇವಿ, ಚಂದ್ರಗುತ್ತಿ ಎಲ್ಲಮ್ಮ, ಮಾರಿಕಾಂಬ, ಹುತ್ತದ ಕೆಂಚಮ್ಮ, ಮಾಸ್ತಿ ಗುಡಿಯಿದೆ. ಒಂದು ಭಜನೆ ಮಂದಿರವಿದೆ. ಮಾರಮ್ಮನ ಜಾತ್ರೆ ಊರ ಹಬ್ಬವಾಗಿ ವಿಜೃಂಭಣೆಯಿಂದ ನಡೆಯುತ್ತದೆ. ಬಲಿ, ಆರತಿ, ಹರಕೆ ಸಂಪ್ರದಾಯಗಳಿವೆ. ಕಣ್ಣಯ್ಯ ಎಂಬ ಅಧ್ಯಾಪಕ ಸಾಹಿತ್ಯ, ಸಾಂಸ್ಕೃತಿಕವಾಗಿ ತೊಡಗಿಸಿಕೊಂಡಿದ್ದಾರೆ. ಕೊಟಗೆಮನೆ ಗುರುಮೂರ್ತಿ ಲೇಖಕರಾಗಿದ್ದಾರೆ. ಸಿ.ಕೆ. ಪರಶುರಾಮಯ್ಯ ಸಾಹಿತಿಗಳಾಗಿ ೧೦ ಪುಸ್ತಕಗಳನ್ನು ರಚಿಸಿದ್ದಾರೆ. ಡಾ.ಗುರುಮೂರ್ತಿ ವೈದ್ಯಕೀಯ ಲೇಖನ, ಪುಸ್ತಕ ರಚಿಸಿದ್ದಾರೆ. ಹಿರಿಯ ಕೃಷಿ ಅಧಿಕಾರಿ, ಸಮಾಜ ಸೇವಕ ರೇವಣ್ಣನವರ ಪ್ರತಿಮೆಯಿದೆ. ರುದ್ರನಗುಡಿ, ವಾಸವಿ ದೇವಾಲಯವಿದೆ. ಕಚ್ಚೇ ಚಾವಡಿ, ಈಶ್ವರನ ದೇವಾಲಯಗಳಿವೆ. ಏಕಾದಶಿ ಜಾತ್ರೆ ವಿಶೇಷವಾಗಿ ಆಚರಿಸುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಹೂವಾಡಿಗರ ಬೀದಿ, ವಾರ್ಡ್ ನಂ.೨೧

ಹೂವಾಡಿಗರ ಬೀದಿ ಚಿಕ್ಕನಾಯಕನಹಳ್ಳಿ ಪಟ್ಟಣದ ವಾರ್ಡ್ ನಂ.೨೧ ರ ವ್ಯಾಪ್ತಿಗೆ ಸೇರಿದೆ. ಎ.ಕೆ. ಕಾಲೋನಿಯ ಸೆರಗಿನಿಂದ ಧರ್ಮಾವರಂ ಬೀದಿ, ಶುಕ್ರವಾರದ ಬಾಗಿಲು ರಸ್ತೆ, ಜೋಗಿ ಬಾವಿ, ಹಳೆಯೂರು ಆಂಜನೇಯ ದೇವಾಲಯದ ಮುಂಭಾಗದ ರಸ್ತೆ, ರುದ್ರದೇವಸ್ಥಾನದವರೆಗೆ ಇದರ ವ್ಯಾಪ್ತಿ ಹಬ್ಬಿದೆ. ಹೂವಾಡಿಗ ಜನಾಂಗದವರ ಜನವಸತಿ ಪ್ರದೇಶವಾದುದರಿಂದಾಗಿ ಹೂವಾಡಿಗರ ಕಾಲೋನಿ

ಎಂದೇ ಕರೆಯುತ್ತಾರೆ. ಕಪ್ಪು ಮರಳು ಮಿಶ್ರಿತ ಭೂ ಪ್ರದೇಶ. ಕೃಷಿ, ಹೂವಿನ ವ್ಯಾಪಾರ, ಹೂವಿನ ಅಲಂಕಾರ ಇಲ್ಲಿನ ಮುಖ್ಯ ಕಸುಬು. ಹಸು, ಎಮ್ಮೆ ಸಾಕುಪ್ರಾಣಿಗಳು. ಉತ್ತರಕ್ಕೆ ಅಗಸರ ಹೊಳೆಯಿದೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಸಮುದಾಯ ರಚನೆಯಲ್ಲಿ ಹೂವಾಡಿಗ ಜನಾಂಗ ದೊಡ್ಡ ಸಮುದಾಯವಾಗಿದ್ದು ಲಿಂಗಾಯಿತರು, ಕುರುಬರು, ನಾಯಕರು, ಆದಿಕರ್ನಾಟಕ, ಮುಸ್ಲಿಂ, ವೈಶ್ಯ ಹಾಗೂ ಅಕ್ಕಸಾಲಿಗರು ಸಣ್ಣ ಸಮುದಾಯವಾಗಿದೆ. ಕನ್ನಡ ಮುಖ್ಯಭಾಷೆಯಾಗಿದ್ದು ಉರ್ದು, ತೆಲುಗು ಮಾತನ್ನಾಡುತ್ತಾರೆ. ಒಟ್ಟು ೭೨೦ ಮನೆಗಳಿದ್ದು ಇವು ಹೆಂಚಿನ, ಮಾಳಿಗೆ, ಕಾಂಕ್ರೀಟ್, ನಾಡಹೆಂಚಿನ ಸ್ವರೂಪದಲ್ಲಿವೆ. ೭೦೦ ಮನೆಗಳಲ್ಲಿ ಶೌಚಾಲಯ ಬಳಸುತ್ತಾರೆ. ಇಂದಿರಾ ಆವಾಸ್, ಜನತಾ ವಸತಿ ಯೋಜನೆಯ ೪೨೦ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಪಾಯಸ, ಬಾಡೂಟ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ. ಕುಡಿಯಲು ಪುರಸಭೆಯಿಂದ ನೀರು ಪೂರೈಕೆಯಾಗಿದ್ದು ೩೧೨ ಸಾರ್ವಜನಿಕ ನಲ್ಲಿಗಳಿವೆ. ಎತ್ತಿನ ಗಾಡಿಗಳ ಜೊತೆಗೆ ಲಾರಿ, ಟ್ರ್ಯಾಕ್ಟರ್, ಟೆಂಪೋ ಬಳಕೆಯಲ್ಲಿವೆ. ಕಾರು, ಆಟೋ ಬಳಸುತ್ತಾರೆ. ರೈತರು ಹೂವು, ರಾಗಿ, ಭತ್ತ, ಅಡಿಕೆ, ತೆಂಗು ಬೆಳೆಯುತ್ತಾರೆ. ಹೂ ಕಟ್ಟುವುದು, ಹೂ ಅಲಂಕಾರ ಉಪಕಸುಬಾಗಿದೆ. ಶಿಕ್ಷಕರು, ಸಾರಿಗೆ, ಕಂದಾಯ ಇಲಾಖೆಗೆ ಸೇರಿದ ೨೨ ಜನ ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ತುಮಕೂರು ಲೋಕಸಭೆ, ಚಿಕ್ಕನಾಯಕನಹಳ್ಳಿ ವಿಧಾನಸಭೆ ಹಾಗೂ ಪುರಸಭೆಯ ವ್ಯಾಪ್ತಿಗೆ ಸೇರಿದೆ. ಒಂದು ಅಂಚೆ ಕಛೇರಿ ಇದೆ. ಟಾರ್ ರಸ್ತೆಯಿದೆ. ಸ್ಥಿರ-ಚರ ದೂರವಾಣಿ ಬಳಕೆಯಲ್ಲಿದೆ. ಶ್ರೀರಾಮ ವಿವಿಧೋದ್ದೇಶ ಸಹಕಾರ ಸಂಘ, ಸ್ತ್ರೀಶಕ್ತಿ, ಧರ್ಮಸ್ಥಳ ಸಂಘ ಸೇರಿದಂತೆ ೨೧ ಸಂಘಗಳಿವೆ.

ಅಂಗನವಾಡಿ, ಉರ್ದು ಶಾಲೆ, ನೀರಬಾಗಿಲು ಕನ್ನಡ ಹಿರಿಯ ಪಾಠಶಾಲೆಗಳಿವೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೭೦ ರಷ್ಟು ಸಾಕ್ಷರತೆ ಇದೆ. ಸಮುದಾಯ ಸೌಲಭ್ಯಗಳಾದ ೪೪ ವೃದ್ಧಾಪ್ಯವೇತನ, ೪ ವಿಕಲಚೇತನದ ಫಲಾನುಭವಿಗಳಿದ್ದಾರೆ. ೪ ಅಂಗಡಿಗಳಿವೆ. ೨ ಟೀ ಅಂಗಡಿಗಳಿವೆ. ಹಳೆಯೂರು ಆಂಜನೇಯ ದೇವಾಲಯ ಪ್ರಾಚೀನ ದೇವಾಲಯವಾಗಿದ್ದು ಏಕಾದಶಿ, ಆಷಾಢದಲ್ಲಿ ಮೂರು ದಿನಗಳ ಕಾಲ ಬೃಹತ್ ಜಾತ್ರೆ ನಡೆಯುತ್ತದೆ. ವಿವಿಧ ಜನಪದ ಕಲೆ, ಸಂಗೀತ, ಸಾಂಸ್ಕೃತಿಕ ಸ್ಪರ್ಧೆಗಳು ಏರ್ಪಡುವುದು ವಿಶೇಷ. ಪ್ರಸನ್ನ ರಾಮೇಶ್ವರ ದೇವಾಲಯ, ರಾಮ ಮಂದಿರ ದೇವಾಲಯಗಳಿವೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಮಲಿಯಪ್ಪ ಬೀದಿ ಬಡಾವಣೆ, ವಾರ್ಡ್ ನಂ.೨೨

ಇದು ಚಿಕ್ಕನಾಯಕನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ ಉತ್ತರ ಭಾಗದಲ್ಲಿದೆ. ಹೊಸಬೀದಿ, ಯಂಗೋಜಿ ಬೀಡು, ಮಲಿಯಪ್ಪ ಬೀದಿ, ನಾಯಕರ ಬೀದಿ, ಶುಕ್ರವಾರದ ಬಾಗಿಲುವಿನಿಂದ ಪಶ್ಚಿಮಕ್ಕೆ ಹುಳಿಯಾರು ರಸ್ತೆಯತನಕ ಇದರ ವ್ಯಾಪ್ತಿ ಹರಡಿದೆ. ಬಯಲು ಭೂಪ್ರದೇಶ. ಪೂರ್ವಕ್ಕೆ ತೋಟ, ಗದ್ದೆ ಬಯಲಿದೆ. ಕಪ್ಪು ಮಿಶ್ರಿತ ಎರೆಮಣ್ಣಿನ ಭೂಪ್ರದೇಶ. ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ಅಗಸರಹೊಳೆ ಎಂಬ ಹಳ್ಳವಿದೆ. ಈಗ ಬಾವಿ, ಹಳ್ಳ ಬತ್ತಿಹೋಗಿವೆ. ಹಿಂದೆ ಶುಕ್ರವಾರದ ಸಂತೆ ನಡೆಯುತ್ತಿದ್ದ ಸ್ಥಳವಾಗಿತ್ತು. ಕುಡಿಯಲು ಪುರಸಭೆಯಿಂದ ನೀರು ಪೂರೈಸಲಾಗುತ್ತಿದೆ. ೨೭೫ ನಲ್ಲಿ ಸಂಪರ್ಕಗಳಿವೆ. ಕುರುಬರು ಇಲ್ಲಿನ ದೊಡ್ಡ ಸಮುದಾಯ. ನಾಯಕರು, ದೊಂಬಿದಾಸರು, ದಕ್ಕಲಿಗರು ಸಣ್ಣ ಸಮುದಾಯಗಳು. ಕನ್ನಡ ಇಲ್ಲಿನ ಮಾತೃಭಾಷೆ. ವಿರಳವಾಗಿ ತೆಲುಗು ಮಾತನಾಡುತ್ತಾರೆ. ಒಟ್ಟು ೩೨೫ ಮನೆಗಳಿದ್ದು ಇವು ಕಾಂಕ್ರೀಟ್, ಹೆಂಚಿನ, ಶೀಟಿನ ಸ್ವರೂಪದಲ್ಲಿವೆ. ೧೪೪ ಮನೆಯಲ್ಲಿ ಶೌಚಾಲಯ ಹೊಂದಿದ್ದಾರೆ. ೧೨೬ ಮನೆಗಳು ಭಾಗ್ಯಜ್ಯೋತಿ ಉಚಿತ ವಿದ್ಯುತ್ ಪಡೆಯುತ್ತಿದ್ದಾರೆ. ಜನತಾ, ಆಶ್ರಯ, ವಸತಿ ಯೋಜನೆಯ ೩೨ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಪಾಯಸ, ಬಾಡೂಟ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಸಾಂಪ್ರದಾಯಿಕ ಎತ್ತಿನ ಗಾಡಿಗಳಿವೆ. ಬಸ್, ಲಾರಿ, ಟ್ರ್ಯಾಕ್ಟರ್, ಕಾರು, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ. ರಾಗಿ, ಹೆಸರು, ಭತ್ತ, ಹುರುಳಿ, ಅವರೆ ಬೆಳೆಯುತ್ತಾರೆ. ತೆಂಗು, ಅಡಿಕೆ ವ್ಯಾಪಾರಿ ಬೆಳೆಗಳು. ನಂದಿನಿ ಹಾಲಿನ ಡೈರಿ, ಕಂಬಳಿ ಹಿಂಜುವ ಗಿರಣಿಗಳಿವೆ. ಕಂಬಳಿ ತಯಾರಿಕೆ, ವ್ಯಾಪಾರವಿದೆ. ಶಿಕ್ಷಕರು, ಇಂಜಿನಿಯರ್, ಕಂದಾಯ, ಭೂಸರ್ವೆ ಇಲಾಖೆಯಲ್ಲಿ ೨೩ ಸರ್ಕಾರಿ ನೌಕರರಿದ್ದಾರೆ.

ಆಡಳಿತಾತ್ಮಕವಾಗಿ ತುಮಕೂರು ಲೋಕಸಭೆ, ಚಿಕ್ಕನಾಯಕನಹಳ್ಳಿ ವಿಧಾನಸಭೆ ಹಾಗೂ ಪುರಸಭೆಯ ವ್ಯಾಪ್ತಿಗೆ ಸೇರಿದೆ. ಶ್ರೀ ಎನ್.ಬಸವಯ್ಯ ೩ ಬಾರಿ ಶಾಸಕರಾಗಿ, ಮಂತ್ರಿಗಳಾಗಿದ್ದು ಇದೇ ಬಡಾವಣೆಯ ನಿವಾಸಿಯಾಗಿದ್ದಾರೆ. ದಿ॥ ಚಿಕ್ಕರಾಮಯ್ಯ ಪುರಸಭೆ ಅಧ್ಯಕ್ಷರಾಗಿದ್ದವರು ಇಲ್ಲಿದ್ದಾರೆ. ಸ್ಥಿರ ಸಂಚಾರಿ ಟೆಲಿಫೋನ್ ಬಳಕೆಯಿದೆ. ೨೫ ಸ್ತ್ರೀಶಕ್ತಿ ಸಂಘ, ಧರ್ಮಸ್ಥಳ ಸ್ವಸಹಾಯ ಸಂಘಗಳಿವೆ.

ಅಂಗನವಾಡಿ ಕೇಂದ್ರ, ಸರ್ಕಾರಿ ಕಿರಿಯ ಪಾಠಶಾಲೆಯಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ ಯೋಜನೆ ಜಾರಿಯಲ್ಲಿದೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯಿದೆ. ಶೇ.೮೧ ರಷ್ಟು ಸಾಕ್ಷರತೆ ಇದೆ. ಸಮುದಾಯ ಸೌಲಭ್ಯಗಳಾದ ೩೦ ವೃದ್ಧಾಪ್ಯವೇತನ, ೮ ವಿಕಲಚೇತನ, ೨೦ ವಿಧವಾ ವೇತನದ ಫಲಾನುಭವಿಗಳಿದ್ದಾರೆ. ೨ ಚಿಕ್ಕ ಹೋಟೆಲ್‌ಗಳಿವೆ. ೧೦ ಕಿರು ಅಂಗಡಿಗಳಿವೆ. ವಾಲ್ಮೀಕಿ ಸಮುದಾಯ ಭವನ, ಮೈಲಾರಲಿಂಗೇಶ್ವರ ದೇವಾಲಯ, ಗುರು ರೇವಣ ಕೃಪಾಪೋಷಿತ ನಾಟಕ ಸಂಘವಿದೆ. ಟಗರು ಪವಾಡ ನಾಟಕವನ್ನು ೫೦ ವರ್ಷಗಳಿಂದ ಸತತವಾಗಿ ಅಭಿನಯಿಸುತ್ತಾ ಬರುತ್ತಿದ್ದಾರೆ. ಸಿ.ಎಲ್. ರವಿಕುಮಾರ್ ಸಾರಥ್ಯದಲ್ಲಿ ನಾಟಕ ಸಂಘಟನೆ ಮುಂದುವರಿದಿದೆ. ಭಾಗವತ ಬಯಲಾಟದ ಭೀಮಣ್ಣ, ಚಿತ್ರಕಲೆ, ಯೋಗ ಗುರು ರಾಮಲಿಂಗಪ್ಪ ಇದ್ದಾರೆ. ದೇವನ್ ಆರ್ಟ್ ಕಲಾ ಸಂಘಟನೆಯಿದೆ. ಗೃಹನಿರ್ಮಾಣ ಕಾರ್ಮಿಕರ ಸಂಘವಿದೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ.

## ಅಂಬೇಡ್ಕರ್ ನಗರ, ವಾರ್ಡ್ ನಂ.೨೩

ಎ.ಕೆ. ಕಾಲೋನಿಯು ಚಿಕ್ಕನಾಯಕನಹಳ್ಳಿ ಪುರಸಭೆಯ ಕಾರ್ಯಾಲಯದಿಂದ ಒಂದು ಕಿ.ಮೀ ದೂರದಲ್ಲಿ ಉತ್ತರ ದಿಕ್ಕಿನಲ್ಲಿದೆ. ಇದನ್ನು ಈಗ ಅಂಬೇಡ್ಕರ್ ನಗರ ಎಂದು ಹೆಸರಿಸಲಾಗಿದೆ. ಪುರಸಭೆಯ ಆಡಳಿತಾತ್ಮಕ ಅನುಕೂಲಕ್ಕಾಗಿ ೨೩ನೇ ವಾರ್ಡ್ ಎಂದು ಗುರುತಿಸಲಾಗಿದೆ. ಮುನ್ಸಿಪಲ್ ಕಂದಾಯ ಗ್ರಾಮವಾಗಿದೆ. ಈ ಕಾಲೋನಿಯ ಒಟ್ಟು ವಿಸ್ತೀರ್ಣವು ನಗರದ ಒಟ್ಟು ವಿಸ್ತೀರ್ಣವಾದ ೫.೩೦ ಚ.ಕಿ.ಮೀ ನಲ್ಲಿ ಸೇರಿದೆ. ಈ ವಾರ್ಡ್‌ಗೆ ವೀರಲಕ್ಕಮ್ಮ ಬಡಾವಣೆ, ಮಾರುತಿನಗರ, ಅಂಬೇಡ್ಕರ್ ನಗರ, ಗಾಂಧಿನಗರ (ದಕ್ಕಲಿಗರ ಕಾಲೋನಿ)ಗಳು ಸೇರಿವೆ. ಇದೊಂದು ಬಯಲು ನಾಡಿಗೆ ಸೇರಿದ ಪ್ರದೇಶ. ಇಲ್ಲಿ ಬಿಳಿಕಲ್ಲು, ಬಿಳಿ ಮಣ್ಣು ಕಂಡುಬರುತ್ತದೆ. ಇಲ್ಲಿಯ ಕೆಲವರು ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕುತ್ತಾರೆ. ಕೆಲವರು ಕೋಳಿಗಳನ್ನು ಸ್ವಂತ ಉಪಯೋಗಕ್ಕಾಗಿ ಸಾಕಿದ್ದಾರೆ. ಗಿಳಿ, ಗುಬ್ಬಚ್ಚಿ, ಕಾಗೆ, ಬೆಳವನಹಕ್ಕಿ ಇತ್ಯಾದಿ ಪಕ್ಷಿಗಳು ಇಲ್ಲಿ ಕಂಡುಬರುತ್ತವೆ.

ಇಲ್ಲಿ ವಾರ್ಷಿಕ ಸರಾಸರಿ ೪೫೦ ಮಿಮೀ ಮಳೆಯಾಗುತ್ತದೆ. ಚಳಿ ಪ್ರಮಾಣ ೧೦-೧೨ ಡಿಗ್ರಿ ಹಾಗೂ ಬಿಸಿಲು ೩೪-೩೬ ಡಿಗ್ರಿ ಸರಾಸರಿ ಇದೆ. ವಾರ್ಡಿನಲ್ಲಿ ಕೈಪಂಪುಗಳಿವೆ. ಕುಡಿಯುವ ನೀರಿನ ವ್ಯವಸ್ಥೆಗಾಗಿ ನಲ್ಲಿಗಳನ್ನು ಅಳವಡಿಸಲಾಗಿದೆ. ಸಾಮಾಜಿಕ ರಚನೆಯಲ್ಲಿ ಆದಿಕರ್ನಾಟಕ ಸಮುದಾಯದವರು ಪ್ರಧಾನವಾಗಿದ್ದು ಉಳಿದಂತೆ ಮುಸ್ಲಿಮರು, ಕುರುಬರು, ದೇವಾಂಗ, ಶೆಟ್ಟಿ ಬಣಜಿಗರು, ದಕ್ಕಲಿಗರು, ಲಿಂಗಾಯಿತರು ವಾಸವಿದ್ದಾರೆ. ಇಲ್ಲಿಯ ಜನ ಪ್ರಧಾನವಾಗಿ ಕನ್ನಡ ಭಾಷೆಯನ್ನು ಕೆಲವರು ತೆಲುಗು ಹಾಗೂ ಮುಸ್ಲಿಮರು ಉರ್ದು ಭಾಷೆಯನ್ನು ಮಾತನಾಡುತ್ತಾರೆ. ಇಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಕಟ್ಟಲ್ಪಟ್ಟ ೫೦ ಕಾಂಕ್ರೀಟ್ ಮನೆಗಳು ಸೇರಿದಂತೆ ೭೦ ಕಾಂಕ್ರೀಟ್ ಮನೆಗಳಿವೆ. ಕಲ್ಲು-ಮಣ್ಣಿನಿಂದ ಕಟ್ಟಿದ ೩೫೦ ಮನೆಗಳಿವೆ. ೯ ಗುಡಿಸಲುಗಳು ಮೇಲ್ಛಾವಣಿಗೆ ಕುಂಬಾರರ ಕಪ್ಪು ಹೆಂಚು, ಮಂಗಳೂರಿನ ಕೆಂಪು ಹೆಂಚನ್ನು ಬಳಸಿದ್ದಾರೆ. ರಾಗಿಮುದ್ದೆ, ಅನ್ನ ಮುಖ್ಯ ಆಹಾರ. ಪಾಯಸ, ಬಾಡೂಟ, ಹೋಳಿಗೆ ವಿಶೇಷ ಸಾಂದರ್ಭಿಕ ಭೋಜನವಾಗಿದೆ.

ಇಲ್ಲಿ ಸಾಂಪ್ರದಾಯಿಕ ವಾಹನಗಳಾದ ಕೆಲ ಎತ್ತಿನ ಗಾಡಿಗಳಿವೆ. ಬೈಸಿಕಲ್ ಗಳನ್ನು ಹೊಂದಿದ್ದಾರೆ. ಒಬ್ಬರು ಎರಡು ಲಾರಿಗಳನ್ನು ಹೊಂದಿದ್ದಾರೆ. ಅನೇಕ ಕುಟುಂಬಗಳಲ್ಲಿ ಬೈಕುಗಳಿವೆ. ಟಾರ್ ರಸ್ತೆ ಮಾಡಲಾಗಿದೆ. ಮುಖ್ಯ ಬೆಳೆಯಾಗಿ ರಾಗಿಯನ್ನು ಬೆಳೆಯುತ್ತಾರೆ. ಆಹಾರ ಬೆಳೆಯೂ ರಾಗಿಯೇ ಆಗಿದೆ. ಉಪ ಬೆಳೆಗಳಾಗಿ ಹುರುಳಿ, ಹೆಸರುಕಾಳು, ಉದ್ದು, ಹರಳು ಇತ್ಯಾದಿ ಬೆಳೆಯುತ್ತಾರೆ. ತೆಂಗು ಹಾಗೂ ಅಡಿಕೆ ಇಲ್ಲಿನ ವಾಣಿಜ್ಯ ಹಾಗೂ ತೋಟಗಾರಿಕೆ ಬೆಳೆಗಳು. ಕೊಬ್ಬರಿ, ಅಡಿಕೆ ಇಲ್ಲಿನ ಮುಖ್ಯ ವ್ಯಾಪಾರಿ ಸರಕು. ಇಲ್ಲಿರುವವರು ೬ ಜನ ಸರ್ಕಾರಿ ಶಾಲಾ ಶಿಕ್ಷಕರಾಗಿ, ಒಬ್ಬರು ವಕೀಲರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಈ ಭಾಗದಲ್ಲಿ ೨ ರೈಸ್‌ಮಿಲ್‌ಗಳಿವೆ. ಒಂದು ಪೆಟ್ರೋಲ್ ಬಂಕ್ ಇದೆ. ತೆಂಗಿನ ನಾರಿನ ಕೈಗಾರಿಕೆ ಇದೆ. ಕಾಯಿ ಪೌಡರ್ ಫ್ಯಾಕ್ಟರಿ ಇದೆ. ಇಲ್ಲಿ ಬಡಗಿತನ ಮಾಡುವವರಿದ್ದಾರೆ.

ಆಡಳಿತಾತ್ಮಕವಾಗಿ ತುಮಕೂರು ಲೋಕಸಭೆ, ಚಿಕ್ಕನಾಯಕನಹಳ್ಳಿ ವಿಧಾನಸಭೆ ಹಾಗೂ ಪುರಸಭೆಯ ವ್ಯಾಪ್ತಿಗೆ ಸೇರಿದೆ. ಬಹುತೇಕರು ಸಂಪರ್ಕಕ್ಕಾಗಿ ಸಂಚಾರಿ

ದೂರವಾಣಿಗಳನ್ನು ಬಳಸುತ್ತಾರೆ. ಲಕ್ಷ್ಮಿ, ಎಲ್ಲಮ್ಮ, ದುರ್ಗಮ್ಮ ಎಂಬ ಸ್ತ್ರೀಶಕ್ತಿ ಸಂಘಗಳಿವೆ. ಅನೇಕ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿವೆ. ಬಿ.ಪಿ.ಎಲ್ ಎಂಬ ಸಂಘಟನೆ ಅಸ್ತಿತ್ವದಲ್ಲಿದೆ. ಒಂದು ಅಂಗನವಾಡಿ ಕೇಂದ್ರವಿದ್ದು ಶೇ.೪೦ ರಷ್ಟು ಸಾಕ್ಷರತೆ ಇದೆ. ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನದ ಫಲಾನುಭವಿಗಳಿದ್ದಾರೆ. ಕೆಲ ಕಿರಾಣಿ ಅಂಗಡಿಗಳಿವೆ. ವೀರಲಕ್ಕಮ್ಮ ಎಂಬ ಹೆಸರಿನ ಮಾಸ್ತಿಕಲ್ಲು ಇದೆ. ಸಮೀಪ ಸ್ಮಶಾನ ಜಾಗ ಇದೆ. ತಲರೆ ಮಂಟಪ ಇದೆ.

ಈ ವಾರ್ಡಿನಲ್ಲಿ ಶ್ರೀರಾಮ ಮಂದಿರ, ಮಾಸ್ತ್ಯಮ್ಮ ಮಂದಿರ, ಪ್ಲೇಗ್‌ನಮ್ಮ ಮಂದಿರ, ಮಸ್ಯಮ್ಮ ಮಂದಿರಗಳಿವೆ. ಕೋಡಿಹಳ್ಳಿ ಶಾಖಾ ಮಠದ ಆದಿಕರ್ನಾಟಕ ಸಮುದಾಯಕ್ಕೆ ಸೇರಿದ ಆಶ್ರಮವಿದೆ. ಮಾರ್ಕಾಂಡೇಯ ಮುನಿಗಳು ಎಂಬುವವರು ಇಲ್ಲಿದ್ದಾರೆ. ಇಲ್ಲಿನ ನಿವಾಸಿಗಳು ಮಸ್ಯದೇವರ ಜಾತ್ರೆ, ಪ್ಲೇಗನಮ್ಮನ ಜಾತ್ರೆ, ಮಾಸ್ತಮ್ಮನ ಜಾತ್ರೆ ಮಾಡುತ್ತಾರೆ. ರಾಂಪುರದಮ್ಮನ ಬಾನ ಮಾಡುತ್ತಾರೆ. ಇವರು ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಆಯುಧಪೂಜೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ರಂಗಯ್ಯ, ಹನುಮಯ್ಯ, ಅಶೋಕ ಎಂಬ ಆದಿಕರ್ನಾಟಕ ಸಮುದಾಯದವರು ಭಜನೆ ಹಾಡು, ಲಾವಣಿ ಹಾಡು, ರಂಗ ಗೀತೆಗಳನ್ನು ಹಾಡುತ್ತಾರೆ. ಸಣ್ಣಮ್ಮ, ದೊಡ್ಡಮ್ಮ, ಲಕ್ಷ್ಮಮ್ಮ, ಚಿಕ್ಕಮ್ಮ ಎಂಬ ಮಾದಿಗ ಸಮುದಾಯಕ್ಕೆ ಸೇರಿದ ಮಹಿಳೆಯರು ಸೋಬಾನೆ, ಲಾವಣಿ ಹಾಡುಗಳನ್ನು ಹಾಡುತ್ತಾರೆ. ಈ ಕೇರಿಯ ಜನ ಕುರುಕ್ಷೇತ್ರ ನಾಟಕವನ್ನು ಅಭ್ಯಾಸ ಮಾಡಿ ಅಭಿನಯಿಸುತ್ತಾರೆ. ಶ್ರೀರಾಮಕಲಾ ಸಂಘ, ದೊಂಬಿದಾಸರ (ಅಲಮಾರಿ) ಸಂಘ ಎಂಬ ಸಂಘಗಳು ಅಸ್ತಿತ್ವದಲ್ಲಿವೆ. ಮಾದಿಗ ದಂಡೋರ ಸಮಿತಿ, ದಲಿತ ಸಂಘರ್ಷ ಸಮಿತಿಗಳು ಅಸ್ತಿತ್ವದಲ್ಲಿವೆ.

**ಪರಾಮರ್ಶಾ ಗ್ರಂಥಗಳು:**


೧. ತುಮಕೂರು ಜಿಲ್ಲಾ ದರ್ಶನ, ಸಿ.ಎನ್. ಭಾಸ್ಕರಪ್ಪ

೨. ಎಪಿಗ್ರಾಫಿಯಾ ಕರ್ನಾಟಕ ಸಂಪುಟ–೧೨, ತುಮಕೂರು ಜಿಲ್ಲೆ

೩. ಜಾನಪದ ನಡೆ–ನುಡಿ, ತೀ.ನಂ. ಶಂಕರನಾರಾಯಣ

೪. ತುಮಕೂರು ಜಿಲ್ಲೆ ಜಾನಪದೀಯ ನೆಲೆಗಳು, ಡಾ.ಚಿಕ್ಕಣ್ಣ ಯಣ್ಣೆಕಟ್ಟೆ

೫. ಕಲ್ಪಶೋಧ, ಡಾ.ಡಿ.ಎನ್. ಯೋಗೀಶ್ವರಪ್ಪ

೬. ಜಾನಪದ ಸಮೀಕ್ಷೆ–ವಿಶ್ಲೇಷಣೆ, ಡಾ.ತೀ.ನಂ. ಶಂಕರನಾರಾಯಣ

೭. ತುಮಕೂರು ಜಿಲ್ಲಾ ಜನಪದ ಕಲಾವಿದರು, ಡಾ.ಚಿಕ್ಕಣ್ಣ ಯಣ್ಣೆಕಟ್ಟೆ

೮. ಚಿಕ್ಕನಾಯಕನಹಳ್ಳಿ ತಾಲ್ಲೂಕು ದರ್ಶನ, ಎಂ.ವಿ.ನಾಗರಾಜರಾವ್

೯. ಜಾನಪದ ಸಂಪನ್ನರು, ಡಾ.ಚಿಕ್ಕಣ್ಣ ಯಣ್ಣೆಕಟ್ಟೆ

೧೦.ಕೃಷ್ಣದೇವರಾಯನ ಕಾಲದ ಶಾಸನಗಳು, ಡಾ.ಡಿ.ವಿ. ಪರಮಶಿವಮೂರ್ತಿ

೧೧. ತುಮಕೂರು ಜಿಲ್ಲಾ ಜಾತ್ರೆಗಳು, ಡಾ.ಚಿಕ್ಕಣ್ಣ ಯಣ್ಣೆಕಟ್ಟೆ


**ಕ್ಷೇತ್ರ ತಜ್ಞರು**

೧. ವೈ.ಎಸ್. ಅಕ್ಷತ

೨. ಪುನೀತ್ ಮಹರ್ಷಿ

೩. ಗಜೇಂದ್ರ ಕುಮಾರ್

೪. ಮಲ್ಲಿಕಾರ್ಜುನ ಎಂ.ಟಿ.